Regd. No. M. 3618
LICENCE No. 31
Licensed to Post without Prepayment

ಸಂಪುಟ 31 ಸಂಖ್ಯೆ 18
ಉಡುಪಿ

11-1-1951

Founder: Sri A. B. Shetty,
Minister for Agriculture & Veterinary.



ವರ್ಷ 31 ವಾರ 18
NAVAYUGA WEEKLY
POST BOX NO. 22 UDIPI, S. K.
Vol. 31 No. 18

ವಿಜ್ಞಾನವು ಎತ್ತ ಸಾಗಿದೆ?

ಮುಂಬಯಿಯ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಮಂ. ಗೋವಿಂದ ಪೈಯವರು ಸಾಹಿತ್ಯ ಸಮ್ಮೇಳನದ ಜತೆಗೆ ವೈಜ್ಞಾನಿಕ ಸಮ್ಮೇಳನವನ್ನೂ ಕಾಲಕಾಲಕ್ಕೆ ಜರಗಿಸಬೇಕೆಂದು ಸೂಚನೆ ಕೊಟ್ಟರು.

ಅದನ್ನು ಕನ್ನಡಿಗರು ಮಾನ್ಯಮಾಡಲೂ ಕನಿಷ್ಠವಧಿ ಇನ್ನರ್ಧ ಶತಮಾನ ಬೇಕು. ಕನ್ನಡನಾಡಿನಲ್ಲಿ ವಿಜ್ಞಾನಿಗಳು ಹುಟ್ಟಲಿಲ್ಲವೆಂದಲ್ಲ; ಕನ್ನಡಿಗರು ವಿಜ್ಞಾನದಲ್ಲಿ ಹಿಂದುಗಿರುವರೆಂದೂ ಅಲ್ಲ. ಪಾಶ್ಚಾತ್ಯ ಭೂವಲಯದಲ್ಲೇ ಪ್ರಖ್ಯಾತಿವೆತ್ತ ಇಂಡಿಯನ್ ಇನ್‌ಸ್ಟಿಟ್ಯೂಟ್ ಇರುವುದು ಕನ್ನಡನಾಡಿನ ಸೀಮೆಯೊಳಗೆ-ಬೆಂಗಳೂರಲ್ಲಿ, ಜನ-ಜನರನ್ನು, ನಗರ-ನಗರಗಳನ್ನು ಒಂದುಗೂಡಿಸಲು ನೆರವಾಗುವ ಟೆಲಿಫೋನ್ ಕಾರ್ಖಾನೆ ಇರುವುದೂ ಬೆಂಗಳೂರಲ್ಲಿ. ಬನಾರಸ ವಿಶ್ವವಿದ್ಯಾಲಯದಲ್ಲಿಯೂ ವಿದೇಶೀಯ ತಾಂತ್ರಿಕ ಶಾಲೆಗಳಲ್ಲಿಯೂ ಕನ್ನಡಿಗರು ಅನೇಕರಿದ್ದಾರೆ. ಆದರೆ ಆ ವರೆಲ್ಲೂ ವಿಜ್ಞಾನದಲ್ಲಿ ಪಾರಂಗತರಾದ ಮೇಲೆ ಜೀವನೋದ್ದೇಶಕ್ಕಾಗಿ ಹೆಚ್ಚಾಗಿ ಪರಪ್ರಾಂತ್ಯಗಳಿಗೆ ಹೋಗಬೇಕಾದ ದುರ್ದೈವ ಪ್ರಸಂಗವಿರುವುದರಿಂದ ಕನ್ನಡದಿಂದ ಅವರಿಗೆ 'ಪ್ರಯೋಜನ'ವಿಲ್ಲ; ಅವರು ವಿಜ್ಞಾನಿಗಳಾದ ತಕ್ಷಣ ಅವರಿಗೂ ಕನ್ನಡಕ್ಕೂ ಮನಕಡಿದೇ ಹೋಗುವುದು.

ಆದರೆ ಇತ್ತೀಚೆಗೆ—ಮೊನ್ನೆ ಜನವರಿ ಎರಡರಿಂದ ಬೆಂಗಳೂರಲ್ಲಿ ಆರಂಭವಾದ ವೈಜ್ಞಾನಿಕ ಪರಿಷತ್ತಿನಲ್ಲಿ ಏನೆಲ್ಲಾ ಜರಗಿತು ಎಂಬುದನ್ನು ಮುಂದಿನ ಪುಟಗಳಲ್ಲಿ ತಿಳಿಯಬಹುದು. ಪ್ರಸ್ತುತ ಇಂಡಿಯನ್ ಮಹಾ ಸಾಗರದ ವಲಯದಲ್ಲಿರುವ ವಿಜ್ಞಾನಿಗಳನ್ನು—ಮುಖ್ಯವಾಗಿ ಭಾರತ, ಆಸ್ಟ್ರೇಲಿಯಾ, ಸಿಲೋನ್ಸ, ಇಂಡೋನೇಶಿಯಾ, ಬ್ರಹ್ಮ ದೇಶಗಳವರನ್ನು—ಮೊದಲ ಬಾರಿಗೆ ಜತೆಯಾಗಿ ಕರೆದು ತಮ್ಮ ಶಾಸ್ತ್ರದ ಅಗುಹೋಗುಗಳ ವಿಚಾರ ವಿಮರ್ಶನವು ಇಂಥ ಸಮ್ಮೇಳನದ ಕರ್ತವ್ಯ. ಯುನೈಟೆಡ್ ನೇಶನ್ಸ ಸ್ಥಾಪನೆಯಾದ ಲಾಗಾಯಿತು ಇಂಥ ಸಮ್ಮೇಳನಗಳು ಪದೇ ಪದೇ ಜರಗುತ್ತಿರುವುದು ಶುಭ ಸೂಚನೆ. 'ಒಂದು ಜಗತ್ತಿನ' ತತ್ತ್ವದರ್ಶನವು ಚರಿತಾರ್ಥವಾಗಲು ಪ್ರಪಂಚದ ಜನ ಒಟ್ಟು ಬೆರೆದು ವಿಚಾರವಿನಿಮಯಮಾಡಿ, ಒಬ್ಬರನ್ನೊಬ್ಬರು ಸಹಿಸಿಕೊಂಡು, ಅರಿತುಕೊಂಡು ಭಿನ್ನಾಭಿಪ್ರಾಯಗಳನ್ನು ತಾತ್ಕಾಲಿಕವಾಗಿ ಕೈಯಿಂದ ಪರಿಶೀಲಿಸಬೇಕಾದುದು ಅತ್ಯಗತ್ಯ.

ವಿಜ್ಞಾನಿಗಳ ಸಮ್ಮೇಳನವು ಇಂಥ ಸನ್ನಿವೇಶದಲ್ಲಿ ವಿಶಿಷ್ಟ ಘನತೆಯನ್ನು ಪಡೆದಿರುವುದು. ವಿಜ್ಞಾನ ನವಯುಗದ ಪುರಸ್ಕರ್ತರ. ಇಂಗ್ಲೆಂಡಿನ ಔದ್ಯೋಗೀಕರಣ ವಾದದಿಂದ ಜನ ತಮ್ಮ ತಲೆಯನ್ನೂ ಮಿದುಳನ್ನೂ ತಾವು ಕಣ್ಣಿಗೆ ಕಾಣಬಲ್ಲ 'ಸತ್ಯ'ಗಳಿಗೆ ಮಾರಿಯುವುದರಿಂದ ಒಳ್ಳೆಯತು, ಕೆಡುಕು-ಎರಡೂ ಉಂಟಾಗಿವೆ. ಅಣುಬಾಂಬು, ಜಲಜನಕ ಬಾಂಬುಗಳನ್ನು ಸೃಷ್ಟಿಸಿದ ವಿಜ್ಞಾನಿಯನ್ನು ಕ್ರಿಮಿನಾಶಕ ತೀರ್ಥಗಳ ಪೈಕಿ ಮೂರನೆಯನೆಂದು ಗಣಿಸಬಹುದು, ಒಂದನೆಯ ಯುದ್ಧದಲ್ಲಿ ಶೋಧಿಸಲಾದ ವಿಮಾನವು ಎರಡನೆಯ ಯುದ್ಧದಲ್ಲಿ ಲಕ್ಷಾಂತರ ಜನರಿಗೆ ಮುಕ್ತಿತಂದು ಕೊಟ್ಟಂತೆ, ಮೊನ್ನಿನ ವಿಶ್ವಮೇಧದ 'ಅಜೆಂಟಿನೆ' ವಿಜ್ಞಾನಿಗಳೇ ತಯಾರಿಸಿಕೊಟ್ಟ ಅಣುಬಾಂಬನ್ನೇ ಮುಂದಿನ ಯುದ್ಧದಲ್ಲಿ ವಿ.ಶ್ರರು (ಯಾರು?.....) ಶತ್ರುಗಳಮೇಲೆ (ಅಂದರೆ ಯಾರ ಮೇಲೆಂದು ಇನ್ನೂ ನಿಶ್ಚಯವಿಲ್ಲ!) ಸುರಿಯುವುದರಲ್ಲಿ ಮುಂದಾಗುವರು. ಈ ದೃಷ್ಟಿಯಿಂದ ವಿಜ್ಞಾನಿಗಳಮ್ಮ ಅಪಾಯಕರ ಜೀವಿಗಳು ಬೇರಿಲ್ಲ- ಇದ್ದ ವಿಜ್ಞಾನಿಗಳನ್ನೆಲ್ಲ, ಪ್ರಪಂಚದ ರಾಜಕಾರಣಿಗಳೊಡನೆಯೇ ಒಂದು ಟೇಲದಲ್ಲಿ ತುಂಬ ಬಿಕ್ಕಿನ ಸಮುದ್ರದಲ್ಲಿ ಅಟಂ ಹಾಕಿ ಕೊಂದರೆ ಯಾವ ಪಾಪವೂ ಇಲ್ಲ ಎನ್ನುವ ಒಂದು ತೀವ್ರಗಾಮಿಗಳ ಮಾರ್ಗವೂ ಇದೆ. ಪ್ರಸಂಚದಲ್ಲಿ ಭೂಭಾರ ಅಧಿಕವಾದ್ದರಿಂದ ಈ ರೀತಿ ಸಾಮೂಹಿಕ ನರಹತ್ಯೆ ನಡೆದರೇನೇ ಉಳಿದವರು (ಅವರ ಪೈಕಿ ನಾನೂ ನೀವೂ ಇದ್ದರೆ ಸಾಕು) ಬದುಕಿಯಾರಾದ್ದರಿಂದ ವಿಜ್ಞಾನಿಗೆ ಪೋಡಸೋಸಚಾರ ಮಾಡಕಕ್ಕಿದು; ಅವನೇ ಅಧುನಿಕ ಯುಗದ ಜೀವರು ಎನ್ನುವ ಇನ್ನೊಂದು ಸಂಧ್ಯೂ ಇಲ್ಲದಿಲ್ಲ.

ಈ ಎರಡು ವಾದಗಳೂ ಸರಿಯೆ! ವಿಜ್ಞಾನಿಯು ನಿಜವಾದ ಸತ್ಯನ್ವೇಷಕನಾದರೆ ಆತ ರಾಷ್ಟ್ರಕನಾಗಕೂಡದು. ಸತ್ಯಕ್ಕೆ ಕಾಲದೇಶಗಳ ಸೀಮೆಯುದೆಯೆ? ಸತ್ಯದ ಪೂಜಾರಿ ತನ್ನ ಶೋಧರನ್ನು ಬುದ್ಧಿಕಟ್ಟು ರಾಜಕಾರಣಿಗಳ ಕೈಗೆ ಕೊಡಬಾರದು. ತಮ್ಮ ವ್ಯಕ್ತಿ ಸ್ವಾತಂತ್ರ್ಯವನ್ನು ವಿಜ್ಞಾನಿಗಳು ಕಾಯ್ದುಕೊಳ್ಳಲಿ. ಹಣವಂತರ ಬಲಿಗೆ ಬೀಳದಿರಲಿ. ಸತ್ಯವನ್ನು ಕೊಂಡುಕೊಂಡು ಅದನ್ನು ಸುಳ್ಳಾಗಿ ಮಾರ್ಪಾಟು ಮಾಡುವ ಕೈಚಳಕ ಈ ರಾಜನೈತಿಕ ಹುಚ್ಚರದು. ಕಳೆದ ಯುದ್ಧದಲ್ಲಿ ಅಮೇರಿಕದಲ್ಲಿ ಒಬ್ಬ ಶಾಂತಿವಾದಿ ವಿಜ್ಞಾನಿಯೆನ್ನು ಪೈಲಿಗೆ ಹಾಕಿದರಂತೆ. ಆತನುಂತ ವಿಜ್ಞಾನಿ, ಕಡೆಗೆ ನೀನು ಒಂದು ವೈಜ್ಞಾನಿಕ ಶೋಧ ಮಾಡಿದರೆ 'ನಿನಗೆ ಬಿಡುವದೆ' ಎಂದಾಗ ಆ ಸತ್ಯವಾದಿ ಇವರ ಕಪಟವರಿಯದೆ ಒಪ್ಪಿದನಂತೆ ತನ್ನ ಶೋಧದಲ್ಲಿ ಆತ ನಿರತನಾದ; ಪರಿಣಾಮವನ್ನು ರಾಜಕಾರಣಿಗಳಿಗೆ ತಿಳಿಸಿದ. ಯುದ್ಧ ಮುಗಿಯುವಾಗ ಅವನಿಗೆ "ಅಣುಬಾಂಬಿನ ಶೋಧದಲ್ಲಿ ವಿಶಿಷ್ಟ ಕೆಲಸಮಾಡಿದ್ದಕ್ಕೆ ಬಹಳ ವ್ಯಕ್ತಿ" ಎಂದು ಶಿಫಾರಸು ಸಿಕ್ಕಿತಂತೆ. ಇಂಥ ವಂಚನೆಯು ನಡೆಯದಂತೆ ವಿಜ್ಞಾನಿ ಜಾಗರೂಕನಾಗಬೇಕು.

ತಾನು ಪ್ರಯೋಗಶಾಲೆಯ ಗಾಜು, ಮಡಕೆ, ದ್ರವಕಗಳಂತೆ ಬರೇ ಒಂದು ಭೌತಿಕ ವಧಾರ್ಥವಲ್ಲ, ಸಮಾಜದ ಕಡೆಗೆ ಜವಾಬುದಾರಿಯುಳ್ಳವನು ಎಂಬುದನ್ನು ಆತ ಮಂದಟ್ಟು ಮಾಡಿಕೊಳ್ಳಬೇಕು. ಅಂಥ ಸಾಮಾಜಿಕ ಜವಾಬುದಾರಿಯು ಇಂದಿನೀ ಸಂಧಿಕಾಲದಲ್ಲಿ ಮನುಷ್ಯ ಜನಾಂಗದ ಅಳಿವುಳಿವುಗಳ ಹೊಣೆಹೊತ್ತಿರುವುದರಿಂದ ಬೆಂಗಳೂರಲ್ಲಿ ಜರಗಿದಂಥ ಅಂತರರಾಷ್ಟ್ರೀಯ ಸಮ್ಮೇಳನಗಳು ಇನ್ನೂ ಇನ್ನೂ ಜರಗಬೇಕು. ಇಂದಲ್ಲ ಒಂದೂನೂರು ವರ್ಷ ಮುಂದಾದರೂ ಮನ ಸೈನು "ಪ್ರಪಂಚದ ನಾಗರಿಕನಾಗಲು" ಈ ಪರಿಷತ್ತುಗಳು ನೆರವಾಗುವುದೆಂಬ ಆಸೆ ಕಟ್ಟಿಕೊಳ್ಳೋಣ.

ಪ್ರಕಟಣೆ

East & West
INSURANCE CO., LTD.
Bombay.

ಈಸ್ಟ್ ಎಂಡ್ ವೆಸ್ಟ್
ಇನ್ಸುರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ
ಸ್ಥಾಪನೆ: 1913
ಪುರಾತನ ಮತ್ತು ಸುಧಾರಿತ ಕಂಪೆನಿಗಳಲ್ಲೊಂದು.

ಇವರು ತಮ್ಮ ಮಂಗಳೂರು ಶಾಖೆಯನ್ನು ಮುಚ್ಚಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಮತ್ತು ಇಡೀ ಮೈಸೂರು ಸ್ಟೇಟಿನ ಚೀಫ್ ಏಜಂಟರುಗಳಾಗಿ
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವು,
ಪೊಸ್ಟ್ ಶಿರ್ವ, ದ ಕ
ಇವರನ್ನು ನೇಮಿಸಿರುವ ಸಂಗ್ತಿ ತಿಳಿಸುವಕೆ ಸಂತೋಷಪಡುತ್ತಾರೆ.

ಪೋಲಿಸಿ ಹೋಲ್ಡರರು, ವಿಮಾ ಇಳಿಸುವವರು, ಏಜಂಟ್ ಮತ್ತು ಸ್ಪೆಶಲ್ ಏಜಂಟರಾಗಲಿಚ್ಛಿಸುವವರು, ಮೋಟಿನ ಚೀಪ್ ಏಜಂಟರೊಡನೆ ಯಾ ಅವರ ಪಡುಬಿದ್ರಿ ಶಾಖೆಯೊಡನೆ ವ್ಯವಹಾರ ನಡೆಸಬೇಕಾಗಿ ಆಪೇಕ್ಷಿಸೋಣಾಗುತ್ತದೆ.

ಸಂತಾನಂ ಹಿತೋಪದೇಶಃ

ವಾನ್ಯ ಸಂತಾನಂ ಅವರು ಹುಬ್ಬಳ್ಳಿಯಲ್ಲಿ ಗಿರಿಜೆಯು ಕೆಲಸಗಾರರನ್ನುದ್ದೇಶಿಸಿ ಮಾಡಿದ ಭಾಷಣವು ಶ್ರಮ ಜೀವಿಗಳಿಗೆ ಹಾಗೂ ಇತರ ನಾಗರಿಕರಿಗೆ ಸನ್ಮಾರ್ಗದ ದರ್ಶಕಗಳಾಗಿವೆ. ಸ್ವತಂತ್ರ ಭಾರತದಲ್ಲಿ ಸೋಮಾರಿಗಳಿಗೆ ಕೆಲಸ ಇಲ್ಲ. ಸುಖ ಸಮೃದ್ಧ ಭಾರತವೇ ನಮ್ಮ ಆದರ್ಶ. ಕೆಲಸಗಾರರು ತಮ್ಮ ಸ್ವಾಭಿಮಾನವನ್ನು ಜಾಗೃತವಾಗಿಟ್ಟುಕೊಂಡು ಆತ್ಮವಿಶ್ವಾಸದಿಂದ ಕರ್ತವ್ಯತತ್ಪರರಾಗಿ ಸುಸಂಘಟಿತ ರೀತಿಯಿಂದ ತಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳಬೇಕು. ಶೈಲ್ಪಿಗಳು ಯಾವ ಬಾಡವಲದಾರರ ಸೊತ್ತೂ ಅಲ್ಲ; ಅವು ಭಾರತೀಯರ ಒಡೆತನಕ್ಕೆ ಒಳಗಾಗಿವೆ. ಕೇವಲ ಒಂದು ಧರ್ಮನಿಧಿಯಂತೆ ಅವುಗಳನ್ನು ಆಡಳಿತೆಗಾರರು ನೋಡಿಕೊಳ್ಳುತ್ತಿರುವರು. ಕೆಲಸಗಾರರು ಕೀಳುತರಗತಿಯವರೆಂಬ ಅತ್ಯ ತಿರಸ್ಕಾರ ಭಾವನೆಯನ್ನಿಟ್ಟುಕೊಳ್ಳುವುದೊಳ್ಳಿತಲ್ಲ ಭಾರತದ ನಾಗರಿಕರಿಂಬ ಅಂತರವನ್ನು ಅವರು ವಹಿಯತಕ್ಕದ್ದಲ್ಲ. ಕೆಲಸವನ್ನು ಬಿಟ್ಟು ಕೊಟ್ಟು ನಿರುದ್ಯೋಗಿಗಳಾಗಿ ಅಲಸಿಗರಾಗಿ ಕುಳಿತು ಕೊಳ್ಳುವುದೆಂದರೆ ರಾಷ್ಟ್ರದ್ರೋಹ. ಇಡಿ ದೇಶವೇ ಒಂದು ದೇವಾಲಯ; ಅದರಲ್ಲಿರುವ ಪ್ರತಿಯೊಂದು ಪದಾರ್ಥವೂ ಪವಿತ್ರವಾದುದು ಎಂದು ತಿಳಿದು ಪ್ರತಿಯೊಬ್ಬ ನಾಗರಿಕನೂ ತನ್ನ ಪಾಲಿನ ಕರ್ತವ್ಯವನ್ನು ಸ್ವಸಂತೋಷದಿಂದ, ಸ್ವಯಂಸ್ಫೂರ್ತಿಯಿಂದ ಮಾಡುವ ಕಾಲವೀಗ ಬಂದಿದೆ.

ಮಹಾಪ್ರಧಾನಿ ನೆಹರೂ ಬಾನುಲಿಯಲ್ಲಿ

ಹೊಸವರುಷ ಬಗ್ಗೆ ನೆಹರೂ ಮಾಡಿದ ಭಾಷಣದಲ್ಲಿ ಅವರು ದೇಶದ ಮುಂದಿನ ಮೂರು ಸಮಸ್ಯೆಗಳನ್ನು ಎತ್ತಿ ತೋರಿಸಿದರು: ಮೊದಲು ನಮ್ಮನ್ನು ದಿಟಿಸುವ ಸಮಸ್ಯೆ ಆಹಾರದ್ದು. ಈ ಹಾ ಹಾಕಾರದಲ್ಲಿ ಭಾಗಿಯಾಗದವರಲ್ಲ ನಿಜ. ಆದರೆ ಕೊರತೆಯನ್ನು ಎಲ್ಲ ಜನ ವರ್ಗಗಳಲ್ಲಿಯೂ, ದೇಶದ ಎಲ್ಲ ಪ್ರದೇಶಗಳಲ್ಲಿಯೂ ಹಂಚಿ ಹಾಕಿ ಅನುಭವಿಸಬೇಕೆಂದು ನೆಹರೂ ಹೇಳಿ 'ನಮಗೆ ಬೇಕಷ್ಟು ಆಹಾರ ಹೊರಗಿನಿಂದ ಬರದಿದ್ದರೆ' ಎಂದು ಒಂದು ಕುಂಟು ಸಂಜ್ಞೆ ಸೇರಿಸಿರುವುದು ಸಮಂಜಸವಾಗಿ ತೋರದು. ಕೇಂದ್ರದ ಆಹಾರಖಾತೆಯು ಸಮಸ್ಯೆಗೆ ಬೆನ್ನು ಹಾಕಿ ಬಲಮಡಚಿ ಓಡುವ ಧೋರಣೆಯನ್ನು ಸ್ವೀಕರಿಸಿದುದು ಸರಕಾರಕ್ಕೆ, ಭೂಷಣವೂ ಅಲ್ಲ. ನೆಹರೂ ಅವರೇ ಆಪಾದಿಸಿದಂತೆ ಈ ಖಾತೆ ''ಕರ್ತವ್ಯರಾಹಿತ್ಯ ಹಾಗೂ ಬೇಹವಾಬು ದಾಂತನ''ಕ್ಕೆ ಗುನ್ಹೆಗಾರನಾಗಿ ನಿಂತಿದೆ. ಧೋರಣೆ ಮುಂದಕ್ಕೆ ಬದಲಿಸಲು ಬರುವುದೆಂದು ನೆಹರೂ ಆಶ್ವಾಸನೆ ಇತ್ತರೂ, ಬದಲಾವಣೆ ಸರಕಾಲಕ್ಕೆ ಬಂದೀತೆಂಬ ಭರವಸೆ ನಮಗಿಲ್ಲ. ದೇಶವು ಗಂಡಾಂತರದ ಛಾಯೆಯಾಗ ಈ ರೀತಿ ಕಾಂಗ್ರೆಸು ನೈತಿಕಪತನಕ್ಕೆ ಗುರಿಯಾದುದು ಖಂಡಿತವೇ ಅವರಿಗೆ ಖೇದವನ್ನುಂಟು ಮಾಡಿದೆ. ನಾವಾದರೂ ಈ ಖೇದದಲ್ಲಿ ಭಾಗಿಗಳಾಗಿ ''ದೇಶದ ಸೇವೆಯೇ ನಮ್ಮಿಷ್ಟ ಗುರಿ ಎಂಬ ಹಳೆಯ ನಮ್ಮ ಉದ್ದೇಶವನ್ನು ನೆನಪಿಗೆ ತಂದುಕೊಳ್ಳುವುದು ಲೇಸು. ಭಿನ್ನಾಭಿಸ್ರಾಯಕ್ಕಿದು ಹೊತ್ತಲ್ಲವೆಂಬುದೂ ಖಂಡಿತ. .....ಕಾಮನ್‌ವೆಲ್ತ್ ಪರಿಷತ್ತಿಗೆ ಈ ಸಲ ನೆಹರೂ ಬೇಡಬೇಡವೆಂದೂ ಹೋಗಲೇಬೇಕಾಗಿದೆ. ಪೂರ್ವ ಪಶ್ಚಿಮಗಳ ಸಂಬಂಧವು ಬಲು ಸೂಕ್ಷ್ಮವಾದ ಆಧಾರದ ಮೇಲೆ ನಿಂತಿದೆ. ''ತಕ್ಕಡಿಯಲ್ಲಿ ದೊಡ್ಡ ದೊಡ್ಡ ಇಸಮುಗಳೇ ಇವೆ. ಮನುಷ್ಯನ ಅದೃಷ್ಟವೇ ಜೋಕಾಲಿಯಾಡುತ್ತಿದೆ' ಈ ಸಂದರ್ಭದಲ್ಲಿ ಭಾರತ ಹಾಗೂ ಮಹಾಪ್ರಧಾನಿ ನೆಹರೂ ವಹಿಸುವ ಪಾತ್ರ ಬಲು ದೊಡ್ಡದು. ವಿರೋಧಿ ಬಾಣಗಳ ನಡುವೆ ಭಾರತವೊಂದೇ ನಂಬಿಗೆಯ ಮಧ್ಯಸ್ಥಿಕೆ ವಹಿಸಿ ದುಡಿಯುತ್ತಿದೆ. ಅಂದು ಮಧ್ಯಸ್ಥಿಕೆಯನ್ನು ದೂರಿದವರು ಇಂದು ಎಚ್ಚರಿಕೆಗೆ ಬಂದಿದ್ದಾರೆ. ಮಂತ್ರಿಗಳ ಭೇಟಿಯಿಂದ ಜಾಗತಿಕ ಗೊಂದಲ ನಿಲ್ಲದಿದ್ದರೂ ಅವರ ಸಮ್ಮಿಳಿತ ಶಕ್ತಿಗೆ ವ್ಯಾಧಾನ್ಯ ಉಳಿದಿದೆ ತಾನೆ?..... ಅಮೇರಿಕ ಸಂಯುಕ್ತ ರಾಜ್ಯವೂ ಕೂಡ ಎಂದಿನ ವರೆಗೆ ಪೆಕಿನ್ ಸರಕಾರಕ್ಕೆ ಮನ್ನಣೆ ಕೊಡುವುದಿಲ್ಲವೋ ಅಂದಿನ ವರೆಗೆ ಕೊರಿಯದಲ್ಲಿ ಯುನೋ ಶಸ್ತ್ರಕ್ರಿಯೆ ಅನರ್ಥಕಾರಿಯೂ, ನಿರುಪಯೋಗಿಯೂ ಆಗುವುದರಲ್ಲಿ ಸಂದೇಹವಿಲ್ಲ. ಈ ವಿಷಯದಲ್ಲಿ ವಾಸ್ತವವಾದಿ ಬ್ರಿಟನ್ನಿನಿಂದ ಅಮೇರಿಕ ಪಾಠ ಕಲಿಯಬೇಕು.

ಮಿತ್ರಜರ್ಮನಿಗೆ ರಿಯಾಯಿತಿ

ಚತುರ್ ರಾಷ್ಟ್ರಗಳ ಪರಿಷತ್ತು ಸೇರದೆ ಪಶ್ಚಿಮ ಜರ್ಮನಿಯ ಸಮಸ್ಯೆಯನ್ನು ಬಗೆಹರಿಸಲು ತವಕಿಸಬಾರದೆಂದು ರಷಿಯಾ ಆಕ್ಷೇಪಿಸಿದರೂ, ಸಂಯುಕ್ತ ರಾಜ್ಯದ ಜಾನ್, ಮೆಕ್ಲೊಯ್ ಅವರು ಪ. ಜರ್ಮನಿಯ ಚಾನ್ಸಲರ್ ಎಡೆನೌರ ಹತ್ತಿರ ಈಗಲೇ [illegible]ನಾತುರತೆಗಿತಗಾರಂಭಿಸಿದ್ದಾರೆ. ಜರ್ಮನಿಯನ್ನು ಪುನಃ ಶಸ್ತ್ರೀಕರಣದ ಕೇಳಿಕೆಯಿಂದುದು ಜರ್ಮನರಿಂದಲ್ಲ ಆಟಲಾಂಟಿಕ ರಾಷ್ಟ್ರಗಳಿಂದ ಎಂಬುದನ್ನು ಕೇಳಿದರೆ ಆಶ್ಚರ್ಯವಾದೀತು. ನಿಜವಾಗಿಯೂ ಮೂಡಗಡಣಿಯಿಂದ ಧಾಳಿಯಾಗುವಾಗ ಜರ್ಮನಿ ಜನಶಕ್ತಿ ಇಲ್ಲದೆ ಅದನ್ನು ತಡೆಯುವುದಸಾಧ್ಯವೆಂದು ಬ್ರಿಟನ್ ಫ್ರಾನ್ಸ್ ಮುಂತಾದ ದೇಶಗಳು ಮನಗಂಡಿವೆ. ಪಶ್ಚಿಮ ಜರ್ಮನಿಯ ಪುನರ್ನಿರ್ಮಾಣ ಕಾರ್ಯದಲ್ಲಿ ಅಮೇರಿಕ ಬ್ರಿಟನ್ನುಗಳು ತುಂಬಾ ಪರಿಶ್ರಮಿಸಿವೆ. ಜರ್ಮನಿಯ ರೂರ್ ಪ್ರದೇಶದ ಸುಪ್ರಸಿದ್ಧ ಕಾರ್ಖಾನೆಗಳು ಮರಳಿ ಯಂದ್ದ ಪೂರ್ವದ ಪ್ರಮಾಣದಲ್ಲೇ ಉತ್ಪಾದನೆಗೆ ಇಳಿದಿರೆ ಮಿತ್ರರೂ ತಮ್ಮ 'ವೆಟೋ'ವನ್ನು ಹಲವುಕಡೆ ಸ್ಥಗಿತಗೊಳಿಸಿದ್ದಾರೆ. ಜರ್ಮನಿಯ ಶಾಸನ ಸಭೆಯ ಕಾಯಿದೆಗಳಲ್ಲಿ ಹಸ್ತಕ್ಷೇಪವನ್ನು ಕಡಿಮೆ ಮಾಡಿದ್ದಾರೆ. ಜರ್ಮನ್ ಫೆಡರಲ್ ನ್ಯಾಯಾಲಯವು ಇದೇ ಈಗ ಸ್ಥಾಪನೆಯಾಗುವುದರಲ್ಲಿದೆ.... ಆದರೆ ಎಡೆನೌರರ ಸರಕಾರ ಇಷ್ಟರಿಂದಲೆ ತೃಪ್ತಿಗೊಳ್ಳಲಾರದು. ಜರ್ಮನಿಯ ಸೈನ್ಯ ಶಕ್ತಿಯ ಪ್ರಾದುರ್ಭಾವವಾಗಬೇಕಾದರೆ ಜರ್ಮನರಿಗೆ ಸ್ವತಂತ್ರ ಸರಕಾರ ರಚಿತವಾದ ಮೇಲೆಯೇ ಸರಿಎಂದು ಅವರು ಹೇಳುತ್ತಾರೆ. ಜರ್ಮನಿಯಲ್ಲಿ ಜಪಾನಿನಂತೆಯೇ ರಾಜಕಾರಣಿಗಳಿಗೆ ಸೈನ್ಯದ ಭಯವಿರುವುದರಿಂದ ಸೃಷ್ಟಿಗೊಳ್ಳುವ ಸೈನ್ಯದ ಸಂಪೂರ್ಣನಿಯಂತ್ರಣವು ತಮ್ಮ ಕೈಯೊಳಗೆಯೇ ಇರತಕ್ಕುದು, ಇಲ್ಲವಾದರೆ ಸೈನ್ಯ ಮಂತ್ರಿಯೇ, ನೌಕಾಮಂತ್ರಿಯೇ ತಮ್ಮ ತಲೆಯ ಮೇಲೆ ಕೂತಾರು ಎಂಬ ಭಯ ಉಂಟೇ ಉಂಟು. ಇಲ್ಲಿ ಬ್ರಿಟನ್ ಳಿಸಿನೆ ಜರ್ಮನಿಯ ಮೇಲೆ ಹಿಡಿತ ಬಿಟ್ಟುಕೊಡಲು ಸಿದ್ಧವಿಲ್ಲವಾದರೂ, ಅಮೇರಿಕವು ಭಾರೀ ಉಳತಾಯದಲ್ಲಿರುವುದರಿಂದ ಎಡೆನೌರ ಸರಕಾರಕ್ಕೆ ವಿಶೇಷ, ರಿಯಾಯಿತಿ ದೊರೆಯುವ ಸಂಭವವು ಹೆಚ್ಚು.

ಹೊಸವರುಷದ ಮುಂಗಾಣ್ಕೆ:

ಹಿಂದೆ ತಿರುಗಿ ನೋಡುವುದು ದುಶ್ಚಟ. ಹಿಂದೆ ನೋಡಿ ಪರಿಶಪಿಸುವುದರಿಂದ ಉಪಯೋಗವಿಲ್ಲ. ಆದದ್ದು ಆಗಿಯೇ ಹೋಯಿತು. ಭಾರತದ ಉಕ್ಕಿನ ಮನುಷ್ಯ ಇದೇ ಈಗ ದಿವಂಗತನಾದ ಸುದ್ದಿಯ ಕಾರ್ನೋಡ ಬಾನಲ್ಲಿ ಕವಿದಿದ್ದರೂ ನಾವು ಹೊಸ ಆಸೆಯಿಂದ ಭವಿಷ್ಯವನ್ನು ದೃಷ್ಟಿಸೋಣ.

ಆಗ ನಮಗೆಲ್ಲಿ ಕಾಣುವುದೇನು? ಯುದ್ಧದ ಕರಿಮುಗಿಲಿನ ಒತ್ತಡ. ದಶದಿಶೆದಳ್ಳಿಯೂ ಧಾಮಿನುವ ಯುದ್ಧದ ನಿನದ. ಪ್ರತಿಯೊಂದು ಗಡಿಯಲ್ಲಿಯೂ ಸಾಮ್ಯವಾದಿ ಪ್ರಜಾರಕರ ಉಪಟಳ. ದೇಶದೊಳಗೆ ಭದ್ರತೆ ಇಲ್ಲದಿರುವುದು ಒಂದು, ನವ್ಯ ತಟಸ್ಥ ವಿದೇಶಾಂಗ ನೀತಿ ನಮ್ಮಸ್ಥಿಲ್ಲಿ ಗೊಯ್ಯುವುದೋ ಎಂದು ಎರಡು- ಅಂಜಿಕೆ ಕಾಡಿಸುತ್ತಿವೆ. ಈ ವರೆಗೆ ನಮಗೆ ಹೊರನಾಡುಗಳಲ್ಲಿ ಕೆಟ್ಟ ಹೆಸರಿಲ್ಲ. ಆದರೆ ಹೆಸರೂ ಕೆಡಲೆಷ್ಟು ಕಾಲ ಬೇಕು? ಕ್ಷಣ ಸಾಕು- ಆದ್ದರಿಂದ ನಮ್ಮ ಗೃಹವ್ಯವಸ್ಥೆ ಚೆನ್ನಾಗಿರಿಸಿಕೊಳ್ಳಬೇಕು. ನಿಜವಾದ ಸುವ್ಯವಸ್ಥೆಯಾಗಬೇಕಾದರೆ ಜುನಾವಣೆ ಮುಗಿಯಬೇಕು. ಆಹಾರ ವಸತಿಗಳ ಏರ್ಪಾಡಾಗಬೇಕು, ಧಾರಣೆಯನ್ನು ಕುತ್ತಿಗೆ ಹಿಡಿದು ಜಗ್ಗಿಸಬೇಕು. ತತ್ವದ ಚರ್ಚೆ ಬದಿಗಿರಿಸಿ ಪರಿಣಾಮವನ್ನುಂಟು ಮಾಡಬಲ್ಲ ಯೋಜನೆಗಳನ್ನು ಕೈಗೊಳ್ಳಬೇಕು.

ಔದ್ಯೋಗೀಕರಣವು ನಮ್ಮ ದೇಶವನ್ನು ಕುಲಗೆಡಿಸಿತು. ಜನತೆಯ ಬಲವನ್ನು ಕುಂದಿಸಿತು. ಹಳಬರು ಹೋದ ಮೇಲೆ ರಾಷ್ಟ್ರ ಶಕಟವನ್ನು ನಡೆಯಿಸಲು ತರುಣ ನಾಯಕರಿಗಳು ಯಾರಿದ್ದಾರೆ? ನಮ್ಮ ತರುಣರು ಸುಳ್ಳು ಕಮ್ಯೂನಿಸ್ಟ್ ತತ್ವಗಳನ್ನು ಹಿಡಿದುಕೊಂಡು ಕರ್ತವ್ಯ ಹೀನರಾಗಿ ಸೋಮಾರಿತನದಲ್ಲಿ ದಿನಗಳೆಯುತಿದ್ದಾರೆ. ದೇಶವನ್ನು ನಡೆಯಿಸಲು ಬೇಕಾದ ಬುದ್ಧಿ ಶಾಲ್ಯ ನಮ್ಮ ತರುಣರಲ್ಲಿದೆಯೇ? ವಿಶ್ವವಿದ್ಯಾಲಯ ಉನಾಧಿಯಿಂದ ಗುಣ ಉಂಟೇ?

ಹೊಸ ವರ್ಷ ಹಬ್ಬಾಚರಣೆ ಮಾಡುತ್ತಿದೆ. ಹಳೆಯ ಐವತ್ತರಲ್ಲಿ ಎಂಡು ಯುದ್ಧಗಳು ಜರಗಿದವು. ಅದೇ ಅನುಭವದ ಪುನಶ್ಚರಣೆಯಾಗುವುದೆ? ಆಥವಾ ನವಜಗತ್ತಿನ ನಿರ್ಮಾಣ ಕಾರ್ಯದಲ್ಲಿ ಸ್ವಚ್ಛ ಹೃದಯದಿಂದ ಲೋಕದ ಜನತೆ ಮುಂದರಿಯುವುದೇ?

ಅವರು ಹೇಳಿದ್ದೇನು?

ಪ್ರಧಾನ ಕಾರ್ಯಾಲಯಃ ಉಡುಪಿ. ಸ್ಥಾಪನೆಃ ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI. (SOUTH INDIA) ESTD: 1935.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು,ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀಪು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿ ಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ವಿಜಂಭಣೆ—

ಶಾ ಕಂಪೆನಿ, ಮಂಗಳೂರು.

ಚೀನ ಎಷ್ಟು ಬಲವಾಗಿದೆ?

ಆರ್ಥಿಕ ಪ್ರಪಂಚ

ಲಂಪೋಜೆ ಚೀನದ ಒಬ್ಬ ಪೈಗಂಬರ. ಇವನು ಹೇಳಿದ (ಬರೆದ) ಫೂಮೋ ಸೈಂಥದಲ್ಲಿ ಪಾಶ್ಚಾತ್ಯರ ಸ್ವಸಂತ್ರ ವ್ಯಾಪಾರಕ್ಕೆ ಸಮಾನವಾದ 'ವೆಯಿ—ವೆಯಿ' ಎಂಬ ಪದ ಒಂದಿದೆ. ೧೯ನೆಯ ಶತಮಾನದಲ್ಲಿ ಸ್ಥಾಪಿತವಾದ ಚೀನಿ ಆರ್ಥಿಕ ಸಮಿತಿಯು ಸಾಮ್ಯವಾದದ ತರ್ಕ ಶುದ್ಧ ಸಿದ್ಧಾಂತವನ್ನು ಸ್ವಲ್ಪ ಬದಿಗಿರಿಸಿ ಒಂದು ವಿಶ್ವ ಆರ್ಥಿಕ ಯೋಜನೆಯನ್ನು ಸರಕಾರಕ್ಕೆ ಉಪದೇಶಿಸಿರುವುದು. ಲಾವೋಜೆಯ ಅನುಯಾಯಿಗಳಾದ ಚೀನೀಯರಿಗೆ ವಿಚಿತ್ರವೆಂದು ಕಾಣುವುದಿಲ್ಲ. ಚೀನವು ಇಂದು ಐದು ಮುಖ್ಯ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಈಶಾನ್ಯ ವಿಭಾಗದಲ್ಲಿ ಮಾರ್ಕ್ಸ್‌ನ ಆರ್ಥಿಕ ತತ್ವವನ್ನನುಸರಿಸಿ, ಸ್ವಾಮಿನೊವೈಟ್ ತೀರ್ಮೋತ್ಪಾದನೆಯ ಸೂತ್ರವನ್ನು ನಂಬಿಕೊಂಡು, ಉತ್ಪನ್ನವನ್ನು ಹೆಚ್ಚಿಸುವ ಯತ್ನವು ನಡೆಯುತ್ತಿದೆ. ಪಡುವಲಿನ ಗುಡ್ಡ ಬೆಟ್ಟಗಳ ಮೇಲೆಯೂ ತಪ್ಪಲುಗಳಲ್ಲಿಯೂ ಅನಾದಿಕಾಲದಿಂದ ಬಂದ ಕೃಷಿ ಪದ್ಧತಿಯೂ, ಪೂರ್ವ ಪಶ್ಚಿಮ ವ್ಯವಸ್ಥೆಯೂ 'ವೆಯಿ—ವೆಯಿ' ಆಗಿ, ಅಂದರೆ ಇದ್ದ ಕ್ರಿದ್ದಂತೆ, ಇಂಗೊಡಿಸಲಾಗಿವೆ. ಬೃಹತ್ತರ ಚೀನವನ್ನು ಕೆಲವು ದೈತ್ಯ ಸಂಸ್ಥೆಗಳ ಮೂಲಕ—ಜನತೆಯ ರಾಷ್ಟ್ರೀಯ ಬ್ಯಾಂಕು, ಔದ್ಯಮಿಕ ಅಭಿವೃದ್ಧಿಯ ಕಾರ್ಪೊರೇಷನ್, ವ್ಯಾವಸಾಯಿಕ ಕಾರ್ಪೊರೇಷನ್ ಮುಂತಾದವು—ಆಳುವುದಕ್ಕೂ, ಆರ್ಥಿಕೋನ್ನತಿಯನ್ನು ಸಾಧಿಸುವುದಕ್ಕೂ ಇಂಥ ವಿಶ್ವ ಯೋಜನೆಗಳಿಂದ ಉಪಕಾರ ಉಂಟೆಂದು ಚೀನೀ ಕಮ್ಯೂನಿಸ್ಟರು ಬಲ್ಲರು.

ದೇಶವನ್ನು ಯುದ್ಧಮುಖಕ್ಕೆ ತಿರುಗಿಸುವುದೂ ಇದರಿಂದ ಸುಲಭ ಸಾಧ್ಯವಾಗುವುದು. ಜನಶಾ ಸರಕಾರದ ಕಾನ್ಸಿಲು ಹಂಗೂ ರಾಷ್ಟ್ರ ಆಡಳಿತೆಯ ಕಾನ್ಸಿಲು ಲಂಚಗುಳಿತನವನ್ನೂ, ಆಮೆರಿಕದ ಆರ್ಥಿಕ ಅಧಿಪತ್ಯವನ್ನೂ ನಿರ್ಮೂಲಮಾಡಿ ಮಧ್ಯಮ ವರ್ಗದ 'ಬೂಜುವಾ' ಜನರಿಂದಲೇ ರಾಷ್ಟ್ರೀಕರಣವಾದ ಕಾರ್ಖಾನೆಗಳನ್ನೂ ನಡೆಸುತ್ತಿವೆ ವ್ಯಾಪಾರದ ದಲ್ಲಾಳಿಗಳು ಸರಕಾರದಿಂದ ನಿಯುಕ್ತರಾದ ಅಧಿಕಾರಿಗಳಲ್ಲ; ಮಾರ್ಕ್ಸ್ ನಾಶಮಾಡಬೇಕೆಂದು ಹೇಳಿರುವ ಯಾವ 'ಬೂಜುವಾ' ವರ್ಗವಿದೆಯೋ ಅದೇ ದಲಾಲಿತನವನ್ನು, ನಿರ್ವಹಿಸುತ್ತಿರುವುದು. ಇದರಿಂದ ಜನರ ಮೇಲೆ ಒಳ್ಳೆಯ ಮಾನಸಿಕ ಪರಿಣಾಮವಾಗಿದೆ' 'ನಾನಾನ್ಯ ಯೋಜನೆ'ಯನ್ನು ಜನತೆಯ ಮುಂದಿಟ್ಟಾಗ ಅದರಲ್ಲಿ ಔದ್ಯಮಿಕ ಕೇಂದ್ರಗಳಲ್ಲಿ ಕಡಿಮೆಯ ಸಾಲವೂ, ಆಹಾರ ದವಸಗಳ ಮೇಲೆ ಕರವೂ ಸಮಾವೇಶಗೊಂಡು ದೇಶದ ಬಜೆಟಿನ 41 4 % ಆದಾಯವನ್ನೊದಗಿಸಿದರೂ, ಜನರು ಯೋಜನೆಯನ್ನು ಸಂತೋಷದಿಂದ ಒಪ್ಪಿಕೊಂಡಿದ್ದಾರೆ- ಚೀನೀ ಸಾಮ್ಯವಾದಿಗಳು ರಷ್ಯದ ಅನುಭವದಿಂದ ಪಾರ ಕಲಿತಂತಿದೆ.

ಹಲವಾರು ಸ್ಥಾನಗಳಲ್ಲಿ ಯೋಜನೆಗಳು ಹೊರಬಿದ್ದಿವೆ. ಅವುಗಳಲ್ಲಿ ಎರಡು ಮಿಲಿಯ ಎಕರೆಗೆ ನೀರಾವರಿ ಒದಗಿಸುವುದು ಕ್ಷಿಪ್ರವಾದ ತವರ್ಮನೆಯಾದ ಚೀನದಲ್ಲಿ ಮುಖ್ಯವಾದುದು ಹತ್ತಿಯ ಬೆಳೆ ಅಭಿವೃದ್ಧಿಯಾಗಬೇಕು ಹೊಸ ಟಾರ್ಗೆಟುಗಳ ಮೂಲಕೆಯನ್ನು ವಿಂಗಡಿಸಿದುದರಿಂದ ಕೃಷಿ ಯಂತ್ರ, ದವಸದ ಬೀಜ, ಕೃತಕಗೊಬ್ಬರ, ಉತ್ಪಾದಕ ಸಾಮಾಗ್ರಿಗಳು ದೇಶ ಹೊಳಕ್ಕೆ ಅಮದಾಗಲು ಅನುಕೂಲವಾದ ಸುಂಕಗಳು ಏರ್ಪಟ್ಟಿವೆ. ನಿರ್ಯಾತಕ್ಕೆ ಸುಂಕ ಸಿಗಿಸಿ ಪ್ರೋತ್ಸಾಹ ಕೊಡಲಾಗುತ್ತಿದೆ ಗೋಧಿಯ ಬೆಳೆ ಕಳೆದ ವರ್ಷಕ್ಕಿಂತ ಹೆಚ್ಚಿ ೨೦ ಮಿಲಿಯ ಟನ್ನಿನಷ್ಟು ಪ್ರಮಾಣದಲ್ಲಿ ಬರಬಹುದೆಂದು ಅಂದಾಜು ಮಾಡಲಾಗಿದೆ. ಕೇಂದ್ರ ಸರಕಾರದ ತೆರಿಗೆಗೆ ಒಳಗಾಗುತ್ತಿದ್ದ ೧೯೩೬ ಸರಕುಗಳ ಪೈಕಿ ಈಗ ಬರೇ ಖಾಸ ಇಸಪುಗಳಿಗೆ ತೆರಿಗೆ ಹೇರಲಾಗುವುದು. ಉಪ್ಪಿನ ಕರ ಅರ್ಧಕ್ಕರ್ಧ ಇಳಿದಿದೆ ಪೇಟೆ ಕಹರುಗಳಲ್ಲಿ ನಿರುದ್ಯೋಗಿಗಳಿಗೆ ಅಶನಾರ್ಥ ಕೊಡಲಾಗುವುದು

ಈ ಸುಧಾರಣೆಗಳಲ್ಲಿ ಆಶ್ಚರ್ಯಕರವಾದುದೂ, ಅಭೂತಪೂರ್ವವಾದುದೂ ಯಾವುದೂ ಇಲ್ಲವಾದರೂ ಒಂದು ವರ್ಷದೊಳಗೆ ಪಂಚ ಪ್ರದೇಶ ವಿಭಾಗಗಳ ಅಧಿಕಾರಿಗಳೂ ಕೇಂದ್ರಕ್ಕೆ ಬಗ್ಗಿ, ವಿಧೇಯರಾಗಿ ನಡೆದ ಯೋಜನೆಯ ಯಶಸ್ಸಿಗೆ ನೆರವಾಗುತ್ತಿರುವುದು ಚೀನದ ಯಥಾರ್ಥವಾದಕ್ಕೂ, ವ್ಯವಹಾರ ಬುದ್ಧಿಗೂ ಸಾಕ್ಷಿಯಾಗಿದೆ ಕಿರುಮಾಯಿದೆಯಲ್ಲಿ ಎಷ್ಟು ಕೆಲಸ ಮಾಡಬಹುದೋ ಅಷ್ಟನ್ನೇ ಕೈಗೊಂಡ ಚೀನೀ ಸರಕಾರದ ಜಾಣ್ಮೆಯನ್ನು ಎಷ್ಟು ಕೊಂಡಾಡಿದರೂ ಸಾಲದು. ರಾಷ್ಟ್ರೀಕರಣವೂ ಸಮಾಜವಾದವೂ ಜಾಗ್ರತೆಯಾಗಿ ಮುಂಬರಿಯ ಹಾಗೂ ಸ್ವಿವಾಪೇಕ್ಷರ ಪ್ರದೇಶಗಳಿಗೆ ವಿಸ್ತಾರಲು ಬಿಟ್ಟಿದೆ. ಪಾಸಗಿ ಒಡೆತನಕ್ಕೆ ತಿಕ್ಷೆ ಕೊಡುವುದೂ, 'ಶತ್ರು'ಗಳನ್ನು ದಂಡಿಸುವುದೂ ಈ ಪ್ರದೇಶದಲ್ಲಿ ಮಾತ್ರ ನಡೆಯುತ್ತದೆ ಉಳಿದ ಹೆಚ್ಚಿನ ಭಾಗಗಳಲ್ಲಿ ಖಾಸಗೀ ವ್ಯಾಪಾರಕ್ಕೆ ಉಚಿತ ಪ್ರೋತ್ಸಾಹವನ್ನು ಕೊಟ್ಟು ಉತ್ಪಾದನೆಯನ್ನು ಬೆಳೆಯಿಸುವ ಯೋಗ್ಯ ಪ್ರಯತ್ನವು ಚೀನದಲ್ಲಿ ಪ್ರಥಮ ಬಾರಿ ನಡೆಯುತ್ತಿದೆ ಚಿಯಾಂಗ್ ಕೈಶೇಕಿನ ಹೊಟ್ಟೆ ಉರಿಯುವ ರೀತಿಯಲ್ಲಿ ಚೀನೀ ಜನತೆ ಮನೋನ್ಮಸಾಮ್ಯವಾದಿ ಸರಕಾರಕ್ಕೆ ನಿರ್ದಾಕ್ಷಿಣ್ಯವಾಗಿ ಬೆಂಬಲಕೊಡುತ್ತಿರುವುದೂ, ಆಡಳಿತೆಯು ಸುಸೂತ್ರವಾಗಿ ಜರಗುತ್ತಿರುವುದೂ, ಗಮನಾರ್ಹ ಸಂಗತಿಗಳು

ಚೀನಾದೇಶದಲ್ಲಿ ಈಗ ಯುದ್ಧಕಲೆಯಲ್ಲಿ ನುರಿತವರೂ, ಸೇನೆಯಲ್ಲಿರುವವರೂ ಒಟ್ಟು ಐವತ್ತು ಲಕ್ಷ ಜನ ಇದ್ದಾರೆ. ಸಮಯವಿದ್ದಾಗ ಇನ್ನು ಐವತ್ತು ಲಕ್ಷ ಜನರನ್ನು ರಂಗಕ್ಕೆ ತರಬಹುದು. ಈಗಾಗಲೇ ಕಾರ್ಪಾನೆಯ ಕೆಲಸಗಾರರು ಸ್ವಯಂಪ್ರೇರಣೆಯಿಂದ ಮುಂದೆ ಬಂದು ಸೈನಿಕ ಶಿಕ್ಷಣ ಪಡೆಯುತ್ತಿದ್ದಾರೆ. ಸುಮಾರು ೧೦,೦೦೦ ಜನವುಳ್ಳ ೩೦೦ ಡಿವಿಜಯಗಳನ್ನು ಈಕ್ಷಣ ಸಿದ್ಧಮಾಡಲು ಚೀನ ಶಕ್ತವಾಗಿದೆ. ಇದರಲ್ಲಿ ೧/೧೦ನೇ ಅಂಶ ಮಾತ್ರ ಈಗ ಕೊರಿಯದಲ್ಲಿರುವು

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದನೋವು, ಘಾಯಗಳು, ಬಾತುಕೊಳ್ಳುವುದು. ಚೇಳವಿಷಮುಂತಾದವು, ಪಕ್ಷವಾತ, ಮೊಡಿವೆ. ಮೊಡಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ



REGD

ಹುಳು ಕಡ್ಡಿ ಮಂಪ್ಪು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

Notice

ಉಡುಪಿ ಡಿ ಮುನ್ಸಿ. ಕೋರ್ಟಿನಲ್ಲಿ

O P No. 49/1950

1) ಚಿನ್ನು ಮರಕಾಲ್ತಿ, ಪೊಲಿಪು ಕುಪ್ಪ ಮರಕಾಲರ ವಿಧವೆ

2) ಬೇಬಿ
3) ರಾಧ
4) ಪ್ರೇಮ

ಮೈನರ್ರು ಪೊಲಿಪು ಕುಪ್ಪ ಮರಕಾಲರ ಮಗಳಂದಿರು. ಕ್ಷೇಮಚಿಂತಕಳು ತಾಯಿ ಚಿನ್ನು ಮರಕಾಲ್ತಿ (ಇವೇ ಅರ್ಜಿದಾರಳು)

5) ಚಿಕ್ಕಿ ಮರಕಾಲ್ತಿ ಪೊಲಿಪು ಕುಪ್ಪ ಮರಕಾಲರ ತಾಯಿ.

—ಅರ್ಜಿದಾರರು

1ರಿಂದ 4ರ ವರೆಗಿನವರು ಪಡುಗ್ರಾಮದ ಕಾಪು ಕಸಬೆಯಲ್ಲಿಯೂ- 5ನೇಯವಳು ಉಳಿಯರಗೋಳಿ ಗ್ರಾಮದ ಪೊಲಿಪು ಎಂಬಲ್ಲಿಯೂ ಯಿರುವವರು.

ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನೆಂದರೆ –

ಉಡುಪಿತಾಲೂಕು ಉಳಿಯಾರಗೋಳಿ ಗ್ರಾಮದ ಪೊಲಿಪು ಎಂಬಲ್ಲಿದ್ದು ತಾರೀಕು 24-9-1950ರಲ್ಲು ಮೃತಪಟ್ಟ ಪೊಲಿಪು ಕುಪ್ಪ ಮರಕಾಲರಿಗೆ "ದಿ ಕೆನರಾ ಮ್ಯೂಚುವಲ್ ಎಕ್ಸ್‌ಪ್ರೆಸ್ಸ್ ಕಂಪೆನಿ, ಲಿಮಿಟೆಡ್, ಉಡುಪಿ– ಇದರ ನಂಬ್ರ 9884ನೇ ಪೊಲಿಸಿಬಾಬ್ತು ಬರಬೇಕಾಗಿದ್ದ ಸಾಲ ರುಪ್ಯಾ 506-4-0ನ್ನು ವಸೂಲು ಪಡಿಯುವರೆ ಅರ್ಜಿದಾರರೇ ಹಕ್ಕುದಾರರೆಂತಲೂ- ಆ ಬಗ್ಗೆ 1ನೇ ಮತ್ತು 5ನೇ ಅರ್ಜಿದಾರರ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಸಂಗ್ತಿ ಕಾರಣಸಿ ಅರ್ಜಿದಾರರು ದಾಕ್ಲೆ ಮಾಡಿರುವ ಮೇಲ್ಕಂಡ ಅರ್ಜಿಯು ತಾ 31-1-1951ಕ್ಕೆ ಯಿಟ್ಟಿದೆ. ಆಕ್ಷೇಪ ಉಳ್ಳವರು ಸದ್ರಿ ತಾ 31-1-51ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು

P. V. Acharya
Vakil for Petitioners

ಉಡುಪಿ, ತಾ. 4-I-1951

ಜೀವವಿಮೆಗಾಗಿ

ವಿಚಾರಿಸಿರಿ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ 1934)

ಚೇಯರ್‌ಮೆನ್: ಶ್ರೀ. ಎಮ್ ಸಿಟಿ ಎನ್ ಚಿದಂಬರವ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ನಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹೆಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದರಾಸು.

To

All our Depositors, Constituents and Shareholders.

We hereby send our remembrances for the year that has passed

AND

Greetings for the year that has dawned.

May the Bright New year turn out to be one of Plenty and Prosperity.

THE VIJAYA BANK, LTD.,

HEAD OFFICE MANGALORE

Branches:- Udipi, Kaup, Coondapoor, Karkala, Brahmavar, Kasaragod, Byndoor, City-Mangalore, Puttur,

ದು. ಸಾಗರದಲ್ಲಿ ತೀರುವ ಮಂಜುಗಡ್ಡೆಯಂತೆ ಹಡಗ ಮುಳುಗಿಸುವ ೯/೧೦ನೇ ಅಂಶ ಇನ್ನೂ ಮರೆಯಲ್ಲಿಯೇ ಇದೆ.

ಎಂಥ ಯುದ್ಧವನ್ನೂ ಸಹಿಸಿಕೊಂಬ ಧಾರಣಶಕ್ತಿ ಚೀನಕ್ಕಿದೆ. ಪ್ರಕೃತ ಉತ್ಪಾದನೆಯಿಂದಲೆ ಅದು ಯುದ್ಧ ನಡೆಸಬಹುದು. ಆಮೇರಿಕದ ವ್ಯಾಪಾರ ದಿಗ್ಬಂಧನದಿಂದ ಸ್ವಲ್ಪ ಆಘಾತವೊದಗಬಹುದು. ಅದರೆ ಜೊಂಗ್ ಕೊಂಗಿನಲ್ಲಿ ಕಳ್ಳಪೇಟೆ ಇರುವ ತನಕ ಈ ದಿಗ್ಬಂಧನಕ್ಕೆ ಚೀನ್ಯಜಂಜುವುದಿಲ್ಲ ಯುದ್ಧ ಉಲ್ಬಣಿಸಿದಂತೆ ಕಳ್ಳಪೇಟೆಯ ಜೋರು ಹೆಚ್ಚುವುದೆಂದೂ ಮಾವೋಗೆ ಗೊತ್ತಿದೆ.

ಆಗ್ನೇಯ ಏಶಿಯದಲ್ಲಿರುವ ಹತ್ತು ಮಿಲಿಯ ಚೀನರು ಮನೆಗೆ ಹಣಕಳಿಸುವುದುಂಟು. ಇದೂ ನೂತನ ಚೀನಕ್ಕೊಂದು ಶಾಶ್ವತ ಆದಾಯವನ್ನೇ ಕಲ್ಪಿಸುವುದು.

ಆಮೇರಿಕವೂ ಮಿತ್ರರೂ ಧುರಕ್ಕೆಳೆಯುವ ಮೊದಲು ಈ ವಿಷಯಗಳನ್ನು ಚೆನ್ನಾಗಿ ಮನನ ಮಾಡ ಬೇಕು. ಚೀನ ಜಪಾನಿನ ಹತವೀರ್ಯ ಚೀನವಲ್ಲ. ೪ ನೆತೆಯ ಶಕ್ತಿಯಿಂದ, ಧೀರಿಣಿಯ ಬುದ್ಧಿಮತ್ತೆಯಿಂದ, ಸೋವಿಯೆಟ್ ರಾಷ್ಟ್ರದ ಮಿತ್ರತೆಯಿಂದ, ತಾನಾಗಿ ಮುಂದಕ್ಕೆ ಬಂದ ಪ್ರಬಲ ರಾಷ್ಟ್ರವಿದು. ಬೆದರಿಕೆಗೆ ಸೊಪ್ಪು ಹಾಕುವುದಿಲ್ಲ. ಟಾವೋ ಗ್ರಂಥ ಹೇಳುತ್ತದೆ: 'ಶತ್ರುಗಳು ಎಚ್ಚರ ತಪ್ಪಿದಾಗ ಚಾತುರ್ಯದಿಂದ ಅವರನ್ನು ಹೊಡೆ; ರಾಜ್ಯವನ್ನು ಸಾವಧಾನ ಚಿತ್ತದಿಂದ ಅಚಂಚಲವಾಗಿ ನಡೆಯಿಸು".

ಮಾವೋ ಸರಕಾರಕ್ಕೆ ಈ ಎರಡೂ ತತ್ವಗಳೂ ಚೆನ್ನಾಗಿ ತಿಳಿದಿವೆ.

೦೦ ೦೦ ೦೦

ದಿನಕ್ಕೊಂದು ಹಡಗ

ಮೂರು ವರ್ಷದಲ್ಲಿ ಭಾರತೀಯರು ತಮ್ಮದೇ ಬೈಲು ಎಂಜಿನು ಬಿಡುತ್ತಾರೆ ಎಂದು ಮೊನ್ನೆ ನೆಂತಾನಂ ಹೇಳಿದರು; ಅದಕ್ಕೆ ಮೊದಲು ಪಾರ್ಲಿಮೆಂಟಿನಲ್ಲಿ ಸರ್. ಚಿಂತಾಮಣಿರು ೧೯೪೧ರಲ್ಲಿ ಭಾರತದ ದಂಡೆಯನ್ನು ದಿನಕ್ಕೊಂದು ಹಡಗ ಮುಟ್ಟುವುದೆಂದು ಆಶ್ವಾಸನೆ ಕೊಟ್ಟರು. ಆಹಾರ ಮಂತ್ರಿಗಳು ಮುಂಬಯಿಯ ಆಹಾರ ಸಮ್ಮೇಳನದಲ್ಲಿ ಈ ವರ್ಷ ನಮ್ಮ ಆಹಾರ ಆಮದು ೩.೭ ಮಿಲಿಯ ಟನ್ನಾಗುವುದೆಂದೂ ಇದರಲ್ಲಿ ೩.೨೫ ಮಿಲಿಯ ಟನ್ನು ದೇಶದ ವಿವಿಧ ರಾಜ್ಯಗಳಿಗೆ ಹಂಚಿ ಹೋಗುವುದೆಂದೂ ವಿವರಿಸಿದರು. ಇಷ್ಟರಲ್ಲಿ ದೇಶದಾದ್ಯಂತ ಹಸುಗೆಯ ಪದ್ಧತಿ ನಡೆಸುವುದು ರಾಜ್ಯದ ಸರಕಾರಗಳಿಗೂ ಸಾಧ್ಯವಿಲ್ಲ, ರಾಷ್ಟ್ರೀಯ ಸರಕಾರಕ್ಕೂ ಸಾಧ್ಯವಿಲ್ಲ—ಎಂಬಲೇ ಹಸುಗೆಯ ರದ್ದತಿಯಾಗಿದೆ. ಕೊರತೆಯ ರಾಜ್ಯಗಳಿಗೆ ಉಚಿತ ಸಹಾಯ ಒದಗಿಸಬೇಕಾದುದು ತೀರ ಅಗತ್ಯವೆಂದು ಇಲ್ಲಿ ಒತ್ತಿಹೇಳಬೇಕಾಗಿದೆ. ಸರಕಾರವೇ ಪ್ರೊಕ್ಯೂರ್‌ಮೆಂಟ್ ಮಾಡಲು ಅನಾಧ್ಯವಾದಾಗ ಲಾಭಭಡಕ ಭೂಮಾಲಿಕ ಹಾಗೂ ವ್ಯಾಪಾರವರ್ಗದ ಕೈಯಿಂದ ಒಕ್ಕೆಯ ದರಕ್ಕೆ ಧಾನ್ಯಗಳನ್ನು ಒದಗಿಸಿ ಕೊಳ್ಳುವರೋ ಎಂಬುದನ್ನು ನೋಡಬೇಕಾಗಿದೆ. ಈ ನಡುವೆ ಹಸುಗೆ ಹೋಯಿತು, ಇನ್ನು ಸುಭಿಕ್ಷೆ ಎಂದು ಮುನ್ಸಿಯವರು ತೆಪ್ಪಗಿರಲಾಗದು ನಮ್ಮ ಅಮದನ್ನು 3.7 ಮಿಲಿಯ ಟನ್ನಿಗಿಂತ ಹೆಚ್ಚಿಸಲು ಸಾಧ್ಯವಿಲ್ಲವೆ? ಎಂದು ಮರಳಿ ವಿಮರ್ಶಿಸಬೇಕು. ಸರ್ ಚಿಂತಾಮಣಿರು ದೇಶದ ಆರ್ಥಿಕ ಸ್ಥಿತಿ ಭದ್ರವಾಗಿದೆ ಎಂದು ಎಷ್ಟು ಬೆನ್ನು ತಟ್ಟಿದರೂ ಸಮುಚಿತವಾದ ಆನ್ನದ ವ್ಯವಸ್ಥೆ ಇಲ್ಲದಿರುವ ಪಕ್ಷಕ್ಕೆ ಜನರಿಗೆ ಅವರ ಘನವಾದ ಮಾತುಗಳ ಮೇಲೆ ವಿಶ್ವಾಸವಿಡುವುದು ಕಷ್ಟವಾಗುವುದು. ಸರ್. ಚಿಂತಾಮಣಿರೂ, ಮುನ್ಸಿಯವರೂ ಆಗಾಗ್ಗೆ ಕೇಂದ್ರ ಕಚೇರಿಯಲ್ಲಿ ಭೆಟ್ಟಿಯಾಗಿ ಚಹಕುಡಿಯುಲಿ ಎಂದು ನಮ್ಮ ಬಿನ್ನಹ.

ಕಾಡುಗಳ ಸದುಪಯೋಗ

ಕೃಷಿ ವಿಭಾಗವು ಕಾಡಿನ ಉತ್ಪತ್ತಿಯ ಬಗ್ಗೆ ಹೆಚ್ಚು ಆಸ್ಥೆ ವಹಿಸಬೇಕು. ಸಿಕ್ಕ ಬಟ್ಟೆ ಕಾಡು ಕಡಿಯುವುದನ್ನು ನಿಲ್ಲಿಸಬೇಕು. ಎಲ್ಲಿ ಹೋದರು ದ್ವಿತೀಯ ಮಹಾಯುದ್ಧಾರಂಭದಿಂದ ಲಾಗಾಯಿತು ಕಾಡು ಕಡಿಯುವುದನ್ನು ನೋಡುತ್ತೇವೆ ಹೊರತು ಅದೇ ಪ್ರಮಾಣದಲ್ಲಿ ನೆಡುವುದನ್ನು ನಾವು ನೋಡುತ್ತಾ ಇಲ್ಲ. ಕಾಡಿಲ್ಲದಿದ್ದರೆ ಇನ್ನೊಂದು ನೂರು ವರ್ಷದಲ್ಲಿ ಮಳೆ ಕಡಮೆಯಾದೀತು, ಭೂಮಿ ಬರಡಾದೀತು, ಜನರ ಜೀವಕ್ಕೇ ಸಂಚಿಕಾರ ಬಂದೀತು—ಎಂಬುದನ್ನು ತಿಳಿಸಲು ಕೇಂದ್ರ ಸರಕಾರ ಏನು ಮಾಡುತ್ತಿದೆ? ಎಂಬುದನ್ನೆ ನಮಗೆ ತಿಳಿಸಬೇಕು. ಧಾರಣೀಯ ಅರಣ್ಯ ಉತ್ಪತ್ತಿಗೆ ವಿದೇಶಿಯ ಮಾರ್ಕೆಟಿದೆ. ಕಾಚ, ಅರಗು, ಮೊದಲಾದುವನ್ನು ಪರದೇಶಕ್ಕೆ ಕಳಿಸುವುದರ ಬದಲು, ಅವುಗಳ ಉಪಯೋಗವನ್ನು ಕಾನನಾಂತರ ಪ್ರದೇಶಗಳಲ್ಲಿ ನಡೆಸಿ, ಗುಡ್ಡಗಾಡಿನ ಮೂಲ ನಿವಾಸಿಗಳಿಗೆ ಉದ್ಯೋಗ ಒದಗಿಸಬೇಕು. ಅಲ್ಲದೆ ಕೆಲವೊ ಅರಣ್ಯ ಉತ್ಪತ್ತಿಗಳಿಗೆ ಅಮೇರಿಕದಲ್ಲಿಂತೂ ಇನ್ನು ಮಾರ್ಕೆಟ್ಟಿಲ್ಲವೆಂದು ಅಮೇರಿಕದಿಂದ ಬಂದ ನಮ್ಮ ಗೆಳೆಯರೊಬ್ಬರು ಹೇಳಿದರು. ಉದಾ:-ನಮ್ಮ ಅರಗನ್ನು ಈ ಹಿಂದೆ ಬಹಳವಾಗಿ ಗ್ರಾಮಾಫೋನ್ ರಿಕಾರ್ಡುಗಳಿಗೆ ಉಪಯೋಗಿಸುತ್ತಿದ್ದರು. ಈಗ ವ್ಲಾಸ್ಟಿಕ್‌ನಿಂದ ಸುಧಾರಿತ ಗಾನತಂತುಗಳನ್ನು ತಯಾರಿಸುತ್ತಿದ್ದಾರಂತೆ. ಕಾಡಿನಲ್ಲಿ ಇನ್ನೂ ಕಣ್ಣಿಗೆ ಬೀಳದ ಅನೇಕ ವಸ್ತುಗಳಿರಬಹುದು. ಅದನ್ನು ಸಂಶೋಧಿಸಲು ಸ್ವಾಪಿತವಾದ ಡೆಹರಾಡೂನಿನ ಅರಣ್ಯ ಸಂಶೋಧನ ಖಾತೆ ತ್ವರಿತದಲ್ಲಿ ಕೆಲಸಕ್ಕಿಳಿದು ಫಲವನ್ನು ತೋರಿಸಬೇಕು. ಬಿದಿರು ವೇಣುಯವಗಳನ್ನು ಕಬ್ಬಿಣ ಉಕ್ಕುಗಳ ಬದಲು ಅಷ್ಟು ಬಾಳಿಕೆ ಬರುವಂತೆ ಕಟ್ಟಡಗಳಿಗೆ ಉಪಯೋಗಿಸುವ ವಿಧಾನಗಳನ್ನು ವಿಜ್ಞಾನಿಗಳು ಕಂಡು ಹಿಡಿಯಬೇಕು.

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

=ದಿ ನೇಶನಲ್ ಜನರಲ್ ಸ್ಟೋರ್ಸ್=

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರುಗ್ಗಿಸ್ಟ್)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp: His Master's Voice,
ಸರ್ ಫಿರೋಜ್ ಷಾ ಮೇಥಾ ರೋಡು, ಫೋರ್ಟ್, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ರಿಯಾಯಿತಿ ದರದಲ್ಲಿ ಶರಿಸಿ ಆಕರ್ಷಕ ಬೆಲೆಗೆ ವಿತರಣೆಮಾಡಲಾಗುತ್ತದೆ.

ಅನುನಿತ್ಯದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಖಾತ್ರಿ ಟಾನಿಕುಗಳೂ ವಿಟಮಿನ್ ಆಹಾರ ವಸ್ತುಗಳೂ, ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಿಯಾಯಿತಿ ದರದಲ್ಲಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ

ವಿ. ಸೂ: ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.
ಹೆಚ್ಚಿನ ಮಾಹಿತಿಗಳಿಗೆ ಇಂದೇ ಬರೆಯಿರಿ.

ಎಂ. ಮೆಂಡೋಸ,
ಮ್ಯಾಲಕ.

M. Mendosa,
Proprietor.

THE NATIONAL GENERAL STORES

Importers, Exporters, Dispensing Chemists & Druggists,
GENERAL MERCHANTS & COMMISSION AGENTS,
8A Mherwan Buildings, Opp: His Master's Voice,
Sir Phirozshah Mehta Road, FORT: BOMBAY.

ಪ್ರಜಾತಂತ್ರೈಷಿಯ ಪ್ರೌಢರೇ:

ವ್ಯಕ್ತಿ ಸ್ವಾತಂತ್ರ್ಯ ಏಂಬ ಹೊಲ್ಲಿನ ಗುಲ್ಲು ಅಮೇರಿಕದ ಸಂಯುಕ್ತ ರಾಜ್ಯದ ಲ್ಲಿ ಕೇಳದಷ್ಟು ಬೇರೆಲ್ಲೂ ಇರಲಾರದು. ಜಗದ್ವಿಖ್ಯಾತ ಹಾಡು ಗಾರನಾದ ನೀಗ್ರೋ ಪಾಲ್ ರೊಬೆಸೊನ್ ಅವರ ಪತ್ನಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಟ್ಟ ಉದಾಹರಣೆ ನೋಡಿ: "ನನ್ನ ಗಂಡನ ಅತ್ಯಂತ ಖ್ಯಾತಿಯನ್ನೂ, ಅವನು ಗಳಿಸಿರುವ ಜನಪ್ರಿಯತೆಯನ್ನೂ ಕಂಡು ಸಾಮಾನ್ಯ ನೀಗ್ರೋ ಜನರಿಗೆ ಇಲ್ಲದ ಸವಲತ್ತು ಅವನಿಗಿರಬಹುದೆಂದು ನೀವು ಭ್ರಮಿಸುವುದು ಬೇಡ. ವಿ.ಸ್ಸಿಸಿಪಿಯ ದಕ್ಷಿಣ ಪ್ರಾಂತ್ಯ ಯಾವುದಾದರೂ ಒಂದಕ್ಕೆ ಪಾಲ್ ರೊಬೆಸೊನ್ ಹೋದನೆಂದಿಟ್ಟು ಕೊಳ್ಳಿ ಅವನು ತನ್ನ ಮನಸ್ಸಿಗೆ ಬಂದುದನ್ನು ಅಲ್ಲಿ ಆಡಿದುದೇ ಆದರೆ ಅವನನ್ನು ನೇತ ಹಾಕಿಯಾರು, ಅಥವಾ ಚಿತ್ರಹಿಂಸೆಗೆ ಗುರಿ ಮಾಡಿ ನಿಚ್ಚುನ್ನೂಲು ಮಾಡಿಯಾರು. "ಏಯ್ ಮಿಸ್ಟರ್ ರೊಬೆಸೊನನ್ನು ಚಿತ್ರಹಿಂಸೆ ಮಾಡುತ್ತಾರೆಯೆ?" ಎಂದು ಆಶ್ಚರ್ಯ ಪಡವುದು ಅಗತ್ಯವಿಲ್ಲ. ಆ ಪ್ರಾಂತ್ಯದಲ್ಲಿ ರೊಬೆಸೊನ್ ಹಸರು ಕೇಳದವರೇ ಎಷ್ಟೋಮಂದಿ ಇರಬಹುದು. ಆದ್ದರಿಂದ ತವ್ಮನ್ನ ನಿಗ್ರೋಗಳಿಗೆ ಮಾಡುವ ಪೂಜೆಯನ್ನು ಅವರು ಇವನಿಗೂ ಮಾಡುವರು. ಹೀಗೆ 'ಲಿಂಚ್' (ಚಿತ್ರಹಿಂಸೆ) ಮಾಡಿದ್ದಕ್ಕೆ ಅವರನ್ನು ಈವರೆಗೆ ಯಾರಾದರೂ ದಂಡಿಸಿದ್ದಾರೆಯೆ? ಇಲ್ಲ. ಆದ್ದರಿಂದ ಪಾಲ್ ರೊಬೆಸೊನ್ 'ಆದರೇನಾಯಿತು. ಅವನೂ ಒಬ್ಬ ನೀಗ್ರೋ ತಾನೆ? ಹತ್ತು ವಿಲಿಯನ್ ನೀಗ್ರೋ ಪ್ರಜೆಗಳಿಗಿರುವಷ್ಟೇ ವ್ಯಕ್ತಿ ಸ್ವಾತಂತ್ರ್ಯ ಅವನಿಗೂ ಇದ್ದೀತು. ಹೆಚ್ಚಿಲು ಸಾಧ್ಯವಿಲ್ಲ".

—ಅಮೇರಿಕದಲ್ಲಿ ನಿಗ್ರೋಗಳಿಗೆ ಪ್ರತ್ಯೇಕ ಕಾಲೇಜು, ವಸತಿಗಳಿವೆ. ಅವರೂ ಬಿಳಿಯರ ಕಾಲೇಜಿಗೆ ಹೋಗಬಾರದು, ಬಿಳಿಯರ ನಡುವೆ ವಾಸಮಾಡಬಾರದು, ಬಸ್ಸುಗಳಲ್ಲಿ ಪ್ರತ್ಯೇಕ ಸ್ಥಳದಲ್ಲಿ ಕೂತರಬೇಕು. ಅಮೇರಿಕದ ಮೂಲ ನಿವಾಸಿಗಳಾದ ರೆಡ್ ಇಂಡಿಯನರು ಈಗಲೂ ವಶುಗಣಂತೆ ಏಸರ್ವೇಶನ್‌ಗಳಲ್ಲಿ ವಾಸವಾಡಬೇಕು ಅವರಿಗೆ ಸರಕಾರ ವರ್ಷಾಶನ ಕೊಡುವುದಂತೆ. ಅದನ್ನು ತಿಂದು ಹಾಕಿ ಜನರನ್ನು ಸಾಯಿಸುವ ವಿಜಂಟೆರಂಗಳು ಬೇರೆ ಇದ್ದಾರೆ ಸ್ವತಂತ್ರ ಪ್ರಜೆಗಳನ್ನು—ವರ್ಣ ಭೇದವಿಲ್ಲದೆ— ಕಮ್ಯೂನಿಸ್ಟರೆಂಬ ಅಪವಾದನೆ ಹೊರಿಸಿ ಕೋರ್ಟಿಗೆಳೆಯಬಹುದು.

ಪ್ರಜಾತಂತ್ರವನ್ನಳಿಸುವ ಮಾದರಿ ಅಮೇರಿಕ ಇದು!

ಪರ್ಲ್‌ಬಕ್ಕಳ ಮೊದಲ ಭಯ

ಅಮೇರಿಕದ ನೋಬೆಲ್-ವಿಜೇತ ಕಾದಂಬರಿಕರ್ತ್ರಿ ಪರ್ಲ್‌ಬಕ್ ಚಿಕ್ಕವಳಿದ್ದಾಗ ಚೀನದಲ್ಲಿದ್ದಳಂತೆ. ಆಕೆ ಒಬ್ಬ ಪಾದ್ರಿಯ ಮಗಳು. ೧೯೦೦ರಲ್ಲಿ ಚೀನದ ಲ್ಲಿ ವಿದೇಶೀಯರನ್ನು— ಬಿಳಿಯರನ್ನು— ಹೊಡೆದೋಡಿಸಬೇಕೆಂಬ 'ಬಾಕ್ಸರ್ ಶ್ರಾಂತಿ' ಆರಂಭವಾಯಿತು. ಬಿಳಿಯರು ಕೆಲವು ಜನ, ಚೀನರಿಂಗೆ ಅನ್ಯಾಯ ಮಾಡಿದರೆಂದು ಚೀನರು ಬಿಳಿಯರೆಲ್ಲರ ಮೇಲೂ ಸಾಗಿಬಂದರಂತೆ. ಹೆಚ್ಚು ಅನ್ಯಾಯ ಮಾಡದ ವಿದೇಶೀಯರು— ಪಾದ್ರಿ ಮಂದ್ಯ ಹಂಚಿ, ಕ್ರಿಸ್ತನ ಸಾಧು ಮಾರ್ಗವನ್ನು ಪ್ರದೇಶಿಸಿ, ಅನಾಗರಿಕರನ್ನು ನಾಗರಿಕರನ್ನಾಗಿ ಮಾಡುವ ಆಶೆಕ್ಕಿಯಿಂದ ಮಾತ್ರವೇ ಬಂದ ಮಿಶ್ಶನರಿಗಳೂ ಚೀನದ ಕ್ರೋಧಕ್ಕೆ ಬಲಿಯಾದುದು ಪರ್ಲ್‌ಬಕ್ಕಳಿಗೆ ಒಪ್ಪಿಗೆಯಲ್ಲ. ಎಂಟು ವರ್ಷದ ಮಗು ಪರ್ಲ್‌ಗೆ ಆಗ ನಿಜ್ಯರಣವಾಗಿ ತಂದೆ ತಾಯಿಗಳು ಮಾಡಿದ ಪಾಪಕ್ಕೆ ಮಕ್ಕಳು ಬಲಿಯಾಗುವುದು ಸಮಂಜಸವಾಗಿ ತೋರಲಿಲ್ಲ, ಈಗಲೂ ತೋರುತ್ತಿಲ್ಲ.

—ಸರಿ, ಕ್ರೈಸ್ತನೇ ಹೇಳಿದ್ದಾನೆ: "ತಂದೆತಾಯಂದಿರ ಪಾಪ ಮಕ್ಕಳ ಮೇಲೆ" ಎಂದು. ಏತಿಯದಲ್ಲಿ—ಚೀನ. ಭಾರತಗಳಲ್ಲಿ—ಈಗ ಮುನ್ನೂರು ವರುಷಗಳಿಂದ ಬಿಳಿಯರು ಮಾಡಿದ ಅತ್ಯಾಚಾರವನ್ನು ಯಾವ ನುಣ್ಣನೆಯ ನೂತನೆಂದಾಗಲೀ, ಪೌಯೆಂಟ್—4,5 ಕಾರ್ಯ ಶ್ರಮಗಳಿಂದಾಗಲೀ, ತೊಳೆಯುವುದು ಶಕ್ಯವಿಲ್ಲ. ಎಂಬುದನ್ನು ನಾವು ಶ್ರೀಮತಿ ಬಕ್ಕಳಿಗೆ ಸೂಚಿಸ ಬೇಕಾಗಿದೆ. ಇನ್ನಾದರೂ ತಾಂತ್ರಿಕವಾಗಿರದ ಕಥೆಯಲ್ಲಿ ಅಮೇರಿಕನ್ ಉಪದ್ವ್ಯಾಹ ಕಡಮೆಯಾಗುವಂತೆ ಶ್ರೀಮತಿಯವರು ಏನಾದರೂ ಮಾಡುವರೆ?

ಹಿಂಡನ್‌ಬರ್ಗ್

ನರಕಕ್ಕೆ ಹೋದಾಗ.....

೧೯೩೫ರಲ್ಲಿ ಪೊಟ್ಸಡಾಮ್ ನಗರದಲ್ಲಿ ಪೈಸಂಜದ ಅತಿಚಿಕ್ಕ ಶ್ಮಶಾನ ಧಾಸಣವೆ ನಡೆಯಿತು. ಭಾಷಣ ಮಾಡಿದ ಮಹಾನುಭಾವ....ಹಿಟ್ಲರ್! ಹಿಂಡನ್‌ಬರ್ಗನನ್ನು ಹೂತರು. ಅಪ್ರಕಾರ ಖರ್ಚುಮಾಡಿದ ಶ್ಮಶಾನಯಾತ್ರೆ ಇಂದಿಗೂ ಸಾಧ್ಯವಿಲ್ಲ ವೆನ್ನಲಾಗುತ್ತಿಲೆಯಾಗಿ ಜರ್ಮನಿ ಶ್ರೀಮಂತರು, ವಿದೇಶೀಯ ರಾಯಭಾರಿಗಳು, ಪತ್ರಿಕೋದ್ಯೋಗಿಗಳು, ನಾಯೀ ಅಧಿಕಾರಿಗಳು ಕಿಕ್ಕಿರಿದಿದ್ದರು. ನಾಯಿಗಳಿಗೂ ಸೈನ್ಯ ಪ್ರಾತೆಗೂ ವಿವಾಹ ಜರಗದ್ದು ಶ್ಮಶಾನ ಭೂಮಿಯಲ್ಲಿಯೇ.

ಹುಟ್ಲರ ವೇದಿಕೆ ಹತ್ತಿದ. ಶ್ರಾವಕರು ಸ್ತಬ್ಧರಾದರು. ಎಲ್ಲೂ ಸದ್ದಿಲ್ಲ. ಪೈಲು ಗಟ್ಟಿಲೆ ಮೌನ. ಕ್ಷಯಿಷ್ಣುವಾದ ಟೈಪುಸ್ಪೃತಿಯನ್ನು ತೆಗೆದು ಎರಡು ವಾಕ್ಯ ಓದಿದೊನೆ ಶ್ರಾವಕರಿಗೆ ಇದು ತಪ್ಪಿದ ಭಾಷಣ ಎಂಬುದು ತಿಳಿಯಿತು. ಯಾರೋ ಹಿಟ್ಲರನ ಕವಿಯಲ್ಲಿ ಭಾಷಣ ತಪ್ಪಿದುದನ್ನೆ ತಿಳಿಸಿದರು. ಹಿಟ್ಲರ ಕೆಂಡವಾದ. ಸೂಟ್‌ಕೇಸಿನಲ್ಲಿ ಬೇಕಿಭಾಷಣಕ್ಕಾಗಿ ತಡಕಾಡಿದ ಸಿಗಲಿಲ್ಲ. ಒಂದು ಕ್ಷಣ ಸಾವಕಾಶ ಮಾಡಿ ಆ ಮೇಲೆ ಹರಿಹತ್ತಾಗಿ "ಹಿಂಡನ್‌ಬರ್ಗ್, ನೀನು ನರಕಕ್ಕೇ ಹೋಗು" ಎಂದು ಒದರಿದ. ಭಾಷಣ ಮುಗಿಯಿತು.]

ರಾಮನ್ ಪರಿಣಾಮ

ಭೌತಶಾಸ್ತ್ರಿ ಸಿ. ವಿ. ರಾಮನ್ ಒಮ್ಮೆ ವಿಲಾಯತಿ ಸಂಚಾರದ ನಡುವೆ ಫ್ರಾನ್ಸಿನ ದ್ರಾಕ್ಷಾರಸ ಕೇಂದ್ರವಾದ ಬೋರ್ದೋ ನಗರಕ್ಕೆ ಹೋದರು. ಸ್ಥಳೀಯ ವಿದ್ವಾಂಸರಿಗಳು ಅವರಿಗೊಂದು ಭೋಜನ ಕೂಟ ಏರ್ಪಡಿಸಿದರು, ಭೋಜನದ ಮಧ್ಯೆ ರಾಮನ್ ಅವರಿಗೆ ಬಹಳ ಒತ್ತಾಯ ಮಾಡಿ, ತಮ್ಮ ಊರಿನ ದೋರ್ದೋ ಕುಡಿಸಲು ಯತ್ನಿಸಿದರು. ರಾಮನ್ ವಿನಯವಾಗಿ ಹಿರಾಕರಿಸಿದರು. ಭಾಷಣ ಮಾಡುವಾಗ ಈ ಉಪಕಾರವನ್ನು ಹಿಂತಿರುಗಿಸಿದರು. ಭಾಷಣದಲ್ಲಿ "ದ್ರಾಕ್ಷಾರಸದ ಮೇಲೆ ರಾಮನ್-ಪರಿಣಾಮ ಏನೆಂಬುದನ್ನು ಜಗತ್ತೇ ಬಲ್ಲುದು. (ಕ್ರಿಸ್ಟಲ್ ಹಾಗೂ ದ್ರವಗಳ ಅಣುಗಳ ಮೇಲೆ ನಡೆಯುವ 'ರಾಮನ್-ಇಫೆಕ್ಟ್' ಕುರಿತು ಹೇಳಿದ್ದು] ಆದರೆ ಈ ಹೊತ್ತು ಇಬ್ಬರು ಮಹಾನೀಯರು ರಾಮನ್ ಮೇಲೆ ದ್ರಾಕ್ಷಾರಸದ ಪರಿಣಾಮ ಹೇಗಾಗುವುದೆಂಬುದನ್ನು ನೋಡಲು ಯತ್ನಿಸಿದರು." ಎಂದು ರಾಮನ್ ಕೇಳಿಬಿಡನೆ ನೆರೆದವರು ನಕ್ಕು ಬಿದ್ದರು.

—ಸಿ. ವಿ. ರಾಮನ್ ಒಂದು ವಿಚಿತ್ರ ಜೀವ. ಭೌತಶಾಸ್ತ್ರದ ಮನುಷ್ಯ ಇವರಿಗೆ ಅತೀರೇಕವಾಗಿದೆ. ಉಪನ್ಯಾಸ ಕೊಡುವಾಗ ರಂಗದ ಮೇಲೆ ಭಂತ ನಾಟ್ಯವಾಡುವುದಕ್ಕೂ ಹಿಂದೆ ಹೋಗುವುದಿಲ್ಲ. ತಮ್ಮ ವಿವರಣೆ ಹಾಗೂ ಮಾಯಾಲಾಂಛನದ ಚಿತ್ರದಲ್ಲೇ ತಲ್ಲೀನರಾಗಿ ಇವರಿನ ಶ್ರಾವಕರ (ಅವರಲ್ಲಿ ನಾನೂ ಒಬ್ಬ) ವಿಮರ್ಶನ ವಾಟ್ಟವನ್ನು ಮರೆತೇ ಬಿಡುತ್ತಾರೆ ಆದರೆ ಅರುವತ್ತರ

(೨ನೇ ಪುಟ ನೋಡಿರಿ)

ಲೋಕಾಂತ

ಭಾರತದಲ್ಲಿ ಕ್ಷಯರೋಗ ಮುದ್ರೆಯ ಮಾರಾಟದ ಚಳವಳಿ

(ಭಾರತದ ಕ್ಷಯರೋಗ ಸಂಘ ಹೊಸದಿಲ್ಲಿ—ಇವರ ನೇತೃತ್ವದಲ್ಲಿ)

ದಯವಿಟ್ಟು ಇವನ್ನು ನೆನಪಿಟ್ಟುಕೊಳ್ಳಿ

1) ಭಾರತದಲ್ಲಿ ಕ್ಷಯರೋಗದಿಂದ ಪ್ರತಿನಿಮಿಷಕ್ಕೊಬ್ಬರಂತೆ ಸಾಯುತ್ತಿದ್ದಾರೆ.
2) ಯಾವುದೊಂದು ಸಮಯದಲ್ಲಿಯೂ ಭಾರತದಲ್ಲಿ 25 ಲಕ್ಷ ಮಂದಿ ಕ್ಷಯರೋಗದಿಂದ ನರಳುತ್ತಿರುವವರಿದ್ದಾರೆ.
3) ಭಾರತಕ್ಕೆ 4000 ಕ್ಷಯರೋಗದ ರುಗ್ಣಾಲಯಗಳೂ, ಕನಿಷ್ಠಪಕ್ಷ 5,00,000 ಕ್ಷಯರೋಗಿ ಆಸ್ಪತ್ರೆಗಳ ಹಾಸಿಗೆಗಳೂ ಅಗತ್ಯವಾಗಿವೆ; ಆದರೆ ಈಗ ಭಾರತದಲ್ಲಿ (45 ಕ್ಷಯರೋಗದ ರುಗ್ಣಾಲಯ ಮತ್ತು 32 ಕ್ಷಯ ರೋಗದ ಆಸ್ಪತ್ರೆಗಳಲ್ಲಿ ಹಂಚಿ ಹಾಕಿದ) 119 ಆರೋಗ್ಯವರ್ಧಕ ಕ್ಷೇತ್ರಗಳಿಗೆ ಸಂಬಂಧಿಸಿದ ಸವಾಲು 10,000 ಹಾಸಿಗೆಗಳಷ್ಟೇ ಇವೆ.
4) ತನ್ನ ಕ್ಷಯರೋಗಿಗಳ ಪುನರ್ ವಸತಿಗಾಗಿ ಭಾರತಕ್ಕೆ ಧಾರಾಳ ಸಂಖ್ಯೆಯ ಕೊಲನಿಗಳೇ ಬೇಕಾಗಿವೆ.
5) ಈ ಕೆಡುಕನ್ನು ನಿವಾರಿಸುವುದಕ್ಕಾಗಿ ಹಣ ಸಂಗ್ರಹಿಸಲು ಸಮಗ್ರ ಜನಾಂಗವ್ಯಾಪ್ತಿಯಾಗಿರುವ ಕ್ಷಯರೋಗ ಮುದ್ರೆಯ ಮಾರಾಟದ ಚಳವಳಿ ವೃದ್ಧಿಗೊಳ್ಳುತ್ತಿದೆ.
6) ಈ ಒಂದು ಮುದ್ರೆಯ ಬೆಲೆ ಒಂದು ಆಣೆ ಮಾತ್ರ.
7) ಈ ಮುದ್ರೆಗಳು ಹೆಚ್ಚಿಗೆಯಾಗಿ ನಿಮ್ಮ ಸ್ನೇಹಿತ ಕಾಗದ ಪತ್ರಗಳನ್ನು ನಿಮ್ಮ ಕ್ರಿಸ್‌ಮಸ್, ಹೊಸ ವರ್ಷ ಮತ್ತು ಇತರ ಅಭಿವಂದನಾಪತ್ರಗಳನ್ನೂ ಸ್ಪೃಂಗರಿಸಬಲ್ಲುವು
8) ಪ್ರತಿಯೊಂದು ಕಾಗದ, ಅಭಿನಂದನಾ ಪತ್ರ, ಪಾರ್ಸೆಲ್ ಅಥವ ಪೆಕೆಟುಗಳಿಗೆ ನೀವು ಅಂಟಿಸುವ ಆ ಒಂದು ಮುದ್ರೆ ಕ್ಷಯ ನಿವಾರಣೆಗಾಗಿ ನೀವು ಕೊಡುವ ಅತ್ಯಲ್ಪ ವಿತರಿಯದೇ ಆದ ಸಹಾಯವಾಗಿದೆ.
9) ಈ ಮುದ್ರೆಗಳ ಮಾರಾಟ 1951ನೇ ಇಸವಿ ಜನವರಿ ತಾ. 26ರಂದು ಅಂತ್ಯವಾಗುವುದು.
10) ನಿಮ್ಮ ಶಕ್ತ್ಯಾನುಸಾರವಾದ ಮಂತಿಗೆ ಕೊಡಲು ನಿವಮಗುಳಿದ ಸಮಯ ಬಹಳ ಸ್ವಲ್ಪ

ಈ ಮುದ್ರೆಗಳನ್ನು ಧಾರಾಳ ಸಂಖ್ಯೆಯಿಂದ
ಕೊಂಡುಕೊಳ್ಳಿರಿ!
'ಕ್ಷಯರೋಗವನ್ನು ಜಯಿಸಲು ಸಾಧ್ಯ!!'
ಎಂಬ ಸಂದೇಶವನ್ನು ಹಬ್ಬಿಸಿರಿ.

ನೀವಿನ್ನೂ ಈ ಮುದ್ರೆಗಳನ್ನು ಕೊಳ್ಳದವರಾಗಿದ್ದರೆ ತ್ವರೆ ಮಾಡಿ! ಮುದ್ರೆಗಳು ಮುಖ್ಯ ಪೋಸ್ಟಾಫೀಸುಗಳಲ್ಲಿಯೂ, ಮದ್ರಾಸ್ ಕ್ಷಯರೋಗ ಸಂಘದ ಗೌರವ ವಾರ್ಥ ಕಾರ್ಯದರ್ಶಿಗಳಲ್ಲಿಯೂ, ಆದೋಗ್ಯ ಶಾಖಾಧಿಕಾರಿ, ರಿಪ್ಪನ್ ಬಿಲ್ಡಿಂಗ್ಸ್, ಮದ್ರಾಸ್ 3, ಇವರಲ್ಲಿಯೂದೊರಕುತ್ತವೆ

[ಈ ಸ್ಥಳ: ಕೆನರಾ ಬ್ಯಾಂಕ ಲಿಮಿಟೆಡ್- ಇವರ ಸೇವಾದಾನ]

ಸೋ ಮಿಲ್

ಉತ್ಕೃಷ್ಟ ತರದ ಇಂಗ್ಲಿಷ "ಸೋ ಬೆಂಚ್" 24 ಇಂಚು ಹಾಗೂ 30 ಇಂಚು ಗೋಲ ಗರಗಸ ಉಳ್ಳವು. ಅತಿ ಯೋಗ್ಯ ಬೆಲೆ. ಮಾಹಿತಿ ಬಗ್ಗೆ ಇಂದೇ ಬರೆಯಿರಿ.

The Vijay Engineering Co. Ltd.

Mazagaon, **Bombay 10.**

ಗುರುವಾರ, ಉಡುಪಿ, ೧೧-೧-೫೧

ಕ. ಸಾ. ಪರಿಷತ್ತು ಕ್ರಿಯಾಶಾಲಿಯಾಗಬೇಕು!

ಕನ್ನಡ ಸಾಹಿತ್ಯ ಪರಿಷತ್ತಿನ ಏಳನೆಯ ಸಾಹಿತ್ಯ ಸಮ್ಮೇಳನವು ಮುಂಬಯಿಯಲ್ಲಿ ಆಸ್ಥಾನ ಕವಿ ಮಂಜೇಶ್ವರ ಗೋವಿಂದ ಪೈಗಳ ಸನ್ನಿಧ್ಯದಲ್ಲಿ ಅಧ್ಯಕ್ಷತೆಯಲ್ಲಿ ಜರಗಿತು. ಎರಡೂವರೆ ಲಕ್ಷದಷ್ಟು ಕನ್ನಡಿಗರುಳ್ಳ ಮಹಾನಗರದಲ್ಲಿ ಇಂತಹ ಸಮ್ಮೇಳನವನ್ನು ಜರಗಿಸಿದ್ದು ಕನ್ನಡ ಏಕೀಕರಣ ದೃಷ್ಟಿಯಿಂದಲೂ, ಕನ್ನಡ ಪ್ರಚಾರ ಜಾಗೃತಿಯ ದೃಷ್ಟಿಯಿಂದಲೂ ಸಮರ್ಪಕವೇ ಆಗಿದೆ. ಕನ್ನಡ ಏಕೀಕರಣದ ಪ್ರಶ್ನೆ ಕ್ರಾಂಗ್ರೆಸ್ ವರಿಷ್ಠರಿಂದ ಕಡೆಗಣಿಸಿದಂದಿನಿಂದ ಕನ್ನಡಿಗರಿಗೆ ವಿಶೇಷವಾಗಿ ನಿರುತ್ಸಾಹ ಉಂಟಾಗಿದೆ. ದೇಶಕ್ಕೆ ಬಂದೊದಗಿದ ಹಲವಾರು ಸಂಕಷ್ಟಗಳನ್ನು ಅರಿತು ಕೊಂಡರೂ ಧುರೀಣರು ನಿರ್ಧಾಕ್ಷಿಣ್ಯವಾಗಿ, ಪ್ರಾಂತೀಯ ಭಾವನೆಯನ್ನು ತೊಡೆದು ಹಾಕಿದ್ದು ವಿಷಾದಕರ. ಭಿನ್ನ ಭಿನ್ನವಾಗಿ ಹೆಂಚಿಹೋಗಿರುವ ಕನ್ನಡಿಗರ ವ್ಯವಹಾರದಲ್ಲೂ ಸಂಸ್ಕೃತಿಯಲ್ಲೂ, ಭಾಷಾಭಿಮಾನದಲ್ಲೂ ಭಿನ್ನ ಭಿನ್ನವಾದ ಧೋರಣೆಗಳೇ ಕಾಣುತ್ತಿವೆ. ಇಂತಹ ದುರವಸ್ಥೆಯನ್ನು ಅರಿತುಕೊಂಡು ಕಾಂಗ್ರೆಸಿನ ಘಟನೆಗೆ ಅಂಟಿಕೊಂಡಿರುವ ಭಾಷಾವಾರು ಪ್ರಾಂತರಚನೆಯನ್ನಯ ಏಕತಂತ್ರ ಕರ್ನಾಟಕದ ಬೇಡಿಕೆಯನ್ನು ಮುಂದೆ ಮಾಡಿದಾಗ ನಮ್ಮ ಹಿರಿಯರು ಸರಿಯಾದ ಮಾರ್ಗದರ್ಶನ ಮಾಡುವದಂತಿರಲಿ ಹಿತವಚನವನ್ನಾಡುವ ಸಹನೆಯನ್ನೂ ತೋರಿಸಲಿಲ್ಲ. ಇಂತಹ ಸನ್ನಿವೇಶದಿಂದ ಕನ್ನಡಿಗರು ಪರಿಹಾಸ್ಯಕ್ಕೀಡಾಗುವ ಸ್ವಾಭಾವಿಕ. ಮುಂಬಯಿಯ ಸಮ್ಮೇಳನ ಅಕುರಿತೇನಾದರೂ ತನ್ನ ಅಸಮಾಧಾನವನ್ನು ವ್ಯಕ್ತವಾಡಬಹುದೋ ಎಂದು ನಾವು ನಿರೀಕ್ಷಿಸಿದ್ದೆವು. ಆದರೆ ಮುಂಬಯಿ ಸಮ್ಮೇಳನ ಈ ಹಿಂದಿನ ೩೩ ವರ್ಷಗಳಲ್ಲಿ ನಡೆಸಿದ ಸಾಹಿತ್ಯ ಸಮಾರಂಭದಿಂದ ಹೆಚ್ಚಾದುದನ್ನೇನೂ ಮಾಡಲಿಲ್ಲ. ಎಂದಿನಂತೆ ಅತ್ಯಮೂಲ್ಯ ಭಾಷಣಗಳನ್ನು ಜಮಾಯಿಸುವುದರಲ್ಲೇ ಈ ಸಮ್ಮೇಳನ ಮುಕ್ತಾಯ ಗೊಂಡಿತು. ಕರ್ನಾಟಕದ ಉತ್ತಮ ಕವಿಗಳೂ, ಸಂಶೋಧಕರೂ ಮುದ್ರಾಸು ಸರಕಾರದಿಂದ ಆಸ್ಥಾನ ಕವಿಯೆಂದು ಗೌರವಾನ್ವಿತರೂ ಆದ ಗೋವಿಂದ ಪೈಗಳು ತನ್ನ ಗಾಂಭೀರ್ಯಕ್ಕೆ ತಕ್ಕಂತೆ ಸಾಹಿತಿಕವಾಗಿ (ಎಲ್ಲಾ ಹೇಳಿದಂತೆ) ಊದುವ ಶಂಖವನ್ನು ಊದಿಬಿಟ್ಟರಾಶೆ. ಶ್ರೀ ಪೈಗಳವರ ಭಾಷಣ ಪಂಡಿತ ಮಾನ್ಯವೂ, ಅತ್ಯಮೂಲ್ಯವೂ ಆಗಿತ್ತೇ ಹೊರತು ಜನಪ್ರೀತವಾಗಲಿಲ್ಲ. ಟೈಪ್ ರೈಟರ್‌ದ ಮುಖ್ಯ ಸೂಚನೆಯೊಂದನ್ನು ಬಿಟ್ಟರೆ ಉಳಿದುದೆಲ್ಲ ಮಾಮೂಲಿನಂತೆಯೇ. ಸಾಹಿತ್ಯಗೋಷ್ಠಿಯಲ್ಲಿ ಪ್ರಿನ್ಸಿಪಾಲ ಗೋಕಾಕರ ಭಾಷಣ ನಿಜವಾಗಿಯೂ ಹೊಸ ಬರಹಗಾರರಿಗೆ ಉತ್ತಮ ಮಾರ್ಗದರ್ಶನವನ್ನು ಮಾಡಿಯಿದೆ. ವಿಮರ್ಶನ ಹೊಸೆಯು ಕುರಿತ ಮಾತುಗಳು ಮನನೀಯವಾದವುಗಳು. ಪತ್ರಿಕೋದ್ಯೋಗಿಗಳ ಪರಿಷತ್ತಿನ ಅಧ್ಯಕ್ಷ ಭಾಷಣ ಇನ್ನೆಲ್ಲಕ್ಕಿಂತ ಮಿಗಿಲಾದುದು. ಮುಂಬಯಿಯ ಸಮ್ಮೇಳನ ನಾಧಿಸಿದ ಮುಖ್ಯವಾದ ಅಂಶವೆಂದರೆ ಪತ್ರಿಕೋದ್ಯೋಗಿಗಳ ಪರಿಷತ್ತೊಂದೇ. ಕನ್ನಡದಲ್ಲಿ ಹುಲುಸಾಗಿ ಬೆಳೆಯುತ್ತಿರುವ ಸತ್ಪತ್ರಿಕೆಗಳ ಹಾಗೂ ಬರಹಗಾರರ ಹೊಸೆಗಾರಿಕೆ- ಅಭ್ಯಾಸಪೂರ್ಣ ಅನುಭವಗಳ ಅವಶ್ಯಕತೆಗೆ ದೇಶ ಸೇವಾ ಕಾಂಕ್ಷೆ-ಮೊದಲಾದ ಹಿರಿಯ ಗುಣಗಳನ್ನು ಎತ್ತಿ ತೋರಿಸಿದೆತ್ತಾರೆ. ಪತ್ರಿಕೋದ್ಯಮದಲ್ಲಿ ಪರಿಶ್ರಮಿಸಿ ಅಳವಾದ ಅನುಭವವನ್ನು ಪಡೆದ ಶ್ರೀ ಮೊಹರೆಯವರ ಭಾಷಣ ಸತ್ವಪೂರ್ಣವಾದುದೂ, ಅತ್ಯಂತ ಉಪಯುಕ್ತವಾದುದೂ ಆಗಿರುತ್ತದೆ

ಇಡಿಯ ಕರ್ನಾಟಕದ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಇಷ್ಟನ್ನು ಮಾತ್ರ ಮಾಡಿ ಸುಮ್ಮನಿರುವ ಧೋರಣೆಯನ್ನು ಬಿಟ್ಟುಕೊಟ್ಟು ಕ್ರಿಯಾಶಾಲಿಯಾಗಬೇಕು. ಕನ್ನಡದಲ್ಲಿ ಆಗಬೇಕಾದ ಶುಧಾರಣೆಗಳನ್ನಾಗಲೀ-ಬೈಪರೈಟರನ್ನಾಗಲೀ-ಅರ್ಥಕೋಶವನ್ನಾಗಲೀ ವರ್ಷಕ್ಕೊಮ್ಮೆ ಆಗುವ ಸಮ್ಮೇಳನದಲ್ಲಿ ಬೋಧಿಸಿ, ಮತ್ತೆ ಮರೆಯುವಿನದಂಲ್ಲಿ ಅರ್ಥವಿಲ್ಲ. ಹತ್ತಾರು ಸಾವಿರ ವೆಚ್ಚ ಮಾಡಿ ವರ್ಷಕ್ಕೊಮ್ಮೆ ಹೀಗೆ ಉತ್ಸವನ್ನೇರ್ಪಡಿಸುವುದರಲ್ಲಿ ಜನಜಾಗ್ರತಿಯಾಗುವುದೆನ್ನುವ ವಿಚಾರ ಭ್ರಾಮಕವಾದುದು. ಇಂತಹ ಸಮ್ಮೇಳನ ನಡೆಯಲಿ; ಆದರೆ ಉಳಿದ ಸಮಯ ಪರಿಷತ್ತೂ ಕೆಲಸಮಾಡಲಿ ವಿವಿಧ ವಿಚಾರಗಳಲ್ಲಿ ಅನುಭವವನ್ನು ಪಡೆದ ಕನ್ನಡಿಗರು ನಮ್ಮಲ್ಲಿದ್ದಾರೆ. ಅವರನ್ನು ಪರಿಷತ್ತು ಕೂಡಿಸಿಕೊಂಡು ಕರ್ನಾಟಕಕ್ಕೆ ಬೇಕಾದಕಾರ್ಯವನ್ನು ಮಾಡಿಸಿಕೊಳ್ಳಲಿ. ಇಂತಹ ಸಂದರ್ಭದಲ್ಲಿ ಸೇವಾದೃಷ್ಟಿಯಿಂದ ಅವರನ್ನು ಒಳಸಿಕೊಳ್ಳದೆ ಜೀವನ ನಿರ್ವಹಣದ ಯೋಗ್ಯ ಪ್ರತಿಫಲವನ್ನು ಕೊಡಬೇಕು. ಹಾಗಾದರೆ ಸಾಹಿತ್ಯ ಪರಿಷತ್ತು ತನ್ನ ಉದ್ದೇಶವನ್ನು ಸಾಧಿಸಿದಂತಾದೀತು. ಮುಂದೆ ಆಗಲೇ ಬೇಕಾದ ಕರ್ನಾಟಕ ಪ್ರಾಂತಕ್ಕೆ ಪರಿಷತ್ತು ಆಧಾರಸ್ತಂಭವಾದೀತು. ಹಾಗಾಗಲೆಂದು ಹಾರೈಸುತ್ತೇವೆ.

ಉಡುಪಿಯಲ್ಲಿ ಕೇಂದ್ರ ಸರಕಾರದ ಉಪಮಂತ್ರಿಗಳ ಆಗಮನ.

ಇಂದೇ ತಾ. ೬ರಲ್ಲಿ ಪೂರ್ವಾಹ್ನ ಉಪಮಂತ್ರಿಗಳಿಬ್ಬರೂ ಶ್ರೀಮತಿ ಮುಸ್ಸಿರ್‌ಲಾಲರೂ ಡಾ॥ ಯು. ಪಿ. ಮಿಶ್ರರೊಂದಿಗೆ ಉಡುಪಿಗೆ ಬಂದಾಗ ಸರ್ಕಿಟ್‌ಹೌಸ್‌ನಲ್ಲಿ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟಿಗಾ, ಉಡುಪಿ ಕಾಂಗ್ರೆಸ್ ಪ್ರೆಸಿಡೆಂಟ್ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆ, ಶ್ರೀ ಕೆ. ನರಸರಿ ಕಾಮತ್, ಮಂತ್ರಿಕರ ರಿವಿನ್ಯೂ ಪಾತೆಯ ಅಧಿಕಾರಿಗಳು ಇದಿರ್‌ಗೊಂಡರು. ಶ್ರೀ ಕೃಷ್ಣ ಮಠಕ್ಕೆ ದೇವರ ದರ್ಶನಕ್ಕಾಗಿ ಬಂದಾಗ ಮಾನ್ಯ ಉಪಮಂತ್ರಿಗಳನ್ನು ಬರುದಾವಳಿ ಮೆರವಣಿಗೆಯಿಂದ ಸ್ವಾಗತಿಸಲಾಯಿತು. ರಥಬೀದಿಗೆ ಬಂದು ಶ್ರೀ ಅನಂತೇಶ್ವರ, ಚಂದ್ರೇಶ್ವರ ದೇವಸ್ಥಾನಗಳನ್ನು ಸಂದರ್ಶಿಸಿ ಶ್ರೀ ಕೃಷ್ಣನ ಮತ್ತು ಮುಖ್ಯಪ್ರಾಣ ದೇವರ ದರ್ಶನ ಪಡೆದರು. ಬಳಿಕ ಸನ್ನಿಧಾನದಲ್ಲಿಯೇ ಸನ್ನಿಹಿತರಾದ, ಪರ್ಯಾಯಮಠ ಕಾಣಿಯೂರು ಮಠಕ್ಕೆ, ಶೀರೂರು, ಪೇಜಾವರ, ಸೋದೆ, ಅಧಮಾರು ಸ್ವಾಮಿಗಳವರನ್ನು ಭೇಟಿಯಾದರು. ಶ್ರೀ ಶೀರೂರು ಮಠದ ಶ್ರೀ-ಲಕ್ಷ್ಮೀಂದ್ರ ತೀರ್ಥ ಸ್ವಾಮಿಗಳವರು ಸಂಸ್ಕೃತ ಭಾಷೆಯಲ್ಲಿ ಚಿಕ್ಕ ಸ್ವಾಗತ ಭಾಷಣ ಮಾಡಿದರು. ಪರ್ಯಾಯ ಸ್ವಾಮಿಗಳವರೇ ನೂದಲಾದವರು ಮಾನ್ಯ ಮಂತ್ರಿಗಳಿಗೆ ಸನ್ಮಿಧಾನದ ಫಲಮಂತ್ರಾಕ್ಷತೆಯನ್ನಿತ್ತು ಗೌರವಿಸಿದರು. ಸ್ವಾಮಿಗಳೆಲ್ಲರ ಸ್ವಾಗತಕ್ಕಾಗಿ ಆಭಾರ ಮನ್ನಿಸಿ ಶ್ರೀ ಕಿರಿಮಂಜ ರಾಯರು ಸಂದರ್ಭೋಚಿತ ಮಾತುಗಳನ್ನಾಡುತ್ತಾ ಧರ್ಮ ಸಂಸ್ಥೆಗಳು ಧರ್ಮ ಪ್ರಚಾರದಲ್ಲಿ ಹೆಚ್ಚಿನ ಆಸಕ್ತಿಯುಳ್ಳವುಗಳಾಗಿರಬೇಕೆಂದೂ ಬರೇ ನಿರುದ್ಯೋಗಿಗಳನ್ನು ಸಾಕಿಸಲಹುವಂತಹ ಸಂಸ್ಥೆಗಳಿರಬಾರದೆಂದು ಹೇಳಿದರು. ಧರ್ಮಸಂಸ್ಥೆಗಳು ತಮ್ಮ ಕಾರ್ಯವನ್ನು ಸಾಧಿಸಿ ಟೀಕೆಟಿಪ್ಪಣಿಗಳಿಗೆ ಅಸ್ಪದವೀಯಬಾರದೆಂದು ಸೂಚಿಸಿದರು. ವಕೀಲ್ ಶ್ರೀಪಿ ವಿ. ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು. ನಂತರ ಮೆರವಣಿಗೆಯಿಂದ ಮಾನ್ಯ ಉಪಮಂತ್ರಿಗಳು ಶ್ರೀ ಅಧಮಾರು ಮಠಕ್ಕೆ ಹೋಗಿ ಅಲ್ಲಿಯ ಸ್ವಾಮಿಗಳ ಸ್ವಾಗತವನ್ನು ಸ್ವೀಕರಿಸಿದರು. ಮಧ್ಯಾಹ್ನ ಫಲಿಮಾರು ಮಠದಲ್ಲಿ ಅಧಮಾರು ಮಠದ ಸ್ವಾಮಿಗಳ ಕಡೆಯಿಂದ ಮಂತ್ರಿಗಳಿಗೂ ಅವರ ಪರಿವಾರಪರಿಗೂ ಅನ್ನಸಿನಲ್ಲಿ ಎಣಸದಂತಹ ಉತ್ತಮ ಭೋಜನ ದೊರೆಯಿತು. ಹರ್ಷಚಿತ್ತರಾದ ಮಂತ್ರಿದ್ವಯರು ನಂತರ ಪೆಂಟ್‌ಲೆಂಡ್ ಬಂಗ್ಲೆಗೆ ಬಂದು ವಿಶ್ರಾಂತಿ ಪಡೆದರು.

ಸಂಜೆ ಮೂರು ತಾಸಿಗೆ ಶ್ರೀಗಳಾದಿ ಯು. ಎಸ್. ನಾಯಕ್, ಡಾ॥ ಎಸ್. ಆರ್. ಪೈ, ಸಿ ಗೋಪಾಲನಾಯರ್, ಕರುಣಾಕರಹೆಗ್ಡೆ, ಟಿ. ಎ. ಪೈ, ರಮೇಶ ಪೈ, ಕೆ. ನರಸಿಂಗ ರಾವ್, ಯು. ಗೋಪಾಲ ಶಾನುಭಾಗ, ವಕೀಲ್ ಕೆ. ಜೆ. ಬಲ್ಲಾಳ್ ಮೊದಲಾದವರಿಗೆ ಶ್ರೀ ತಿರುಮಲರಾಯರು ಭೇಟಿಕೊಟ್ಟು ಆ ಹೊರ ಪರಿಸ್ಥಿತಿಯ ಕುರಿತು ವಿಚಾರವಿನಿಮಯ ನಡೆಸಿದರು. ಉಡುಪಿ ಕಾಂಗ್ರೆಸ್ ಕಮಿಟಿ ಕಡೆಯಿಂದ ಹಾಜರಿದ್ದ ಅಧ್ಯಕ್ಷ ಪುತ್ತು ಕಾರ್ಯದರ್ಶಿಗಳಾದ ಬಿ. ಕೃಷ್ಣಯ್ಯ ಹೆಗ್ಡೆ ಮತ್ತು ಕೆ.ನಂಜಾರ ಕಾಮತರು ಒಂದು ಯಾದಾಸ್ತನ್ನು ಒಪ್ಪಿಸಿದರು. ಹಳ್ಳಿಗಳಲ್ಲಿ ರೇಶನಿಂಗ್ ತಗೆದು ಹಾಕಿದುದು ಸಮಾಧಾನಕರ ವಿದ್ದಾಗ್ಯೂ ಜಿಲ್ಲೆಯನ್ನು ಕೊರತೆಯ ಜಿಲ್ಲೆಯೆಂದು ಪರಿಗಣಿಸಿ ಬೆಲ್ಲಿಗೆ ಆಹಾರ ಧಾನ್ಯಗಳ ಸಂಬರಾಯಿ ಆಗಬೇಕೆಂದು ಕೇಳಿಕೊಳ್ಳಲಾಗಿತ್ತು. ಸಕ್ಕರೆ ಕಂಟ್ರೋಲ್ ರದ್ದತಿಯನ್ನೂ ಅಪೇಕ್ಷಿಸಲಾಗಿತ್ತು. ಬಳಿಕ ಮಂತ್ರಿದ್ವಯರೂ ಇತರರೂ ಮಲ್ಪೆಗೆ ಹೋಗಿ ಅಲ್ಲಿಯ ಪ್ರಕೃತಿ ಸೌಂದರ್ಯವನ್ನು ಅವಲೋಕಿಸಿದರು. ಹಿಂತಿರುಗುವಾಗ ರೇಶನ್ ಕಾರ್ಡುದಾರರು ಸಮಗೆ ಅಕ್ಕಿ ದೊರಕಿಸಿ ಕೊಡಿರಂನು ಬೇಡಿಕೊಂಡರು. ಜಿಲ್ಲಾಧಿಕಾರಿಗಳೊಡನೆ ತಕ್ಕ ವ್ಯವಸ್ಥೆ ಮಾಡಿಸುವೆನಾಗಿ ಶ್ರೀ ತಿರುಮಲರಾಯರು ಉತ್ತರವಿತ್ತರು. ನಂತರ ಉಡುಪಿಗೆ ಪುರಂಬಂದು ಸರ್ಕಿಟ್‌ಹೌಸ್‌ನಲ್ಲಿ ಪೂರ್ಣಾವಸ್ಥೆಯನ್ನು ಹೊಂದುತ್ತಲಿರುವ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು ಕಟ್ಟಡವನ್ನು ಸಂದರ್ಶಿಸಿದರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಆವರೆಲ್ಲರನ್ನೂ ಇದಿರ್‌ಗೊಂಡು ಕಾಲೇಜು ಕ್ಷೇತ್ರದ ಪರಿಚಯಮಾಡಿಕೊಟ್ಟರು. ಆ ಬಳಿಕ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ಪ್ರಯಾಣಬೆಳೆಸಿದರು.

ನೋಟೀಸು

ಉಡ್ಪಿ ಡಿ. ಮು. ಕೋರ್ಟ್‌ನಲ್ಲಿ

ಸ್ಮಮನಂಬ್ರ 446/1950

ಪಿ. ವಿರಲ ಶೆಟ್ಟಿ —ವಾದಿ.

ಮತ್ತು

1 ಕೊರಗ ಹಾಂಡ್ರಿ
2 ನರಸಿ ಹಾಂಡ್ರಿ } ಪ್ರತಿವಾದಿರು

ತುಂಗು ಹಾಂಡ್ರಿಯ ಮಕ್ಕಳು: ಕುಕ್ಕೆ ಹಳ್ಳಿ ಗ್ರಾಮದ ಮಂಕ್ಕೀರಿ ಬೈಲು.

ಇವರೊಳಗೆ

ನಿಮ್ಮಿಂದ ವಾದಿಗೆ ಬಹಾ ಚಾಲಗೇಜಿ ಬಾಕಿ ಹುಬ್ಬುವಳ್ಳಿ ವಸ್ತೂಲುಬಗ್ಯೂ ಅಸ್ತಿ ಸ್ವಾಧೀನತೆ ಬಗ್ಯೂ ಬಾದಿಯಾದ ಪಾಕಲ್ಕಾಡಿದ ಮೇಲಿನ ದಾವೆ ತಾರೀಕು 19-1-1951ಕ್ಕೆ ತಪ್ಪಿಗೆ ಯಿಟ್ಟಿದೆ, ಆ ಕಾರಿತು ಅಕ್ಕೇಪಯಿದ್ರೆ ಸದ್ರಿ ದಿವಸ 11ಗಂಟೆಗೆ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳಕ್ಕಲ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಕೇಳಿ ಮಾನಸಿಸಲ್ಪಡುವುದು.

B. S. Hegde
ವಾದಿಕಡೆ ವಕೀಲ್

ತಾರೀಕು 9-1-1951

ಹಾರುವ ಕಿಡಿಗಳು

ನಾಳೆ ಬಾನಾಡಿ ಪ್ರೀತಿಯೆಂದು ಎದ್ದ ಕೂರು ವಿಗೆಚಿಕಿತ್ಸೆ ಮಾಡದಿರಲಾಗುವುದಿಲ್ಲ;ಮುಂದೆ ದೊಡ್ಡ ಗಂಡಾಂತರ ಬಂದೀತೆಂದು ಬಂದ ಆಪತ್ತನ್ನು ನಿವಾರಿಸದಿರಲಾಗುವುದಿಲ್ಲ.

೦೦

ಯತಾರ್ಥವಿದ್ದಲ್ಲಿ ಧೃಢತೆ, ಧೈರ್ಯವಿದೆ; ಕಳಚುವಿದ್ದಲ್ಲಿ ಜಾಂಜಿಲ್ಯ, ಗೊಂದಲವಿದೆ.

೦೦

ದುಡಿತದ ಗಂಟಿಗೆ ಬೆಲೆಯುಂಟು; ಕೂಡುವ ಗಂಟಿಗೆ ಬೆಲೆಯಿಲ್ಲವೆಂದರಾಗದು.

೦೦

ಯಮ ದೂತರಿಂದಾದರೂ ಸಾರಾಗವ ಹುದು; ಅವದೂತರ ಕಾಟ, ಅವಹೇಳನ ತಪ್ಪುವುದು ಕಷ್ಟ!

೦೦

ಕಡಿದು ಲೇಪ ಹಚ್ಚುವೆನೆಂಬ ಕುಚೇಷ್ಟೆ ಸಲ್ಲದು, ಸಿಡಿದು ಕೂಡುವೆನೆಂಬ ಹುಚ್ಚು ಒಲ್ಲದು.

೦೦

ಒಳಗೆ ಮನ ಮರ್ಕಟ, ಹೊರಗೆ ಬಾಯಿ ಅರ್ಭಟ!

೦೦

ಕಾವಿ ಉಟ್ಟೊಡನೆ ಕಾಮವಡಗದು; ಸಿಹಿಮಾತಾಡಿದೊಡನೆ ನೆಂಜು ಹಿಂಗದು.

೦೦

ಗಾದೆ ಹೇಳಿ ಮನಮೆಚ್ಚಿಸಬಹುದು; ಗಾದಿಯೇರಿ ಜನ ಮೆಚ್ಚಿಸುವುದು ಕಷ್ಟ.

೦೦

ಸೋಮಾರಿಯ ಬಾಯಿ ಚುರುಕು; ಸತತೋದ್ಯೋಗಿಯ ಮನ ಚುರುಕು.

೦೦

ಅನ್ಯರಕ್ಷ್ಮ ಅಳಿವ ಆಳತೆಗೋಲಿಂದ ಮೊದಲು ತನ್ನನ್ನೇ ಅಳೆದು ನೋಡಿ ಕೊಳ್ಳಬೇಕಾ.

೦೦

ಹೊರಗಿನ ಶತ್ರುವಿಗಿಂತ ಒಳಗಿನ ಹಿತಶತ್ರು ಅಪಾಯಕರ.

೦೦

ಮುದಿ ಕೋಣಕ್ಕೆ ಕೆಸರ ಹೊಂಳಾಟವೂ ಜಾಸ್ತಿ; ಕರ್ಕಶ ಒರಳಾಟವೂ ಜಾಸ್ತಿ.

೦೦

ಚೇಲ ತೂತಾದರೂ ತೀಲವೊಂದಿರಲಿ.

೦೮

'ಕೊಳೆಕಟ್ಟೆ'ದುದು 'ಸಾಲ'ದ 'ನಾರ'ಲು ನಾರದನಾದಿ.

೦೨

ಕಡಿವಾಣವಿಲ್ಲದ ಕುದುರೆ, 'ಬ್ರೇಕ್' ಇಲ್ಲದ ಮೋಟಾರು, ಹತೋಟೆ ಇಲ್ಲದ ಮನಸ್ಸು ಇವು ಮೂರು ಒಂದೇ.

೦೦

ನಟಿಸುವ ಪಾತ್ರಧಾರಿ ತೋರುತ್ತಾನೆ, ಅಡಿಸುವ ಸೂತ್ರಧಾರಿ ಅಜ್ಞಾತ.

೦೨

ಕೆಚ್ಚಲಲ್ಲಿ ಹಾಲುಂಟೆಂದು ಕೆಚ್ಚಲನ್ನೇ ಕಡಿದರಾದೀತೆ? ಗಿಡದಲ್ಲಿ ಹೂವುಂಟೆಂದು ಗಿಡವನ್ನೇ ಕತ್ತರಿಸಿದರಾದೀತೆ?

೦೦

ಮನಸಾನವರು ಲೇಸು; ಮೊಸಳೆಯ ಬಾಯಿಗೆ ಬೀಳಬೇಡ.

೦೦

ಬದಲಾವಣೆಯ ಆರಂಭದಲ್ಲಿ ಬವಣೆ, ಮಧ್ಯನದ ಆರಂಭದಲ್ಲಿ ವಿಷ ತಪ್ಪಿದ್ದಲ್ಲ

೦೦

ಹೋರಾಟದಿಂದ ಪ್ರಗತಿ; ಚೀಂಟಿಯಿಂದ ಅವನತಿ!

೦೦

ಕರ್ತವ್ಯವುಂಟೋ ಹಕ್ಕು ಅಧಿಕವುಂಟು.

(ಜನೇ ಸುಟದಿಂದ ಮುಂದುವರಿದ್ದು)

ಸನಿಹದ ಮದುಕನಾದರೂ ತನ್ನ ತತ್ತ್ವದ ಮೇಲಿನ ಪ್ರೀತಿ, ಭಕ್ತಿ, ಅಪಾರವಾಗಿದ್ದುವು. ಇಪ್ಪತ್ತನೆಯ ಶತಮಾನದ ಉತ್ಪಾರ್ಧದಲ್ಲಿ ಕಾಣಲು ವಿರಳವಾಗುವಂಥವು.

ಸಿಲೋನೆ ಮತ್ತು ಭೂತ.

'ಫೆಂಟಮ್ಸಾರ' ಬರೆದ ಸಿಲೋನೆ ಚಿಕ್ಕ ಹುಡುಗನಾಗಿದ್ದಾಗ ಅವನ ಗುರುಗಳು ಧರ್ಮ ಶಾಸ್ತ್ರದ ಕುರಿತು ಪಾಠ ಹೇಳುತ್ತಾ ಮಕ್ಕಳು ಹಿಂದಿನ ದಿನ ನೋಡಿದ ಗೊಂಬೆಯಾಟದ ಉದಾಹರಣೆ ಕೊಡುವ ಕೊಂಡರು. ಗೊಂಬೆಯಾಟದಲ್ಲಿ ಒಂದು ಮುಮಗು ನಡನಡುಗುತ್ತ ಬಂದು ಬೆಂಚಿನಡಿ ಅವಿತು ಕೊಳ್ಳುವುದು ಅದನ್ನು ಒಪ್ಪಿ ಕೊಂಡು ಒಂದು ಭೂತ ಬರುವುದು. ಭೂತವು ಅಟ್ಟಿತ್ತ ಮೂಸಿ, ಹುಡುಕಾಡಿ, "ಹಾಂ, ವಾಸನೆ, ವಾಸನೆ, ನರವಾಸನೆ! ಎಲ್ಲಿದ್ದಾನೆ ಅವನು? ನೋಡೋಣ. ಈ ಸಭಿಕರನ್ನು ಕೇಳೋಣ" ಎಂದು ಸಭಿಕ ಬಾಲಕರ ಕಡೆತಿರುಗಿ "ಮಕ್ಕಳಿರಾ, ನಾನು ಹುಡುಕಾಡುತ್ತಿರುವ ಕುಂಟೆ ಪೋರನನ್ನು ನೀವೆಲ್ಲಾದರೂ ಕಂಡಿರಾ?" ಎಂದು ಕೇಳಿದುದೇ ತಡ ಮಕ್ಕಳು ಏಕಕಂರದಿಂ "ಇಲ್ಲ, ಇಲ್ಲಾ, ಇಲ್ಲಾ!" ಎಂದು ಬೊಬ್ಬಿಟ್ಟವು! "ಎಲ್ಲಿ ಹೋದ ಹಾಗಾದರೆ?" ಎಂದು ಕೇಳಿದುದಕ್ಕೆ ಮಕ್ಕಳು, ಹೊರಟೀ ಹೋದ್ದು ದೂರ, ದೂರ, ಲಿಸ್ಬನ್ನಿಗೆ ಹೋಗಿಬಿಟ್ಟ!" ಎಂದು ಸಹಜವಾಗಿ ಹೇಳಿದವು. ಗೊಂಬೆಯಾಟದಲ್ಲಿ ತಮ್ಮ ಪ್ರಶ್ನಿಸುವರೆಂಬ ದು ಈ ಹುಡುಗರಿಗೆ ತಿಳಿದಿರಲಿಲ್ಲ. ಹೃದಯದಿಂದ ಬಂದ ಉತ್ತರಗಳವು ಪ್ರಪಂಚದಲ್ಲಿ ಎಲ್ಲಿನ ಮಕ್ಕಳಾದರೂ ಇಂಥ ಸಂದರ್ಭದಲ್ಲಿ ಭೂತಕ್ಕೆ ವಾಗುವಿನ ಇರವನ್ನು ತಿಳಿಸುವುದಿಲ್ಲವೆಂಬುದು ಖಂಡಿತ. ಆದರೆ ಗುರುಗಳಿಗೆ ಅಸಮಧಾನವಾಯಿತಂತೆ ಉಟ್ಟಿಕೆ ಹಲ್ಲೆಯದಾದರೇನೆ? ಸುಳ್ಳು ಸುಳ್ಳೇ ಖಾನೆ. "ಸುಳ್ಳು ಹೇಳಬಾರದು"— ಗುರುವಾಕ್ಯ ಆಗ ಸಿಲೋನೆ "ಭೂತಕ್ಕೂ ಜೀವಕಡದೆ?—ಊಹೂಂ; ಸುಳ್ಳು ಪಾಪಕೃತ್ಯ. ಒಬ್ಬ ಹುಡುಗ "ಮೆ.ಜಿಸ್ಟೇಟರಿಗೆ ಸುಳ್ಳು ಹೇಳಬಹುದೇ" ಎಂದು ಕೇಳಿದಾಗ ಗುರುಗಳು ದುರುಗುಟ್ಟಿದರು. ಅಲ್ಲದಸಲ್ಲದ ಸ್ಪಷ್ಟೀಕರಣಗಳಿಗೆ ಜವಾಬು ಕೊಡುವುದು ತಮ್ಮ ಕೆಲಸವಲ್ಲವೆಂದು ಸತ್ಯದ ವಿಷಯ ವ್ಯಾಖ್ಯೆ ಜಡಿದರು. "ಹಾಗಾದರೆ ಮಗು ಬೆಂಚಿನಡಿ ಅಡಗಿದೆ ಎಂದು ಹೇಳಿ ಮಗುವಿನ ಕೊರಳು ಕಡಿಸುವುದೆ?" ಎಂದು ನಾವು ಪ್ರಶ್ನಿಸಿದುದಕ್ಕೆ ಗುರುಗಳು ಪಾಪದ ಬಗ್ಗೆ ವ್ಯಾಖ್ಯಾನ ಮಾಡಿದರು. ಬಾಲಕ ಸಿಲೋನೆ ಬಡಲಿಲ್ಲ. "ಸತ್ಯ ಸಂಗತಿ ಏನೆಂದರೆ ಒಂದುಕಡೆ ಮಗು, ಇನ್ನೊಂದು ಕಡೆ ಭೂತ. ನಾವು ಮಗುವಿಗೆ ಸಹಾಯ ಮಾಡಿದೆವು—ಆದು ಸತ್ಯ." ಅಯ್ಯೋ ಅದರಿಲ್ಲಿವು ಭೂತಕ್ಕೆ ಸುಳ್ಳು ಹೇಳಿದಂತಾಲ್ಲಾ?" ಸಿಲೋನೆ ದಿಟ್ಟತನದಿಂದ ಕೇಳಿದನಂತೆ—"ಮಗುವಿನ ಬದಲು ಯಾರಾದರೂ ಗುರುಗಳಿದ್ದರೆ ನಾವು ಆಗ ಭೂತಕ್ಕೆ ಏನು ಹೇಳಬೇಕಾಗಿತ್ತು?" ಗುರುಗಳು ಉಳಿದ ಪಾಠವೆಲ್ಲ ಸಿಲೋನೆಗೆ ಡೊಗ್ಗು ಹಾಕಿ ಕೊಡುವ ದಂಡನೆ ವಿಧಿಸಿದರು ಕ್ಲಾಸುಮುಗಿದ ನೇಲೆ ಸಿಲೋನೆಯನ್ನು ಕರೆದು "ಈಗ ತಿಳಿಯಿತೆ? ಸಭ್ಯತ್ವಾಪ ವಾಯಿತೆ?" ಎಂದು ಕೇಳಿದರು ಸಿಲೋನೆ "ಮತ್ತೇನು? ಅಭೂತ ನಿಮ್ಮ ವಿಳಾಸ ಕೇಳಿದರೆ ಕೂಡಲೇ ಕೊಟ್ಟು ಬಿಡುತ್ತೇನೆ" ಎಂದು ಬಿಟ್ಟ.

—ಇಗ್ನೇಜಿಯೋ ಸಿಲೋನೆ ಇಟಲಿಯ ಪ್ರಖ್ಯಾತ ಕಾದಂಬರಿಕಾರ, ಸಮಾಜವಾದಿ ಧುರೀಣ. ಅವನು ಒರೆದ 'ಫಂಟಮಾರಾ' ವಿಶ್ವಸಾಹಿತ್ಯದ ಒಂದು ಅಮೂಲ್ಯ ರತ್ನ. ಸಿಲೋನೆ ಮುಸಲಿನಿಯ ಕಾಲದಲ್ಲಿ ಗಲವರ್ಷ ದೇಶಭ್ರಷ್ಟರಾಗಿದ್ದರು. ಈಗ ಇಟಲಿಗೆ ಮರಳಿದ್ದಾರೆ. ಮೊನ್ನೆ ಇತ್ತಲಾಗಿ "ಅಮೇರಿಕನ್ ಏಕೆಡೆಮಿ ಒಫ್ ಆರ್ಟ್ಸ್ ಎಂಬ ಘನವಾದ ಸಂಸ್ಥೆಯು ಭಾರತದ ನೆಹರೂ, ಫ್ರಾನ್ಸಿನ ಲೇಖಕ ಜೀದ್ ಆವರ ಜತೆಗೆ ಇಟಲಿಯ ಸಿಲೋನೆಗೂ ತಮ್ಮ ಏಕೆಡೆಮಿಯ ಸದಸ್ಯರನ್ನಾಗಿ ಆರಿಸಿ ಗೌರವಿಸಿಯಿದೆ.

ಮೂಲ್ಕಿ ಬ್ಯಾಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿ,ದೆಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಋತುಸ್ರಾವ ನಿಂತಿತು

ಚಂಪಾರಿ ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿವಯಸ್ಸಿನ ಯತಾಸ್ರಾವವಾಗುವುದು. ಹಿತೋಪಕಾರಿ ಬರುವುದು, ಈ ಔಷಧ ಸೇವನೆಯಿಂದ ಕೀನ್ನ ಗುಣವೊಂದಲ ಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಶಾಶ್ವತ ಗುಣವಾಗಿದೆ—ಬೆಲೆ: ರೂ. 3-; ಸ್ಪೆಶಲ್ ರೂ. 5- ಅಧಿಕಾರಿಕ ಸ್ಪೆಶಲ್ ರೂ. 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs. D. DEVEE, F. DS. (N. J.)
Tollygunge CALCUTTA.
ಸ್ವಾತಿಸ್ವರು ಶಹಾಕಂಪನಿ, ಮುಂಗಳೂರು

ಕೆ. ಪಿ ಸಿ ಸಿ. ಚುನಾವಣೆಯು ಅಖಿಲ ಭಾರತ ಕಾಂಗ್ರೆಸ್-ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಚುನಾವಣೆಗೆ ಪಾತಮೆಂಗಳೂರು, ಸಕಲರಿಗಿಂದ ಉಮೇದ್ವಾರರಾಗಿ ನಿಂತಿದ್ದ ಶ್ರೀ ಬಿ. ಆನಂತ ರೈ, ಮತ್ತು ಶ್ರೀ ಕೆ ಮಾಧವ ಪಡಿಯಾರ್ ಇವರಲ್ಲಿ ಮೊದಲಿಸಿಯವರು ಅರಿಸಲ್ಪಟ್ಟರೆಂದು ಕೆಲವು ಚುನಾವಣಾಧಿಕಾರಿಗಳು ನಿರ್ಣಯಿಸಿದ ವಿರುದ್ಧವಾಗಿ ಶ್ರೀ ಪಡಿಯಾರರು ಜಿಲ್ಲಾ ಟ್ರಿಬ್ಯುನಲಿನ ಸಮಕ್ಷಮ ಅಕ್ಷೇಪ ಮಾಡಿದ ಪರಿಣಾಮವಾಗಿ ಈ ಚುನಾವಣೆಯು ರದ್ದಾಗಿ ಹೊಸಚುನಾವಣೆ ನಡೆಯಬೇಕೆಂದು ತೀರ್ಮಾನವಾಗಿತ್ತು. ಈ ತೀರ್ಮಾನದ ವಿರುದ್ಧವಾಗಿ ಶ್ರೀ ಬಿ. ಆನಂತ ರೈಗಳು ಪ್ರಾಂತಿಕ ಟ್ರಿಬ್ಯುನಲಿನ ಸಮಕ್ಷಮ ಮಾಡಿದ್ದ ಅಪೀಲಿನ ವಿಚಾರಣೆಯು ಕಳದ ತಿಂಗಳ ತಾ. 25ರಲ್ಲು ನಡೆದು ಶ್ರೀ ರೈಗಳು ಕ್ರಮಬದ್ಧವಾಗಿ ಅರಿಸಲ್ಪಟ್ಟಿರುವರೆಂದು ತೀರ್ಮಾನಿಸಲಾಗಿದೆ.

ಹೊಸಪುರ್ಗ ಸರಕಲಿನ ಚುನಾವಣೆಯಲ್ಲಿ ಆರಿಸಲ್ಪಟ್ಟಿರುವ ಶ್ರೀ ಕೇಶವ ಮಿಜಾರ್ ಇವರು ಕ್ರಮಬದ್ಧವಾಗಿ ಚುನಾಯಿಸಲ್ಪಟ್ಟಿಲ್ಲವೆಂದು ಅವರ ಪ್ರತಿಸ್ಪರ್ಧಿ ಶ್ರೀ ಕೆ.ಪದ್ಮನಾಭ ಶೆಟ್ಟಿಯವರು ಮಾಡಿಕೊಂಡಿದ್ದ ಅಪ್ಲೀಕೇಶನ ಅರ್ಜಿ ಸಂಬಂಧವಾಗಿ ಪ್ರಾಂತಿಕ ಟ್ರಿಬ್ಯುನಲಿನವರು ಜಿಲ್ಲಾ ಟ್ರಿಬ್ಯುನಲಿನ ತೀರ್ಮಾನವನ್ನೇ ಎತ್ತಿ ಹಿಡಿದು ಅರ್ಜಿಯನ್ನು ತೆಗೆದು ಹಾಕಿರುವರು.

ಉಡುಪಿ

ಮೊಡರ್ನ್ ಸ್ಕೂಲ್ ಒಳ್ಳೆ ಕೊಮರ್ಸ್ ಇದರ ವಾರ್ಷಿಕ ಸಾಮಾಜಿಕ ಕೂಟವು ಇದೇ ತಾ. 1 ರಲ್ಲು ಸಂಜೆ ಶ್ರೀ ಟಿ ಎ. ವಾಸುದೇವನ್, ಆವರ ಅಧ್ಯಕ್ಷತೆಯಲ್ಲಿ ಜರಗಿತು.ಕಾಲಾ ಕಮಿಟಿ ಕಾರ್ಯದರ್ಶಿ ಶ್ರೀ ಕೆ. ರಾಮಚಂದ್ರ ಉಪಾಧ್ಯರು ಸ್ವಾಗತವಂದೇ ತಾಲೆಯು ಪ್ರಗತಿಪರ ವರದಿಯನ್ನೊಳಿದರು. ಶ್ರೀಗಳಾದ ಕೆ. ಎಸ್. ಮೂರ್ತಿ, ಎನ್. ವಿ. ಬಲ್ಲಾಳ್, ಕಮಲಾಕರ ಭಟ್, ಮೊದಲಾದವರು ಕಾಲೋಚಿತ ಸ್ವಾರಸ್ಯಭವದ ಮಾತುಗಳನ್ನಾಡಿದರು. ಕಾಲಾ ಕಮಿಟಿಯ ವೈಸ್ ಪ್ರೆಸಿಡೆಂಟ್ ಶ್ರೀ ಯು ಜೆ. ಶೆಟ್ಟಿಯವರ ಧನ್ಯವಾದಾರ್ಪಣೆ, ಗ್ರೂಪ್ ಫೋಟೊ ಕಾರ್ಯಕ್ರಮಗಳಿಂದ ಸಭಾಂತ್ಯವಾಯಿತು.

ಕೌನ್ಸಿಲು ಸಭೆಗಳು— ಉಡುಪಿ ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯೊಂದು ಇದೇ ತಾ. 8ರಲ್ಲು ಸಂಜೆ ಚೆಯರ್‌ಮೆನ್ ಶ್ರೀಯು. ಎಸ್ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಈ ವಾರದಲ್ಲಿ ಉಡುಪಿಗೆ ಬರಲಿರುವ ಸುದ್ರಾಸು ಸರಕಾರ ಪಾನ ಸಬೋಧ ಮಂತ್ರಿ ಶ್ರೀ ಸಾಂಬವ ರೆಡ್ಡಿಯವರಿಗೆ ಮಾನಪತ್ರ ಅರ್ಪಿಸಬೇಕೆಂಬ ನಿರ್ಣಯವಾಯಿತು. ಒಳಕ ಸಾಮಾನ್ಯ ಸಭೆಯು ಜನವರಿ ತಿಂಗಳ 29ನೇ ತಾರೀಕು ಬೆಳಿಗ್ಗೆ ೧೦ ಗಂಟೆಗೆ ಸೇರಲಿದೆ.

ಕಾಂಗ್ರೆಸ್ ಪ್ರಚಾರ ಸಭೆ—ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪ ಮತ್ತು ಪ್ರಧಾನಕಾರ್ಯದರ್ಶಿ ಶ್ರೀ ಜೆ. ಹಚ್ಚೇರಿಯವರು ಇದೇ ತಾ. 8ರಲ್ಲು ಸಂಜೆ ಸ್ಥಳೀಯ ರಾಮಾಶ್ರಯ ಥಿಯೇಟರಿನಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ಪ್ರಚಾರಾತ್ಮಕ ಭಾಷಣಗಳನ್ನಿತ್ತರು. ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರಧಾನಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟರು ಮಾನ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಜಿ ಕೆ. ಜಿಲ್ಲೆಯು ಆದರಲ್ಲೂ ಉಡುಪಿಯು ಸರ್ವವಿಧದಲ್ಲೂ ಮುಂದಾದ ಕ್ಷೇತ್ರವಿದ್ದು ಇಲ್ಲಿಯ ಮಹಾ ಜನರು ತಂತಮ್ಮ ಕರ್ತವ್ಯನೇನೆಂಬುದನ್ನು ಅರಿತವರಲ್ಲದೆ ದೂರದ ವಿಶೇಷ ಜೀವಕಕ್ಕೆದ್ದೇನೂ ಇಲ್ಲವೆಂದೂ, ಕಾಂಗ್ರೆಸನ್ನು ಬಲಪಡಿಸಿ ತನ್ಮೂಲಕ ದೇಶಕ್ಕೆ ಸ್ವಾತಂತ್ರ್ಯವನ್ನು ಕಾಪಾಡುವ ಹೊಣೆಗಾರಿಕೆಯನ್ನು ಒಲವಂಕಪಡಿಸಬೇಕೆಂಬುದೇ ಅವರಿದ್ದರ ಭಾಷಣದ ಸಾರ. ಸಭಾರಂಭಕ್ಕೂ ಪೂರ್ವದಲ್ಲಿ ಶ್ರೀ ಬಾಳ್ಳಟ್ಟಿ ವೀರಪ್ಪ ಕೃಷ್ಣಯ್ಯ ಜೆಗ್ಗೇರಿ ಮಾಸ್ಕೇಲ್ಪರಿಗೂ ಹೂಮಾಲೆಗಳನ್ನರ್ಪಿಸಿದರು. ಶ್ರೀ ಕೆ. ನರಸಿಂಹ ಕಾಮತರ ಧನ್ಯವಾದಾರ್ಪಣೆಯೊಂದಿಗೆ ಕಾಂಗ್ರೆಸ್ ಪ್ರಚಾರ ಸಭೆಯು ಮುಕ್ತಾಯವಾಯಿತು. ಇಂತಹ ಪ್ರಚಾರ ಸಭೆಗಳು ಮತ್ತು ಕಾಂಗ್ರೆಸಿಗೆ ಜಯ ಸಂಗ್ರಹಿಸುವ ಕಾರ್ಯಗಳು ಬೈಂದೂರು, ಗಂಗೊಳ್ಳಿ, ಬಸ್ರೂರು, ಕುಂದಾಪುರ, ಕೋಟೇಶ್ವರ, ಬ್ರಹ್ಮಾವರ, ಕಾರ್ಕಳ ಮೂಡಬಿದ್ರೆ ಮೊದಲಾದ ಸ್ಥಳಗಳಲ್ಲಿ ಸಾಂಗವಾಗಿ ಜರುಗಿದವು.

ಹಂಗಾರಕಟ್ಟೆ—ಇಂದಿಯ ಬೋಗಿ ಹಾಲಿಕಾಲಾ ಹಂಗಾರಕಟ್ಟೆಯ ಪ್ರಥಮ ವಿದ್ಯಾರ್ಥಿಗಳ ವಾರ್ಷಿಕೋತ್ಸವವು ತಾ. 7-1-51ನೇ ಆದಿತ್ಯವಾರ ಸಜ್ಜಲಿಲ್ಲರ ಶ್ರೀ ಟಿ. ಎಸ್. ತಿಮ್ಮಪ್ಪ ಶೆಟ್ಟಿರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿತು.

ಪ್ರಕಟಣೆ

ಜಾನುವಾರು ಪ್ರದರ್ಶನ!

(21—1—1951)

ಉಡುಪಿಯ ರಥ ಬೀದಿಯಲ್ಲಿ ತಾರೀಕು 21-1-1951ನೇ ಆದಿತ್ಯವಾರ ಸಾಯಂಕಾಲ 3 ಗಂಟೆಯಿಂದ 6 ಗಂಟೆ ವರೆಗೆ ಜಾನುವಾರು ಪ್ರದರ್ಶನವೊಂದು ನಡೆಯಲಿರುವುದೆಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಾರೆ ಇದರಲ್ಲಿ ಉತ್ತಮತರದ ದನ, ಎತ್ತು, ಕರು, ಎತ್ತು, ಬಿಡುವ ಕೋಣ ಮೊದಲಾದವನ್ನು ಕಡು ಪ್ರದರ್ಶನಕ್ಕಾಗಿ ಇರಿಸಬೇಕೆಂದು ಇಚ್ಛಿಸುವವರು ಇದೇ ತಾರೀಕು ಬೆಳಿಗ್ಗೆ 9 ಗಂಟೆಯೊಳಗಾಗಿ ಪ್ರದರ್ಶನಕ್ಕೆ ಇರಿಸಬೇಕೆಂದು ಕೋರಲಾಗಿದೆ.

ಇಂತಿ ಆಡಳಿತಾಧಿಕಾರಿಗಳ ಪರವಾಗಿ
ಎಂ. ಶಾಂತಾರಾಮ ಶೆಟ್ಟಿ
ಕಾರ್ಯದರ್ಶಿ

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 396/1949
R. E. P. 541/1950

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ.
—ಅರ್ಜಿದಾರರು.

ಮತ್ತು

ಗುಜ್ಜಾಡಿ ನರಸಿಂಹ ನ್ಯಾಕ- ವೈಕುಂಠ ನ್ಯಾಕರ ಮಗ, ಉಡುಪಿ ಕಸಬಾ— ಎದ್ರಿ.

ಜಪ್ತಿಯಲ್ಲಿರುವ ದೇವತಾವಸಾವ ಸದ್ರಿ ಎದ್ರಿಗೆ-ಮೇಲೆ ತೋರಿಸಿರುವ ವ್ಯಾಜ್ಯದಲ್ಲಿ ದಿಕ್ರಿ ಹೊಂದಿದವನಾದ ಅರ್ಜಿದಾರನು ಸದ್ರಿ ದಿಕ್ರಿಯಿಂದ ಕಾಣುವ ಶ್ಯಾದುಗಳ ಮಾರಾಟದ ಬಗ್ಗೆ ಜಾಹರು ಪಡಿಸಿದ ವಿಕ್ರಯದ ಇಸ್ತಿಹಾರಿನ ಪರತ್ತುಗಳನ್ನು ನಿರ್ಣಯಿಸಲಿಕ್ಕೆ 1951 ನೇ ಇಸವಿ ಜನವರಿ ತಿಂಗಳ 29ನೇ ತಾರೀಕು ಇಷ್ಟಯಿಸೋಣಾಗಿಯದೆಂತ ಇದರಿಂದ ತಿಳಿಸೋಣಾಗುತ್ತದೆ.

M. Damodar Kamath,
Advocate for Petitioner-
Udipi, S. Kanara,)
Dated 9—1—1951)

ಟೈಪು ರೀ ಕ್ಯಾಸ್ಟಿಂಗ್ ಭಾರ್ಜನ್ನು ಅರ್ಧಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳಿ.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ ಮೈಸೂರು ಟೈಪು ಫೌಂಡರಿಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕ್ಯಾಸ್ಟ್ ಮಾಡಿಸುವುದರಿಂದ ವಿಪರೀತ ಉಳಿತಾಯವಾಗುತ್ತದೆ

ಸಾವಿರ ಪೌಂಡು ಮತ್ತು ಹೆಚ್ಚಿಗೆ	ಐನೂರು ಪೌಂಡು ಮತ್ತು ಹೆಚ್ಚಿಗೆ
ಪೌಂಡಿಗೆ 0—10—0	ಪೌಂಡಿಗೆ 0—12—0

ಸೇಲ್ಸ್ ಟ್ಯಾಕ್ಸ್, ಪ್ಯಾಕಿಂಗ್ ಮತ್ತು ಫಾರ್ವರ್ಡಿಂಗ್ ಭಾರ್ಜ ಮುಪತ್ತು.

ಇಂದೇ ವಿವರಗಳಿಗೆ ಬರೆಯಿರಿ: ಮ್ಯಾನೇಜರ್,

ಮೈಸೂರು ಟೈಪು ಫೌಂಡರಿ,
ಬೆಂಗಳೂರು-2

ಮಂಗಳೂರು

ಜಾನಪದಿಕೋದ್ಧ ಮಂತ್ರಿ–ಶ್ರೀ ಎನ್. ಸಂಜೀವ ರೆಡ್ಡಿಯವರು ಇಂದೇ ತಾ. 11ರಲ್ಲಿ ಸಂಜೆ ಮಂಗಳೂರಿಗೆ ಬಂದು ತಾ. 16ರತನಕ ಜಿಲ್ಲೆಯ ನಾನಾ ಭಾಗಗಳನ್ನು ಸಂದರ್ಶಿಸಲಿರುವರು.

ಜಿಲ್ಲಾ ಕೆಮಿಟಿ ಮಹಾ ಸಭೆಯು–ಕಳೆದ ತಾ. 31ರಲ್ಲು ಜರಗಿದಾಗ ಸರದಾರ ಪಟೇಲ್, ಅರವಿಂದ ಮಹರ್ಷಿ ಮತ್ತು ಶ್ರೀ ಎಮ್. ಆರ್ ಪೂಂಜರ ನಿಧನಕ್ಕಾಗಿ ದುಃಖ ಸೂಚಿಸಲಾಯಿತು. ಪ್ರಧಾನ ಕಾರ್ಯದರ್ಶಿಗಳು ಕಮಿಟಿಯ ವರದಿಯನ್ನೊಪ್ಪಿಸಿದ ನಂತರ ಕಾರ್ಯ ನಿರ್ವಾಹಕ ಮಂಡಳಿಗೆ ಸದಸ್ಯರ ಆಯ್ಕೆ ನಡೆಯಿತು. ಡಾ। ಕೆ. ನಾಗಪ್ಪ ಆಳ್ವರು ಅಧ್ಯಕ್ಷರಾಗಿಯೂ ಶ್ರೀಗಳಾದ ಎಲ್. ಸಿ. ಪಾಯಿಸ್ ಮತ್ತು ಡಾ। ಯು. ಪಿ. ಮಲ್ಯರು ಉಪಾಧ್ಯಕ್ಷರುಗಳಾಗಿಯೂ ಶ್ರೀ ಬಿ. ವೈಕುಂಠ ಬಾಳಿಗರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು. ಶ್ರೀ ಕೆ. ಕೆ. ಸೆಟ್ಟರು ಬಹುಮತದಿಂದ ಪ್ರಧಾನಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಶ್ರೀಗಳಾದ ಎಮ್. ಡಿ. ಅಧಿಕಾರಿ ಮತ್ತು ಬಿ. ಆರ್. ಕರ್ಕೇರರು ಜತೆಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟ ನಂತರ ಎಂಟು ಮಂದಿ ಕಾರ್ಯಸಮಿತಿಗೆ ಚುನಾಯಿಸಲ್ಪಟ್ಟರು.

ಕೇಂದ್ರ ಸರಕಾರದ ಉಪಮಂತ್ರಿಗಳು ಮಾನ್ಯ ಶ್ರೀ ತಿರುಮಲರಾಯರು (ಆಹಾರ) ಮತ್ತು ಮಾನ್ಯ ಶ್ರೀ ಖುರ್ಷಿದ್‌ಲಾಲರು (ಸಾರಿಗೆ) ನುತ್ತು ಅವರ ಪತ್ನಿಯವರೂ ಆಚಾರ್ಯ ಕೃಪಲಾನಿಯವರೂ ಇದೇ ತಾ. 5ರಲ್ಲು ಮಂಗಳೂರಿಗೆ ಹಡಗಿನಿಂದ ಬಂದರು. ನಗರದ ಅಧಿಕಾರಿ ಹಾಗೂ ಇತರ ಕಾಂಗ್ರೆಸ್ ನಾಯಕರು ಅವರನ್ನು ಇದಿರ್ಗೊಂಡರು. ಡಾ। ಯು. ಪಿ. ಮಲ್ಯರು ಪರಿಚಯ ಮಾಡಿ ಕೊಟ್ಟರು. ಪಾರ್ಲಿಮೆಂಟು ಪ್ರತಿನಿಧಿಗಳಾದ ಶ್ರೀ ಯು. ಶ್ರೀನಿವಾಸ ಮಲ್ಯರೂ ಬಂದಿದ್ದರು.

ಅಂದು ಮಧ್ಯಾಹ್ನ ಮೂರು ತಾಸಿಗೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜಿಲ್ಲಾಧಿಕಾರಿಗಳ ಮತ್ತು ಪ್ರಮುಖ ಅಧ್ಯಾಪಕ ವಿಚಾರಗೋಷ್ಠಿಯೊಂದು ಜರಗಿತು. ಆಹಾರ ಖಾತೆಯ ಉಪಮಂತ್ರಿಗಳು ಜಿಲ್ಲೆಯ ಆಹಾರ ಪರಿಸ್ಥಿತಿ ಮುಂದಿನ ಬೆಳೆಯುವಿಕೆಯ ಕುರಿತು ವಿಚಾರ ವಿನಿಮಯ ಮಾಡಿದರು. ಡಾ। ಯು. ಪಿ. ಮಲ್ಯ, ಕೆ. ಬಿ. ಜಿನರಾಜ ಹೆಗ್ಡೆ, ಪಿ. ಆರ್. ಆರ್. ಪೂಂಜ, ಕೆ. ಈಶ್ವರ ಮೊದಲಾದವರು ಸಭಾಕಾರ್ಯದಲ್ಲಿ ಭಾಗವಹಿಸಿದ್ದರು.

ಸಂಜೆ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಸಭೆಯು ಶ್ರೀ ಎಲ್. ಸಿ ಪಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಆಚಾರ್ಯ ಕೃಪಲಾನಿಯವರು ಪ್ರಧಾನತಃ ಮಾತನಾಡುತ್ತಾ 'ಆಸ್ತಿ, ವಸ್ತ್ರ, ವಸತಿ, ಔಷಧಿ ಮತ್ತು ವಿದ್ಯೆ ಇವುಗಳೇ ಮಾನವನಿಗೆ ಬೇಕಾದ ಮುಖ್ಯ ವಿಚಾರಗಳು. ಇವುಗಳೇ ಅವನ ಪ್ರಗತಿಗೆ ಕಾರಣ. ಸ್ವರಾಜ್ಯ ದೊರೆತರೂ ನಮ್ಮ ಪ್ರಗತಿಯಾಗಿಲ್ಲ. ಗಾಂಧೀಜಿಯ ಮಾತು ಕೇಳದಿದ್ದುದರಿಂದ ಹಾಗಾಗಲು ಕಾರಣವಾಯಿತು ಎಂದರು. ಇಂದು ಎಲ್ಲರೂ ಕಾನೂನು ಭಂಗಮಾಡುವ ಬದಲೆ ಹೊರತು ಪಾಲಿಸುವವರಿಲ್ಲವೆಂದೂ ತಿಳಿಸಿದರು.

ಶ್ರೀ ಖುರ್ಶಿದ್‌ಲಾಲರು ಮಾತನಾಡುತ್ತಾ ದಕ್ಷಿಣಕನ್ನಡದವರನ್ನೂ ಇಂಗ್ಲಿಷನ್ನು ಬಿಟ್ಟಿಲ್ಲವೆಂದರು. ಎಲ್ಲರೂ ಒಂದಾಗಿ ಎಂತಹ ಭಾರತವನ್ನು ರಚಿಸಲಿದ್ದೇವೆಂಬುದನ್ನು ನಿರ್ಣಯಿಸಿ ಮುನ್ನಡೆಯಬೇಕೆಂದರು. ಜಿಲ್ಲೆಯ ಸಂಪರ್ಕಸಾಧನಗಳ ಕುರಿತು ಮಾತನಾಡುತ್ತಾ ಇಲ್ಲಿಯ ಟೆಲಿಫೋನ್ ಕೃಪಾಪಡಿಲ್ಲ ಬೇಗನೇ ಸುಧಾರಣೆಯಾಗುವುದೆಂದರು. ಆಲ್ಲದೆ ವಿಮಾನ ನಿಲ್ದಾಣವು ಬದುಬೇಗನೇ ಆದೀತೆಂದು ತಿಳಿಸಿದರು.

ಶ್ರೀ ತಿರುಮಲರಾಯರು ತಮ್ಮ ಭಾಷಣದಲ್ಲಿ ದೇಶದ ಆಹಾರ ಪರಿಸ್ಥಿತಿಯು ಜನರು ಎಣಿಸುವಷ್ಟು ಕೆಟ್ಟಿಲ್ಲವೆಂದೂ ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳು ಈ ವಿಚಾರದಲ್ಲಿ ಹೆಚ್ಚಿನ ವ್ಯವಸ್ಥೆ ಮಾಡುವುದೆಂದೂ ಸೂಚಿಸಿದರು. ಅಧ್ಯಕ್ಷರು ನಾಗರಿಕರ ಪರವಾಗಿ ಅತಿಥಿಗಳನ್ನು ಆದರೊಂದಿಗೆ ಬಂದ ಶ್ರೀ ಮಲ್ಯರನ್ನೂ ಅಭಿನಂದಿಸಿದರು.

ಬೆಲ್ಲದ ಕ್ರಯನಿರ್ಧಾರ–ಜಿಲ್ಲಾ ಕಲೆಕ್ಟರರು ಈ ಕೆಳಗಿನಂತೆ ದ. ಕ. ಜಿಲ್ಲೆಯಲ್ಲಿ ಬೆಲ್ಲ ಮಾರಾಟದ ದರವನ್ನು ನಿರ್ಣಯಿಸಿರುವರು. ಇದರಲ್ಲಿ ಸೇಲ್ಸ್‌ಟೇಕ್ಸ್ ಕೂಡಾ ಸೇರಿಬಂತು:– 28ರತ್ತಿನ ಮಣ 1ಕ್ಕೆ ರಖಂ ಪಡಕೊಳ್ಳುವ ದರ– ಉತ್ತಮದ್ದು ರೂ. 5-15-2 – ರಖಂ ಮಾರಾಟದ ದರ ರೂ 6-3-10; ಮಧ್ಯಮ ತರಗತಿ– ರೂ.5-6-9 ಮತ್ತು 5-11-5 ಆಂತೆಯೇ ಉತ್ತಮ ನುಡ್ಯಮ ತರಗತಿಗಳಿಗೆ ರೂ. 6-10-5 ಮತ್ತು ರೂ. 6-2-0, 40ಕೊಲೆಯ ಪೌಂಡು 1ರ ಮಾರಾಟ ದರ– ಉತ್ತಮ 0-3-10, ಮಧ್ಯಮ ರೂ. 0-3-7 (ಸೇಲ್ಸ್‌ಟೇಕ್ಸ್ ಸಮೇತ)

ಆಹಾರ ಸಾಮಗ್ರಿಗಳ ರಾತ್ರಿ ಸಾಗಾಟಕ್ಕೆ ನಿಷೇಧ–ಆಹಾರ ವಸ್ತುಗಳನ್ನು ಸಾಗಿಸುವ ಮೋಟಾರ್ ಬಸ್ಸುಗಳಾಗಲೀ ಲೋರಿಗಳಾಗಲೀ ಸಂಜೆ 7ಗಂಟೆಯಿಂದ ಬೆಳಿಗ್ಗೆ 6ಘಂಟೆ ತನಕ ಜಿಲ್ಲೆಯ ಯಾವುದೇ ಭಾಗದಲ್ಲಿ ಓಡಾಡಕೂಡದಾಗಿ ಜಿಲ್ಲಾ ಕಲೆಕ್ಟರರು ನಿಷೇಧ ಹೊರಡಿಸಿರುವರು. ಈ ಕ್ರಮಕ್ಕೆ ವಿರೋಧವಾಗಿ ನಡೆದರೆ ಮೋಟಾರ್ ಲೋರಿಗಳಲ್ಲಿರುವ ಆಹಾರ ವಸ್ತುಗಳು ಸರಕಾರಕ್ಕೆ ಜಪ್ತಿಮಾಡಲ್ಪಡುವವು ಅಲ್ಲದೆ ಮೋಟಾರ್ ಮ್ಹಾಲಿಕರು ತಕ್ಕ ಶಿಕ್ಷೆಗೆ ಗುರಿಯಾಗಬೇಕಾಗುವುದು. ರೆವಿನ್ಯೂ ಇನ್ಸ್, ಕೆಕ್ಟರ್, ಪೋಲೀಸ್ ಹೆಡ್‌ಕಾನ್‌ಸ್ಟೇಬಲ್, ಪ್ರೊಹಿಬಿಶನ್ ಪೆಟ್ರಿ ಆಫೀಸರ್ ಮೊದಲಾದವರಿಗೆ ಲೋರಿಗಳನ್ನು ಶೋಧಿಸಲು ಅಧಿಕಾರಕೊಡಲಾಗಿದೆ.

ಜಿಲ್ಲೆಯಲ್ಲಿಯ ಕಡವುಗಳ ವಿಲಂ 1951-52ನೆ ಸಾಲಿನ ಬಗ್ಗೆ ಜಿಲ್ಲೆಯ ತಾಲೂಕು ಕಡವುಗಳು ಈ ಕೆಳಗೆ ಸೂಚಿಸಿದ ತಾರೀಕುಗಳಲ್ಲಿ ಬಹಿರಂಗ ವಿಲಂ ಮಾಡಲಾಗುವುದೆಂದು ಜಿಲ್ಲಾ ಜೋಡ್ಡಾ ಪ್ರೆಸಿಡೆಂಟರು ತಿಳಿಸುತ್ತಾರೆ.

ಮಂಗಳೂರು ತಾ. 17-1-51 (ಹ್ಯಾವೆ ಅಸಿಸ್ಟಾಂಟ್ ಇಂಜಿನಿಯರರ ಆಫೀಸಿನಲ್ಲಿ); ಕಾಸರಗೋಡು ತಾ. 17-1-51 (ಹ್ಯಾವೆ ಅ। ಇಂಜಿನಿಯರರ ಆಫೀಸಿನಲ್ಲಿ)ಪುತ್ತೂರು ತಾ. 17-1-51 (ಹ್ಯಾವೆ ಅ। ಇಂಜಿನಿಯರರ ಆಫೀಸಿನಲ್ಲಿ); ಉಡುಪಿ ತಾ.24-1-51 (ಹ್ಯಾವೆ ಅ। ಇಂಜಿನಿಯರರ ಆಫೀಸಿನಲ್ಲಿ); ಕುಂದಾಪುರ ತಾ. 23-1-51 (ಹ್ಯಾವೆ ಸುಪರ್‌ವ್ಯಾಜರರ ಆಫೀಸಿನಲ್ಲಿ); ಕಾರ್ಕಳ ತಾ.23-1-51(ಹ್ಯಾವೆ ಸುಪರ್‌ವ್ಯಾಜರರ ಆಫೀಸಿನಲ್ಲಿ).

ವರ್ಷಾವಧಿ ಮಹಾಸಭೆ–ಅಖಿಲ ಭಾರತ ಅಂಚೆ ಜವಾನ್ ಮತ್ತು ಕೆಳತರಗತಿಯ ನೌಕರರ ದಕ್ಷಿಣ ಕನ್ನಡ ಜಿಲ್ಲಾ ಶಾಖೆಯ ವರ್ಷಾವಧಿ ಮಹಾಸಭೆಯು ಕಳೆದ ತಾ. 31ರಲ್ಲು ಶ್ರೀ ಎನ್. ಎಸ್. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಬಿ. ಎಸ್. ಭಾಸ್ಕರ ರೈಗಳು ತಮ್ಮ ಸ್ವಾಗತ ಭಾಷಣದಲ್ಲಿ ಅಂಚೆಖಾತೆಯು ಕೆಳನೌಕರರ ಕಷ್ಟಗಳನ್ನು ನಿವೇದನ ಮಾಡಿದರು. ಸಂಘದ ಕಾರ್ಯದರ್ಶಿ ಶ್ರೀ ಜೆ.ಪಿ.ಸಿಕೇರಾ, ಅವರು ಸಂಘದ ವರದಿಯನ್ನು ಲೆಖ್ಖಪತ್ರಗಳನ್ನು ಒಪ್ಪಿಸಿದರು. ಸಭೆಯು ಕಡೆಯಿಂದ ಶ್ರೀಗಳಾದ ಎಚ್. ಭೀಮರಾವ್, ಎನ್. ಎಮ್. ಪಿ. ಕಾಮತ್, ಡಾ। ಸಂಜೀವನಾಥರೇ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀಗಳಾದ ಬಿ. ಎಸ್, ಭಾಸ್ಕರ ರೈಗಳು ಅಧ್ಯಕ್ಷರಾಗಿಯೂ, ಜೆ. ಪಿ. ಸಿಕೇರರು ಪ್ರಧಾನ ಕಾರ್ಯದರ್ಶಿಗಳಾಗಿಯೂ ಪೊಸ ವರುಷದ ಅಧಿಕಾರಿಗಳಾಗಿ ಆರಿಸಲ್ಪಟ್ಟರು. ಪ್ರತಿ ಕೇಂದ್ರಕ್ಕೊಬ್ಬರಂತೆ ಜತೆ ಕಾರ್ಯದರ್ಶಿಗಳನ್ನೂ ಕಾರ್ಯ ಸಮಿತಿಯ ಸದಸ್ಯರನ್ನೂ ಆರಿಸಲಾಯಿತು. ಅಧ್ಯಕ್ಷರು ಮುಕ್ತಾಯ ಭಾಷಣದಲ್ಲಿ 'ನೀವು ಶಿಕ್ಷಣ, ವೈದ್ಯಕೀಯ, ವಸತಿ ಸವಲತ್ತುಗಳನ್ನು ಸರಕಾರದಿಂದ ಪಡೆಯಲು ಹೋರಾಡಬೇಕು' ಎಂದು ಹೇಳಿದರು.

ಸಾಂತೂರು ಮುದರಂಗಡಿ–'ಧಾರತ ವಾಚನಾಲಯ' ಎಂಬ ನಾಮಧೇಯದಿಂದ ಸಾಂತೂರು ಮುದರಂಗಡಿಯಲ್ಲಿ ಪುಟಾಣಿತ ಬೋರ್ಡು ಅಧ್ಯಕ್ಷ ಹಾಗೂ ಹಳ್ಳಿಗಂ ಪ್ರೋತ್ಸಾಹದಿಂದ ವಾಚನಾಲಯವೊಂದು ಈಚೆಗೆ ತೆರೆಯಲ್ಪಟ್ಟಿದೆ.

ಬೊವ್ಯಾರಬೆಟ್ಟು–ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ. 27ರಲ್ಲು ಉಡುಪಿ ಉತ್ತರ ಶ್ರೇಣಿಯ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಟಿ. ಎಲ್. ರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶಾಲಾ ಬಾಲಬಾಲಕಿಯರಿಂದ ವಿವಿಧ ವಿನೋದಾವಳಿಗಳನ್ನು ಮುಖ್ಯವಾಗಿ 'ಗುತ್ತಿನಾಯ' ತುಳುನಾಟಕ ಮತ್ತು 'ಯಮನ ಸೋಲು' ಎಂಬ ಕನ್ನಡ ನಾಟಕವನ್ನು ನೋಡಲು ಪ್ರೇಕ್ಷರ ವರ್ಗವು ಸಾಧಾರಣ ಒಂದು ಸಾವಿರದಷ್ಟು ಇದ್ದಿತು. ಶಾಲೆಯ ಹಾಗೂ ಶಾಲಾ ಕಮಿಟಿಯ ಚಟುವಟಿಕೆಗಳನ್ನು ಅಳಿಯಂದಿನ ಅಧ್ಯಕ್ಷರು ಭಾಷಣಮಾಡಿದರು. ರಾಷ್ಟ್ರಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಮುನಿಯಾಲು–ಸ್ಥಳೀಯ ಮಹಾಜನರ ಸಭೆಯೊಂದು ಕಳೆದ ತಾ. 29ರಲ್ಲು ಶ್ರೀ ಎಮ್. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿ, ಸರದಾರ ಪಟೇಲರ ಅಕಾಲ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯವಾಯಿತು. ಸಭೆಯು ಎದ್ದುನಿಂತು ಕೀರ್ತಿಶೇಷರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸಿದಲ್ಲ. ಶ್ರೀ ಜನಾರ್ದನ ಪೈಗಳು ಕಾಲೋಚಿತ ಮಾತುಗಳನ್ನಾಡಿದರು.

ಬೈಕಂಪಾಡಿ–ಇದೇ ತಾ 1ರಲ್ಲು ದ. ಕ. ಜಿಲ್ಲಾ ಸಹಾಯಕ ವಿದ್ಯಾಧಿಕಾರಿಗಳಾದ ಶ್ರೀ ದೇವು ಉಚ್ಚಿಲ್ಕ ಅವರು ಬೋರ್ಡು ಜನರಲ್ ಶಾಲೆಯಲ್ಲಿ ಸಂಜೆ ವಯಸ್ಕರ ಶಿಕ್ಷಣ ಕೇಂದ್ರದ ಉದ್ಘಾಟನಾ ಸಮಾರಂಭವನ್ನು ನೇರವೇರಿಸಿದರು. ಶ್ರೀಗಳಾದ ಪಿ. ಕಾಂತಪ್ಪ ಕೆ. ಭವಾನಿ ರಾವ್, ಎ. ಪಿ. ಕರುಣಾಕರ ವೇದಲಾಪದವರು ಹಿತಸೂಚನೆಗಳನ್ನಿತ್ತರು. ಪಣಂಬೂರು ಜನತಾ ಸೇವಾಸಂಘದ ರಾತ್ರಿ ಶಾಲಾ ವಿದ್ಯಾರ್ಥಿಗಳೂ ಇನ್ನಿತರೂ 'ಸುಭದ್ರಾಪರಿಣಯ' ನೆಂಬ ಯಕ್ಷಗಾನ ಕಾಲಕ್ಷೇಪವನ್ನು ಜರಗಿಸಿದರು.

ಬೈಲೂರು–ಇಲ್ಲಿಯ ಸಾರ್ವಜನಿಕ ಬ್ಯಾಟ್ ಮಿಂಟನ್ ಪಂದ್ಯಾವಳಿಯು ದಶಂಬರ ತಿಂಗಳ ಕೊನೆಯ ವಾರದಲ್ಲಿ ಜರಗಿತು. ತಾ. 30ರಲ್ಲಿ ಶ್ರೀ ಎನ್. ವಿ. ಜೆಡ್ಡಿಯವರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಕೂಟವು ನಡೆಯಿತು. ತಾ 31ರಲ್ಲಿ ಶ್ರೀ ಕೆ. ರಘುರಾಮ ಜೆಡ್ಡಿಯವರ ಅಧ್ಯಕ್ಷತೆಯಲ್ಲಿ ಬಹುಮಾನ ವಿತರಣೆ ಸಮಾರಂಭವು ಕೂಡಾ ಜರಗಿತು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 829/50

ವೆಂಕಪ್ಪ ಸೆಟ್ಟಿ, —ವಾದಿ
ಹಿರಿಯಣ್ಣ ಸೆಟ್ಟಿ, —ಪ್ರತಿವಾದಿ

—ಹೆಜ್ಜಾಡಿ ಹೊಸಮನೆ ದಾರಪ್ಪ ಸೆಟ್ರಿ ಅಳಿಯ, ಕುಂದಾಪುರ ತಾಲ್ಲೂಕ ಕರ್ಕಾಂಟೆ ಗ್ರಾಮಸ್ಥ.

ಸದ್ರಿ ಪ್ರತಿವಾದಿಗೆ ಯಾ ಮೂಲಕ ತಿಳಿಸುವುದೇನೆಂದರೆ:–

ಮೇಲ್ಕಂಡ ವಾದಿಯು ನಿಮ್ಮ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾರೀಕು 22-1-1951ಕ್ಕೆ ತನ್ನಿಗೆ ಯಿಜೋದಾಗಿಯಿದೆ. ನೀವು ಸದ್ರಿ ತಾರೀಕಿನ ದಿವಸ ಹಗಲು 11ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ನಿಮ್ಮ ಉದಾಸೀನತೆಯಿದ್ದ ಪಕ್ಷದಲ್ಲಿ ಹಾಜರು ಮಾಡತಕ್ಕದ್ದು– ಮೇಲೆ ನಮೂದಿಸೋ ದಾದ ದಿವಸ ಹಾಜರು ಆಗಲಿಕ್ಕೆ ತಪ್ಪಿದಲ್ಲಿ ಸದ್ರಿವ್ಯಾಜ್ಯವನ್ನು ನಿಮ್ಮ ಗೈರು ಹಾಜರಿಯಲ್ಲಿ ಕೇಳಿ ಪೈಸಲು ಮಾಡೋದಾದೀತೆಂತ ನೀವು ತಿಳಿದಿರತಕ್ಕದ್ದು.

M Mahabala Holla,
Advocate for Plaintiff

ತಾ. 5-1-1951 ಮೊಕ್ಕಾಂ, ಕುಂದಾಪುರ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ಉತ್ಸವದ ಸಲುವಾಗಿ ಸ್ಪೆಶಲ್

ಒಂದು ಸಲ ನೋಡಿದರೆ ಒಂದು ನೂರು ವರುಷವಾದರೂ ಮರೆಯದ ಮಾಯಾಜಾಲಗಳಿಂದ ಕೂಡಿದ

ಮಾಯಾ ಬಜಾರ್ ಅಥವಾ **ವತ್ಸಲಾಹರಣ**

ದುರ್ಗಾಹೋಟಿ, ಬೇಬಿ ಶಕುಂತಲಾ,
ಕುಸುಮ ಬೇಕಪಾಂಡೆ, ಶಾಹುಮೋಡಕ್, ವಸಂತ ಕೆಂಗ್ರಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

Notice.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O.S. 134/47 R.I.A. 1219/50

ಅರ್ಜಿದಾರ —ಮೂವಡ ಉಮ್ಮರ ಸ್ಯಾಬ. ಎದ್ರಿರು —ಪ್ರತಿವಾದಿ ಸಹಾ.

ಸದ್ರಿ ಅರ್ಜಿಯ 2 ನುತ್ತು 3ನೇ ಎದ್ರಿಂಗೆ ತಿಳಿಯಪಡ್ತಿದ್ದು.

2ನೇ ಎದ್ರಿಯ—ಧಕ್ಷಿಣಾ–ಮೂವಡ ಮಹಮ್ಮದ್ ಸಾಹೇಬರ ಪಿಥವೆ.

3ನೇ ಎದ್ರಿಯ— ಹಬಸ್ಸಾ–ಮೂವಡ ಮಹಮ್ಮದ್ ಸಾಹೇಬರ ಮಗಳು, ವ ಫಕರುದ್ದೀನ್ ಕೊಡಾವು ಸಾಹೇಬರ ಹೆಂಡ್ತಿ.

ಉತ್ತರ ಕನ್ನಡ ಜಿಲ್ಲಾ ಹೊನ್ನಾವರ ತಾಲ್ಲೂಕ್ ಭಟ್ಟಳ ಪೇಟೆ.

ಮೇಲ್ಕಾಣಿಸಿದ ಡಿಕ್ರಿ ಮೇಲೆ ಪರ್ಸನಲ್ ಡಿಕ್ರಿ ಕೊಡಿಸಬೇಕಂತ ಅರ್ಜಿದಾರರು ದಾಖ್ಲು ಮಾಡಿದ ಮೇಲಿನ ಅರ್ಜಿ ತಾ. 16-1-51ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪ ಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟ ನುಂದೆ ಹಾಜ್ರಾಗಿ ತಿಳಿಸ ತಕ್ಕದ್ದು.

Y. Manjaya Shetty,
Advocate for Petrs.

ತಾ. 30-12-1950, ಮೊಕ್ಕಾಂ: ಕುಂದಾಪುರ

ವಿದ್ಯಾವಂತೆಯರಾಗಿ ಅವಿವಾಹಿತರಾಗಿರುವವರ ಸಮಸ್ಯೆ

ಲೇಖಕರು: ಕೆ. ಗುರುರಾಜ ಉಡುಪ, ಬಿ. ಎಸ್‌ಸಿ.

ಧನಿಕ ಹಾಗೂ ಮಧ್ಯಮವರ್ಗದವರು ತಮ್ಮ ಮಕ್ಕಳು ವಿದ್ಯಾರ್ಜನೆಯು ಉದ್ದೇಶದಿಂದಲೂ, ಬಡವರು ಮಕ್ಕಳು ಧನಾರ್ಜನೆಮಾಡುವ ಉದ್ದೇಶದಿಂದಲೂ ಹೆತ್ತವರನ್ನು ಬಿಟ್ಟು ದೂರ ದೂರದಲ್ಲಿಯೇ ಈಗಲೇಗ ಬೆಳೆಯುತ್ತಿರುವರು. ಹೀಗಾಗಿ ಹೆತ್ತವರು ತಮ್ಮ ಮಕ್ಕಳಿಗೆ ಬೇಗನೇ ಮದುವೆ ಮಾಡಬೇಕೆಂದರೂ ತರುಣರು ಒಪ್ಪದಿದ್ದೋ, ಹಣದ ಆಡಚಣೆಯಿಂದಲೋ ಈಗೀಗಲಂತೂ ಗಂಡಸರಲ್ಲಿ ಬಾಲ್ಯವಿವಾಹವು ತೀರ ಕಡಿಮೆಯಾಗಿದೆ. ಬಾಲ್ಯವಿವಾಹದ ಅನರ್ಥ ಪರಂಪರೆಗಳನ್ನು ಕಿತ್ತಿದು ವಿದ್ಯಾವಂತ ತರುಣರು ಸಣ್ಣ ಪ್ರಾಯದಲ್ಲಿ ವಿವಾಹಕ್ಕೆ ಒಪ್ಪದಿದ್ದರೆ ಇನ್ನೆನ್ನಿದ ಬಡ ಪ್ರಾಯದೇವಿಗಳ ಆರ್ಥಿಕ ಪರಿಸ್ಥಿತಿಯ ದುಃಸ್ಥಿತಿಯಿಂದ ದಾಂಪತ್ಯ ಜೀವನದ ಹೆಚ್ಚಾದ ಪೆಜ್ಜತ್ಕಾಗಿ ಬೆದರಿ ಆ ತರುಣರೂ ಬಾಲ್ಯ ವಿವಾಹಕ್ಕೆ ಒಪ್ಪಲಾರರು. ಪರಿಣಾಮವಾಗಿ ತರುಣಿಯರು ಬಾಲ್ಯವಿವಾಹ ಪದ್ಧತಿಯೂ ಕ್ರಮೇಣವಾಗಿ ಮಾಯಾವಗಿ ತೊಲಗಬಲ್ಲುದು. ತರುಣರಾದೂ 25-30 ವರ್ಷಕ್ಕೆ ಮದುವೆಯಾಗುವಾಗ 16-17 ವರ್ಷದ ತರುಣಿಯರನ್ನೇ ಮದುವೆಯಾಗುತ್ತಾರೆ. ಹೀಗಾಗಿ ಬಾಲ್ಯವಿವಾಹವನ್ನು ತಡೆಗಟ್ಟಲು ಶಾರದಾ ಅಕ್ಟ್‌ಗಿಂತಲೂ ಹಚ್ಚಾಗಿ ಈಗಿನ ಸಮಾಜ ರಚನೆಯೇ ಕಾರಣವಾಯಿತೆಂದರೂ ಸಲ್ಲುವುದು.

ತರುಣರು ವಿವಿಧ ಉದ್ದೇಶಗಳಿಂದ ಹೆತ್ತವರನ್ನು ದೂರವಾಗುವುದು ಸಹಜ. ಆದರೆ ತರುಣಿಯರನ್ನು ಈ ರೀತಿ ಕಳುಹಿಸಲು ನಮ್ಮ ಸಮಾಜ ಬಿಡುವುದೆ? ಹಾಗೆ ಬಿಟ್ಟರೆ ನಮ್ಮ ಸಮಾಜದ ನೈತಿಕ ಮಟ್ಟ ಇನ್ನೂ ಕೆಳಕ್ಕಿಳಿಯಲಿಕ್ಕಿಲ್ಲವೆ? ವಿವಾಹ ಯೋಗ್ಯರಾದ ತರುಣಿಯರನ್ನು ಹೆತ್ತವರು ಹೇಗೆ ವಿದ್ಯಾರ್ಜನೆಗಾಗಿಯಾಗಲೀ ಧನಾರ್ಜನೆಗಾಗಿಯಾಗಲೀ ದೂರ ಕಳಿಸಿಯಾರು? ಅದುದರಿಂದ ಪೇಟೆಪಟ್ಟಣಗಳಲ್ಲಿ ವಾಸಮಾಡುವ ಧನಿಕ ಹಾಗೂ ಮಧ್ಯಮವರ್ಗದವರು ತಮ್ಮ ಮಕ್ಕಳನ್ನು ಅಥವಾ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಶಾಲೆಗೆ ಸೇರಿಸಂಪರು. ವಿದ್ಯಾಭ್ಯಾಸ ಮುಂದರಿಯುವುದು. ಸ್ಕೂಲ್ ಫೈನಲ್, ಇಂಟರ್, ಬಿ. ಎ, ಹಿಂದಿ ವಿಶಾರದ, ಸಂಸ್ಕೃತ ಶಿರೋಮಣಿ ಹೀಗೆ ಮುಂದರಿಯುತ್ತಾ ಹೋಗುವುದು. ಈ ಮಧ್ಯೆ ಯಾವಳೆಯಿಂದಲೂ ಮದುವೆಯ ಪ್ರಸ್ತಾಪವು ಬಾರದಿರುವ ಸಂಭವ ಹೆಚ್ಚಿದೆ. 'ಹುಡುಗಿ ಕಲಿಯುತ್ತಿದ್ದಾಳೆ, ಬೆಳೆಯಲಿ' ಎಂಬ ಮನೋಭಾವ ಹೆತ್ತವರಲ್ಲೂ ಒಡಮೂಡುತ್ತದೆ. 'ಹದಿನಾಲ್ಕು ವಾಟದ ಹಣ್ಣಾದರೇನು' ಹೆತ್ತವರಿಗೆ ಮಗಳೇ ಅಲ್ಲವೇನೆ? ಈ ಮಧ್ಯೆ ಕೆಲ ಹೆಮ್ಮಕ್ಕಳಿಗಂತೂ ಮದುವೆಯೆಂಬುದೇ ಒಂದು ಅನಿಷ್ಟ ಸಂಬಂಧವೆಂಬ ಭಾವನೆಯೂ ಬೆಳೆದುಬರುತ್ತದೆ. ಅದನ್ನವರು ತಿರಸ್ಕರಿಸುವರು. ಹೊಸೆಗೆ ಮೂವುದಾದರೊಂದು ಡಿಸ್ಗ್ರೀಯನ್ನೋ ಟೈಟಿನ್ನೋ ಪಡೆದ ಮೇಲೆ ಮುಂದೇನು ಎಂಬ ಪ್ರಶ್ನೆ ಬ್ರಹ್ಮಾಂಡವಾಗಿ ತಂದೆತಾಯಿಗಳ ಮನದ ಮುಂದೆ ಬಂದು ತಾಂಡವವಾಡುತ್ತಿರುವುದು. ಇಪ್ಪರ್ಲ್ಲಿ ಹುಡುಗಿ 19-20 ವರ್ಷವನ್ನು ದಾಟಿದವಳಾಗಿರುತ್ತಾಳೆ.

ಕೆಲ ಮಧ್ಯಮ ವರ್ಗದವರಂತೂ ಹೊಟ್ಟೆ ಬಾಡಿಗಾಗಿ ಇಂತಹ ಪದವೀಧರ ಹೆಮ್ಮಕ್ಕಳನ್ನು ಯಾವುದಾದರೂ ಆಫೀಸಿಗೆ ಸೇರಿಸುವವರು ಉದ್ಯೋಗಕ್ಕಾಗಿ. ಕಾರಕೂನ ಕೆಲಸ, ಉಪಾಧ್ಯಾಯಿನಿ ಇವೇ ಮೊದಲಾದ ಸ್ತ್ರೀಯರ ಸದೃಶ ಉದ್ಯೋಗದ ಕ್ಷೇತ್ರವಾಗಿವೆ ಮದುವೆಯ ಪ್ರಶ್ನೆಯಂತೂ ಬಗೆಹರಿಯಲ್ಪಡದೆಯೇ ಉಳಿಯುತ್ತು. ಸಾಮಾನ್ಯರಾದ ಅವಿದ್ಯಾವಂತ ತರುಣರಂತೂ ಇವರನ್ನು ಕಲಿತ ಹುಡುಗಿ ಇವಳೊಡನೆ ನನ್ನ ಸಮಂಜಸವಾಗುವುದು ಅಸಂಭವ'ವೆಂದು ಬೆದರಿ ಹಳ್ಳಿಯ ಅವಿದ್ಯಾವಂತ ತರುಣಿಯರನ್ನೇ ಆರಿಸಿಕೊಳ್ಳುವರು. ಇದರಿಂದ ಚಿಂತೆ ಇಲ್ಲಿ, ಮನೆಗೆಲಸದಲ್ಲಿ ನಿಷ್ಣಾತಳಾದವಳೇ ನನಗೆ ತಕ್ಕ ಮಡದಿ, ರೂಪವಿಲ್ಲದಿದ್ದರೂ ಚಿಂತಿಲ್ಲ ಎಂದು ತನ್ನ ದೃಷ್ಟಿಯನ್ನು ಆ ಕಡೆ ನೀರುವರು. ಅದೆಂದಲೂ ಸಾಮ್ಯಂತವಿಲ್ಲದಿಲ್ಲ. ಶಾಲೆಯ ಕೆಲಸದಲ್ಲಿಯೇ ನಿರತರಾಗಿದ್ದ ಬಾಲಕಿಯರಿಗೆ ಮನೆಗೆಲಸವನ್ನು ಶ್ರದ್ಧೆಯಿಂದ ಕಲಿಯುವ ಪಡವಾಗಲೀ ಸಹನೆಯಾಗಲೀ ಇರುವುದೇ ಇಲ್ಲ. ಮಕ್ಕಳ ಲಾಲನೆ ಪೋಷಣೆಯಂತೂ ಅವರಿಂದಾಗದ ಸೂತು. ಬಡವಳಾಗಿ ಹಳ್ಳಿಯ ಪೆಜ್ಜು ಕಲಿತ ಯೋಗ್ಯ ವರನನ್ನೇ ತಾವು ಮದುವೆಯಾಗಬೇಕೆಂಬ ಛಲದಿಂದ ನಡೆಯುತ್ತೇವೆಂದು ಹಠತಿಟ್ಟಿದ್ದು ಈ ಕಲಿತ ತರುಣಿಯರ ಇಂತಹ ಅವಿದ್ಯಾವಂತರ ಮುಖವನ್ನೂ ಎತ್ತಿ ನೋಡಲಾರರು. ಅದು ಸಹಜ.

ಇನ್ನು ವಿದ್ಯಾವಂತ ತರುಣರ ಕುರಿತು. ತಮ್ಮ ಮಗನಿಗೆ ಖರ್ಚಿಗೆ ಸಾಕಷ್ಟುಕೊಟ್ಟು ಬೆಳೆಸಿ ಕಲಿಸಿ ವಿದ್ಯಾವಂತರನ್ನಾಗಿ ಮಾಡಿದ ಹೆತ್ತವರು ತಮ್ಮ ಮಗನ ಭಾವೀ ಪತ್ನಿ ಆರ್ಥಾತ್ ತಮ್ಮ ಸೊಸೆಯು ಕುರಿತು ಸುಂದರ ಸುಖ ಸ್ವಪ್ನಗಳನ್ನು ಕಾಣುವುದು ಸಹಜ. ತುಂಬಾ ಚಿನ್ನಾಭರಣವನ್ನು ಕೊಡುವ, ವಿದ್ಯಾವಂತೆ, ರೂಪವತಿ, ಗುಣವತಿ, ಸ್ತ್ರೀ ತಮ್ಮ ಸೊಸೆಯಾಗಿರಬೇಕೆಂದು ಹೆತ್ತವರು ಹಾಗೂ ತರುಣರೂ ಯೋಚಿಸುವುದು ಸ್ವಾಭಾವಿಕ. ಬೆಳೆದ ತರುಣನಿಗೂ ಸಹ ಹೆಚ್ಚು ವಿದ್ಯೆಯನ್ನು ಕಲಿತ ಸ್ತ್ರೀಯನ್ನು ತಂದರೆ ತನ್ನ ಶಾಂತ ಬೇಸಗದಲ್ಲಿ ಇನ್ನೆಸ್ಟು ಕಿರುಕುಳಗಳನ್ನು ತಂದೊಡ್ಡುವಳೋ ಎಂಬ ಸಂಶಯ ವಿದ್ದೇ ಇದೆ ಹೀಗಿದ್ದರೂ ಅವಳ್ಕೆ ತಕ್ಕ ವಿದ್ಯೆಗೆ ಸರಿಯಾಗಿ ಚಿನ್ನಾಭರಣಗಳನ್ನು ಹೇರಿದರೆ ಅಂತಹ ತರುಣಿ ತರುಣರ ಮದುವೆಯೂ ಗುವುದಿದೆ. ಆದರೆ ಅವಕ್ಕೆ ತಕ್ಕ ಸಂಪತ್ತು ಇಲ್ಲದಿದ್ದಲ್ಲಿ ಒಂದು ಪದವಿ ಮಾತ್ರ ಇದ್ದರೆ ರೂಪವತಿಯರಾಗಿದ್ದರೂ ಹಲವು ವೇಳೆ ಅಂತಹವರ ವಿವಾಹ ತುಂಬಾ ನಿಧಾನವಾಗುವುದು. ಹೀಗಿರುವಾಗ ಬಡವರಾಗಿ, ವಿದ್ಯಾರ್ಜನೆ ಸಾಕಷ್ಟುಮಾಡಿ ರೂಪವಿಲ್ಲದ ಸ್ತ್ರೀಯರ ವಿವಾಹದ ಪ್ರಶ್ನೆಯಂತೂ ತುಂಬಾ ಪ್ರಯಾಸಕರವಾಗಿದೆ. ಈ ಧನ ಪಿಶಾಚಿ ಸ್ವರೂಪಿಯಾದ ಸಮಾಜದಲ್ಲಿ "ಗುಣ ನಡತೆಗಳು ಧನ, ಸೌಂದರ್ಯ ಎಷ್ಟಿಕ್ಕಿಂತಲೂ ಹೆತ್ತ ಮೆದಲಿನಿಯದು" ಎಂದು ಸಾರಿಸ್ಸು ಫೋಸಹುದು? ಆದರೆ ಈಗ ಕಾರ್ಯತಃ ಧನ ಹಾಗೂ ರೂಪ ಇವೇ ವಿವಾಹ ಯೋಗ್ಯತಾ ಪತ್ರಕ್ಕೆ ಬೇಕಾದುದು.

ಹೀಗಾಗಿ ಈಗ ನಮಗೆ ಸಿಗುವ ರೀತಿಯು ವಿದ್ಯೆಯು ತರುಣಿಯರ ವಿವಾಹಕ್ಕೆ ಒಂದು ತಡೆ (Disqualification) ಯೇ ಆಗಿ ಪರಿಣಮಿಸಿದೆ. ವಿದ್ಯಾವತಿಯರಾಗಿರುವ ಸ್ತ್ರೀಯರ ವಿವಾಹವು ಒಂದು ಸಮಸ್ಯಾ ರೂಪವನ್ನು ತಾಳಿದೆ. ಹೀಗೆ ಹೆಚ್ಚು ವ್ಯಾಸಂಗ ಮಾಡಿದವರಿಗೆ ಅವಿವಾಹಿತಳಾಗಿದ್ದು, ಈಗಿನ ಈ ಸಮಾಜ ರಚನೆಯೂ ಸ್ತ್ರೀಯರಲ್ಲಿ ಸುಪ್ತವಾಗಿದ್ದ ಆ ಭಾವನೆ ಕೆರಳಿ ಅಪೇಕ್ಷೆ ಕಕ್ಷೆಯನ್ನು ಮೀರಿ ಅನುಭವಿಸಬೇಕಾಗುವುದು. ಕೆಲವೆಡೆ ಇಂಥವರಿಂದಾಗಿ ಸಮಾಜದ ನೈತಿಕ ಮಟ್ಟವು ಕೆಡುವ ಸಂಭವವೂ ಇರದಿಲ್ಲ. ಅಮೇರಿಕ್ಯ, ಬ್ರಿಟನ್ ದೇಶಗಳಲ್ಲಿರುವಂತೂ ಇಂಥದ್ದ ಅವಿವಾಹಿತ ಸ್ತ್ರೀಯರ ಸಂಖ್ಯೆ ಎಷ್ಟೋ ಇದೆ. ಅವರು ಸ್ವತಂತ್ರರಾಗಿ ಉದ್ಯೋಗಗಳಲ್ಲಿ ನಿರತರಾಗಿ ಸಮಾಜದಲ್ಲಿ ಬಾಳುತ್ತಿಲ್ಲವೇನೆ? ಎಂಬ ಆಡ್ಡ ಪ್ರಶ್ನೆಯನ್ನು ಹಾಕಬಹುದು. ಆದರೆ ಭಾರತ ಅಮೇರಿಕವಲ್ಲ, ಅಲ್ಲಿನ ನಡೆನುಡಿ ಸಂಸ್ಕೃತಿಗೂ, ಇಲ್ಲಿನ ಆಚಾರ ವಿಚಾರಕ್ಕೂ ತುಂಬಾ ವ್ಯತ್ಯಾಸವಿದೆ. ಸ್ವಾಭಾವಿಕವಾಗಿ ನಮ್ಮ ತರುಣಿಯರು ಆ ತೆರನಾದ ಸ್ವತಂತ್ರ ಜೀವನೋಪಾಯವನ್ನು ಕೈಗೊಳ್ಳಲಾರರು. ಜೀವನದ ಸಂಪೂರ್ಣ ಭಾರವನ್ನು ಅವಳಿವ್ಗಳೇ ಹೊರಲಾರಳು. ಇದ್ದಿನ ಸಂಸ್ಕೃತಿ ಅವಳಿಗೆ ಪುರುಷನೊಡನೆ ಬೆರೆತು ಬಾಳನ್ನು ಸಮಾನವಾಗಿ ಹಂಚಿಕೊಳ್ಳಲು ಕಲಿಸಿದೆ. ಇಂತಹ ವಿದ್ಯಾವಂತ ಸ್ತ್ರೀಯರು ಯೋಗ್ಯ ವರನನ್ನು ಹೊಂದಿ ಸಂತಸದ ದಾಂಪತ್ಯ ಜೀವನವನ್ನು ನಡೆಸಬಲ್ಲರು.

ಆದರಿಂದಾಗಿ ಸ್ತ್ರೀಯರಿಗೆ ವಿದ್ಯೆಯನ್ನೇ ಕೊಡಬಾರದೆಂದು ಹೇಳುವುದು ತೀರ ಅನ್ಯಾಯದ ಮಾತು. ಹಾಗಲ್ಲ, ನಮ್ಮ ಸ್ತ್ರೀಯರಿಗೆ ಸಿಗುವ ವಿದ್ಯೆಯು ಪೂರ್ಣ ರೂಪ ಬದಲಾಗಬೇಕು. ಬುದ್ಧಿ ಶಕ್ತಿಯನ್ನು, ಭಾಷೆಯನ್ನು ಬೆಳೆಸಲಿಕ್ಕೆ ಸಹಾಯಕವಾದ ನಿರ್ದೇಶವಾದ ವಿದ್ಯೆಯಿಂದ ಆವಳಿಗಾವ ಪ್ರಯೋಜನ ದೊರೆತೀತು? ವಿದ್ಯಾ ವಿಭಾಗದಲ್ಲಿ ದಿನಕ್ಕೊಂದರಂತೆ ಬದಲಾವಣೆಯನ್ನು ತರುವ ನಮ್ಮ ಮಂತ್ರಿಮಂಡಲಗಳು ಈ ಸ್ತ್ರೀ ವಿದ್ಯಾಭ್ಯಾಸ ವಿಭಾಗವನ್ನೇ ಸಂಪೂರ್ಣ ಬದಲಾಗಿ ಮಾಡುವ ಹೊಸ್ಸಾಕ್ಕೆ ಆದೇಶ ಮುಂದಿಬರುವುದಿಲ್ಲ. ಹೆಚ್ಚು ಕಡಿಮೆ 8ನೇ ಕರಗತೆಯವರೆಗೆ ಹಣ್ಣು ಗಂಡು ಎಂಬ ಬೇಧವಿಲ್ಲದೆಯೇ ಕಲಿಸಬಹುದು. ಅಮೇಲೆ ಬರುವ ವಿದ್ಯಾಭ್ಯಾಸವನ್ನು ಹುಡುಗಿಯರಿಗೆ ಬೇರೆತರ, ಗಂಡುಮಕ್ಕಳಿಗೆ ಬೇರೆತರವಾಗಿರಬೇಕು. ಇದೇ ರೀತಿ ಸ್ಕೂಲ್ ಫೈನಲ್ ಕಾಲೇಜು ವಿದ್ಯಾವ್ಯಾಸಂಗವೆಲ್ಲವೂ ಬೇರೆ ಬೇರೆಯಾಗಿಯೇ ಇರುವುದು ಸರಿಕ. ಮುಖ್ಯವಾಗಿ ಸ್ಕೂಲ್ ಫೈನಲ್‌ವರೆಗೆ ಭಾಷೆಯಲ್ಲಿ ಪೆಜ್ಜಿನ ವ್ಯಾಸಂಗದ ಅವಶ್ಯಕತೆ ಇಲ್ಲ. ಇವರ ಬದಲು ಗ್ರಹ ಕೆಲಸ, ಇದನ್ನು ಸ್ಪೆಷಲ್‌ವಾಗಿಯೂ ಸಾಂದರವಾಗಿಯೂ ಮಾಡುವ ಕ್ರಮ, ಮಕ್ಕಳ ಲಾಲನ ಪಾಲನೆ, ಸಾಗಿತ ಜೊತೆಗೆ ಇವರ ಸ್ವರ್ಧಿ ಆಟಂಕವನ್ನು ಕಲಿಸುವಂತಿರಬೇಕು. ಇನ್ನು ಈ ದರ್ಜೆಯನ್ನು ದಾಟಿದ ಮೇಲೆ ಕಾಲೇಜಿನ ವ್ಯಾಸಂಗದಲ್ಲಿ ಸಂಗೀತ, ಕಸೂತಿ, ಮಕ್ಕಳ ವಿದ್ಯಾಭ್ಯಾಸ ಮುಂತಾದ ವಿಷಯಗಳ ದೀರ್ಘ ಅಭ್ಯಾಸವನ್ನು ಮಾಡಲವಕಾಶವಿರಬೇಕಾಗುವುದು. ಹೀಗೆ ತರಬೇತಿಯನ್ನು ಅವರವರ ಆರ್ಥಿಕ ಮಟ್ಟ ಅಧಿರುಚಿಗೆ ತಕ್ಕಂತೆ, ಸ್ಕೂಲ್ ಫೈನಲ್ ತನಕವೂ ಕಾಲೇಜು ವ್ಯಾಸಂಗವನ್ನೂ ಮಾಡಬಹುದು ಹಾಗೆಂದು ಎಲ್ಲ ಸ್ತ್ರೀಯರಿಗೂ ಇದೇ ರೀತಿಯ ವಿದ್ಯೆಯನ್ನೇ ಕೊಡಬೇಕೆಂಬ ನಿರ್ಬಂಧವಲ್ಲ. ಗಂಡಸರಂತೆ ವ್ಯಾಸಂಗವನ್ನು ಮಾಡಿ ಉದ್ಯೋಗವನ್ನು ನೋಡಿಕೊಂಡರಭ್ಯಂತರವಿಲ್ಲ ಆಸೆ ಇದ್ದವರು, ಇತರರಿಗೆ ಸಿಗುವ ವಿದ್ಯೆಯನ್ನು ಪಡೆಯುವಂತಿರಬೇಕು. ಈಗೀಗಂತೂ "ಉದ್ಯೋಗ ದಂಧೆಗಳಲ್ಲಿ ಸ್ತ್ರೀಪುರುಷರೆಂಬ ಭೇಧವನ್ನು ಕಲ್ಪಿಸುವಾರ ದೆಂದುಮ" ನಮ್ಮ ಘಟನೆಯಲ್ಲೇ ಸೇರಿಸಲ್ಪಟ್ಟಿದೆ. ಹೇಗಿದ್ದರೂ ನೂರರಲ್ಲಿ 90ಮಂದಿ ಬಾಲಕಿಯರ್ಕ್ಕೂ ಹಾಗೂ ಹೆತ್ತವರು ತಮ್ಮ ಜೀವ್ಮತ್ಕಳಿಗೆ ಮೇಲೆ ಹೇಳಿದ ಸ್ತ್ರೀಯರ ಆದರ್ಶವ್ಯಾಸಂಗವನ್ನೇ ಮಾಡಿಸಲಿರಲಿಕ್ಕಿಲ್ಲ. ಹೀಗಾದುದರಿಂದ ನಮ್ಮ ಪ್ರಜಾಪ್ರತಿನಿಧಿಗಳೂ ಮಂತ್ರಿಗಳೂ ಈ ದೃಷ್ಟಿಯ ಸುಧಾರಣೆಯನ್ನು ತರಲು ಪ್ರಯತ್ನಿಸುವುದು ಅತ್ಯಗತ್ಯವಾಗಿದೆ. ಸುಂದರ ಸಮಾಜದ ರಚನೆಗೆ ಸಹಕಾರಿಯಾದ ಈ ಮುಖ್ಯ ಪ್ರಶ್ನೆಯನ್ನು ಬಗೆಹರಿಸುವುದು ಅತ್ಯಾವಶ್ಯಕ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘ ವಾದ ಮಧುರದ್ರವ ರೂಪ ರಸಾಯನ. ಅಲ್ಪ ಮೂಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾಪಕಿಸ್ವರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

"ವೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)
ಗೀತೆಯ ಕ್ಲೈಗನ್ನಡಿ
(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)
ಅನುವಾದಕರು—ದಿ। ಹೊಸಕೆರೆ ವಿದ್ವಂಬರಯ್ಯನವರು
ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲಿ ಇರುವುದಲ್ಲದೆ ಮೂಲವಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪವಲ್ಲಿರದೆ ಭಟ್ಟಯಾಗಿ ಎದ್ದು ಕಾಣುವುದು.
400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.
ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ಪ್ರತಿಗಳು ಸಿಗುವ ಮುಖ್ಯ ಸ್ಥಳ:—
ನವಯುಗ ಪ್ರೆಸ್, ಉಡುಪಿ ದ. ಕನ್ನಡ
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ರ ತಾಯಿಯ ಕರುಳು—ಲೇಖಕರು: ಶ್ರೀ ಅ. ನ. ಕೃಷ್ಣರಾಯರು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು–೩. ಬೆಲೆ ರೂ. ೪–೧೫–೦.

ಹೆಂಗಸಿನ ಜೀವನದ ನಾನಾ ಮುಖದ ಕಷ್ಟಕಾರ್ಪಣ್ಯಗಳ ಚಿತ್ರಣವೊಂದನ್ನು ಶ್ರೀ ಅ. ನ. ಕೃಷ್ಣರಾಯರು 'ತಾಯಿಯ ಕರುಳಿ'ನಲ್ಲಿ ನೀಡಿದ್ದಾರೆ. ತಾಯಿಕರುಳಿನಲ್ಲಿ ಪೆಟ್ಟಬೇಕಾದಂಶ ಯಾವುದೆಂಬುದು ಕೊಂಚ ಸಮಸ್ಯಾಸ್ಪದ ವಿಚಾರ. ಕಥಾವಸ್ತುವಾದರೂ ನವೀನವಲ್ಲ. ಸುಮಾರು ಅರ್ಧ ಶತಾಬ್ದಿಯನ್ನೋ ದುವ ವೇಳೆಗೆ ಕೇವಲ ಮಾತು ಪ್ರತಿಮಾತುಗಳ ನೀರಸ ಸಂಭಾಷಣೆಗಳು ಬೇಸರ ವನ್ನು ಕರುತ್ತವೆ. ಆದರೆ–ಕೊನೆಯ ಭಾಗದಲ್ಲಿ ನಾವು ಹುಲುಸು ಸತ್ವವೇಪಡೆದ ಸಾವಿತ್ರಿಯ ಪಾಡಿಗಾಗಿ ಕಂಬನಿಗಂಸುತ್ತೀವೆ, ಮಹಾ ಸಾಧ್ವಿಯೂ, ಆದರ್ಶ ಮಹಿಳೆಯೂ ಆದ ಜೀವಕ್ಕನ ಜೀವನ ಸಾಫಲ್ಯವನ್ನು ಕಂಡು ಬೆರಗಾಗುತ್ತೇವೆ! ಸಾವಿತ್ರಿಯ ಪಾಡನ್ನು ನೆನೆದಾಗ ಈಗಿನ ವಾತಾವರಣದಲ್ಲಿ ಹೆಣ್ಣಾದವಳು ಇಪ್ಪಕ್ಕೂ ಸಂಪ್ರದಾಯ ಶರಣಾಗಿರುವುದೇ ಎಂದು ತೋರುತ್ತದೆ. ಅಂತೆಯೆ ಜೀವಕ್ಕ ನಂತಹ ಮಹಾ ಸತೀಮಣಿ, ಪುಣ್ಯಸ್ತ್ರೀ-ಇಪ್ಪತ್ತನೆಯ ಶತಮಾನದಲ್ಲೂ ಇರಬಹುದೇ ಎನ್ನುವ ಶಂಟೆ ಮೂಡುತ್ತದೆ. ಏಂದರೆ ಇಲ್ಲಿ ಕತೆ ಆದರ್ಶವಲ್ಲ; ವ್ಯಕ್ತಿಗತವಾದ ಜೀವನ ಸಾಫಲ್ಯ ಮುಖ್ಯ!

ಸಾವಿತ್ರಿ ತಂದೆ ತಾಯಿಗಳಿಲ್ಲದ ತಬ್ಬಲಿ. ಲಕ್ಷ್ಮೀನಾರಾಯಣಪ್ಪನವರ ಸಾಕು ಮಗಳು. ವೆಂಕಟರಾಯನಿಗೆ ಎರಡನೆಯ ಹೆಂಡತಿಯಾಗಿ ಹೋದದ್ದು ಸಾಕು ತಾಯಿ ವೆಂಕಮ್ಮನವರ ಕೈವಾಡದಿಂದಲೇ. ಇಲ್ಲದಿದ್ದರೆ ಇಂತಹ ಸ್ಪರ್ಧಾಮಣಿಗೆ ವೆಂಕಟರಾಯನಿಗಿಂತ ಮಿಗಿಲಾದ ಗಂಡು ಸಿಗಬಹುದಿತ್ತು. ವೆಂಕಟರಾಯನಿಂದ ಸಾವಿತ್ರಿಗೆ ಸುಖವಾಗಿಲಿಲ್ಲ. ಪತಿಯೇ ದೇವರೆಂದು ನಂಬಿದ ಅಮಾಯಕಿಗೆ ಆತನೇ ಸರ್ವಸ್ವ. ಆದರೆ ವೆಂಕಟರಾಯ ಜುಗಾರಿಕೋರ. ಇಸ್ಪೀಟು ಆಟದಿಂದ ಬೇಂಕಿನ ಕ್ಯಾಶಿಯಂದ 5000ರೂ ಕೆಗೆದು ಎರಡೂವರೆ ವರ್ಷ ಜೈಲನ್ನನುಭವಿಸಿ ಸಾವಿತ್ರಿಯನ್ನು ಗಂಡಾಂತರಕ್ಕೆ ತುರುಕಿಸಿದ. ಸಾವಿತ್ರಿ ತನ್ನೆರಡು ಮಕ್ಕಳನ್ನು ಕಟ್ಟಿಕೊಂಡು ಕಷ್ಟಜೀವನ ನಡೆಸುತ್ತಾಳೆ. ಮದುವೆಯಾದ ಕೂಡಲೇ ಜೀವಕ್ಕ ನೆರೆಯವರಾಗಿ ತಾಯಿಯಂತೆ ಕಾಣುತ್ತಾರೆ. ಮತ್ತೆ ಚೂಕ್ಕಮ್ಮನಾಗೆಯೆ ನೋಡುತ್ತಾರೆ. ವೆಂಕಟರಾಯ ಜೈಲಿಂದ ಬಂದು ಬಹಳಕಾಲ ಬಾಳಲಿಲ್ಲ. ಸಾವಿತ್ರಿಯು ಬೇರೆಯವರ ಚಾಕರಿಯಿಂದ ವಿದ್ಯೆಗೊಟ್ಟು ಮದುವೆ ಮಾಡಿಸಿದ ಮಗ ನರಸಿಂಹ ಹೆಂಡತಿಯ ಪ್ರಾಸನಾಗಿ ಸಂಪತ್ತಿಗೆ ಮೋಹಗೊಂಡು ತಂಗಿಯನ್ನೂ ತಾಯಿಯನ್ನೂ ತೊರೆದು ಮಾವನ ನುನಗೆ ಹೋಗುತ್ತಾನೆ. ಮಗಳು ಸ್ವಾಯಂಭರಿತೆಯಾದಾಗ ಊರಿನ ಜನ ತಲೆಗೊಂದು ಮಾತನಾಡಿ ಸಾವಿತ್ರಿಯು ಸಹನೆ ಶೂನ್ಯವಾಗಿ ಕೆಟ್ಟ ಮಾತು ಪುಗಳಿಗೆ ಅಡುತ್ತಾಳೆ, ತಾಯಿಯೇ ಸರ್ವಸ್ವನೆಂದು ನಂಬಿದ, ಹೆಣ್ಣು ಮಗಳು ಸಚ್ಚಾರಿತ್ರ್ಯಯಾಗಿದ್ದರೂ ಇಂತಹ ಮಾತು ಕೇಳಬೇಕಾಯಿತೆ? ಎಂದು ಬಾವಿಯ ಮುಖವನ್ನು ಕಾಣುವಳು. ಪತಿ, ಮಕ್ಕಳು, ತನಗಿಲ್ಲದ ಮೇಲೆ ಆ ತಾಯಿಗೆ ಏನಾಯಿತೋ– ಏನಾದರೋ– ಯಾರುಬಲ್ಲರು?– ಇದು ಕತೆ.

ಸಾವಿತ್ರಿಯ ಜೀವನದಲ್ಲಿ ಒಮ್ಮೆಯಾದರೂ ಸುಖದ ಕಲ್ಪನೆ ಕೂಡಾ ಕಾಣುವುದಿಲ್ಲ. ಬದುಕಿನುದ್ದಕ್ಕೂ ಕಷ್ಟ, ಕಣ್ಣೀರು, ಚಿಂತೆಗಳೇ ಅವಳ ಆಹಾರ. ಇಪ್ಪತ್ತಾರನೆಯ ವಯಸ್ಸಿಗೆ ವಿಧವೆಯಾದ ಇವಳ ಬದುಕು. ಈಗಿನ ಕಾಲದಲ್ಲಿ ಗಂಡಿನ ನೆರವಿಲ್ಲದೆ ಏಕಾಂಗಿಯಾಗಿ ಹೆಣ್ಣು ಮಯರ್ಯಾದೆಯಿಂದ ಜೀವಿಸುವುದು ಕಷ್ಟ! ಅದರಲ್ಲೂ ಬಡತನ–ರೂಪವಿದ್ದರೆ ಇನ್ನೂ ಕಷ್ಟ! ಒಂದೆಡೆ ಜೈಲುವಾಸಿ ಗಂಡನ ಯೋಚನೆ, ಇನ್ನೊಂದೆಡೆ ಮುಕ್ಕಳ ವಿದ್ಯೆ, ಮನೆಯ ಹೊರಲಾರದ ಹೊರೆ, ಊರ ಕಾಮುಕ ಜನರ ಕಾಕದೃಷ್ಟಿ–ಇವೆಲ್ಲ ಸಾವಿತ್ರಿಪಟ್ಟ ಬನ್ನಗಳ ಮುಖ್ಯಾಂಶಗಳಾಗಿವೆ. ಬಾಳುವೆಯ ಈ ರೀತಿಯ ಹೋರಾಟ ಅಸಹಜವಲ್ಲವಾದರೂ, ಸಂತಾಪಪಟ್ಟರೂ, ಒಂದು ರೀತಿಯ ಮನೋವೈಕಲ್ಯ ಆಕೆಯ ಬಗ್ಗೆ ಹಾಗೆಯೆ ಉಳಿಯುತ್ತದೆ. ಆಗಬಹುದಾದ ಘಟನೆ ಸಕ್ಕನ್ನು ನಿವೇದಿಸಬಲ್ಲುದಾದರೂ ವಿಶೇಷ ಕರುಣೆಯನ್ನು ಹುಟ್ಟಿಸದು. ಆಕೆಯ ಗಂಡ ವೆಂಕಟರಾಯ ಸಾಧಿಸಿದ್ದಾದರೂ ಏನು? ಸಾವಿತ್ರಿಯ ವಿವೇಕದ ಮುಂದೆ ವೆಂಕಟರಾಯ ಆ ರೀತಿಯ ವರ್ತನೆಯ ದಾಸನಾಗುವುದು ಆತನ ದೌರ್ಬಲ್ಯ ಮಾತ್ರ ವಲ್ಲ, ಪಾತ್ರನಿರೂಪಣೆಯ ದೌರ್ಬಲ್ಯವು ಕೂಡಾ ಆಗಿರುತ್ತದೆ. ಸಾವಿತ್ರಿಯು, ಮಗಳ ಕಳಿತು ಇಟ್ಟಿರುವ ಅಜಲವಾದ ಪ್ರೀತಿ ಅವಳ ಉಂಠತು ಕಟ್ಟಿ ಮಾತು ಕೇಳಿದ ಮಾತ್ರಕ್ಕೆ ಸಹನಾ ಮೂರ್ತಿಯಾದ ಸಾವಿತ್ರಿ ಅಷ್ಟು ನಿಷ್ಠುರವಾಗಿ ಆಡುವಷ್ಟು ನಿಕೃಷ್ಟನೆ? ಅಷ್ಟು ವರ್ಷದ ಬಾಳುವೆಯಲ್ಲಾಗಿದೆ ಮಾನಸಿಕ ಕ್ರಾಂತಿ ಸಾವಿತ್ರಿಯಲ್ಲಾಗಿದೆ ಸಹಜ; ಆದರೆ ವೆಂಕಟರಾಯ ಜೈಲಿನಲ್ಲಿರುವ ವೇಳೆ ತನ್ನ ಮೇಲೆ ಕೈ ಮಾಡಬಂದ ಮದಾಂಧರ ವರ್ತನೆಯಿಂದಲಾದೂ ಊರಿನ ಬೀಗಪಿಲ್ಲದ ಬಾಯಿಗಳ ಕೆಟ್ಟ ಮಾತಿನಿಂದಲಾದರೂ ಮಗಳ ಕುಟುಂಬ ಉಡುವಾಗ ಯೋಚಿಸುವಷ್ಟು ವಿವೇಕವನ್ನಳವದ್ದು ನೋಡಿಗವಾದ ಸಂಗತಿ! ಮುಕ್ತಾಯಗೊಳಿಸುವಲ್ಲಿ ಕೃತ್ರಿಮ ಬದಲಾವಣೆ ಕಾಣುತ್ತದೆ.

ಜೀವಕ್ಕನ ಪಾತ್ರಸೃಷ್ಟಿ ಸಶಕ್ತಪೂರ್ಣವಾದುದು. ತಾಯಿಯ ಕರುಳಿನ ಪಿಡಿತ ಆಕೆಯಲ್ಲಿ ಕಂಡಷ್ಟು ಸಾವಿತ್ರಿಯಲ್ಲಿ ಕಾಣುವುದಿಲ್ಲ. ನಮ್ಮ ದೇಶದ ಹಲವು ತತ್ವಗಳ ಸಮನ್ವಯವನ್ನೂ ಒಬ್ಬರನ್ನೊಬ್ಬರು ತಿಳಿದುಬಾಳುವ ಮಾನವೀಯತೆಯನ್ನೂ ಜೀವಕ್ಕನ ಪಾತ್ರದಲ್ಲಿ ಚಿತ್ರಿಸಿರುತ್ತಾರೆ ಲೇಖಕರು. ತಾಯಿ ಕರುಳಿನ ಉತ್ತಮ ಆದರ್ಶವೆಂದರೆ ಜೀವಕ್ಕನ ಜೀವನ ಸೃಷ್ಟಿ.

೨ 'ವಿಚಾರವಾಣಿ' (ವಾರಪತ್ರಿಕೆ) ಸಂಪಾದಕರು: ಶ್ರೀ ಶಿವರಾಮು ಕಾರಂತರು ಹರ್ಷ ಪ್ರಿಂಟಿಂಗ್ ಪ್ರೆಸ್, ಪುತ್ತೂರು, ವ. ಕ. ವಾ. ಚಂದಾ ರೂ. ೩–೦–೦. ಬಿಡಿಪ್ರತಿ ಆ. ೦–೨–೦

ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕಾರಂತರ ಸಂಪಾದಕತ್ವದಲ್ಲಿ ಹೊರಟ ನೂತನ ವಾರಪತ್ರಿಕೆ ವಿಚಾರವಾಣಿ. ಕನ್ನಡದಲ್ಲೊಂದು ಆದರ್ಶ ವಾರಪತ್ರಿಕೆಯಾಗಬೇಕೆನುವ ನಿರೀಕ್ಷೆಕರಿಗೊಂದು ಮಾದರಿ ಪತ್ರಿಕೆಯಿದು. ವಿಷಯ ವೈವಿಧ್ಯತೆಗಳಿಂದಲೂ, ರಾಜಕೀಯ, ವಿಜ್ಞಾನ, ಅಂತರರಾಷ್ಟ್ರೀಯ ಮುಂತಾದ ವಿಚಾರಗಳಿಂದಲೂ, 'ತಪ್ಪಿದ ಲೇಖನ' ಎನುವ ಆತ್ಯಂತ ಸ್ವಾರಸ್ಯವಾದ ಸಂಗ್ರಹಗಳಿಂದಲೂ ಸಂಚಿಕೆ ಸಂಗ್ರಾಹ್ಯವಾಗಿರುತ್ತದೆ. ನೂತನ ಪತ್ರಿಕೆಗಳಿಂದ ಭಿನ್ನ ಬೇಸರಗೊಂಡರೂ ಕಾರಂತರ ವಿಚಾರವಾಣಿ ಅಶಾದಾಯಕ ಪತ್ರಿಕೆಯಾಗಬಹುದು.

೩ ಬಾಲವೀರ (ಹಸ್ತಲಿಖಿತ ಪತ್ರಿಕೆ) ಉಡುಪಿ ಬೋರ್ಡು ಹೈಸ್ಕೂಲಿನ VI ಫಾರ್ಮಿನ ವಿದ್ಯಾರ್ಥಿಗಳ ಸಂಚಿಕೆ. ಸಂಪಾದಕರು: ಶ್ರೀಗಾರ ನೇಟ್ ರೇಗೋ.

ಉಡುಪಿಯ ಬೋರ್ಡು ಹೈಸ್ಕೂಲಿನ ಆರನೆಯ ಈಯತ್ತೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಹಸ್ತಲಿಖಿತ ಪತ್ರಿಕೆ. ಪಂಡಿತ ಜವಾಹರಲಾಲ ನೆಹ್ರೂ, ನನ್ನ ಮೊದಲ ಭಾಷಣ, ಪೋಸ್ಟ್ ಪೇದೆ ಬಾಪಯ್ಯ,(ಹಿಂದಿಯಲ್ಲಿ) ನಾ ಕಂಡ ಕಾರಂತ, The two Brothers ಮುಂತಾದ ಉತ್ತಮ ಬಂಧಗಳಿವೆ. ಚಿತ್ರಕಾರರಾದ ಜನಬಾ ಅಮೀರುದ್ದೀನ್ ತನ್ನ ಕಲಾ ನೈಪುಣ್ಯತೆಯಿಂದ ಸಂಚಿಕೆಯನ್ನು ಅತ್ಯಂತ ಸುಂದರವನ್ನಾಗಿ ಮಾಡಿರುತ್ತಾರೆ. ಈಚೆಗೆ ಅಚ್ಚಾಗಿ ಪ್ರಕಟಗೊಂಡ ನೂತನ ಪತ್ರಿಕೆಗಳಿಗಿಂತ ವಿದ್ಯಾರ್ಥಿ ಮಿತ್ರರ ಈ ಸಂಚಿಕೆ ಹೆಚ್ಚು ಮುಗ್ಧವಾಗಿದೆ. ಚಿತ್ರಕಾರರಾದ ಅಮೀರುದ್ದೀನರಿಗೆ ಚಿತ್ರಕಲೆಯಲ್ಲಿ ಉಜ್ವಲ ಭವಿಷ್ಯವಿದೆ.

– ಎಸ್ಸೆಲ್

ಸ್ವೀಕಾರ-ವಿಮರ್ಶೆ

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತಕೋಪಗದ ಉಪದ್ರವಗಳಾದ– ಉದರಶೂಲೆ, ಕಟ್ಟಿಶೂಲೆ, ಪೈತ್ಯೆಗಳಲ್ಲಿ ನೋವು, ಜಡತ್ವ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)
ಪೋ ಕುಂಜಾಲು, ದ. ಕ.
ಇವರ **'ಧನ್ವಂತರೀ ಮಾತ್ರೆ'ಗಳು ಮಾತ್ರ.**

ಕೇವಲ ನಾಲ್ಕಾಣೆಯ ಅಂಚೆಚೀಟನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅದರ ಶೀಘ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.

ಗೊನೋರಿಯಾ ಪರಮಾಘೋರ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಕರೀರದಿಂದ ಕೇವ ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಕರೀರದಿಂದ ಬಾವು, ಶರೀರದ ಹೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತಲ್ಲಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಡುಬು ಅಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುನದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಸಾರ, ಈಂಬಳಕಾಯಿ, ಒಳ್ಳೆಜ್ಜಿ ಬಿಡಬೇಕು.

ಬಾಟ್ಲಿ ೦ಕ್ಕೆ ೫ರೂ. ಪೋಸ್ಟ ಚಾರ್ಜ ೦ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:–ಬಾಗಲಕೋಟೆ ಫಾರ್ಮಸಿ, ಧಾರವಾಡ:–ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಕೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

ಪ್ರಕಟಣೆ.

ಉಡ್ಪಿ ತಾಲೂಕು–ಮೂಡಬೆಟ್ಟು ಗ್ರಾಮದಲ್ಲಿರುವ ಕಲ್ಯಾಣಿ ಬಾಯಿಯವರ ಮ್ಯಾನೆಜ ಮೆಂಟಿಗೆ ಸೇರಿದ ಶಕುಂತಲಾ | ಸುರೇಶ 1 ಕೂಡಾ 2 ಜನರ ಗಾರ್ಡಿಯನ್ ಆಪ್ತಮಿತ್ರನವರ ಮಗ– ಯು. ಬಿ. ಶ್ರೀನಿವಾಸ ಪಂಡಿತನು– ಈ ಮೂಲಕ ಸಮಸ್ತ ಜನರಿಗೆ ತಿಳಿಸುವದೇನಂದರೆ–

ನನ್ನ ಅಕ್ಕ ಇತ್ತಲಾಗೆ ಸ್ವರ್ಗಸ್ಥಳಾದ–ಕಲ್ಯಾಣಿ ಬಾಯಿಯವರ ಸ್ವಂತ ಕ್ರಯದ ಬಾಬ್ತು ಉಡ್ಪಿ ತಾಲೂಕು ಮೂಡಬೆಟ್ಟು ಗ್ರಾಮದ ಸ. ನಂ. I/11 ಪುಂಜ ಎಕ್ರೆ 1-68 ರ ಆಸ್ತಿಗೆ ಸದ್ರಿ ಮ್ಯಾನರ ಶಕುಂತಲ ಕೂಡಾ 2 ಜನರು–ವಾರಿಸುದಾರರಾಗಿಯೂ ಹಕ್ಕುದಾರರಾಗಿಯೂ ಇರುತ್ತಾರೆ. ಸದ್ರಿ ಮ್ಯಾನರರು ಈಗ ನನ್ನ ಸಂರಕ್ಷಣೆಯಲ್ಲಿದ್ದು ಜೀವಿಸಿ ಬರುತ್ತಾರೆ. ನನ್ನ ಅಣ್ಣ ಸೀತಾರಾಮ ಎಂಬವರು ತಾನು ಸದ್ರಿ ಮ್ಯಾನರರ ಗಾರ್ಡಿಯನ್ ಎಂತ ಹೇಳಿ ಸದ್ರಿ ಮ್ಯಾನರರ ಹಕ್ಕಿನ ಆಸ್ತಿಯನ್ನು ಯಾವುದು ವ್ಯಕ್ತಿಗೆ ಪರಾಧೀನ ಮಾಡುವ, ಆಲೋಚನೆಯಲ್ಲಿರುವುದಾಗಿ ತಿಳಿದು ಬಂದದೆ. ಸದ್ರಿ ಸೀತಾರಾಮನವರು ಸದ್ರಿ ಮ್ಯಾನರರ ಗಾರ್ಡಿಯನ್‌ರಲ್ಲಾದ್ರಿಂದ, ಸದ್ರಿ ಮ್ಯಾನರರ ಹಕ್ಕಿನ ಆಸ್ತಿ ಕುರಿತು, ಅವರು ಮಾಡಬಹುದಾದ ಯಾವ ಪರಾಧೀನಗಳು, ಸದ್ರಿ ಮ್ಯಾನರರ ಮೇಲೂ, ಸದ್ರಿ ಮ್ಯಾನರರ ಹಕ್ಕಿನ ಆಸ್ತಿ ಮೇಲೆ ಕೂಡಾ ಬದ್ಧಪಡಿಸತಕ್ಕದ್ದಲ್ಲಾ ಎಂತ ಈ ಮೂಲಕ ಸಮಸ್ತ ಜನರಿಗೆ ತಿಳಿಸೋಣಾಗಿಯದೆ.

U. B. Srinivas.

ಉಡ್ಪಿ, 28-12-1950.

ವಿವಿಧ ಪಾತ್ರೆಗಳು



ಯಾವಕ್ಕೂ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು; ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರುಜುವಾಗಿ ಯೂಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ನಮಗೆ ನಿಮ್ಮ ವರ್ಷಾಭಿನಂದನೆಗಳು. ಈ ವಾರ "ಹಿಂದೂ ಕೋಡಿ"ನ ನಿರ್ಣಯದ ವಿಷಯ ಮಾತಾಡುವ ಎಂಬಿಷ್ಟೆ. ಅದನ್ನು ಈಗಲೇ ಮುಗಿಸಿ ಬಿಡುತ್ತೇನೆ, ನಮ್ಮ ದೇಶದಲ್ಲಿ "ದಾಯಭಾಗ" ಮತ್ತು 'ಮಿತಾಕ್ಷರ' ಎಂಬ ಎರಡು ಕಾನೂನುಗಳು ಹಿಂದುಗಳಲ್ಲಿ ಇವೆ ಎಂದು ಹೇಳಿದ್ದೆ. ಈ ಎರಡು ಕ್ರಮಗಳಲ್ಲಿರುವ ಮುಖ್ಯ ಭೇದವೇನೆಂದರೆ ನಮ್ಮಲ್ಲಿ ಪಿತ್ರಾರ್ಜಿತ ಮತ್ತು ಸ್ವಾರ್ಜಿತ ಎಂಬ ಎರಡು ವಿಧದ ಆಸ್ತಿ ಇದೆಯಲ್ಲವೆ? ತಂದೆ, ಅಜ್ಜ, ಪಿಜ್ಜ— ಇವರಿಂದ ಬಂದ ಆಸ್ತಿ ಪಿತ್ರಾರ್ಜಿತ. ಸ್ವಂತ ಸಂಪಾದಿಸಿದ ಆಸ್ತಿ ಸ್ವಾರ್ಜಿತ ಆಸ್ತಿಯನ್ನು ಒಬ್ಬನು ತನಗೆ ಇಷ್ಟವಿದ್ದಂತೆ ಮಾರಬಹುದು, ದಾನ ಮಾಡಬಹುದು. ವೀಲುಮಾಡಿ ಕೊಡಲೂ ಬಹುದು, ತಂದೆಯು ತನ್ನ ಸ್ವಾರ್ಜಿತ ಆಸ್ತಿಯನ್ನು ಪರಾಧೀನಮಾಡಿದನೆಂದು ಅಕ್ಕಳಿಗೆ ಅಪ್ಪೇ ಪಿಳುವ ಅಧಿಕಾರ ವಿಲ್ಲವಷ್ಟೆ? ಪಿತ್ರಾರ್ಜಿತ ಆಸ್ತಿಯ ಮಟ್ಟಿಗೆ ಹೀಗಲ್ಲ. ಮಿತಾಕ್ಷರ ಕಾನೂನಿನ ಪ್ರಕಾರ ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ತನ್ನ ಮಕ್ಕಳ ಹಿತಕ್ಕೆ ವಿರೋಧವಾಗಿ ಕ್ರಯ, ದಾನ, ವೀಲು ಮೂಲಕ ಪರಾಧೀನ ಮಾಡಿದರೆ ಅದನ್ನು ಆಪ್ಪೇಪಿಸಲಿಕ್ಕೆ ಆ ಕಾಲದಲ್ಲಿ ಜನಿಸಿದ್ದ ಮಕ್ಕಳಿಗೆ ಅಧಿಕಾರವಿದೆ. 'ದಾಯಭಾಗ' ಕ್ರಮದಲ್ಲಿ ಆದರೆ ತಂದೆಯು ತನಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ತನ್ನ ಸ್ವಾರ್ಜಿತ ಆಸ್ತಿಯಂತೆಯೇ ತನಗೆ ಇಷ್ಟಬಂದಂತೆ ಪರಾಧೀನ ಮಾಡಬಹುದು. ಈ ಪರಾಧೀನದಲ್ಲಿ ಆಪ್ಪೇಪಿಸಲಿಕ್ಕೆ ಮಕ್ಕಳಿಗೆ ಅಧಿಕಾರವಿಲ್ಲ. ತನ್ನ ಮಕ್ಕಳಿಗೆ ಆಸ್ತಿಯನ್ನು ಇಡುವುದೂ, ಇಡದಿರುವುದೂ, ತಂದೆಯ ಇಷ್ಟ. ಪಿತ್ರಾರ್ಜಿತ ಆಸ್ತಿಯಲ್ಲಿ ತನ್ನ ಪಾಲು ಬಿಟ್ಟುಕೊಡಬೇಕೆಂದು ಮಗನು ತಂದೆಯ ಕೂಡ ಮಿತಾಕ್ಷರ ಕಾನೂನಿನ ಪ್ರಕಾರ ಪಾಲು ಕೇಳಬಹುದು. ದಾಯಭಾಗದಲ್ಲಿಯಾದರೆ ಮಕ್ಕಳಿಗೆ ಈ ಅಧಿಕಾರವಿಲ್ಲ. ತಂದೆ ತನ್ನ ಆಸ್ತಿಯನ್ನು ಪರಾಧೀನ ಆಥವಾ ವೀಲು ಮಾಡದೆ ಸತ್ತರೆ ಮಾತ್ರ ಗಂಡು ಮಕ್ಕಳಿಗೆ ಪಾಲುಸಿಕ್ಕುತ್ತದೆ.

ಎರಡು ಕ್ರಮಗಳಲ್ಲಿ 'ದಾಯಭಾಗ' ಕ್ರಮವೇ ಸಂ ಎಂದು ನಮ್ಮ ಧುರೀಣರ ಆಭಿಪ್ರಾಯ ಆದುದರಿಂದ ಇನ್ನು ಮೇಲೆ ಈ ದೇಶದಲ್ಲಿ ದಾಯಭಾಗ ಕ್ರಮವೇ ಬರಬೇಕೆಂದು ಈ ಮಸೂದೆಯಲ್ಲಿದೆ. ಮಿತಾಕ್ಷರ ಮತ್ತು ದಾಯ.ಭಾಗ— ಈ ಎರಡು ಕ್ರಮಗಳಲ್ಲಿಯೂ ತಂದೆ ಸತ್ತ ಮೇಲೆ ಆತನ ಆಸ್ತಿ ಆತನ ಗಂಡು ಮಕ್ಕಳಿಗೆ ಮಾತ್ರ ಹೋಗುತ್ತದೆ ವಿನಾ ಹೆಣ್ಣು ಮಕ್ಕಳಿಗೆ ಏನೂ ಹಕ್ಕು ಇರುವುದಿಲ್ಲ. ಇನ್ನು ಮೇಲೆ ತಂದೆಯ ಆಸ್ತಿಯಲ್ಲಿ ಮಗನಂತೆಯೇ ಮಗಳಿಗೂ ಸರಿಯಾದ ಪಾಲು ಸಿಗಬೇಕೆಂದು ಈ ಮಸೂದೆಯಲ್ಲಿದೆ. ಹೆಣ್ಣಿಗನಂತೆಯೇ ಮಗಳಿಗೂ ಸರಿಯಾದ ಪಾಲು ಕೊಡಬೇಕೆಂಬುದು ಸರಿಯಲ್ಲ. ಹೀಗೆ ಮಾಡಿದರೆ ಆಸ್ತಿ ತುಂಡು ತುಂಡಾಗಿ ಹೋಗುತ್ತದೆ ಎಂದು ಕೆಲವರ ಆಕ್ಷೇಪವಿದೆ. ಈ ವಿಷಯದಲ್ಲಿ ವಾದ ವಿವಾದಗಳು ಎದ್ದು ಮಸೂದೆ ಈಗ ಸ್ವಲ್ಪ ದುರಸ್ಥಿಯಾಗಿದೆ. ತಂದೆ ಸಾಯುವಾಗ ಅವಿವಾಹಿತಳಾಗಿರುವ ಮಗಳಿಗೆ ಮಗನ ಅರ್ಧಾಂಶ ಪಾಲು. ವಿವಾಹಿತಳಾಗಿರುವ ಮಗಳಿಗೆ ಮಗನ ಕಾಲುಂಶ ಹಕ್ಕು ಕೊಡಬಹುದೆಂದೂ; ತಾಯಿಯ ಆಸ್ತಿಯಲ್ಲಿ ಮಗನಂತೆಯೇ ಮಗನಿಗೂ ಹಕ್ಕು ಇಡಬೇಕೆಂತಲೂ ಮಸೂದೆ ದುರಸ್ತಿಯಾಗಬಹುದೆಂದು ಕಾಣುತ್ತದೆ.

ಹೀಗೆ ಅಲ್ಪ ಸ್ವಲ್ಪ ಬದಲಾವಣೆಗಳು ಆಗ ಬಹುದೇ ವಿನಾ ಹಿಂದೂ ಕೋಡೇ ಬೇಡವೆನ್ನುವ ಕೆಲವರ ಸಾಧನೆ ನಡೆಯಲಾರದು. ಕೆಲವು ತಿಂಗಳುಗಳಲ್ಲೇ ಭಾರತದ ಎಲ್ಲಾ ಕಡೆಗಳಲ್ಲಿಯೂ ಈ ಪ್ರಕಾರ ಹಿಂದೇ ರೀತಿಯ ಕಾನೂನಿಗೆ ಎಲ್ಲಾ ಹಿಂದುಗಳೂ ಸಮ್ಮತಿಕೊಡುವ ಸಂಭವವಿದೆ.

ನಮ್ಮ ಜಿಲ್ಲೆಯಲ್ಲಿ ಮತ್ತು ಕೇರಳದಲ್ಲಿರುವ "ಅಳಿಯ ಸಂತಾನಿಗರು" ಮಾತ್ರ ಈ ಹಿಂದೂ ಕೋಡಿನ ಒಳಗೆ ಸೇರಲಿಕ್ಕೆ ಸಮ್ಮತಿ ಪಡುವುದಿಲ್ಲ. ಭೂಲೋಕದ ಎಲ್ಲಾ ಕಡೆಗಳಲ್ಲಿರುವ ಹಿಂದುಗಳು ಮತ್ತು ಇತರ ಮತದವರೂ ಕೂಡಾ ಮಕ್ಕಳ ಕಟ್ಟನ್ನೇ ಅನುಸರಿಸುತ್ತಾರಾದರೂ ನಮ್ಮ ಅಳಿಯ ಸಂತಾನಿಗರಿಗೆ ಇಪ್ಪತ್ತನೆ ಶತಮಾನದಲ್ಲೂ ಅನೈಸರ್ಗಿಕವಾದ ಮತ್ತು ಅಸ್ವಭಾವಿಕವಾದ ಇನ್ನೊಂದು ಕಟ್ಟು ಬೇಕಾಗಿದೆ. ಈ ಕಟ್ಟನ್ನು ಅಳಿಯ ಕಟ್ಟೆಂದು ಯಾರು ಕರೆದರೋ ನನಗರಿಯದು. ಕುಟುಂಬದಲ್ಲಿ ಗಂಡು ಮಕ್ಕಳಿಗೆ ಮಾತ್ರ ಹಕ್ಕಿರಬೇಕು; ಹೆಣ್ಣು ಮಕ್ಕಳಿಗೆ ಹಕ್ಕಿರ ಕೂಡದು ಎನ್ನುವವರು ತಮ್ಮ ಕಟ್ಟನ್ನು 'ಮಗ್ಗುಳ ಕಟ್ಟೆ'ಎಂದು ಕರೆಯುವಂತೆಯೇ ಕುಟುಂಬದಲ್ಲಿ ಆಸ್ತಿಯ ಹಕ್ಕು ಸಂಪೂರ್ಣ ಹುಡುಗಿಯರಿಗೆ ಇಂಬಿಕ್ಕುಹುಡುಗರಿಗೇನೂ ಹಕ್ಕಿರ ಬಾರದು ಎನ್ನುವವರು ತಮ್ಮ ಕಟ್ಟನ್ನು 'ಅಳಿಯ ಕಟ್ಟೆ'ಎಂದು ತಪ್ಪಾಗಿ ಕರೆಯುತ್ತಿದ್ದಾರೆ. ಸಹಜವಾಗಿ ನೋಡಿದರೆ ಅಳಿಯ ಕಟ್ಟನ್ನಲ್ಲಿ ಹುಡುಗರಿಗೆ ಏನು ಅಧಿಕಾರವಿದೆ? ಕುಟುಂಬದಲ್ಲಿ ತಾನು ಅತ್ಯಂತ ಹಿರಿಯನಾಗಿದ್ದರೆ ತನ್ನ ತಂಗಿಯ ಮಕ್ಕಳಿಗಾಗಿ ಆಸ್ತಿಯ ಅಡಳಿತೆಯನ್ನು ನೋಡುವ ಹಕ್ಕು, ಕಿರಿಯನಾಗಿದ್ದರೆ ತನ್ನ ಜೀವಮಾನವೆಲ್ಲಾ ಅಶನಾರ್ಥಕ್ಕಾಗಿ ಹೋರಾಡುವ ಹಕ್ಕು; ವಿನ ಹ ಸ್ವತಂತ್ರವಾದ ಹಕ್ಕು ಎಲ್ಲಿದೆ? ಮಕ್ಕಳ ಕಟ್ಟನ್ನಲ್ಲಿ ಹುಡುಗಿಯರು ತಮಗೆ ಹುಡುಗರಂತೆಯೆ ಸರಸಮಾನವಾದ ಹಕ್ಕು ಸಿಗಬೇಕೆಂದು ದೇಶದಲ್ಲಿ ಹೋರಾಡುತ್ತಿರುವಾಗ ನನ್ನ ಜಿಲ್ಲೆಯ ಅಳಿಯ ಸಂತಾನದ ಹುಡುಗರು ಹುಡುಗಿಯರಂತೆ ತಮಗೂ ಸರಿಸಮಾನವಾದ ಹಕ್ಕು ಕೊಡಿರೆಂದು ಕಾದಾಡುವ ಕಾಲಬಂದಿದೆ. ಹುಡುಗಿಯರಿಗೆ ಸೂಜಿ ಆಸ್ತಿ ದೊರೆತರೆ ಅವರು ಅದನ್ನು ಸ್ವೇಚ್ಛೆಯಾಗಿ ಹಾಳುಮಾಡಿಬಿಡಬಹುದು, ಎಂದು ಕೆಲವರು ಹೇಳುವುದುಂಟು. ಅಳಿಯ ಕಟ್ಟಿನಲ್ಲಿ ಹುಡುಗರಿಗೆ ಆಸ್ತಿಯಲ್ಲಿ ಹಕ್ಕು ಕೊಟ್ಟರೆ ಅವರು ಅದನ್ನು ಸ್ವೇಚ್ಛೆಯಿಂದ ಹಾಳುಮಾಡಿ ಬಿಡಬಹುದು ಎಂದೂ ಹೇಳಬಹುದೇ?

ಹಿಂದೂ ಕೋಡು ಮಸೂದೆಯಲ್ಲಿ ಇನ್ನೂ ಅನೇಕ ವಿಷಯಗಳು ಇವೆ. ಆದರೆ ಅದರಲ್ಲಿರುವ ಮುಖ್ಯ ವಿಷಯಗಳು ಇಷ್ಟೆ. ತಂದೆ ಮತ್ತು ತಾಯಿ— ಇವರ ಆಸ್ತಿ ಅವರ ನಂತರ ಅವರ ಮಕ್ಕಳಿಗೆ ಸಿಕ್ಕಬೇಕು. ಅಂದರೆ ಗಂಡು ಆಥವಾ ಹೆಣ್ಣು ಎಂಬ ಭೇಧವಿಲ್ಲದೆ ಎಲ್ಲರಿಗೂ ಸರಿಸಮಾನವಾಗಿ ಸಿಕ್ಕಬೇಕು ಎಂಬುದೇ ಇದರ ಮುಖ್ಯ ತತ್ವ. ಒಂದಾನೊಂದು ಕಾಲದಲ್ಲಿ ನಾವು ಅನೇಕರು ಒಂದೇ ಕುಟುಂಬದಲ್ಲಿ ಏಕಪಾಕದಲ್ಲಿ ಇರುತ್ತಿದ್ದೆವಾದರೂ ಇನ್ನು ಅದು ಸಾಧ್ಯವಾಗಲಿಕ್ಕಿಲ್ಲ. ಒಬ್ಬನು ತನ್ನ ಹೆಂಡತಿ ಮಕ್ಕಳೊಡನೆ ತಾನು ಸ್ವತಂತ್ರಿಕ ಗೃಹಕೃತ್ಯ ಮಾಡಿ ಇರುವೆನೆನ್ನುವಾಗ ಅದಕ್ಕೆ ಯಾರೂ ಆಕ್ಷೇಪಿಸುವುದು ಸರಿಯಲ್ಲ. ಸ್ವಾಧಾವಿಕವಾದ ಕ್ರಮಕ್ಕೆ ವಿರೋಧವಾಗಿ ಇರಬೇಕೆಂದು ಯಾವ ಕಾನೂನೂ ನಿರ್ಬಂಧಿಸಲಾರದು. ತಂದೆತಾಯಿಗಳಿಗೆ ಎಲ್ಲಾ ಮಕ್ಕಳಿಗೂ ಒಂದೇ ರೀತಿ ಪ್ರೇಮವಿದೆ ಎಂದು ಸರಕಾರದವರು ಯೋಚಿಸುವುದರಲ್ಲಿ ತಪ್ಪೇನಿದೆ? ಒಬ್ಬನಿಗೆ ತನ್ನ ಆಸ್ತಿಮೇಲೆ ಸಂಪೂರ್ಣ ಆಧಿಕಾರವಿದೆ. ತನ್ನ ಎಲ್ಲಾ ಮಕ್ಕಳಿಗೆ ಒಂದೇ ರೀತಿ ತನ್ನ ಆಸ್ತಿಯಲ್ಲಿ ಹಕ್ಕಿರಕೂಡದೆನ್ನುವ ತಂದೆಯು ಅವನು ಜೀವಂತನಾಗಿರುವಾಗಲೇ ತನ್ನ ಆಸ್ತಿ ತನ್ನ ನಂತರ ಯಾರಿಗೆ ಸಿಗಬೇಕೆಂಬ ವೀಲು ಮಾಡಿರಬಹುದು. ವೀಲು ಮಾಡದೆ ಬಿಟ್ಟಿರುವ ಅವನ ಆಸ್ತಿಯು ಅವನ ಎಲ್ಲಾ ಮಕ್ಕಳಿಗೆ ಗಂಡು ಹೆಣ್ಣು ಎಂಬ ಭೇದವಿಲ್ಲದೆ ಸರಿಸಮಾನವಾಗಿ ಹಂಚಿದರೆ ಅದು ಅನ್ಯಾಯವಾಗಲಾರದು.

ಸ್ತ್ರೀಯರಿಗೆ ಆಸ್ತಿಯನ್ನು ಅನುಭವಿಸುವ ಮತ್ತು ಇಟ್ಟುಕೊಳ್ಳುವ ಶಕ್ತಿ ಇಲ್ಲವೆಂದು ಹೇಳುವ ಕಾಲ ಎಂದೋ ಹೋಗಿದೆ. ಅವರೇ ಸ್ವಂತಕ್ಕಾಗಿ ಪಡೆದ ಆಸ್ತಿಯನ್ನು ಅವರು ಸ್ವೀಧನವೇ ಅನುಭವಿಸುತ್ತಾರೆ. ಆಗಷ್ಟೆ ಬಿದ್ದಾಗ ದನ್ನು ಪರಾಧೀನ ಮಾಡುತ್ತಾರೆ. ಗಂ ನು ವಿಭಕ್ತನಾಗಿದ್ದರೆ ಅವನು ಸತ್ತನಂ ರ ಅವನ ಆಸ್ತಿಯನ್ನು ವಿಧವೆಯೇ ಅ ಭವಿಸಿ ಬರುತ್ತಾಳೆ. ಈಗ ಗಂಡ ಅವಿ ಕ್ತನಾಗಿದ್ದ ಸತ್ಯರೂ ಅವನ ಪಾಲು ಕುಟುಂಬದವರಿಂದ ಪ್ರತ್ಯೇಕಪಡಿಸಿಕೊಡು ಅನುಭವಿಸುವ ಹಕ್ಕು ವಿಧವೆಗೆ ದಿದೆ. ಗಂಡು ಮಕ್ಕಳಿಲ್ಲದೆ ಸತ್ಯವಳು ಅವನ ವಿಧವೆಯು ನಂತರ ಹೆಮಕ್ಕಳಿಗೆ ಬರುತ್ತದೆ. ಆದನ್ನು ಅನುಸುವ ಮತ್ತು ಆವಶ್ಯವಿದ್ದರೆ ಪರಾಮಾಡುವ ಅಧಿಕಾರ ಮಗಳಿಗೆ ಇದೆ. ಗೆಲ್ಲಾ ಆಸ್ತಿ ಬಂದರೆ ಅನುಭವಿಸ ಸ್ತ್ರೀಯು ತಂದೆಯು ಆಸ್ತಿ ಪಾಲಿಸಿಲ್ಲದಿದರೆ ಅದನ್ನು ಅವಳು ಅನುಭವಿಸಲೆಂದು ಹೇಗೆ ಹೇಳಬಹುದು? ಇನ್ನು ಯಾರು ಪುರುಷರಿಗಿಂತ ಅವಿದ್ಯಾವಂತರೆಂದು ಎಂದೆನ್ನಬಹುದೇ? ಕ್ರಮೆ ವಿದ್ಯೆ ಬುದ್ಧಿವಂತಿಕೆ ಇವುಗಳಲ್ಲಿ ಪುರುಷರಿಗಿಂತ ಸ್ತ್ರೀಯರು ಬಹಳ ಹಿಂದೆಂಬುದು ಸ್ಪಷ್ಟವಿದೆ. ಮಕ್ಕಳ ಕಟ್ಟು ಮುರುಷರಷ್ಟೇ ಹೆಕ್ಕು ಸ್ತ್ರೀಯರಿಗೂ ಬೇಕೆನ್ನುವಾಗ ಅಳಿಯಕಟ್ಟಿನಲ್ಲಿ ಸ್ತ್ರೀಯರಷ್ಟೇ ಹೆಕ್ಕು ಪುರುಷರಿಗೂ ಇರಬೇಕು ಸಾಧಿಸುವುದು ಅವಶ್ಯವಿಲ್ಲವಷ್ಟೆ.

ಈ ರೀತಿ ಹಿಂದೂ ಕೋಡು ಕಾನೂನಾದರೆ ಸ್ತ್ರೀ ಪುರುಷರ ಜೀವನದಲ್ಲಿ ನೆಲ್ಲಾ ಸುಧಾರಣೆಗಳಾಗಲಿವೆ ಎಂಬ ಬರುವ ವಾರದ ಚರ್ಚೆಯ ವಿಷಯ. ನು ನನ್ನ ಕ್ರಮದಲ್ಲಿ ವಿಚಾರಣೆ ಅವಿಲ ಬರೆದಿಕೊಂಡು. ಹೋಗುತ್ತೆ ಈ ವಿಚಾರದಲ್ಲಿ ವಾಚಕರಿಗೆ ಏನಾ ಸಂದೇಹಗಳಿದ್ದರೆ ಅವರು ಕೇಳಿಬಹುದು ವತ್ರ ಬರೆಯುವುದಾದರೆ 'ಸ್ತ್ರೀ ಯು. ೦೦ ನವಮ್ಯಾಗ ಉಡುಪಿ' ಎಂದು ಸಕೊಟ್ಟು ಬರೆಯಿರಿ. ವಾಚಕರು ಪತ್ರ ಬರೆಯುತ್ತಾ ಇದ್ದರೆ ನನಗೂ ತೋಚಿ ನನ್ನ ಹೆಚ್ಚಿಯನ್ನು ಅಭಿಯಂತ ಓದುವವರಿದ್ದಾರೆಂದು. ನೀವು ನನಗಾಗಿ ಪ್ರಶ್ನೆ ಕೇಳಬೇಕೆಂ ಪ್ರಶ್ನೆ ಕೇಳುವವರ ಹೆಸರು ವಿಳಾಸ ಪೊಸಲಾರೆನೆಂದು ಮೊದಲೇ ಹೇಳಿದ್ದೆ ವಿಷಯ ತಿಳಿಯಬೇಕೆಂದಿರುವವರು ಶ್ನೆ ಕೇಳಿದರೆ ನಾನು ಹೊಸ ವಿಷಯ ನನ್ನು ಹುಟ್ಟಿ ಮುಂದುವರಿಸಬೇಕೆಂ ವವರು ಅದನ್ನೂ ತಿಳಿಸಬಹುದು

ಪತ್ರಿಕೆಯಲ್ಲಿ ವಿಚಾರದೊಡನೆ ವಿ ದ್ಯೂ ಇರಬೇಕೆಂದು ಒಬ್ಬ ಸ್ನೇಹ ಸೂಚಿಸಿರುವರು. ಇರಲಿ ನೋಡುತ್ತೆ ದೇವರು ನಮ್ಮನ್ನು ನಡೆಯಿಸಲಿ.

ಶ್ರೀನಿವಾಸ. ನಮಸ್ಕಾರ.

ಸ್ನೇಹಿಯರಲಿ.

ವಾರದ ಪರಿಚಯ

ಲಯಾ. ವಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾವಹಾರಿಕವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಮ್ಮ ಸ್ನಾನ, ಊಟ, ಉಪಹಾರ, ವೈರಕ್, ಕಲಿಸಿ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ದ್ರಾಕ್ಷಾಪಾಕ ಅಡಿಗೆ, ತಂಡಿತಿನಸು, ಇವುಗಳ ರುಚಿಯನು ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

೧ ತಾಯಿಯ ಕರುಳು—ಲೇಖಕರು: ಶ್ರೀ ಅ. ನ. ಕೃಷ್ಣರಾಯರು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು—೩. ಬೆಲೆ ರೂ. ೪–೧೭–೦.

ಹೆಂಗುಸಿನ ಜೀವನದ ನಾನಾ ಮುಖದ ಕಷ್ಟಕಾರ್ಪಣ್ಯಗಳ ಚಿತ್ರಣವೊಂದನ್ನು ಶ್ರೀ ಅ. ನ. ಕೃಷ್ಣರಾಯರು 'ತಾಯಿಯ ಕರುಳ' ನಲ್ಲಿ ನೀಡಿದ್ದಾರೆ. ತಾಯಿಳರುಳಿನಲ್ಲಿ ಪೆಚ್ಚು ಬೇತಾಂಶಂಶ ಯಾವುದೆಂಬುದು ಕೊಂಚ ಸಮಸ್ಯಾಸ್ಪದ ವಿಚಾರ. ಕಥಾವಸ್ತುವಾದರೂ ನವೀನವಲ್ಲ. ಸುಮಾರು ಅರ್ಧ ಶತಮಾನದಿಂದ ನ್ನೋದುವ ವೇಳೆಗೆ ಕೇವಲ ಮಾತು ಪ್ರತಿ ಮಾತುಗಳ ಸ್ಪರಸ ಸಂಘಾಷಣೆಗಳು ಬೇಸರ ವನ್ನು ತರುತ್ತವೆ. ಆದರೆ–ಕೊನೆಯ ಭಾಗದಲ್ಲಿ ನಾವು ಹಲವು ಸನ್ನಿವೇಶದಲ್ಲಿ ಸಾವಿತ್ರಿಯ ಪಾಡಿಗಾಗಿ ಕಂಬನಿಗರಿಸುತ್ತೇವೆ, ಪುಣ್ಯಾ ಸಾಧ್ವಿಯೂ, ಆದರ್ಶ ಮಹಿಳೆಯೂ ಆದ ಜೀವಕ್ಕನ ಜೀವನ ಸಾಫಲ್ಯವನ್ನು ಕಂಡು ಬೆರಗಾಗುತ್ತೇವೆ! ಸಾವಿತ್ರಿಯ ಪಾಡನ್ನು ನೆನೆದಾಗ ಈಗಿನ ಪಾತಾವರಣದಲ್ಲಿ ಹೆಣ್ತಾದವಳು ಇಷ್ಟಕ್ಕೂ ಸಂಸ್ಕಾರಾಯ ಶರಣಾಗಿರುವುದೇ ಎಂದು ತೋರುತ್ತದೆ. ಅಂತೆಯೆ ಜೀವಕ್ಕ ನಂತಹ ಮಹಾ ಸತೀಮಣಿ,ಪುಣ್ಯಸ್ತ್ರೀ ಇನ್ನು ತ್ರಿಸಿಯ ಶತಮಾನದಲ್ಲೂ ಇರಬಹುದೇ ಎನ್ನುವ ಶಂಟೆ ಮೂಡುತ್ತದೆ. ಅಂದರೆ ಇಲ್ಲಿ ಕತೆ ಆದರ್ಶವಲ್ಲ; ವೈಕ್ತಿಗವಾದ ಜೀವನ ಸಾಫಲ್ಯ ಮುಖ್ಯ!

ಸಾವಿತ್ರಿ ತಂದೆ ತಾಯಿಗಳಿಲ್ಲದ ತಬ್ಬಲಿ. ಲಕ್ಷ್ಮೀನಾರಾಯಣಪ್ಪನವರ ಸಾಕು ಮಗಳು. ವೆಂಕಟರಾಯನಿಗೆ ಎರಡನೆಯ ಹೆಂಡತಿಯಾಗಿ ಹೋದದ್ದು ಸಾಕು ತಾಯಿ ವೆಂಕಮ್ಮನವರ ಕೈವಾಡದಿಂದಲೇ. ಇಲ್ಲದಿದ್ದರೆ ಇಂತಹ ಸ್ಪುರದ್ರೂಪಿಗೆ ವೆಂಕಟರಾಯನಿಗಿಂತ ಮಿಗಿಲಾದ ಗಂಡು ಸಿಗಬಹುದಿತ್ತು. ವೆಂಕಟರಾಯನಿಂದ ಸಾವಿತ್ರಿಗೆ ಸುಖವಾಗಲಿಲ್ಲ. ಪತಿಯೇ ದೇವರೆಂದು ನಂಬಿದ ಆ ಮುಗ್ಧಳಿಗೆ ಆತನೇ ಸರ್ವಸ್ವ. ಆದರೆ ವೆಂಕಟರಾಯ ಜುಗಾರಿಕೋರ. ಇಸ್ಪೀಟು ಆಟದಿಂದ ಬೇಂಕಿನ ಕ್ಯಾಶಿನಿಂದ 5000ರೂ ತೆಗೆದು ಎರಡೂವರೆ ವರ್ಷ ಜೈಲನ್ನೆನುಭವಿಸಿ ಸಾವಿತ್ರಿಯನ್ನು ಗಂಡಾಂತರಕ್ಕೆ ಕುರುಕಿಸಿದ.

ಸಾವಿತ್ರಿ ತನ್ನೆರಡು ಮಕ್ಕಳನ್ನು ಕಟ್ಟಿಕೊಂಡು ಕಷ್ಟಜೀವನ ನಡೆಸುತ್ತಾಳೆ. ಮಂಡಾವೆಯಾದ ಕೂಡಲೇ ಜೀವಕ್ಕ ನರೆಯವರಾಗಿ ತಾಯಿಯಂತೆ ಕಾಣುತ್ತಾರೆ. ಮತ್ತೆ ಚೊಕ್ಕನ್ನು ಹಾಗೆಯೆ ನೋಡುತ್ತಾರೆ. ವೆಂಕಟರಾಯ ಜೈಲಿಂದ ಬಂದು ಬಹಳಕಾಲ ಬಾಳಲಿಲ್ಲ. ಸಾವಿತ್ರಿಯು ಬೇರೆಯವರ ಚಾಕರಿಯಿಂದ ವಿದ್ಯೆಗೊಟ್ಟು ಮಂದಾವೆ ಮಾಡಿಸಿದ ಮಗ ನರಸಿಂಹ ಹೆಂಡತಿಯ ದಾಸನಾಗಿ ಸಂಪತ್ತಿಗೆ ಮೋಹಗೊಂಡು ತಂಗಿಯನ್ನೂ ತಾಯಿಯನ್ನೂ ತೊರೆದು ಮಾವನ ಮನೆಗೆ ಹೋಗುತ್ತಾನೆ. ಮಗಳು ಪ್ರಾಯಭರಿತೆಯಾದಾಗ ಊರಿನ ಜನ ಕಲೆಗೊಂದು ನೂತನವಾಡಿ ಸಾವಿತ್ರಿಯ ಸಹನೆ ಶೂನ್ಯವಾಗಿ ಕೆಟ್ಟ ಮಾತು ಮಗಳಿಗೆ ಆಡುತ್ತಾಳೆ. ತಾಯಿಯೇ ಸರ್ವಸ್ವವೆಂದು ನಂಬಿದ, ಹೆಣ್ತು ಮಗಳು ಸಚ್ಚಾರಿತ್ರ್ಯಯಾಗಿದ್ದರೂ ಇಂತಹ ಮಾತು ಕೇಳಬೇಕಾಯಿತೇ? ಎಂದು ಜಾವಿಯ ಮುಖವನ್ನು ಕಾಣುವಳು. ಪತಿ, ಮಕ್ಕಳು, ತನಗಿಲ್ಲದ ಮೇಲೆ ಆ ತಾಯಿಗೆ ಏನಾಯಿತೋ– ಏನಾದಳೋ– ಯಾರುಬಲ್ಲ?– ಇದು ಕತೆ.

ಸಾವಿತ್ರಿಯ ಜೀವನದಲ್ಲಿ ಒಮ್ಮೆಯಾದರೂ ಸುಖದ ಕಲ್ಪನೆ ಕೂಡಾ ಕಾಣುವುದಿಲ್ಲ. ಬದುಕಿನುದ್ದಕ್ಕೂ ಕಷ್ಟ, ಕಣ್ಣೀರು, ಚಿಂತೆಗಳೇ ಅವಳ ಆಹಾರ. ಇವೆಲ್ಲಾ ಕ್ಕಾಗಿಯೆ ಇವಳ ಬದುಕು. ಈಗಿನ ಕಾಲದಲ್ಲಿ ಗಂಡಿನ ನೆರವಿಲ್ಲದೆ ಏಕಾಂಗಿಯಾಗಿ ಹೆಣ್ತು ಮರ್ಯಾದೆಯಿಂದ ಜೀವಿಸುವುದು ಕಷ್ಟ! ಅದರಲ್ಲೂ ಬಡತನ–ರೂಪವಿದ್ದರೆ ಇನ್ನೂ ಕಷ್ಟ! ಒಂದೆಡೆ ಜೈಲುವಾಸಿ ಗಂಡನ ಯೋಚನೆ, ಇನ್ನೊಂದೆಡೆ ಮಕ್ಕಳ ವಿದ್ಯೆ, ಮನೆಯ ಹೊರಲಾರದ ಹೊರೆ, ಊರ ಕಾವುಂಡ ಜನರ ಕಾಳಧೃಷ್ಟಿ–ಇವೆಲ್ಲ ಸಾವಿತ್ರಿಪಟ್ಟ ಬನ್ನಗಳ ಮುಖ್ಯಾಂಶಗಳಾಗಿವೆ. ಬಾಳುವೆಯು ಈ ರೀತಿಯು ಹೋರಾಟ ಅಸಹಜವಲ್ಲವಾದರೂ, ಸಂತಾಪಪಟ್ಟರೂ, ಒಂದು ರೀತಿಯ ಮನೋವೈಕಲ್ಯ ಆಕೆಯ ಬಗ್ಗೆ ಹಾಗೆಯೆ ಉಳಿಯುತ್ತದೆ. ಆಗಬಹುದಾದ ಘಟನೆ ಸತ್ಯವನ್ನು ನಿವೇದಿಸಬಲ್ಲುದಾದರೂ ವಿಶೇಷ ಕರುಣೆಯನ್ನು ಹುಟ್ಟಿಸದು. ಆಕೆಯ ಗಂಡ ವೆಂಕಟರಾಯು ಸಾಧಿಸಿದ್ದಾದರೂ ಏನು? ಸಾವಿತ್ರಿಯು ನಿವೇಕದ ಮುಂದೆ ವೆಂಕಟರಾಯು ಆ ರೀತಿಯ ವರ್ತನೆಯ ದಾಸನಾಗುವುದು ಆತನ ದೌರ್ಬಲ್ಯ ಮಾತ್ರವಲ್ಲ. ಪಾತ್ರನಿರೂಪಣೆಯ ದೌರ್ಬಲ್ಯವು ಕೂಡಾ ಆಗಿರುತ್ತದೆ. ಸಾವಿತ್ರಿಯು, ಮಗಳ ಕುರಿತು ಇಟ್ಟಿರುವ ಅಜಲವಾದ ಪ್ರೀತಿ ಅವಳ ಕುರಿತು ಕೆಟ್ಟ ಮಾತು ಕೇಳಿದ ಮಾತ್ರಕ್ಕೆ ಸಹನಾ ಮೂರ್ತಿಯಾದ ಸಾವಿತ್ರಿ ಅಷ್ಟು ನಿಷ್ಠುರವಾಗಿ ಆಡುವಷ್ಟು ನಿಕೃಷ್ಟಳೆ? ಅಷ್ಟು ವರ್ಷದ ಬಾಳುವೆಯಲ್ಲಾಗದ ಮಾನಸಿಕ ಕ್ರಾಂತಿ ಸಾವಿತ್ರಿಯಲ್ಲಾಗಿದೆ ಸಹಜ; ಆದರೆ ವೆಂಕಟರಾಯ ಜೈಲಿನಲ್ಲಿರುವ ವೇಳೆ ತನ್ನ ಮೇಲೆ ಕೈ ಮಾಡಬಂದೆ ಮಂದಾಧರ ವರ್ತನೆಯಿಂದಲಾದೂ ಊರಿನ ಜೀಗವಿಲ್ಲದ ಬಾಯಿಗಳ ಕೆಟ್ಟ ಮಾತಿನಿಂದಲಾದರೂ ಮಗಳ ಕುರಿತು ಆಡುವಾಗ ಯೋಚಿಸುವಷ್ಟು ವಿವೇಕಶೂನ್ಯಳಾದದ್ದು ನೋಚಿಗವಾದ ಸಂಗತಿ! ಮುಕ್ತಾಯಗೊಳಿಸುವಲ್ಲಿ ತೀವ್ರವಾದ ಬದಲಾವಣೆ ಕಾಣುತ್ತದೆ.

ಜೀವಕ್ಕನ ಪಾತ್ರಸೃಷ್ಟಿ ಸಶಕ್ತಪೂರ್ಣವಾದುದು. ತಾಯಿಯ ಕರುಳಿನ ಮಿಡಿತ ಆಕೆಯಲ್ಲಿ ಕಂಡಷ್ಟು ಸಾವಿತ್ರಿಯಲ್ಲಿ ಕಾಣುವುದಿಲ್ಲ.ನಮ್ಮ ದೇಶದ ಹಲವು ತತ್ವಗಳ ಸಮನ್ವಯವನ್ನೂ ಒಬ್ಬರನ್ನೊಬ್ಬರು ತಿಳಿದುಬಾಳುವ ಮಾನವೀಯತೆಯನ್ನೂ ಜೀವಕ್ಕನ ಪಾತ್ರದಲ್ಲಿ ಚಿತ್ರಿಸಿರುತ್ತಾರೆ ಲೇಖಕರು. ತಾಯಿ ಕರುಳಿನ ಉತ್ತಮ ಆದರ್ಶವೆಂದೆನಿ ಜೀವಕ್ಕನ ಜೀವನ ಸೃಷ್ಟಿ.

೨ 'ವಿಚಾರವಾಣಿ' (ವಾರಪತ್ರಿಕೆ) ಸಂಪಾದಕರು: ಶ್ರೀ ಶಿವರಾಮ ಕಾರಂತರು ಹೆಸ್ಪರ್ ಪ್ರಿಂಟಿಂಗ್ ಪ್ರೆಸ್, ಪುತ್ತೂರು, ದೆ. ಕ. ವಾ. ಚಿಂದಾ ರೂ. ೭–೦–೦. ಬಿಡಿಪ್ರತಿ ಆ. ೦–೨–೦

ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕಾರಂತರ ಸಂಪಾದಕತ್ವದಲ್ಲಿ ಹೊರಬರಲಿರುವ ನೂತನ ವಾರಪತ್ರಿಕೆ ವಿಚಾರವಾಣಿ. ಕನ್ನಡದಲ್ಲೊಂದು ಆದರ್ಶ ವಾರಪತ್ರಿಕೆಯಾಗಬೇಕೆಂಬ ನೆನವ ನಿರೀಕ್ಷಕರಿಗೆನೆಂದು ಮಾದರಿ ಪತ್ರಿಕೆಯಿದು. ವಿಷಯ ವೈವಿಧ್ಯತೆಗಳಿಂದಲೂ, ರಾಜಕೀಯ, ವಿಜ್ಞಾನ, ಅಂತರಾಷ್ಟ್ರೀಯ ಮುಂತಾದ ವಿಚಾರಗಳಿಂದಲೂ, 'ತಪ್ಪಿದ ಲೇಖನ' ಎನ್ನುವ ಅತ್ಯಂತ ಸ್ವಾರಸ್ಯವಾದ ಸಂಗ್ರಹಗಳಿಂದಲೂ ಸಂಚಿಕೆ ಸಂಗ್ರಾಹ್ಯವಾಗಿರುತ್ತದೆ. ನೂತನ ಪತ್ರಿಕೆಗಳಿಂದ ಜನ ಬೇಸರಗೊಂಡಿರೂ ಕಾರಂತರ ವಿಚಾರವಾಣಿ ಆಶಾದಾಯಕ ಪತ್ರಿಕೆಯಾಗಬಹುದು.

೩ ಬಾಲವೀರ (ಹಸ್ತಲಿಖಿತ ಪತ್ರಿಕೆ) ಉಡುಪಿ ಬೋರ್ಡ್ ಹೈಸ್ಕೂಲಿನ VI ಫಾರ್ಮಿನ ವಿದ್ಯಾರ್ಥಿಗಳ ಸಂಚಿಕೆ. ಸಂಪಾದಕರು: ಶ್ರೀಗಾರ ನೇಟ್ ರೇಗೋ.

ಉಡುಪಿಯ ಬೋರ್ಡ್ ಹೈಸ್ಕೂಲಿನ ಆರನೆಯ ಈಯತ್ತೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಹಸ್ತಲಿಖಿತ ಪತ್ರಿಕೆ. ಪಂಡಿತ ಜವಾಹರಲಾಲ ನೆಹ್ರೂ, ನನ್ನ ಮೊದಲ ಭಾಷಣ, ಪೋಸ್ಟ್ ಪೇದೆ ಸಾಹಸ್ಯ,(ಹಿಂದಿಯಲ್ಲಿ) ನಾ ಕಂಡ ಕಾರಂತ, The two Brothers ಮುಂತಾದ ಉತ್ತಮ ಬರಹಗಳಿವೆ. ಚಿತ್ರಕಾರರಾದ ಜನಾಬ್ ಅಮೀರುದ್ದೀನ್ ಕನ್ನ ಕಲಾ ನೈಪುಣ್ಯತೆಯಿಂದ ಸಂಚಿಕೆಯನ್ನು ಅತ್ಯಂತ ಸುಂದರವನ್ನಾಗಿ ಮಾಡಿರುತ್ತಾರೆ. ಈಚೆಗೆ ಆಜ್ಞಾಗಿ ಪ್ರಕಟಿಗೊಂಡ ನೂತನ ಪತ್ರಿಕೆಗಳಿಗಿಂತ ವಿದ್ಯಾರ್ಥಿ ಮಿತ್ರರ ಈ ಸಂಚಿಕೆ ಹೆಚ್ಚು ಮುಗ್ಧವಾಗಿದೆ. ಚಿತ್ರಕಾರರಾದ ಅಮೀರುದ್ದೀನರಿಗೆ ಚಿತ್ರಕಲೆಯಲ್ಲಿ ಉಜ್ವಲ ಭವಿಷ್ಯವಿದೆ.

— ಎಸ್.ಎಲ್

ಸ್ವೀಕಾರ-ವಿಮರ್ಶೆ

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ– ಉದರಶೂಲೆ, ಕಟಿಶೂಲೆ, ಮೈಕೈಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)
ಪೋ ಕುಂಜಾಲು, ದ. ಕ.
ಇವರ 'ಧನ್ವಂತರೀ ಮಾತ್ರೆ'ಗಳು ಮಾತ್ರ.

ಕೇವಲ ನಾಲ್ಕಾಣೆಯ ಅಂಚೆಚೀಟಿಸ್ಸನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅದರ ಶೀಘ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಹೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಕಾಯವಾಗಿದ್ದರೆ,....ಜಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಡು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟಿ ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮೆಣಸಿನಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಸರೂ. ಪೋಸ್ಟೇಜ್ ಚಾರ್ಜ್ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆರೆ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರೆ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಹಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ-

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು, ಪೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಂ ಆಗಿಯೂ ಚಿಲ್ಲರೆಯಾಗಿಯೂ ಮಾರಲ್ಪಡುವವು.

ಕಲ್ಯಾಣಿ ವ್ಯಾಸಾಚಾರ್ಯರ್,
ರಥಬೀದಿ, ಉಡುಪಿ.

ಪ್ರಕಟಣೆ.

ಉಡ್ಪಿ ತಾಲೂಕು–ಮೂಡಬೆಟ್ಟು ಗ್ರಾಮದಲ್ಲಿರುವ ಕಲ್ಯಾಣಿ ಬಾಯಿಯವರ ಮ್ಯಾನೇಜರ ಸುಕ್ಕಳು–ಶಕುಂತಲಾ | ಸುರೇಶ | ಕೂಡಾ 2 ಜನರು ಗಾರ್ಡಿಯನ್ ಅಪ್ಪಯ್ಯನವರ ಮಗ–ಯು. ಬಿ. ಶ್ರೀನಿವಾಸ ಪಂಡಿತನು– ಈ ಮೂಲಕ ಸರ್ವಸ್ತ ಜನರಿಗೆ ತಿಳಿಸುವದೇನಂದರೆ–

ನನ್ನ ಅಕ್ಕ ಇತ್ತಲಾಗೆ ಸ್ವರ್ಗಸ್ಥಳಾದ–ಕಲ್ಯಾಣಿ ಬಾಯಿಯವರ ಸ್ವಂತ ಕ್ರಯದ ಬಾಬ್ತು ಉಡ್ಪಿ ತಾಲೂಕು ಮೂಡಬೆಟ್ಟು ಗ್ರಾಮದ ಸ. ನಂ. I/11 ಪುಂಜ ಎಕ್ರೆ 1-68 ರ ಆಸ್ತಿಗೆ ಸದ್ರಿ ಮ್ಯಾನೇರ ಶಕುಂತಲ ಕೂಡಾ 2 ಜನರು–ವಾರಿಸುದಾರರಾಗಿಯೂ ಹಕ್ಕುದಾರರಾಗಿಯೂ ಇರುತ್ತಾರೆ. ಸದ್ರಿ ಮ್ಯಾನೇರರು ಈಗ ನನ್ನ ಸಂರಕ್ಷಣೆಯಲ್ಲಿದ್ದು ಜೀವಿಸಿ ಬರುತ್ತಾರೆ. ನನ್ನ ಅಣ್ಣ ಸೀತಾರಾಮ ಎಂಬವರು ತಾನು ಸದ್ರಿ ಮ್ಯಾನೇರರ ಗಾರ್ಡಿಯನ್ ಎಂತ ಹೇಳಿ ಸದ್ರಿ ಮ್ಯಾನೇರರ ಹಕ್ಕಿನ ಆಸ್ತಿಯನ್ನು ಯಾಱರು ವಸ್ಕೆರೆ ಪರಾಧೀನ ಮಾಡುನ, ಅಲೋಚನೆಯಲ್ಲಿರುವುದಾಗಿ ತಿಳಿದು ಬಂದಿದೆ. ಸದ್ರಿ ಸೀತಾರಾಮನವರು ಸದ್ರಿ ಮ್ಯಾನೇರರ ಗಾರ್ಡಿಯನ್‌ಸ್ಸರಲ್ಲಾ ದ್ರಿಂದ, ಸದ್ರಿ ಮ್ಯಾನೇರರ ಹಕ್ಕಿನ ಆಸ್ತಿ ಕುರಿತು, ಅವರು ಮಾಡಬಹುದಾದ ಯಾವ ಪರಾಧೀನಗಳು, ಸದ್ರಿ ಮ್ಯಾನೇರರ ಮೇಲಾ, ಸದ್ರಿ ಮ್ಯಾನೇರರ ಹಕ್ಕಿನ ಆಸ್ತಿ ಮೇಲೆ ಕೂಡಾ ಬದ್ಧಪ್ರತಿಸತಕ್ಕದ್ದಲ್ಲಾ ಎಂತ ಈ ಮೂಲಕ ಸಮಸ್ತ ಜನರಿಗೆ ತಿಳಿಸೋಣಾಗಿಯಿದೆ.

U. B Srinivas.

ಉಡ್ಪಿ, 28-12-1950.

ನಿಮಗೆ ನವ ವರ್ಷದ ನಮಸ್ಕಾರ. ಈ ವಾರ "ಹಿಂದೂ ಕೋಡಿ"ನ ಮಿಶ್ರತೆಯ ವಿಷಯ ಮಾತಾಡುವ ಎಂದಿದ್ದೆ. ಅದನ್ನು ಈಗಲೇ ಮುಗಿಸಿ ಬಿಡುತ್ತೇನೆ, ನಮ್ಮ ದೇಶದಲ್ಲಿ "ದಾಯಭಾಗ" ಮತ್ತು 'ವಿ.ತಾಕ್ಷರ' ಎಂಬ ಎರಡು ಕಾನೂನು ಗಳು ಹಿಂದೂಗಳಲ್ಲಿ ಇವೆ ಎಂದು ಹೇಳಿದ್ದೆ. ಈ ಎರಡು ಕ್ರಮಗಳಲ್ಲಿರುವ ಮುಖ್ಯ ಬೇಧವೇನೆಂದರೆ ನಮ್ಮಲ್ಲಿ ಪಿತ್ರಾರ್ಜಿತ ಮತ್ತು ಸ್ವಾರ್ಜಿತ ಎಂಬ ಎರಡು ವಿಧದ ಆಸ್ತಿ ಇದೆಯಲ್ಲವೆ? ತಂದೆ, ಅಜ್ಜ, ಪಿಜ್ಜ— ಇವರಿಂದ ಬಂದ ಆಸ್ತಿ ಪಿತ್ರಾರ್ಜಿತ. ಸ್ವಂತ ಸಂಪಾದಿಸಿದ ಆಸ್ತಿ ಸ್ವಾರ್ಜಿತ ಆಸ್ತಿ ಯನ್ನು ಒಬ್ಬನು ತನಗೆ ಇಷ್ಟವಿದ್ದಂತೆ ಮಾರಬಹುದು, ದಾನ ಮಾಡಬಹುದು. ವೀಲುಮಾಡಿ ಕೊಡಲೂ ಬಹುದು, ತಂದೆಯು ತನ್ನ ಸ್ವಾರ್ಜಿತ ಆಸ್ತಿಯನ್ನು ಸರಾಧೀನಮಾಡಿದನೆಂದು ಆಕ್ಷೇಪಿಸುವ ಅಧಿಕಾರ ವಿಲ್ಲವಷ್ಟೆ? ಪಿತ್ರಾರ್ಜಿತ ಆಸ್ತಿಯ ಮಟ್ಟಿಗೆ ಹೀಗಲ್ಲ. ಮಿತಾಕ್ಷರ ಕಾನೂನಿನ ಪ್ರಕಾರ ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ತನ್ನ ಮಕ್ಕಳ ಹಿತಕ್ಕೆ ವಿರೋಧವಾಗಿ ಕ್ರಯ, ದಾನ, ವೀಲು ಮೂಲಕ ಪರಾಧೀನ ಮಾಡಿದರೆ ಅದನ್ನು ಆಕ್ಷೇಪಿಸಲಿಕ್ಕೆ ಆ ಕಾಲದಲ್ಲಿ ಜನಿಸಿದ್ದ ಮಕ್ಕಳಿಗೆ ಅಧಿಕಾರವಿದೆ. 'ದಾಯಭಾಗ' ಕ್ರಮದಲ್ಲಿ ಆದರೆ ತಂದೆಯು ತನಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ತನ್ನ ಸ್ವಾರ್ಜಿತ ಆಸ್ತಿಯಂತೆಯೇ ತನಗೆ ಇಷ್ಟಬಂದಂತೆ ಪರಾಧೀನ ಮಾಡಬಹುದು. ಈ ಪರಾಧೀನದಲ್ಲಿ ಆಕ್ಷೇಪಿಸಲಿಕ್ಕೆ ಮಕ್ಕಳಿಗೆ ಅಧಿಕಾರವಿಲ್ಲ. ತನ್ನ ಮಕ್ಕಳಿಗೆ ಆಸ್ತಿಯನ್ನು ಇಡುವುದೂ, ಇಡದಿರುವುದೂ, ತಂದೆಯ ಇಷ್ಟ. ಪಿತ್ರಾರ್ಜಿತ ಆಸ್ತಿಯಲ್ಲಿ ತನ್ನ ಪಾಲು ಬಿಟ್ಟುಕೊಡಬೇಕೆಂದು ಮಗನು ತಂದೆಯ ಕೂಡ ಮಿತಾಕ್ಷರ ಕಾನೂನಿನ ಪ್ರಕಾರ ಪಾಲು ಕೇಳಬಹುದು. ದಾಯಭಾಗದಲ್ಲಿಯಾದರೆ ಮಕ್ಕಳಿಗೆ ಈ ಅಧಿಕಾರವಿಲ್ಲ. ತಂದೆ ತನ್ನ ಆಸ್ತಿಯನ್ನು ಪರಾಧೀನ ಅಥವಾ ವೀಲು ಮಾಡದೆ ಸತ್ತರೆ ಮಾತ್ರ ಗಂಡು ಮಕ್ಕಳಿಗೆ ಪಾಲು ಸಿಕ್ಕುತ್ತದೆ.

ಎರಡು ಕ್ರಮಗಳಲ್ಲಿ 'ದಾಯಭಾಗ' ಕ್ರಮವೇ ಸರಿ ಎಂದು ನಮ್ಮ ಧುರೀಣರ ಅಭಿಪ್ರಾಯ ಆದುದರಿಂದ ಇನ್ನು ಮೇಲೆ ಈ ದೇಶದಲ್ಲಿ ದಾಯಭಾಗ ಕ್ರಮವೇ ಬರಬೇಕೆಂದು ಈ ಮಸೂದೆಯಲ್ಲಿದೆ. ಮಿತಾಕ್ಷರ ಮತ್ತು 'ದಾಯಭಾಗ—ಈ ಎರಡು ಕ್ರಮಗಳಲ್ಲಿಯೂ ತಂದೆ ಸತ್ತ ಮೇಲೆ ಆತನ ಆಸ್ತಿ ಆತನ ಗಂಡು ಮಕ್ಕಳಿಗೆ ಮಾತ್ರ ಹೋಗುತ್ತದೆ ವಿನಾ ಹೆಣ್ಣು ಮಕ್ಕಳಿಗೆ ಏನೂ ಹಕ್ಕು ಇರುವುದಿಲ್ಲ. ಇನ್ನು ಮೇಲೆ ತಂದೆಯ ಆಸ್ತಿಯಲ್ಲಿ ಮಗನಂತೆಯೇ ಮಗಳಿಗೂ ಸಂಯಾದ ಪಾಲು ಸಿಗಬೇಕೆಂದು ಈ ಮಸೂದೆಯಲ್ಲಿದೆ. ಹೆಣ್ಣಿಗೆಂತೆಯೇ ಮಗಳಿಗೂ ಸರಿಯಾದ ಪಾಲು ಕೊಡಬೇಕೆಂಬುದು ಸರಿಯಲ್ಲ. ಹೀಗೆ ಮಾಡಿದರೆ ಆಸ್ತಿ ತುಂಡು ತುಂಡಾಗಿ ಹೋಗುತ್ತದೆ ಎಂದು ಕೆಲವರ ಆಕ್ಷೇಪವಿದೆ. ಈ ವಿಷಯದಲ್ಲಿ ವಾದ ವಿವಾದಗಳು ಎದ್ದು ಮಸೂದೆ ಈಗ ಸ್ವಲ್ಪ ದುರಸ್ಥಿಯಾಗಿದೆ. ತಂದೆ ನಾಯುವಾಗ ಅವಿವಾಹಿತಳಾಗಿರುವ ಮಗಳಿಗೆ ಮಗನ ಅರ್ಧಾಂಶ ಪಾಲು. ವಿವಾಹಿತಳಾಗಿರುವ ಮಗಳಿಗೆ ಮಗನ ಕಾಲಾಂಶ ಹಕ್ಕು ಕೊಡಬಹುದೆಂದೂ; ತಾಯಿಯ ಆಸ್ತಿಯಲ್ಲಿ ಮಗಳಂತೆಯೇ ಮಗನಿಗೂ ಹಕ್ಕು ಇಡಬೇಕೆಂತಲೂ ಮಸೂದೆ ದುರಸ್ತಿಯಾಗಬಹುದೆಂದು ಕಾಣುತ್ತದೆ.

ಹೀಗೆ ಅಲ್ಪ ಸ್ವಲ್ಪ ಬದಲಾವಣೆಗಳು ಆಗ ಬಹುದೇ ವಿನಾ ಹಿಂದೂ ಕೋಡೇ ಬೇಡವೆನ್ನುವ ಕೆಲವರ ಸಾಧನೆ ನಡೆಯ ಲಾರದು. ಕೆಲವು ತಿಂಗಳುಗಳಲ್ಲೇ ಭಾರತದ ಎಲ್ಲಾ ಕಡೆಗಳಲ್ಲಿಯೂ ಈ ಪ್ರಕಾರ ಒಂದೇ ರೀತಿಯ ಕಾನೂನಿಗೆ ಎಲ್ಲಾ ಹಿಂದುಗಳೂ ಸಮ್ಮತಿಕೊಡುವ ಸಂಭವ ವಿದೆ.

ನಮ್ಮ ಜಿಲ್ಲೆಯಲ್ಲಿ ಮತ್ತು ಕೇರಳದಲ್ಲಿರುವ "ಅಳಿಯ ಸಂತಾನಿಗ"ರು ಮಾತ್ರ ಈ ಹಿಂದೂ ಕೋಡಿನ ಒಳಗೆ ಸೇರಲಿಕ್ಕೆ ಸಮ್ಮತಿ ಪಡುವುದಿಲ್ಲ. ಭೂಲೋಕದ ಎಲ್ಲಾ ಕಡೆಗಳಲ್ಲಿರುವ ಹಿಂದುಗಳು ಮತ್ತು ಇತರ ಮತದವರೂ ಕೂಡಾ ಮಕ್ಕಳ ಕಟ್ಟನ್ನೇ ಅನುಸರಿಸುತ್ತಾರಾದರೂ ನಮ್ಮ ಅಳಿಯ ಸಂತಾನಿಗರಿಗೆ ಇಷ್ಟವ್ಯತ್ಯಾಸ ಶತಮಾನದಲ್ಲೂ ಅನ್ಯೋನ್ಯರಿಕವಾದ ಮತ್ತು ಅಸ್ವಭಾವಿಕವಾದ ಇನ್ನೊಂದು ಕಟ್ಟು ಬೇಕಾಗಿದೆ. ಈ ಕಟ್ಟನ್ನು ಅಳಿಯ ಕಟ್ಟೆಂದು ಯಾರು ಕರೆದರೋ ನನಗರಿಯದು. ಕುಟುಂಬದಲ್ಲಿ ಗಂಡು ಮಕ್ಕಳಿಗೆ ಮಾತ್ರ ಹಕ್ಕಿರಬೇಕು; ಹೆಣ್ಣು ಮಕ್ಕಳಿಗೆ ಹಕ್ಕುರ ಕಾಡದು ಎನ್ನುವವರು ತಮ್ಮ ಕಟ್ಟನ್ನು 'ಮಕ್ಕಳ ಕಟ್ಟೆ'ಎಂದು ಕರೆಯವಂತೆಯೇ ಕಟಿಂಬದಲ್ಲಿ ಆಸ್ತಿಯ ಹಕ್ಕು ಸಂಪೂರ್ಣ ಹುಡುಗಿಯರಿಗೆ ಇರಬೇಕು,ಹುಡುಗರಿಗೇನೂ ಹಕ್ಕಿರ ಬಾರದು ಎನ್ನುವವರು ತಮ್ಮ ಕಟ್ಟನ್ನು 'ಅಳಿಯ ಕಟ್ಟೆ'ಎಂದು ತಪ್ಪಾಗಿ ಕರೆಯುತ್ತಿದ್ದಾರೆ. ಸಹಜವಾಗಿ ನೋಡಿದರೆ ಅಳಿಯ ಕಟ್ಟನ್ನಲ್ಲಿ ಹುಡುಗರಿಗೆ ಏನು ಅಧಿಕಾರವಿದೆ? ಕುಟುಂಬದಲ್ಲಿ ತಾನು ಅತ್ಯಂತ ಹಿರಿಯನಾಗಿದ್ದರೆ ತನ್ನ ತಂಗಿಯ ಮಕ್ಕಳಿಗಾಗಿ ಆಸ್ತಿಯ ಆಡಳಿತೆಯನ್ನು ನೋಡುವ ಹಕ್ಕು, ಕಿರಿಯನಾಗಿದ್ದರೆ ತನ್ನ ಜೀವಮಾನವೆಲ್ಲಾ ಅಶನಾರ್ಥಕ್ಕಾಗಿ ಹೋರಾಡುವ ಹಕ್ಕು; ವಿನಹ ಸ್ವತಂತ್ರವಾದ ಹಕ್ಕು ಎಲ್ಲಿದೆ? ಮಕ್ಕಳ ಕಟ್ಟನಲ್ಲಿ ಹುಡುಗಿಯರು ತಮಗೆ ಹುಡುಗರಂತೆಯೆ ಸರಿಸಮಾನವಾದ ಹಕ್ಕು ಸಿಗಬೇಕೆಂದು ದೇಶದಲ್ಲಿ ಹೋರಾಡುತ್ತಿರುವಾಗ ನಮ್ಮ ಜಿಲ್ಲೆಯ ಅಳಿಯ ಸಂತಾನದ ಹುಡುಗರು ಹುಡುಗಿಯರಂತೆ ತಮಗೂ ಸರಿಸಮಾನವಾದ ಹಕ್ಕು ಕೊಡಿರೆಂದು ಕಾಡಾಡುವ ಕಾಲವಿದೆ. ಹುಡುಗಿಯರಿಗೆ ಸಹಾ ಆಸ್ತಿ ದೊರೆತರೆ ಅವರು ಆದನ್ನು ಸ್ವೇಚ್ಛೆಯಾಗಿ ಹಾಳುಮಾಡಿಬಿಡಬಹುದು, ಎಂದು ಕೆಲವರು ಹೇಳುವುದುಂಟು. ಅಳಿಯ ಕಟ್ಟಿನಲ್ಲಿ ಹುಡುಗರಿಗೆ ಆಸ್ತಿಯಲ್ಲಿ ಹಕ್ಕು ಕೊಟ್ಟರೆ ಅವರು ಅದನ್ನು ಸ್ವೇಚ್ಛೆಯಾಗಿ ಹಾಳುಮಾಡಿಬಿಡಬಹುದು, ಎಂದೂ ಕೆಲವರು ಹೇಳುವುದಿಲ್ಲವೇ? ಹಿಂದೂ ಕೋಡು ಮಸೂದೆಯಲ್ಲಿ ಇನ್ನೂ ಅನೇಕ ವಿಷಯಗಳು ಇವೆ. ಅದರೆ ಅದರಲ್ಲಿರುವ ಮುಖ್ಯ ವಿಷಯಗಳು ಇಷ್ಟೆ. ತಂದೆ ಮತ್ತು ತಾಯಿ— ಇವರ ಆಸ್ತಿ ಅವರ ನಂತರ ಅವರ ಮಕ್ಕಳಿಗೆ ಸಿಕ್ಕಬೇಕು ಅಂದರೆ ಗಂಡು ಅಥವಾ ಹೆಣ್ಣು ಎಂಬ ಬೇಧವಿಲ್ಲವೆ ಎಲ್ಲರಿಗೂ ಸರಿಸಮಾನವಾಗಿ ಸಿಕ್ಕಬೇಕು ಎಂಬುದೇ ಇದರ ಮುಖ್ಯ ತತ್ವ. ಒಂದಾನೊಂದು ಕಾಲದಲ್ಲಿ ನಾವು ಅನೇಕರು ಒಂದೇ ಕುಟುಂಬದಲ್ಲಿ ಏಕವಾಕ್ಯದಲ್ಲಿ ಇದ್ದುತ್ತಿದ್ದೆವಾದರೂ ಇನ್ನು ಅದು ಸಾಧ್ಯವಾಗಲಿಕ್ಕಿಲ್ಲ. ಒಬ್ಬನು ತನ್ನ ಹೆಂಡತಿ ಮಕ್ಕಳೊಡನೆ ತಾನು ಸ್ವತ್ಯೇಕ ಗೃಹಕೃತ್ಯ ವಾಡಿ ಇರುವೆನೆನ್ನುವಾಗ ಅದಕ್ಕೆ ಯಾರೂ ಆಕ್ಷೇಪಿಸುವುದು ಸರಿಯಲ್ಲ. ಸ್ವಾಭಾವಿಕವಾದ ಕ್ರಮಕ್ಕೆ ವಿರೋಧವಾಗಿ ಇರಬೇಕೆಂದು ಯಾವ ಕಾನೂನೂ ನಿರ್ಬಂಧಿಸಲಾರದು. ತಂತೆತಾಯಿಗಳಿಗೆ ಎಲ್ಲಾ ಮಕ್ಕಳಿಗೂ ಒಂದೇ ರೀತಿ ಪ್ರೇಮವಿದೆ ಎಂದು ಸರಕಾರದವರು ಯೋಚಿಸುವುದರಲ್ಲಿ ತಪ್ಪೇನಿದೆ? ಒಬ್ಬನಿಗೆ ತನ್ನ ಆಸ್ತಿಯಲ್ಲಿ ಸಂಪೂರ್ಣ ಅಧಿಕಾರವಿದೆ. ತನ್ನ ಎಲ್ಲಾ ಮಕ್ಕಳಿಗೆ ಒಂದೇ ರೀತಿ ತನ್ನ ಆಸ್ತಿಯಲ್ಲಿ ಹಕ್ಕಿರಕೂಡದೆನ್ನುವ ತಂದೆಯು ಅವನು ಜೀವಂತನಾಗಿರುವಾಗಲೇ ತನ್ನ ಆಸ್ತಿ ತನ್ನ ನಂತರ ಯಾರ್ಯಾರಿಗೆ ಸಿಗಬೇಕೆಂದು ವೀಲು ಮಾಡಿರಬಹುದು. ವೀಲು ಮಾಡದೆ ಬಿಟ್ಟಿರುವ ಅವನ ಆಸ್ತಿಯು ಅವನ ಎಲ್ಲಾ ಮಕ್ಕಳಿಗೆ ಗಂಡು ಹೆಣ್ಣು ಎಂಬ ಭೇದವಿಲ್ಲದೆ ಸರಿಸಮಾನವಾಗಿ ಹಂಚಿದರೆ ಅದು ಅನ್ಯಾಯವಾಗಲಾರದು.

ಸ್ತ್ರೀಯರಿಗೆ ಆಸ್ತಿಯನ್ನು ಅನುಭವಿಸುವ ಮತ್ತು ಇಟ್ಟುಕೊಳ್ಳುವ ಶಕ್ತಿಯಿಲ್ಲವೆಂದು ಹೇಳುವ ಕಾಲ ಎಂದೋ ಸಂದು ಹೋಗಿದೆ. ಅವರೇ ಸ್ವಂತಕ್ಕಾಗಿ ಪಡೆದ ಆಸ್ತಿಯನ್ನು ಅವರು ಸ್ತ್ರೀಧನವೆಂದು ಅನುಭವಿಸುತ್ತಾರೆ. ಅಗತ್ಯ ಬಿದ್ದಾಗ ಆ ಧನವನ್ನು ಪರಾಧೀನ ಮಾಡುತ್ತಾರೆ. ಗಂಡನು ವಿಶ್ವಾಸ್ಯನಾಗಿದ್ದರೆ ಅವನು ಸತ್ಪನಂತರ ಅವನ ಆಸ್ತಿಯನ್ನು ವಿಧವೆಯೇ ಅನುಭವಿಸಿ ಬರುತ್ತಾಳೆ. ಈಗ ಗಂಡ ಅವಿಭಕ್ತನಾಗಿದ್ದ ಸತ್ಪರೂ ಅವನ ಪಾಲನ್ನು ಕುಟುಂಬದವರಿಂದ ಪ್ರತ್ಯೇಕಪಡಿಸಿಕೊಂಡು ಅನುಭವಿಸುವ ಹಕ್ಕು ವಿಧವೆಗೆ ಬಂದಿದೆ. ಗಂಡು ಮಕ್ಕಳಿಲ್ಲದೆ ಸತ್ಪವಳ ಆಸ್ತಿಯು ಅವಳ ವಿಧವೆಯ ನಂತರ ಹೆಣ್ಣು ಮಕ್ಕಳಿಗೆ ಬರುತ್ತದೆ. ಅದನ್ನು ಅನುಭವಿಸುವ ಮಟ್ಟಿಗೆ ಅವಶ್ಯವಿದ್ದರೆ ಪರಾಧೀನ ಮಾಡುವ ಅಧಿಕಾರ ಮಗಳಿಗೆ ಇದೆ. ಹೀಗೆಲ್ಲಾ ಆಸ್ತಿ ಬಂದರೆ ಅನುಭವಿಸಬಲ್ಲ ಸ್ತ್ರೀಯು ತಂದೆಯ ಆಸ್ತಿ ಪಾಲಿಗಲ್ಲಿ ಬಂದರೆ ಅದನ್ನು ಅವಳು ಅನುಭವಿಸಲಾರಳೆಂದು ಹೇಗೆ ಹೇಳಬಹುದು? ಇನ್ನು ಸ್ತ್ರೀಯು ಪುರುಷರಿಗಿಂತ ಅವಿದ್ಯಾವಂತಳು ಹೆಡ್ಡಳು ಎಂದೆನ್ನಬಹುದೇ? ಕ್ರಮೇಣ ವಿದ್ಯೆ ಬುದ್ಧಿವಂತಿಕೆ ಇವುಗಳಲ್ಲಿ ಪುರುಷರಿಗಿಂತ ಸ್ತ್ರೀಯರು ಬಹಳ ಹಿಂದೆಯಿಲ್ಲವೆಂಬುದು ಸ್ಪಷ್ಟವಿದೆ. ಮಕ್ಕಳ ಕಟ್ಟಿನಲ್ಲಿ ಪುರುಷರಷ್ಟೇ ಹಕ್ಕು ಸ್ತ್ರೀಯರಿಗೂ ಸಿಗಬೇಕೆನ್ನುವಾಗ ಅಳಿಯಕಟ್ಟಿನಲ್ಲಿ ಸ್ತ್ರೀಯರಷ್ಟೇ ಹಕ್ಕು ಪುರುಷರಿಗೂ ಇರಬೇಕೆಂದು ಸಾಧಿಸುವುದು ಅವಶ್ಯವಿಲ್ಲವಷ್ಟೆ.

ಈ ರೀತಿ ಹಿಂದೂ ಕೋಡು ಕಾನೂನಾದರೆ ಸ್ತ್ರೀ ಪುರುಷರ ಜೀವನದಲ್ಲಿ ಏನೆಲ್ಲಾ ಸುಧಾರಣೆಗಳಾಗಲಿವೆ ಎಂಬುದು ಬರುವ ವಾರದ ಹರಟೆಯ ವಿಷಯ. ನಾನು ನನ್ನ ಕ್ರಮದಲ್ಲೇ ವಿಚಾರಗಳನ್ನು ಅರಿಸಿ ಬರೆದುಕೊಂಡು ಹೋಗುತ್ತೇನೆ. ಈ ವಿಚಾರದಲ್ಲಿ ವಾಚಕರಿಗೆ ಏನಾದರೂ ಸಂದೇಹಗಳಿದ್ದರೆ ಅವರು ಕೇಳಬಹುದು. ಪತ್ರ ಬರೆಯುವುದಾದರೆ 'ಸ್ತ್ರೀ ಯು. ವಿ. ೦/೦ ನವಯುಗ ಉಡುಪಿ' ಎಂದು ವಿಳಾಸಕೂಟ್ಟು ಬರೆಯಿರಿ. ವಾಚಕರು ನನಗೆ ಪತ್ರ ಬರೆಯುತ್ತಾ ಇದ್ದರೆ ನನಗೂ ಸಂತೋಷ. ನನ್ನ ಹರಟೆಯನ್ನು ಅಭಿರುಚಿಯಿಂದ ಓದುವವರಿದ್ದಾರೆಂದು. ಆದರೆ ನೀವು ನನಗಾಗಿ ಪ್ರಶ್ನೆ ಕೇಳಬೇಕೆಂದಿಲ್ಲ. ಪ್ರಶ್ನೆ ಕೇಳುವವರ ಹೆಸರು ವಿಳಾಸ ಪ್ರಕಟಿಸಲಾರೆನೆಂದು ನೊದಲೇ ಹೇಳಿದ್ದೇನೆ. ವಿಷಯ ತಿಳಿಯಬೇಕೆಂದಿರುವವರು ಪ್ರಶ್ನೆ ಕೇಳಿದರೆ ಸಾಕು. ಹೊಸ ವಿಷಯವನ್ನಲ್ಲ ನಮ್ಮ ಹರಟೆ ಮುಂದುವರಿಸಬೇಕೆಂದಿರುವವರು ಅದನ್ನೂ ತಿಳಿಸಬಹುದು

ಹರಟೆಯಲ್ಲಿ ವಿಚಾರದೊಡನೆ ವಿನೋದವೂ ಇರಬೇಕೆಂದು ಒಬ್ಬ ಸ್ನೇಹಿತರು ಸೂಚಿಸಿರುವರು. ಇರಲಿ ನೋಡುತ್ತೇನೆ. ದೇವರು ನನ್ನನ್ನು ನಡೆಸಿದಲಿ ಎಂದು ಕೈಮುಗಿದು ನಮಸ್ಕಾರ.

ಸ್ತ್ರೀಯರಿ.

ವಾರದ ಹರಟೆ

ಸ್ತ್ರೀಯು. ವಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿಯಬಗ್ಗೆ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ವಾರಭವಿಷ್ಯ

ತಾರೀಕು 11-1-51 ರಿಂದ — ತಾರೀಕು 17-1-51 ರವರೆಗೆ

ಮೇಷ—ನಿಮ್ಮ ಪ್ರತಿಯೊಂದು ಕಾರ್ಯಗಳೂ ನಿರ್ವಿಘ್ನದಿಂದ ನೆರವೇರುವವು. ನೀರೀಕ್ಷೆಗಿಂತಲೂ ಅಧಿಕವಾದ ಫಲಪ್ರಾಪ್ತಿಯಾಗಲಿದೆ. ಸಾಂಸಾರಿಕ ತಾಪತ್ರಯದಿಂದ ಮುಕ್ತರಾದ ನಿಮಗೆ ಗೃಹಸುಖ, ಸಮಾಜದಲ್ಲಿ ಸ್ಥಾನಮಾನಾದಿಗಳು ಲಭಿಸಲಿವೆ. ಹಿಂದಿನ ಸಾಲ ಕಡಗಳಿಂದ ಪಾರಾಗಿ ಕೈಯಲ್ಲಿ ಸಾಕಷ್ಟು ಧನಸಂಗ್ರಹವಾದೀತು. ಶ್ರಮಜೀವಿಗಳಿಗಂತೂ ಕಾಲವು ಬಹಳ ಅನುಕೂಲ ಪರಿಸ್ಥಿತಿಯಲ್ಲಿದೆ. ವಿನಾಕಾರಣದಿಂದಾಗಿ ಕೆಲವೊಮ್ಮೆ ಕಲಹಗಳುಂಟಾಗುವ ಯೋಗವಿದ್ದು ದರಿಂದ ತಾ. 13, 14 ರಲ್ಲಿ ಸ್ವಲ್ಪ ಜಾಗರೂಕರಾಗಿರಿ.

ವೃಷಭ—ಶಕ್ತಿಮೀರಿ ದುಡಿಯುವಿರಿ. ಆದರೆ ನೀರಿನಲ್ಲಿ ಮಾಡಿದ ಹೋಮದಂತೆ ನಿಮ್ಮ ಶ್ರಮಕ್ಕೆ ತಕ್ಕ ಫಲಸಿಗಲಾರದು. ಮಾತ್ರವಲ್ಲ ದೇಹಾಲಸ್ಯ, ಲೇವಾದೇವಿ ನಿಮಿತ್ತ ಜಗಳ, ಜನಸಾಮಾನ್ಯರಲ್ಲಿ ನಿಷ್ಠುರ, ಗುರುಹಿರಿಯರೊಡನೆ ಮನಸ್ತಾಪಗಳುಂಟಾಗುವ ಸಂಭವವಿದೆ. ಸೇವಕರು ಸಹಕರಿಸಲಿಲ್ಲೆಂಬ ಕೊರಗನ್ನು ಮಾಡಿ ಸ್ವೇಚ್ಛೆಯಿಂದ ವರ್ತಿಸುವುದರಿಂದ ಮನಸ್ಸು ಕುಂಬಾ ಅಸಮಾಧಾನಗೊಂಡಲಿದೆ. ದ್ಯೂತಕ್ರಿಯರಿಗೆ ಒಲವು ಅನುಕೂಲವಿರುವುದು. ವಾರಾಂತ್ಯದ 3ದಿನಗಳಲ್ಲಿ ಆಧಿಕವ್ಯಯ ಅಲಸ್ಯಗಳು ಕಾಣಿಸಬಹುದು.

ಮಿಥುನ—ಸದ್ಯದ ಗ್ರಹ ಸ್ಥಿತಿಯು ನಿಮಗನ್ಯೂನ ಉತ್ತಮವಿಲ್ಲದಿದ್ದರೂ ಸಂದುಹೋದ ದಿನಗಳಿಗಿಂತ ಎಷ್ಟೋ ಉತ್ತಮವೆನಿಸುವದು. ಆರ್ಥಿಕ ಭಾಗದಲ್ಲಿ ಸುಧಾರಿಕೆಯಾಗುವದು. ಗೃಹಪತ್ರಿಕ್ರಿಯರಿಗೆ ಕೆಲಮಟ್ಟಿಗೆ ಕಡಿಮೆಯಾಗುವದು. ಅದರೂ ದೇಹದಲ್ಲಿ ದೌರ್ಬಲ್ಯ ದಿನೇ ದಿನೇ ಹೆಚ್ಚುವಲಿದೆ. ಪ್ರವಾಸವು ನಷ್ಟಕಷ್ಟಗಳಿಗೆ ಗುರಿಮಾಡೀತು. ಮನಶ್ಚಾಂಚಲ್ಯವು ದಿನೇ ದಿನೇ ಹೆಚ್ಚುವದು. ವಾರಾಂತ್ಯದ 2 ದಿನಗಳು ದೇಹಾಲಸ್ಯ ವ್ಯರ್ಥಾಕಲಹ, ಮತ್ತೂ ಖರ್ಚಿಗೆ ಗುರಿಮಾಡಲಿವೆ.

ಕರ್ಕಟಿ—"ಆಲಸ್ಯಮಮೃತಂ ವಿಷಂ" ಅಲಸಿಗನಿಗೆ ಅಮೃತವು ವಿಷವಾಗಿ ಪರಿಣಮಿಸುವದು ಎಂದು ಪ್ರಾಜ್ಞರೆಂದಿರುವರು. ಇಂದಿನ ಪರಿಸ್ಥಿತಿಯಲ್ಲಿ ನಿಮಗೆ ಸಾಕಷ್ಟು ಶಕ್ತಿಸಾಹಸ ಧನ ಜನ ಬಲವಿದ್ದರೂ ಔದಾಸೀನ್ಯವು ನಿಮ್ಮನ್ನು ನಿರುದ್ಯೋಗಿಗಳನ್ನಾಗಿ ಮಾಡಲಿದೆ, ಮಾತ್ರವಲ್ಲ ವಿರೋಧಿಜನರ ಪೀಡೆಯೂ ಅಸಹನೀಯವಾಗಿರುವುದು. ಅನುದಿನದ ಖರ್ಚು ವೆಚ್ಚಗಳ ಸಲವಾಗಿ ಸಾಲಮಾಡಬೇಕಾದೀತು. ಸ್ತ್ರೀಯರಿಂದ ಕಲಕಾಪವಾದಗಳಿಗೆ ಗುರಿಯಾಗುವಿರಿ. ತಾ 15, 16, 17 ಇತರ ದಿನಗಳಿಗಿಂತ ಲೇಸಹುದು.

ಸಿಂಹ—ಶಕ್ತಿಮೀರಿ ದುಡಿಯುವಿರಿ. ಫಲವು ಕೂಡ ಉತ್ತಮವಾಗಿ ಲಭಿಸೀತು. ಆದರೆ ನಿಮ್ಮ ಉತ್ಪತ್ತಿಗಿಂತ ಅಧಿಕವಾದ ಖರ್ಚುಗಳು ಪ್ರಾಪ್ತವಾಗುವುದರಿಂದ ಹಣದ ದಿಕ್ಕಟ್ಟು ತಪ್ಪಲೊಲ್ಲದು. ಮನೆಯವರಲ್ಲಿ ಪರಸ್ಪರ ಕಲಹ ವೈಮನಸ್ಸುಗಳುಂಟಾಗುವವು. ವ್ಯಾಪಾರ ವ್ಯವಹಾರಾದಿಗಳಲ್ಲಿ ಅನೀಕ್ಷಿತ ನಷ್ಟಗಳೊದಗುವಪ್ಪ. ಸಮಾಜದಲ್ಲಿ ಒಳ್ಳೇ ಸ್ಥಾನಮಾನಗಳು ಲಭಿಸಲಿವೆ. ವಾರಾದಿಯ 2ದಿನಗಳು ಇದ್ದುದರಲ್ಲಿ ಉತ್ತಮ.

ಕನ್ಯಾ—ಸಾಂಸಾರಿಕ ತಾಪತ್ರಯದಿಂದ ಮುಕ್ತರಾದ ನಿಮಗೆ ನಿಮ್ಮ ನೀರೀಕ್ಷೆಗಿಂತ ಅಧಿಕವಾದ ಫಲವು ಲಭಿಸುವದು. ರಾಜಕೀಯ ಕಲಹಗಳು ರಾಜಕೀಯದಿಂದ ಪೀಡಾನಿವಾರಣೆಯಾಗುವ ಯೋಗವಿದೆ. ಮಿತ್ರವರ್ಗದವರ ಬೆಂಬಲದಿಂದಾಗಿ ಶತ್ರು ಜನರನ್ನು ಪರಾಭವಗೊಳಿಸುವಿರಿ. ಆತ್ಮೀಯರ ವಿರಹದಿಂದಲೂ ಮಾನಸಿಕ ವೇದನೆಯಿಂದಲೂ ಸದಾ ಸಂತಪ್ತರಾಗುವಿರಿ. ದೇಹದಲ್ಲಿನ ಆರೋಗ್ಯವೂ ಚೆನ್ನಾಗಿರದು. ವಾರಾಂತ್ಯದ 3 ದಿನಗಳು ಆಹ್ಲಾದವು ಉತ್ತಮವಾಗಿರ್ಪವು.

ತುಲಾ—ದೈವ ಬಲವು ಸಾಕಷ್ಟಿದ್ದರೂ ಆತ್ಮಬಲಹೀನರಾದ ನಿಮಗೆ ಯಾವ ಕಾರ್ಯವನ್ನೂ ಕೊನೆಗೊಳಿಸುವ ಶಕ್ತಿ ಸಾಮರ್ಥ್ಯವು ಇಲ್ಲವು. ಅದಕಾರಣದಿಂದಲೇ ಶತ್ರುಜನರ ಪೀಡೆಯು ಅಧಿಕವಾಗಿ ಧನಮಾನಗಳಿಗೆ ವಿಶೇಷ ಧಕ್ಕೆಯುಂಟಾಗುವದು. ವ್ಯಾಪಾರ ನೌಕರಿ ಮೊದಲಾದ ಉದ್ಯಮಗಳಲ್ಲಿ ಫಲವು ತೃಪ್ತಿಕರವಿರುವುದರಿಂದ ಆರ್ಥಿಕ ಬಿಕ್ಕಟ್ಟು ಉಂಟಾಗಲಾರದು. ವ್ಯಯಗತ ಶನಿಯಿಂದಾಗಿ ಸದಾ ಖರ್ಚೇ ತಪ್ಪದು. ವಾರಾಂತ್ಯದ 5ದಿನಗಳು ಸ್ವಲ್ಪ ಉತ್ತಮ ಫಲ ಕೂಡಲಿರುವವು.

ವೃಶ್ಚಿಕ—ನಿಮ್ಮ ಮನೋರಥವು ಅನಾಯಾಸದಿಂದ ನೆರವೇರುವದು. ಪ್ರಯತ್ನಕ್ಕಿಂತ ಅಧಿಕವಾದ ಫಲವು ಲಭಿಸುವದು. ರಾಜಕೀಯ ಕಲಹಗಳು ರಾಜಕೀಯದಿಂದ ಪೀಡಾನಿವಾರಣೆಯಾಗುವ ಯೋಗವಿದೆ. ಮಿತ್ರವರ್ಗದವರ ಬೆಂಬಲದಿಂದಾಗಿ ಶತ್ರು ಜನರನ್ನು ಪರಾಭವಗೊಳಿಸುವಿರಿ. ಆತ್ಮೀಯರ ವಿರಹದಿಂದಲೂ ಮಾನಸಿಕ ವೇದನೆಯಿಂದಲೂ ಸದಾ ಸಂತಪ್ತರಾಗುವಿರಿ. ದೇಹದಲ್ಲಿನ ಆರೋಗ್ಯವೂ ಚೆನ್ನಾಗಿರದು. ವಾರಾಂತ್ಯದ 3 ದಿನಗಳು ಆಹ್ಲಾದವು ಉತ್ತಮವಾಗಿರ್ಪವು.

ಧನು—ಅನೇಕ ದಿನಗಳಿಂದ ನಾನಾ ತೆರನಾದ ವಿಪತ್ಕಾಲಗಳಿಗೆ ಸಿಲುಕಿ ಅತೀವ ಕಷ್ಟದಿಂದ ದಿನಯಾಪನೆ ಮಾಡುತ್ತಿದ್ದ ನಿಮಗೆ ಇಂದೀಗ ಸುಸಮಯವು ಸನ್ನಿಹಿತವಾಗಿದೆಯೆಂದರೂ ಕಷ್ಟಾಗದು. ನಿರುದ್ಯೋಗಿಗಳೂ ಕೂಡ ಸದುದ್ಯಮದಿಂದ ಒಳ್ಳೇ ಧನಗಳಿಸುವರು. ವಿಶೇಷತಃ ನೀಚಜನರಿಂದ ಧನಲಭಿಸಲಿದೆ. ಕೆಲವೊಮ್ಮೆ ವಿನಾಕಾರಣ ಕಲಹ ಅಪ್ರಜನರಲ್ಲಿ ಅವಿಶ್ವಾಸ ವಾತದೋಷದಿಂದ ಅಂಗಾಂಗಗಳಲ್ಲಿ ನೋವು ಕಾಣಿಸಬಹುದು. ತಾ. 11, 12, ಅನುಕೂಲ ದಿನಗಳು.

ಮಕರ—ಇಷ್ಟಾನಿಷ್ಟಗಳಿಂದ ಸಮ್ಮಿಶ್ರವಾದ ಈ ವಾರದಲ್ಲಿ ನಿಮ್ಮ ಆಯವ್ಯಯಗಳು ಸಮತೂಕದಲ್ಲಿರುವವು. ಕೇವಲ ಆತ್ಮಬಲದಿಂದಲೇ ಶತ್ರುಗಳನ್ನು ದಿರಿಸಿ, ಸ್ವಕಾರ್ಯಸಾಧನೆ ಗೈವಿರಿ. ಖರ್ಚಿಗೆ ಸಾಕಷ್ಟು ಉತ್ಪತ್ತಿಯಿರುವುದರಿಂದ ದಿನಯಾಪನೆಯು ಕಷ್ಟವಾಗದು. ಪ್ರವಾಸಿಗಳಿಗೆ ಕಾಲವು ಪ್ರತಿಕೂಲವಿದೆ. ಪಿತ್ತೋಷ್ಣ ವಿಕಾರದಿಂದ ಆರೋಗ್ಯವು ಕೆಡಬಹುದು. ತಾ. 13, 14, ಈ ದಿನಗಳಲ್ಲಿ ಮಿತ್ರಸಮಾಗಮ, ಸುಖಲಾಭಗಳಿವೆ.

ಕುಂಭ—ಶಕ್ತಿಯಿದ್ದರೂ ಸಾಕಷ್ಟು ಧೈರ್ಯ, ಯುಕ್ತಿ, ಸಾಹಸಗಳ ಅಭಾವದಿಂದಾಗಿ ಹೆಚ್ಚಿನ ಸಮಯವನ್ನು ನಿರುದ್ಯೋಗದಿಂದ ಕಳೆಯುವಿರಿ. ದುಡುಕು ಸ್ವಭಾವದವರಾದ ನಿಮಗೆ ಕಷ್ಟನಷ್ಟಗಳು ಅನಿವಾರ್ಯವಿವೆ. ಉದ್ಯೋಗದಲ್ಲಿ ಪ್ರಗತಿಯಿದ್ದರೂ ಉತ್ಪತ್ತಿಯು ಕೃಷ್ಟಿಕರವಿಲ್ಲದ್ದರಿಂದ ದಿನಯಾಪನೆಯು ಕಷ್ಟಸಾಧ್ಯವಾಗುವದು. ಸ್ಥಿರಾಸ್ತಿಯಲ್ಲಿ ಅವಶ್ಯದಗಳುಂಟಾಗಬಹುದು ತಾ. 13, 14ರಲ್ಲಿ ಅತಿವ್ಯಯ ಕಾರ್ಯಹಾನಿ-

ಮೀನ—ಮಿಶ್ರಮಿಶ್ರದಿಂದ ಖರ್ಚುಗಳು ಉತ್ಪತ್ತಿಯನ್ನತಿಕ್ರಮಿಸಲಿವೆ. ನೌಕರ ವ್ಯಾಪಾರ ವೈದ್ಯ ಇತ್ಯಾದಿ ಉದ್ಯೋಗಗಳಲ್ಲಿ ಫಲಪ್ರಾಪ್ತಿಯು ಉತ್ತಮವಿರುವುದು, ಮಿತ್ರದೋಷದಿಂದ ಆರೋಗ್ಯ ಕೆಡುವದು. ಮನೋರೋಗವು ಸದಾ ಬಾಧಿಸಲಿದೆ. ಶತ್ರು ಜನರ ಪೀಡೆಯು ದಿನೇ ದಿನೇ ಅಧಿಕವಾಗಲಿದೆ. ಆತ್ಮೀಯರ ವಿರಹದಿಂದ ದುಃಖಿತರಾದ ನಿಮಗೆ ತಾ. 11, 12, 15, 16, 17 ಈ ದಿನಗಳಲ್ಲಿ ಕಾರ್ಯವಿಘ್ನ, ವ್ಯರ್ಥಖರ್ಚುಗಳುಂಟಾಗುವವು.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೊರ್ಯು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನ ಕ್ಕೆ ೧ಗುಳಿಗೆ, ಸಂಜೆ ೧ಗುಳಿಗೆಯಂತೆ ಊಟದ ಮೊದಲು ಕಕ್ಕೊಳ್ಳ ಬೇಕು. ಏಳುದಿವಸ ಈ ಔಷಧವನ್ನು ವಿಶ್ವಸನೀಯರಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಪೂಲಕರು:—ಹಾಲಪ್ಪಾ ಫಕೀರಪ್ಪಾ ಹಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ವಿದಂದಿರು:—ಹುಬ್ಳಿ ಫಾರ್ಮಸಿ,— ಹುಬ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಹಾನಸ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ,ಕೆಮಿಸ್ಟ್, ಹಾವೇರಿ ಬ್ಯಾಂಗಿ

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!
ಮನೆಯೆಂದಾದಲ್ಲಿ ಇರಲೇಬೇಕಾದ ಪುಸ್ತಕ
"ಮನೆ-ಮದ್ದು"
ಬರೆದವರು:. ಡಾಕ್ಟರ್ ಕೊರಡ್ಕಲ್ ವೆಂಕಟರಾಯರು, ಎಲ್.ಐ.ಎಮ್., ಉಡುಪಿ.
ಸುಮಾರು 200 ಪಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದು ಗಳು!
ಮಕ್ಕಳ ಪುತ್ತು ಹೆಂಗಸರ ಪಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣೆ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಪಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಪ್ರೊಪೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮಂತ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ.
ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.
ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ



ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್
English Made Easy
ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ ಪಿ ದ್ವಾರ ರೂ 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್ ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd No. ಕೆ. 361
LICENCE No. 31
Licensed to Post without registration

ಸ್ಥಾಪನೆ 1921
31ನೇ ವರ್ಷ

18—1—1951

Founder Sri A B. Shetty,
Minister for Agriculture & Veterinary.

ಮಾತಿನ ಮಂಟಪ

ದೇಶದ ಮಹಾಪುರುಷರಿಲ್ಲರೂ ಸಂದೇಶವು ಶಾಂತಿಯನ್ನೂ ನೀತಿಯನ್ನೂ ಸಾರುವಂತಹದಾಗಿರುತ್ತದೆ. ಯಾವುದೇ ದೇಶದ ಪುಣ್ಯ ಪುರುಷನನ್ನು ನೋಡಿದರೆ ಈ ತತ್ವವನ್ನು ಕಾಣಬಹುದು. ಅಂತಹ ಶಾಂತಿಪುರುಷರಲ್ಲಿ ಏಸುಕ್ರಿಸ್ತನೂ ಒಬ್ಬ. ಆದರ್ಶಕ್ಕಾಗಿ ನಾವಿಂದು ಏಸುಕ್ರಿಸ್ತನನ್ನು ತೋರಿಸುವುದುಂಟು. "ಒಂದು ಕೆನ್ನೆಗೆ ಹೊಡೆದರೆ—ಇನ್ನೊಂದು ಕೆನ್ನೆಯನ್ನು ತೋರಿಸು" ಎನ್ನುವ ಅತನ ತತ್ವ ರೂಢಿಯಲ್ಲಿಲ್ಲಗಲೂ ಹೇಳುವದಿದೆ. ಅತನ ಮತಾನುಯಾಯಿಗಳು ಮತಪ್ರಚಾರಕ್ಕೂ, ತತ್ವಪ್ರಚಾರಕ್ಕೂ ಉಳಿದೆಲ್ಲ ಜನಾಂಗಕ್ಕಿಂತ ಮಿಗಿಲಾದ ತ್ಯಾಗ—ಹೋರಾಟಗಳನ್ನು ಮಾಡಿರುವದನ್ನು ಇತಿಹಾಸ ಹೇಳುತ್ತದೆ. ಈಗಲೂ ಸ್ವಮತದಲ್ಲಿ ಅಚಲವಾದ ಶ್ರದ್ಧೆಯುಳ್ಳ ಜನಾಂಗವೆಂದರೆ ಕ್ರೈಸ್ತಯಾನದದು. ಒಂದು ಕಾಲಕ್ಕೆ ಅವರು ಬೇರೆ ಬೇರೆ ದೇಶದಲ್ಲಿ ಮತ ಪ್ರಚಾರಕ್ಕಾಗಿ ಏಸುವಿನ ಸಂದೇಶವನ್ನು ಸಾರುವದಕ್ಕಾಗಿ ಹೋಟು ದೇಶೀಯ ಜನರಿಂದ ಕೇಟಲೆಗಳಿಗೊಳಗಾದರೂ —ಪರಿಹಾಸ್ಯಕ್ಕೀಡಾದರೂ ಇಂದು ಎಲ್ಲೆಡೆಯಲ್ಲೂ ಅವರ ಮತದ ವ್ಯಾಪಕತೆ ಯಾವ ಆತಂಕವೂ ಇಲ್ಲದೆ ಸಾಗುತ್ತಲಿದೆ. ಅಂದರೆ ಜನರಲ್ಲಿ ಕೆಂಪಿಜ್ ವಿದ್ಯೆಯೂ ಬುದ್ಧಿಯೂ, ತತ್ವಾನ್ವೇಷಣ ಗುಣವೂ, ಸಾಹಾರ್ದ ಭಾವವೂ ಮೂಡಿಯಬೆಂದರೆ ತಪ್ಪಾಗದು! ಜಗತ್ತಿನ ಪ್ರಬಲ ರಾಷ್ಟ್ರಗಳೆಲ್ಲ ಶಾಂತಿಪುರುಷ ಏಸುವಿನ ತತ್ವಾನುಯಾಯಿಗಳಾದ ರಾಷ್ಟ್ರ! ಬ್ರಿಟನ್, ಅಮೆರಿಕಾ, ಜರ್ಮನಿ, ಫ್ರಾನ್ಸ್ ಮೊದಲಾದ ರಾಷ್ಟ್ರಗಳೂ ಅದೇ ಪಂಥದವುಗಳು. ಕ್ರಿಸ್ತನ ಪವಿತ್ರ ಗ್ರಂಥವಾದ ಬೈಬಲಿನ ಆದರ್ಶವನ್ನು ಎಲ್ಲ ಧುರೀಣರೂ ಶಾಂತಿ ಸಮಾಧಾನದ ಮಾತುಗಳನ್ನಾಡುವಲ್ಲಿ ಉಪಯೋಗಿಸುತ್ತಾರೆ. ಮಹಾತ್ಮಾ ಗಾಂಧಿಯವರೂ ಕೂಡಾ ಅತನ ಸಂದೇಶವನ್ನು ಜನಜಾಗೃತಿಯ ವಿಚಾರದಲ್ಲಿ ಆದರ್ಶವಾಗಿ ತೋರಿಸಿದ್ದಾರೆ. ಮಹಾತ್ಮಾ ಗಾಂಧಿಯವರೂ ಗೀತೆಯನ್ನು ಪ್ರೀತಿಸಿದಂತೆಯೇ ಅತನ ಶಾಂತಿ ಸಂಗೀತವನ್ನು ಮೆಚ್ಚುತ್ತಿದ್ದರು ಉತ್ತಮ ತತ್ವ—ಉತ್ತಮ ಆದರ್ಶ ಪ್ರಗತಿಯನ್ನು ಬಯಸುವ ಪ್ರತಿಯೊಂದು ರಾಷ್ಟ್ರಕ್ಕೂ ಅವಶ್ಯಕ. ಇಂತಹ ಆದರ್ಶ ಸಿದ್ಧಿಯಾಗಿರುವುದೆಲ್ಲಿ? —ಎಂದರೆ ಈ ಪ್ರಶ್ನೆಗೆ ಉತ್ತರಿಸುವುದು ತುಸು ಕಷ್ಟವಾಗುತ್ತದೆ. ಪ್ರಬಲ ಸಂಖ್ಯೆಯಲ್ಲಿ—ಅದೇ ತತ್ವದ ತಳಹದಿಯಲ್ಲಿ ರಾಜ್ಯಭಾರ ಮಾಡುವ ಒಕ್ಕೂಟವಾದ ಜನಸಂಖ್ಯೆಯುಳ್ಳ ಪ್ರಮುಖ ರಾಷ್ಟ್ರಗಳಲ್ಲಿಯೇ ಇರಬೇಕೆನ್ನುವುದು ವಾದದ ದೃಷ್ಟಿಯಲ್ಲಿ ಸರಿಯಾದೀತು ಕ್ರಿಯಾಚರಣೆಯಲ್ಲಿ— ಸಕ್ಯಾನುಕರಣೆಯಲ್ಲಿ —ಅದು ಬರಿಯ ಮಾತಿನ ಮಂಟಪವಾದೀತು.

ಇಂದು ಯುದ್ಧಾಸಕ್ತ ರಾಷ್ಟ್ರಗಳು ಅಂತಹ ಶಾಂತಿದೂತನ ಅನುಯಾಯೀ ರಾಷ್ಟ್ರಗಳೇ ಅವುಗಳಲ್ಲಿ ಆ ತತ್ವಗಳು ಸ್ಥಿರವಾಗಿವೆಯೇ? ನಿಜವಾದ ಸಂದೇಶವನ್ನು ಸಾರುತ್ತಿವೆಯೇ?

ಆಟಂ ಬಾಂಬನ್ನು ಹೊಕೆ ಲಕ್ಷ ಲಕ್ಷ ನಿರಪರಾಧಿಗಳನ್ನು ಕೊಂದವರು ಅವರೇ ಶಾಂತಿ ಶಾಂತಿಯೆಂದು ಪೂರನೆಯ ಯುದ್ಧಕ್ಕೆ ಧುರೀಣತ್ವ ಕೊಡವವರೂ ಅವರೇ. ಅಂದರೆ ತತ್ವ, ಧರ್ಮ ನೀತಿಗಳೆಲ್ಲ ತೋರಿಕೆಯ ಮಟ್ಟಿಗೆ; ಕಾರ್ಯಾಚರಣೆಗಲ್ಲವೆನ್ನೆವದನ್ನು ಈಗಿನ ರಾಜನೀತಿ ಪರಿ ಕಲಿಸಿದಂತಾಯಿತ. ಯಾರಿಂದು ಜಗತ್ತಿನ ಮಹಾವಿಭೂತಿ ಪುರುಷನ ಜ್ಞಾಪಕ ಮಾತಿನ ಮಂಟಪವನ್ನೇ ಬಳಸಿಕೊಳ್ಳುತ್ತಾನೆ ತನ್ನ ಸಾಲಿಗಿರುವ ಜೊತೆಯನ್ನು ಸುಲಭವಾಗಿ ಇನ್ನೊಬ್ಬನ ಮೇಲೆ ಹೇರುವದಕ್ಕೂ, ಆಪಾದಿತನವನ್ನು ಹಾರಿಸಿಕೊಳ್ಳುವದಕ್ಕೂ, ಬೇರೆಯವರ ತೇಜೋಭಂಗವನ್ನು ಮಾಡುವದಕ್ಕೂ, ಮಾತಿನ ಮಂಟಪವನ್ನು ಕಟ್ಟುತ್ತಾನೆ. ಸತ್ಯಕ್ಕೆ ವಿರೋಧವಾಗಿ ಆಡುವ ಮಾತು ಸುಳ್ಳೆಂದಾಗುತ್ತದೆ. ಸುಳ್ಳು ಹೇಳುವುದೂ ಒಂದು ಕಲೆ. ಅಂತಹ ಸುಳ್ಳಿನ್ನು ಸಾಧಿಸುವದೆಂದರೆ ಮಾತಿನ ಮಂಟಪ ಕಟ್ಟುವದೆಂದೇ ಅರ್ಥ. ಆತ್ಮಸಾಕ್ಷಿಗೆ ವಿರೋಧವಾಗಿ ರಾಷ್ಟ್ರವೂ, ಧುರೀಣರೂ, ಮಹಾನುಭಾವರೂ, ಮಂತ್ರಿಗಳೂ, ಸಾಮಾನ್ಯರೂ ಸುಳ್ಳು ನುಡಿಯುವದಿದೆ ಆದಂದು ಮಾತಿನ ಮಂಟಪದಿಂದಯದಾರ್ಭವಾಗಿ ತೋರುತ್ತದೆ. ಎಲ್ಲಿ ಸ್ವಾರ್ಥ ಸೂಕ್ಷ್ಮಚಿತ ಮನೋವೃತ್ತಿಗಳು ಬಯಲಿಗೆ ಬರುತ್ತವೋ—ಎಲ್ಲಿ ಬೇರೆಯವರ ವರ್ಚಸ್ಸು ಬೀಳದೆ ಸ್ವಾಧಿಕಾರ ಸ್ವಸಾವರ್ಥ್ಯದ ಪ್ರದರ್ಶನವಾಗಬೇಕಾಗುತ್ತದೆ—ಅಲ್ಲೆಲ್ಲ ಈ ಮಾತಿನ ಮಂಟಪ ಕಟ್ಟಬೇಕಾಗುತ್ತದೆ. ಸತ್ಯನಿರೂಪಕೆ —ಸಹಾನುಭೂತಿಯ ಘೋಷಣೆ ಉಪಯೋಗಕ್ಕೆ ಬೇಕಿಲ್ಲ. ಈ ಇಪ್ಪತ್ತನೆಯ ಶತಮಾನದಲ್ಲಿ ಮಾನವನ ಸಾಧನೆಯದ್ದಾದರೂ ಇಷ್ಟೆಯೇ! ವಿಜ್ಞಾನಕ್ಕೆ ದಾಸನಾಗಿ ಮಾನವೀಯತೆಯನ್ನು ಕಳೆದುಕೊಳ್ಳಬಾರದೆಂದು ಮಹಾತ್ಮಾಜೀಯವರು ಹೇಳಿದ್ದರು. 'ಮಾತಿನ ಮಂಟಪದಿಂದ ಮಾನವನ ಕೋಟೆ ಆದೋಗತಿಗಳಿಯುತ್ತಲಿದೆ' ಎನ್ನುವವರು ಅವರಿಗೆ ಬಲಿದಿಲ್ಲ ಬಾಯಿಬಲದಿಂದಲೇ ಸಾಧಿಸಿದ ಈ ಕಲೆಗೆ ಅಲಂಕಾರಿಕವಾಗಿ 'ಮಾತಿನ ಮಂಟಪ' ಎನ್ನಬಹುದಲ್ಲವೇ?

ಮಾನವನ ಭಾವನೆ-ವ್ಯಕ್ತಿತ್ವಗಳಿಗೆಲ್ಲ ಮಾತಿನ ಮಂಟಪವೇ ಬೆಂಗಳೂರು ಒಬ್ಬನ ಅಳಿವು ಉಳಿವಿನ ಪ್ರಶ್ನೆ ಕೂಡಾ ಈ ತತ್ವದಿಂದಲೇ ತೀರ್ಮಾನವಿಲ್ಲಗುತ್ತದೆ ಹೆಜ್ಜೇನು, ವನಸ್ಪತ್ಯಾಹಿಕ ಕ್ರಿಯೆಯನ್ನು ಪೂರ್ತಿ ಕಳೆದುಕೊಂಡ ತತ್ವರಹಿತ ಮಾತಿನ ವಲ್ಲಾಗಿದಾನೆ ಜನರನ್ನು ಬಡಿಸಿ ಮೆಲಂಬಿಸಿಕೊಂಡಿರುವುದು ಮಾತಿನ ತಂಟಪದ ಆಸ್ತಿವಾರವನ್ನೇ! ಇಂಥಾ ಸ್ಥಿತಿಯನ್ನವಲೋಕಿಸಿದಾಗ ತಮ್ಮ ಆನಂದಾರ್ಯವೇ ಮೇಲೇಳುವ ಮೌಲ್ಯ ವಿಲ್ಲವೆನಿಸಿವಿ ತ್ಯಾಲೀ ಕಾರಣತ್ತಿರವುದು ಮಾತಿನ ಸೌಂದರ್ಯ ಶಕ್ತಿಯಲ್ಲವಿಲ್ಲವೆ "ಮಾತಿನ ಮಂಟಪ ವನ್ನೇ.



THE UNITED KARNATAK
INSURANCE COMPANY LIMITED,
Unitd Karnatak Buildings, DHARWAR.
Lstablished 1929
ಕಳೆದ 20 ವರ್ಷಗಳಿಂದಲೂ ಸವಾ ಜನತಾಸೇವೆ ನೂಡುತ್ತಿದೆ

ಚೀನಾದ ಮಹಾಗುರು

ಬರೆದವರು: ಕಾರ್ತಿಕೇಯ.

ಕೂಂಗ್-ಫೂ-ಟ್ಜೆ— ಇದು ಚೀನೀಯರು ಅವನನ್ನು ಕರೆಯುವ ರೀತಿ. ಲೋಕದ ಉಳಿದ ಪಾಲಿಗೆ ಅವನು ಕನ್‌ಫ್ಯೂಷಿಯಸ್ ಆಗಿದ್ದಾನೆ. ವ್ಯಾಚೀನ ಚೀನಾ ಭಾರತದೊಡನೆ ನಿಕಟವಾದ ಸಂಪರ್ಕ-ಸಂಬಂಧವನ್ನು ಬೆಳೆಸಿಕೊಂಡಿದ್ದ ಒಂದು ಮಹಾ ಜನತೆಯ ಮಹಾ ದೇಶವಾಗಿ ವೈಭವದ ಹೆಸರು ಪಡೆದಿತ್ತು. ನಮ್ಮಲ್ಲಿ ಆರ್ಯ ಋಷಿಗಳು, ಉಪನಿಷದ್‌ಕಾರರು ಜನಜೀವನದಲ್ಲಿ ಅಧ್ಯಾತ್ಮವಾದದ ಪ್ರತಿಪಾದನೆ ಮಾಡಿ, ಸಾಮಾಜಿಕ ಬದುಕಿನ ಮಟ್ಟವನ್ನು ಉನ್ನತ ಸ್ಥಿತಿಗೇರಿಸಿದರು. ಅಂತೆಯೇ ಪುರಾತನ ಚೀನಾದ ಲೂ ಪ್ರಾಂತದಲ್ಲಿ ಎಪ್ಪತ್ತು ವಿಾರಿದ ವಯೋವೃದ್ಧ ಪೂ-ಲಿಯಾಂಗ್-ದೇಯು ಏಕಮಾತ್ರ ಪುತ್ರನಾಗಿ ಜನಿಸಿದನು. ಚೀನೀ ಜನ ಪ್ರತಿ ವರ್ಷ ೨೭ ಈ ಮಹಾಗುರುವಿನ ಜನ್ಮ ದಿನಾಂಕವೆಂದು ಗೌರವಿಸುತ್ತಾರೆ.

ಮಗ ಹುಟ್ಟಿದ ಮೂರು ವರ್ಷ ಕಳೆಯುವುದರಲ್ಲಿ ಪೂ-ಲಿಯಾಂಗ್-ಹೇ ಯ ಮರಣ ಸಂಭವಿಸಿತು. ಕೂಂಗ್-ಫೂ-ಟ್ಜೆಯ ತಾಯಿ ಅವನನ್ನು ತುಂಬ ಅಕ್ಕರೆಯಿಂದ ಸೋಷಿಸಿದಳು; ವಿದ್ಯಾ ಬುದ್ಧಿ ಕಲಿಸಿ ದೊಡ್ಡವನನ್ನಾಗಿಸಿದಳು. ಇವನಿಗೆ ಸರಕಾರದಲ್ಲಿ ಒಂದು ಸಣ್ಣ ನೌಕರಿಯೂ ದೊರೆಯಿತು. ಇತ್ತ ಮದುವೆಯೂ ಆಗಿ, ವರ್ಷ ಕಳೆಯುವುದರೊಳಗೆ ಪುತ್ರೋತ್ಸವವಾಯಿತು. ಆದರೆ ಕೂಂಗ್-ಫೂ-ಟ್ಜೆ ಗೆ ತನ್ನ ವ್ಯಾಸಂಗದ ಮೇಲಿನ ಅಭಿರುಚಿ ಕುಂದಲಿಲ್ಲ; ಜ್ಞಾನಾರ್ಜನೆಯ ಹಂಬಲ ತಗ್ಗಲಿಲ್ಲ.

ಜನಜೀವನದಲ್ಲಿ ಸಾಂಗತ್ಯ

ಚೀನಾದ ರಾಜಕೀಯ ಆಂದು ತುಂಬ ಕಲುಷಿತವಿತ್ತು. ಜನಜೀವನದಲ್ಲಿ ಸಾಂಗತ್ಯವಿಲ್ಲದೆ, ಬದುಕು ಜೀವನ ವಿಹೀನವಾಗಿತ್ತು. ಕೂಂಗ-ಫೂ-ಟ್ಜೆ ರಾಜಕೀಯ ರಂಗಕ್ಕೆ ಪ್ರವೇಶಿಸಿದುದು ಅಂತಃಕರಣದ ಪ್ರೇರಣೆಯಂತೆ: ಜನಹಿತ ಸಾಧನೆಯ ತೀವ್ರ ಆಕಾಂಕ್ಷೆಗೆ ಗುರಿಯಾಗಿ. ಜನರಿಗೆ ಬೇಕಾದುದು ಶಾಂತ, ಸುಖಪ್ರದ ಜೀವನ. ಇದಕ್ಕೆ ನೇರಾದ ದಾರಿ ರಾಜ್ಯದಲ್ಲಿ ನ್ಯಾಯವನ್ನು ಸರ್ವತ್ರ ಸ್ಥಾಪಿಸುವುದು. ಸಮಾಜ ಜೀವನಕ್ಕೆ ಬಾಧಕವೊಡ್ಡುವ ವಿದ್ರೋಹಗಳನ್ನು, ವಿಧ್ವಂಸಕ ಹಾಗೂ ದುಷ್ಟ ಕಾರ್ಯಗಳನ್ನು ಸಂಪೂರ್ಣ ದಮನಿಸುವುದೂ ಎಂದವನಿಗೆ ಮನವರಿಕೆಯಾಯಿತು. ಅವನು ತನ್ನ ರಾಜ್ಯದ ಆಡಳಿತ ಸೂತ್ರವನ್ನು ವಹಿಸಿದ ಕೆಲವೇ ಕಾಲದಲ್ಲಿ ದೇಶ ಸಮೃದ್ಧವಾಯಿತು; ಅನ್ಯಾಯ, ಅನಾಯಕತ್ವ ಹೇಳಹೆಸರಿಲ್ಲದಂತೆ ಅಡಗಿ ಹೋಯಿತು; ನ್ಯಾಯ, ನಿಷ್ಠೆ ಸುಖ ಶಾಂತಿಗಳು ನೆಲಸಿದುವು. ಜನರು ಮುಕ್ತಕಂಠದಿಂದ ಕೂಂಗ-ಫೂ-ಟ್ಜೆಯನ್ನು ಕೊಂಡಾಡಿದರು.

ಆದರೆ ಈ ಬಗೆಯ ಸೇವೆ ಅವನಿಂದ ಬಹುಕಾಲ ಸಲ್ಲಿಸಲಾಗಲಿಲ್ಲ. ರಾಜನ ಮನವನ್ನು ದುರ್ಜನರು ಹೆಣ್ಣಿನ ಕಡೆಗೆ ಒಲಿಸಿಕೊಂಡರು. ಕೂಂಗ-ಫೂ-ಟ್ಜೆ ಇದೇ ಅಸಹ್ಯವೇದನೆಯಿಂದ ಪದವಿಗೆ ಎಳ್ಳು ನೀರುಬಿಟ್ಟು, ಜನರ ನೇರಾದ ಸಂಪರ್ಕ ಪಡೆಯುವ ದಾರಿಯನ್ನು ಹಿಡಿದನು. ಹದಿಮೂರು-ಹದಿನಾಲ್ಕು ವರ್ಷಗಳು ಊರೂರು ಸುತ್ತಿ ತಿರುಗುತ್ತಾ ಸವೆದುವು. ಜನರ ಮನಃಪರಿವರ್ತನ ಕಾರ್ಯದಲ್ಲಿ ಅವನು ಪರಿಶ್ರಮ ವಹಿಸಿ ದುಡಿದನು. ಕಾಡಿನಲ್ಲಿ ನೆಲಸಿ, ವಿರಕ್ತನಂತೆ ಆತನು ಸಂಧಾನದ ಹೆಸರಿನಲ್ಲಿ ವ್ಯರ್ಥ ಕಾಲ ಕಳೆಯುವ ಚಿಂತಿಲ್ಲ. ಆದರೆ ನಾನು ಆವರನ್ನು ಆರಿತಿರುವೆನೇ ಎಂಬುದು ಮುಖ್ಯ" ಎನ್ನುತ್ತಾನೆ ಕೂಂಗ್-ಫೂ-ಟ್ಜೆ. ಅವನ ಚಿಕಿತ್ಸಕ ಬುದ್ಧಿಗೆ ಪಿಲುಕದ ವಿಷಯ ಯಾವುದೂ ಉಳಿಯಲಿಲ್ಲ. "ಸತ್ಯವೊಂದನ್ನೇ ಹುಡುಕು; ಸಮ್ಮನೆ ಊಹಾಪೋಹಗಳಲ್ಲಿಯೇ ಸಂತುಷ್ಟನಾಗಬೇಡ" ಎಂದು ಹೇಳಿದವನು, ತಾನೂ ಸಮಾಜಕ್ಕಂಟಿಕೊಂಡ ಜಾಡ್ಯದ ಮೂಲ ಹುಡುಕಲು ಯತ್ನಿಸಿದನು. "ಮಾತಿಗಿಂತಲೂ ಹೆಚ್ಚು ಮಹಾರ್ಗ ಅವನ ಮನಸ್ಸಿಗೆ ಇಷ್ಟೂ ಹಿಡಿಸಲಿಲ್ಲ. "ಸಂಕಟದಲ್ಲಿ ಸಿಕ್ಕದ ಜನರ ನಡುವೆ ಹೊರತು ಬೇರೆಲ್ಲಿ ಶಾಂತಿ ಇದೆ?" ಎಂದವನನ್ನು ಕಿಚ್ಚಿದ್ದ. ಜೀವನದ ಒಳ್ಳೆಯ, ಪವಿತ್ರ ಹಾಗೂ ಸರಮ ಪಾವನವಾದ ವಿಚಾರಗಳ ಕುರಿತು ಅವನು ಜನರಿಗೆ ಬೋಧನೆ ಕೊಡಲು ತೊಡಗಿದನು. ಅವನ ಮಾತುಗಳು ಒಬ್ಬ ಮಹ ಪುರುಷನಿಂದ ಅಚ್ಚಿನೊಳಗೆ ಬರುವಂಥವಲ್ಲ ದೇವರು ಇರುವನೆಂದು ಅವನು ನಂಬುತ್ತಿದ್ದನು, ನಿಜ. ಆದರೆ, ಜೀವ, ಮತ್ತು ಸಾವಿನ ಬಳಿಕ ದೇವರೊಡನೆ ಅದರ ಸಂಬಂಧ ಇಂತಹ ವಿಚಾರಗಳ ಕಡೆಗೆ ಮನಹರಿಯಿಸುವುದು; ಸಮಯದ ಅಪವ್ಯಯವೆನ್ನುತ್ತಿದ್ದ. "ಬದಕು ಏನೆಂಬುದನ್ನರಿಯದ ನಾವು ಸಾವಿನ ಕುರಿತೇಕೆ ಚಿಂತಿಸಬೇಕು? ನಮ್ಮ ಸುತ್ತಣ ಜನಕ್ಕೆ ಸೇವೆ ಸಲ್ಲಿಸಲು ಅರಿಯದೇನೆ, ದೇವರ ಪೂಜೆಯ ಭ್ರಾಂತಿ ವ್ಯರ್ಥ" ಎಂಬುದವನ ಧೋರಣೆ. ಜನಸಾಮಾನ್ಯರ ಅನುದಿನದ ವ್ಯವಹಾರದಲ್ಲಿ ಪರಸ್ಪರ ಆದರ, ವೇದನಾನಿರ್ಭಾವದ ಸ್ಥಾಪನೆಯೇ ಸ್ವರ್ಗ ಸುಖ ತರಬಲ್ಲುದು. ಒಬ್ಬರನ್ನೊಬ್ಬರು ಸಂಪೂರ್ಣವಾಗಿ ತಿಳಿದುಕೊಂಡು ನಡೆಯುವುದೇ ಸುಖ ಜೀವನದ ಅಸ್ತಿವಾರ ಎಂದವನು ಗಣಿಸುತ್ತಿದ್ದ.

ಸುವ್ಯವಸ್ಥಿತ ಸಮಾಜರಚನೆ

"ಇತರರು ನನ್ನನ್ನು ತಿಳಿಯದಿದ್ದರೆ ಅಸಹಾಯರಿಗೆ, ಅಂಗಹೀನರಿಗೆ, ರೋಗಿಗಳಿಗೆ ಸಮಾಜದ ಇತರರಿಂದ ನಿರಂತರ ಸಹಾಯ, ಸೇವೆ—ಹೀಗಿದ್ದು ಕೂಟನೀತಿ-ಕಾರಸ್ಥಾನಗಳಿಗೆ, ವಿದ್ರೋಹ-ದಂಗೆಗಳಿಗೆ, ಲೂಟಿ-ದರೋಡೆಗಳಿಗೆ, ಕೊಲೆ-ಹಿಂಸೆಗಳಿಗೆ, ಅಶಾಂತಿ-ಅತ್ಯಾಚಾರಗಳಿಗೆ ಅವಕಾಶವೇ ಇರಲಾರದು."

ವ್ಯವಹಾರವರಿತ ವಿವೇಕಿ

ಕೂಂಗ-ಫೂ-ಟ್ಜೆ ಕನಸುಗಾರನಲ್ಲ;ಭಾವವಾದಿಯೂ ಅಲ್ಲ. ಅವನು ವ್ಯವಹಾರವರಿತ ವಿವೇಕಿ. ಅವನ ಶಿಷ್ಯನೊಬ್ಬ ಅವನನ್ನು ಕುರಿತು "ಕೆಟ್ಟದ್ದಕ್ಕೆ ಪ್ರತಿಯಾಗಿ ಒಳ್ಳೆಯದು ಮಾಡಬೇಕೆ?" ಎಂದು ಕೇಳಿದ. "ಹಾಗಾದರೆ ಒಳ್ಳೆಯದಕ್ಕೆ ಪ್ರತಿಯಾಗಿ ಏನು ಮಾಡಬೇಕು?" ಎಂಬ ಗುರುವಿನ ಮರುಪ್ರಶ್ನೆ ಈ ಶಿಷ್ಯನನ್ನು ತೀರಾ ಮೂಕನಾಗಿಸಿತು. ಏನುತ್ತರ ಹೇಳಲೂ ಅವನಿಗೆ ತೋರಲಿಲ್ಲ. ಆಗ ಕೂಂಗ-ಫೂ-ಟ್ಜೆ "ಕೆಟ್ಟದ್ದಕ್ಕೆ ಒಳ್ಳೆಯದನ್ನು ಮಾಡಬೇಡ; ಕಡುಕನ್ನೂ ಮಾಡಬೇಡ; ನ್ಯಾಯವಾದುದನ್ನು ಮಾಡು. ಇತರರು ನಿನಗೆ ಏನನ್ನ ಮಕ್ತು ಯಾವುದನ್ನು ಮಾಡಕೂಡದು ಎಂದು ಬಯಸುತ್ತಿಯೋ ಅದನ್ನು ನೀನೂ ಬೇರೆಯವರಿಗೆ ಮಾಡಬೇಡ" ಎಂದು ಬೋಧಿಸಿದ.

ತನ್ನ ಜೀವಮಾನದ ಕೊನೆಯ ದಿನಗಳಲ್ಲಿ ಅವನು ದೇಶವಿಡೀ ಅಲೆದಾಡುವುದನ್ನು ನಿಲ್ಲಿಸಿ ತನ್ನ ನಾಡಿಗೇ ಮರಳಿದನು. ಕೂಂಗ-ಫೂ-ಟ್ಜೆ ತತ್ವಜ್ಞಾನಿಯಷ್ಟೇ ಅಲ್ಲ. ಕಲಾಪ್ರೇಮಿಯೂ ಹೌದು ನಾಡ ಚರಿತ್ರೆಯನ್ನು ಬರೆಯುತ್ತಾ ತನ್ನ ಮರಣ ಪರ್ಯಂತ (ಕ್ರಿ. ಪೂ ೪೭೯) ಜನಸೇವೆಯಲ್ಲಿಯೇ ಕಾಲ ಕಳೆದನು. ಆದರೆ ತನ್ನದೇ ಆದ ಉಪದೇಶ ವಾಕ್ಯವಳಿಗಳನ್ನು ಅವನು ಬರಿಯಲೇ ಇಲ್ಲ. ಇಂದು ಅವನ ನುಡಿಗಟ್ಟುಗಳೆಂದು ಹೆಸರಾದ "ಮಹಾ ಶಿಷ್ಟಣ", "ಸುವರ್ಣ ಮಾರ್ಗದ ಸೂಕ್ತಿ" ಇತ್ಯಾದಿಗಳನ್ನು ಒರೆದುದು ತ್ಸಿಂಗಸಿನ್, ತ್ಸಿಜ್ಸೆ ಮುಂತಾದ ಅವನ ಶಿಷ್ಯವೃಂದದ ಹಿರಿಯಾಳುಗಳು.

ಕೂಂಗ-ಫೂ-ಟ್ಜೆಯ ತತ್ವಜ್ಞಾನ ದೈನಂದಿನ ವ್ಯವಹಾರಕ್ಕೆ ತುಂಬ ನಿಕಟವರ್ತಿಯಾಗಿದೆ. ಭಾರತೀಯರ ಆತ್ಮ ಪರಮಾತ್ಮ ಸಂಬಂಧದ ಚರ್ಚೆಗಿಂತಲೂ ಇಲ್ಲಿ ಮನುಷ್ಯ ಮನುಷ್ಯರ ನಡುವಿನ ಬಾಂಧವ್ಯದ ಪ್ರತಿಫಲಪೂರ್ಣ ವಿವೇಚನೆ ಇದೆ. ಮಾನವನ ವಿಭಿನ್ನ ಪ್ರವೃತ್ತಿಯ ಮನಸ್ಸನ್ನು ಸುಸಂಸ್ಕೃತವಾಗಿಸಿ, ಐಕ್ಯಕ್ಕೆ ಹಣಗುವುದು, ಮತ್ತು ಅಸಾಮಾಜಿಕ ಹಾಗೂ ಸ್ವಾರ್ಥಪರ ವಿಚಾರಗಳಿಗೆ ಎಡೆ ಇರದ, ಸರ್ವಹಿತ ಸಂಬಂಧಿಯಾದ ಸೌಹಾರ್ದಮಯ ಸಮಾಜದ ರಚನೆಗೆ ವ್ಯಯತ್ನಿಸುವುದು ಅವನ ಉಪದೇಶದ—ಬದುಕಿನ ತಿರುಳು. ಇಂದಿನ ಕಲುಷಿತ ವಿಶ್ವಾವರಣದ ಜಗತ್ತಿನಲ್ಲಿ ಇಂತಹ ಒಂದು ಉಜ್ವಲತಮ ಆದರ್ಶ ನಮಗೆ ಬೆಳಕು ನೀಡುತ್ತಿದೆ; ದಾರಿ ತೋರಿಸುತ್ತಿದೆ- ಇವೇ ನವಯುಗಕ್ಕೆ ಬಾಳ್ವೆಯಕುರಿತಿಂದ ಭರವಸೆಯ ಮಾತಕತೆ; ಮತ್ತು ಆಶ್ರಯ ಸ್ಥಾನ.

ಪ್ರಧಾನ ಕಾರ್ಯಾಲಯಃ ಉಡುಪಿ. ಸ್ಥಾಪನೆಃ ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್
ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್)
ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI. (SOUTH INDIA) ESTD: 1935.

ಲೋಕಾಂತ

ಗಣಿತದ ಮಹತ್ವ

ಯುದ್ಧದ ಸುದ್ದಿಯಿಂದ ಜರ್ಜರಿತವಾದ ಜಗತ್ತಿನಲ್ಲಿ ಎಲ್ಲ ವಿಜ್ಞಾನಗಳಿಗಿಂತಲೂ ಗಣಿತ ಶಾಸ್ತ್ರವು ಅತ್ಯಂತ ಅಹಿಂಸಾತ್ಮಕವೂ, ಶಾಂತವೂ ಆದ ವಿಜ್ಞಾನವು ಎಂದು ಹೊಳೆಯುವುದರಲ್ಲಿ ಸಂದೇಹವಿಲ್ಲ. ಗಣಿತದಲ್ಲಿ ಏನು ಜಗಳ ಬಂದರೂ ಗುಂಡು-ಹಾರಾಟಬೇಕಾದುದಿಲ್ಲ ಪಕ್ಷ ಕಟ್ಟಬೇಕಾದುದೂ ಇಲ್ಲ. $2+2=4$ ಆಗಲಿ 5 ಎಂದು ಭಾವನಾವೇಶದಿಂದ ಸಮರ್ಥಿಸಬೇಕಾಗಿಲ್ಲ. ತರ್ಕಶಾಸ್ತ್ರವಾಗಿ, ವಿವರಣಪೂರ್ಣವಾಗಿ 5 ಎಂಬುದನ್ನು ತೋರಿಸಿಕೊಟ್ಟರೆ ಸರಿ. ಲೋಕದ ಎಲ್ಲ ಜನಾಂಗಗಳೂ ಅದನ್ನು ಒಪ್ಪಲೇ ಬೇಕು. ಗಣಿತಶಾಸ್ತ್ರದಲ್ಲಿ ಬರುವ ಸಿದ್ಧಾಂತಗಳು ಒಂದೋ ಸತ್ಯ ಅಥವಾ ಸುಳ್ಳು. ಬೇರೆ ತೃತೀಯ ಪಂಥವು ಇಲ್ಲಲ್ಲ. ಜನಸಾಮಾನ್ಯರ ಅಭಿಪ್ರಾಯವನ್ನು ಕೇಳಿ ಮತ ತೆಗೆಯುವುದೂ ಇಲ್ಲಿ ಅಗತ್ಯವಲ್ಲ. ಆದರೆ ಗಣಿತ ಶಾಸ್ತ್ರಜ್ಞರಲ್ಲಿ ಒಂದು ತೀವ್ರವಾದ ಮತ ಭೇದವುಂಟು. 'ಗಣಿತ ಎಂದರೆ ಏನು?' ಎಂಬುದು ಅವರಿಗೆ ಇನ್ನೂ ಖಚಿತವಾಗಿಲ್ಲವಂತೆ. ಅದು ಸ್ವತಂತ್ರ ಶಾಸ್ತ್ರವೋ, ಭೌತ ಶಾಸ್ತ್ರದ ಒಂದು ಇಲಾಖೆಯೋ ಎಂಬ ಬಗ್ಗೆ ಮಹಾ ಸಂದೇಹ ಉಂಟಂತೆ- ಉದಾಹರಣೆಗೆ ಐನ್‌ಸ್ಟೈನನ ಅಟಂ ಬಾಂಬಿಗೆ ಕಾರಣವಾದ $E=MC_2$ ಎಂಬ ಸಮೀಕರಣವು ಲೆಕ್ಕವೋ ಭೌತ ಶಾಸ್ತ್ರವೋ? ಗಣಿತ ಶಾಸ್ತ್ರಕ್ಕೆ ಯುನೈಟೆಡ್ ನೇಶನ್ಸ್‌ನಲ್ಲಿ ಪ್ರತಿನಿಧಿಗಳಿಲ್ಲದಿರುವುದರಿಂದ ಈ ಕಂದೇಹವು ಆಜಂದ್ರಾರ್ಥವಾಗಿ ಉಳಿಯುವುದೋ ಎಂದು ನಮ್ಮಂಥ ಮಂದಮತಿಗಳಿಗೆ ಸಂದೇಹವಾಗುತ್ತದೆ.

ಭವಿಷ್ಯದ ಆಶಾವಾದ

ಒಬ್ಬ ಸೋವಿಯಟ್ ಲೇಖಕನಿಗೆ ಒಂದು ಕಾರ್ಖಾನೆಯ ಕುರಿತು ಕಾದಂಬರಿ ಬರೆಯಲು ತಾಕೀತಾಯಿತಂತೆ. ಅವನು ಕಾರ್ಖಾನೆಯಿರುವ 'ಒಮಸ್ಕಿಗೆ' ಹೋದನಂತೆ. ಅಲ್ಲಿ ಕಾರ್ಮಿಕರು, ಮೇನೇಜರುಗಳು ಎಲ್ಲರನ್ನು ಸಂದರ್ಶಿಸಿ, ಸ್ಥಳದ ಮಾಹಿತಿ ಮಾಡಿಕೊಂಡು ಕೊನೆಗೊಂದು ದಿನ ತನ್ನ ಕಾದಂಬರಿಯ ವಸ್ತು ಏನೆಂದು ಅವರಿಗೆ ತಿಳಿಯ ಹೇಳಿದನಂತೆ. ಆ ನಡುವೆ ಎಲ್ಲೋ ಒಂದು ಕಡೆ ನಡೆಯಲು ಸರಿಯಾದ ಮಾರ್ಗವಿಲ್ಲ ಎಂಬ ಪ್ರಸ್ತಾಪ ಬರುತ್ತೆ. ಆಗ ಸೋವಿಯಟ್ ಕೆಲಸಗಾರರು ಸಹಜವಾಗಿ ಅವನನ್ನು ನಿಲ್ಲಿಸಿ ಪ್ರಶ್ನಿಸಿದರಂತೆ: ನಿಮ್ಮ ಕಾದಂಬರಿ ಬರೆಯಲು ಎಷ್ಟು ತಿಂಗಳು ಬೇಕು?— ಆರು ತಿಂಗಳು; ಅಚ್ಚು ಹಾಕಲು?—ಮೂರು ತಿಂಗಳು; ಪ್ರಕಟಿಸಲು?—ಎರಡು ತಿಂಗಳು; ಅಲ್ಲಾವೇ ಹಾಗಾದರೆ ಈ ಹನ್ನೊಂದು ತಿಂಗಳೊಳಗೆ ಅಲ್ಲಿ ನಾವು ಸರಿಯಾದ ರಸ್ತೆ ಹಾಕಿತ್ತೇವೆ. ಅದರಿಂದ ಕಾದಂಬರಿಯಲ್ಲಿ ಅಲ್ಲಿ ರಸ್ತೆ ಉಂಟೆಂತಲೇ ಬರೆದು ಬಿಡು ಎಂದು ಉಪದೇಶಿಸಿದರಂತೆ.

ಎಸ್ಟ್ಸ್‌ವೀನ್ ಮತ್ತು ಪ್ರೀಸ್ಟ್‌ಲೀ

ಮೂರ್ತಿ ಶಿಲ್ಪಕಾರ ಎಸ್ಟ್ಸ್‌ವೀನ್ ತಾನು ಕಂಡರಿಸಿದ ಜನಗಳ ಮನೋವೈತ್ತಿಯನ್ನು ಬಣ್ಣಿಸುತ್ತ ಬ್ರಿಟಿಷ ನಾಟಕಕಾರ ಸಾಹಿತಿ ಪ್ರೀಸ್ಟ್‌ಲೀಯ ಬಗ್ಗೆ ಒಂದು ವಿನೋದದ ಮಾತು ಹೇಳಿದ್ದಾನೆ. ಕೆಲವು ಜನ ತಾವು ಯೋಚಿಸುವುದನ್ನು ಮುಚ್ಚುಮರೆಯಿಲ್ಲದೆ ಹೇಳಿ ಬಿಡುತ್ತಾರಂತೆ. ಕೆಲವರು ಬಾಯಿ ಬಿಡದಿದ್ದರೂ ಮೂರ್ತಿಯ ರಚನೆಗಾಗಿ ತಾವು ಕೂತಿರುವ ಕಾಲವೆಲ್ಲ ಚಡಪಡಿಸುತಿರ ತ್ತಾರಂತೆ, ಅಂಥವರಲ್ಲಿ ಪ್ರೀಸ್ಟ್‌ಲೀ ಒಬ್ಬನಾಗಿದ್ದ. ಒಂದು ದಿನ ಸ್ಟುಡಿಯೋಕ್ಕೆ ಶೀಘ್ರವಾಗಿ ಬಂದು "ಎಸ್ಟ್ಸ್‌ವೀನ್, ಈಗ ತಿಳಿಯಿತು. ನಾವಿಬ್ಬರೂ ಲೋಕದ ಸ್ಮರಣೆಯಿಂದ ಮಾಯವಾಗದ ಹಾಗೆ ಈ ನನ್ನ ಮೂರ್ತಿ ಒಂದು ವಿನೋದ ರೂಪದಲ್ಲಿರುವುದು. ಜನರಿಗೆ ನಿನ್ನ ನೆನಪು ತಪ್ಪಿದರೆ ನೀನು ಬಿಡಿಸಿದ ನನ್ನ ಮೂರ್ತಿಯನ್ನವರು ಸ್ಮರಿಸಬಹುದು. ನನ್ನನ್ನವರು ಮರೆತರೆ ಹೇಗೂ ನೀನು ಬಿಡಿಸಿದ ನನ್ನ ಮೂರ್ತಿ ಇರುವುದಲ್ಲಾ?" ಎಂದು ಮೂರ್ತಿ ಶಿಲ್ಪಿಗೆ ಹೇಳಿದನಂತೆ.

ಎಟ್ನಾ ಪರ್ವತದ ಹರಿವು

ಇಟಲಿಯಲ್ಲಿರುವ ವೆಸುವಿಯಸ್ ಜ್ವಾಲಾಮುಖಿಗೆ ಅಲ್ಲಿನ ಎಟ್ನಾ ಒಂದೇ ಪ್ರತಿಸ್ಪರ್ಧಿ. ಕಳೆದ ವರ್ಷ ನವೆಂಬರ ಮಾಹೆಯಲ್ಲಿ ಅದು ಮರಳಿ ಸಜೀವವಾಯಿತು. ವೆಸುವಿಯಸ್ಸಿಗಿಂತ ಹೆಚ್ಚು ಸಲ ಪ್ರಪಂಚವು ಪ್ರಾಣಾಹುತಿಯಾದರೂ ಎಟ್ನಾ ಆದರಣೀಯ ಅಪಾಯಕಾರಕವಾದುದಲ್ಲ. ಎಟ್ನಾ ಪರ್ವತ ಬಲು ಹೊಚ್ಚಹೊಸ. ಶಿಖರದಲ್ಲಿ, ಅಂದರೆ ಬಾಯಿಯಲ್ಲಿ ಅದರ ವ್ಯಾಸವು ೩೫ ಮೈಲು. ಅದರಿಂದ ಹೊರಬಿದ್ದ ಲಾವಾ ರಸವು ಹರಿಯಲು ಬೇಕಾದಷ್ಟು ಸ್ಥಳ ಶಿಖರದ ಬುಡದಲ್ಲೇ ಇದೆ. ವೆಸುವಿಯಸ್ ಹೆಚ್ಚು ಸಮಯ ತೆಗೆದುಕೊಂಡು, ಒಳಗಿನ ಒತ್ತಡವನ್ನೆಲ್ಲ ಶೇಖರಿಸಿಕೊಂಡು, ಕಡೆಗೊಂದು ದಿನ ಒಮ್ಮೆಲೆ ವಿಶಿಷ್ಟ ಕಂಪನದೊಡನೆ ಸ್ಫೋಟವಾಗುವುದು. ಎಟ್ನಾದಲ್ಲಿ ಕರಗಿದ ಲಾವಾ ಸುಲಭದಲ್ಲಿ ಬಹಿರಂಗಕ್ಕೆ ಬರುವುದಲ್ಲದೆ, ಹಾಗೆ ಹೊರಗೆ ಹರಿಯಲು ಒಂದಲ್ಲ ಹಲವು ಮುಖಗಳಿರುವುದುಂಟು. ಮೊನ್ನಿನ ಸ್ಫೋಟವಾದಾಗ ಮೊದಲನೆಯ ವಿಸ್ಫೋಟವು ೯೫೦೦ ಅಡಿ ಎತ್ತರದ ಬಿಲ್ವಿಯೂ, ಎರಡನೆಯದು ೫೫೦೦ ಅಡಿ ಎತ್ತರದಲ್ಲಿಯೂ ಬಾಯಿಮಾಡಿಕೊಂಡು ಲಾವಾ ಕಾರುವ ದಕ್ಕಾರಂಭವಾಯಿತು. ಲಾವಾ ಒಂದರ್ಧ ಮೈಲು ಹರಿಯುವಾಗ ಹರಿವು ನಿಂತಿತು. ಕೆಲವು ದಿನಗಳ ಮೇಲೆ ಬಿಟ್ಟದ ಕೆಳಭಾಗದಲ್ಲಿ ಸಾಧಾರಣ ೪೦೦೦ ಅಡಿ ಎತ್ತರದಲ್ಲಿ ಬಾಯಿ ತೆರೆಯಿತು. ಅಲ್ಲಿಂದ ಗಂಟೆಗೆ ೩೦೦ ಗಜ ವೇಗದಲ್ಲಿ ಲಾವಾ ಹರಿಯಿತು. ಹರಿಯುವ ಜಾಗವು ನಿರ್ಜನವಾದ ಪ್ರದೇಶವಾದುದರಿಂದ ಹಾನಿಯಿಲ್ಲ. ತಪ್ಪಲನ್ನು ಬಿಟ್ಟು ಜನನಿಬಿಡವಾದ ಕಣಿವೆಯನ್ನು ಳಿಯಲು ಆರಂಭಿಸಿದರೆ ಮಾತ್ರ ಅಪಾಯ. ಆಗ್ನಿ ಶಾಮಕ ದಳಗಳು ಪೋಲೀಸರೂ ಜೊಳ್ಳಿಗಂಗೆ ನೆರವು ನೀಡಲು ಸಿದ್ಧರಾಗಿ ಕೂತಿದ್ದಾರೆ. ಸಾವಿರಾರು ಜನ ಪ್ರೇಕ್ಷಕರು ಈ ಹಳ್ಳಿಗಳಿಗೆ ಧಾವಿಸಿಬರುತ್ತಿದ್ದಾರೆ.

ಟೈಪು ರೀ ಕ್ಯಾಸ್ಟಿಂಗ್ ಛಾರ್ಜನ್ನು ಅರ್ಧಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳಿ

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ ಮೈಸೂರು ಟೈಪು ಫೌಂಡರಿಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕ್ಯಾಸ್ಟ್ ಮಾಡಿಸುವುದರಿಂದ ವಿಪರೀತ ಉಳಿತಾಯವಾಗುತ್ತದೆ.

ಸಾವಿರ ಪೌಂಡು ಮತ್ತು ಹೆಚ್ಚಿಗೆ ಪೌಂಡಿಗೆ 0—10—0 | ಐನೂರು ಪೌಂಡು ಮತ್ತು ಹೆಚ್ಚಿಗೆ ಪೌಂಡಿಗೆ 0—12—0

ಸೇಲ್ಸ್ ಟ್ಯಾಕ್ಸ್, ಪ್ಯಾಕಿಂಗ್ ಮತ್ತು ಫಾರ್ಪಡಿಂಗ್ ಛಾರ್ಜ ಮುಫತ್ತು.

ಇಂದೇ ವಿವರಗಳಿಗೆ ಬರೆಯಿರಿ: ಮ್ಯಾನೇಜರ್,

ಮೈಸೂರು ಟೈಪು ಫೌಂಡರಿ,

ಬೆಂಗಳೂರು-2

For Life Assurance

CONSULT

THE NEW GUARDIAN OF INDIA

LIFE ASSURANCE CO LTD.

(Established 1934)

Chairman: Sri M. C. T. M. Chidambaram Chattiyar

A Policy in this progressive Life Office is a investment, its Agency is a valuable business connection.

MANGALORE BRANCH: K-5 R. Road, Hampankatta, MANGALORE.

HEAD OFFICE: United India Life Building, MADRAS 142.

ಭಾರತದಲ್ಲಿ ಕ್ಷಯರೋಗ ಮುದ್ರೆಯ ಮಾರಾಟದ ಚಿಕ್ಕವಳ

(ಭಾರತ ಕ್ಷಯರೋಗ ಸಂಘ ಹೊಸದಿಲ್ಲಿ—ಇವರ ನೇತೃತ್ವದಲ್ಲಿ.)

ಕ್ಷಯರೋಗ:—

ಬಹು ಕಾಲ ಹಿಂದಿನ ಹಳೆಯ ರೋಗವಿದು!
ಶಿಲಾಯುಗದಲ್ಲಿಯೂ ಅದಲ್ಲಿತ್ತು!!
ಅಣುಶಕ್ತಿಯ ಯುಗದಲ್ಲಿಯೂ ಅದಲ್ಲಿದೆ!!!

ಇತಿಹಾಸ ಉದಯಿಸಿದ ಆಂದಿನಿಂದ ಪ್ರಥಮ ಬಾರಿಯಾಗಿ ಕ್ಷಯರೋಗವನ್ನು ಜಯಿಸಲು ಸಾಧ್ಯವೆಂದು ನಾವೀಗ ಹೇಳಬಲ್ಲೆವು.

ಆದರೊಡನೆ ಹೋರಾಡಲು ಭಾರತದಲ್ಲಿನ ಕ್ಷಯರೋಗ ಸಂಘಗಳಿಗೆ ಆಯುಧಗಳು ಅವಶ್ಯಕ. ಆಯುಧಗಳೆಂದರೆ ಹಣ. ಸರಕಾರದ ಬೊಗಸೆ ಬೊಗಸೆಯ ವಂತಿಗೆಗಿಂತ ನಮ್ಮ ಜನರ ಪ್ರತಿಯೊಂದು ಆಣೆಗೆ ಬೆಲೆ ಅಧಿಕ!

ಕ್ಷಯರೋಗದೊಡನೆ ಹೋರಾಡಲು ಕ್ಷಯರೋಗ ಸಂಘಗಳಿಗೆ ದಯವಿಟ್ಟು ಸಹಾಯ ಮಾಡಿ.

ನಿಮ್ಮ ಸ್ಥಳೀಯ ಮುಖ್ಯ ಪೋಸ್ಟ್ ಆಫೀಸಿನಿಂದ ಅಥವ ಮದ್ರಾಸ್ ಕ್ಷಯರೋಗ ಸಂಘದ ಗೌರವಾರ್ಥ ಕಾರ್ಯದರ್ಶಿಯಿಂದಾಗಲಿ, ಆರೋಗ್ಯಶಾಖಾಧಿಕಾರಿ, ರಿಪ್ಪನ್ ಬಿಲ್ಡಿಂಗ್ಸ್, ಮದ್ರಾಸ್ 3 ಇವರಿಂದಾಗಲಿ ಒಂದಾಣೆ ಮುದ್ರೆಗಳನ್ನು ಕೊಂಡುಕೊಳ್ಳಿರಿ.

[ಈ ಸ್ಥಳ: ಕೆನರಾ ಬ್ಯಾಂಕ ಲಿಮಿಟೆಡ್-ಇವರ ಸೇವಾವ-ಪ್ರ]

ವಿಶ್ವಮೇಧದ ಕರಿನೆರಳು

ಲೇಖಕರು— ಎಚ್. ಸುಂದರರಾಯರು, ಎಮ್. ಎ.

ಜಾಗತಿಕ ಸಮರದ ಉದ್ದವಾದ ಕರಿನೆರಳು ಕೊರಿಯಾದಲ್ಲಿ ಈಗಾಗಲೇ ಬಿದ್ದಾಯಿತೆಂದು ಪ್ರಿನ್ಸಿಪಾಲ ಸುಂದರರಾಯರು ಸತ್ತ್ವಪೂರ್ಣವಾಗಿಯೂ, ಸತ್ತ್ವಪೂರ್ಣವಾಗಿಯೂ ವಾದಿಸುತ್ತಾರೆ.

ದುರಂತದ ಸಂಕೇತ

ಇಂದು ಕೊರಿಯಾ ವಿಫಲಯತ್ನದ ದುರಂತಕ್ಕೆ ಸಂಕೇತ ಶಬ್ದವಾಗಿ ಪರಿಣಮಿಸಿದೆ- ಅಂತರರಾಷ್ಟ್ರೀಯ ಜಗಳಗಳನ್ನು ಯುದ್ಧವಿಲ್ಲದೆ ತೀರ್ಮಾನಿಸುವ ಯತ್ನದ ವಿಫಲತೆಗೆ ಕೊರಿಯಾ ಸಾಕ್ಷಿ ಹೇಳುತ್ತಿದೆ. ದಿನದಿಂದ ದಿನಕ್ಕೆ ಪರಿಸ್ಥಿತಿ ವಿಷಮವಾಗುತ್ತಿದೆ. ಫೆನಸ್ತಿಕೆ, ಘೋಣೆ ಪ್ರಚಾರ, ಅದರ್ಶರಾಜನೆಯ ವಾಗಾಡಂಬರಗಳಿಗೆ ತಮ್ಮ ಮನಸ್ಸನ್ನೂ ತಾಳಗೆಯನ್ನೂ ಮಾರಿ, ಪ್ರಜಾತಂತ್ರವನ್ನುಳಿಸುತ್ತೇವೆಂದೂ, ಆಕ್ರಮಣವನ್ನೂ ಹಿಕ್ಕಿ ಕ್ಕುವೆನೆಂದೂ ಭಾಷಣದ ಸುರಿಮಳೆಯನ್ನು ಕರುವ ಅಂತರರಾಷ್ಟ್ರೀಯ ಮುಳ್ಳು ಪ್ಪಿಗಳೊಂದು ಕಡೆ- ಚೀನೀ ಅವೇರಿಕನ್ ಬಾಂಬುಗಳಿಂದ ಜೀವರಕ್ಷಣೆಮಾಡಿ ಕೊಳ್ಳಲು ಸಾಧ್ಯವಾಗದೆ ವಿಲಿ ವಿಲಿ ಒದ್ದಾಡಿ ಸಾಯುತ್ತಿರುವ ನಿಷ್ಪಾಪಿ ಕೊರಿಯದ ಜನರು ಒಂದು ಕಡೆ- ಮಾತಿಗೂ ಕೃತಿಗೂ ಇದುವೇ ಅಂತರ. ನಮ್ಮ ಪತ್ರಿಕೆಗಳು ನಮಗೆ ಪ್ರತಿದಿನವೂ ಆದುರ್ದೈವಿ ದೇಶದಲ್ಲಿ ನಡೆಯುತ್ತಿರುವ ಭಯಂಕರ ನೇಡು ಕರುಣಾಹೀನ ನರಹತ್ಯೆ ಮಂತಾದ ಪಾಶವೀ ಕೃತ್ಯಗಳ ವರ್ತಮಾನವನ್ನು ತಂದುಕೊಡುತ್ತಿವೆ. ಇಂಥ ಅನಾಗರಿಕ ವರ್ತನೆಯಲ್ಲಿ ಚೀನೀಯರೂ ಇದ್ದಾರೆ. ನಾವು ಕಾಣುವ ಚಿತ್ರಗಳಲ್ಲಂತೂ ಸಾಮೂಹಿಕ ನರಹತ್ಯೆಯ ಒಂದು ಮಹಾಪರ್ವವೇ ಕೊರಿಯದಲ್ಲಿ ಆರಂಭವಾದಂತೆ ತೋರುವುದು.

ಮೂಲ ಹೇತು

ತೃತೀಯ ಮಹಾಸಮರದ ಆರಂಭವೋ ಎಂದು ನಮಗೆ ಅಂಜಿಕೆ ಹಾಕುತ್ತಿರುವ ಕೊರಿಯಾ ಜಗಳ ಬರೇ ಒಂದು ಸಣ್ಣ ಕಾರಣದಿಂದಾಗಿ ಬಲವಾಯಿತು. ಕೃತ್ರಿಮವಾದ ಸಿಲೆಯ ಅಕ್ಷಾಂಶವೆಂಬ ಇಲ್ಲದ ಗಡಿಯನ್ನು ನಿರ್ಮಿಸಿದುದೇ ಕೊರಿಯಾ ಪ್ರಕರಣಕ್ಕೆ ಮೂಲನೇತ. ಗಡಿಯುತ್ಪಾದಕ್ಕೆ ಚೀನಾ-ರಷಿಯಗಳ ಪ್ರಭಾವ ಮಯವೆಂದೂ, ದಕ್ಷಿಣಕ್ಕೆ ಅಮೇರಿಕದ ಸಂಯುಕ್ತರಾಜ್ಯದ ಪ್ರಭಾವ ವಲಯವೆಂದೂ, ಪರಸ್ಪರ ಎಣಕೆಯಂಟುದಾದೇ ಅನ್ಯಾಯದ ಬೀಜವಾಯಿತು. ಇಂಥ ಇಸ್ಪೀಟು ನಿರ್ಪಾಡು ವಿಫಲವಾದ ದರಲ್ಲಿ ಆಶ್ಚರ್ಯವಿಲ್ಲ. ಕಮ್ಯೂನಿಸ್ಟ್ರದಾಗಲೀ ಪ್ರಜಾತಂತ್ರವಾದಿಗಳದಾಗಲೀ ಗೊಂಬೆ ಸರಕಾರಗಳು ಬಹುಕಾಲ ಬಾಳಲಾರವು ಎಂಬುದೂ ಅಚ್ಚರಿಯಲ್ಲ. ಅಸೀರಿಕದ- ಹಾಗೂ ರಷಿಯದ ವಿಶಿಷ್ಟ ವರ್ಚಸ್ಸಿನಿಂದ ಅರೋಗ್ಯಕರವಾದ ರಾಜಕೀಯ ಸಂವಿಧಾನವು ಸೇರಿಬರುವುದಿಲ್ಲ. ಆಮೆರಿಕವು ಕೊರಿಯದ ಬಗ್ಗೆ ಅನಾವಶ್ಯಕವಾಗಿ ತೀವ್ರ ಆಸಕ್ತಿ, ಪಹಿಸಿದುದೇ ಎಲ್ಲ ಕೊಂದರೆಗಳನ್ನು ತಂದೊಡ್ಡಲು ಕಾರಣವಾದುದು. ಅಮೇರಿಕಕ್ಕೆ ಕೊರಿಯಾ ಯಾತಕ್ಕೆ ಬೇಕಾಗಿದೆ? ಎಂಬುದೂ ಏಶಿಯಾ ಖಂಡವರಿಗೆ ತಿಳಿಯದ ವಿಷಯ. ಜಪಾನಿನಲ್ಲಿ ಇಮೇರಿಕವು ಭದ್ರವಾಗಿ ಬೇರು ಬಿಟ್ಟಿದೆ; ಕೊರಿಯಾ ಜಪಾನಿಗೆ ಬೇಗುವರ ರಾಜಮಾರ್ಗದಲ್ಲಿದೆ; ಆದ್ದರಿಂದ ಜಪಾನು ಕೈಯೊಳಗಿರುವ ತನಕ, ಕೊರಿಯ ಇನ್ನೆಷ್ಟರ ವರ್ಚಸ್ಸಿಗೆ ಒಳಗಾಗಿ ಬಾರದು ಎಂಬ ಸಾಮ್ರಾಜ್ಯವಾದೀ ಲಾಲಸೆಯನ್ನೆ ರಿಕ ಏಶಿಯಾದ ಜನಗಳು ಅನೇಕರಿಂದ ಧ್ಯೇಯದ ಬಗ್ಗೆ ಸಂಶಯವನ್ನು ಕೈಬಿಯ ಬಗ್ಗೆ ಅಸಂತೃಪ್ತಿಯನ್ನು ಕಾಳಿರುವರು.

ಪ್ರಗತಿಶೀಲ ವರಿವರ್ತನೆ

ಇಂಥ ಸಾಮಾನ್ಯ ತತ್ತ್ವಗಳನ್ನು ಕೊಂಜ ಬದಿಗಿರಿಸಿದರೆ ಆಗ ಕೆಲ ಸಂಗತಿಗಳು ಸ್ಪಷ್ಟವಾಗುವುವು. ಕೊರಿಯದಲ್ಲಿ ನಡೆಯುತ್ತಿದ್ದುದು ಮೂಲತಃ ಒಂದು ಯಾದವೀ ಯುದ್ಧ. ಇದರಲ್ಲಿ ಅಮೇರಿಕವು ಹೆಸ್ತಕ್ಷೇಪ ಮಾಡುವ ಅಗತ್ಯವೇನಿತ್ತು? ರಷಿಯದ ವರ್ಚಸ್ಸನ್ನು ಕೊರಿಯದಲ್ಲಿ ಹೆಚ್ಚದಂತೆ ನೋಡಬೇಕು, ನಿಜ, ಅದರೆ ಯುದ್ಧಕ್ಕೆ ಧುಮುಕಲು ಅಷ್ಟೊಂದು ನಿರ್ಬಲ ಕಾರಣವು ನ್ಯಾಯವಾದುದೆ? ವಿಲಾಯತಿ ರಾಷ್ಟ್ರಗಳಲ್ಲಿಂತೋ ಅಂತೆಯೇ ಹಿಂದುಳಿದ ಏಶಿಯದ ದೇಶಗಳಲ್ಲಿಯೂ ರಷಿಯದ ಪ್ರಭಾವವು ದಿನೇ ದಿನೇ ವರ್ಧಿಸುತ್ತಿರುವೆದು ಯುದ್ಧಾನಂತರದ ಕಾಲದ ಏತಿಹಾಸಿಕ ಸತ್ಯತಾನೆ? ಅದಕ್ಕೇಕೆ ಆಕ್ಷೇಪಿಸಬೇಕು? ಆಕ್ಷೇಪಿಸಿದರೆ ಏನು ಬಂದಂತಾಯಿತು? ಆದ್ದರಿಂದ ಇಷ್ಟೇ ಮಹಾ ಕಾರಣವಲ್ಲ ಬೇರೆ ಆಳವಾದ ಯಾವುದೋ ಸಂಗತಿ ಇರಬೇಕು ಎಂದು ಗೋಚರವಾಗುವುದಿಲ್ಲವೆ? ಕಮ್ಯೂನಿಸ್ಟ್ ಅಧಿಕಾರಶಾಹಿಗೂ ಸರ್ವತಂತ್ರ ಸ್ವತಂತ್ರವಾದ ಪ್ರಜಾತಂತ್ರಾತ್ಮಕ ಸಮಾಜಕ್ಕೂ ಕಾಳಗ ನಡೆಯುತ್ತಿದೆ ಎಂದು ವಾದಿಸಿದರೆ- ಸಾಲದು ಎಂಬುದಕ್ಕೆ ಬಿಯಾಂಗನ ಚೀನ ಮಳಿನರಮನೆಯಂತೆ ಕುಸಿದು ಬಿದ್ದ ಒಂದು ನಿದರ್ಶನವು ಸಾಕು. ಲಂಚ, ವಂಚನೆ, ಕಪಟ, ಬಡತನಗಳಿಗೆ ಚೀನವನ್ನು ಬಲಿಕೊಟ್ಟ ಕೊಮಿಂಟಾಂಗ ಸರಕಾರವು ಉರುಳಿ ಪ್ರಬಲವಾದ ಚೀನೀ ಜನತಾ ಸರಕಾರ ಉದಿಸಬೇಕಾದುದು ನ್ಯಾಯವೂ, ವಿವೇಕಪೂರ್ಣವೂ ಆಗಿದೆ. ಈ ಪರಿವರ್ತನೆಯಲ್ಲಡಗಿರುವ ಪ್ರಗತಿಶೀಲತತ್ತ್ವವನ್ನು ನಾವು ಮರೆಯಲು ಸಾಧ್ಯವಿಲ್ಲ.

ನೆಹರೂ ಸೂಚನೆ

ಏಶಿಯದಲ್ಲಿ ರಾಜಕೀಯ ತತ್ತ್ವಗಳಿಗಿಂತಲೂ ದೊಡ್ಡ ಐತಿಹಾಸಿಕ ಶಕ್ತಿಗಳು ಕ್ರಿಯಾಶೀಲವಾಗಿರುವುದನ್ನು ಗಮನಿಸುವ ಪಕ್ಷಕ್ಕೆ ಕೊರಿಯ ಸಮರವು ಯುನೈಟೆಡ್ ನೇಶನ್ಸಿನ ಧ್ಯೇಪವಾದಿ ಪ್ರಚಾರವು ನನ್ನನ್ನು ನಂಬಿಸಲು ಯತ್ನಿಸುವಷ್ಟು ಸಾಧ್ಯವಾದುದಲ್ಲವೆಂದು ಯಾರಿಗೂ ಹೊಳೆದೀತು. ಏಶಿಯದಲ್ಲಿ ಶತಮಾನಗಳಿಂದ ಜೀವವನ್ನು ಕೊರೆದು ತಿನ್ನುತ್ತಿರುವ ಪತನಹೇತುಗಳನ್ನು ನಿರ್ಮೂಲನ ಮಾಡುವ ಸುಸಂಧಿಯಲ್ಲಿ ಆಕ್ರಮಣವು ಕ್ಷುಲ್ಲಕವಾದ ರೂಪವನ್ನು ತಳೆಯುವುದು. ಕೊರಿಯವನ್ನು 'ರಕ್ಷಿಸಲು' ಆತ್ಯಗಬುದ್ಧಿಯಿಂದ ಆತುರವಾದ ಸಂಸ್ಥೆಯ ಫೆನೋದ್ದೇಶಗಳನ್ನು ಪ್ರಶ್ನಿಸುವ ಧೈರ್ಯ ನನಗಲ್ಲವಾದರೂ ಜಾಗತಿಕ ರಾಜಕೀಯದ ಚದುರಂಗದಲ್ಲಿ ಫೆನೋದ್ದೇಶಗಳನ್ನು ಅತ್ತದೂಡಿ ಕಾರ್ಯಕ್ಕೆ ನೆರವಾಗುವ ಘೋಣೆಯನ್ನು ಅನುಸರಿಸಬೇಕಾದುದು ಅಗತ್ಯ ಎಂಬುದರಲ್ಲಿ ಸಂದೇಹವಿಲ್ಲ. ಪಂಡಿತ ನೆಹರೂ ಅವರು ಕೊರಿಯಾ ಸಮರದ ಮೊದಲ ಅಧ್ಯಾಯದಲ್ಲೇ ಅದನ್ನು ಹಬ್ಬಲುಬಿಡಬಾರದೆಂದು ಎಂಡು ಸೂಚನೆಗಳನ್ನು ನಿರ್ಮಲಾಂತಃಕರಣದಿಂದ ಮುಂದಿಟ್ಟು ತಾನು ಜಾಗತಿಕ ರಾಜಕಾರಣಿಗಳಲ್ಲಿ ಅಗ್ರಗಣ್ಯನೆಂಬುದನ್ನು ಸವರ್ಥಿಸಿಕೊಂಡಿದ್ದಾರೆ. (೧) ಚೀನ ಮತ್ತು ರಷಿಯಗಳ ಒಗನೆ ಮಾತುಕತೆ ನಡೆಯಿಸಬೇಕು. (೨) ಚೀನಕ್ಕೆ ಯುಕ್ತರಾಜ್ಯ ಸಂಘದ ಸದಸ್ಯತನವನ್ನು ಕೊಡಬೇಕು-ಎಂದು ನೆಹರೂ ಹೇಳಿದ ಮಾತನ್ನು ಸಂಯುಕ್ತ ರಾಜ್ಯ ಹಾಗೂ ಬ್ರಿಟನಿನ ರಾಜಕಾರಣಿಗಳು ಗಂಭೀರವಾಗಿ ಪರ್ಯಾಲೋಚಿಸಿದ್ದೇ ಆದರೆ ಈ ಮೂರು ತಿಂಗಳ ಚರಿತ್ರೆಯೇ ಬೇರಾಗಬಹುದಿತ್ತು. ವಿಶಿಯದವನಿಂದ ಬಂತೆಂದು ಈ ಬಗೆಯ ದುರಭಿಮಾನವೋ? ಅಥವಾ ಪಾಶ್ಚಾತ್ಯ ಧುರೀಣರ ಮಾನಸಿಕ ದಿವಾಳಿತನದ ಪ್ರದರ್ಶನವೋ- ಅಂತೂ ನೆಹರೂ ಸೂಚನೆಗೆ ಆಹ್ವಾನವನ್ನಂತೆ ದೊರೆಯದೆ ಹೋಯಿತು.

ಫೆನಸ್ತಿಕೆ ಅಡ್ಡಬಂತೆ?

ದಿವಂಗತ ಲಾಸ್ಕಿಯವರು ಹೇಳಿದ್ದಾರೆ 'ಯುದ್ಧವು ಮಾಡಿದುದಕ್ಕಿಂತಲೂ ಅಪರವಾದ ಹಾನಿಯು ಲೋಕದಲ್ಲಿ ಫೆನಸ್ತಿ (Prestige)ಯಿಂದಾಗಿ ಸಂಭವಿಸಿಯದೆ ಇದು ನಿಜ. ವಿಶ್ವ ಸಂಘಕ್ಕೆ ಚೀನವನ್ನು ಒಳಗೆ ಬಂದಂತೆ ತಡೆಯುವುದು ಸಂಯುಕ್ತರಾಜ್ಯದ ಫೆನಸ್ತಿಕೆ. ಸಾಮ್ರಾಜ್ಯವಾದಿ ಮೆಕಾರ್ಥರನು ಕಿಲಿಯ ಅಕ್ಷಾಂಶವನ್ನು ದಾಟುವೆನೆಂದು ಹೇಳಿದಾಗ ಅಮೇರಿಕ ಒಪ್ಪಿದುದಕ್ಕೆ ಕಾರಣ ಟ್ರೂಮನ್ನ ಮಹಾಶಯನ ಫೆನಸ್ತಿಕೆ. ಘೋರ್ನೋಸದ್ಧ ಬಿಯಾಂಗನನ್ನು ಎತ್ತಿ ಹಿಡಿಯುವ ಘೋಣೆ ಅನುಸರಿಸುವಂತೆ ಮಾಡಿದುದೂ ಡಲಲ್-ಮತ್ತು ಅನೇಕರಿಗದ ಫೆನಸ್ತಿಕೆಯೆ! ಇಕ್ಕಡೆಗಳಲ್ಲೂ ಸಾವಿರಾರು ಜನ ಅನಾವಶ್ಯವಾಗಿ ಮಾಣಕ್ಕೆಂಗಳನ್ನು ಖರಾಗುವಲ್ಲಿಯೂ ಲಕ್ಷಾಂತರ ಜನ ಅನಿಶ್ಚತತೆಯಿಂದ ಹಾವು ರೋಗಗಳಿಗೆ ತುತ್ತಾಗಿ ನಲಿಯುತ್ತಿವಲ್ಲಿಯೂ ಕೊರಿಯಾ ಪ್ರಶ್ನೆಯನ್ನು ಶಾಂತರೀತಿಯಿಂದ ಬಗೆಹರಿಸಲು ತೊಡಕಾನಿಂತಿರುವುದೂ ಮನುಷ್ಯದ್ವಿಗಳ ಫೆನಸ್ತಿಯೇ ಎನಲು ಯಾವ ಅಡ್ಡಿಯೂ ಇಲ್ಲ.

ಆರ್ವಾಚೀನ ಯುಗದಲ್ಲಿ ಆರ್ಥರೆಟಿ ಹೋದ ಒಂದು ಶಬ್ದವೆಂದರೆ 'ಸಮಜಯಿಸುವುದು' (Appeasement) ಅ ಮಣಕಾಂರನ್ನು 'ಸಮಜಯಿಸಿದರೆ ಲೋಕಕ್ಕೆ ಗಂಡಾಂತರವುಂಟೆಂದು ಬಿರಿಕೆ ಹಾಕಿ, ನವಂಡಲದ ರೋಗವಶೀಕರಣದಿಂದ ಸಿಡಿಕರಾದ ಮುತ್ಸದ್ದಿಗಳು, ವಯಿಂದಲೇ ತಮ್ಮ ಬೇಳೆಬೇಯಿಸಿಕೊಳ್ಳಲಿಸಿದಂತಿದೆ. ಹಾಗಾವುದಾದರೂ ಒಂಶಬ್ದಕ್ಕೆ ಕಟ್ಟುಬಿದ್ದು ತಿಲವಳಿಕೆಯನ್ನು ವಿವೇಕವನ್ನು ಹಿಂದೂಡುವುದು ಸಾವಲ್ಲ. ಜ್ಞಾನಸ್ಥ ತಡವಾಗಿಯೇ ಬಂದರೂ ಅದನ್ನು ಸ್ವೀಕರಿಸತಕ್ಕುದಲ್ಲವೆ? ಪೂರ್ವ ಫಿರ್ಚಾರ್ಚಿಗಳಿಗೆ ವ್ಯತಿರಿಕ್ತವಾಗಿ ನಡೆವ ಸಂಗ ಬಂದರೇನು? ವಿವೇಕ ಮಾರ್ಗದಲ್ಲಿ ನಡೆಯುವುದೊಳ್ಳಿತಲ್ಲವೆ? ಯುದ್ಧೋಪಗಳು ಎಲ್ಲಿಯ ತೆರ-ಹಿಟ್ಟಿನಿಂದಲೂ ಅಮಣ ಮನೋವೃತ್ತಿಯಿಂದಲೂ ಸಾದಾ ಅಂಜಿಕೆಮುಕ್ತವಾದ್ದು ಹತೋಟಿ ಮಾ

To

All our Depositors, Constituents and Shareholders.

We hereby send our **remembrances** of the year that has passed

AND

Greetings for the year that has dawned.

May the Bright New year turn out to be one of Plenty and Prosperity.

THE VIJAYA BANK, LTD.,

HEAD OFFICE: **MANGALORE.**

Branches:- Udipi, Kaup, Coondapoor, Karkala, Brahmavar, Kasaragod, Byndoor, City-Mangalore, Puttur, Bombay, Kanhangad & Mercara.

ಮಿತುಸ್ರಾವ ನಿಂತಿತು

'ಅನಾರಾ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿವಸ್ಸು ಮುಟ್ಟುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣವಾಗುವುದು, ಯಾವ ಬಾಧಕಗಳೂ ಇಲ್ಲ. ಸಾರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-; ಸ್ಪೆಶ್ಯಲ್ ರೂ. 5 ಅಧಿಕಾರಿಕ ಸ್ಪೆಶ್ಯಲ್ ರೂ. 8-[ವಿ. ಹನ್ನೆರಡಾಣೆ ಪ್ರತ್ಯೇಕ.]

Mrs. D. DEVEE, F. DS. (N. J.)
Tollygunge CALCUTTA.

ಸ್ವಾತಿಕೃಪೆಯು ಶಂಕರಂಪೆನಿ, ಮಂಗಳೂರು

ಅವರು ಹೇಳಿದ್ದೇನು?

ತ್ರಿಭುವನರೇ ನೇಪಾಳೇಶ್ವರು

ಕಟ್ಮಂಡೆಗೆ ತ್ರಿಭುವನ ಅರಸರೇ ನೇಪಾಳವನ್ನು ಆಳುವರೆಂದು ನೇಪಾಳದ ಮುಖ್ಯ ಮಂತ್ರಿಗಳು ಪಾಟಮಾಂಡುವಿನಲ್ಲಿ ಘೋಷಣೆ ಮಾಡಿದರು. ನೂರ ನಾಲ್ಕು ವರ್ಷಗಳಿಂದ ರಾಣಾರ ಆಳಿಕೆಯ ಪ್ರಾರಂಭವಾಗಿದ್ದು ಅದು ನೇಪಾಳದ ಛಿದ್ರತೆಗೆ ಹಾಗೂ ಪ್ರಗತಿಗೆ ಕಾರಣವಾಗಿದೆ ಎಂದೂ, ಜನತಾ ಪ್ರಾತಿನಿಧ್ಯ ತತ್ವವನ್ನು ನೇಪಾಳ ಸರಕಾರವು ೧೯೪೮ರಲ್ಲೇ ಮಾಡಿರುವುದೆಂದೂ, ಇದೀಗ ಅದನ್ನು ಜಾರಿಗೆ ತರಲು ಶೀಘ್ರವೇ ಮಧ್ಯಸ್ಥರ ಮತದಾನ ಪದ್ಧತಿಯ ಪ್ರಕಾರ ಅರಿಸಲ್ಪಡುವ ಘಟನಾ ಸಮಿತಿಯನ್ನು ಆದಷ್ಟು ಬೇಗ ಕೂಡಿಸಲಾಗುವುದೆಂದೂ, ಸರಕಾರದೊಡನೆ ನೊನ್ನಿನ ವರೆಗೆ ಹೋರಾಟ ನಡೆಸಿದವರಿಗೂ ರಾಜಕೀಯ ಕೈದಿಗಳಿಗೂ ಕ್ಷಮೆ ದೊರೆಯುವುದೆಂದೂ, ಮೂರು ವರ್ಷದ ಕೂಸು-ಅರಸನನ್ನು ನೇಪಾಳದೊಡನೆ ರಾಯಭಾರಿ ಸಂಬಂಧವಿರುವ ಯಾವುದೇ ರಾಷ್ಟ್ರವು ಮಾನ್ಯ ಮಾಡದಿರುವುದರಿಂದ ತ್ರಿಭುವನರೇ ಗದ್ದುಗೆಗೇರಬೇಕೆಂದೂ ಅದರಲ್ಲಿ ಸೂಚಿಸಲಾಗಿದೆ. ಸಂಜೆವಾಣಿ : ಸಂಯುಕ್ತ ಕರ್ನಾಟಕ

ಕೊರಿಯಾ ಎಲ್ಲಿಯ ವರೆಗೆ ಬಂತು?

ಕೊರಿಯದಲ್ಲಿ ಯುದ್ಧ ನಿರಾಮಕ್ಯಾಗಿ ಹಲವಾರು ಯೋಜನೆಗಳು ನಿರ್ಮಾಣವಾಗುತ್ತಲಿವೆ. ಯು ನೈಟೆಡ್ ನೇಶನ್ಸ್‌ನಲ್ಲಿ ಬ್ರಿಟನಲ್ ರಾಯರ ಮುತ್ಸದ್ದಿತನದಿಂದ ತಯಾರಿಸಲಾದ ಯೋಜನೆಯನ್ನು ಚೀನ ನಿರಾಕರಿಸಿತು ಚೀನ ರಷಿಯಾಗಳೊಡನೆ ಮಾತನಾಡಲು ಪೂರ್ವಭಾವಿಯಾಗಿ 'ಯುದ್ಧ-ವಿರಾಮ' ಆಗಲೇಬೇಕೆಂದು ಹಠ ಹೊಟ್ಟರಪ ಸಂಯುಕ್ತ ರಾಜ್ಯಕ್ಕೆ ಯಾವ ಯೋಜನೆಯಿಂದಲೂ ಪ್ರಯೋಜನವಿಲ್ಲದಾಗಿದೆ. ಜಗತ್ತಿನ ಅತಿ ಚಿಕ್ಕ ರಾಷ್ಟ್ರಗಳಲ್ಲೊಂದಾದ ಇಸ್ರಯೇಲವೂ ತನು ತಲೆಯನ್ನು ವಜ್ರಮಾಡಿ ಮೆಟ್ಟಿಲು ಮೆಟ್ಟಲಾಗಿ ದೂರ ಸ್ಥಾಂತ್ಯದ ಸ್ಥೈಯನ್ನು ಬಗೆಹರಿಸಬೇಕೆಂದೂ, ನೊದಲಾಗಿ ಕೊರಿಯಾ ಯುದ್ಧ ವಿರಾಮ, ಒಳಕ ಸೈನ್ಯಗಳನ್ನು ಹಿಂತೆಗೆಯೋಣ ನಡೆಯಬೇಕೆಂದೂ, ಸೂಚಿಸಿದೆ. ಎಲ್ಲ ಯೋಜನೆಗಳೂ ಅತುರದಿಂದ ಬೆಂಬಲ ಕೊಟ್ಟು ಸಮರ್ಥಿಸುವ ಬ್ರಿಟಿಷರು ಇದಕ್ಕೂ ಬೆಂಬಲಿಸಿದ್ದಾರೆ. ಇತ್ತ ಕಾಮನ್‌ವೆಲ್ತ್ ಪರಿಷತ್ತಿನಲ್ಲಿ ನೆಹರು-ಬೆವಿನ್ ಯೋಜನೆಯೊಂದು ತಯಾರಾಗಿದೆ. ಆದರೂ ಬಾಷ್ಟದ ಯೋಜನೆಯನ್ನು ರಾಜಕಾರಣಿಗಳಿಗೆ ಕೊಟ್ಟ ಬುದ್ಧಿ ಹೀನರು ಶಾಂತಿಯ ಯೋಜನೆಗಳಿಗೆ ಸ್ಪೈಗಟ್ಟುವರೆ? ಎಂಬುದು ಸಮಸ್ಯೆಯಾಗಿಯೇ ಉಳಿದಿದೆ ಚೀನ ರಷಿಯಗಳು ಅಮೇರಿಕವನ್ನೂ, ಛೀಗುಟ್ಟುವುದು ಸರಾಗವಾಗಿ ನಡೆದೇ ಇದೆ

ಕಾಮನ್‌ವೆಲ್ತ್ ಪರಿಷತ್ತು

ನಮ್ಮ ತಮ್ಮ ಲಿಯಾಕತ್ತ ಆರಂಭದಲ್ಲಿ ಹೆಚ್ಚ ಹಿಡಿದು ಕೂತರೂ ಕೊನೆಗಾದರೂ ಲಂಡನ್ ಪರಿಷತ್ತಿಗೆ ಹೋದುದಕ್ಕಾಗಿ ಅವರನ್ನು ನಾವು ಅಭಿನಂದಿಸಬೇಕು. ಆಸ್ಟ್ರೇಲಿಯದ ಮೆ.ನ್ಜೀಸರಿಗೆ ಶೀತ ರೋಗದ ಬಾಧೆಯಾದುದರಿಂದ ಅವರು ಪರಿಷತ್ತಿನಲ್ಲಿ ಸಕ್ರಿಯ ಪಾತ್ರ ವಹಿಸುವುದು ಅಸಾಧ್ಯವೆಂಬಿತಂತೆ ಉಷ್ಣ ರೋಗಗ್ರಸ್ತ ಲಿಯಾಕತ್ ಬಾರದೆ ಇದ್ದರೆ ಕಾಮನ್‌ವೆಲ್ತ್ ಪರಿಷತ್ತು ಅಷ್ಟು ಯಶಸ್ವಿಯಾಗುತ್ತಿರಲಿಲ್ಲ. ಭಾರತ, ಬ್ರಿಟನ ತಕ್ಕ ಮಟ್ಟಿಗೆ ಸಮಾನರಾದ ವಿದೇಶಾಂಗ ಧೋರಣೆಯನ್ನು ಕೈಬಿಟ್ಟಿರುವುದರಿಂದ ನೆಹರೂ-ಬೆವಿನ್ ಆಲ್ಲಿ ಒಂದೇ ಭಾಷೆ ಆಡುತ್ತಿದ್ದರು. ಎಚ್ಚತ್ತ ವಿಶಯದ ಕೈವಾರಿಯಾಗಿ ನೆಹರೂ ನಿಶಿಯದ ದೃಷ್ಟಿಕೋನವನ್ನು ಪ್ರಚುರಪಡಿಸಿದರು. ಆದರೆ ಸ್ವರ್ಣಾಂಧ ದಕ್ಷಿಣ ಆಫ್ರಿಕಕ್ಕೂ, ಪುಟ್ಟಾಂಧ ಆಸ್ಟ್ರೇಲಿಯಾಕ್ಕೂ ಹಿತಯೋಜನೆಗಳು ಬೇಡವಾಗಿವೆ ಅದುದರಿಂದ ಎಲ್ಲ ಸಮ್ಮೇಳನಗಳಂತೆ ಇದೂ ತರ್ಕಸಭೆಯಂತೆಯೇ ಕೊನೆಗೊಳ್ಳುವುದೋ ಎಂಬ ಸಂದೇಹ ವಾರಿಧಿಲು ಕಾರಣವಿಲ್ಲ

ಮೆಹತಾಬರ ಉದ್ಯಮ

ಮೆಹತಾಬರು ಕಳೆದ ವಾರ ಮದರಾಸಿಗೆ ಒಂದು ಮದರಂಸಿನ ಉದ್ಯಮಗಳನ್ನು ಪರೀಕ್ಷೆ ಮಾಡಿದರು. ಸರ್. ಅರ್ಕಾಟು ರಾಮಸ್ವಾಮಿ ಮೊದಲಿಯಾರರು- ಬ್ರಿಟಿಷ್ ಸೈಕಲ್ ಕಂಪೆನಿ ಒಡೆಯರು- ಕೊಟ್ಟ ಸತ್ಕಾರ ಕೂಟದಲ್ಲಿ ದಕ್ಷಿಣ ಭಾರತೀಯ ಉದ್ಯಮಗಳಿಗೆ ಅವರು ಪಾಸ್ ಸರ್ಟಿಫಿಕೇಟನ್ನು ದಯಪಾಲಿಸಿದ್ದು ಸಂತೋಷದ ಸಂಗತಿ. ನಮ್ಮಲ್ಲಿ ಮಾಲಿಕ ಮಜೂರ ಸೌಹಾರ್ದ ಉತ್ತರ ಭಾರತ ಕ್ಕಿಂತ ಉತ್ತಮವಾಗಿದೆ; ಇಂತಹ ಸಂತೃಪ್ತಿಯ ವಾತ ವರಣದಿಂದ ಗುಣ ಉಂಟು; ಉತ್ತರದಲ್ಲಿರುವಷ್ಟು ಉದ್ಯಮಗಳು ನಮ್ಮಲ್ಲಿಲ್ಲವಲ್ಲಾ ಎಂದು ಮದರಾಸಿಗರು ಕಣ್ಣೀರಿಡುವುದು ಬೇಡ; ಉದ್ಯಮಗಳನ್ನು ಪ್ರದೇಶ-ವಾರಾಗಿ ಬೆಳೆಸುವುದು ಸಾರ್ವತ್ರಿಕ ದೃಷ್ಟಿಯಿಂದ ಒಳ್ಳೆಯದು; ಗುಡಿಸೈಗಾರಿಕೆಗಳನ್ನು, ಚಿಕ್ಕ ಪುಟ್ಟ ಉದ್ಯಮಗಳನ್ನೂ ಮದರಾಸು ಆರಂಭಿಸಿದುದು ಜಾಣತನವಾಗಿದೆ; ಸಾರಿಗೆಯ ಪ್ರಶ್ನೆಯು ನಿಯಂತ್ರಣಗಳಿರುವ ಕನಕ ಬಗೆ ಹರಿಯಲಾರದಾದ್ದರಿಂದ ಪುಟ್ಟ ಉದ್ಯಮಗಳು ಬೆಳೆಯುವುದವಶ್ಯವಾಗಿದೆ; ಮದರಾಸಿಗರ ಉತ್ಸಾಹವನ್ನು ನೋಡಿ ಮಂತ್ರಿವರ್ಯರು ಆಶಾವಾದಿಗಳಾಗಿದ್ದಾರೆ. ಅವರು ದಕ್ಷಿಣ ಭಾರತದಿಂದ ಉತ್ತರಾಪಥದವರಿಗೆ ಕೊಂಡೊಯ್ಯುವ ಸಂದೇಶದಲ್ಲಿ ರಿ ಅರಾವ ದ; 'ರಾಷ್ಟ್ರೀಕರಣ' ಎನ್ನು ಅವಾಚ್ಯ ಶಬ್ದ ವಿದು ? ಯಾರು ಹೇಳಿದ್ದಾರೆ? ರಾಷ್ಟ್ರೀಕರಣದ ಬಿದರಿಂದ ನಿಶ್ಚಿಸಿ ಎಂದು ವಿಶ್ವೇಶ್ವರಯ್ಯ ಏತಕ್ಕೆ ಬೇಡಬೇಡೋ ನಾನಂತೆ ಆ ಬೆದರಿಕೆಯೂ ನಮ್ಮ ನುಂದಿಲ್ಲ ರಾಷ್ಟ್ರೀಕರಣದ ಯೋಜನೆಯೂ ನಮ್ಮ ಮುಂದಿಲ್ಲ, ಯುದ್ಧ ಭಯದಿಂದ ಎಲ್ಲರೂ ಗಂಟು ಕಟ್ಟಿಡುವುದರಲ್ಲಿರುವುದರಿಂದ ನವ್ಯ ಉದ್ಯಮಗಳು ನಮ್ಮ ಉಳಿತಾಯದ ವೇಲೆಯೇ ನಿಲ್ಲವ ಪ್ರಸಂಗ ಬರುವುದ, ಆಶಾದ ಅವುದು ಈಗಿನ ಪ್ರಮಾಣದಲ್ಲಿಯೇ ಮುಂಬರಿಬರೆ ಬೇರೆ ಸರ್ವನಾಶವಾಗುವುದು; ಆದ್ದರಿಂದ ಜಾಗೆದವಿಲ್ಲದೆ ಸರ್ವರೂ ಶ್ರಮಿಕೆಗೆ ಶ್ರಮಿಕೆ ಬೇಕು—ಎಂದು ಮೆ.ಹತಾಬರು ಕೋಧಾರವಾದ ಹಲವೆ ನುನೆನೀಯ ಜಾರಗಳನ್ನು ಮಂದಿರಿಸಿದರು.

ಭಯೆಗ್ರಸ್ತ ಅಮೇರಿಕ

ಹೇಡಿತನವೇ ದೈರ್ಯವೆದ ಮೂಲವಂತೆ ಅಮೇರಿಕವೀಗ ರಷಿಯಕ್ಕೆ ತೀರ ಅಂದಂದಿದೆ. ಕಣ್ಣಿಗೆ ಕಾಣದ, ಕೈಗೆ ಸಿಕದ ಇಂದ್ರಿಯಾತೀತವಾದ 'ಕಮ್ಯೂನಿಸಮ್' ಎಂಬ ಮಾನಸಿಕ ಭೂತದ ಭಯದಿಂದ ಕಾತರವಾದ ಅಮೇರಿಕ ಯುದ್ಧ ಸ್ಪಾರ, ಪ್ರಸಾರದಲ್ಲಿ ಧೈರ್ಯವಾಗಿ ಘುಸುಕಿದೆ. ಅಮೇರಿಕನರನ್ನು ಈಗಾಗಲೆ ಯುದ್ಧದ ವಾತಾವರಣಕ್ಕೆ ತಂದು ನಿಲ್ಲಿಸಿ ಆಯಿತು. ದೊಡ್ಡ ಯುದ್ಧಕ್ಕೆ ಅಮೇರಿಕವನ್ನು ಸಿದ್ಧಗೊಳಿಸಲು ತಯಾರಾದ ಟ್ರೂಮನರ ದಶಬಿಂದು ಯೋಜನೆಯನ್ನು ಈ ಸಂಗತಿಗಳು ಅವಶವಾಗಿವೆ. (೧) ಯುದ್ಧದ ಸಜ್ಜಿಗೆ ಜೇಕಷ್ಟು ಸಂಪದ್ವಿನಿಯೋಗ (೨) ಸ್ವತಂತ್ರ ಜಗತ್ತಿಗೆ-ಅಂದರೆ ಅಮೆರಿಕವಿಟ್ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಹಾಯ (೩) ಉತ್ಪಾದನೆಯ ವಿಸ್ತರಣೆ (೪) ಕೂಲಿ, ಧಾರಣೆ ವಸಿಗಳ ನಿಯಂತ್ರಣ (೫) ಕೃಷಿಯ ಕಾನೂನು ಸುಧಾರಣೆ (೬) ಕಾರ್ಮಿಕರ ಕಾನೂನುಗಳ ಸುಧಾರಣೆ (೭) ಸಂರಕ್ಷಕ ಕಾರ್ಮಿಕರಿಗೆ ಗೃಹಗಳನ್ನು ನಿರ್ಮಿಸಿಕೊಡುವುದು ಆವರ ಆರು ಕೆ. (೮) ವೈದ್ಯರ ಸರಬರಾಯಿ ಹೆಚ್ಚಿಸುವುದು, (೯) ತೆರಿಗೆ ಹೆಚ್ಚಿಸವುದು. ಇವುಗಳನ್ನು ವೇಲೆ ದೇಶದ ಮೇಲೆ ನಿಯಂತ್ರಣವನ್ನು ಹೆಚ್ಚಿಸುವುದು; ರಾಷ್ಟ್ರವು ಪ್ರಾಬಲ್ಯಕ್ಕೆ ಬರುವುದು. ಇದನ್ನು ಜನರಿಯಲ್ಲಿ 'ಫಾಸಿಸಮ್' ಎಂದೂ ಕಳೆದ ಯುದ್ಧದಲ್ಲಿ ಕರದಿದ್ದರು ರಷಿಯದಲ್ಲಿ ಆಕ್ಷೇಪ ಇದೇ ಪದ್ಧತಿ ಜಾರಿಯಲ್ಲಿದೆ. ಆಲ್ಲಿ ಇದಕ್ಕೆ ಬೇರೆ ಹೆಸರು ಅಮೇರಿಕದಲ್ಲಿ ಇಷ್ಟಕ್ಕೆಯೇ 'ಜಗತ್ತಿನ ಸ್ವಾತಂತ್ರ್ಯ ಉಳಿಸುವುದು' ಎಂಬ 'ಸಣ್ಣ' ಹೆಸರಿದೆ.

ರಾಜಾಜಿ ಉವಾಚ

ದಿಲ್ಲಿಯಲ್ಲಿ ಅಂತರರಾಷ್ಟ್ರೀಯ ಇಂಜನಿಯರುಗಳ ಜನೆಯಾದರು, ತಮ್ಮ ಕೌಶಲಗಳನ್ನು ಪ್ರದರ್ಶಿಸಿದ್ದಾರೆ ಅಲ್ಲಿಗೆ ಗೃಹ ಮಂತ್ರಿ ರಾಜಾಜಿಯವರೂ ಬಂದು ತಮ್ಮ ವಾಕೌಶಲವನ್ನು ಪ್ರದರ್ಶಿಸಿದರು. ಇಂಜನಿಯರುಗಳು ದೇಶ ಕಟ್ಟುವವರು. ಅವರ ಗುರುತರ ನಡತೆ ಹೇಗಿರಬೇಕೆಂದು ಉಪದೇಶಿಸಿದರು. ಒಂದು ಒಳ್ಳೆಯ ಪಿಲ್ಲಿಗೇ ದೇಶದಲ್ಲಿವ್ವರೆ ಇತಿಯ ದೇಶವನ್ನು ಸದರ ಸುಶಿಲ್ಪಿಗಳಿಗೆ ಕೆಲವು ಕಾಲದ ವರೆಗೆ ಇತ್ತೆ ಇಡಲಿ ರಾಜಾಜಿ ನಿದ್ದರಾದರು ಆದರೆ ವಿದ್ವಾಂಸಿಗಳೆಲ್ಲ ಮಜಾಮಾ ನೋಡಿಕೊಂಡರು. ಎಡೆಯವೇಲೆ ಕೈಯಿಟ್ಟರು ದೇಶವನ್ನು ಕಟ್ಟುವುದರಲ್ಲಿ ರಾಜಕಾರಣಿಗಳಿಗಿಂತ ತಾವೇನೂ ಕಡಮೆಯಲ್ಲ ಎಂದು ವಾಗ್ದೇವಿ ರಾಯಿಸಿದರು

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು..

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೈಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನತಾಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸುತ್ತೇನೆಂಬುದೇ ನಮ್ಮ ಹೆಗ್ಗಳಿಕೆಯ ನುಡಿ.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಆಕ್ರಮಣಕ್ಕೆ ಹೋಗುವವರೂ ಪಮ್ಮುಕ್ಕುದ್ದಿಗಳು ಈ ಎರಡು ಬಗೆಯ ಯುದ್ಧೋಭೈಗಳ ಮಾತಿಗೂ ಮರುಳಾಗಬಾರದು

ನಾಗರಿಕತೆ ಉಳಿಯಲಿ

ಸಾಮ್ಯವಾದಕ್ಕೂ ಪ್ರಜಾಪ್ರಭುತ್ವಕ್ಕೂ ಯುದ್ಧವು ಅನಿವಾರ್ಯವೆಕೆ ಒಂದನ್ನು ತೆಗೆದೇ ಇನ್ನೊಂದು ಬದ ಕತಕ್ಕದೆ? ಎಂಬುದು ವಿಚಾರಣೀಯ ಅಂಶವಾಗಿದೆ. ಎರಡೂ ಜತೆಜತೆಯಾಗಿ ಉಳಿಯಲು ಸಾಧ್ಯವಿಲ್ಲವೇನು? ರಷಿಯದಲ್ಲಿ ಸರ್ವಾಧಿಕಾರ ಏನೇಮಾಡಿದೆ; ವಿಚಾರ ಸ್ವಾತಂತ್ರ್ಯ ಮಾಯವಾಗಿದೆ ಎಂಬ ಸೊಲ್ಲು ನಮಗೆ ಬಹಳ ಕೇಳಿಸುತ್ತಿದೆ. ಆದರೆ ಈ ದ್ವೇಷವು ಪ್ರಜಾತಂತ್ರಾತ್ಮಿಕ ರಾಷ್ಟ್ರಗಳಲ್ಲೇನು ಕಮ್ಮಿಯೆ? ಎಂಬುದನ್ನೂ ವಿಚಾರವಂತರು ಪರ್ಯಾಲೋಚಿಸಬೇಕು. ಯಾವುದು ಸಾಧುವಾದ್ದು, ಯಾವುದು ಅಸಾಧುವಾದ್ದು ಎಂಬುದನ್ನು ನಿರಪೇಕ್ಷಿಂದ ಹೇಳುವ ಕಾಲ ಇನ್ನೂ ದೂರವಿದೆ. ಆದುದರಿಂದ ಆತಿ ಪ್ರಯಾಸದಿಂದ ಮೆಟ್ಟಿಲು ಮೆಟ್ಟಿಲಾಗಿ ನಮ್ಮ ಪೂರ್ವಜರು ಕಟ್ಟಿರುವಂಥ ಈ ನಾಗರಿಕತೆಯ ಭವ್ಯಮಂದಿರವನ್ನು ಉಳಿಸುವುದೊಂದೇ ನಮ್ಮ ಕರ್ತವ್ಯ ಎಂಬುದನ್ನು ಮರೆಯಲಾಗದು.

ಗುರುವಾರ, ಉಡುಪಿ, ೦೮-೧-೪೧

ಕೆ. ಪಿ. ಸಿ. ಸಿ. ಭಾಷಣಗಳು

ಮಂಗಳೂರಲ್ಲಿ ನಡೆದ ಕೆ. ಪಿ. ಸಿ. ಸಿ. ಸಭೆಯಲ್ಲಿ ಕಾಂಗ್ರೆಸ್ಸಿನ ಹಲವು ಧುರೀಣರು ಕಾಂಗ್ರೆಸ್ಸಿನ ಶುದ್ಧೀಕರಣದ ವಿಚಾರವಾಗಿ ಭಾಷಣವನ್ನಿತ್ತರು. "ಸ್ವಾತಂತ್ರ್ಯ ಬಂದ ಈ ಮೂರು ನಾಲ್ಕು ವರ್ಷಗಳಲ್ಲಿ ಜನವಿನ್ನೂ ಸುಧಾರಿಸಿಲ್ಲ– ಸ್ವಾತಂತ್ರ್ಯದ ಸದುಪಯೋಗವನ್ನು ಮಾಡಿಕೊಂಡಿಲ್ಲ–" ಎನ್ನುವಂತಹ ಧ್ವನಿ ಸಾಮಾನ್ಯ ವಾಗಿ ಭಾಷಣದಲ್ಲಿತ್ತು. ಇಂದು ಕಾಂಗ್ರೆಸ್ಸಿನ ಮೇಲೆ ಜನತೆಗಿರುವ ಅಸಂತೃಪ್ತಿ ಯಾರಿಂದುಂಟಾಯಿತು? ಒಂದು ಶತಮಾನದಿಂದ ಸ್ವಾತಂತ್ರ್ಯ ಸಮರಕ್ಕಾಗಿ ಹೋರಾಡಿದ ಇನಸ್ಪೀತ ಕಾಂಗ್ರೆಸ್ಸು ಕೇವಲ ಎರಡು ಮೂರು ವರ್ಷಗಳೊಳಗಾಗಿ ತನ್ನ ಚಾರಿತ್ರಿಕ ಹಿನ್ನೆಲೆಯನ್ನು ಮರೆತುದರಿಂದಲೇ ಹೀಗಾಯಿತೆನ್ನುವದನ್ನು ಜನಕ್ಕಿಂತ ಹೆಚ್ಚಾಗಿ ಧುರೀಣರು ಅರಿತುಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ಸಿಕ್ಕ ಮೇಲಿನ ನಾಲ್ಕು ವರ್ಷಗಳನ್ನೊಮ್ಮೆ ಅವಲೋಕಿಸಿದರೆ ಪ್ರಜೆಗಳಿಗಿಂತ ಹೆಚ್ಚಾಗಿ ಧುರೀಣರೇ ದಾರಿ ತಪ್ಪಿದ ದಾಖಲೆಗಳು ಸಾಕಷ್ಟಿವೆ. ಸ್ವಾರ್ಥ, ಸ್ವಪ್ರತಿಷ್ಠೆ, ಸ್ವಪಕ್ಷಾಂತೀಯ ಭಾವನೆ, ಕಾಂಗ್ರೆಸ್ಸಿನ ಹಿರಿಯ ಆದರ್ಶವನ್ನು ಕುಗ್ಗಿಸಲೆತ್ನಿಸಿವೆಯೆಂದರೆ ತಪ್ಪಾಗದು. ಅಳಾಗಿರುವವನಿಗಿಂತ ಅಳುವವನಿಗೆ ಹೊಣೆ ಹೆಚ್ಚು, ನಮ್ಮಂದೇ ಸರಕಾರ ಬಂದರೂ ಅಧಿಕಾರೀ ಜನರ ಮನೋವೃತ್ತಿ ಬದಲಾಗಲಿಲ್ಲ. ಸೇವಾಕಾಂಕ್ಷೆಯು ಬದಲು ಬ್ರಿಟಿಷರ ಕಾಲದ ಅಧಿಕಾರ ಚಾಲನೆಯ ವರ್ಚಸ್ಸೇ ಇಂದು ಹೆಚ್ಚಾಗಿದೆ. ಜನರ ಸ್ಥಿತಿಗತಿಯಲ್ಲಿ ಅಗಬೇಕಾದಷ್ಟು ಸುಧಾರಣೆಯಾಗಿಲ್ಲಿ. ಇಂತಹ ಅವಾದನೆಗಳೆಲ್ಲ ನಮ್ಮ ಧುರೀಣರು ಅಹಾರ ಅ ಭಾವವನ್ನೂ, ಬಿಹಾರ ಭೂಕಂಪವನ್ನೂ, ನಿರಾಶ್ರಿತರ ಪುನರ್ವಸತಿಯನ್ನೂ, ಕಾಶ್ಮೀರ ಸಮರವನ್ನೂ ಉದಾಹರಿಸಬಹುದು. ಇದನ್ನು ಗಂಭೀರವಾಗಿ ಚಿಂತಿಸಿದರೂ ಮಿಕ್ಕ ವಿಷಯಗಳಲ್ಲಿ ಕಾಂಗ್ರೆಸ್ಸಿಗರು ಪ್ರಾಮಾಣಿಕತನದಿಂದ ದುಡಿಯುವ ಮನಸುಳ್ಳವರಾಗಿಲ್ಲ. ಸ್ವಾತಂತ್ರ್ಯದ ಯಥಾರ್ಥ ಜ್ಞಾನವನ್ನೆ ಉಚ್ಚ ಕಾಂಗ್ರೆಸಿಗರೇ ಅನುಸರಿಸುತ್ತಿಲ್ಲ. ಜನತೆಯು ಸಾಮೂಹಿಕ ಅಭಿಪ್ರಾಯಗಳನ್ನು ಕಡೆಗಣಿಸಿ ಒಬ್ಬಿಬ್ಬರ ಒಲವನ್ನು ನೋಡಿಕೊಂಡು ಹಿರಿಯರಾದವರು ವರ್ತಿಸುವುದು ಘೋರಣಿಯಿಂದಲೇ ಹೀಗಾಯಿತೆನ್ನೋಣವೇ? ಬೇರೆಯವರಿಗೆ ಆದರ್ಶವನ್ನು ಹೇಳುವ ವ್ಯಕ್ತಿಗಳಲ್ಲೇ ಕಾಂಗ್ರೆಸ್ಸಿನ ಆದರ್ಶಗಳಿಲ್ಲ. ಗಾಂಧಿ, ನೆಹ್ರೂ, ಪಟೇಲ್ ಮುಂತಾದವರ ಹಸರನ್ನು ಮುಂದೆ ಮಾಡಿ ತಪ್ಪು ವೈಲಿನ ಹೊಣೆಯನ್ನು ಜನತೆಯ ಮೇಲೆ ಹೊರಿಸುವುದು ಸರಿಯಲ್ಲ. "ಕರ್ನಾಟಕ ಪ್ರಾಂತವಾಗುವುದರಿಂದಲೇ ನಮ್ಮ ಇಷ್ಟಾರ್ಥ ಸಿದ್ಧಿಸೀತು" ಎನ್ನುವ ಶ್ರೀ. ನಿಜಲಿಂಗಪ್ಪನವರ ಮಾತನ್ನು ಹೃದಯಪೂರ್ವಕವಾಗಿ ನಮ್ಮ ಎಲ್. ಎ. ಗಳಾಗಲೀ ಮಂತ್ರಿಗಳಾಗಲೀ ಒಪ್ಪುತ್ತಾರೆಯೇ? ಕೇಂದ್ರದಲ್ಲಿ ತನ್ನ ಊಂಗಾಗಿ ಕೆಲಸ ಮಾಡುವ ಶ್ರೀ. ಶ್ರೀನಿವಾಸ ಮಲ್ಯರು ಬಂದರದ ವಿಚಾರದಲ್ಲಿ ವಿ.ಲ್ಫೆಗಿರುವ ಮಹತ್ವಿಕೆಯನ್ನು ಕಡೆಗಣಿಸಿ, ಮಂಗಳೂರನ್ನೇ ಪ್ರಬುದ್ಧ ಬಂದರವನ್ನಾಗಿ ಮಾಪಡಿಸಲು ಮಾಡಿದ ಯತ್ನದ ಹೊರಪು ತನ್ನ ಪ್ರಾಂತದ ವಿಕೇಂದ್ರಣದ ಕೂರತು ತನ್ನ ಒಲವನ್ನು ಪ್ರಮುಖರಲ್ಲಿ ಬೀರುವಿದೆಯೇ? ಮೊನ್ನೆ ಮಂಗಳೂರಿಗೆ ಬಂದ ಮಂತ್ರಿ ಕುಶಿಕ ಲಾಲರು "ವಿಮಾನ ನಿಲ್ದಾಣವೂ- ಟೆಲಿಫೋನ್ ಸುಧಾರಣೆಯೂ ನಿಮ್ಮಿಂದಿನವರೇ ಆದ ಶ್ರೀ ಮಲ್ಯರ ಕಾರ್ಯಕರ್ತೃತೆಯಿಂದಲೇ ಆಯಿತೆಂಬುದನ್ನು ನೀವು ಮರೆಯಬಾರದು" ಎಂದಿದ್ದಾರೆ. ಇದರಿಂದಲೇ ಮಲ್ಯರ ಮಹತ್ವ ತಿಳಿಯುತ್ತದೆ. ಅಂತಹ ವ್ಯಕ್ತಿಗಳೇ ಕನ್ನಡ ವಿಕೇಕರಣದ ಕುರಿತು ತ್ರಿಮೂರ್ತಿಗಳ ಗಮನಕ್ಕೆ ತರುವಲ್ಲಿ ತಾವೇಕೆ ಯತ್ನ ಮಾಡಬಾರದಾಗಿತ್ತು? ಇಂತಹ ವಿಚಾರಗಳು ಜನತೆಯಲ್ಲಿ ಕಾಂಗ್ರೆಸ್ಸಿನ ಹಿರಿಯರ ಬಗ್ಗೆ ಅನಾದರವನ್ನು ಹುಟ್ಟಿಸಿವೆ. "ಅಯತಾರ್ಥ ಬೇಡಿಕೆ–ಭಾಷಣಗಳ ಸುರವಳಿಯ ಕಾಲವಿದು." ಎಂದಲಾರ್ಯರೊಬ್ಬರು ಹೇಳಿರುವಂತೆ ಈ ಮಾತನ್ನು ನಾವು ಅನುಮೋದಿಸುತ್ತೇವೆ ಇನ್ನಾದರೂ ಈ ಬಗೆಯ ದ್ವಿಮುಖ ಧೋರಣೆಯನ್ನು ಬಿಟ್ಟು ಕಾಂಗ್ರೆಸ್ಸಿನ ಹಿರಿಯ ಆದರ್ಶಕ್ಕೆ ಕುಂದು ಬರದಂತೆ ಕಾಂಗ್ರೆಸ್ ಧುರೀಣರು ನಡೆಯಲಿ. ಜನತೆಯ ವಿಶ್ವಾಸವನ್ನು ಕಡೆಗಣಿಸಿದರೆ ಕಾಂಗ್ರೆಸ್ ಬಲುಕಾಲವಾರದು. ಸಮಯ ನೋಡಿ ಸ್ವಾರ್ಥವನ್ನು ಸಾಧಿಸುವ ಇತರ ಪಂಥ ಪಂಗಡಗಳು ಇದರ ಲಾಭವನ್ನು ಹಡೆಯದಿರಲಾರವು. ಆದುದರಿಂದ ನಮ್ಮ ಧುರೀಣರು ತಾಳಮೇಳವಿಲ್ಲದ ಭಾಷಣಗಳನ್ನು ಜನತಾಯಿಸದೆ, ಕಾಂಗ್ರೆಸ್ಸಿನ ಉಚ್ಚ ಧ್ಯೇಯಗಳನ್ನು ದೇಶಸೇವಾ ಬುದ್ಧಿಯಿಂದ ಆಚರಿಸುತ್ತ ಬರಲೆಂದು ಸೂಚಿಸುತ್ತೇವೆ.

ಶಾಂತಿಯೋ—ಸಮರವೋ?

ಮೂರನೆ ಮಹಾಯುದ್ಧದ ಭೀತಿ ಜಗತ್ತನ್ನೇ ದಿಗಿಲುಗೊಳಿಸಿದೆ. ದ್ವಿತೀಯ ಯುದ್ಧದ ಕಿಡಿ ಆರುವ ಮೊದಲೇ ಮೂರನೆಯ ಯುದ್ಧದ ಬೆಟ್ಟಿ ಕಾಣುತ್ತಲಿದೆ. ಈ ಮಹಾ ದುರಂತವನ್ನು ಬಗೆಹರಿಸಲು ಈವರೆಗೆ ಮಾಡಿದ ಯತ್ನಗಳೆಲ್ಲ ವಿಫಲವಾಗುತ್ತಾ ಬಂದಿವೆ. ಈಗ ಜಗತ್ತು ಕೊನೆಯದಾಗಿ ನೋಡಹತ್ತಿರುವುದು ರಾಮನವೆಲ್ಸ್ ಮಧ್ಯಮಂತ್ರಿಗಳ ಸರ್ವೇಕ್ಷಣದ ಫಲಿತಾಂಶವೇನಾಗಬಹುದೆಂಬುದನ್ನು ಮಾತ್ರ. ಇಡಿಯ ಸಮ್ಮೇಳನದಲ್ಲಿ ಸಂಕುಚಿತ ಮನೋವೃತ್ತಿಯ ಲಿಯಾಖತರ ಕಾಶ್ಮೀರೀ ಹಠವನ್ನೊಂದು ಬಿಟ್ಟರೆ ಉಳಿದದ್ದೆಲ್ಲ ಗಂಭೀರವಾಗಿ ಪರ್ಯಾಲೋಚಿಸಿದಂತೆಲ್ಲಾಗಿವೆ. ಲಿಯಾಖತರ ತಿರುಬೋಪ್ಪಿಯನ್ನು ಅನಾವಶ್ಯಕಾರಿಶವಾಗಿ ವಿಜಾರಿಸುವ ಭರವಸೆ ಎಂದೂ ಫಲಕಾರಿಯಾಗಲಾರದು. ಭಾರತದ ಹಿಂದಿನ ಸೂಚನೆಯಾದ ಜೀನಾ ಸರಕಾರಕ್ಕೆ ಮನ್ನಣೆ ಕೊಡುವುದೂ, ಯು. ಟಿ. ಸಂಘದಲ್ಲಿ ಪ್ರತಿನಿಧ್ಯ ಕೊಡುವುದೂ ಇವೆ ಕಾರ್ಯಗತವಾಗಿ ಬರಬೇಕೆಂಬುದನ್ನು ಪರಿಷತ್ತು ಕೊನೆಗಾದರೂ ಮೇರಿಕಾಗಳನ್ನೊಳಗೊಂಡ ಸಮಿತಿಯ ಕೂಡುವಿಕೆಯಿಂದ ಯುದ್ಧವನ್ನು ಸಂಧಾನದಿಂದಲೇ ಬಗೆಹರಿಸಬಹುದೆಂದು ಹಲವು ರಾಷ್ಟ್ರಗಳು ಆಶಾವಾದಿಗಳಾಗಿವೆ. ಈ ಸಮ್ಮೇಳನದಲ್ಲಿ ಯುದ್ಧವನ್ನು ಸನ್ನಾಗ್ರದಿಂದ ಕೊನೆಗೊಳಿಸುವ ವಿಚಾರದಲ್ಲಿ ಧೃಡತೆಯ ಪಾತ್ರಗಳನ್ನು ವಹಿಸಿದವುಗಳೆಂದರೆ ಬ್ರಿಟನ್ ಮತ್ತು ಭಾರತ. ಅಮೇರಿಕಾ, ಕೆನಡಾ, ಆಫ್ರೀಕಾ ಮೊದಲಾದವುಗಳು ಸಂಧಾನದ ಬದಲಾಗಿ ಸಮರವನ್ನು ಆಹ್ವಾನಿಸುವ ಘೋರಣೆ ವಹಿಸಿದರೂ ಕೊನೆಗೆ ವಿವೇಕದಿಂದ ಸಹಕರಿಸಿದ್ದು ಶುಭ ಚಿಹ್ನೆಯೆಂದೇ ಹೇಳಬೇಕು. ನೆಹ್ರೂ ಸಮ್ಮೇಳನದಲ್ಲಿ ವಿಶೇಷ ಪ್ರಭಾವವನ್ನು ಬೀರಿದ್ದಾರೆ. ವಿಶ್ವದ ಸರ್ವತೋಮುಖವಾದ ವಿಳಿಗೆಯನ್ನು ಬಯಸುವ ನೆಹ್ರೂರವರ ಪಾತ್ರ ಗಣಿಸಿಯವಾದುದು ಸಂಧಾನ ದೂತರಾಗಿ ಮುಂದೆ ಬರುವ ಮುಖ್ಯ ಕಾರ್ಯಕ್ಕೆ ನೆಹ್ರೂವರನ್ನೇ ಮುಂದೂಡಬಹುದು. ಕೊನೆಗಾದರೂ ನೆಹ್ರೂ ಹೇಳಿದಂತೆ ಶಾಂತಿ ಬಯಸುವವರಿಗೆ ಶಾಶ್ವತ ಮಾರ್ಗವೊಂದೇ ಶರಣಾ. ಉಳಿದ ಮಾರ್ಗವೆಂದರೆ ಸಮರಕ್ಕೆ ಆಹ್ವಾನ!

ಜ್ಯೋತಿಷ್ಯರ ಮಹಾಧಿವೇಶನ.

ಉಡುಪಿಯಿಂದ ಸಾಧಾರಣ ಎಂಟು ಮೈಲು ದೂರದಲ್ಲಿರುವ ಶ್ರೀ ಭಂಡಾರಕೇರಿ ಮಠದಲ್ಲಿ ಫೆಬ್ರವರಿ ತಾ. 13 ರಿಂದ 15ರ ತನಕ ಜರಗಲಿರುವ ಶ್ರೀಮನ್ಮಾಧ್ವಸಿದ್ಧಾಂತ ಸಂವರ್ಧಕ ಸಭೆಯ ವೇಳೆ ಅಖಿಲ ಕರ್ನಾಟಕ ಜ್ಯೋತಿಷ್ಯರ ಮಹಾಧಿವೇಶನವೊಂದನ್ನು ನಡೆಸುವರೆ ಪೂರ್ವಸಿದ್ಧತೆಗಳು ಈಗಾಗಲೇ ಪ್ರಾರಂಭವಾಗಿಯಿವೆ. ಸರ್ವತ್ರ ಧರ್ಮಾಚರಣೆಗೆ ಅನುಕೂಲವಾಗುವಂತೆ ನೂತನ ಕೇತಕರ ದೈನ್ಯಣತದ ವಿವೇಚನೆಯು ಉದ್ದೇಶದಿಂದ ಈ ಮಹಾಧಿವೇಶನವು ಜರಗುವುದು.

ಉಡುಪಿಯ ಶ್ರೀ ಪುತ್ತಿಗೆಮಠದ ಹಿರಿಯ ಸ್ವಾಮಿಗಳವರಿಗೆ ದೇಹಾಲಸ್ಯವಿದೆ. ಜನರು ಶ್ರೀಗಳವರ ದರ್ಶನಕ್ಕಾಗಿ ದಿನಾಲೂ ಬರುತ್ತಿದ್ದಾರೆ. ಸ್ವಾಮಿಗಳವರ ವಯಸ್ಸು 97 ವರ್ಷವಾಗಿದೆ.

ಹಾರುವ ಕಿಡಿಗಳು

ತಿರುಳು ಇರುವುದು ತೊಗಟೆಯೊಳಗೇನೇ; ಸುಖವಿರುವುದು ತೊಂದರೆಯ ಸಂತರವೇ.

೦೦ ೦೦

ಸ್ವರ್ಗಕ್ಕೆ ಹೋಗಬೇಕು ಮಾಡಿದೇ; ಸುಖ ಪಡೆಯಬೇಕು ಮಾಡಿದೇ.

೦೦ ೦೦

ಕಂಕುಳಲ್ಲಿ ಜೊಜ್ಜೆಯಡಗಿಸಿಕೊಂಡು ಇದಿರು ಬಂದವನ 'ನಡೆಕೋಲನ್ನು ತೋರಿಸುವ ಹವ್ಯಾಸವೇಕೆ?

೦೦ ೦೦

ಒಲಿಸಿ ಮಾಡಿಸಬಹುದು; ಧುಡಿಸಿ ಕೂಡಿಸಲಾದೀತೆ?

೦೦ ೦೦

ಕೃತಿ ಹೀನ, ಮಾತು ಶ್ವಾನ.

೦೦ ೦೦

ಬೈಯ್ಯಿಸಿಂದು ಬಾಯಿ ಮುಚ್ಚಿರಬಹುದು; ಬೈಸಿಕೊಳ್ಳುವುದು ತಪ್ಪುತೆ?

೦೦ ೦೦

ಹೊರಗೆ ದೇಶಸೇವೆಯು ನಟನೆ; ಒಳಗೆ ದ್ವೇಷಸಾಧನೆಯ ಪರಿಪೆ.

೦೦ ೦೦

ಕಥೆ ಕಟ್ಟಬಲ್ಲವ ಸುಳ್ಳು ಸೃಷ್ಟಿಸಲರಿಯನೆ?

೦೦ ೦೦

ಹುಚ್ಚು ನಾಯಿಗೆ ದೊಜ್ಜೆ ಏಕೆಂದರಾಗದು; ಮೆಚ್ಚಿದ ಬಾಯಿಗೆ ಬಿಜ್ಜೆ ಏಕೆಂದರಾಗದು.

೦೦ ೦೦

ಒದೆವವನಿಗೆ ಒಗ್ಗೂಲೂರಿ ನಮಸ್ಕಾರ; ಒಲಿಸಿವಾತನಿಗೆ ತಲೆಯಮೇಲೇರಿ ಕ್ಕುಂಕಾರ.

೦೦ ೦೦

ಬೆಂಕಿ ಇಲ್ಲದೆ ಹೊಗೆ ಇಲ್ಲ; ಕಾರಣವಿಲ್ಲದೆ ಹಗೆ ಇಲ್ಲ.

೦೦ ೦೦

ಜಾಗ ನೋಡಿ ಲಾಗ ಹಾಕಬೇಕು; ಆಯ ನೋಡಿ ವ್ಯಯ ಮಾಡಬೇಕು.

೦೦ ೦೦

ದುರ್ಬಲರು ಜಾತೀಯತೆಯನ್ನು ಕೆರಳಿಸಲಿಕ್ಕೂ, ಅಧಮರು ಪೂರುಡೂಷಣೆ ಮಾಡಲಿಕ್ಕೂ ಹಿಂಜರಿಯುವುದುಂಟೆ!

೦೦ ೦೦

ವಿಚಾರ ಕೆಟ್ಟಾಗ ವೀರ; ಆಚಾರ ಕೆಟ್ಟಾಗ ಘಾತುಕಾರ"

೦೦ ೦೦

ಹಿಡಿತವಿಲ್ಲದ ಜೀವನ ರೆಕ್ಕೆ ಕಡಿದ ಹಕ್ಕಿಯಂತೆ.

೦೦ ೦೦

ನುಸಿಗೆ ಉಣ್ಣುವ ಅನ್ನ, ಉಗುಳುವ ಎಂಜಲೆಂದಿಲ್ಲ; ಮನಸಿಗೆ ಬೀಡು ಕಡಿದೆಂದಿಲ್ಲ.

೦೦ ೦೦

ಅಧಿಕಾರಕ್ಕೆ ಎಲ್ಲೆ, ಅಹಂಭಾವಕ್ಕೆ ಮಿತಿ ಇರಲೇ ಬೇಕು.

೦೦ ೦೦

ಬುದ್ಧಿಹೇಳಿ ಗುದ್ದಿಸಿಕೊಂಡು; ಮುದ್ದಿಸಹೋಗಿ ಪರಚಿಸಿಕೊಂಡ.

೦೦ ೦೦

ಬೇಡುವವಗೆ ಆ ಮನೆ ಈ ಮನೆಯೆಂದಿಲ್ಲ; ಕಾಡುವವನಿಗೆ ನ್ಯಾಯಾನ್ಯಾಯವೆಂದಿಲ್ಲ.

೦೦ ೦೦

ಕರ್ತೃನೃಭೃಪ್ಪನಾದವನು ವಚನಭ್ರಷ್ಟನಾಗಲು ಅಂಜಿಯಾನೆ?

೦೦ ೦೦

ಗೆಲ್ಲಾ ಕಡಿದು ಕಸಿಕಟ್ಟಬಹುದು; ಮನ ಕಡಿದು 'ಕಸಿ' ಹುಟ್ಟಿಸುವುದು ಕಷ್ಟ

೦೦ ೦೦

ಗೆಜ್ಜೆ ಕಟ್ಟಿದ ಮೇಲೆ ನಾಚಬೇಡ; ಚೆನ್ನಾಗಿ ಕುಣಿಯಲೇ ಬೇಕು.

೦೦ ೦೦

ಮುಥಿಸಿ ಅಮೃತಪಡೆಯಬಹುದೆಂದು ಅವಮಾನಿಸಿ ಮಾನಪಡೆಯಲಾದೀತೆ?

೦೦ ೦೦

ಬರೆದುದು ಮೇರೆಯುತ್ತದೆ; ಒರೆದುದು ಮರೆಯುತ್ತದೆ.

೦೦ ೦೦

ಆಡುವುದು ಸ್ವತಂತ್ರ ಮಂತ್ರ; ಮಾಡುವುದು ಕುಹಕ ಕುತಂತ್ರ!

ಉಡುಪಿ

ನವವರುಷಾರಂಭದಲ್ಲಿ ಸಾರ್ವ ಜನಿಕ ಸೇವಾನಿರತ ಡಾ। ಎಸ್ ಆರ್. ಪೈಗಳಿಗೆ ಮನ್ನಣೆ:—ಸ್ಥಳೀಯ ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೊರ್ಪರೇಶನ್ ಸಂಸ್ಥೆಯವರು ಸಂಪ್ರದಾಯ ಪ್ರಕಾರ ಈ ಬಾರಿಯೂ ಮುಳುಂದ ನಿವಾಸದಲ್ಲಿ ಹೊಸವರುಷ ಆರಂಭ ದಿನವನ್ನು ಡಾ। ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿಸಿದರು. ಉಡುಪಿಯಲ್ಲಿ ಸಾರ್ವಜನಿಕ ಸೇವಾನಿರತರನ್ನು ಆರಿಸಿ ಅವರಲ್ಲಿ ಒಬ್ಬರನ್ನು ವರ್ಷಂಪ್ರತಿಯೂ ಇಂತಹ ಸಮಾರಂಭದಲ್ಲಿ ಗೌರವಿಸುವ ಪದ್ಧತಿಪ್ರಕಾರ ಈ ವರುಷದ ಮನ್ನಣೆಯನ್ನು ಸಾರ್ವಜನಿಕ ಸೇವಾ ನಿರತ ಡಾ। ಎಸ್. ಆರ್. ಪೈಗಳಿಗೆ ಸಲ್ಲಿಸಲಾಯಿತು. ಸಂಸ್ಥೆಯ ಕಡೆಯಿಂದ ಶ್ರೀ ಟಿ. ರಮೇಶ ಪೈಗಳು ಸ್ವಾಗತ ಭಾಷಣ ಮಾಡಿದನಂತರ ಡಾ। ಕೆ. ಎಲ್. ಭತಾಳ್, ಎ. ಲಕ್ಷ್ಮೀನಾರಾಯಣ ರಾವ್, ಎಮ್. ಡಿ. ಕಾಮತ್, ಪುಂಡಲೀಕ ಶೆಣೈ ಮೊದಲಾದವರು ಮಾನ್ಯ ಡಾ। ಎಸ್. ಆರ್. ಪೈಗಳು ಹತ್ತು ಹಲವುವಿಧಗಳಿಂದ ಜನತೆಯ ಸೇವೆ ಮಾಡಿದುದನ್ನೆತ್ತಿ ಮಾತನಾಡಿದರು. ಅಧ್ಯಕ್ಷರ ಕೊನೆಯ ನುಡಿಗಳು, ಮಾನ್ಯ ಅತಿಥಿಯ ಉತ್ತರ, ಫಲಾಹಾರಕೂಟ, ಧನ್ಯವಾದಾರ್ಪಣೆ, ರಾಷ್ಟ್ರಗೀತೆ ಹರನಕಾರ್ಯಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ಸತ್ಕಾರ ಕೂಟ—ತೆಂಕ್ಚಿಕಾರ್ ಬಂಧುಗಳು ತಮ್ಮ ಬೊಂಬೆಲ್ಲಾಪ್ ಕಟ್ಟಡದಲ್ಲಿ ಇದೇ ತಾ. 6ರಲ್ಲು ತಮ್ಮ ಕಂಪೆನಿಯ ಮೇನೇಜರ್ ಮತ್ತು ಎಳ್ಳುವರಿಗಳಾದ ಶ್ರೀ ಬಾಲ ಸುಬ್ರಹ್ಮಣ್ಯಂ ಮತ್ತು ಅವರ ಆರ್ಧಾಂಗಿಯನ್ನು ಹೃತ್ಪೂರ್ವಕವಾಗಿ ಸತ್ಕಾರ ಕೂಟದಿಂದ ಗೌರವಿಸಿದರು. ಊರ ಅಧ್ಯಕ್ಷರನೇಕರು ಈ ಸಮಾರಂಭಕ್ಕೆ ಆಮಂತ್ರಿತರಾಗಿದ್ದರು ಡಾ। ಎಸ್. ಆರ್. ಪೈಗಳು ಅಧ್ಯಕ್ಷಸ್ಥಾನವಹಿಸಿದ್ದರು. ಶ್ರೀ ಕೊಚ್ಚಿಕಾರ್ ಪದ್ಮನಾಭಪೈಗಳು ಸ್ವಾಗತ ಭಾಷಣಮಾಡಿದರು. ಶ್ರೀಗಳಾದ ಎ. ಲಕ್ಷ್ಮೀನಾರಾಯಣ್, ಟಿ. ಎ. ಪೈಗಳು ಕೊಚ್ಚಿಕಾರ್ ಸಹೋದರರು ಜೀವನ ವಿಮೆ ಮಾಡುವ ಕುರಿತು ಜನಜಾಗೃತಿಯನ್ನುಂಟು ಮಾಡಿ ತನ್ಮೂಲಕ ತಮ್ಮ ಪ್ರತಿಷ್ಠಿತ ಬೊಂಬೆಲ್ಲಾಪ್ ಎಕ್ಸ್‌ಪೋರ್ಟ್ಸ್ ಕಂಪೆನಿಗೆ ಇಂದು ಸಿದ್ಧಿಸಿಕ್ಕಿರುವ ಸ್ಥಾನವನ್ನು ಹೇಗೆ ಗಳಿಸಲು ಕಾರಣರಾದರೆಂಬುದನ್ನು ವಿಷದಪಡಿಸಿದರು, ಮಾನ್ಯ ಅತಿಥಿಗೆ ಸಮಾರಂಭದ ನೆನಪಿಗಾಗಿ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳು ಗಂಧದ ಪಟ್ಟಿಗೆಯೊಂದನ್ನು ಅರ್ಪಿಸಿದರು. ನಂತರ ಮಾನ್ಯ ಅತಿಥಿಯ ಉತ್ತರ, ಸಭಾಧ್ಯಕ್ಷರ ಕಾಲೋಚಿತ ಮಾತುಗಳಾಗಿ ಶ್ರೀ ಕೆ. ಜನಾರ್ದನ ಪೈಗಳ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭವು ಕೊನೆಗೊಂಡಿತು.

ಮೂಡಬಿದ್ರೆ—ಸ್ಥಳೀಯ ಜೈನ ಹ್ಯಾಸ್ಕೂಲಿನ ಶಾಲಾ ವರ್ಧಂತಿ ಸಮಾರಂಭವು ಇದೇ ತಾ. 25, 26, 27ರಲ್ಲು ವಿವಿಧ ಕಾರ್ಯಕ್ರಮಗಳಿಂದ ಜರಗುವುದು. ಈ ಸಂದರ್ಭದಲ್ಲಿ ಮಂಗಳೂರಿನ ಕೆ. ಪಿ. ಟಿ. ಪ್ರಭುಗಳು ರಾಷ್ಟ್ರಧ್ವಜಾರೋಹಣವನ್ನು ಮಾಡುವರು. ಮಂಗಳೂರಿನ ಟ್ರೈನಿಂಗ್ ಕಾಲೇಜು ಪ್ರಿನ್ಸಿಪಾಲ್ ಶ್ರೀ. ಪಿ. ರಮಾನಂದರಾಯರು ವರ್ಧಂತ್ಯುತ್ಸವದ ಅಧ್ಯಕ್ಷತೆ ವಹಿಸುವರು.

ಮೂಲ್ಕಿ—ಇಲ್ಲಿಯ ಬಿಲ್ಲವ ಸಮಾಜ ಸೇವಾಸಂಘದ ಆಶ್ರಯದಲ್ಲಿ ಇದೇ ತಾ.7 ರಲ್ಲು ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿಯವರ ಪ್ರತಿಮಾ ಪ್ರತಿಷ್ಠಾ ದಿನಾಚರಣೆಯು ಶ್ರೀ ಕೆ. ಆರ್. ಗುರು, ಅವರ ಅಧ್ಯಕ್ಷತೆಯಲ್ಲಿ ಜರಗಿತು. ದೇವತಾಪ್ರಾರ್ಥನೆಯಾದನಂತರ ಸರದಾರ ಪಟೇಲ್, ಶ್ರೀ ಎಮ್. ಆರ್. ಪೂಂಜರ ನಿಧನದ ಬಗ್ಗೆ ದುಃಖಸೂಚಕ ನಿರ್ಣಯಗಳಾದುವು. ಶ್ರೀಗಳಾದ ಕೆ. ಚಿನ್ನ, ಕೆ. ದೇವಣ್ಣ ಸುವರ್ಣ ಬಿ. ಪಿ. ಕೂಳೂರ್‌ಕರ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಗ್ರಾಮಾಭಿವೃದ್ಧಿ ಕಾರ್ಯಗಳ ದಶಂಬರ ತಿಂಗಳ ಸಂಕ್ಷಿಪ್ತ ವರದಿ.

ಕುಂಬಳೆ ಫಿರ್ಕದಲ್ಲಿ ಐದು ಎಕ್ರೆ ಬಂಜರು ಭೂಮಿಯನ್ನು ಬುಲ್‌ಗ್ರೇಡರ್ ಯಂತ್ರದಿಂದ ಸಮತಟ್ಟು ಮಾಡಿಸಿ ಬೇಸಾಯಕ್ಕೆ ಯೋಗ್ಯವಾಗಿ ಮಾಡಿದೆ. ಈ ರೀತಿಯಲ್ಲಿ ಇಪ್ಪತ್ತರ ತನಕ 217 ಎಕ್ರೆ ಭೂಮಿಯನ್ನು ಸಾಗುವಳಿಗೆ ಯೋಗ್ಯವಾಗಿ ಮಾಡಿದೆ. ವಿಶ್ರಗೊಬ್ಬರ ತಯಾರಿಸುವಿಕೆಯ ಬಗ್ಗೆ ಕುಂಬಳೆ ಫಿರ್ಕಾದಲ್ಲಿ 136 ಹೊಂಡಗಳನ್ನೂ ನಂಜೇಶ್ವರದಲ್ಲಿ 600 ಹೊಂಡಗಳನ್ನೂ ಮತ್ತು ಮೂಲ್ಕಿ ಫಿರ್ಕಾದಲ್ಲಿ 680 ಹೊಂಡಗಳನ್ನೂ ತೆಗೆಯಲಾಗಿದೆ. ಈ ತಿಂಗಳಲ್ಲಿ ಮೂರು ಫರ್ಲಾಂಗು ಉದ್ದದಷ್ಟು ಮಾಗಣಿ ಕೆಲಸವು ಮಾಡಲ್ಪಟ್ಟಿತು. ಸಂಕಾದ ಸಹಾಯವಿಲ್ಲದೇನೇ ಗ್ರಾಮಸ್ಥರೇ ಕೂಡಿಕೊಂಡು ಒಂದೂವರೆ ಮೈಲು ಉದ್ದದ ಗಾಡಿಹೋಗಲನುಕೂಲವಾಗುವ ರಸ್ತೆಯೊಂದನ್ನು ಮಾಡಿರುವರು.

ಗ್ರಾಮಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ಕುಂಬಳೆ ಫಿರ್ಕಾದಲ್ಲಿ 11 ಕೆಲಸಗಾರರಿಗೂ, ಮಂಜೇಶ್ವರ ಫಿರ್ಕಾದಲ್ಲಿ 19 ಜನರಿಗೂ ಉತ್ತಮ ತರದ ಕೆಲಸದ ಸಾಮಾನುಗಳನ್ನು ಧರ್ಮಾರ್ಥವಾಗಿ ಕೊಡಲಾಗಿದೆ. ಮೂಲ್ಕಿಯಲ್ಲಿ ಕಂಬಳ ಜಾತ್ರೆ ಸಮಯ ಒಂದು ಪ್ರದರ್ಶನ ವಿಏರ್ಪಡಿಸಲಾಗಿತ್ತು. ರಚನಾತ್ಮಕ ಕಾರ್ಯಕರ್ತರಿಗೆ ಗ್ರಾಮಸೇವಾ ಸಂಘಗಳ ನೇತೃತ್ವದಲ್ಲಿ ಎರಡು ತರದೆತೆ ಶಿಬಿರಗಳು ತೆರೆಯಲ್ಪಡುವವು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸನಿಹಾಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಕರ್, ಶಯನ ಇವಕ್ಕೆಲ್ಲ ಉತ್ಕೃಷ್ಟ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ದ್ರಾಕ್ಷಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಯಬಗ್ಗೆ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI. S. Kanara.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ ನಡೆಯುವ ಚಿತ್ರ

ಶಕಪುರುಷ ಶಾಲಿವಾಹನ (ತಮಿಳು ಚಿತ್ರ)

ಟಿ. ಆರ್. ರಾಜಕುಮಾರಿ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಮ್.

ತಾ. 20—1—51ರಿಂದ

ಭಾರತದ ಪ್ರತಿಯೊಂದು ಪತ್ರಿಕೆಯು ಏಕಕಂಠದಿಂದ "ಕೊಡತೆಯಿಲ್ಲದ ಚಿತ್ರ"ವೆಂದು ಕೂಗಿದ ಕಿಶೋರ್ ಸಾಹೂರವರ

ಸಾವನ್ ಆಯಾರೇ

ಕಿಶೋರ್ ಸಾಹು, ರಮೋಲ.

ನಿಧನ

ಮನೆಗೆ—ಹೊಸಮನೆ ಮುದ್ದಣ್ಣ ಸೆಟ್ಟಿ ರವರ ತಾಯಿ ಬುಕ್ಕಿ ಯಾನೆ ಗಿರಿಯಮ್ಮ ಶೆಡ್ತಿಯವರು ತಾ. 13-1-51ರಲ್ಲು ಸ್ವರ್ಗಸ್ಥರಾಗಿರುತ್ತಾರೆ. ಇವರು ತನ್ನ ಆದರ್ಶ ಗುಣ ನಡತೆಗಳಿಂದ ಸಮಾಜದಲ್ಲಿ ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು.

ಕಟಪಾಡಿ—ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ಕಟಪಾಡಿ, ಪ. ಕ. ಇದರ 16ನೇ ವಾರ್ಷಿಕ ಮಹಾಸಭೆಯು ಇದೇ ಬರುವ ತಾರೀಕು 21-1-1951ನೇ ರವಿವಾರ ಅಪರಾಹ್ನ ಗಂಟೆ 2ಕ್ಕೆ ಸಮಿತಿಯ ಭವನದಲ್ಲಿ ಜರಗಲಿರುವುದು. ಸಮಿತಿಯ ಎಲ್ಲಾ ಸದಸ್ಯರೂ ಸದ್ರಿ ಸಭಾಕಾರ್ಯದಲ್ಲಿ ಸಹಭಾಗಿಗಳಾಗಬೇಕಾಗಿ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಶ್ರೀ ಧರ್ಮಸ್ಥಳದಲ್ಲಿ 'ಮಹಾ ನಡಾವಳಿ":—ಪ್ರಪ್ರತಿಕ್ರಿಕಾರ ನಡೆಯುವ ಧರ್ಮ ಮಹಾ ನಡಾವಳಿಯ ಸಂಬಂಧ ಶ್ರೀ ಮಂಜುನಾಥಸ್ವಾಮಿ ಸನ್ನಿಧಿಯಲ್ಲಿಯೂ, ಶ್ರೀ ಚಂದ್ರನಾಥಸ್ವಾಮಿ ಸನ್ನಿಧಿಯಲ್ಲಿಯೂ, ವಾಸ್ತು, ಪ್ರಾಕಾರಶುದ್ಧಿ, ಬಿಂಬಶುದ್ಧಿ, ಶಾಂತಿಹೋಮ, ವಿವಾಹ ಶುದ್ಧಿ, ವಿವಿಧ ಯಂತ್ರಗಳಾರಾಧನೆಗಳು ಮತ್ತು ಉತ್ಸವಗಳು ಇದೇ ವಿಕೃತ ಸಂ। ನಾಮ ಬಾ ಯು ಗುರುವಾರ (15-2-1951)ದಲ್ಲಿ ಸ್ವಾರಂಭವಾಗಿ ಇದೇ ಸಂ। ನಾಮ ಬಾ ಯು ಗುರುವಾರ (22-2-1951) ಧರ್ಮದೇವತೆಗಳಿಗೆ "ಮಹಾನಡಾವಳಿ" ಉತ್ಸವದ ವಿಜೃಂಭಣೆಯಿಂದ ನಡೆಯಲಿದೆ. ಈ ಉತ್ಸವಾದಿ ದಿನಗಳಲ್ಲಿ ಸಾಹಿತ್ಯ, ಧರ್ಮ, ಕಲೆ ಮತ್ತು ವೈಜ್ಞಾನಿಕ ಸಂಬಂಧವಾದ ಸಭೆಗಳೂ, ಭಾಷಣಗಳೂ, ಕೃಷಿ, ಕೈಗಾರಿಕೆ ಮತ್ತು ಕಲಾ ವಸ್ತುಪ್ರದರ್ಶನಗಳೂ ಜರಗುವುವು. ಸರ್ವರಿಗೂ ಸುಸ್ವಾಗತವಿದೆ.

ಪ್ರಕಟಣೆ

ಜ ನುವಾರು ಪ್ರದರ್ಶನ

21—1—1951

ಉಡುಪಿಯ ರಥಬೀದಿಯಲ್ಲಿ ತಾರೀಕು 21-1-1951ನೇ ಆದಿತ್ಯವಾರ ಸಾಯಂಕಾಲ 3 ಗಂಟೆಯಿಂದ 6 ಗಂಟೆ ವರೆಗೆ ಜಾನುವಾರು ಪ್ರದರ್ಶನವೊಂದು ನಡೆಯಲಿರುವುದೆಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಾರೆ ಇದರಲ್ಲಿ ಉತ್ತಮ ತರದ ದನ, ಎಮ್ಮೆ, ಕೆರು, ಎತ್ತು, ಹಿಟ್ಟಿನ ಕೋಣ ಮೊದಲಾದವನ್ನು ತಂದು ಪ್ರದರ್ಶಿಸಿ ಇನಾಮುಗಳನ್ನು ಪಡೆಯಬಹುದು.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,



ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯ ನ್ನು ನಿರ್ಣೈಸಿ ತಯಾ ರಿಸಲ್ಪಟ್ಟ ಅಮೋಘ ವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾಪಿಸ್ಥರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಮೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

Approved from by the Govt of Myser Certificated by the Agent of the Govt of Cylone & Indian.

ಮಂಗಳೂರು

ಕೆ. ಪಿ. ಸಿ. ಸಿ. ಮಹಾಸಭೆಯು

ಮಂಗಳೂರಲ್ಲಿ ದಿನಾಂಕ 11ರಲ್ಲು ಸಂಜೆ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಕೆ. ನಾಗಪ್ಪ ಆಳ್ವರು ಸ್ವಾಗತ ಭಾಷಣ ಮಾಡಿದರು. ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂದಿನ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸುತ್ತ ಕರ್ನಾಟಕ ಪ್ರಾಂತ ರಚನೆಯು ವಿಚಾರವಾಗಿಯೂ ಮಾತನಾಡಿದರು. ಸಮಯ ವಿಳಂಬವಾದಾಗ್ಗೂ ಕರ್ನಾಟಕ ಪ್ರಾಂತ ರಚನೆಯಾಗುವುದು ಖಂಡಿತವೆಂದು ಹೇಳಿದರು. ಮಹಾಸಭೆಯು ರಾತ್ರಿ ಗಂಟೆ ಎಂಟರಿಂದ ಒಂದು ತನಕವೂ ನಡೆದು ಕಾಂಗ್ರೆಸಿನ ಘಟನೆಗೂ, ಕರ್ನಾಟಕದ ಬ್ಯಾಂಕ್ಸು ಪ್ರಾಂತ ರಚನೆ, ಪಾಸ್ಪೋರ್ಟು ಶಾಸನಗಳಿಗೂ ಸಂಬಂಧಿಸಿದ ಹಲವಾರು ನಿರ್ಣಯಗಳಾದುವು.

ಕಾಂಗ್ರೆಸ್ ಕಾರ್ಯಕರ್ತರ ಸಭೆ—ಮರುದಿನ ಬೆಳಿಗ್ಗೆ ಧ್ವಜವಂದನೆಯಾದ ನಂತರ 10½ ಗಂಟೆಗೆ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯ ಹಲವಾರು ಕಾಂಗ್ರೆಸ್ ಕೆಲಸಗಾರರು ಬಂದಿದ್ದರು. ಶ್ರೀಗಳಾದ ಎಂ. ಎಸ್. ಆಧಿಕಾರಿ, ಎಸ್- ಜಿ. ಸಾಲೆನ್ನ, ಬಿ. ದೇವಪ್ಪ ಆಳ್ವ, ಬಿ. ಬಿ. ಗಿರಿ ಪೈ, ಡಾ। ಎಸ್. ಶರ್ಮ, ಕೆ. ರಾಮ ಪುಡುವಾಳರೇ ನೊದಲಾದವರು ಮಾತನಾಡುತ್ತಾ ಕಾಂಗ್ರೆಸಿಗರು ಇಂದು ಜಾತಿ ಧರಿಸುವುದಿಲ್ಲ. ಮಜೂರ ವರ್ಗದ ಸಂಘಟನೆ ಸರಿಯಾಗಿಲ್ಲ. ಆಹಾರ ಸಮಸ್ಯೆಯನ್ನು ಬಗೆಹರಿಸಬಲ್ಲ ಎನ್ಗ್. ಎಲ್. ಎ.ಗಳೂ ಇತರ ಸಂಸ್ಥೆಗಳ ಪ್ರತಿನಿಧಿಗಳೂ ತಂತಮ್ಮ ಕ್ಷೇತ್ರಗಳಿಗೆ ಹೋಗಿ ಕೆಲಸಮಾಡುವುದಿಲ್ಲ. ಆರ್. ಎಸ್. ಡಿ.ಯ ಪುನರ್ಘಟನೆಯಾಗಬೇಕು. ಪ್ರಚಾರ ಕಾರ್ಯಕ್ಕೆ ಸರಿಯಾದ ವ್ಯವಸ್ಥೆಯಾಗಬೇಕು—ಎಂದು ಮುಂತಾಗಿ ಕಾಂಗ್ರೆಸಿನ ನಾಯಕರಲ್ಲಿ ಇರುವ ದೋಷಗಳನ್ನು ಕೆಲಸಗಾರರ ಸಂಕಷ್ಟಗಳನ್ನು ತಿಳಿಸಿದರು ನಂತರ ಶ್ರೀ ಬಿ. ಆರ್ ನಿಸ್ಸಿಯವರು ಕಾರ್ಯಕರ್ತರೆತ್ತಿದ ಕಾರ್ಯಕರ್ತರು ನಾಯಕರ ಧ್ವನಿವರ್ಧಕಗಳಂತಿರಬೇಕೆಂದೂ ಅವರಲ್ಲಿ ನ್ಯಾಕರರಲ್ಲಿರುವಂತಹ ಶಿಸ್ತು ಆಗತ್ಯವೆಂದೂ ಹೇಳುತ್ತಾ ತಜ್ಞರಾಗಿ ಜನತೆಯ ಸಂದೇಶ ನಿವಾರಿಸುವವರಾಗಬೇಕೆಂದರು ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಹೀಗೆ ಅಭಿಪ್ರಾಯಪಟ್ಟರು. 'ಕಾಂಗ್ರೆಸಿಗನು ಖಾದಿ ಧರಿಸುವುದೊಂದು ಶಿಸ್ತು. ಅದನ್ನು ಪಾಲಿಸಲೇ ಬೇಕು. ಕಾರ್ಯಕರ್ತರಲ್ಲಿ ತಿಳುವಳಿಕೆ ಹೆಚ್ಚಲು ಶಿಬಿರಗಳನ್ನು ತೆರೆಯುವುದು ಉತ್ತಮ. ಆಹಾರ, ಬಂಜರುಗೂಳಿಸುವಿಕೆ ಮುಂತಾದ ರಾಷ್ಟ್ರದ ಪ್ರಶ್ನೆಗಳಿಗಾಗಿ ನೀವು ತಲೆಹಾಕಬೇಡಿ. ಅದನ್ನು ನಾಯಕರು ನೋಡಿಕೊಳ್ಳುತ್ತಿದ್ದಾರೆ. ಹಳ್ಳಿಯಲ್ಲೇ ಇಂದಿನ ಕೆಲಸವಿರುವುದು. ರಾಜಕೀಯ ಜ್ಞಾನಪಡೆದು ಕೆಲಸಮಾಡಬೇಕು' ಎಂದು ಮುಂತಾಗಿ ಬೇಳಿದರು.

ಕರ್ನಾಟಕ ಏಕೀಕರಣ ಸಭೆ—ಡಿ. ಕೆ. ವಿದ್ಯಾರ್ಥಿ ಯೂನಿಯನ್, ಜನಪದ ಕಲಾಮಂಡಳಿ ಮತ್ತು ಪ್ರಗತಿ ಮಂಡಲಿಗಳ ನೇತೃತ್ವದಲ್ಲಿ ಸಾರ್ವಜನಿಕ ಸಭೆಯೊಂದು ಇದೇ ತಾ. 12ರಲ್ಲು ಸಂಜೆ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಸ್. ನಿಜಲಿಂಗಪ್ಪ, ನೇತ್ರಿ ಹೂಡಿ, ವೆಂಕಟರೆಡ್ಡಿ, ಬಿ. ಡಿ. ಜತ್ತಿ, ಶ್ರೀರಂಗ ಕಾನುಡ್ ಇವರುಗಳ ಭಾಷಣವಿರುವುದೆಂದು ಕರಪತ್ರದಲ್ಲಿ ಜಾಹೀರು ಪಡಿಸಿದ್ದರೂ ಅವರಾರೂ ಸಭೆಗೆ ಬಾರದೆ ಶ್ರೀ ನೇತ್ಯಿಯವರು ಮಾತನಾಡಿ ಕರ್ನಾಟಕ ಪ್ರಾಂತವಾಗಿಯೇ ತೀರುವುದೆಂದು ಒತ್ತಿ ಹೇಳಿದರು.

ಸಾರ್ವಜನಿಕ ಸಭೆ—ದಿನಾಂಕ 10ರಲ್ಲು ಸಂಜೆ ಕೇಂದ್ರ ಮೈದಾನದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಕೆ. ಪಿ. ಸಿ. ಯ ಕೆಲವು ಮಹನೀಯರು ಮಾತನಾಡಿದರು. ಡಾ। ಕೆ. ನಾಗಪ್ಪ ಆಳ್ವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಕೆ. ಶೆಟ್ಟರು ಆತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಜಿ. ವಿ. ಹಳ್ಳಿಗೇರಿಯವರು ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯ ದೊರಕಿದ ಬಳಿಕ ನಮ್ಮ ಜವಾಬ್ದಾರಿ ಹೆಚ್ಚಾಗಿದೆ. ಅದನ್ನು ತಿಳಿದೇ ಜನರು ವರ್ತಿಸಬೇಕೆಂದರು. ಶ್ರೀ ಅಣ್ಣೂ ಗುರುಜೆಯವರು ಸ್ವಾತಂತ್ರ್ಯ ಗಳಿಸುವ ಹೋರಾಟದಲ್ಲಿ ನಮ್ಮ ತ್ಯಾಗ, ಸಂಕಷ್ಟಗಳು ಅಲ್ಪವಾದ್ದರಿಂದಲೇ ನಾವಿಂದು ಈ ರೀತಿ ವರ್ತಿಸುತ್ತಿದ್ದೇವೆಂದೂ ರಾಷ್ಟ್ರದ ಅಭಿವೃದ್ಧಿಗೆ ಜನತೆ, ಸರಕಾರ, ಅಧಿಕಾರಿ ವರ್ಗ, ಈ ಮೂರಂಗಗಳು ಒಂದಾಗಿ ಮುನ್ನಡೆಯಬೇಕೆಂದರು. ಶ್ರೀ ಎಸ್. ನಿಜಲಿಂಗಪ್ಪನವರು ತಮ್ಮ ಮಾತಿನಲ್ಲಿ ಮಂಗಳೂರು ಜಿಲ್ಲೆಯವರನ್ನು ಅಭಿನಂದಿಸಿ ಜನರು ಇನ್ನಷ್ಟು ಸಂಯಮದಿಂದ ಜವಾಬ್ದಾರಿಯಿಂದ ವರ್ತಿಸಬೇಕು, ಯೋಗ್ಯರನ್ನೇ ಸರಕಾರಕ್ಕೆ ಪ್ರತಿನಿಧಿಗಳಾಗಿ ಕಳುಹಿಸಬೇಕು ಎಂದು ಹೇಳುತ್ತಾ ಭಾರತದಲ್ಲಾದ ಕಾರ್ಯಗಳು ನಿಜವಾಗಿಯೂ ಮಹತ್ವದೆಂದರು. ಆ ಮೇಲೆ ಶ್ರೀ ಆರ್. ಬಿ. ದುಬೆಯವರು ಮಾತನಾಡುತ್ತಾ ಆರ್. ಎಸ್. ಎಸ್. ನವರು ಹೇಳುವಂತೆ ಭಾರತದಲ್ಲಿ ಹಿಂದೂರಾಜ್ಯ ಮಾಡುವುದೂ, ಕಮ್ಯುನಿಸ್ಟ್‌ರೆನ್ನುವಂತೆ ಆರ್ಥಿಕ ಮತ್ತು ಭೂ ಸುಧಾರಣೆ ಮಾಡುವುದೂ ಅಸಾಧ್ಯದ ಮಾತೆಂದು ವಿವರಿಸುತ್ತಾ ತಾನು ಹಿಂದೂ ಧರ್ಮ ಸಂಸ್ಕೃತಿಗೂ ನಿಜವಾದ ಕಮ್ಯುನಿಸಮಿಗೂ ವಿರೋಧವಿಲ್ಲವೆಂದು ತಿಳಿಸಿದರು. ಭೂಕಬಳ್ಳಿ ಆಗುವ ಎಲ್ಲಾ ಸುಧಾರಣೆಗಳು ಶಾಂತ ಮಾರ್ಗದಿಂದಲೇ ಆಗಬೇಕಾಗಿದೆ ಎಂದರು. ನಂತರ ಶ್ರೀ ಟಿ. ಆರ್. ನೆಸ್ಸಿಯವರು ಕರ್ನಾಟಕ ಪ್ರಾಂತ ರಚನೆಯ ವಿಚಾರವಾಗಿ ಮಾತನಾಡುತ್ತಾ ಭಾಷಾವಾರು ಪ್ರಾಂತ ರಚನೆಯು ನೈಸರ್ಗಿಕವೆಂದೂ ಸಮಯ ಬಂದಾಗ ಅದು ಆಗಿಯೇ ತೀರುವುದೆಂದೂ ಹೇಳುತ್ತ ಅತನೇ ನಾವು ಸಮನ್ವಿಸಿರದೆ ನನ್ನು ಕೆಲಸ ಮಾಡುತ್ತಿರಬೇಕೆಂದರು.

ವಾರ್ಷಿಕ ಮಹಾಸಭೆ— ಭಾರತ ಕೆಥೋಲಿಕ್ ಸಂಘದ ವಾರ್ಷಿಕ ಮಹಾ ಸಭೆಯು ಕಳದ ತಾ. 7ರಲ್ಲು ಮಂಗಳೂರು ಕೆಥೋಲಿಕ್ ಕ್ಲಬ್ಬಿನಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಮ್. ರತ್ನ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಸತ್ಕಾರ ಕೂಟ— ಅದೇ ದಿನ ಸಂಜೆ ಶ್ರೀ ರತ್ನ ಸ್ವಾಮಿಯವರನ್ನು ಮಂಗಳೂರು ನಗರ ಸಭೆಯು ಅಮಂತ್ರಿಸಿ, ಅವರಿಗೊಂದು ಬಿನ್ನವತ್ತಳೆಯತ್ತು ಸತ್ಕರಿಸಿತು.

ವಿದ್ಯಾರ್ಥಿಗಳಿಗೆ ಹಿತವಚನ—ಇದೇ ತಾ. 15ರಲ್ಲು ಬೆಳಿಗ್ಗೆ ಮಂಗಳೂರಿನ ಕೆನರಾ ಹೈಸ್ಕೂಲಿನ ಭುವನೇಂದ್ರ ಭವನದಲ್ಲಿ ಆಚಾರ್ಯ ಕೃಪಲಾನಿಯವರು ವಿದ್ಯಾರ್ಥಿಗಳ ಸಭೆಯಲ್ಲಿ ಮಾತನಾಡುತ್ತಾ ಸ್ವಾತಂತ್ರ್ಯ ಕಾಯಿದೆಯನ್ನು ಗೌರವಿಸುವುದು, ಎಂಬಿತ್ಯಾದಿ ವಿಷಯಗಳನ್ನು ವಿವರಿಸುತ್ತ, ವಿದ್ಯಾರ್ಥಿಗಳು ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸದೆ, ಜ್ಞಾನ ಸಂಪಾದನೆಮಾಡುವಾಗ ಬಿಡುವಿದ್ದರೆ ನಗರ ನೈರ್ಮಲ್ಯ, ವಯಸ್ಕರ ಶಿಕ್ಷಣಾದಿಗಳಲ್ಲಿ ಸಾಮೂಹಿಕವಾಗಿ ಇಲ್ಲವೆ ವೈಯಕ್ತಿಕವಾಗಿ ಸೇವೆ ಸಲ್ಲಿಸಿದರೆ ಅದೂ ರಾಜಕೀಯವೇ ಎಂದು ತಿಳಿಸಿದರು.

ಮಾನ್ಯ ಉಪಮಂತ್ರಿ ಮುಷ್ರಿದ್

ಆಲರು—ತಮ್ಮ ಪತ್ನಿಯೊಂದಿಗೆ ಕಳದ ವಾರದಲ್ಲಿ ಆಂಚೆ-ತಂತಿ ಶಾಖೆಯ ಕೆಲಸಗಾರರ ಸಂಘದ ಮಂಗಳೂರು ಶಾಖೆಗೆ ಸಂದರ್ಶನವಿತ್ತರು. ಆಗ ಜರಗಿದ ಸಭೆಗೆ ಜಿಲ್ಲಾ ಜೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆರು ಅಧ್ಯಕ್ಷರಾಗಿದ್ದರು. ಸಂಘದ ಕಾರ್ಯದರ್ಶಿ ಶ್ರೀ ನಾರಾಯಣ ರಾಯರು ಸ್ವಾಗತ ವಿತ್ತರು. ಬಳಿಕ ರಾಷ್ಟ್ರಾಧ್ಯಕ್ಷೆ ಡಾ। ರಾಜೇಂದ್ರ ಪ್ರಸಾದ, ಪ್ರಧಾನ ಮಂತ್ರಿ ನೆಹರು ಮತ್ತು ಸರದಾರ ಪಟೇಲರ ಭಾವಚಿತ್ರ ಅನಾವರಣ ಸಮಾರಂಭ ನಡೆಯಿತು. ಮಂತ್ರಿಗಳು ತಮಗಿತ್ತ ಮನವಿಗೆ ಉತ್ತರವೀಯುತ್ತ ಆಂಚೆ ಕೆಲಸಗಾರರು ಪ್ರಾಮಾಣಿಕತನದಿಂದ ವರ್ತಿಸಬೇಕೆಂದು ಕೇಳಿಕೊಂಡರು

ಮುಂಡ ಮಾತ್ರ ಇದ್ದ ಶವ—ಬಾಳ ಗ್ರಾಮದ ಮಾಂಡು ಸಾರ್ವದಲ್ಲಿ ಕೆಯಿತ ಕುಮೆರಿ ಎಂಬ ಪದಪಾಲಿ ರುಂಡದಿಂದ ಬೇರಾದ ದೇಹವನ್ನು ನೆಲದೊಳಗೆ ಹೂಳಿಟ್ಟುದು ಪತ್ತೆಯಾಗಿದೆ. ಹೆಣಕ್ಕಾಗಿ ಕೊಲೆ ಮಾಡಿದ್ದಾಗಿ ಊಹಿಸಲಾಗಿದೆ.



ದಿ ಕೆಥೋಲಿಕ್ ಬ್ಯಾಂಕ್, ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು

ಕುಂದಾಪುರ ತಾಲೂಕು ಕ್ಸಬಾದಲ್ಲಿರುವ, ಕೆ. ಪುತ್ತು ಯಾನೆ ನಾರ್ಯಾಣ ಸೇಟರ ಮಗ ಕೆ. ನರಸಿಂಹ್ಯ ಸೇಟ್ ನವ್ಮ ಬೇಂಕಿನಲ್ಲಿ ಅಡವಿಟ್ಟ ಚಿನ್ನದ ನಗಗಳನ್ನು ಬಿಡಿಸಬೇಕಾಗಿ ಕೊಟ್ಟ ರಿಜಿಸ್ಟ್ರೇಟೀಸು ಜ್ಯಾರಿ ಆಗದೆ ವಾಪಾಸು ಬಂದಿರುತ್ತದೆ. ಆದ್ದರಿಂದ ಈ ಮೂಲಕ ತಿಳಿಯಪಡಿಸುವುದು ಯೇನೆಂದ್ರೆ, ಈ ಕೆಳಗೆ ಕಾಣ್ತಿದ ಅವರ ಲೋನುಗಳಲ್ಲಿ ಅಡವಿಟ್ಟ ನಗಗಳನ್ನು ಇದೇ ತಿಂಗಳ ತಾರೀಕು 25-1-1951ರ ವಳಗೆ ಬಿಡಿಸದೆಯಿದ್ದಲ್ಲಿ ತಾ. 30-1-51ನೇ ಮಂಗಳವಾರ ಗಂಟೆ 1ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಯೇಲಂ ಮಾಡಲಾಗುವುದು, ಅದೇ ದಿವಸ ಮಾಡಲು ಅನುಕೂಲವಾಗದಿದ್ದರೆ ಬೇಂಕಿಗೆ ಯುಕ್ತಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೇನೆ ಮುಂದರಿಸಲಾಗುವುದು.

ಸಾಲದ ನಂಬ್ರ	ಸಾಲ ಪಡೆದ ತಾರೀಕು	ಸಾಲದ ಮೊಬ್ಲಗು
24/ 924	12—3—1949	ರೂಪ್ಯಾ 20—0—0
24/ 979	28—3—1949	,, 100—0—0
24/1061	12 4—1949	,, 60—0 0
25/ 183	9—8—1949	,, 90—0—0
25/ 451	4—10—1949	,, 57—0—0
26/ 38	16—1—1950	,, 50—0—0
26/ 176	28—2—1950	,, 70—0—0
26/ 268	21- 3—1950	,, 60—0—0
26/ 350	8—4—1950	,, 520—0—0
26/ 480	3—5—1950	,, 25—0—0
26/ 612	26—5—1950	,, 45—0—0
26/ 647	30—5—1950	,, 310—0—0
26/ 651	31—5—1950	,, 45—0—0
26/1588	12—10—1950	,, 165—0—0

ಬೇಂಕಿನ ಆಫೀಸು
ಕುಂದಾಪುರ 11-1-1951

I Menezes,
Agent

ಗೊನೊರಿಯಾ ಹರಮಾರೋಗ ಉಪ್ಪು ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಕಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವ್ಸ, ಶರೀರವ ಹೊಗಲು ಬಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಳ್ಳಿಯವಾಗಿದ್ದರೆ,.... ಜಟ್ಟಿ ಬಿದ್ದಿದ್ದರೆ, ಉಷ್ಣ ದಿಂದ ಚೀರು ಇಳಿದಿದ್ದರೆ, ಉಬ್ಬುಡು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಾಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಛೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಛಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾರ, ಕಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ಒಂದ್ಕೆ ಕರೂ. ಪೋಸ್ಟ ಚಾರ್ಜ ೮ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹೆಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಸ್ವರ ಮೂರ್ತಿ ಡಾವಣಗೇರಿ.

ಸರ್ವಸ್ವಾಧಿಕಾರ ಸೂಡಲಕ್ಕಮೂಲಕರ ವಿಶಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ-

ಸ್ವಾ ರಸನಿಮಿಷ ಸ್ವಾ

ಮೆಹತಾಬರು "ಮದರಾಸಿಗರು ಕನ್ನೇರಿ ಡುವುದು ಬೇಡ" ಎಂದು ಹೇಳಿದರು.

—ಕೂಡಲೇ ಜನ ನಕ್ಕರು. ಹೇಳಿದಂತೆ ನಡೆಯುವುದು ಮದರಾಸಿಗರ ಗುಣವಲ್ಲವೆ?

೦೦ ೦೦

ಜಾತಿಭೇದವಿಲ್ಲದೆ ಎಲ್ಲರೂ ಕೃಷಿಸಮನಸ್ಕ ರಾಗಬೇಕು ಎಂದರು.

—ಭೂಮಿ ಎಲ್ಲಿದೆ? ಎಂದು ಮದರಾಸಿ ಕೂಲಿಗಳು ಕೇಳುತ್ತಾರೆ?

೦೦ ೦೦

ಲಿಯನಾಕತ್ತರು ಹೋಗಲಾರದೆಯೂ ಲಂಡನ್ನಿಗೆ ಹೋದರು.

—ಪಾಕಿಸ್ತಾನದೊಳಗಿನ ಪರಿಸ್ಥಿತಿಗೂ ಅವರ ದ್ವಿ-ನಿರ್ಧಾರಗಳಿಗೂ ಯಾವ ವಿಶೇಷ ಸಂಬಂಧವೂ ಇರಲಾರದು ತಾನೆ?

೦೦ ೦೦

ನೈಸಾರು ಶಾಸನ ಸದಸ್ಯರು ರೆಡ್ಡಿಯವರ ಮೇಲೆ ವಿಶ್ವಾಸ ವ್ಯಕ್ತ ಪಡಿಸಿದರು

—ಕೆಟ್ಟಿದ್ದನ್ನು ಕಟ್ಟಿದರು ಅಹಿಂಸಾ ಯೋಧರು.

ಚೀನದಲ್ಲಿ ಕಮ್ಯೂನಿಸ್ಟರು ಬಂದುದೇ ತಡ ಸುಭಿಕ್ಷೆಯಾಗಿದೆ.

(ಬಂದು ಭಾಷಣ)

—ಭಾರತದಲ್ಲಿಯೂ ಕಾಂಗ್ರೆಸು ಬಂದುದೇ ತಡ ಬಿಕ್ಷೆ ಹೆಚ್ಚಾಗಿದೆ. ಸರಕಾರವೂ ಸರಗೊಡ್ಡಿ ಆರ್ಜಂಟೀನಾ, ಅಮೇರಿಕಗಳನ್ನು ಬೇಡುತಿದ್ದರೆ, ಜನಗಳು ಪರಸ್ಪರ ಭಿಕ್ಷೆ ಎತ್ತುತ್ತಿದ್ದಾರೆ.

೦೦ ೦೦

(೧) ಶ್ರೀನಾಮ್ ರಾಜಗೋಪಾಲ ಯ್ಯಂಗಾರರು ವೇದಿಕೆ ಏರಿದರು.

(೨) ನಮ್ಮ ದೇಶದ ಶಿಕ್ಷಣವು ಪ್ರಯೋಜನವಿಲ್ಲ. ನಮಗೀಗ ಬೇಕಾಗಿರುವುದು **ಸಮುಷ್ಟಿಶಿಕ್ಷಣ**. ವಿದೇಶಗಳಲ್ಲಿ ಅದನ್ನು ಕೊಡುತ್ತಿದ್ದಾರೆ ಎನ್ನುವುದು ಸಂತೋಷದ ವಿಷಯ.

—ಜಾರಿದ ಲೇಖನಿಯ ನೂಪುರ

೦೦ ೦೦

ನೂತನ ಚೀನದ ಬ್ಯಾಂಕುಬ್ಯಾಲೆನ್ಸನ್ನು ಅಮೇರಿಕವು ಒತ್ತಿ ಹಿಡಿಯುವ ಆಜ್ಞೆ ಹೊರ ಡಿಸಿದೆ.

—ಇದು ಚೀನಾ-ಅಮೇರಿಕ ಸಮರದ ಪೂರ್ವಭಾವಿಯಲ್ಲವೆಂದೂ, ಚೀನೀ ಜನತೆಯ ಮೇಲಿನ ಪ್ರೀತಿಯಿಂದ ಅಮೇರಿಕ ಹಣದ ಭದ್ರತೆಗೆ ಎಳಸಿದೆ ಎಂದೂ ನಂವು ಸಂಬಭೇಕಂತೆ!

೦೦ ೦೦

ಯುಕ್ತರಾಷ್ಟ್ರ ಸಂಘದ ಮಧ್ಯಸ್ಥಿಕೆಗೆ ಚೀನ ಒಪ್ಪುವುದಿಲ್ಲ.

—ಕಾಶ್ಮೀರದ ಮಧ್ಯಸ್ಥಿಕೆಯನ್ನು ಅವರಿಗೊಪ್ಪಿಸಿ ಅನುಭವ ಪಡೆದ ಭಾರತೀಯರಿಗೆ ಇದರಿಂದ ಚಿಂತೆ ಇಲ್ಲ.

೦೦ ೦೦

ಪಿ. ಬಿ ಅಯ್ಯರ್ ಪ್ರತಿನಿಧಿಗಳಲ್ಲೊಬ್ಬರು ಚೀನಾ ಸಂದರ್ಶನಾ ನಂತರ ಚೀನೀ ಸರಕಾರವನ್ನು ಬಯ್ಯಲು ಆರಂಭಿಸಿದ್ದಾರೆ; ಇಂಗ್ಲೆಂಡಿನ ಬಿ. ಬಿ. ಸಿ. ಯವರು ವಾರವಾರವೂ ಚೀನೀ ಸರಕಾರವನ್ನು ಹೊಗಳುತ್ತಿದ್ದಾರೆ.

—ಇದು ಕಾವನಾವೆಲ್ಲ್ ಏಕ್‌ದ ಒಂದು ನಿದರ್ಶನವೆ?

೦೦ ೦೦

ನವಹೂ ಪಾರ್ಲಿಮೆಂಟಿನ ಸದಸ್ಯರಿಗೆ ಅವಿರತ ದುಡಿಮೆ ಹಾಗೂ ವಿಜಯದ ಶುಭವಾಕ್ಯವನ್ನು ಕೋರಿದರು.

—ಪಾರ್ಲಿಮೆಂಟ್ ಸದಸ್ಯರು ಅನೇಕರು-ಎಚ್. ವಿ. ಕಾಮತ್ ಅಧಿಯಾಗಿ ನಾಲಿಗೆಯನ್ನು ಸಾಣೆಗೆ ಕೊಡುವುದಿಲ್ಲವಂತೆ.

೦೦ ೦೦

ಯುಗೋಸ್ಲಾವಿಯದ ಟಿಟೋ "ಪೂರ್ವದಿಂದ ಸಮರ ಕಹಳೆ ಮೊಳಗುವುದು; ಯುದ್ಧ ಬರುವುದು" ಎಂದು ಭವಿಷ್ಯ ನುಡಿದಿದ್ದಾರೆ.

—ಭಾರತೀಯರು ಬೆಚ್ಚಿಬಿದ್ದಾರೋ?

೦೦ ೦೦

ಸೇಲಂನಿಂದ ಹೆಬ್ಬಾಕೆ ಬಡತನದ ಬೇಗೆಯನ್ನು ತಡೆಯಲಾರದೆ ಬಾವಿಗೆ ಬಿದ್ದು ತಂಪು ಕಂಡರಂತೆ. ಅತ್ಯವಸ್ಥೆಗೆ ಏಂಬಿನಾಮೆಯ ದಾರಿದ್ರಬಡತನವೇ ಕಾರಣ ಎಂದು ನಿರ್ಧರಿಸಲಾಯಿತು.

—ಹೆಚ್ಚಿನವರು ಬದುಕಿರುವುದಕ್ಕೂ ಬಡತನವೇ ಕಾರಣವಲ್ಲವೆ? ಎಂಬುದರ ಶೋಧನ ನಡೆಯಲಿ.

ಮುಂಬಯಿಯ ತಾತಾ ಇನ್‌ಸ್ಟಿಟ್ಯೂಟಿನ ಪಿ ಆಟಂ ಶೋಧನೆಯ ಬಗ್ಗೆ ಸಮ್ಮೇಳನ ಜರಗಿತು.

—ಅಹಿಂಸಾತ್ಮಕ ಅಟಂ ಶೋಧ ಇದು.

೦೦ ೦೦

ಭಾರೀ ಯಶಸ್ವೀ ಸಮ್ಮೇಳನ ಎಂದು ಇಟಲಿ, ಇಂಗ್ಲೆಂಡ್, ಬ್ರಾಸ್ಸಿಸ ಪ್ರೊಫೆಸರುಗಳು ಹೇಳಿದರು.

—ಇದು ಉಪಚಾರ ಅಲ್ಲವಂತೆ.

೦೦ ೦೦

ಆಗ್ರಾ ಜೆಲ್ಲೆಯಲ್ಲಿ ನಿಮಿತಿಗಳ ದಂಡು ಬಂದು ಹೊಲಗಳನ್ನು ಬರಿದು ಮಾಡುತ್ತಿರುವುದಂತೆ.

—ಅಪ್ಪಗಳು ಕಮ್ಯೂನಿಸ್ಟರ ಪಿಕ್ಪಾಕೆಟ್ ಎಂಬುದನ್ನು ಸೋಡಲು ಇಂಡಿಯಾ ಸರಕಾರವು ಸಮಿತಿ ರಚಿಸುವುದಿಲ್ಲವೆಂದು ಕೇಳಿ ಒಬ್ಬರು ಮರುಗುತ್ತಾರೆ.

೦೦ ೦೦

ಹಿಮಾಲಯದಲ್ಲಿ ಕಾಶ್ಮೀರ ಕಿರಣಗಳ ಪ್ರಯೋಗಶಾಲೆ, ಅವೇಕ್ಷಣಾಲಯ ಏರ್ಪಡುವುದಂತೆ.

—ಕಮ್ಯೂನಿಸ್ಟ್ ಚೀನದ ಇರವಿಗೂ ಇದಕ್ಕೂ ಸಂಬಂಧ ಇರಬಹುದೆ?

—ಕು. ಶಿ.

Notice

ಕಾಸ್ರಗೋಡು ಡಿ.ಮು.ಕೋರ್ಟಿನಲ್ಲಿ

ಜುಳ್ಳಿಯಲ್ ಆಮ್ಮಾರೆ ಯಾನೆ ಚಿರಂಬ್ಯೆ ಸಹಾ } ಅರ್ಜಿದಾರಳು.

&

ಮಾಣುಳ್ಳಂ ಅಮ್ಮಾ ಸಹಾ

—ರೆಸ್ಪಾಂಡೆಂಟಳು

I) ಮಾಣುಳ್ಳಂ ಅಮ್ಮಾ – ಕೊಡೋತ್ ಕುಂಞಂಬು ನ್ಯಾರರ ವಿಧವೆ ಕೊಡೋತ್ ಗ್ರಾಮದ ಪೊಳಕ್ಕರೆ ಎಂಬಲ್ಲಿನವಳು.

2) ಕುಂಞ ಕಣ್ಣನ್ ನಂಬ್ಯಾರ } ಸದ್ರಿ ಕೊಡೋತ್ ಕುಂಞಂಬು
4) ವಿಸಾಲಾಕ್ಷಿ ಅಮ್ಮಾ } ನ್ಯಾರರ ಮಕ್ಕಳು.

ಬಲ್ಲ ಗ್ರಾಮದ ತೋಟಚ್ಚೇರಿ ಎಂಬಲ್ಲಿರುವವರು-

ಇವರಿಗೆ ಜ್ಯೂರಿಯಾಗತಕ್ಕ ನೋಟೀಸ್.

ಇವರೊಳಗೆ ತಾ. 11-1-51

ಮೇಲ್ಕಂಡ ಸ್ಥವಹರ್ಜಿಯಲ್ಲಿ ದಾವಾ ಆಡಿನೆ ಕಾಣುವ ಕೃತದ ಬಗೆಯು ರೂಪಾ 1200-0-0ನ್ನು ಫಾರಿಗತ್ತಿ ಮಾಡುವರೆ ಅರ್ಜಿದಾರಳು ಈ ಕೋರ್ಟ್ ಡಿಪೊಜಿಟ್ಟು ಮಾಡಿದ್ದಲ್ಲಿ ಸದ್ರಿ ಅರ್ಜಿಯು ತಾ. 7-2-51ಕ್ಕೆ ತನ್ಮಿಗಿಟ್ಟಿರುವದ್ರಿಂದ, ಅದಿವ್ಸ ಘಂಟೆ 11ಕ್ಕೆ 1, 2 & 4ನೇ ರೆಸ್ಪಾಂಡೆಂಟುಗು ಸದ್ರಿ ಕೋರ್ಟ್ ಮುಂದೆ ಹಾಜ್ರಾಗಿ ತಮ್ಮ ಅಕ್ಷೇಪಗಳನ್ನು ಮನವೀ ಮಾಡುವರೆ ತಪ್ಪಿದ್ರೆ ಎಕ್ಸ್‌ಪಾರ್ಟಿಯಾಂದ ತೀರ್ಮಾನಿತಲಾಗುವದೆಂಕ ಈಮೂಲ್ಕ ತಿಳಿಸೋಣಾಗುತ್ತದೆ.

(By Court Order)
K. P- Madhava Rao
Advocate for Petitioner
Kasargod, 11—1—51.

ಅನ್ಯತಾಂಜನ

ತಲೆವೇದನೆ, ತಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಫಿಂಯಗಳು, ಬಾತುಕೊಳ್ಳುವುದು, ಚೇಳಿವಿಷಮುಂತಾದವು, ಪಕ್ಷವಾತ, ಮೊದಿವೆ, ಮೊದಲಾದ ಎಲ್ಲಾರೋಗಳಿಗೂ ಸಿದ್ಧೌಷಧ



REGD.

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

Examination For Recruitment To The Cadre Of Stenographers In The Circle And Other Administrative offices of The Indian P & T Department In The Madras Circle

A competitive examinaiton for recruitment to the cadre of Stenographers In the office of the Postmster-General, Madras 2 and other administrative offices of the P & T Department In the madras Circle will be held in Madras on the 15th April, 1951.

2. The prescribed form of application and a copy of the Rules can be obtained from the office of the Postmaster-General, Madras 2, on payment of a fee of Rupee one only in the form of an Indian Postal order made payable to the Postmaster-General in the Mount Road P. O

3 Completed applications accompanied by an Indian Postal order for Rs. 4/- (Re. 1/- in case of Scheduled caste, Tribal and aboriginal communities and displaced persons from Pakistan) made payable to the Postmaster-General as the examination fee and attested copies of documents regarding age and educational pualifications and two testimonials from Civil Gazetted or Commissioned officers should be submitted so as to reach the office of the Postmaster-General, Madras 2 by the 15th February, 1951.

4. The posts are in the prescribed scale of Rs. 80-5 120-BB-8-200-10/2-220 plus allowances under the Government of India Rules.

5. The applicant must have passed the Matriculation examination of a recognised University or its equivalent.

6 The applicant must be between the ages of 18 and 23 on the date of the examination. In the case of Scheduled castes and Tribal and Aboriginal communities relaxation in the upper Age limit upto 3 years will be allowed.

7. The candidates will be given a piece of dictation consisting of 560 words at a speed of 80 words per minute and they will be required to transcribe it in 55 minutes. Five percent errors will be allowed.

8. Candidates will be selected in order of merit subject to the orders regarding reservation of vacancies for scheduled caste candidates.

9. The appointment of selected candidates will as usual be subject to their physical fitness and their character and antecedents being found to be satisfactory on verification.

10 All correspondence should be addressed to the Postmaster-General by designation and NOT by name and superscribed **"Application For Appointment As Stenographer"**

C. V. Cunningham
Postmaster-General,
Madras Circle

ಸ್ವೀಕಾರ-ವಿಮರ್ಶೆ

೧ ಸರ್ವಜ್ಞವಚನಗಳು–ಪ್ರಕಾಶಕರು ಪ. ಆ. ಉಪಾಧ್ಯಾಯ, ಉಪಾಧ್ಯಾಯ ಪ್ರಕಟಣಾಲಯ ಲಿ., ಗೋಪಾಲಕೃಷ್ಣ ಗಂಡಿಬೀದಿ ಚಿಕ್ಕಪೇಟೆ, ಬೆಂಗಳೂರು ನಗರ. ಬೆಲೆ 0-6-0

ಭಕ್ತಿ, ಜ್ಞಾನ, ತ್ಯಾಗ, ದೈವಿಕ, ಹೀಗೆ ಬೇರೆ ಬೇರೆಯಾಗಿ ಸರ್ವಜ್ಞವಚನಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಕನ್ನಡನಾಡಿನಲ್ಲಿ ಸುಪ್ರಖ್ಯಾತವಾದ ಸರ್ವಜ್ಞಕವಿಯ ವಚನಗಳು ಜನಪ್ರೀತಿಯನ್ನು ಗಳಿಸಿವೆ. ಶ್ರೀ ಪ್ರಸ್ತುತ ಪ್ಪ ಉತ್ತಂಗಿಯವರ ಸಂಗ್ರಹವನ್ನು ಬಿಟ್ಟರೆ ಇದುವರೆ ಉತ್ತಮ ಸಂಗ್ರಹವೆಂದು ತೋರುತ್ತದೆ. ಪುಸ್ತಕದ ಬೆಲೆ ಅರಾಣೆ ಸ್ವಲ್ಪ ಜಾಸ್ತಿಯೆಂದೇ ಹೇಳಬೇಕು.

೨ ಕನ್ನಡ ಬಾಲ ರಾಮಾಯಣ–ಲೇಖಕರು ಕರಿಜೇಡು ಹೇಮಾದ್ರಿ ಸತ್ಯನಾರಾಯಣ, ಪ್ರಕಾಶಕರು ನೇರಂಬಳ್ಳಿ ಸೀತಾರಾಮಾಚಾರ್ಯರು ಆಲೂರು. ಬೆಲೆ 0-0-9.

ಬಳ್ಳಾರಿಯಲ್ಲಿ ತೆಲುಗು ಪಂಡಿತನಾಗಿದ್ದುಕೊಂಡು ಕನ್ನಡದ ಮೇಲೆ ತನಗಿರುವ ಅತ್ಯಂತಭಿಮಾನದಿಂದ ಇದನ್ನು ಬರೆದುಬಾಗಿದೆ. ಲೇಖಕರು 14ನೇ ನಯಸ್ಸಿನಲ್ಲಿ ಬರೆದುದೆಂದು ಮುನ್ನುಡಿಯಲ್ಲಿ ಹೇಳಿಕೊಂತ್ತಾರೆ. ಹದಿನಾಲ್ಕನೆಯ ವಯಸ್ಸಿನಲ್ಲಿ ಇಷ್ಟು ಬರೆಯಬಹುದೇ?" ಎನುವಷ್ಟು ಶಂಪೆ ಹುಟ್ಟುತ್ತದೆ. ಅಚ್ಚುದೋಷದಿಂದ ತಪ್ಪುಗಳು ವಿರುವ್ಯಾಭಿಪ್ರಾಯಗಳನ್ನುಂಟುಮಾಡುತ್ತವೆ.

೩ ಕನ್ನಡ ಪತ್ರದ ಟಿಪ್ಪಣಿ– ಲೇಖಕ ಮತ್ತು ಪ್ರಕಾಶಕ: ಶ್ರೀ ಡಿ. ವಿ. ಹೊಳ್ಳ ವಿದ್ವಾನ್ ಕುಂದಾಪುರ, ಬೆಲೆ: ರೂ-0-14-0

ಎಂಟನೆಯ ತರಗತಿ (E-S L-C)ಯ ವಿದ್ಯಾರ್ಥಿಗಳ ಉಪಯೋಗಾರ್ಥವಾದ ಕನ್ನಡ ಟಿಪ್ಪಣಿಯಿದು. ಕನ್ನಡಾಭ್ಯಾಸಿಗಳಿಗೆ ಈ ಪುಸ್ತಕ ಅತ್ಯಂತ ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲ.

೪ ಪ್ರಥಮ ಚಿಕಿತ್ಸೆಯ ಸಚಿತ್ರಕೈಪಿಡಿ–ಲೇಖಕರು: ಡಾ! ಎಸ್. ಎ. ರಾಮತ್, ಎಸ್. ಬಿ., ಸಿ. ಎಸ್., ಜನರಲ್ ಪ್ರಾಕ್ಟೀಷನರ್ ಮತ್ತು ಸರ್ಜನ್, ಪ್ರಕಾಶಕರು: ಶ್ರೀ ಕೆ. ವಿಟ್ಠಲ ಶೆಣೈ, ಬಿ. ಎಲ್. ಟಿ. ಜೋಡ್ ಹೈಸ್ಕೂಲು ಉಡುಪಿ. ಬೆಲೆ ರೂ ೧ 0—0

ಅಕಸ್ಮಿಕವಾಗಿ ಒದಗುವ ಅನಘಡಗಳಿಂದ ತಾತ್ಕಾಲಿಕ ಚಿಕಿತ್ಸೋಪಚಾರ ನಡೆಯುವ ಎಷ್ಟೋ ಹಾನಿಗಳಾವ ನಿರ್ಜನಗಳಿವೆ. ಜಖಂಗೊಂಡವರ ಸಾಗಾಟ, ಕೀಲು ತಪ್ಪುವುದು, ಕಡಿತಗಳುಂಟಾಗುವುದು, ಸುಡುತಗಳು ಇವೆಲ್ಲಾ ಆಸ್ಪತ್ರೆಗೆ ಬರುವ ಅಪಘಾತಗಳು. ಇಂತಹ ಸಮಯೋಚಿತವಾದ ಸ್ವೀಯ ಸುಲಭೋಪಾಯವು ನಮಗೆ ತಿಳಿದಿದ್ದರೆ ಮುಂದೆ ಮಹಾ ಆಪತ್ತಿಗೆ ತುತ್ತಾಗಬಹುದನ್ನು ತಪ್ಪಿಸಬಹುದು. ಹೆಚ್ಚು ಖರ್ಚಿಲ್ಲದೆ ಗುಣಪಡಿಸಬಹುದು. ಈ ಕೈಪಿಡಿಯು ಕೈಗನ್ನಡಿಯಂತೆ ಅತ್ಯಂತ ಉಪಯುಕ್ತವಾಗಿದೆ. ನರಪಲ್ಲಿಗಾವರಿಗೆ ಎಷ್ಟು ಉಪಯುಕ್ತವೋ– ಅದಕ್ಕಿಂತ ಇಮ್ಮಡಿಯಾಗಿ ಹಳ್ಳಿಯ ಜನರಿಗೆ ಮಹದುಪಕಾರಿಯಾಗಿರುತ್ತದೆ. ಮರದಿಂದ ಬಿದ್ದು ಕೈಕಾಲು ಮುರಿದುಕೊಂಡವರಿಗೂ, ಇನ್ನಿತರ ಅವಘಡಗಳಿಗೆ ತುತ್ತಾದವರಿಗೂ ಸರಿಯಾದ ಪೂರ್ವ ಚಿಕಿತ್ಸೆಯಿಲ್ಲದೆ ದೂರದ ಚಿಕಿತ್ಸಾಲಯಕ್ಕೆ ಒಯ್ಯುವುದರೊಳಗಾಗಿ ಗಾಯಗೊಂಡ ನ್ಯಕ್ತಿ ಕೀರಿಕೊಳ್ಳಬಹುದು. ಸುಲಭಸಾಧ್ಯವಾದ ಚಿಕಿತ್ಸೆಯನ್ನಂಯಿದೆ ತುಂಬ ಖರ್ಚಿಗೆ ಬಡಹಳ್ಳಿಗರು ತುತ್ತಾಗುವರು. ಚಿಕಿತ್ಸೆಯು ನಿರೂಪಣೆ ಮಾತ್ರವಲ್ಲದೆ; ಬ್ಯಾಂಡೇಜಿನ ಚಿತ್ರವನ್ನೂ, ಜೋಲಿಯ ಕವಾತಚಿತ್ರವನ್ನೂ ಲಕ್ಷಣವಾಗಿ, ಸುಲಭರೀತಿಯಿಂದ ಸ್ಪಷ್ಟೀಕರಿಸಿದ್ದು, ಯಾವುದೇ ವಿಷಯದಲ್ಲಿ ತಪ್ಪು ನಡೆಯದ ಹಾಗೆ ಚಿತ್ರಿಸಿರುವುದು ಶ್ಲಾಘನೀಯವಾದ ಅಂಶ. ಹೈಸ್ಕೂಲ್‌ಗಳಲ್ಲಿ ಪ್ರಥಮಚಿಕಿತ್ಸೆಯ ಅಲ್ಪಜ್ಞಾನವನ್ನು ಕೊಡುವುದಾದರೂ ಇಂತಹ ಪುಸ್ತಕವೊಂದನ್ನು ವಿದ್ಯಾರ್ಥಿಗಳು ತಮ್ಮಸಾನಿಧ್ಯದಲ್ಲಿಟ್ಟುಕೊಂಡು ವಿಶೇಷ ಆಸ್ಥೆಯಿಟ್ಟು ಅಭ್ಯಸಿಸಿದರೆ ತನಗೂ ನೆರೆಕರೆಯವರ ಸಹಾಯಕ್ಕೂ ತುಂಬಾ ಉಪಕೂಲವಾಗಬಹುದು. ಜನತೆಯ ಕಲ್ಯಾಣವನ್ನುದ್ದೇಶಿಸುವ ಇಂತಹ ಕೃತಿಗಳು ಇನ್ನೂ ಬರಲೆಂದು ಹಾರೈಸುತ್ತೇವೆ.

೫ ಜನಪ್ರಿಯ (ಮಾಸ ಪತ್ರಿಕೆ) ಸಂಪಾದಕರು: ಶ್ರೀ ಕೆ. ವಿ. ಶೆಣೈ, ಜನಪ್ರಿಯ ಕಾರ್ಯಾಲಯ, ಬಸವನಗುಡಿ ಬೆಂಗಳೂರು —4

ಜನಪ್ರಿಯ ಮೊದಲ ಸಂಚಿಕೆಯಲ್ಲಿ ಜನಪ್ರಿಯವಾಗುವ ಶುಭಚಿಹ್ನೆಗಳು ಕಾಣುತ್ತಿವೆ. ಎಂ. ವಿ. ಶೀ, ಕೈವಾರ ರಾಜಾರಾವ್, ಮುಂತಾದವರ ಬರಹಗಳಿವೆ.

೬ ಸಹಾಧ್ಯಾಯಿ (ಮಾಸ ಪತ್ರಿಕೆ) ಸಂಪಾದಕರು: ಎಂ. ಬಿ ಮೊಗ್ಗನ್ನ, ಪೊನ್ನಂಪೇಟೆ, ಕೂರ್ಗ್ ವಾ, ಚಂದಾ ರೂ. 3-0-0 ಬಿಡಿ ಸಂಚಿಕೆ 0-4-0

ಸಹಾಧ್ಯಾಯಿ ಉತ್ತಮ ಅಭಿರುಚಿಯನ್ನುಂಟು ಮಾಡುವ ಉದ್ದೇಶದಿಂದ ಹೊರಟ ಪತ್ರಿಕೆ. ಹೊಸತಾಗಿ ಪೊರಟ ಪತ್ರಿಕೆಗಳಲ್ಲಿ ಇರಬಹುದಾದ ನಿನೇಮಾ ದಾರೆಯರ ಸುದ್ದಿ, ಪ್ರಶ್ನೋತ್ತರ–ಮುಂತಾದ ಸಿಕ್ಕಸ್ತಬ್ಧ–ಹಗಳೆಂಬ ತುಂಬಿದ ವಿಚಾರಪೂರಿತ ಬರಹಗಳಿಂದ ಸ್ಪತಿಯೊಂದು ಸಂಚಿಕೆಯೂ ಅಮೂಲ್ಯವೂ, ಸಂಗ್ರಾಹ್ಯವೂ ಆಗಿರುತ್ತದೆ. ಸತ್ಯಾರ್ಥಿಯು ಇದೇ ಧ್ಯೇಯದಿಂದ ಮುಂದೆಸಾಗಲೆಂದು ಹಾರೈಸುತ್ತೇನೆ.

—ಎಸ್ಸೆಲ್

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ– ಉದರಶೂಲೆ, ಕಟಿಶೂಲೆ, ವೈಫಲ್ಯಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)
ಪೋ ಕುಂಜಾಲು, ದ. ಕ.
ಇವರ **'ಧನ್ವಂತರೀ ಮಾತ್ರೆ'**ಗಳು ಮಾತ್ರ

ಕೇವಲ ನಾಲ್ಕಾಣೆಯ ಅಂಚೆಚೀಟಿಗಳನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಸ್ಯಾಂಪಲ್‌ನ್ನು ಪಡೆದು ಅದರ ತೀಕ್ಷ್ಣ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.

ಏಲಂ ನೋಟೀಸು

ಉಡುಪಿ ಶ್ರೀ ಕಾಣಿಯೂರು ಮಠದ ಬಾಬ್ತು ಕಟ್ಟಿಗೆ ಉಪಯೋಗದ ಈಡುಗಳು ಬಹಿರಂಗವಾಗಿ ಏಲಂ ಮಾಡೋಣಾಗುತ್ತದೆ.

ಕಾಡು ಇರುವ ಗ್ರಾಮ	ಸರ್ವೆ ನಂಬ್ರ ವಾ ವಿಸ್ತೀರ್ಣ.	ಮರಗಳ ವಿವರ.	ಸ್ಥಳ ವಾ ತಾರೀಕು
1) ಉಡುಪಿ ತಾಲೂಕು ಬೆಳ್ಳೆ ಗ್ರಾಮದ ಗುಡದೊಟ್ಟಿನಲ್ಲಿ.	195/1ರಲ್ಲು ಸುಮಾರು 10 ಎಕ್ರೆ ವಿಸ್ತೀರ್ಣ.	ಕಾಡುಜಾತಿ ಶಾಂತಿಯ ದೊಡ್ಡ ಮರಗಳು ಮತ್ತು ಕರಿಮರ ವಗ್ಗೆರೆ ಕಟ್ಟಿಗೆ ಉಪಯೋಗದ ಮರಗಳು ಮಾತ್ರ.	ಬೆಳ್ಳೆ ಗ್ರಾಮದ ಸದ್ರಿ ಸ್ಥಳದಲ್ಲಿ ತಾ. 31—1—51 ಕ್ಕೆ ಅಪರಾಹ್ನ ಘಂಟೆ 2-30ಕ್ಕೆ
2) ಉಡುಪಿ ತಾಲೂಕು ಮಣಿಪುರ ಗ್ರಾಮದ ಕನರಾಡಿಯಲ್ಲಿ.	161ರಲ್ಲು ಸುಮಾರು 4 ಎಕ್ರೆ ವಿಸ್ತೀರ್ಣ	— ಡಿ. —	ಮಣಿಪುರಗ್ರಾಮದ ಸದ್ರಿ ಸ್ಥಳದಲ್ಲಿ ತಾ. 2-2-51ಕ್ಕೆ ಅಪರಾಹ್ನ ಘಂಟೆ 2-30ಕ್ಕೆ.

1) ಏಲಂ ಶರ್ತಗಳನ್ನು ಏಲಂ ನಡಿಯುವ ಆಯಾಯ ಸ್ಥಳದಲ್ಲಿ ಏಲಂ ನಡಿಸುವ ಮುಂಡೆ ಹೇಳೋಣಾಗುತ್ತದೆ. ಅದರಂತೆ ಏಲಂದಾರರು ನಡಿಯತಕ್ಕದ್ದು.

2) ಕಾರಣಾಂತರದಿಂದ ಸದ್ರಿ ಏಲಮನ್ನು ರದ್ದುಪಡಿಸುವರೇ ಸದ್ರಿ ಏಜಂಟರಿಗೆ ಸಂಪೂರ್ಣ ಅಧಿಕಾರವಿರುತ್ತದೆ.

ಮೊಕ್ಕಾಂ: ಉಡುಪಿ,
ತಾ. 11-1-1951

ಬಿ. ಅನಂತಕೃಷ್ಣ ಚಾರ್ಯ,
ಕಾಣೂರು ಮಠದ ಜನರಲ್ ಏಜಂಟ್

ಜನಮತ

ಜನತೆಯ ಜವಾಬ್ದಾರಿಕೆ

ಬಿ. ಬಿ. ಶೆಟ್ಟಿ, ಮಂಗಳೂರು

ಜನತೆಯು ಕೂಡಿಗಾಗಿ ಇಂದು ಮಮ್ಮಾಸು ಸರಕಾರವು ಹಳ್ಳಿ ಪ್ರಾಂತ್ಯಗಳಲ್ಲಿಯ ರೇಶನಿಂಗ್ ನಿಬಂಧನೆಯನ್ನು ತೆಗೆದು ಹಾಕಿರುತ್ತದೆ. ಸರಕಾರವು ಆಹಾರ ನಿಬಂಧನೆಗಳನ್ನು ತನ್ನ ಖಾಸಗಿ ಲಾಭಕ್ಕಾಗಿ ಮಾಡಿಲ್ಲ. ಜನತೆಯ ಹಿತದೃಷ್ಟಿಯಿಂದ ಮಾಡಿತ್ತು ಎಂಬುದನ್ನು ತಿಳಿಯದ ಮುಂತ್ತು ತಿಳಿದು ತಿಳಿಯದಂತೆ ವರ್ತಿಸುವ ಜನರ ತೀವ್ರ ಟೀಕೆಗೆ ಒಳಪಟ್ಟು, ಸರಕಾರವು ಇದರಿಂದ ಒಮ್ಮೆಂತ ತಪ್ಪಬೇಕೆಂಬ ಉದ್ದೇಶದಿಂದಲೇ ಈ ಧೈರ್ಯದ ಪೆಜ್ಜೆಯನ್ನಿಟ್ಟಿದೆಎಂದು ಊಹಿಸಬೇಕಾಗುತ್ತದೆ. ಈಗ ಭೂಮಾಲಿಕರೂ, ಸಾಹುಕಾರರೂ, ಜನತೆಯ ಕಡೆಗೆ ಯಾವರೀತಿಯಲ್ಲಿ ವರ್ತಿಸುವರು ಎಂಬುದನ್ನು ನಾವು ನೋಡತಕ್ಕದ್ದಿರುತ್ತದೆ. ಅಕ್ಕಿಯ ಕ್ರಯವು ಖಿತಿಖಿತಿಗೆ ಏರಿ ಜನಸಾಮಾನ್ಯರಿಗೆ ಪಡಕೊಳ್ಳಲು ಸಾಧ್ಯವಿಲ್ಲದ ಕಷ್ಟ ಪರಿಸ್ಥಿತಿಗೆ ನಾಂತಿದೆ. ಭೂಮಾಲಿಕರೂ ವ್ಯಾಪಾರಿಗಳೂ ಅಕ್ಕಿಯ ಸಂಗ್ರಹಕಟ್ಟಿಯಿಟ್ಟಿರುವ ತ್ತಾರೆ ಸರಕಾರವು ಏತಕ್ಕೆ ಸುಮ್ಮನಿದೆ? ಕಂಟ್ರೋಲುಗಳನ್ನು ಏತಕ್ಕೆ ವಿರಿಸುವುದಿಲ್ಲ ಎಂಬ ಜನರ ಕೂಗಿಗೂ ಟೀಕೆಗೂ ಪ್ರಸಂಗ ಒದಗುವುದೋ ಎಂಬ ಪರಿಸ್ಥಿತಿಗೆ ಬಂದೀತೇ? ಇಂದಿನವರೆಗೆ ಕಂಟ್ರೋಲನ್ನು ಹೊರಿಸಿದ ಭಾವವು ಟೀಕೆಗೆ ಒಳಪಟ್ಟ ಸರಕಾರಕ್ಕಿದ್ದರೆ ಇಂದು ಪುನಃ ಜನರ ಅವಸ್ಥೆ, ಖಾಸಗಿ ಲಾಭ ಪೀಡಿತರಾದ ವ್ಯಕ್ತಿಗಳ ವರ್ತನೆಯಿಂದ ಕಂಟ್ರೋಲನ್ನು ಹೇರಲೇ ಬೇಕಾಗುವುದೋ ಎಂಬ ಪ್ರಸಂಗಕ್ಕೆ, ತಂದೊಡ್ಡುವ ಜವಾಬ್ದಾರಿಕೆಯು ಜನತೆಯಲ್ಲಿದೆಯೇ ಇದೆ. ಜನತೆಯು ಸ್ವೇಚ್ಛೆ ಹೃದಯದಿಂದ ಕೋಂಗ್ರೆಸ್ ಸರಕಾರವನ್ನು ಇಂದಿನ ವರೆಗೆ ಕಂಟ್ರೋಲುಗಳನ್ನು ಆಹಾರವಸ್ತುವಿನ ಮೇಲೆ ಹೇರಿದುದಕ್ಕೆ ಟೀಕಿಸದಿದ್ದರೆ, ಆದನ್ನು ಇಂದು ಅವರ ವರ್ತನೆಯಿಂದ ಸಮಾಜದಲ್ಲಿ ಕಂಟ್ರೋಲು ಧರಿಸಿದ ಯಾವಾತನೂ ಮಾರಾಟ ಮಾಡುತ್ತಿದ್ದಿಲ್ಲ, ಯಾವಾತನೂ ಖಾಸಗಿ ಲಾಭ ಪೀಡಿತರಾಗಿ ದಾಸ್ತಾನು ಮಾಡಿಕೊಂಡು ಜನರಗೋಳಿಗೂ ಸರಕಾರದ ಜಾಗ್ರತೆಗೂ ತುತ್ತಾಗಿಲ್ಲ, ಎಂಬುದನ್ನು ತನ್ಮೂರ್ವರ್ತನೆಯಿಂದ ಇಂದು ಪ್ರದರ್ಶಿಸಬೇಕು.

ಇಂತಹ ಪರಿಸ್ಥಿತಿಯು ಜನತೆಯಲ್ಲಿ ಬರಬೇಕಾದರೆ ಸಮಾಜವು ಆಹಾರ ವಸ್ತುಗಳನ್ನು ಖಾಸಗಿ ಲಾಭ ಪೀಡಿತರಾಗಿ ಜನತೆಗೆ ನ್ಯಾಯವಾದ ಬೆಲೆಗೆ ಮತ್ತು ಬೇಕಾದ ಸಮಯಕ್ಕೆ ಸಿಗದಂತೆ ಮಾಡುವುದು ಸಮಾಜದ್ರೋಹವೆಂಬ ಅಭಿಪ್ರಾಯವನ್ನು ಹುಟ್ಟಿಸಿ ಅದಕ್ಕೆ ಅಂತಹ ವ್ಯಕ್ತಿಯು ಮೇಲೆ ಬಹಿಷ್ಕಾರ ಸೂಚಿಸುವ ಧೈರ್ಯ ಜನತೆಗೆ ಬೇಕಾ. ಜನತೆಯು ಗೋಳಿಗೊಳಪಟ್ಟು ಈ ರೀತಿಯ ಧನಸಂಗ್ರಹಕ್ಕೆ, ಸಮಾಜದ ಬಹಿಷ್ಕಾರವಿದ್ದರೆನೇ ಜನರು ಅರೀತಿಯ ವರ್ತನೆಗೆ ಹಿಂಜರಿಯಲು ಸಾಧ್ಯ. ಅಲ್ಲದೆ ಯಾವರೀತಿಯಲ್ಲೇ ಆಗಲಿ ತಾನು ಐಶ್ವರ್ಯವನ್ನು ಗಳಿಸಿದ ಕೂಡಲೇ ಸಮಾಜದ ಸ್ಥಾನಮಾನಗಳನ್ನು ಪಡಕೊಂಡೇನು, ಎಂಬ ಮನೋವರ್ತನೆಗೆ ಸಮಾಜವು ಎಡೆಕೊಟ್ಟರೆ ಜನತೆಯು ಅಲ್ಲದೆ ಅಂತಹ ವರ್ತನೆಯನ್ನು ಸಮಾಜವೇ. ಪ್ರೋತ್ಸಾಹಿಸಿದಂತಾಗುತ್ತದೆ. ಈ ರೀತಿಯ ವರ್ತನೆಯನ್ನು ಮನ್ನಿಸಿದುದು ಕಷ್ಟ- ಈ ರೀತಿ ಅಧರ್ಮ ಮಾರ್ಗದಲ್ಲಿ ವರ್ತಿಸಿ ಐಶ್ವರ್ಯವನ್ನು ಗಳಿಸಿ, ಸಮಾಜದಲ್ಲಿ ಸ್ಥಾನ ಮಾನಗಳನ್ನು ಕ್ರಯಕ್ಕೆ ಪಡಕೊಂಡಂತೆ ಪಡಕೊಂಡು, ಇಂದಿನ ಲೋಕವೇ ಆ ರೀತಿ, ಹಾಗೆ ಮಾಡಿದರೇನೇ ಬದುಕಬಹುದು, ಮೆರೆಯಬಹುದು, ಸ್ಥಾನ ಮಾನ ಪಡೆಯಬಹುದು. ನಡತೆಯಿಂದೆ ಏನು? ರೀತಿಯಿಂದ ಏನು? ಏನಿತಮಗಾರ್ಗಕ್ಕೆ ಎಡೆ ಎಲ್ಲಿ? ಇಂದಿನ ಸಮಾಜದಲ್ಲಿ ಇವಕ್ಕೆಲ್ಲಾ ಎಡೆಯಿದೆಯೇ? ಇದು ಬುದ್ಧಿಹೀನ್ಯರ ಮಾತು, ಅನುಭವಶಾಲಿಗಳ ಮಾತಲ್ಲ ಎಂಬ ಅಭಿಪ್ರಾಯಕ್ಕೆ–ಎಡೆಕೊಟ್ಟು ಸಮಾಜದ ಪರಿಸ್ಥಿತಿಯನ್ನು ಹಾಳುಮಾಡುವ ಜವಾಬ್ದಾರಿಕೆಯನ್ನು ಈ ರೀತಿಯ ಅಭಿಪ್ರಾಯಗಳನ್ನು ಬಹು ಸುಲಭವಾಗಿ ಬಹಿರಂಗವಾಗಿ ಆಡುವುದರಿಂದ, ನಮ್ಮ ಅನೇಕರು ಹೊತ್ತಿಲ್ಲವೇ? ಆಹಾರ ಪದಾರ್ಥ ಸಿಕ್ಕದಿದ್ದವರಿಗೆ, ಯಿದ್ದವರಿಂದ ನ್ಯಾಯವಾದ ಬೆಲೆಗೆ ಪಡಕೊಳ್ಳುವ ಪರಿಸ್ಥಿತಿಯನ್ನು ಜನತೆಯ ಯುಕ್ತ ಭೋದನೆಯಿಂದ, ಯುಕ್ತ ಸಮಾಜದಲ್ಲಿಯ ಬಹಿಷ್ಕಾರ ಸೂಚನೆಗಳಿಂದ ತಂದೊಡ್ಡಿ, ಜನತೆಯಲ್ಲಿ ಆಹಾರ ಬೆಳೆವಣಿಗೆಯ ಕಾತೂಹಲವನ್ನು ಅಧಿಕಗೊಳಿಸಿ ನಿರುದ್ಯೋಗಿಗಳನ್ನು, ವೈಫಲ್ಯಕ್ಕನ್ನು ಕೆಲಸಕ್ಕಳಿಸಿ ಆಹಾರ ಅಧಿವೃದ್ಧಿಗೊಳಿಸುವಂತೆ ಮಾಡಿ ಇನ್ನು ಮುಂದಕ್ಕೆ ಕಂಟ್ರೋಲುಗಳ ಪೀಡನೆಗೆ ಒಳಪಡದಂತಿರ ಜವಾಬ್ದಾರಿಯನ್ನು ಇಂದು ಜನತೆಯು ವಹಿಸಿಕೊಳ್ಳತಕ್ಕದ್ದಿರುತ್ತದೆ.

ಪ್ರಿಯ ವಾಚಕಳೆ,

ಹಿಂದೂ ಕೋಡಿನ ವಿಚಾರವಾಯ್ತು. ಈ ಬಿಡುವೆ ನನ್ನ ಮಿತ್ರರೊಬ್ಬರು ಗತಿಸಿದ ಪಾರವರ ಋಂತು ನಿಮ್ಮ ಬುದ್ಧಿಗೇನು ತೋಚುತ್ತಿ? ಎಂದು ಬರೆದಿದ್ದಾರೆ. ಅವರ ವಿಚಾರ ನನ್ನೇ ಎತ್ತಿಕೊಂಡಿದ್ದೇನೆ ಈ ಬಾರಿ. ಅವ ವಿಷಯದಲ್ಲಿ ಕೆಲವು ಸ್ವಾರಸ್ಯ ವಿಚಾರ ನನ್ನು ಹೇಳುತ್ತೇನೆ. ಭೂಲೋಕದಲ್ಲಿ ಶತ್ಯಂತ ಮೇಧಾವಿ, ಸ್ಪಷ್ಟವಾತ ಬರಹಗಾರ ಎಂದು ಪ್ರಸಿದ್ಧಿ ಪಡೆದಿದ್ದ ಜೋರ್ಜ ಬರ್ನಾಡ್ ಷಾ ಇವರೂ ಈ ವರ್ಷ ಅವರ 94ನೇ ವಯಸ್ಸಿನಲ್ಲಿ ತೀರಿಕೊಂಡರು. "ಷಾ" ರವರ ವಿಷಯ ಅರಿಯದವರು ಅತಿ ವಿರಳ. ಅವರ ನಡೆನುಡಿ, ಬುದ್ಧಿ ಚಾತುರ್ಯ, ನರ್ಭಿಕ್ಷ್ಣತೆ ಮೂಡು ಹೆಚ್ಚಿನವರಿಗೆ ತಿಳಿದಿದೆ. ಭೂಲೋಕದಲ್ಲಿ ಒಂದು ವಿಶೇಷ ವಿಚಾರ ನಡೆದರೆ ಆ ವಿಚಾರದಲ್ಲಿ "ಷಾ" ರವರ ಅಭಿಮತವೇನು? ಎಂದು ಕೇಳಿ ಪ್ರಕಟಿಸುವುದು ಪತ್ರಿಕಾ ಪ್ರತಿನಿಧಿಗಳ ಒಂದು ಪದ್ಧತಿಯಾಗಿತ್ತು. ಅವರ ಉತ್ತರ ಬಹಳ ಚುಟುಕಾಗಿತ್ತು. ವಿನೋದ ಪೂರ್ವಕವಾದ ದ್ದು, ನಿರ್ಭೀತಿಯದಾಗಿತ್ತು. ಅದನ್ನು ತಿಳಿದುಕೊಳ್ಳಲು ಎಲ್ಲರಿಗೂ ಆತುರವಿತ್ತು.

ಫ್ರಾನ್ಸ್ ದೇಶದ ಒಬ್ಬಳು ಅವಿವಾಹಿತ ತರುಣಿ ತನ್ನ ಅಜ್ಜನಿಗೆ ಸಂಯಾಗಿದ್ದ ಗಡ್ಡ ಬೆಳೆಯಿಸಿದ್ದ "ಷಾ"ರವರಿಗೆ ವಿನೋದಕ್ಕಾಗಿ ಹೀಗೊಂದು ಪತ್ರ ಬರೆದಳು. "ನಾನು ಒಬ್ಬ ಸುಂದರಿಯಾದ ಅವಿವಾಹಿತ ತರುಣಿ. ನಿಮ್ಮ ಬುದ್ಧಿ ಚಾತುರ್ಯಕ್ಕಾಗಿ ನಿಮ್ಮನ್ನು ಮೆಚ್ಚಿದ್ದೇನೆ. ನಿಮ್ಮನ್ನೇ ವಿವಾಹ ಮಾಡಿಕೊಳ್ಳ ಬೇಕೆಂಬ ಆಶೆ ಇದೆ. ನನ್ನ ಮತ್ತು ನಿಮ್ಮ ವಿವಾಹದ ಪರಿಣಾಮವಾಗಿ ಹುಟ್ಟುವ ಶಿಶುವಿಗೆ ನನ್ನ ಸೌಂದರ್ಯ, ನಿಮ್ಮ ಬುದ್ಧಿ ಚಾತುರ್ಯ ದೊರೆತರೆ ಅದೆಷ್ಟು ಉತ್ತಮ ಶಿಶುವಾಗ ಬಹುದೆಂದು ನನಗೆ ಯೋಚನೆ ಇದೆ; ಎಂದು ಬರೆದಿದ್ದರು. ಅದಕ್ಕೆ "ಷಾ" ರವರು ಬರೆದ ಉತ್ತರ ಬಹಳ ಸ್ವಾರಸ್ಯವಿದೆ. "ಪ್ರಿಯ ತರುಣಿ, ನೀನು ಯೋಚಿಸಿದಂತೆ ಆ ಮಗುವು ಇರುವುದಾದರೆ ಅದು ನನಗೆ ಬಹಳ ಸಂತೋಷವೇ ಸರಿ. ಆದರೆ ಆ ಮಗುವಿಗೆ ನನ್ನ ಸೌಂದರ್ಯ, ನಿನ್ನ ಬುದ್ಧಿ ಚಾತುರ್ಯ ದೊರೆತರೆ ಅದರಿಗತ ವಿಪರೀತವಾಗಬಹುದೆಂದು ನೀನು ಯೋಚಿಸಿರುವೆಯಾ?" ಎಂದು ಬರೆದು ಬಿಟ್ಟರು. ಅಂಗ್ಲ ಭಾಷೆಯನ್ನು ಬಲ್ಲವರೇಕರಿಗೆ "ಷಾ"ರವರಿಗೆ ಪತ್ರ ಬರೆದು ಉತ್ತರ ತರಿಸಿಕೊಳ್ಳುವುದು ಹುಚ್ಚಾಗಿತ್ತು. ಅವರ ಉತ್ತರದ ಸ್ವಾರಸ್ಯಕ್ಕಾಗಿ ಮಾತ್ರವಲ್ಲ, ಅವರ ಬರಹದ ಪತ್ರ ತಮ್ಮಲ್ಲಿದೆ ಎಂಬ ಹೆಮ್ಮೆಗಾಗಿ ಅನೇಕರು ಅವರಿಗೆ ಬರೆಯುತ್ತಿದ್ದರು. ಕೊನೆಗೆ ಅವರು ಕನ್ನ ಕೈ ಬರಹದ ಉತ್ತರವನ್ನು ಬರೆಯುವುದನ್ನೇ ಬಿಟ್ಟು ಬಿಟ್ಟರು. ಉತ್ತರವನ್ನು 'ಟೈಪ್' ಮಾಡಿ, ತನ್ನ ಸಹಿಕೂಡ ಹಾಕದೆ ಕಳುಹಿಸುವ ಕ್ರಮವನ್ನು ಅನುಸರಿಸಬೇಕಾಯಿತು. ಪತ್ರಿಕಾ ಪ್ರತಿನಿಧಿಗಳ ಮತ್ತು ಇತರರ ಕಾಟವನ್ನು ತಪ್ಪಿಸಲಿಕ್ಕಾಗಿ ಅವರು ತನ್ನ ಮೂರದ ಹಳ್ಳಿಗೆ ಹೋಗಿ ಕಾಲ ಕಳೆಯುತ್ತಿದ್ದರು. ಕೆಲವು ದಿನಗಳಲ್ಲಿ ಅಹಿರ್ಯಲ್ಲಿ ರೈಲ್ವೆ ಸ್ಟೇಷನ್, ಅಂಚೆ, ತಂತಿ ಆಫೀಸು ಇವೆಲ್ಲಾ ಆಗಿಹೋದುವು ಅವರನ್ನು ಸಂದರ್ಶಿಸುವವರ ಸಂಖ್ಯೆ ಕಡಿಮೆಯಾಗಲಿಲ್ಲ.

ಅಮೆರಿಕದ ಬರಹಗಾರಕೊಬ್ಬಳಾದ ಮಿಸ್ 'ಮೆಯೋ' ಎಂಬವಳು ಭಾರತದ ಜನರ ನಡೆನುಡಿ, ಸಂಸ್ಕೃತಿ—ಇವನ್ನೆಲ್ಲಾ ಅವಜ್ಞೆಯಿಂದ ಮಾಡಿ 'Mother India' ಎಂಬ ದೊಂದು ಪುಸ್ತಕವನ್ನು ಪ್ರಕಟಿಸಿದಳು. ಇದನ್ನು ಸಹಿಸಲಾರದೆ ಭಾರತೀಯರನೇಕರು ಇದಕ್ಕೆ ಪ್ರತಿಯಾಗಿ ಅಮೆರಿಕದ ಜನರನ್ನು ದೂಷಿಸಿ 'Father India' ಎಂಬುದೊಂದು ಪುಸ್ತಕವನ್ನು ಪ್ರಕಟಿಸಿದರು. ಒಬ್ಬ ಪತ್ರಿಕಾ ಪ್ರತಿನಿಧಿಯು ಮಿಸ್ ಮೆಯೋಳ 'Mother India' ಪುಸ್ತಕದ ವಿಷಯ ನಿಮ್ಮ ಅಭಿಪ್ರಾಯವೇನು? ಎಂದು ಕೇಳಿದ್ದಕ್ಕೆ "ಮಿಸ್ ಮೆಯೋಳ ಈ ಕೆಲಸಕ್ಕೆ ಭಾರತೀಯರು ಏಕೆ ಅಷ್ಟೊಂದು ಸಿಟ್ಟಾಗ ಬೇಕು? ಅವಳು ವಿಲಾಯಿತಿಗೆ ಒಂದು ಇಲ್ಲಿಯ ಜನರ ದುರ್ಗುಣಗಳನ್ನು ಹತ್ತು ಸಾಲು ಬರೆದ್ದದು ನಿಜ. ನಮ್ಮನ್ನು ಹಿಂದುಳಿಸಿದರೂ ನಾನು ಸಿಟ್ಟುಗೊಳ್ಳಲಾರೆ" ಎಂದು "ಷಾ" ರವರು ಉತ್ತರ ಕೊಟ್ಟರು. ನಮ್ಮ ದೇಶದ ಮೇಲೆ ಮತ್ತು ನಮ್ಮ ಗಾಂಧೀಜಿ ಮತ್ತು ಜವಹರಲಾಲರ ಮೇಲೆ "ಷಾ"ರವರಿಗೆ ಬಹಳ ಪೂಜ್ಯ ಬುದ್ಧಿ ಇತ್ತು. ಗಾಂಧೀಜಿಯವರ ಚಮ್ಮೋತ್ಸವ ಸಮಾರಂಭಕ್ಕೆ ನಿಮ್ಮದೊಂದು ಸಂದೇಶ ಕಳುಹಿಸಬೇಕೆಂದು ಭಾರತೀಯರು ನೊಬ್ಬರು ಷಾ'ರವರನ್ನು ಕೇಳಿಕೊಂಡುದ್ದಕ್ಕೆ ಅವರು "ಬೇಡ, ಬೇಡ, ಗಾಂಧೀಜಿಯವರ ಜನ್ಮೋತ್ಸವವನ್ನು ಆಗಾಗ್ಗೆ ಆಚರಿಸುತ್ತಾ ತನಗೆ ಸಾಕ್ಷಾತ್ಸುಂದುತ್ತಿದೆ ಎಂದು ಅವರಿಗೆ ನೆನಪು ಹುಟ್ಟಿಸಬೇಡಿರಿ. ತಾನು ಇನ್ನೂ ಕರುಣಾನಾಗಿದ್ದೇನೆಂದೂ ಎಣಿಸಿಕೊಂಡು ಅವರು ಜನಸೇವೆ ಮಾಡಲಿ, ಪಾಪ, ಮುದುಕ, ಇನ್ನೂ ಅನೇಕ ವರ್ಷ ಬದುಕಲಿ" ಎಂಬುದೇ ಅವರ ಉತ್ತರ ಅವರಿಗೂ ಗಾಂಧೀಜಿಯವರಂತೆ ನೂರು ವರ್ಷ ಬದುಕ ಬೇಕೆಂದು ಆಶೆ ಇತ್ತು. ಅವರ ಜನ್ಮೋತ್ಸವವನ್ನು ಭೂಲೋಕದಲ್ಲೆಲ್ಲಾ ಆಚರಿಸಿ ಕೊಂಡಿದ್ದರು ಅದರೆ ಅವರು ಅದರಲ್ಲಿ ಭಾಗವಹಿಸುತ್ತಿರಲಿಲ್ಲ. ಎಷ್ಟೋ ವರ್ಷಗಳ ಹಿಂದೆ ಮದ್ಯ, ಮಾಂಸ ಇವನ್ನೆಲ್ಲಾ ಬಿಟ್ಟು ಬಿಟ್ಟು ಒಬ್ಬ ಯೋಗಿಯಂತೆ ಅವರು ಜೀವಿಸಿಕೊಂಡಿದ್ದರು. ಗಾಂಧೀಜಿಯವರನ್ನು ಒಬ್ಬನು ಕೊಂದನೆಂದು ಅವರಿಗೆ ತಿಳಿದಾಗ ಅವರು ಬಹಳ ಶೋಕ್ಕಾತ್ತಾಪ ಪಟ್ಟರು. "ಒಬ್ಬನು ವಿಶೇಷ ಶಬ್ದಗಳಿಂದಾಗಿ ಬಾಳಿದರೆ ದೊರೆಯುವ ಫಲವಿದು" ಎಂದರಂತೆ. 'ಷಾ'ರವರಿಗೆ ಜವಹರಲಾಲರ ಮೇಲೂ ಬಹಳ ಗೌರವನಿತ್ತು ಜವಹರಲಾಲರ ಧುರೀಣತ್ವದ ವಿಷಯದಲ್ಲಿ ನಿಮ್ಮ ಅಭಿಪ್ರಾಯ ನೇನು? ಎಂದು ಒಬ್ಬ ಪತ್ರಿಕಾ ಪ್ರತಿನಿಧಿಕೇಳಿದ್ದಕ್ಕೆ "ಅದೇಕೆ? ಜವಹರಲಾಲರಿಗೆ ನನ್ನ ಶಿಫಾರಸು ಪತ್ರ ಬೇಕಿದೆಯೇ? ಎಂದು ಉತ್ತರ ಕೊಟ್ಟರು ಜವಹರಲಾಲರಿಗೂ 'ಷಾ'ರವರ ಮೇಲೆ ವಿಶೇಷ ಗೌರವವಿತ್ತು. ಕಳೆದ ಸಲ ಅವರು ವಿಲಾಯಿತಿಗೆ ಹೋದಾಗ 'ಷಾ'ರವರು ಪತ್ರಿಸಿಕೊಂಡಿದ್ದ ಹಳ್ಳಿಗೆ ಹೋಗಿ ಅವರನ್ನು ಸಂದರ್ಶಿಸಿ ಅವರು ಕೊಂಡು ಹೋಗಿದ್ದ ಕೆಲವು ಪೂರ್ವಿಸ ಹಣ್ಣುಗಳನ್ನು ಅವರಿಗೆ ಸಮರ್ಪಿಸಿದರು. ಮಹಾ ಪುರುಷರೊಳಗಿನ ಪಾಸ್ಪರ ಸಂಬಂಧ, ಪ್ರೀತಿ, ವಿಶ್ವಾಸ ಹೀಗಿರಬೇಕು.

'ಷಾ'ರವರು ಭೂಲೋಕದಲ್ಲೆಲ್ಲಾ ಮಹಾ ಬರಹಗಾರ, ನಾಟಕಗಾರ, ಮೇಧಾವಿ ವಿನೋದಿ, ನರ್ಭಿಕ್ಷ್ಣಾವಂತ, ಸಪ್ಪಗಣ ಎಂದು ಪ್ರಸಿದ್ಧಿಹೊಂದಿ ದೀರ್ಘಾಯುಷ್ಯನ್ನು ತುಂಬಿ ವಿನೋದು ಕಾಪತ್ರಯವಿಲ್ಲದೆ ಅವರ ಸ್ವರ್ಗಪದವಿ ತೀರಿಕೊಂಡರು ಎನ್ನಲು ನನಗೆ ಅತ್ಯಂತ ಸಂತೋಷವಾಗುತ್ತಿದೆ. ನಮ್ಮ ಪತ್ರಿಕಾ ಸಂಪಾದಕರು ಹೇಳುವಂತೆ ಅವರು ಸ್ವರ್ಗಸ್ಥರಾದರೆಂದು ತಿಳಿಸಲು ನಾವು ವಿಷಾದ ಪಡುತ್ತೇವೆ; ಎಂದು ನಾನು ಹೇಳಲಿಕ್ಕಿಲ್ಲ. ಅಂತವರು ಸ್ವರ್ಗಸ್ಥರಾಗಲೇ ಬೇಕು. ಇದರಲ್ಲಿ ಸಂಪಾದಕರಾಗಲಿ, ಇತರರಾಗಲಿ ವಿಷಾದಿಸ ಬಾರದು. ಸದ್ಬೃತ್ತಿ, ಸಹೃದಯ, ಜನೋಪಕಾರ ಇವುಗಳಪರಿಣಾಮ ಸ್ವರ್ಗವಾದರೆ 'ಷಾ'ರವರಿಗೆ ಸ್ವರ್ಗಸಿಗಲೇ ಬೇಕು. ಅಲ್ಲದೆ ಅವರ ಆತ್ಮಕ್ಕೆ ಶಾಂತಿದೊರೆಯಲಿ ಎಂದು ನಾನು ಪ್ರಾರ್ಥಿಸಲಾರೆ ಅವರ ಜೀವನವು ಶಾಂತಿಮಯವಾಗಿತ್ತು. ದ್ವೇಷ ಅಸೂಯೆ ಇವನ್ನು ಅವರು ಅರಿಯರು. ಪ್ರತ್ಯುತ್ಪತ್ತಿ, ಗೌರವ—ಇವನ್ನೆಲ್ಲಾ ಕೊರೆದು ಬಿಟ್ಟು ತನ್ನ ಕಡೆ ದಿನಗಳಲ್ಲಿ ತನಗೆ ಶಾಂತಿದೊರೆಯಲಿ ಎಂದು ಅವರು ಹಳ್ಳಿಗೆ ಸೇರಿದ್ದರು. ಆಂತವರಿಗೆ ಮರಣದ ನಂತರ ಶಾಂತಿ ದೊರೆಯುದೇ? ಅಥವಾ ಅವರ ಆತ್ಮವು ಶಾಂತಿಯನ್ನು ಹೊಂದಿಕೊಂಡು ಪರಲೋಕದಲ್ಲಿ ಸುಮ್ಮನಿರುವುದೇ? "ಮನರಪಿ ಜನನಂ ಪುನರಪಿ ಮರಣಂ; ಪುನರಪಿ ಜನನೀ ಜರರೇ ಶಯನಂ" ಎನ್ನುತ್ತಾರಲ್ಲಾ? ಹಾಗೆ ಅವರು ಸತ್ಕರ್ಮಗಳ ಫಲವಾಗಿ ಅವರು ಇಪ್ಪರವರಿಗೆ ಯಾವ ಕಡೆಯಲ್ಲಿ ಇನ್ನೊಬ್ಬ ಮಹಾ ಪುರುಷನಾಗಿ ಅವತಾರವೆತ್ತಿರುವರೋ ಯಾರಿಗೆ ಗೊತ್ತು. ನಮನ್ಯಾರ.

ಪ್ರೀತಿಯರಲಿ.

ವಾರದ ಹರಟೆ

ಎಯು. ವಿ.

ಸೋ ಮಿಲ್

ಉತ್ಕೃಷ್ಟ ತರದ ಇಂಗ್ಲಿಷ "ಸೋ ಬೆಂಚ್" 24 ಇಂಚು ಹಾಗೂ 30 ಇಂಚು ಗೋಲ ಗರಗಸ ಉಳ್ಳವು. ಅತಿ ಯೋಗ್ಯ ಬೆಲೆ. ಮಾಹಿತಿ ಬಗ್ಗೆ ಇಂದೇ ಬರೆಯಿರಿ.

The Vijay Engineering Co. Ltd.

Mazagaon, **Bombay 10**

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar, *Vaidya*

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ನೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬೆಳುಪ್ಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲು ಗಂಟುಗಳಲ್ಲಿ ವೇದನೆ, ಕಣ್ಣುನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಮಾತ್ರೆ ಯಾಗಿ ಗುಣಿಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ವಜಂಟ್ಸು—

ಶಾ ಕಂಸೆನಿ, ಮಂಗಳೂರು.

— ಮಕ್ಕಳನ್ನು ಹಡೆಯುವುದು ಸಾಕು —

ಆಪರೇಷನ್ ಇಲ್ಲದೆ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿರ್ಯಾಗು, ಪ್ರಪರದೋಷ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳ ಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿವೀಜಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—0—0. ಪೋಷ್ಟ ಚಾರ್ಜು ೧೫ ಆಣೆ.

ಕೂಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಕಾರ್ಯಾಸ್—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಶಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಸ್ವರ ಮೂರ್ತಿ ಡಾವಣಗೆರೆ ಡಾವಣಗೆರೆ:—ಡಾವಣಗೆರೆ ಪ್ರೆಸ್ಸ್ ೮೯ ಎಂ ಕನಸಲಾಸ್, ಕೆಮಿಸ್ಟ್, ಹಾವೇರಿ ಬ್ಯಾಡಗಿ

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೆಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು: ಡಾಕ್ಟರ್ ಕೊರಡ್ಕಲ್ ನಂಕಪಿಠಾಯರು, ಎಲ್ ಎಮ್ ಎಸ್, ಉಡುಪಿ.

ಸುಮಾರು 200 ಖಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದು ಗಳು!

ಮಕ್ಕಳ ಮತ್ತು ಹೆಂಗಸರ ಖಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣೆ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಖಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ಯೋಗಗಳ ಕಾರಣ, ಲಕ್ಷಣ, ಸುಸ್ತಾನೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ ಹೆಂಗಸರ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ನೊದಲಾದ ಕತೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ.

ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ಡ್ಯಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಬರೆಯಿರಿ.

ಮೇಷ— ಆರೋಗ್ಯವು ಚೆನ್ನಾಗಿರುವುದು. ಯಾವ ಕಾರ್ಯವೇ ಇರಲಿ, ನಿಮ್ಮ ಭಾಗ್ಯದ ಕೃಪೆಯಿಂದ ಸಫಲವಾಗುವುದು. ಜನರ ಗೌರವಾದರಗಳನ್ನು ಪಡೆದ ನಿಮಗೆ ಗೃಹಸುಖ ದೇಹಾರೋಗ್ಯ, ಮನಶ್ಶಾಂತಿಗಳು ಲಭಿಸುವವು. ಸಂಪತ್ತಾಗವು ದಿನೇ ದಿನೇ ವೃದ್ಧಿಗೊಳ್ಳಲಿದೆ. ಆದರೆ ಮಿತಭೋಜಿಗಳಿಗೂ ಕೂಡ ಈ ವಾರದಲ್ಲಿ ವಾಕ್ಕಲಹವು ತಪ್ಪಲೊಲ್ಲದು. ತಾ. 20, 21, 22 ಈ ದಿನಗಳಲ್ಲಿ ಧನಲಾಭ ವಿಜಯ್ಯ, ಗೃಹಸುಖ ಲಭಿಸುವುದು

ವೃಷಭ— ತ ನೊಂದು ಬಗೆದರೆ ದೈವವೊಂದೆಡೆಸಿತೆಂಬಂತೆ ಪ್ರತಿಯೊಂದು ಕಾರ್ಯದಲ್ಲೂ ಫಲವು ವಿಪರೀತವಾಗುವುದು. ಕೈಕೆಳಗಿನ ಸೇವಕರು ಪತ್ನಿ, ಪುತ್ರಾದಿಗಳೂ ಕೂಡ ಮಾತನ್ನತಿಕ್ರಮಿಸಿ ವರ್ತಿಸಲಿರುವರು ಮಾತ್ರವಲ್ಲ ಗುರು ಹಿರಿಯರಲ್ಲೂ ಅಪ್ರಬಂಧುಗಳಲ್ಲೂ ಮನಸ್ತಾಪವುಂಟಾದೀತು. ಕಾಯಕಷ್ಟ ಜೀವಿಗಳಿಗೆ ದಿನಯಾಪನೆಯು ದುಸ್ತರವಾಗಲಿದೆ. ತಾ 20, 21, 22 ಈ ದಿನಗಳನ್ನು ಳಿದು ಮಿಕ್ಕ ದಿನಗಳು ಅಷ್ಟೊಂದು ಕಷ್ಟದಾಯಿಗಳಾಗಲಾರವು.

ಮಿಥುನ— ಇಂದಿನ ರಾಶಿಸ್ಥಿತಿಯಲ್ಲಿ ನಿಮ್ಮ ಭಾಗ್ಯಕಾರಕನಾದ ಬೃಹಸ್ಪತಿಯು ಅನುಗ್ರಹವು ಚೆನ್ನಾಗಿರುವುದಾದರೂ । ಮಿಕ್ಕ ಪ್ರತಿಕೂಲ ಗ್ರಹರ ಪ್ರಾಬಲ್ಯದಿಂದಾಗಿ ಅನುದಿನದ ಖರ್ಚಿನ ಸಲುವಾಗಿ ಹೆರವರೊಡನೆ ಸಾಲಮಾಡುವ ಪ್ರಸಂಗ ಬರಬಹುದು ಚಪಲ ಚಿತ್ತರಾದ ನಿಮಗೆ ಆಪ್ತೇಷ್ಟರ ಮತ್ತು ಬಂಧುವರ್ಗದವರ ವಿಯೋಗವುಂಟಾಗಲಿದೆ. ಆ ಧರೂ ತಾ. 20, 21, 22ರಲ್ಲಿ ಭೋಗಲಾಭ, ವಿಜಯಗಳು ಶೃಷ್ಟಿಕರವಿರುವವು.

ಕರ್ಕಟಿ— ಅಶ್ವಮೇದಲ್ಲಿನ ಗುರು ಅಂಗಾರಕರು ನಿಮ್ಮನ್ನು ಹಲವಾರು ತರದ ಪೀಡೆಗಳಿಗೆ ಸಿಲುಕಿಸಲಿರುವರು ಪ್ರಯತ್ನಕ್ಕೆ ತಕ್ಕ ಫಲ ಲಭಿಸದು ವಿನಾಕಾರಣ ಕಲಹ, ರಾಜಕೀಯದಲ್ಲಿ ಪರಾಭವ, ಸ್ತ್ರೀಯಿಂದ ಅನಿಷ್ಟಗಳೂ ಪ್ರಾಪ್ತವಾಗಲಿವೆ ಸಾಂಸಾರಿಕ ತಾಪತ್ರಯಗಳು ಬಹುಮಟ್ಟಿಗೆ ಕಡಿಮೆಯಾಗುವವು ಆರೋಗ್ಯದ ಸಲುವಾಗಿ ಹೆಚ್ಚಿನ ಜಾಗ್ರತೆಯಿರಲಿ. ತಾ 18, 19, 23, 24 ಇಷ್ಟು ಶುದ್ಧಿಯ ದಿನಗಳು-

ಸಿಂಹ— ಜನತೆಯು ಬೆಂಬಲವನ್ನು ಪಡೆದ ನೀವು ಸಮಾಜದಲ್ಲಿ ಒಳ್ಳೆ ಹೆಸರುಗಳಿಸುವಿರಿ ಬರ್ಚಿಗಾಗಿ ಹೆರವರನ್ನಾಶ್ರೈಸಬೇಕಾಗಲಾರದು ಆದರೆ ಗೃಹಕೃತ್ಯ ವಿಚಾರದಲ್ಲಿ ನಿಮಗೆ ತುಂಬಾ ವಿರಕ್ತಿಹುಟ್ಟಬಹುದು ರಂದೆ ಮೊದಲಾದವುಗಳಲ್ಲಿ ನಿರೀಕ್ಷಿಸಿದ ಫಲವನ್ನು ಪಡೆಯುವಿರಿ ನಿಮ್ಮ ಕಾರ್ಯ ಚಟುವಟಿಕೆ ವಿರೋಧಿಗಳೂ ಕೂಡ ತಲೆದೂಗುವರು ಪಾರಾಂತ್ಯದ 5ದಿನಗಳು ಸರ್ವಾತ್ಮನಾ ಉತ್ತಮಗಳಾಗಿವೆ

ತುಲಾ— ಅನಿರೀಕ್ಷಿತವಾದ ಶೋಕ ಪಾಪಗಳು ಪ್ರಾಪ್ತವಾಗುವವಾದರೂ ಗುರ್ವಾತ್ಮದ ಪ್ರಶಸ್ತವಿದೆ ಪರರಹಂಗಿಲ್ಲದೆ ಸಕಲ ಕಾರ್ಯಗಳನ್ನೂ ನೀವೇ ನಿರ್ವಹಿಸಲು ಶಕ್ತರಿರುವಿರಿ. ನಿಮ್ಮ ನಿರೀಕ್ಷೆಯು ಸಫಲವಾಗುವುದು ನಿಮ್ಮ ಏಳ್ಗೆಯನ್ನು ನೋಡಿ ಅಸೂಯೆಯಿಂದಲೋ ಎಂಬಂತೆ ಒಂದು ವರ್ಗದವರು ಅಗ್ರಹಕ್ಕೆ ಗುರಿಯಾದೀರಿ. ಕೆಲವೊಮ್ಮೆ ಕೃತ್ರಿಮ ಮಿತ್ರರ ಮಾಯಜಾಲಕ್ಕೆ ಸಿಲುಕಿ ಪಶ್ಚಾತ್ತಾಪಕ್ಕೆ ಗುರಿಯಾಗುವ ಸಂಭವವಿದೆ. ವಾರಾಂತ್ಯದ 5ದಿನಗಳನ್ನು ಜಾಗರೂಕತೆಯಿಂದ ಕಳೆಯಿರಿ-

ತಾರೀಕು 18-1-51 ರಿಂದ	ವಾರದ ಭವಿಷ್ಯ	ತಾರೀಕು 24-1-51 ರವರೆಗೆ

ಧನು— ನಿಮ್ಮ ಆರ್ಥಿಕ ಭಾಗವು ಮುಂಚಿಗಿಂತ ಅದೆಷ್ಟೋ ಸುಧಾರಿಸುವದಾದರೂ ಹಣದ ಬಿಕ್ಕಟ್ಟು ಇನ್ನೂ ಕಂಡೂ ಕಾಣದು ಮಾತುಮಾತಿಗೆ ಕಲಹವಾದೀತು. ಈ ಹಿಂದೆ ನೀವು ಪುರಸ್ಕಾರಹೊಂದಿದಲ್ಲಿ ಇಂದು ತಿರಸ್ಕಾರಹೊಂದುವ ಪ್ರಸಂಗಬರಬಹುದು. ಆದರೆ ಬಂದದ್ದೆಲ್ಲಾ ಬರಲಿ ಗೋವಿಂದನ ದಯವೊಂದಿರಲಿ, ಎಂದು ಧೈರ್ಯದಿಂದ ಮುಂದೆ ಸಾಗಿರಿ. ವಾರಾಂತ್ಯ 5ದಿನಗಳು ನಿಮಗೆ ಅನುಕೂಲವಾಗಿವೆ.

ಮಕರ— ಆಕಸ್ಮಿಕವಾಗಿ ಪ್ರವಾಸದ ಸಂದರ್ಭವುಂಟಾಗುವದು ಉದರಕೂಲಿ ಪಿತ್ತಪ್ರಕೋಪದಿಂದ ಕಷ್ಟಕ್ಕೆಗುರಿಯಾಗುವಿರಿ. ಧರ್ಮಕರ್ಮಗಳಲ್ಲಿ ಅನಾದರ ಆಶ್ರದ್ಧೆಗಳುಂಟಾದಾವು. ಕೆಲವೊಮ್ಮೆ ಶತ್ರುಗಳಿಂದ ಸರಾಚಿತರಾಗುವಿರಿ. ಶ್ರಮಜೀವಿಗಳಿಗೂ ನೌಕರಿ ಜನರಿಗೂ ನಿರೀಕ್ಷಿಸಿದ ಫಲವು ಲಭಿಸದು. ಸರಕಾರಿ ಅಧಿಕಾರಿಗಳಿಂದ ತಂಟೆತಕರಾರುಗಳುಬ್ಬಸಲಿವೆ ವಾರಾಂತ್ಯ 2ದಿನಗಳಲ್ಲಿ ಮಾರ್ಗಾಯಾಸ, ಕಾರ್ಯಹಾನಿಗಳು ಕಾಣಿಸುವವು.

ಕುಂಭ— ಜನ್ಮದಲ್ಲಿ ಕುಜ ಗುರುಗಳು ಅಷ್ಟಮದಲ್ಲಿ ರವಿ ಷಷ್ಠದಶಮದಲ್ಲಿ ರವಿ, ಇವರೆಲ್ಲರೂ ವಿಕಕಾಲದಲ್ಲಿ ಅನಿಷ್ಟಸ್ಥಾನಗಳನ್ನು ಸೇರಿರುವರು. ಅದಕಾರಣ ನಿಷ್ಠೆ, ಪರ್ಯಟನ, ರೋಗ, ಭಯ, ಶತ್ರುಪೀಡೆ, ಇತ್ಯಾದಿ ನಾನಾ ತರದ ಪೀಡೆಗಳು ಅನವರತವೂ ನಿಮಗೆ ಕಟ್ಟಿದ್ದಲ್ಲವು ಆಪ್ತೇಷ್ಟರೂ ಬಂಧುವರ್ಗದವರೂ ಕೂಡ ನೂರವಾಗಲಿರುವರು. ವಾರಾಂತ್ಯ 5ದಿನಗಳು ಪ್ರತಿಕೂಲವಾಗಿವೆ.

ಮೀನ— ನಿಮ್ಮ ದುಡಿಮೆಯ ಬಹ್ವಂಶವು ವ್ಯರ್ಥ ಖರ್ಚಿಗಾಗಿ ಹೋಗುವದು. ಆ ನಿಮಿತ್ತಕಾರ್ಯಗಳಾದ ಪ್ರವಾಸಗಳೂದಗಿ ಹೆಚ್ಚಿನ ಕಷ್ಟನಷ್ಟಗಳಿಗೆ ನಿಮ್ಮನ್ನು ಗುರಿಮಾಡುವದು ತನುಮನಗಳಿಗೆ ಸದಾ ಸುಖಶಾಂತಿಗಳು ಲಭಿಸಲಾರವು ಗುರುಹಿರಿಯರಲ್ಲೂ ಸೋದರರೊಡನೆಯೂ ಕಲಹವಾದೀತು. ಆದರೆ ಸನ್ಮಾನದಲ್ಲಿ ಸ್ಥಾನಮಾನಗಳು ಲಭಿಸಲಿವೆ. ಹಣದ ಮುಗ್ಗಟ್ಟುಂಟಾಗಲಾರದು. ತಾ 18, 19 ಈ ದಿನಗಳಲ್ಲಿ ಬಹ್ವಂಶ ಜಯ ಕೆಗಳು ನೆರವೇರುವವು.

"ಅಯ್ಯೋ ನೀನು ಚಿತಕ್ಕಾಗಿ
ಬಿಳಿಕ್ ಬಾಂಡ್ ಚಹವನ್ನೇ
ಕುಡಿಯಬೇಕಲ್ಲವೆ, ಎಂಬುದನ್ನು ನನಗೆ ತಿಳಿಸಿ"



"ನಾನು ಅದನ್ನು ಚಿತಕ್ಕಾಗಿ ಕೊಂಡು ಕೊಳ್ಳುವೆನೆಂದರೆ ಅದು ನನ್ನ ಪಣತ್ತೆ ಉತ್ತನು ಪ್ರತಿಫಲನನ್ನು ಕೊಡುವುದೆ. ಒಂದು 2 ಔನ್ಸ್ ಪೊಟ್ಟಣದಲ್ಲಿ 30 ಕಪ್ಪುಗಳಾಗುವಷ್ಟು ಚಹವನ್ನು ನೂಡಬಹುದು ಇಷಲ್ಲದೆ ಬ್ರೂಕ್ ಬಾಂಡ್ ಚಹದ ಪುಸ್ಥತೆ ಮತ್ತು ಗುಣದ ಬಗ್ಗೆ ನನಗೆ ಯಾವಾಗಲೂ ನಂಬಿಕೆ ಇದೆ."

ಬಿಳಿಕ್ ಬಾಂಡ್ ಚಹ

BB/SC/LOT/105

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ



ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ

ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ ರೂ. 1-8-0.

ವಿ. ಪಿ. ದ್ವಾರ ರೂ. 1-14-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ,

ನವಭಾರತ ಪುಸ್ತಕ ಭಂಡಾರ,
ಉಡುಪಿ

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿ ಅರಿಯಾಚಿಲ್ಲರೆಯಾಗಿಯೂದೊರೆಯತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No M 3618
LICENCE No. 31
Licensed to Post without Prepayment

Estd 1921 ಸ್ಥಾಪನೆ
31ನೇ ವರ್ಷ

25-1-1951

Founder. Sri A. B Shetty,
Minister for Agriculture & Veterinary.



ಗಣರಾಜ್ಯ ಗುಣರಾಜ್ಯವಾಗಲಿ

ಗಣರಾಜ್ಯಕ್ಕೆ ಜೈ ಹಿಂದ. ಸಹಸ್ರ ವಂದನೆ- ಆಂತರಾತ್ಮಕವಾಗಿ ನಮ್ಮ ಕೈಗೆ ಬಂದ ರಾಜಕೀಯ ಸ್ವಾತಂತ್ರ್ಯವನ್ನು ಭದ್ರಗೊಳಿಸುವ ಗಣರಾಜ್ಯದ ಘಟನೆಗೂ, ತನ್ಮೂಲಕವಾಗಿ ಸ್ಥಾಪಿತನಾದ, ಆಗಲಿರುವ ಗಣರಾಜ್ಯಕ್ಕೂ ನಮ್ಮ ಸಹಸ್ರ ಆಜನ್ಮ ವಂದನೆ!

ಕಳೆದ ವರ್ಷ ಜನವರಿ ಇಪ್ಪತ್ತಾರರಂದು ಭಾರತವು ಗಣರಾಜ್ಯವಾಗಿ ಪರಿಣಮಿಸಿತು. ಒಂದು ವರ್ಷದವರೆಗೆ ಗಣರಾಜ್ಯದ ಸಾರಥಿತ್ವವು ಪ್ರಧಾನಿ ನೆಹರೂ ಕೈಯಲ್ಲಿತ್ತು. ಇಷ್ಟು ಅಲ್ಪ ಸಮಯದಲ್ಲಿ ಹಾಲು ಹರಿವ ಜೇನು ಸುರಿವ ನಾಡನ್ನು ಕಟ್ಟಲು ಮನುಷ್ಯರು ಶಕ್ತರಾಗುವರೆಂದು ನಂಬುವುದು ಮೂರ್ಖತನವಾದೀತು. ಆದರೆ ಇಲ್ಲಿ ಇನ್ನೊಂದು ಮಹತ್ವದ ಪ್ರಶ್ನೆಯೂ ನಮಗೆ ಅಡ್ಡವಾಗುತ್ತದೆ. ದೇಶವನ್ನು ಕಟ್ಟುವ ಹೊಣೆಯನ್ನು ನಾವು ನಮ್ಮ ಶಾಸನ ಸಭೆಯ ಪ್ರತಿನಿಧಿಗಳಿಗೋ, ಜನತಾ ನಾಯಕರಿಗೋ ಒಪ್ಪಿಸಿದ ಕೂಡಲೇ ನಮ್ಮ ಕರ್ತವ್ಯ ಮುಗಿಯಿತೆಂದು ತಿಳಿದು ಬಾರದ ಸುಖಕ್ಕಾಗಿ ಕಾತರಿಸುವುದು ಸಮಂಜಸವಾದುದೆ? ಸರಕಾರವು ಮಾಡ ಬೇಕಾದ ಕೆಲಸ ಬೇಕಾದಷ್ಟಿದೆ ಎಂಬುದನ್ನು ನಾವು ಬಲ್ಲೆವು. ಒಳಹಸಕ್ಷ ಅದು ಇನ್ನೂ ಪ್ರಯತ್ನಾವಸ್ಥೆಯಲ್ಲೇ ಇದ್ದು, ಕಣ್ಣಿಗೆ ತೋರುವ ಫಲಿತಾಂಶವು ಆತ್ಯಲ್ಪವಾಗಿರಬಹುದು ಎಂಬುದನ್ನೂ ಬಲ್ಲೆವು. ಜಾಗತಿಕ ರಂಗದಲ್ಲಿಯೇ ಅಲ್ಲೋಲ ಕಲ್ಲೋಲಗಳ ಆಧಿಕ್ಯ ಇರುವಲ್ಲಿಗೆ ನಮ್ಮ ಗಣರಾಜ್ಯವು ಅಸ್ತಿತ್ವಕ್ಕೆ ಬಂದುದರಿಂದ ನಮ್ಮ ಪ್ರಗತಿಗೆ ಎಂತೆಂತಹ ಕುಂದುಗಳಿರುವುವೆಂಬುದೂ ನಮಗರಿಯದಿಲ್ಲ ಸಂಕಾರದ ಕಷ್ಟಸುಖಗಳ ಹೊಣೆಯು ಜನತೆಗೆ ಈಗಾಗಲೇ ಆಗಿದೆ ಎಂದಿಟ್ಟುಕೊಳ್ಳೋಣ ಅದಕ್ಕಿಂತಲೂ ಹೆಚ್ಚಾಗಿ ತನಗೆ ತೀರ ನಿಷ್ಠವಾಗಿರುವ ತನ್ನ ಕಷ್ಟಸುಖಗಳಿಂದಾಗಿ ಒಮ್ಮೊಮ್ಮೆ ಸರಕಾರದ ತೊಂದರೆ ಗಮನಕ್ಕೆ ಬರದೆ ಹೋದೀತೇ ವಿನಾ, ನಮ್ಮ ನಾಯಕರ ವೃಥಾ ಆವಹೇಳನೆಯಿಂದ ಪ್ರಯೋಜನವಿಲ್ಲ ಎಂಬುದನ್ನು ತಿಳಿಯಪ್ಪು ಜನತೆಗೆ ಜನತೆಗಿದೆ ಎಂಬುದನ್ನು ಮಂತ್ರಿಗಳೂ ನಂಬಲಿ.

ಜನತೆ ಬಯಸಿದುದು ಜನತೆಗೆ ಸಿಗಲಿಲ್ಲ. ಇದರಲ್ಲಿ ಅರ್ಧವಾಸಿ ಜವಾಬುದಾರಿಯನ್ನು ಸರಕಾರದ ತಲೆಯ ಮೇಲೆ ಹೇರಿದರೂ, ಉಳಿದರ್ಧಕ್ಕೆ ಜನತೆಯೇ ಹೊಣೆ ಎಂಬುದನ್ನು ಪರಿಶೀಲಿಸೋಣ.

'ಸರಕಾರ' ಎಂಬ ಪದವು ಬರಿಯ ಕಲ್ಪನಾ ಮಾತ್ರ; ಅದರಲ್ಲಿ ತುಂಬಿರುವ ಜನಗಳೇ ಅದಕ್ಕೆ ಜೀವ ಪ್ರಶ್ನೆಯನ್ನೀಯುವವರು ಇಂದು ಸರಕಾರಿ ನೌಕರರಲ್ಲಿ ಲಂಚಕೋರತನ ಪೆಚ್ಚಾಗಿದ್ದರೆ, ಅಧಿಕಾರವಂತರಾದ ಕೆಲವು ಜನಗಳ – ಜನತೆಯ ಒಂದಂಗವು ನೀತಿಬಾಹಿರರಾಗಿ ವರ್ತಿಸುತ್ತಿದ್ದಾರೆ ಎಂದರ್ಥ. ಅಕ್ಕಿ ಬೆಲ್ಲಗಳಿಗೆ ನ್ಯಾಯವಾದ ಲಾಭಕ್ಕೆ ಮನಸೋಲುವ ಗುಣದ ಜಘನವೇ ಕಾರಣ. ಕಬ್ಬಿನ ತೋಟಕ್ಕೆ ನಾಲ್ಕರಷ್ಟು ರೊಕ್ಕವನ್ನು ಸಟ್ಟಾ ಹ್ಯವೃತ್ತ ವ್ಯಾಪಾರಿಗಳಿಂದ ಪಡೆದು ಅದನ್ನು ಗಿರಾಕಿಗಳಿಂದ ಕೀಳುವ ರೈತನು ಕೂಡ ನಮ್ಮನೇನೇ ಅವನದೂ ತೋಷಣೆ –ಗಿರಾಕಿಗಳ ತೋಷಣೆ–ಯೇ ಅಲ್ಲವೆ? ತಂದೆ ತಾಯಿಂಗಳು ಬುದ್ಧಿವಂತರಾಗಿರಿ ಎಂದು ಮಕ್ಕಳನ್ನು ಶಾಲೆಗಳಿಗೆ ಕಳಿಸಿದರೂ ಪ್ರಜ್ಞೆ ಯಿಲ್ಲದೆ, ಅಲಸ್ಯವನ್ನು ತೋರಿಸುತ್ತಿರುವ ನಮ್ಮ 'ಮುಂದಿನ ಜನಾಂಗ'ದ ದಾರಿದ್ರೋತನವಾದರೂ ರಾಷ್ಟ್ರದ ಸಾರ್ವತ್ರಿಕ ನೈತಿಕ ಪತನದ ಅನೇಕ ಲಕ್ಷಣಗಳಲ್ಲಿ ಒಂದಾಗಿದೆ. ಹೆಚ್ಚೇಕೆ, ನಾವು ಸಿಟಿ ಬಸ್ಸಿನೊಳಗೆ ನಮ್ಮ ಬೆಳಿಡುತ್ತಲೇ, ನಮ್ಮ ಶಾಲೆಯು ಮಾಡಿಗೆ ತಗಲುವಷ್ಟಕ್ಕೂ ಮೊದಲೇ, ಬಸ್ಸನ್ನು ಜಿಬ್ಬಿಬಡುವ ಡ್ರೈವರ ವರ್ಗದ ಧೈರ್ಯಸ್ಥನೆಯು ಕೂಡ ನಮ್ಮ ವ್ಯಕ್ತಿತ್ವಕ್ಕೆ ವಿರುದ್ಧವಾದುದು ಎಂದು ಧಾವಿಸಿ ಎಂಥ ಸಾಮ್ಯವಾದಿಗಳಿಗೂ ಎದೆಹೊಟ್ಟೆ ಹೋಗದೆ ಅವರದನ್ನು ಒಪ್ಪಿಯಾರು.

ಈ ಎಲ್ಲ ಸಂದರ್ಭಗಳಲ್ಲಿಯೂ ನಮಗೆ ಕಾಣುತ್ತಿರುವುದು ಮನುಷ್ಯತ್ವದ ಕೊರತೆ. ವೈಗಬುದ್ಧಿಯನ್ನು ವಿಚಾರ ನಾಗರಿಕತಾದ ಮನುಷ್ಯನ ಸೌಜನ್ಯ, ಸೌಶೀಲ್ಯಗಳನ್ನು ಒರೆಗೆ ಹಚ್ಚುವ ಇಂತಹ ಚಿಕ್ಕಪುಟ್ಟ ವಿದ್ಯಮಾನಗಳಿದಿರು ಜನತೆ ಪಶುಗಳಿಗಿಂತ ಉತ್ಕೃಷ್ಟವಾದ ವ್ಯವಹಾರವನ್ನು ತೋರಿಸುತ್ತಾ ಇಲ್ಲ ಗುಡ್ಡದಲ್ಲಿ ಹುಲ್ಲುಂಟೆಂದೂ, ಅದನ್ನು ಬೇರೆ ದನಗಳು ತಿಂದುವೆಂದೂ ಇಂದೇ ಹೊಟ್ಟೆಯು ಕ್ರಮಾಣಕ್ಕೆ ವಿಚಾರ ಹೆಚ್ಚಿಲು ಕಬಳಿಸುವ ದನಗಳ ಕಥೆಯನ್ನು ನಾವು ಕೇಳಿಲ್ಲ. ಆದರೆ ನಿತ್ಯವ್ಯವಹಾರದ ಸಾಮಗ್ರಿಗಳಿಗಾಗಿ ಜನ ಹಾಹಾಕಾರ ಎತ್ತುತ್ತಿರುವ ನೇಳೆ, ಅವೇ ಸಾಮಗ್ರಿಗಳನ್ನು ಕಳ್ಳಬೇಟೆಗೆ ಸಾಗಿಸುವ 'ವಂಚನೆಯ್ಯರನ್ನು' (?) ನಾವು ದಿನಾಲೂ ಭೇಟಿಯಾಗುತ್ತೇವೆ. ಹುಚ್ಚರನ್ನು ಆಸ್ಪತ್ರೆಯಲ್ಲಿ ಹಾಕುವ ಪದ್ಧತಿ ನಮ್ಮಲ್ಲುಂಟು; ಇಂಥ ಸಾಮಾಜಿಕ ಶತ್ರುಗಳನ್ನು 'ಕೊರೂಟಾಯಿನ'ನಲ್ಲಿರಿಸುವ ಬಳಕೆ ನಮ್ಮಲ್ಲಿನ್ನೂ ಇಲ್ಲ.

ಸಾರ್ವಜನಿಕ ರಂಗದಲ್ಲಿ ಮೆರೆದಾಡುತ್ತಿರುವ ಹತಶಕ್ತಿಗಳೂ, ಸಮಾಜದ ಬಹುರಂಗ ವೈರಿಗಳೂ, ಆಂತರಂಗ ಕೋಟಲೆಗಳೂ ಸರಕಾರದ ಶಾಸನ ಒಂದರಿಂದಲೇ ಮಾಯವಾಗದುದಕ್ಕೆ ಪಾಕಿಸ್ತಾನೋದ್ಭವದ ನಿದರ್ಶನವನ್ನಾರಿಸೋಣ. ಕುಡಿಯಬೇಡವೆಂದರೂ ಕುಡಿಯುವವರು ಯಾರು? ನಮ್ಮ ಜನತೆಯೆ? ಧನಿಯು ಶೋಷಣೆಯನ್ನು ಸಹಿಸಲಾರದು, ತಮ್ಮ ದುಡಿಮೆಯ ಫಲವನ್ನು ಉಣ್ಣುವ ವೀರಯೋಧರೇ ತಮ್ಮ ಉಳಿತಾಯವನ್ನು ಹಕ್ಕಸಟ್ಟು ಮಿಗಿಲು ಬೆಲೆಯ ಸರಂಜಾಮಿಗೆ ಸುರಿಸಲು ಹಿಂದೆಮುಂದೆ ನೋಡದ ವೈಪರೀತ್ಯವಿರುವಲ್ಲಿ ಅವರಿಂದ ಈ ಸರಂಜಾಮ ಸಮಾರಾಧನೆ ಮಾಡಿಸುವ ಕಾರ್ಖಾನೆಯಲ್ಲಿ ಬಂಡವಾಳಗಾರರಿದ್ದಾರೆಯೆ? ಹೊಟ್ಟೆ ಬಟ್ಟೆಕಾದ್ದುರೆಯೆ? ಬಿಲ್ಕಾದಾಲ್ಲಿಯಾಗಿಲ್ಲದ್ದಾರೆಯೆ' ಇಲ್ಲಿ ಆದರೂ ವಿಕೇಂದ್ರೀಕೃತವಾದ ಶೋಷಕ ದೇಶದ ಹೃದಯಗಳಲ್ಲಿಯೂ ನಡೆಯುತ್ತಿದೆ ಎಂಬ ದನ್ನು ಇಲ್ಲಿ ನೋಡಬಹುದು.

'ಜೀವಿ ಜೀವಿಯ ತಿಂದು, ಒರಕ್ಕುವುದೇ ಜೀವಲೀಲೆ ಎಂಬುದನ್ನು ನಾವು ಒಪ್ಪುವೇಕು ಆದರೆ ಈ ಕೀಳುತಂದ ಲೀಲೆಯನ್ನು ನಾವು ಮನುಷ್ಯತ್ವದ ವರ್ಣೋನ್ನತಿಯನ್ನು ಬೆಳಸಿಕೊಳ್ಳಲು ಯತ್ನಿಸಬೇಕು. ಎನ್ನುವಾಗ ಈ ಪ್ರಶ್ನೆ ಇಂದಿನದಲ್ಲ,

THE UNITED KARNATAK
INSURANCE COMPANY LIMITED,
United Karnatak Buildings, DHARWAR.
Established 1929
ಕಳೆದ 20 ವರ್ಷಗಳಿಂದಲೂ ಸದಾ ಜನತಾಸೇವೆ ಮಾಡುತ್ತಿದೆ

ಪರಿವರ್ತನೆ ಪಡೆಯುತ್ತಿರುವ ಏಶಿಯ

ವರ್ತಮಾನವನ್ನು ನೋಡಲು ಭೂತ ಕಾಲದ ಕಣ್ಣುಗಳಿದ್ದರೆ ಅಶ್ಚರ್ಯವೆ. ಅರ್ವಾಚೀನ ಬದಲಾವಣೆಗಳನ್ನೆಳೆಯಲು ಭವ್ಯವಾದ ಭೂತಕಾಲವೇ ಸಂಯಾದ ಮಾನದಂಡವಾಗಿದೆ. ಇತಿಹಾಸವು ಕೂಡ ಭೌತ ಶಾಸ್ತ್ರದ ನಿಯಮಗಳಂತೆ ಸಾಪೇಕ್ಷವಾಗಿ ನಡೆಯುವುದೆಂಬುದಕ್ಕೆ ಆಕಬರನು ಮೊಗಲ ಸಾಮ್ರಾಜ್ಯವನ್ನು ಬಿಟ್ಟುತೆರಳಿದ ೧೬೦೫ನೆಯ ಇಸವಿಯನ್ನೂ ಭಾರತದ ಪ್ರಥಮ ಕ್ರಾಂತಿ ನಡೆದ ೧೮೫೭ನೆಯ ವರ್ಷವನ್ನೂ ಪರಿಶೀಲಿಸತಕ್ಕುದು. ಈ ಎರಡು ಸಂಧಿಕಾಲಗಳ ನಡುವಿನ ೨೫೦ ವರ್ಷಗಳನ್ನು ಅವಲೋಕಿಸೋಣ. ಹಾಗೆಯೇ ಬ್ರಿಟಿಷರು ತಾವು ಭಾರತದಲ್ಲಿ ಭದ್ರವಾಗಿ ಬೇರೂರುವೆವೆಂದು ಭಾವಿಸಿದ ೧೯೦೦ನೆಯ ವರ್ಷವನ್ನು ಅದೇ ಇಪ್ಪತ್ತನೆಯ ಶತಮಾನದ ಅರ್ಧಭಾಗವು ಸಂದ ೧೯೫೦ನೆಯ ಸಾಲನ್ನೂ ಅವಲೋಕಿಸೋಣ. ಬರೇ ಐವತ್ತು ವರ್ಷಗಳಲ್ಲಿ ಅದೊಂದು ಕಾಲಕ್ಕೆ ಇಡಿ ವಿಶ್ವಕ್ಕೆ ಪ್ರಬಲಶಕ್ತಿಯಾಗಿದ್ದ ಬ್ರಿಟನ ಶಕ್ತಿಯನ್ನು ಕಳಕೊಂಡು ಕೇವಲ ವರ್ಚಸ್ಸನ್ನಾ ಮಾತ್ರವೇ ಉಳಿಸಿಕೊಂಡುದು ಕಾಣುವುದಿಲ್ಲವೆ? ಇಂಥ ಘಟನೆ ತೀರ ನಾಟಕೀಯವಾಗಿ ಕಂಡರೂ ಇದಕ್ಕೆಂತ ಮಿಗಿಲಾದ ಸತ್ಯವೆ ಬೇಕಿದ್ದೀತು?

ಏಶಿಯದಲ್ಲಿ

ಭಾರತಕ್ಕಿಂತಲೂ ಉತ್ತಮ ಉದಾಹರಣೆ ಬೇಕಾದರೆ ನಮ್ಮ ನೆರೆನಾಡಾದ ಚೀನಕ್ಕೆ ತೆಂಕೋಣ. ಸಾಮ್ಯಪಾದವು ಎರಡೇ ವರ್ಷಗಳಲ್ಲಿ ಚೀನವನ್ನು ಗಣ್ಯಸಮಾಡಿದ ಅಕಸ್ಮಾತ್ತಾ ಸನ್ನಿವೇಶವು ಭಾರತಕ್ಕೆ ಸ್ವಾತಂತ್ರ್ಯ ದೊರೆತ ಬಗೆಗಿಂತಲೂ ಅಪೂರ್ವವಾದುದು. ರಾಜಕೀಯದಲ್ಲಿ ನಿಧಾನ—ವಾದಕ್ಕೆ ಪ್ರಾಶಸ್ತ್ಯ ಹೋಯಿತು. ಆಶ್ಚರ್ಯಕರವಾದುವೂ ಒಮ್ಮಿಂದೊಮ್ಮೆ ಸಂಭವಿಸುವ ತ್ವರಿತ-ಯುಗ ಆರಂಭವಾಗಿದೆ. ಈಗ್ಗೆ ಇದೇ ವರುಷಗಳ ಹಿಂದೆ ಏಶಿಯದಲ್ಲೆಲ್ಲ ವಿಲಾಯತಿಯ ಪ್ರಬಲರಾಷ್ಟ್ರಗಳ ಆಡಳಿತೆ ನಡೆಯುತ್ತಿತ್ತಷ್ಟೆ? ದ್ವಿತೀಯ ಮಹಾಯುದ್ಧದಿಂದ ಈ ಆಡಳಿತೆಗಳು ತತ್ತರಿಸಿದ್ದು ನಿಜವಾದರೂ ಇಷ್ಟುಕ್ಷಿಪ್ರದಲ್ಲಿ ಅವು ಕಳಚಿಬೀಳುವುವೆಂದೂ ಬಿಳಿಯರು ಸ್ವದೇಶಗಳಿಗೆ ತಳಕೀಳು ವರೆಂದೂ ಯಾರು ತಾನೇ ಎಣಿಸಿದ್ದಂ.? ಭಾರತ, ಪಾಕಿಸ್ತಾನ, ಇಂಡೋನೇಶಿಯ, ಬರ್ಮಾ ಸ್ವತಂತ್ರವಾದುವು. ಇಂಡೋಚೀನದಲ್ಲಿ ಬಾವೋದಾಯಿ ಸರಕಾರವು ಅರ್ಧಸ್ವತಂತ್ರವಾದರೂ ಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡುವವರಿಗೆ ಅಲ್ಲಿ ಕಡಿಮೆಯಿಲ್ಲ. ಈ ಹೋರಾಟವು ಯಶಸ್ವಿಯಾಗುವ ಲಕ್ಷಣಗಳೇ ಅಧಿಕವಾಗಿರುವುದನ್ನು ನಾವು ಕಾಣುತ್ತೇವೆ. ಐದುವರ್ಷಗಳ ಕೆಳಗೆ ಆಗ್ನೇಯ ಏಶಿಯದ ಶತ್ರು ಯಾರೆಂದರೆ ಪಾಶ್ಚಾತ್ಯ ಸಾಮ್ರಾಜ್ಯವಾದ ಎನ್ನುತಿದ್ದೆವು ಈಗ ಆ ಸಾಮ್ರಾಜ್ಯವಾದಕ್ಕೆ ಏಶಿಯದಿಂದಲೇ ಹೊಂಟ ಸುಂಟರಗಾಳಿಯನ್ನು ತಡೆಹಿಡಿಯ ಬೇಕಾದ ಪ್ರಸಂಗ ಬಂದಿರುವುದು

ಅಖಿಲ ಏಶಿಯದ ಚಳುವಳಿಯ ಕೊನೆ

ಏಶಿಯದ ಒಂದು ಮಹಾಸ್ವಪ್ನ ಇಂತು ಕುಸಿದು ಬಿದ್ದಿದೆ. ಏಶಿಯದ ದೇಶಗಳಿಗೆಲ್ಲ ಸಾಮಾನ್ಯವಾದ ಯೂ, ಅವುಗಳನ್ನು ಏಕಸೂತ್ರವಂಗಿ ಪೋಣಿಸುವಂತಹದೂ, ಪ್ರಾಪಂಚಿಕ ಶಾಂತಿಗೆ ಮಾರ್ಗದರ್ಶನ ಮಾಡುವಂತಹದೂ, ಯಾವುದೋ ಒಂದು ತತ್ತ್ವ ಇರಬೇಕೆನ್ನುವುದು ಕರಗಿ ಹೋಯಿತು. ಅಖಿಲ—ಏಶಿಯಾ ಜಳುವಳಿ ಸಳ್ಳು ಹೆಣವಾಯಿತು, ಅಖಿಲ ಏಶಿಯ'ವನ್ನು ಕಂಡುದು ಪಾಶ್ಚಾತ್ಯ ಸಾಮ್ರಾಜ್ಯವಾದವಲ್ಲ—ಏಶಿಯದ ರಂಜ್ಯಗಳಲ್ಲಿ ಒಂದೆರಡರಲ್ಲಿ ನಡೆದ ಅತಿರೇಕ, ಜಪಾನಿ ಸಾಮ್ರಾಜ್ಯವಾದ ಇವುಗಳಲ್ಲಿ ಮೊದಲನೆಯ ಅತಿರೇಕವೆನ್ನಬಹುದು. ದ್ವಿತೀಯ ಮಹಾಯುದ್ಧದಲ್ಲಿ ಅದಕ್ಕೆ ಮೈತ್ಯ ದೊರೆಕೊಂಡಿತು. ಜಪಾನಿಗಿಂತಲೂ ಪ್ರಬಲವಾದ ಎರಡನೆಯ ಸಾಮ್ರಾಜ್ಯವಾದ ಇದೀಗ ಏಶಿಯದಲ್ಲಿ ಅವಿರ್ಭವಿಸಿ ಲೋಕವನ್ನು ನಡುಗಿಸುತ್ತಿದೆ. ನವ್ಯ ತಲೆಮಾರಿನ ಜನಗಳಿಗೆ ಇದಕ್ಕಿಂತ ಹೆಚ್ಚುದು: ಖಾಸ್ಪದ ವಿಷಯ ಬೇರೆ ಇಲ್ಲ. ಯಾರು ನಮ್ಮ ಸೋದರರೆಂದು ನಾವು ಆನ್ಮೀನ್ಯದಲ್ಲಿದ್ದೇವೋ ಯಾರು 'ಅಖಿಲ—ಏಶಿಯದ ಧ್ವಜವನ್ನು ಎತ್ತಿ ಹಿಡಿಯುವರೆಂದು' ನಂಬಿದ್ದೆವೋ, ಅವರೇ ನಮ್ಮನ್ನು ಬಿಟ್ಟು ಬೇರಾಗಿ, ನಮ್ಮ ಒಲವಿನ ತತ್ತ್ವಕ್ಕೂ ಏಶಿಯವನ್ನು ಒಂದುಗೂಡಿಸುವಯತ್ನಕ್ಕೂ ಬಾಧಕರಾಗಿ ನಿಂತಿದ್ದಾರೆ.

ಅದು ಹೊಂದಿಕೆಯಾಗಲಾರದಂಥ ಮೂರು ವಿಶಿಷ್ಟ ಜಣಗಳ ಇರವು ಸ್ಪಷ್ಟವಾಗಿ ಮೂಡಿದೆ. ಏಶಿಯ—ಏಶಿಯ ತತ್ತ್ವವು ಪಣ್ಣುಮುಕ್ಕಿತು.

ಶಕ್ತಿಯ ಸಮತೋಲ

ಏಶಿಯದ ರಾಷ್ಟ್ರೀಯತೆಗೆ ಈ ಭಿನ್ನ ಭಿನ್ನ ಜಣಗಳಲ್ಲಿ ವಿಶೇಷ ಮಹತ್ವವಿಲ್ಲ. ಏಶಿಯದ ರಾಷ್ಟ್ರೀಯತೆಗೆ ಎಂದೊಂದು

ಭವ್ಯ ಭಾರತದ ಭವಿಷ್ಯ-

ಏಶಿಯ ಒಂದು ಖಂಡವಲ್ಲ. ಏತಿಹಾಸಿಕ ದೃಷ್ಟಿಯಿಂದ ಅದರಲ್ಲಿ ಐಕ್ಯಕ್ಕಿಂತಲೂ ವೈಕ್ಯವೇ ಅಧಿಕ. ಭೌಗೋಲಿಕ ದೃಷ್ಟಿಯಿಂದಲೂ ಏಶಿಯವು ಒಂದಲ್ಲ—ಸೈಬೇರಿಯವು ಶತಮಾನಗಳಿಂದಲೂ ರಷಿಯದ ಭಾಗವಾಗಿಯೇ ಬೆಳೆಯಿತು. ಮಧ್ಯಪ್ರಾಚ್ಯವು ಒಂದುಕೆರವ ದರೆ ಪಡುವಣದ ರಾಷ್ಟ್ರಗಳ ಹಿಡಿತಕ್ಕೊಳಗಾದ ಆಗ್ನೇಯ ಏಶಿಯ ಇನ್ನೊಂದು ಕೆರವಾಗಿತ್ತು. ರಾಜಕೀಯ ತತ್ತ್ವವನ್ನು ಮರಿದು ಭೌಗೋಲಿಕ ಸತ್ಯವು ಸರ್ವಗ್ರಾಹಿಯಾಗುವ ಕಾಲವನ್ನು ಹಿಂತವಾಯಿತೆಂದು ನಾವು ಬಗೆದಿದ್ದ ಕಾಲ ಒಂದಿತ್ತು. ಏಶಿಯವನ್ನು ಹೋಳಾಗಿಸಿರುವ ಇಂದಿನ ಬಿಗಡಾಯಿಸಿದ ರಾಜಕೀಯ ದರ್ಶನಗಳನ್ನು, ಅವು ಪರಸ್ಪರ ಹೋರುವುದಕ್ಕೆ ನಿಂತ ಭಂಗಿಯನ್ನೂ ನೋಡಿದರೆ ಆ ಕಾಲ ಮುಗಿಯಿತೆಂದು ತೋರದಿರುವುದು.

ಈಗ ಏಶಿಯ ಒಂದು ರಾಜಕೀಯ ಚಕ್ರಬಂಧ ಸ್ಪರ್ಧೆಯಂತಿಲ್ಲವೆ? ಚೀನ ಕೈವಿಸ್ತಿನಿಲ್ಲ ಯಾದಿ ಹಿಡಿದಿದೆ; ಜಪಾನು ಆಸೆ-ರಿಕದ ಬೆನ್ನು ಹತ್ತಿದೆ; ಭಾರತ ಪಾಕಿಸ್ತಾನಗಳು ಕಾಮನ್‌ವೆಲ್ತ್ ಮೈಗೆ ಜಲವನ್ನು ಅರಸುತ್ತ ಇತರ ಸಂಬಂಧಗಳನ್ನ ಕಲಿರುತ್ತಿವೆ. ಬರ್ಮಾ, ಥಾಯಿಲೆಂಡ್, ಇಂಡೋಚೀನಗಳು ಇನ್ನು ಯಾವ ಪಂಗಡಕ್ಕೆ ಸೇರಿದುವೆಂಬುದು ನಿಶ್ಚಯವಾಗಿಲ್ಲ ಅಂತೂ ಒಂದರೊಡನೊಂದು ಅಪರಿಂಜಿ ಒಡವೆ ಇದೆಯೋ ಇಲ್ಲವೋ ಎನ್ನುವುದೂ ಸಂದೇಹಾಸ್ಪದವಾದ ವಿಷಯ. ಈಗ ವ್ಯಾದುರ್ಭವಿಸಿರುವ ಶಕ್ತಿಗಳ ಉರುಗೆ ರಾಜಕೀಯದ್ದು, ಆಂತರ್ಯ ಆರ್ಥಿಕ ಧೋರಣೆಯದು. ರಾಜಕೀಯ ದರ್ಶನವನ್ನೂ ಆರ್ಥಿಕ ತತ್ತ್ವವನ್ನೂ ಜಾಗತಿಕ ಶಕ್ತಿ ಸಮತೋಲದಲ್ಲಿ—ಎಂದರೆ ಜಗತ್ತಿನ ಇತರ ರಾಷ್ಟ್ರಗಳ ಬಲ, ಒಲವು ಎತ್ತ ಕಡೆಗಿದೆ ಎಂಬ ದನ್ನು ನಿರ್ಣಯಿಸುವ ತಕ್ಕಡಿಯ ಏಳುವ ಹೊಳವುಗಳಲ್ಲಿ—ತೂಗಿ ನೋಡುವುದು ಇಂದು ಮುಖ್ಯವಾಗಿದೆ. ಚೀನವು ಸಾಮ್ಯವಾದಿಗಳ ಶಂಡಕ್ಕೆ ಸೇರಿದ್ದರಿಂದ ತಕ್ಕಡಿಯು ಒಂದು ಬದಿಗೆ ಬಹಳವಾಗಿ ಬಗ್ಗಿ ಹೋದಂತಾಗಿದೆ. ಅಮೇರಿಕದ ಸೇನೆ ತಳಕೀತ್ತು ಓಡಿ ದೊಡನೆ ಆಗುವ ಕೊರಿಯದ ಗತಿಯನ್ನು ಕಲ್ಪನೆ ಮಾಡಿಕೊಂಡರೆ, ಏಶಿಯದ ರಾಷ್ಟ್ರಗಳಿಗೆ ತಮಗೆ ಹಿತವಾದ ಪಕ್ಷಗಳನ್ನು ಆರಿಸಿಕೊಳ್ಳಲು ಅವಕಾಶವೂ, ಸ್ವಾತಂತ್ರ್ಯವೂ ಇಲ್ಲದಿರುವ ಸಂಗತಿ ಸ್ಪಷ್ಟವಾಗುವುದು. ಯುನೈಟೆಡ್ ನೇಂದ್ರಾ ಸೇನೆ ಕೊರಿಯದಲ್ಲಿ ಸೋತರೆ ಕೊರಿಯಕ್ಕೆ ಬೇಡವಾದ ತತ್ತ್ವವು ಅದರ ಗಂಟಲಿಗೆ ಗಾಣವಾಗುವುದು. ಇಂಡೋ ಚೀನದ ಗತಿಯೂ ಇದೇ ಬಗೆಯಾಗಿ ದುರ್ಗತಿ ಸಾವಿಮೃದಲ್ಲೇ ಇದೆ.

ಈ ಸನ್ನಿವೇಶಗಳಿಂದ ನಾವು ಕಲಿಯ ತಕ್ಕ ಪಾಠ ಇಷ್ಟೇ. ನೂತನ ಏಶಿಯದ ನಿರ್ಮಾಣಕಾರ್ಯದಲ್ಲಿ ವಿಚಾರಕ್ಕಿಂತಲೂ ದರ್ಪಕ್ಕೂ ಸೈನ್ಯಬಲಕ್ಕೂ ಅಧಿಕ ಪ್ರಾಧಾನ್ಯ ಇದೆ, ತಿಬೆತ್, ಕೊರಿಯಗಳಲ್ಲಿ ನಡೆಯುತ್ತಿರುವ ಚೀನದ ವ್ಯವಹಾರದಿಂದ ಬುದ್ಧಿವಂತರಾಗೋಣ. ಏಶಿಯದ ಸಂರಕ್ಷಣೆಯಾಗಬೇಕಾದರೆ ನಮ್ಮ ಸೈನ್ಯ ಬಲ ವೃದ್ಧಿಯಾಗತಕ್ಕುದು; ಜತೆಗೆ ಆರ್ಥಿಕ ಬೆಳವಣಿಗೆಯೂ ನಡೆಯತಕ್ಕುದು. ನಮ್ಮ ಭೌಗೋಲಿಕ ಸನ್ನಿವೇಶವು ನಮ್ಮನ್ನು ಅನಿವಾರ್ಯವಾಗಿ ಜಗತ್ತನ್ನೂ, ಏಶಿಯವನ್ನೂ ಎರಡಾಗಿ ಒಡೆದಿರುವ ವಸ್ತುಸ್ಥಿತಿಗೆ ದೂಡಿರುವುದರಿಂದ ನಮ್ಮ ವಿದೇಶ ಧೋರಣೆಯು, ಸಂಪೂರ್ಣ ಸ್ವಾಧಿಕಾರ ನಮ್ಮ ಕೈಯೊಳಗಿಲ್ಲ, ಆದರಲ್ಲಿ ಹೆಚ್ಚಿನಂಶ ನಮ್ಮಿಂದ ಹೊರಗೆಯೇ ನಿರ್ಣಯಿಸಲ್ಪಡುತ್ತಿದೆ. ಆದ್ದರಿಂದ ನಮ್ಮ ಭಾಗ್ಯ ನಿರ್ಣಾಯಕರ ಬಲಾಬಲಗಳನ್ನೆ ತಿಳಿಯವೇಳಸುವುದೂ ನಮ್ಮ ಕರ್ತವ್ಯವಾಗುವುದು.

ಗಣರಾಜ್ಯವೆಲ್ಲ ಬುದ್ಧ ಕೃಷ್ಣರನ್ನೂ, ಕೈಸ್ತ ಜೈಗಂಬರರನ್ನೂ ಹಳೆಗಾಲದಲ್ಲೂ ಕಾಡಿದ ಪ್ರಶ್ನೆ ಎಂಬುದು ನವ ಗೆ ತಿಳಿಯುವುದಿಲ್ಲವೆ? ಇಂಥವಕ್ಕೆ ಸರಕಾರಿ ಶಾಸನವು. ಮದ್ದಲ್ಲ. ಜನತೆಯ ತಿದ್ದಿಕೆ, ಶಿಕ್ಷಣವೇ ಜನತೆಯ ಪಿಡುಗನ್ನು ನಿವಾರಿಸಬಲ್ಲುದು ಶಿಕ್ಷಣವು ಶಾಲೆಗಳಿಂದಲೇ ಬರಬೇಕಾಗಿಲ್ಲ, ಧುರೀಣರಿಂದಲೂ ಬರಬೇಕಾಗಿಲ್ಲ. ನಮ್ಮ ವೃತ್ತಪತ್ರಿಕೆಗಳೂ, ಆನ ಕ್ಷಪತ್ರಿಕೆಗಳ ಕಂರಕೋಷಕರು, ದೈವ ಕೃಪೆಯಿಂದ ನೀತಿಬಾಹಿರರಾಗದೆ ಉಳಿದಿರುವವರು ಎಲ್ಲರೂ ಜನತೆಗೆ ತಿಳಿವನ್ನು ನೀಡಬೇಕು. ಅಂದರೇನೆ ಗಣರಾಜ್ಯವು ಗುಣರಾಜ್ಯವಾಗುವುದು. ಗುಣರಾಜ್ಯವಾಗದೆ ಎಂಥ ಉತ್ಕೃಷ್ಟವಾದವೇ ಬಂದರೂ 'ಗಣರಾಜ್ಯವು ಈ ನಿಷ್ಠುರ ಪ್ರಪಂಚದಲ್ಲಿ ತಲೆ ಎತ್ತಿ ಬಾಳಲಾರದು ಎಂಬುದನ್ನು ಈ ದಿನ ಮನನ ಮಾಡಿ, ಕರ್ತವ್ಯದೀಕ್ಷಾಬದ್ಧರಾಗಿ, ಗಣರಾಜ್ಯಕ್ಕೆ ಇನ್ನೊಮ್ಮೆ ವಂದಿಸೋಣ!

ಪ್ರಧಾನ ಕಾರ್ಯಾಲಯಃ ಉಡುಪಿ. ಸ್ಥಾಪನೆಃ ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್
ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಆಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್)
ಹಂಚಿದ ಕಂಪೆನಿ.

The Canara Mutual Assurance Co, Ltd.

H. O. **UDIPI** (SOUTH INDIA) ESTD: **1935.**

ಭಾರತವೂ ಪ್ರಜಾಪ್ರಭುತ್ವದ ರಾಷ್ಟ್ರಗಳೂ

ಭಾರತಕ್ಕೂ, ಪ್ರಜಾಪ್ರಭುತ್ವಗಳಿಗೂ ಇರುವ ಸಂಪರ್ಕದಲ್ಲಿ ಮೂರು ವಿಷಯಗಳು ಮುಖ್ಯವಾಗಿ ಎದ್ದು ಕಾಣುತ್ತವೆ. ಪ್ರಧಾನವಾಂಶಗಳವು: (೧) ಕಾಮನ್‌ವೆಲ್ತ್ ದೇಶಗಳಿಗೂ ನಮಗೂ ರಾಜಕೀಯ ಸಂಬಂಧವಾಗಿಯೂ, ಸ್ವರ್ಲಿಂಗ್ ಕ್ಷೇತ್ರಕ್ಕೆ ಸಂಬಂಧವು ಸೇರಿರುವುದರಿಂದ ಆರ್ಥಿಕವಾಗಿ ಯುಕ್ತರಾಜ್ಯದ ಕಡೆಗೆ ಒಲೆಯುವುದೂ, ಆರ್ಥಿಕ ರಂಗದಲ್ಲಿ ಬ್ರಿಟನ ಮತ್ತು ಇತರ ಯು.ರೋಪಿನ ಕಡೆಗೆ ಪಕ್ಷಪಾತದಿಂದ ವರ್ತಿಸುವುದೂ ತಪ್ಪಿದ್ದಲ್ಲ. ಏತಿಯದ ರಾಷ್ಟ್ರಗಳಿಗೆ ಕಾಮನ್‌ವೆಲ್ತ್‌ನಲ್ಲಿ ಉಚಿತವಾದ ಪ್ರಾತಿನಿಧ್ಯವೂ ಇರುವುದಿಲ್ಲ- ಜಡ್ಡರ್ತಾ ನಮಗೂ ಬಾಹ್ಯ ಪ್ರಪಂಚಕ್ಕೂ ಬೆಳೆಯು ಬೇಕಾದ ಸಂಪರ್ಕವು ಕಾಮನ್‌ವೆಲ್ತ್-ಕಾಲಾವೆಯ ಮೂಲಕವಾಗಿ ದಾಃ—ಚೀನದ ಮನ್ನಣೆ ಪಾಗೂ ಯು ನೈಟೆಡ್ ನೇಶನ್ಸ್ ಪ್ರಾತಿನಿಧ್ಯದ ವಿಚಾರ. ಚೀನಕ್ಕೆ ಆತಿರೇಕ ಶಿಕ್ಷಾರಸು ಕೊಟ್ಟವರು ಭಾರತೀಯರು. ಟಿಬೆಟನ್ನು ಆಕ್ರಮಿಸಿದಾಗ ನಮ್ಮ ಶಿಫಾರಸುಗಳಿಂಬಿಯ ಬಗ್ಗೆ ನಮಗೆಯೇ ಸಂದೇಹವಾದರೂ ಮುರಳಿ ಇಲ್ಲ ನೆಯು ಆಕ್ರಾಂತ ದೇಶಯನ್ನು ದಾಟುವ ವಿಷಯದಲ್ಲಿ ಭಾರತಕ್ಕೆ ಸ್ವಂತ ಅಭಿಪ್ರಾಯ ಒಂದಿತ್ತು. ಬ್ರಿಟಿಷ ಅಭಿಪ್ರಾಯವೂ ಒಮ್ಮೆ ಅಮೇರಿಕದ ಕಡೆಗೂ ಇನ್ನೊಮ್ಮೆ ಭಾರತದ ಕಡೆಗೂ ಚಂಚಲವಾಗಿ ಉಯ್ಯಲೆಯಾಡುತ್ತಿದ್ದಲೂ, ಸಾಮ್ಯವಾದಿ ಚೀನರನ್ನು ಆಜಂದ್ರಾರ್ಕವಾಗಿ ಸ್ನೇಹಿತನೆಂದು ಬಗೆಯುವುದರಿಂದ ಬರುವ ಅಪಾಯಗಳ ಅರಿವೆ ನಮಗಿಂತ ಹೆಚ್ಚಾಗಿ ಬ್ರಿಟನಿಗಿದೆ. ಭಾರತಪು ಚೀನದ ಬಗ್ಗೆ ದುಡುಕು-ಗೆಳೆತನವನ್ನು ಪ್ರದರ್ಶಿಸುತ್ತಿರುವುದಾದರೂ ಭಾರತದ ಧೋರಣೆ ಬ್ರಿಟನ ನೀತಿಗಿಂತ ಭಿನ್ನವಾಗಿದೆ ಎಂದು ಅಮೇರಿಕಾನರು ತಿಳಿಯಲು ಆಸ್ಪದವಿಲ್ಲ. ಯಥಾರ್ಥವಾಗಿ ಭಾರತ ಇನ್ನೂ ಕಾಮನ್‌ವೆಲ್ತ್ ನೀತಿಯನ್ನೇ ಪುಷ್ಟೀಕರಿಸುತ್ತಿದೆ. ಆದರೆ ದುರ್ದೈವವಶಾತ್ ನಾವು ಒಂದು ಸ್ಪಷ್ಟೀಕ ನೀತಿಯನ್ನವಲಂಬಿಸುತ್ತಿದ್ದೇವೆಂಬ ಭಯ ಅಮೇರಿಕದಲ್ಲಿ ಬೆಳೆಯುವಂತೆ ತೋರುತ್ತಿದೆ.

ನಮ್ಮ ವಿದೇಶನೀತಿಯು ಮುಂಬರಿಯುತ್ತಿರುವ ದಿಕ್ಕುದಿಶೆಯ ಬಗ್ಗೆ ಚರ್ಚೆ ಖಂಡಿತವಾಗಿಯೂ ಇಲ್ಲ. ಆದರೆ ಈ ಹಿಂದೆ ನಡೆದಿರುವ ಕೆಲ ಘಟನೆಗಳ ಅರಿವನ್ನು ನಾವು ಸಂಪೂರ್ಣವಾಗಿ ಮಾಡಿಲಿಲ್ಲ ಎಂದು ಹೇಳಬಹುದು. ಇಂಡೋ-ಚೀನದ ಅಸಾಯವು ನಮ್ಮ ಗಡಿಗೇ ಬಂದ ನಂತರವಷ್ಟೆ ಎಂಬುದನ್ನೇ ನಾವು ತಿಳಿಯಲಿಲ್ಲ. ಇಂಡೋ-ಚೀನವು ಅಮೇರಿಕದ ವಿದೇಶ ಧೋರಣೆಯನ್ನು ಧ್ವನಿಗೊಳ್ಳುತ್ತಿರುವುದ ಕ್ಕಿಂತ ಹೆಚ್ಚಾಗಿ ನಮ್ಮ ವಿದೇಶನೀತಿಯ ಧ್ವನಿಗೊಳಿಸಬೇಕಾಗಿತ್ತು. ಅಮೇರಿಕದೊಡನೆ ನಮ್ಮ ಆರ್ಥಿಕ ಬಾಂಧವ್ಯವು ಬೆಳೆದಂತೆ ಎರಡು ವಿಲಿಯ ಟನ್ ಆಹಾರವನ್ನೇ ಅಮೇರಿಕಾನರು ನಮಗೆ ಸರಬರಾಯಿ ಮಾಡಿದಂತೆ ನಮ್ಮ ಆವರ ನಂಟು ಬಿಗಿಯುವುದರಲ್ಲಿ ಸಂದೇಹವಿಲ್ಲ-

ಆಗ್ನೇಯ ಏಶಿಯ

ಕೊಲಂಬೋ ಯೋಜನೆಯನ್ವಯ ಭಾರತವೂ ಆಗ್ನೇಯ ಏಶಿಯವೂ ಹತ್ತಿರ ಬರಬೇಕು. ಆದರೆ ಯೋಜನೆಯು ಹೊರಗಿನ ಸಂಬಂಧವು ಬೆಳೆಯಬೇಕು. ಭಾರತ, ಬ್ರಹ್ಮದೇಶ, ಥಾಯಿಲೆಂಡಗಳು ಅಕ್ಕಿ—ಬಟ್ಟೆ ವಿನಿಮಯದ ಬಗ್ಗೆ ದೀರ್ಘಕಾಲದ ಸಂಪರ್ಕ ಬೆಳೆಸಿಕೊಳ್ಳುವುದು ಈಗಾಗಲೇ ಆರಂಭಿಸಬೇಕಾಗಿತ್ತು. ಇಂಡೋನೇಶಿಯಕ್ಕೂ ನಮಗೂ ನಡೆಯಬೇಕಾದ ವ್ಯಾಪಾರ ಒಪ್ಪಂದಕ್ಕೆ ಇನ್ನೂ ಸಹಿಯಾಗಿಲ್ಲ. ಇಡೀ ಆಗ್ನೇಯ ಏಶಿಯ ಪ್ರದೇಶದಲ್ಲೇ ವಿಚಾರ ವಿನಿಮಯವೂ, ಸಾಮೂಹಿಕ ಭದ್ರತೆಯ ಯತ್ನವೂ ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿ ನಡೆದರೆ ಚೆನ್ನ. ಆಗ್ನೇಯ ಏಶಿಯವು ಕಾಮನ್‌ವೆಲ್ತ್‌ನ ಹಾಗೆಯೇ ಇನ್ನೊಂದು ಸಂಘಟನೆಯಾಗಿ ಒಟ್ಟುಗೂಡಲು ಸಾಧ್ಯವಿಲ್ಲವೆ? ಎಂಬುದನ್ನು ಶರಾಂಬರಿಸಬಹುದು.

ಭಾರತ ಹಾಗೂ ಸಾಮ್ಯವಾದಿ ತಂಡ

ಭಾರತದ ವಿದೇಶಂಗ ನೀತಿಯು ಪರಮೋದ್ದೇಶವು ಪ್ರಪಂಚದ ರಾಷ್ಟ್ರಗಳೊಡನೆ ಮಿತ್ರತ್ವದಲ್ಲಿರುವುದಾಗಿರುತ್ತದೆ. ಹೀಗೆ ಭಾರತವೂ ಇತರ ರಾಷ್ಟ್ರಗಳೂ ಪರಸ್ಪರ ಹೊಂದಿಕೆಯಲ್ಲಿ ಈ ವಿಶ್ವ ಇಲ್ಲದಿರುವ ಪಕ್ಷ ಇದಕ್ಕೆ ಜಗತ್ತಿನ ಒಡಕು ಕಾರಣವೆನ್ನಬೇಕು. 'ನಿನಗೆ ವಿರೋಧಿಯಲ್ಲದವನು ನಿನ್ನ ಮಿತ್ರನಲ್' ಎಂಬ ಸತ್ಯವೇದದ ವಾಕ್ಯವು ಈ ವಿಷಯದ ಪ್ರಪಂಚದಲ್ಲಿ 'ನಿನಗೆ ಮಿತ್ರನಲ್ಲದವನು ನಿನ್ನ ವಿರೋಧಿ' ಎಂದು ಪಲ್ಲಟವಾಗಿರುವುದು. ಕಳೆದ ಅಕ್ಟೋಬರ್‌ದಲ್ಲಿ ನಾವು ಹೀದೆ ವಂಡೆ ವಿಜಯಲಕ್ಷ್ಮಿಯವರು ಮಾಡುತ್ತಿದ್ದ ಕಾಲಕ್ಕೆ ಅಮೇರಿಕದಲ್ಲಿ ನಮಗೆ 'ಅಶಿಯ ಪಡ್ಯಾನ್ಸೆಟ್' (ಚಂಚಲ ವೃತ್ತಿಯ ಪಾತ್ರ) ಎಂಬ ಬಿರುದು ದಕ್ಕಿತು. ನಾವು ಕೈಗೊಂಡ ಅಪರಂಜಿ ಮಧ್ಯ ಮಾರ್ಗವನ್ನು ಸಾಮ್ಯವಾದಿಗಳ ತಂಡವು ಹಳಿಯುವಷ್ಟೆ ಬೇರೆ ಯಾರೂ ಖಂಡಿಸಲಾರರೆನ್ನಲು ಬೆಟಿಟ್ ಪ್ರಕರಣದಲ್ಲಿ ನೆಹರ್ ಸರಕಾರವು 'ಭಾರತವು ದರತೀಯ ಉತ್ಪಾದನೆಗಳಿಗಾಗಿ ವರ್ತಿಸುತ್ತಿದೆ'ಎಂದು ಆರೋಪಿಸಿದುದು ಸಾಕ್ಷಿಯಾಗಿದೆ.

ಸತ್ಯಸಂಗತಿಗೆ ಬೆನ್ನು ಹಾಕಿದುದು ಚೀತ. ಕಮ್ಯೂನಿಸ್ಟ ರೀತಿಯ, ಚೀನ ಉಕ್ಕರ ಕೊರಿಯ ಗಳಲ್ಲಿ ನಮ್ಮನ್ನು ಅವೇಕನಾಂಶ್ಲ ವಕ್ಷಿಯರೆಂದು ಈಗಾಗಲೇ ಪರಿಗಣಿಸಲಾಗಿದೆ. ಹಾಗಾಗಲು ಭಾರತದಲ್ಲಿ ತಪ್ಪು ಇಲ್ಲ ೧) ಭಾರತ ಒಂದು ಪ್ರಜಾತಂತ್ರಾತ್ಮಕ ರಾಷ್ಟ್ರ, ನಮ್ಮ ಫೆಟನೆ ಬ್ರಿಟಿಷ ಪಾರ್ಲಿಮೆಂಟ್ ಪದ್ಧತಿಯಂದಲೇ ಪ್ರೇರಿತವಾದುದು. ೨) ನಾವು ಕಾವನ್‌ವೆಲ್ತಿನ ಸದಸ್ಯರು. ೩) ನಮ್ಮ ವ್ಯಾಪಾರ ವಹಿವಾಟು ಪ್ರಜಾತಂತ್ರದ ರಾಷ್ಟ್ರಗಳೊಡನೆಯೇ ಹೆಚ್ಚಾಗಿ ಜರಗುತ್ತಿದೆ ೪) ವಿಶ್ವಸಂಘದಲ್ಲಿ ಸೋವಿಯೆಟ್ ರಾಷ್ಟ್ರದ ಜತೆಗೆ ನಾವು ಮತ ಭೇದಕ್ಕಿಂತ

—ನಮ್ಮ ಕೈಯಲ್ಲಿಲ್ಲ!

ಬೂ, ಬೆಳೆದು ಬಂದಿರುವ ಸಂಬಂಧ.) ಕಾಮನ್‌ವೆಲ್ತಿನಜ್ಜೇ ಮಹತ್ವವು ಅಮೇರಿಕದ ಸಂಯುಕ್ತ ರಾಜ್ಯದೊಡನೆ ನಮಗಿರುವ ಸಂಬಂಧ. (೩) ನಮ್ಮ ಆಗ್ನೇಯ ಏಶಿಯದ ಸೋದರರೊಡನೆ ನಮಗಿರುವ ಬಾಂಧವ್ಯ.

ಭಾರತ—ಕಾಮನ್‌ವೆಲ್ತ್

ಭಾರತವು ಗಣರಾಜ್ಯವಾದರೂ ಕಾಮನ್‌ವೆಲ್ತ್ ಬಾಂಧವ್ಯನನ್ನು ಕಡಿದುಕೊಳ್ಳಲು ಇಚ್ಛಿಸದೆ ಇದ್ದುದರಿಂದ ಕಾಮನ್‌ವೆಲ್ತ್ ಸಂಸ್ಥೆಯ ಸಂವಿಧಾನವೇ ಬದಲಾಗಿ ಬಂದ ವಿಧಾನವನ್ನು ನಾವು ಬಲ್ಲೆವು. ಸಂವಿಧಾನವು ಬದೇ ಒಂದು ಹಂದರ; ಇದರ ವಿವಾದ ಸಂಯೋಜಕ ತತ್ವ ಬೇರೆಯೇ ಇದೆ-ಎಂಬುದನ್ನು ಬಲ್ಲೆವು. ಭಾರತ ಬ್ರಿಟನಗಳ ನಡುವಿನ ರಾಜಕೀಯ ಭೇದಗಳ ಹೊರತಾಗಿಯೂ ಅಹಿಂಸಾತ್ಮಕವಾಗಿಯೂ ಮುಕ್ತವಾಗಿಯೂ ಪರಸ್ಪರ ಹಿತವಾಗುವಂತೆ ಬೆಳೆದಿರುವುದಾಗಲೇ ನಾವು ಒಬ್ಬರಿಗೊಬ್ಬರು ಮತ್ತಷ್ಟು ಬಂಧುಗಳಾಗಿ, ಈ ಹೊಸ ಬಂಧವನ್ನು ಭದ್ರವಾಗಿ ಕಾದು ಕೊಂಡು ಬರಿಸಿಕೊಂಡು ಬರಬೇಕಾದ ಜವಾಬುದಾರಿ ನಮ್ಮ ಮೇಲೆ ಬಿತ್ತು. ಭೇದಭಾವ ಆಳಿದೊಡನೆ ನಾವೀರ್ವರೂ ಒಮ್ಮನಸ್ಸಿನಿಂದ ವರ್ತಿಸದೆ ನಮಗೆ ಬೇರೆ ಮಾರ್ಗವೇ ಉಳಿಯಲಿಲ್ಲ ಇದನ್ನು ಈ ಮೂರು ವರ್ಷಗಳ ಇತಿಹಾಸ ಹೇಳುವುದು. ೧೯೪೯ ಹಾಗೂ ೧೯೫೦ರಲ್ಲಿ ನಮ್ಮ ಸಂಬಂಧ ಪಕ್ಷವಾಯಿತು. ೧೯೫೦ರಲ್ಲಿ ಕೊಲೊಂಬೋ, ಸಿಡ್ನಿ, ಲಂಡನ್ ಹೀಗೆ ಮೂರು ಸ್ಥಳಗಳಲ್ಲಿ ಕಾಮನ್‌ವೆಲ್ತ್ ಪರಿಷತ್ತುಗಳು ಜರಗಿದುವು ಲಂಬೋ ಯೋಜನೆಯು ಕಾಮನ್‌ವೆಲ್ತ್ ಸರಕಾದ ಕಳಹದಿಯಾಗಿ ಪರಣಮಿಸುವುದರಲ್ಲಿ ಸಂದೇಹವಿಲ್ಲ. ಇದೇ ಅವಧವಾದ ಹೊಸವರ್ಷದಲ್ಲಿ ಮತ್ತೊಮ್ಮೆ ಕಾಮನ್‌ವೆಲ್ತ್ ಪ್ರಧಾನಿಗಳು ಲಂಡನ್ನಿನ ಕತ್ತು ದಿನಗಳವರೆಗೆ ಸಭೆಸೇರಿ ವಿಚಾರವಿನಿಮಯ ಮಾಡಿಕೊಂಡರು. ನಮ್ಮ ಅಸಚಿವರು ಕಾಮನ್‌ವೆಲ್ತ್ ಅರ್ಥಸಚಿವರ ಸಮ್ಮೇಳನಗಳಲ್ಲಿ ಭಾಗವಹಿಸಿ ಕಾಮನ್‌ವೆಲ್ತ್‌ಗೆ ಸಾಮಾನ್ಯ ವಾದುದೊಂದು ಹೊಸ ಆರ್ಥನೀತಿಯ ರಚನೆಯಲ್ಲಿ ನೆರವಾಗಿರುವುದಲ್ಲದೆ, ಆಂಥ ಅನೀತಿಗೆ ಭಾರತದ ಪ್ರತಿಕ್ರಿಯೆ ಏನೆಂಬುದನ್ನೂ ಸೂಚಿಸಿದ್ದಾರೆ. ಕಾಮನ್‌ವೆಲ್ತ್ ಸಂಸ್ಥೆಯ ವಿತಿಯನ್ನು ನಾವು ತಿಳಿಯಲು, ರಾಜಕೀಯದಲ್ಲಿ ಆದು ಸಂಭವಿಸಿದರೆ ಸಾಲದು ಎಂಬುದು ಉಚಿತವಾಗುವುದು.

ಸಂಯುಕ್ತ ರಾಜ್ಯ

ನಮ್ಮ ಆರ್ಥನೀತಿಯು ದೃಷ್ಟಿಯಿಂದ ಸಂಯುಕ್ತ ರಾಜ್ಯದ ಆಕರ್ಷಣೆ ದಿನದಿಂದ ದಿನ ಬೆಳೆಯುತ್ತಲಿದೆ. ಒಂಡವಾಳವನ್ನು ಹೊರಗೆ ರಫ್ತುಮಾಡುವ ಸಾಮರ್ಥ್ಯವುಳ್ಳ ಒಂದೇ ಒಂದು ರಾಜ್ಯವೆಂದರೆ ಅಮೇರಿಕವೆ ಸೈ. ಹಿಂದುಳಿದ ನಾಡುಗಳ ಉದ್ಧಾರದ ಕೇಲಿ ಕೈ ಅಮೇರಿಕದ ಜೇಬಿನಲ್ಲಿದೆ. ಪರಸ್ಪರ ಸಹಕಾರಕ್ಕಾಗಿ ನಾವು ನಾವೇ ರಚಿಸಿಕೊಂಡ ಕೊಲಂಬೋ ಯೋಜನೆಯಲ್ಲಿ ಕೂಡ ಅಮೇರಿಕದ ಹಾನಭಾವಗಳಿಗೆ ಎಡೆ ಇದೆ. ಅಮೇರಿಕದ ಹಾನಭಾವಗಳೇ ಯೋಜನೆಯ ಯಶಸ್ಸಿಗೆ ದೊಡ್ಡ ಕಾರಣ. ಭಾರತದ ವಿದೇಶನೀತಿಯೂ ಅಮೇರಿಕದ ವಿದೇಶನೀತಿಯೂ ಸಮಾನಾಂತರವಾಗಿ ಹರಿಯುತ್ತಿಲ್ಲ ನಿಜ ಅಂತೆಯೇ ಬ್ರಿಟನ ಆನೇಕ ಗಳ ವಿದೇಶ ಧೋರಣೆಗಳು ಎಲ್ಲ ಕಾಲಕ್ಕೂ ಒಂದೇ ರೀತಿಯಾಗುವುದಿಲ್ಲ. ಆ

ಭಾರತದಲ್ಲಿ ಕ್ಷಯರೋಗ ಮುದ್ರೆಯ ಮಾರಾಟದ ಚಳವಳಿ

(ಭಾರತ ಕ್ಷಯರೋಗ ಸಂಘ ಹೊಸದಿಲ್ಲಿ—ಇವರ ನೇತೃತ್ವದಲ್ಲಿ)

ಕ್ಷಯರೋಗದ ಮುದ್ರೆಗಳು:—ಗೆಲವಿನ ಈ ಚಿಕ್ಕ ಮುದ್ರೆಗಳು ಭಾರತದಲ್ಲಿನ ಯಾವತ್ತು ಸಂಸ್ಥಾನದ ಕ್ಷಯರೋಗ ಸಂಘಗಳಲ್ಲಿಯೂ, ಪ್ರಾಮುಖ್ಯ ಪೋಸ್ಟ್ ಆಪೀಸುಗಳಲ್ಲಿಯೂ ದೊರಕುತ್ತವೆ. ಅವುಗಳಲ್ಲಿ ಪತ್ರಿಯೊಂದರ ಬೆಲೆ ಒಂದು ಆಣೆ. ನೀವು ಕಳುಹಿಸುವ ನಿಮ್ಮ ಎಲ್ಲ ಕಾಗದಗಳಿಗೆ ಕ್ರಿಸ್‌ಮಸ್, ಹೊಸ ವರ್ಷ ಮತ್ತು ಇತರ ಅಭಿನಂದನಾ ಪತ್ರಗಳಿಗೆ ಅವನ್ನು ಹೆಚ್ಚಿಗೆಯಾಗಿ ಅಂಟಿಸಿರಿ

ಮುದ್ರೆ ಈ ಸಂದೇಶವನ್ನು ಸಾರುತ್ತದೆ—

"ಕ್ಷಯರೋಗ ಹೊಡೆದು ಹೋರಾಡಿ"

ಮುದ್ರೆಗಳು ಯಾವ ರೀತಿಯ ಟಪ್ಪಾಲುಗಳನ್ನೂ ಸಾಗಿಸುವುದಿಲ್ಲ

ಆದರೆ ಯಾವ ರೀತಿಯ ಟಪ್ಪಾಲುಗಳಾದರೂ ಅವನ್ನು ಸಾಗಿಸಬಲ್ಲುವು

[ಈ ಸ್ಥಳ: ಕೆನರಾ ಬ್ಯಾಂಕ ಲಿಮಿಟೆಡ್—ಇವರ ಸೇವಾವಾಣಿ]

ಮಾಡಿದುದಕ್ಕಿಂತ, ಅದಕ್ಕೆ ವಿರುದ್ಧ ಕೈ ಎತ್ತಿದುದೇ ಹೆಚ್ಚು ಸಲ. ೫) ನಮ್ಮ ಪತ್ರಿತೋದ್ಯವು ಎಡವಟ್ಟಿದ ಕಡೆಗೆ ಒಲವು ತೋರಿಸುವುದಾದರೂ, ಕಮ್ಯೂನಿಸಮ್ಮಿನ ಮಟ್ಟಿಗೆ ಬದ್ಧ ದ್ವೇಷಿಯಾಗಿದೆ.

ಕ್ರೈಮ್ಲಿನ್

ಕ್ರೈಮ್ಲಿನ್ ನಮ್ಮನ್ನು ಜೇಗೆ ನೋಡುತ್ತಿದೆಯೋ? ಎಂಬುದು ಇದು ವರೆಗೂ ಚಿತ್ರಕ್ಕೆ ನಿಲುಕಿಲ್ಲ. ಶ್ರೀಮತಿ ವಿಜಯಲಕ್ಷ್ಮಿಯವರಿಗೆ ಸಿಗದಿದ್ದ ಸ್ಥಾಲಿನ ದರ್ಶನ ವೇದಾಂತಿ ರಾಧಾಕೃಷ್ಣನ್ನರಿಗೆ ದೊರೆತರೂ 'ಪ್ರಾವ್ದಾ' ಪತ್ರಿಕೆಯ ಸರಣಿಯನ್ನು ನೋಡುವಾಗ ನಮಗೆ ಭಂವನೆಯಾಗುವುದಿಲ್ಲ. ನಮ್ಮ ಜನಾಭಿಪ್ರಾಯಕ್ಕೆ ರಷಿಯದಲ್ಲಿ ಜೇಗೆ ಮನ್ನಣೆ ಇಲ್ಲವೋ, ಅಂತೆಯೇ ನಮ್ಮ ಬೆನಗಲ್ ರಾಯರ ಶಾಂತಿದಾತ್ಯಕ್ಕೆ ಸಾಮ್ಯವಾದಿ ತಂಡದ ಬೆಂಬಲವಿಲ್ಲ. ಪ್ರಧಾನಿ ನೆಹರೂ ಸ್ಟಾಲಿನ್ ಪ್ರಭೃತಿಗೆ ಬರೆದುಕೊಂಡುದು ವಿಫಲವಾಗದಿರಲು ಕಾರಣವೇನೆಂದರೆ ಚೀನಕ್ಕೆ ಭದ್ರತಾ ಮಂಡಲದಲ್ಲಿ ಪ್ರಾತಿನಿಧ್ಯ ದೊರಕಿಸುವ ಸ್ಪಷ್ಟ ಸೋವಿಯೆಟ್ ರಾಷ್ಟ್ರಕ್ಕೆ ಆತ್ಯಾವಶ್ಯಕವಾಗಿತ್ತು. ಅದಕ್ಕೆ ನೆವವಾಗುವೆನೆಂದು ಮುಂದೆ ಬರುವವರಿಗೆ ಪ್ರೋತ್ಸಾಹ ಕೊಡುವುದು ಸ್ವಾರ್ಥಕ್ಕೆ ಉಪಯುಕ್ತವಾದುದಷ್ಟೆ. ಡಾ॥ ರಾಧಾಕೃಷ್ಣನ್ ಅವರು ಮೊಸ್ಕೋ ರಾಯಭಾರಿ ಗಿರಿಯು ಒಳಗಿರುವುದಕ್ಕಿಂತಲೂ ದೀರ್ಘಕಾಲ ಹೊರಗೆ ರಜೆಯಲ್ಲಿ ಅಡ್ಡಾಡುತ್ತಿರುವುದನ್ನು ನೋಡಿದರೆ ನಮ್ಮ ಮೋಸ್ಕೋ ಕಚೇರಿಗೆ ಅಸ್ಥಿರತೆಯೆಂದು ನಾವು ಗಣಿಸಿದಂತಿದೆ.

ಸೂರ್ಯೋದಯದ ನಾಡಿನಲ್ಲಿ

ಚೀನದ ನವ ಜನತಾ ರಾಜ್ಯದೊಡನೆ ನಮ್ಮ ಬಳಕೆ ವಿಶೇಷವಾಗಿ ಹರಡಿದೆಯಾದರೂ ಅಲ್ಲಿಯೂ ನಮಗೆ ಕ್ಷೇಮವಿಲ್ಲ. ನಾವೆಷ್ಟು ಆಸಕ್ತಿ ಆಸಕ್ತಿಗಳಿಂದ ಚೀನದ ಬೆನ್ನು ಪಟ್ಟರೂ, ಬಾಲಹಿಡಿದರೂ ನಮ್ಮನ್ನವರು ನಿರಂದಸಿ.ವ ತಾತ್ಸಾರ ಬುದ್ಧಿಯು ಟಿಬೆಟ್ ಪ್ರಕರಣದ ಕಾಲದಲ್ಲಿ ಕಣ್ಣು ಕುಕ್ಕುವಂತೆ ಪ್ರಕಟವಾಯಿತು. ಸರದಾರ ಪಣಿಕ್ಕರ ಅಪ್ರತಿಮ ರಾಯಭಾರಿ ಎಂಬ ಪ್ರತೀತಿ ಇತ್ತೆಂಬುದನ್ನು ನಾವು ನಂಬಿದರೂ ಈಗಿನ ಪೆಕಿನ್ ಸರಕಾರದ ಒಲುಮೆಗೆ ಅಪಾತ್ರರಾಗಿಯಿತ್ತಾರೆ. ಬೆನಗಲ್—ವೂ ಸಂವಾದದಲ್ಲಿ ಸಾಮ್ಯವಾದಿ ವೂ—ಅವರ ಹೆಂಡತನವನ್ನು ಉಡಿಸಲು ಬೆನಗಲರಂಥ ಚಾಣಾಕ್ಷರಿಗೂ ಸಾಧ್ಯವಾಗಲಿಲ್ಲ. ಚೀನ ಭಾರತ ಅಷ್ಟೊಂದು ಮಿತ್ರ ರಾಷ್ಟ್ರಗಳೇನೂ ಅಲ್ಲ—ಎಂಬುದು ಇಷ್ಟರಿಂದ ನಾವು ತಿಳಿಯತಕ್ಕ ನೀತಿ. ನಾವೇನೂ ಮಾಡಿದರೂ ನಮ್ಮನ್ನು ಸಾಮ್ಯವಾದಿ ತಂಡವು ನಂಬಿ, ಒಪ್ಪಿಕೊಳ್ಳುವಂತೆ ತೋರುವುದಿಲ್ಲ.

ಯುದ್ಧ ಬಂದಾಗ

ಶಾಂತಿ ಕಾಲದಲ್ಲಿ ನಮ್ಮ ಮಿತ್ರತ್ವವನ್ನು ಸಿಕಳಿಸಿಕೊಳ್ಳುವುದು ಸುಲಭ. ಚೀನದೊಡನೆ ನಮ್ಮ ವ್ಯಾಪಾರ ಅಸ್ಪಷ್ಟವೇ ಇದೆ. ಆದರೆ ಯುದ್ಧ ಬಂದರೆ ಸ್ನೇಹ ಗಡುತರವಾಗುವುದು. ಈಗಿನ ಕೊರಿಯ ಸಮರದಲ್ಲೇ ಆದರೂ ಯುನೈಟೆಡ್ ನೇಶನ್ಸ್ ಮುಖಾಂತರವಾಗಿ ನಾವು ಚೀನವನ್ನು ಪ್ರತಿಭಟಿಸುತ್ತಿರುವುದರಿಂದ ನಾವು ಅವರ ಶತ್ರುಗಳು. ಚೀನವು ಇಂಡೋ ಚೀನದಲ್ಲಿ ತನ್ನ ಪ್ರಭಾವ ವ್ಯಾಪಿಸಿದಂತೆ ನಮ್ಮ ಸಂಬಂಧವು ಮತ್ತಷ್ಟು ಕಡುವುದು. ಜಾಗತಿಕ ಸಮರವು ಆರಂಭವಾದಲ್ಲಿ ನಾವು ತಟಸ್ಥರಾಗಿ ನಿಂತರೂ ಸಾಮ್ಯವಾದಿ ಬಣದೊಡನೆ ನಾವು ಸಂಪರ್ಕ ಕಡಿಮೆ ಮಾಡುವ ಪ್ರಸಂಗ ಬಂದೇ ಬರುವುದು. ಏಕೆಂದರೆ, ಚೀನದ ಆರ್ಥಿಕ ದಿಗ್ಬಂಧನ ನಡೆಯುತ್ತಿರುವಾಗ ರಾಜಕೀಯ ಸಂಬಂಧವನ್ನು, ಆರ್ಥಿಕ ಸಂಪರ್ಕವನ್ನೂ ಪ್ರಜಾತಂತ್ರದ ರಾಷ್ಟ್ರಗಳೊಡನೆಯೇ ಇಟ್ಟುಕೊಂಡಿರುವ ಭಾರತದ ಅವಸ್ಥೆಯು ವಿಲಕ್ಷಣ ರೂಪಕ್ಕೆ ಬಂದು ನಿಲ್ಲುವುದು. ಸಾಮ್ಯವಾದಿ ಸೇನೆಗಳ ಮುಟ್ಟಗಂತೂ ಕಟಸ್ಥ ಭಾರತವು ಶತ್ರುವಿನಂತೆಯೇ ಕಾಣುವುದು. ನಮ್ಮ ಉತ್ತರ ಗಡಿಯಲ್ಲೇ ಸಾಮ್ಯವಾದಿಗಳ ಠಾಣ್ಯ ಇರುವ ನಿಮಿತ್ತ ನಮ್ಮ ಪರಿಸ್ಥಿತಿ ಗಂಭೀರವಾಗಿದೆ ಎಂದರೂ ಸಾಲದು. ಇದಕ್ಕೇನೆ ಯುದ್ಧವು ವ್ಯಾಪಿಸಿದಂತೆ ನಾವು ಭೀಕರ ಥ ಯತ್ನದಲ್ಲಿರುವುದು.

ಸಾಮ್ಯವಾದಿ ತಂಡದೊಡನೆ ನಮ್ಮ ಸಂಬಂಧ ಹೇಗಿರಬೇಕೆಂದು ನಿರ್ಣಯಿಸುವ ಹೊಣೆ ಸಂಪೂರ್ಣವಾಗಿ ನಮ್ಮ ಮೇಲಿಲ್ಲವೆಂಬುದು ಇಲ್ಲಿ ಉಚಿತವಾಯಿತು. ಮಹಾಸನುರ ಬೇಡ ಎನ್ನುವವರು ನಾವಾದರೂ ಆಟನ್ನಾರಂಭಿಸುವ ಗೈವೆಯುಳ್ಳವರು ಬೇರೆ ಕಡೆ ಇದ್ದಾರೆ. ಯುದ್ಧದಲ್ಲಿ ನಮ್ಮ ಭಾಗ್ಯವೂ ನಿರ್ಣಯವಾಗಲಿರುವುದು. ಈ ಸಂಗಡಿಗ ಬಲಾಬಲವನ್ನು ತೂಗಿ ನೋಡುವುದವಶ್ಯವಾಗಿದೆ.

ಬಲಾಬಲದ ಸಮತೋಲ

ಚೀನವು ಸಾಮ್ಯವಾದಿಗಳ ತಂಡಕ್ಕೆ ಸೇರ್ಪಡೆಯಾಗುವ ಮುನ್ನ ಪ್ರಪಂಚದ ರಾಜಕೀಯದ ತಕ್ಕಡಿಯು ಪಾಶ್ಚಿಗಳು ಸಮಾನಾಂತರವಾಗಿದ್ದರೂ, ಚೀನವು ಬಣ್ಣ ಬದಲಾಯಿಸಿದುದರಿಂದ ಇತ್ತಂಡಗಳ ಬಲಾಬಲಗಳ ಮೇಲೆ ಭಾರೀ ಪರಿಣಾಮವಾಗಿದೆ. ಆಗ್ನೇಯ ಏಶಿಯದಲ್ಲಿ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ತಮ್ಮ ಪ್ರಭಾವವನ್ನು ಹರಡುವುದು ಚೀನ ರಷಿಯಗಳಿಗೆ ಬೇಕಾದ ಸಮಾನ ಘೋರ ಜಿಯಾಗಿದೆ. ರಷಿಯವು ಚೀನಕ್ಕೆ ಮುಂದಿನ ಪಂಚವರ್ಷಗಳಲ್ಲಿ ಕೊಡುವ ೧೪ ಕೋಟಿ ರೂಪಾಯಿಗಳ ಸಾಲಕ್ಕಿಂತಲೂ ಸೈನ್ಯ ಸಾಮಾಗ್ರಿಯ ಸಹಾಯ ಅಧಿಕ ಮಹತ್ವದ್ದಾಗಿದೆ. ಹೀಗೆ ಚೀನ ರಷಿಯಗಳ ಸೈನ್ಯ ಮತ್ತು ಆರ್ಥಿಕ ಬಾಂಧವ್ಯದಿಂದಾಗಿ ಎಂಡರ ಘೋರಣೆಯೂ ವಿಕಸನ ತ್ಯದಲ್ಲಿರುವುದರಿಂದ ನಾವು ಏಶಿಯದ ನಾಡುದ ಚೀನಕ್ಕೆ ಪ್ರತ್ಯೇಕ ನೀತಿಯನ್ನು ಪಲಂಬಿಸುವ ಸ್ವಾತಂತ್ರ್ಯವುಂಟೆಂದು ನಂಬುವುದು ಮೂರ್ಖತನವಾದೀತು. ಮೊಸ್ಕೋ, ಪೆಕಿನ್ ಏಕಮೇವಾದ್ವಿತೀಯವಾಗಿವೆ.

ಸೈನ್ಯದ ಬಲಾಬಲಗಳನ್ನು ಕಂಡರೆ ಕಾಣುವ ಚಿತ್ರ ಇದು:

ಸಾಮ್ಯವಾದಿ ತಂಡ

ಸೋವಿಯಟ್	2500000
ಪೂರ್ವ ಯುರೋಪ	1370000
ಚೀನ	2000000
ಕೊರಿಯ	400000
ಫಿಲಪೀನ	12000
ಇಂಡೋಚೀನ	150000
ಮಲಯ	6000
	6,438,000

ಪ್ರಜಾತಂತ್ರದ ತಂಡ.

ಪಡು ಯುರೋಪು	1,250,000
ಸಂಯುಕ್ತ ರಾಜ್ಯ	500,000
ಕೆನಡಾ	20,000
ಮಧ್ಯ ಪ್ರಾಚ್ಯ	475,000
ಆಸ್ಟ್ರೇಲಿಯ	20,000
ಕೊರಿಯ	280,000
ಇಂಡೋಚೀನ	190,000
ಫೋರ್ಮೋಸಾ	400,000
ಮಲಯಾ	18,000
ಫಿಲಪೀನ	22,000
	3,275,000

ನೌಕಾದಲ

ಸಾಮ್ಯವಾದಿ ತಂಡ	500,000
ಪ್ರಜಾತಂತ್ರದ ತಂಡ	6,000,000

ವಿಮಾನದಲ

ಸಾಮ್ಯವಾದಿ ತಂಡ 27,000 ವಿಮಾನಗಳು.

ಪ್ರಜಾತಂತ್ರದ ತಂಡ 38,000 ವಿಮಾನಗಳು.

ಆರ್ಥಿಕಬಲ

ಅಮೇರಿಕದ ಸಂಯುಕ್ತ ರಾಜ್ಯದ ಆರ್ಥಿಕ ಶಕ್ತಿ ಒಂದೆಲ್ಲವಾಗಿದ್ದರೆ ಇಷ್ಟು ಹೊತ್ತಿಗಾಗಲೇ ಸಾಮ್ಯವಾದದ ಭೇರಿ ಪ್ರಪಂಚದಲ್ಲಿ ಸರ್ವತ್ರ ಮೊಳಗುತ್ತಿತ್ತು. ಸಂಯುಕ್ತ ರಾಜ್ಯದ ಆರ್ಥದಮ್ಮು ಔದ್ಯಮಿಕ ಬಲವೂ, ಧಾನ್ಯಾಶಕ್ತಿಯೂ ಸಾಮ್ಯವಾದಿ ತಂಡಕ್ಕಿಲ್ಲ. ಟ್ರೂಮನ್ ಅಭಿವ್ಯಾಯದಂತೆ ಒಂದು ವರ್ಷದಲ್ಲಿ ಅಮೇರಿಕದ ಉತ್ಪಾದನೆಯನ್ನು ೫೫ %. ರಷ್ಟು ಹೆಚ್ಚಿಸಬಹುದು. ಇಷ್ಟು ವೇಗದ ಪ್ರಗತಿ ಸಾಮ್ಯವಾದಿಗಳಿಗಸಾಧ್ಯ.

ಅಮೇರಿಕದ ಆರ್ಥಿಕಬಲ:—

1. ಯಂತ್ರಗಳಿಗೆ ಹಾಕಿರುವ ದುಡ್ಡು 47500 ಕೋಟಿ ರೂಪಾಯಿ.
2. ವರ್ಷ ಒಂದಕ್ಕೆ ತಯಾರಾಗುವ ಉಕ್ಕು 10 ಕೋಟಿ ಟನ್.
3. ವಿದ್ಯುಚ್ಛಕ್ತಿ 3000 ಕೋಟಿ ಕಿಲೋ ವಾಟ್ ಗಂಟೆ.
4. ಕೆಲಸಗಾರರು 6 ಕೋಟಿ.

(ಇನ್ನೂ ಸುಖ ನೋಡಿರಿ)

NOTICE.

THE BOMBAY LIFE ASSURANCE COMPANY, LIMITED.

Notice having been given of the Loss of Policy No.12551 on the life of Sri K. Balakrishna Mallya a duplicate policy will be issued unless objection is lodged with us within one month from this date.

K. BALASUBRAHMANYAM
Manager & Actuary
Bombay, 20—1—1951.

To

All our Depositors, Constituents and Shareholders.

We hereby send our **remembrances** for the year that has passed
AND
Greetings for the year that has dawned.
May the Bright New year turn out to be one of Plenty and Prosperity.

THE VIJAYA BANK, LTD.,

HEAD OFFICE: **MANGALORE.**

Branches:- Udipi, Kaup, Coondapoor, Karkala, Brahmavar, Kasaragod, Byndoor, City-Mangalore, Puttur,

ಪ್ರಕಟಣೆ

ಉಡುಪಿ ತಾಲ್ಲೂ ಸಂಖ್ಯ 59ನೇ ಪಾರಂಬಳ್ಳಿ ಗ್ರಾಮದ ಸಾಲಿಕೇರಿಯಲ್ಲಿರುವ ವೀರಭದ್ರ ದೇವಸ್ಥಾನದ ಟ್ರಸ್ಟಿಯಾಗಿ 5 ವರ್ಷಗಳ ಅವಧಿಗೆ ತಾರೀಕು 3-9-45ರಂದ ನನ್ನನ್ನು ಹಿಂದೂ ರಿಲಿಜಿಯಸ್ ಎಂಡೋಮೆಂಟ್ಸಿಂದ ನೇಮಿಸೋಣಾಗಿತ್ತು. ಈ ಅವಧಿಯು ತಾರೀಕು 3-9-50ಕ್ಕೆ ಅಂತ್ಯವಾಗಿತ್ತು. ಇಷ್ಟರೊಳಗೆ ನನ್ನ ದೇಣಿಗೆಗಳನ್ನು ಕಟ್ಟದ್ದರಿಂದ ನಾನು ಈ ನನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುತ್ತೇನೆ. ಆದ್ದರಿಂದ ನಾನು ಇನ್ನು ಮುಂದೆ ಸದ್ರಿ ವೀರಭದ್ರ ದೇವಸ್ಥಾನದ ಟ್ರಸ್ಟಿಯಾಗಿರುವುದಿಲ್ಲ ಎಂಬುದನ್ನು ಸರ್ವರೂ ತಿಳಿದಿರಬೇಕು.

● ಈ ಎಡಕ್ಕೆ ಹೆಬ್ಬೆಟ್ಟಿನ ಗುರ್ತು
ಸಾಲಿಕೇರಿ ಎಸ್. ಕೃಷ್ಣ ಶೆಟ್ಟಿಗಾರ್
ಮೆನೇಜರ್-ಟ್ರಸ್ಟಿ.

ಲಕ್ಷ್ಮೀ
ಸೆಂಟ್ರಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬೆಳ್ಳುಪು, ಆರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು,ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಕರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಪಾತ್ರೆ ಯಾಗಿ ಗುಣಹೊಂದುವುದು.

ಹಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರ

ಪಾಶ್ಚಾತ್ಯ ವಿದ್ವಾಂಸರಾದ ಮ್ಯಾಕ್ಸ್ ಮುಲ್ಲರ್‌ರವರು ಭಾರತೀಯರ ಕಲಾಭಿರುಚಿಯ ವಿಷಯವಾಗಿ ಅಭಿಪ್ರಾಯ ಪಟ್ಟಿದ್ದಾರೆ. ಅವರೆಂದ ಮಾತು: "ಭಾರತೀಯರಿಗೆ ಕಲೆ ಅಥವಾ ಸೌಂದರ್ಯ ಎಂಬ ವಿಷಯಗಳಲ್ಲಿ ಸ್ವಲ್ಪವಾದರೂ ಪರಿಜ್ಞಾನವೇ ಇಲ್ಲ" ಎಂದು. ಭಾರತವನ್ನು ಸುತ್ತಾಡಿ ಬಂದ ಅಥವಾ ಭಾರತದ ಚರಿತ್ರೆಯನ್ನು ಕೂಲಂಕುಷವಾಗಿ ಓದಿದ ಯಾವನಾದರೂ ಮ್ಯಾಕ್ಸ್‌ಮುಲ್ಲರ್‌ರವರು ಆಡಿದ ಮಾತು ಅಸತ್ಯವೆಂದು ಅಭಿಪ್ರಾಯ ಪಡುತ್ತಾನೆ. ಭಾರತದ ಪೂರ್ವ ನಮ್ಮ ಕಲಾಭಿರುಚಿಯು ಮತ್ತು ಕಲಾ ನೈಪುಣ್ಯತೆಯ ಮಹಾಸ್ಮಾರಕಗಳು ತುಂಬಿವೆ. ಒಂದು ರೀತಿಯಲ್ಲಿ ಹೇಳುವುದಾದರೆ ಭಾರತದ ಸಂಸ್ಕೃತಿಯ ಪ್ರತಿನಿಧಿಗಳಾಗಿ ತೋರುತ್ತವೆ ನಮ್ಮ ಕಲಾಸ್ಮಾರಕಗಳು.

ಭಾರತದಲ್ಲಿ ಕಲೋಪಾಸಕರಿಗೂ, ಕಲಾವಿದರಿಗೂ ಹೆಚ್ಚಿನ ಸ್ಥಾನಮಾನಗಳಿತ್ತು. ಈಗಲೂ ಇಲ್ಲವೆನ್ನುವಂತಿಲ್ಲ ಕಲೆಯನ್ನು ನಾನಾ ರೂಪಗಳಲ್ಲಿಯೂ ಸಾಧಿಸಿ ನಮ್ಮ ಕಲಾಜ್ಞಾನವನ್ನು ಪ್ರಪಂಚಕ್ಕೆ ತೋರಿಕೊಟ್ಟಿದ್ದಾರೆ ಭಾರತದ ಕಲಾವಿದರು. ಸಾಹಿತ್ಯ, ಚಿತ್ರಶಿಲ್ಪ, ನಾಟ್ಯ ಮತ್ತು ಗಾಯನ, ಈ ಎಲ್ಲ ರೂಪಗಳಲ್ಲಿಯೂ ಅಸಾಧಾರಣ ಪ್ರತಿಭೆಯನ್ನು ಮೆರೆದು ನಮ್ಮ ಭಾರತದ ಇತಿಹಾಸದ ಸಂಸ್ಕೃತಿಗೆ ದಿಗ್ದರ್ಶಿಗಳಾಗಿದ್ದಾರೆ ನಮ್ಮ ಕಲಾವಿದರು. ಒಂದು ಮಾತಿನಲ್ಲಿ ಹೇಳುವುದಾದರೆ ನಮ್ಮ ಕಲಾಭಿರುಚಿ ಮತ್ತು ನೈಪುಣ್ಯತೆ ಯಾವ ದೇಶದ ಕಲಾಭಿರುಚಿಗೂ ನೈಪುಣ್ಯತೆಗೂ ಎಂದೂ ಕಡಿಮೆಯೆಂದೆನಿಸಿಲ್ಲ.

ಭಾರತದ ಇತಿಹಾಸವು ಸುಮಾರು ಕ್ರಿ. ಪೂ. 3000 ವರ್ಷಗಳ ಪರಿವಿಗೂ ದೊರೆಯುತ್ತದೆ. ಅಂದಿನಿಂದಲೇ ನಮ್ಮ ಕಲೆಯ ಇತಿಹಾಸವನ್ನು ಎಣಿಸಬಹುದು. ಅದಲಿನಿಂದಲೂ ನಮ್ಮ ಜನರು ಕತ್ತಲೆಯವಿಗಳು. ಅಧ್ಯಾತ್ಮಿಕ ಮನೋವೃತ್ತಿಯುಳ್ಳವರು. ತಮ್ಮ ಈ ಮನೋವೃತ್ತಿಯನ್ನು ವಿಕಸನಗೊಳಿಸಲು ಕಲೆಯ ರೂಪಗಳನ್ನೇ ಸಲಕರಣೆಗಳನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ಧರ್ಮಕಗಳ ಜನ್ಮಸ್ಥಾನವಾದ ಈ ಭಾರತ, ಅನೇಕ ಮತೀಯರ ತಾಯ್ನಾಡಾಗಿ ಆಯಾ ಮತಗಳ ಭಾವನೆಗಳನ್ನು ವ್ಯಕ್ತಮಾಡುವ ರೀತಿಯ ಕಲೆಗಳಿಗೆ ಉತ್ತೇಜನಕೊಡುತ್ತಾ ಕಲೆಯನ್ನೇ ಸಲಕರಣೆಗಳನ್ನಾಗಿ ಮಾಡಿಕೊಂಡಿದೆ. ಬ್ರಾಹ್ಮಣ ಮತೀಯರು ದೇವಸ್ಥಾನಗಳನ್ನು ಕಟ್ಟಿದರು ಬೌದ್ಧ ಮತೀಯರು ವಿಹಾರಗಳನ್ನೂ ಸ್ತೂಪಗಳನ್ನೂ ಕಟ್ಟಿದರು, ಜೈನ ಮತದವರು ಬಸ್ತಿಗಳನ್ನು ಕಟ್ಟಿದರು, ಇಸ್ಲಾಂ ಬಂದ ನೆಲಸಿದ ಮುಸ್ಲಿಮರು ಮಸೀದಿಗಳನ್ನೂ ಗೋರಿಗಳನ್ನು ಕಟ್ಟಿದರು. ಈ ರೀತಿಯಲ್ಲಿ ಅವರವರ ವೈಯಕ್ತಿಕ ಭಾವನೆಗಳನ್ನು ರೂಪುಗೊಳಿಸುವುದಕ್ಕಾಗಿಯೂ ಸುಂದರ ಕಟ್ಟಡಗಳನ್ನು ಕಟ್ಟಿ ಕಲೆಗೆ ಪರೋಕ್ಷವಾಗಿ ಉತ್ತೇಜನ ಮಾಡಿದರು ನಮ್ಮ ಭಾರತೀಯರು. ತಮ್ಮತಮ್ಮ ಆರಾಧನೆಗು ಮೂರ್ತಿಗಳನ್ನು ಸಾಹಿತ್ಯದಲ್ಲಿ ವರ್ಣಿಸಿದರು ಚಿತ್ರಗಳಲ್ಲಿ ಚಿತ್ರಿಸಿದರು, ಶಿಲ್ಪದಲ್ಲಿ ತೋರಿಸಿದರು, ನರ್ತನಮಾಡಿ ವೇಷ್ಟಿಸಿಕೊಂಡರು, ಗಾಯನಮಾಡಿ ವಶಪಡಿಸಿಕೊಂಡರು. ಎಂದರೆ ಎಲ್ಲ ವಿಧದಲ್ಲಿಯೂ ನಮ್ಮ ಜನರು ಕಲೆಗಳನ್ನು ಉಪಯೋಗಿಸಿಕೊಂಡು ನಡೆದಿದ್ದಾರೆ ಹೀಗಿರುವಲ್ಲಿ ಭಾರತೀಯರಿಗೆ ಕಲಾ ಜ್ಞಾನವಿಲ್ಲವೆಂಬುದು ಅಸಮಂಜಸವಲ್ಲವೆ?

ಸಿಂಹಾವಲೋಕನ ರೀತಿಯಿಂದ ಭಾರತ ಪ್ರಾಚೀನ ಶಿಲ್ಪಕಲೆಯನ್ನು ನೋಡುವುದಾದರೆ; ಎರಡು ಪಂಗಡಗಳಾಗಿ ವಿಭಾಗಿಸಬಹುದು. (ಈ ಲೇಖನದಲ್ಲಿ ಶಿಲ್ಪಕಲೆ ಎಂಬ ಪದವು ಆರ್ಧಾಪ್ತ ಶೈತ್ಯನೆಯ ಶಿಲಸಕ್ಕೂ ಮತ್ತು ಕಟ್ಟಡಗಳ ಕಲಾಕಕ್ಕೂ ಅನ್ವಯವಾಗುತ್ತದೆ) ಮೊದಲನೆಯದು ಕಲ್ಲಿನ ಗುಡ್ಡಗಳಲ್ಲಿ ಗುಹೆಗಳಂತೆ ಕೊರೆದು ನಿರ್ಮಿಸಿದ ಕಲಾ ಕೃತಿಗಳು; ಎರಡನೆಯದು ಕಲ್ಲಿನಿಂದ ವಿಗ್ರಹಗಳನ್ನೂ ಬಿಡಿಸುವ ರೀತಿಯಲ್ಲಿ ದೊಡ್ಡ ದೊಡ್ಡ ಕಲ್ಲಿನ ಗುಡ್ಡಗಳಿಂದ ಕಟ್ಟಡಗಳನ್ನು ಬಿಡಿಸಿ ಮಾಡಿದ ಕಲಾಕೃತಿಗಳು. ಕಾರ್ಲೆ, ಅಜಂತ, ಬಾದಾಮಿ ಮತ್ತು ಬಾಗ್ ಎಂಬ ಸ್ಥಳಗಳಲ್ಲಿನ ಗುಹಾಂತ ದೇವಾಲಯಗಳು ಎರಡನೆಯ ಪಂಗಡಕ್ಕೆ ಉದಾಹರಣೆಗಳು ಈ ಅದ್ಭುತವಾದ ಕಲಾ-ಕೃತಿಗಳ ನಿರ್ಮಾಣ ಕಲಸದಲ್ಲಿ ತೋರಿಸಿರಬೇಕಾದ ಕಲೆಗಾರನ ಸಹನಾಶಕ್ತಿ ಶ್ಲಾಘನೀಯವಾದುದು.

ಅಶೋಕನ ಕಾಲದಲ್ಲಿ ಕಲ್ಲಿನಲ್ಲಿ ಒಂದು ರಲ್ಲೇ ಅಲ್ಲದೆ ಲೋಹದಲ್ಲಿಯೂ ಕೆಲಸ ಮಾಡಿದಂತೆ ನಮಗೆ ಆಧಾರಗಳು ಸಿಕ್ಕಿವೆ. ಸಾರನಾಥ್, ಕಾಶಿ ಮುಂತಾದಲ್ಲಿನ ಕಲ್ಲಿನಮತ್ತು ಲೋಹದ ಸ್ತಂಭಗಳು 40-50 ಅಡಿಗಳಷ್ಟು ಎತ್ತರವಿದ್ದಾಗಿ ನಿರ್ಮಾಣ ಮಾಡಲ್ಪಟ್ಟಿವೆ. ಆತನ ಕಾಲದ ಬೌದ್ಧ ವಿಹಾರಗಳಲ್ಲಿಯೂ, ಸ್ತೂಪಗಳ ಮೇಲೂ ಕತ್ತಲ್ಪಟ್ಟಿರುವ ಶಿಲ್ಪಗಳ ಕೆಲವೊಂದು ವಿಗ್ರಹಗಳು ಸುಂದರ ಕಲಾಕೃತಿಗಳಾಗಿವೆ ಅಶೋಕನು ಬೌದ್ಧ ಮತ ಪ್ರಸಾರಣೆಗಾಗಿ ಮಾತಿನ ಕಲೆಯ ಜೊತೆಗೂ ಉತ್ತೇಜನ ಕೊಟ್ಟಿದ್ದ. ಸಾಂಚಿಯ ಬಳಿಯ ಸ್ತೂಪವು ಪ್ರಖ್ಯಾತವಾದ ಬೌದ್ಧ ಕಲೆಯ ಸ್ಮಾರಕವಾಗಿದೆ. ಈ ಸ್ತೂಪದ ಮಹಾದ್ವಾರಗಳು ಕಲೆಯ ದೃಷ್ಟಿಯಿಂದ ಉತ್ತಮ ಕೃತಿಗಳು. ಈ ದ್ವಾರಗಳಲ್ಲಿ ಸಣ್ಣ ಪ್ರಮಾಣಗಳಲ್ಲಿ ಜಾತಕ ಕಥೆಗಳನ್ನು ಚಿತ್ರಿಸಿ ಕೆತ್ತಿದ್ದಾರೆ. ಈ ಚಿತ್ರಗಳು ನೈಪುಣತೆಯಿಂದ ಕೂಡಿ ರಮಣೀಯವಾಗಿವೆ. ಇವಂತೆಯೇ ಭಾರ್ಹುತ್ ಸ್ತೂಪವೂ ಬೌದ್ಧಕಲೆಯ ಕೃತಿನಿಧಿಯಾಗಿದೆ.

ಕ್ರಿ. ಶ. 100 ರಿಂದ 600 ರ ವರೆವಿಗೆ ಇದ್ದ ಕಲಾವಿದರನ್ನು ಎರಡು ಪಂಗಡಗಳಾಗಿ ವಿಭಾಗಿಸಬಹುದು—ಮಧುರಾ ಮತ್ತು ಗಾಂಧಾರಾ ಪಂಗಡದವರೆಂದು ಮೊದಲನೆಯ ಪಂಗಡದವರು ಹೆಚ್ಚಾಗಿ ಬೌದ್ಧಮತೀಯ ಚಿತ್ರಗಳನ್ನು ನಿರ್ಮಿಸಿದ್ದಾರೆ. ಇವರು ಕೆತ್ತಿರುವ ಬುದ್ಧನ ಅನೇಕ ಮೂರ್ತಿಗಳು ಈಗಲೂ ಪ್ರಖ್ಯಾತವಾಗಿವೆ. ಇವರ ಶೈಲಿ ಬಹಳ ಉತ್ತಮವಾದು

ಭಾರತೀಯ ಕಲಾ ಸಂಪತ್ತು

ವರು ಆಡಿದ ಮಾತು ಅಸತ್ಯವೆಂದು ಅಭಿಪ್ರಾಯ ಪಡುತ್ತಾನೆ. ಭಾರತದ ಪೂರ್ವ ನಮ್ಮ ಕಲಾಭಿರುಚಿಯು ಮತ್ತು ಕಲಾ ನೈಪುಣ್ಯತೆಯ ಮಹಾಸ್ಮಾರಕಗಳು ತುಂಬಿವೆ. ಒಂದು ರೀತಿಯಲ್ಲಿ ಹೇಳುವುದಾದರೆ ಭಾರತದ ಸಂಸ್ಕೃತಿಯ ಪ್ರತಿನಿಧಿಗಳಾಗಿ ತೋರುತ್ತವೆ ನಮ್ಮ ಕಲಾಸ್ಮಾರಕಗಳು.

ಭಾರತದಲ್ಲಿ ಕಲೋಪಾಸಕರಿಗೂ, ಕಲಾವಿದರಿಗೂ ಹೆಚ್ಚಿನ ಸ್ಥಾನಮಾನಗಳಿತ್ತು. ಈಗಲೂ ಇಲ್ಲವೆನ್ನುವಂತಿಲ್ಲ ಕಲೆಯನ್ನು ನಾನಾ ರೂಪಗಳಲ್ಲಿಯೂ ಸಾಧಿಸಿ ನಮ್ಮ ಕಲಾಜ್ಞಾನವನ್ನು ಪ್ರಪಂಚಕ್ಕೆ ತೋರಿಕೊಟ್ಟಿದ್ದಾರೆ ಭಾರತದ ಕಲಾವಿದರು. ಸಾಹಿತ್ಯ, ಚಿತ್ರಶಿಲ್ಪ, ನಾಟ್ಯ ಮತ್ತು ಗಾಯನ, ಈ ಎಲ್ಲ ರೂಪಗಳಲ್ಲಿಯೂ ಅಸಾಧಾರಣ ಪ್ರತಿಭೆಯನ್ನು ಮೆರೆದು ನಮ್ಮ ಭಾರತದ ಇತಿಹಾಸದ ಸಂಸ್ಕೃತಿಗೆ ದಿಗ್ದರ್ಶಿಗಳಾಗಿದ್ದಾರೆ ನಮ್ಮ ಕಲಾವಿದರು. ಒಂದು ಮಾತಿನಲ್ಲಿ ಹೇಳುವುದಾದರೆ ನಮ್ಮ ಕಲಾಭಿರುಚಿ ಮತ್ತು ನೈಪುಣ್ಯತೆ ಯಾವ ದೇಶದವರ ಕಲಾಭಿರುಚಿಗೂ ನೈಪುಣ್ಯತೆಗೂ ಎಂದೂ ಕಡಿಮೆಯೆಂದೆನಿಸಿಲ್ಲ.

ಭಾರತದ ಇತಿಹಾಸವು ಸುಮಾರು ಕ್ರಿ. ಪೂ. 3000 ವರ್ಷಗಳ ಪರಿವಿಗೂ ದೊರೆಯುತ್ತದೆ. ಅಂದಿನಿಂದಲೇ ನಮ್ಮ ಕಲೆಯ ಇತಿಹಾಸವನ್ನು ಎಣಿಸಬಹುದು. ಅದಲಿನಿಂದಲೂ ನಮ್ಮ ಜನರು ಕತ್ತಲೆಯವಿಗಳು. ಅಧ್ಯಾತ್ಮಿಕ ಮನೋವೃತ್ತಿಯುಳ್ಳವರು. ತಮ್ಮ ಈ ಮನೋವೃತ್ತಿಯನ್ನು ವಿಕಸನಗೊಳಿಸಲು ಕಲೆಯ ರೂಪಗಳನ್ನೇ ಸಲಕರಣೆಗಳನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ಧರ್ಮಕಗಳ ಜನ್ಮಸ್ಥಾನವಾದ ಈ ಭಾರತ, ಅನೇಕ ಮತೀಯರ ತಾಯ್ನಾಡಾಗಿ ಆಯಾ ಮತಗಳ ಭಾವನೆಗಳನ್ನು ವ್ಯಕ್ತಮಾಡುವ ರೀತಿಯ ಕಲೆಗಳಿಗೆ ಉತ್ತೇಜನಕೊಡುತ್ತಾ ಕಲೆಯನ್ನೇ ಸಲಕರಣೆಗಳನ್ನಾಗಿ ಮಾಡಿಕೊಂಡಿದೆ. ಬ್ರಾಹ್ಮಣ ಮತೀಯರು ದೇವಸ್ಥಾನಗಳನ್ನು ಕಟ್ಟಿದರು ಬೌದ್ಧ ಮತೀಯರು ವಿಹಾರಗಳನ್ನೂ ಸ್ತೂಪಗಳನ್ನೂ ಕಟ್ಟಿದರು, ಜೈನ ಮತದವರು ಬಸ್ತಿಗಳನ್ನು ಕಟ್ಟಿದರು, ಇಸ್ಲಾಂ ಬಂದ ನೆಲಸಿದ ಮುಸ್ಲಿಮರು ಮಸೀದಿಗಳನ್ನೂ ಗೋರಿಗಳನ್ನು ಕಟ್ಟಿದರು. ಈ ರೀತಿಯಲ್ಲಿ ಅವರವರ ವೈಯಕ್ತಿಕ ಭಾವನೆಗಳನ್ನು ರೂಪುಗೊಳಿಸುವುದಕ್ಕಾಗಿಯೂ ಸುಂದರ ಕಟ್ಟಡಗಳನ್ನು ಕಟ್ಟಿ ಕಲೆಗೆ ಪರೋಕ್ಷವಾಗಿ ಉತ್ತೇಜನ ಮಾಡಿದರು ನಮ್ಮ ಭಾರತೀಯರು. ತಮ್ಮತಮ್ಮ ಆರಾಧನೆಗು ಮೂರ್ತಿಗಳನ್ನು ಸಾಹಿತ್ಯದಲ್ಲಿ ವರ್ಣಿಸಿದರು ಚಿತ್ರಗಳಲ್ಲಿ ಚಿತ್ರಿಸಿದರು, ಶಿಲ್ಪದಲ್ಲಿ ತೋರಿಸಿದರು, ನರ್ತನಮಾಡಿ ವೇಷ್ಟಿಸಿಕೊಂಡರು, ಗಾಯನಮಾಡಿ ವಶಪಡಿಸಿಕೊಂಡರು. ಎಂದರೆ ಎಲ್ಲ ವಿಧದಲ್ಲಿಯೂ ನಮ್ಮ ಜನರು ಕಲೆಗಳನ್ನು ಉಪಯೋಗಿಸಿಕೊಂಡು ನಡೆದಿದ್ದಾರೆ ಹೀಗಿರುವಲ್ಲಿ ಭಾರತೀಯರಿಗೆ ಕಲಾ ಜ್ಞಾನವಿಲ್ಲವೆಂಬುದು ಅಸಮಂಜಸವಲ್ಲವೆ?

ಸಿಂಹಾವಲೋಕನ ರೀತಿಯಿಂದ ಭಾರತ ಪ್ರಾಚೀನ ಶಿಲ್ಪಕಲೆಯನ್ನು ನೋಡುವುದಾದರೆ; ಎರಡು ಪಂಗಡಗಳಾಗಿ ವಿಭಾಗಿಸಬಹುದು. (ಈ ಲೇಖನದಲ್ಲಿ ಶಿಲ್ಪಕಲೆ ಎಂಬ ಪದವು ಆರ್ಧಾಪ್ತ ಶೈತ್ಯನೆಯ ಶಿಲಸಕ್ಕೂ ಮತ್ತು ಕಟ್ಟಡಗಳ ಕಲಾಕಕ್ಕೂ ಅನ್ವಯವಾಗುತ್ತದೆ) ಮೊದಲನೆಯದು ಕಲ್ಲಿನ ಗುಡ್ಡಗಳಲ್ಲಿ ಗುಹೆಗಳಂತೆ ಕೊರೆದು ನಿರ್ಮಿಸಿದ ಕಲಾ ಕೃತಿಗಳು; ಎರಡನೆಯದು ಕಲ್ಲಿನಿಂದ ವಿಗ್ರಹಗಳನ್ನೂ ಬಿಡಿಸುವ ರೀತಿಯಲ್ಲಿ ದೊಡ್ಡ ದೊಡ್ಡ ಕಲ್ಲಿನ ಗುಡ್ಡಗಳಿಂದ ಕಟ್ಟಡಗಳನ್ನು ಬಿಡಿಸಿ ಮಾಡಿದ ಕಲಾಕೃತಿಗಳು. ಕಾರ್ಲೆ, ಅಜಂತ, ಬಾದಾಮಿ ಮತ್ತು ಬಾಗ್ ಎಂಬ ಸ್ಥಳಗಳಲ್ಲಿನ ಗುಹಾಂತ ದೇವಾಲಯಗಳು ಎರಡನೆಯ ಪಂಗಡಕ್ಕೆ ಉದಾಹರಣೆಗಳು ಈ ಅದ್ಭುತವಾದ ಕಲಾ-ಕೃತಿಗಳ ನಿರ್ಮಾಣ ಕಲಸದಲ್ಲಿ ತೋರಿಸಿರಬೇಕಾದ ಕಲೆಗಾರನ ಸಹನಾಶಕ್ತಿ ಶ್ಲಾಘನೀಯವಾದುದು.

ಅಶೋಕನ ಕಾಲದಲ್ಲಿ ಕಲ್ಲಿನಲ್ಲಿ ಒಂದರಲ್ಲೇ ಅಲ್ಲದೆ ಲೋಹದಲ್ಲಿಯೂ ಕೆಲಸ ಮಾಡಿದಂತೆ ನಮಗೆ ಆಧಾರಗಳು ಸಿಕ್ಕಿವೆ. ಸಾರನಾಥ್, ಕಾಶಿ ಮುಂತಾದಲ್ಲಿನ ಕಲ್ಲಿನಮತ್ತು ಲೋಹದ ಸ್ತಂಭಗಳು 40-50 ಅಡಿಗಳಷ್ಟು ಎತ್ತರವಿದ್ದಾಗಿ ನಿರ್ಮಾಣ ಮಾಡಲ್ಪಟ್ಟಿವೆ. ಆತನ ಕಾಲದ ಬೌದ್ಧ ವಿಹಾರಗಳಲ್ಲಿಯೂ, ಸ್ತೂಪಗಳ ಮೇಲೂ ಕತ್ತಲ್ಪಟ್ಟಿರುವ ಶಿಲ್ಪಗಳ ಕೆಲವೊಂದು ವಿಗ್ರಹಗಳು ಸುಂದರ ಕಲಾಕೃತಿಗಳಾಗಿವೆ ಅಶೋಕನು ಬೌದ್ಧ ಮತ ಪ್ರಸಾರಣೆಗಾಗಿ ಮಾತಿನ ಕಲೆಯ ಜೊತೆಗೂ ಉತ್ತೇಜನ ಕೊಟ್ಟಿದ್ದ. ಸಾಂಚಿಯ ಬಳಿಯ ಸ್ತೂಪವು ಪ್ರಖ್ಯಾತವಾದ ಬೌದ್ಧ ಕಲೆಯ ಸ್ಮಾರಕವಾಗಿದೆ. ಈ ಸ್ತೂಪದ ಮಹಾದ್ವಾರಗಳು ಕಲೆಯ ದೃಷ್ಟಿಯಿಂದ ಉತ್ತಮ ಕೃತಿಗಳು. ಈ ದ್ವಾರಗಳಲ್ಲಿ ಸಣ್ಣ ಪ್ರಮಾಣಗಳಲ್ಲಿ ಜಾತಕ ಕಥೆಗಳನ್ನು ಚಿತ್ರಿಸಿ ಕೆತ್ತಿದ್ದಾರೆ. ಈ ಚಿತ್ರಗಳು ನೈಪುಣತೆಯಿಂದ ಕೂಡಿ ರಮಣೀಯವಾಗಿವೆ. ಇವಂತೆಯೇ ಭಾರ್ಹುತ್ ಸ್ತೂಪವೂ ಬೌದ್ಧಕಲೆಯ ಕೃತಿನಿಧಿಯಾಗಿದೆ.

ಕ್ರಿ. ಶ. 100 ರಿಂದ 600 ರ ವರೆವಿಗೆ ಇದ್ದ ಕಲಾವಿದರನ್ನು ಎರಡು ಪಂಗಡಗಳಾಗಿ ವಿಭಾಗಿಸಬಹುದು—ಮಧುರಾ ಮತ್ತು ಗಾಂಧಾರಾ ಪಂಗಡದವರೆಂದು ಮೊದಲನೆಯ ಪಂಗಡದವರು ಹೆಚ್ಚಾಗಿ ಬೌದ್ಧಮತೀಯ ಚಿತ್ರಗಳನ್ನು ನಿರ್ಮಿಸಿದ್ದಾರೆ. ಇವರು ಕೆತ್ತಿರುವ ಬುದ್ಧನ ಅನೇಕ ಮೂರ್ತಿಗಳು ಈಗಲೂ ಪ್ರಖ್ಯಾತವಾಗಿವೆ. ಇವರ ಶೈಲಿ ಬಹಳ ಉತ್ತಮವಾದು ದೊಂದೇ ಅಲ್ಲದೆ ಬಹು ವಿಧವಾದದೂ ಆಗಿ, ಸಾಮಾನ್ಯವಾಗಿ ಮುಂದೆ ಬಂದ ಕಲಾವಿದರಿಗೆ ಆದರ್ಶವಾಗಿತ್ತು. ಗಾಂಧಾರಾ ಪಂಗಡದವರು ಬಳಕೆಯಲ್ಲಿದ್ದ ಬೌದ್ಧ ಶೈಲಿಯೊಡನೆ ಗ್ರೀಕ್ ಮತ್ತು ರೋಮನರ ಸಂಪ್ರದಾಯಗಳನ್ನೂ ಬೆರಸಿ ಒಂದು ಹೊಸ ರೀತಿಯ ಕಲಾದೃಷ್ಟಿಯನ್ನು ನಮಗೆ ಕೊಡಿಸರು. ಇವರ ಕೆತ್ತಿ ವಿಷ್ಯಾದಲ್ಲೆಲ್ಲಾ ಹಬ್ಬಿತ್ತು.

ಸುಮಾರು 7ನೇ ಶತಮಾನದ ಹೊತ್ತಿಗೆ ಎಂದರೆ ಗುಪ್ತರ ಕಾಲದಲ್ಲಿ ಭಾರತೀಯ ಕಲೆಗೆ ಹೆಚ್ಚಾದ ಪ್ರೋತ್ಸಾಹ ದೊರೆತು, ಕಲಾಭಿವಾನಿಗಳಾದ ರಾಜರ ಪೋಷಣೆಯಲ್ಲಿ ಕಲೆಯೂ ತನ್ನ ಸ್ವರ್ಣಯುಗವನ್ನೇ ಕಂಡಿತು. ಗುಪ್ತರ ಆಡಳಿತ ಕಾಲದಲ್ಲಿ ಅಂದೂ ಮತ್ತು ಬೌದ್ಧ ಮತಗಳೆರಡಕ್ಕೂ ಸಂಬಂಧಪಟ್ಟ ದೇವಾಲಯಗಳೂ ಕಟ್ಟಡಗಳೂ ನಿರ್ಮಾಣವಾದುವು. ಅಜಂತ ಮತ್ತು ಎಲ್ಲೋರಗಳಲ್ಲಿನ ಕಲಾಕೃತಿಗಳು ಈ ಕಾಲಕ್ಕೆ ಸೇರಿದುವು. ಈ ಕೃತಿಗಳ ವಿಷಯವಾಗಿ ಎಷ್ಟು ವರ್ಣಿಸಿದರೂ ಕಡಿಮೆ. ಪಾಶ್ಚಾತ್ಯರ ಮನಸೆಳೆದು ಬೆರಗು ಮಾಡಿದ ಕಲೆಯ ಸ್ಥಾನಗಳಾಗಿವೆ ಅಜಂತ ಮತ್ತು ಎಲ್ಲೋರ.

ಉತ್ತರ ಹಿಂದೂಸ್ಥಾನದಲ್ಲಿ ಕಲೆಯು ಬೆಳೆದಂತೆ ದಕ್ಷಿಣದಲ್ಲಿಯೂ ಕಲೆಗೆ ಉತ್ತೇಜಕವಾಗಿ ಹಲವಾರು ರಾಜ ಸಂತತಿಗಳು ತಲೆಯೆತ್ತಿ, ರಾಜ್ಯಗಳನ್ನು ಕಟ್ಟಿದವು. ಅವರಲ್ಲಿ ಮುಖ್ಯರಾದವರು ಬಾದಾಮಿಯ ಚಾಲುಕ್ಯರು ಗೋದಾವರಿ ಮತ್ತು ಕೃಷ್ಣ ನದೀ ತೀರಗಳಲ್ಲಿನ ವೆಲ್ಲವರು ದ್ರಾವಿಡಮಂದ್ರದ ಚೋಳ್ಯರು ಮತ್ತು ರಾಷ್ಟ್ರಕೂಟರು. ದಕ್ಷಿಣ ದೇಶದಲ್ಲಿನ ಅನುಪಮವಾದ ಗುಹಾಂತದೇವಾಲಯಗಳು ಅವರಿಂದಲೇ ನಿರ್ಮಿತವಾಗಿವೆ. ಇವೆಲ್ಲವೂ ಸುಮಾರು ಕ್ರಿ. ಪೂ. ಒಂದನೇ ಶತಮಾನದಲ್ಲಿ ನಿರ್ಮಾಣ ಮಾಡಲ್ಪಟ್ಟವು. ಅನಂತ ಕುಮಾರ ಸ್ವಾಮಿಯವರು ಇವೆಲ್ಲ ಕಲಾಕೃತಿಗಳನ್ನು ಕುರಿತು, ಇವು the most intimate and enchanting of any in India ಎಂದೂ, Sculpture became art for the first time ಎಂದೂ ಹೇಳಿದ್ದಾರೆ. ಕಲ್ಯಾಣ ರಾಜ್ಯಗಳ ಕಲಾಕೃತಿಗಳಾದ ಮಹಾಬಲಿಪುರದ "ಏಳು ರಥಗಳು" ಜಗತ್ಪ್ರಸಿದ್ಧವಾಗಿವೆ. ಇವೆಲ್ಲವೂ ಶೈಲಿಯೇ ಮುಂದೆ

[ಪರಿಷ್ಠ ನೋಡಿರಿ]

ಹೂಡಿಕೆಗಾಗಿ
ವಿಚಾರಿಸಿರಿ
ನೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೋ, ಲಿಮಿಟೆಡ್
(ಸ್ಥಾಪನೆ: 1934)
ಜೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್
ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.
ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.
ಕೇಂದ್ರ ಕಾರ್ಯಾಲಯ:
"ಯುನ್ಯಾಟೆಡ್" ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

ಗುರುವಾರ, ಉಡುಪಿ, ೨೫-೧ ೪೯

ಅನ್ನಬ್ರಹ್ಮದ ದೇಗುಲದಲ್ಲಿ

ಆಹಾರ ಬಿಕ್ಕಟ್ಟನ್ನು ಮಣ್ಣಾ ಸಮಸ್ಯೆಯೊಂದು ದೇಶಾದ್ಯಂತ ಕಳವಳವನ್ನುಂಟುಮಾಡಿದೆ ೨೫ ಸೇರಿಗೆ ಒಮ್ಮೆಯೇ ಕಡಿತವನ್ನುಂಟುಮಾಡುವ ಸರಕಾರದ ಘೋಷಣೆ ನಿಜವಾಗಿಯೂ ವಿಷಾದಕರವಾಗಿದೆ ಆಹಾರ ಪರಿಸ್ಥಿತಿಯು ಸುಧಾರಿಸುವ ಬದಲು ಹೀಗೆ ಕನಿಷ್ಠ ಪರಿಸ್ಥಿತಿಗೆ ಬರುವದು ನೋಡಿದರೆ ಸಂಗತಿ. ಹೊರದೇಶದಲ್ಲಿ ಯದ್ಧದ ಭೀತಿ ವ್ಯಾಪಿಸಿರುವದರಿಂದಲೂ, ತರಿಸಿಕೊಳ್ಳಲನುಕೂಲವಾದ ವಾತಾವರಣವಿಲ್ಲದಿರುವದರಿಂದಲೂ ನಾವು ಕೊಂಚ ತ್ಯಾಗಮಾಡಲೇಬೇಕಾಗುವದೆಂದು ಸುಸ್ಪಷ್ಟವಾಗಿ ಆಗಾಗಲೇ ಘೋಷಣೆ ಹೇಳಿರುತ್ತಿರುವಂಥ ಬರಬಹುದಾದ ಭಯಂಕರ ಕೊರತೆಯ ದೂರದೃಷ್ಟಿಯ ಸ್ಪಷ್ಟತೆ ಕೊಡೇ ಈ ರೀತಿಯ ಕಡಿತವನ್ನು ಅನಿವಾರ್ಯವಾಗಿ ಮಾಡಲಾಗಿದೆ ಎನ್ನುವದು ಮನಸ್ಸಿನಯವರ ವಾದಸರಣಿಯಾಗಿರುತ್ತದೆ.

ಮನಸ್ಸಿನವರು ಕೊಡಬಹುದಾದ ಕಾರಣಗಳು ಯಥಾರ್ಥವಾಗಿರಬಹುದಾದರೂ ಇಂದಿನ ಆಹಾರ ಹಂಚುವಿಕೆಯ ಘೋಷಣೆಯಲ್ಲಿ, ಕೇಂದ್ರಕ್ಕೂ ಪ್ರಾಂತೀಯ ಸರಕಾರಕ್ಕೂ ಏಕವಾಕ್ಯತೆಯ ಘೋಷಣೆಯಿಲ್ಲವೆ ಇಂತಹ ಸಮಸ್ಯೆ ಉದ್ಭವಿತವಾಗಿರುವದನ್ನು ನಾವು ಎದುರಿಸುವ ಬಗೆಯ ಬಗ್ಗೆ ಒಂದು ಕೊರತೆಯ ಬಿಕ್ಕಟ್ಟನ್ನು ಲಕ್ಷಿಸಿ ಮುಂಬಯಿ ಸರಕಾರ ಮೊದಲೇ 25% ಕಡಿತವನ್ನು ಮಾಡಿತು. ವತ್ತೆ ಮನಸ್ಸಿನವರು ಹೃದಯ ನಿವೇದನೆಯನ್ನು ಮಾಡಿಕೊಂಡರು. ಆಂದರೆ ಕೇಂದ್ರಕ್ಕೂ ಪ್ರಾಂತೀಯ ಸಂಸ್ಥಾನಕ್ಕೂ ಇರುವ ಪರಸ್ಪರ ಶೀಲನೆ ಸಮಗಲಿಯಲ್ಲಿ ಬೇರೆ ಉದಾಹರಣೆ ಬೇಡ.

ವಿದ್ಯಾಸಿನ ಹೆಜ್ಜೆಬರಹವೂ ಆಷ್ಟೆ! ಈ ವರ್ಷ ಕಟ್ಟಿನ ಆದಾಯದ ಗಂಡಾಂತರಕ್ಕೆ ನಾವು ಒಳಗಾಗಿ ಎಂದವರೇ ಇಂದು 1 1 ಕೋಟಿ ಟನ್ ಕೊರತೆಯಾಗುವದೆಂದು ಪ್ರಕಟಣೆ ಹೊರಡಿಸಿದ್ದಾರೆ. ಹಳ್ಳಿಯ ಹಸುಗಳ ರದ್ದತಿಯ ಮುನ್ಸೂಚನೆಯಲ್ಲದ ಧೇನಿಯಿಂದ ಸರಕಾರ ೪೦೦ ಗಂಡಾಂತರ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಈಗಾಗಲೇ ಹಳ್ಳಿಯಲ್ಲಿ ಆಕ್ಕಿಮುಡಿಗೆ ಮಾನವತ್ತಂ ವರೆಗೆ ಬೆಲೆಬಂದಿದೆ ಶ್ರೀಮಂತರಾದವರು ಅಕ್ಕಿಯನ್ನು ಒಟ್ಟು ಹಾಕಿ ಹೆಳ್ಳಿಗರನ್ನು ಹಣ್ಣು ಮಾಡಲಿದ್ದಾರೆ ಲಾಭಬಡಕರನ್ನೂ, ಬ್ಲಾಕ್‌ಮಾರ್ಕೆಟ್ ಮಾಡುವವರನ್ನೂ ಸರಕಾರವೇ ನಿಲುಭ ವರ್ಗಾರವನ್ನು ತೋರಿಸಿ ಕೂಟ್ಟಂತಾಗುವ ಲಕ್ಷಣ ಕಾಣುತ್ತಲಿದೆ. ಇದ್ದ ಆಹಾರವೂ ಈ ರೀತಿಯ ಲಾಭಬಡಕರ ಕೈಯೊಳಗೆ ಸೇರಿಕೊಂಡರೆ ಹಾಹಾಕಾರ ಏಳುವದರಲ್ಲಿ ಸಂಶಯವಿಲ್ಲ! ಸ್ವಲ್ಪವೇ ಸಮಯದಲ್ಲಿ ಹೊರದೇಶದ ವಾತಾವರಣ ಕಳಿಯಾದರೆ ಆಹಾರದ ಕೊರತೆ ಕೊಂಚ ಸೀಗ ಬಹುದಾದರೂ ಅದನ್ನೇ ನಾವು ನಂಬಿ ಕೂತಿರಲು ಸಾಧ್ಯವಿಲ್ಲ ಸರಕಾರ ವಿಶೇಷ ಮುಕ್ತುನರ್ಜಿ ವಹಿಸಬೇಕಾಗುತ್ತದೆ. ಬ್ಲಾಕ್ ಮಾರ್ಕೆಟ್‌ನಿಂದಾಗುವ ಆಹಾರದ ಅಭಾವವನ್ನು ಇಲ್ಲವೆ ಸೊಂದಲವನ್ನು ಬಗೆಹರಿಸಿ ಜನತೆಯು ಭರವಸೆಗೆ ಸರಕಾರ ಪಾತ್ರವಾಗಲೆಂದು ಹಾರೈಸೋಣ.

ದಿ|| ಥಕ್ಕರ ಬಾಪಾ

ಈ ವರ್ಷ ಯಾರಿಗೆ ಗೊತ್ತಿತ್ತು? ೮೨ ವರ್ಷಗಳ ತನಕ ತನ್ನ ದೇಹವನ್ನು ದೇಶದ ದೀನ ದರಿದ್ರರ ಸೇವೆಗಾಗಿ ಮುಡಿಪಾಗಿಟ್ಟ ಬಾಪಾವರ ಬದುಕಿನಾದರ್ಶವನ್ನು ಯಾರು ಮರೆಸಾರ? ವ್ಯಕ್ತಿಯೊಂದು ಕ್ಷಣವನ್ನೂ ಜನತೆಯ ಅವಶ್ಯ ಸೇವೆಗಾಗಿ ಸವೆಸಿದರು. ಹರಿಜನ ಸೇವಕರಾಗಿ, ಬಿಲ್ಲರ ಉದ್ಧಾರಕರಾಗಿ, ಭೂಕಂಪ, ಬಾಗಲಾಣಿಂದ ನಿರ್ಗತಿಕರಾದವರ ಸೇವೆಗಾಗಿ ದುಡಿದು ಜೀವನವನ್ನು ಸಾಫಲ್ಯಗೊಳಿಸಿದ ವೀರ ಬಾಪಾ. 'ಜನತೆಯ ಸೇವೆಯ ಜನಾರ್ದನನ ಸೇವೆ' ಎನ್ನುವ ಆದರ್ಶವನ್ನು ತೋರಿಸಿಕೊಟ್ಟರು. ಯಾವ ಫಲಾಪೆಕ್ಷೆಯೂ ಕೇರ್ಕಿಕವೂ ನೆಯೂ ಇಲ್ಲದೆ ಜನರ ಸೇವೆಯನ್ನು ಮಾಡುವುದೇ ಅವರ ಜೀವನದ ವೈಶಿಷ್ಟ್ಯ. ಸದ್ದಿಲ್ಲದೆ ಕಾರ್ಯವನ್ನು ಪೂರೈಸಿಕೊಳ್ಳುವ ನೀತಿಯನ್ನು ನಮಂದು ಬಾಪಾರ ಜೀವನದಿಂದ ಕಲಿಯಬೇಕಾಗಿದೆ ಘನವಾದ ಹುದ್ದೆಗಳನ್ನು ಚಪಲವನ್ನು ಬಿಟ್ಟು ಕೊಟ್ಟ ಸಾಮಾನ್ಯರು ಏಳ್ಗೆಯು ಉರಿತಾಗಿ ಅಹರ್ನಿಶಿ ಚಿಂತಿಸುವುದರಲ್ಲೇ ಅವರಿಗೆ ಅತ್ಯಸಂತೃಪ್ತಿ. ತಾನು ಮಾಡಬೇಕಾದದನ್ನು ಕಷ್ಟವಾಗಿಲಿ, ನಷ್ಟವಾಗಲಿ, ಮಾಡಿಯೇ ಬಿಡುವ ಛಲದವಾದ ಶ್ರದ್ಧವಂತರವು. ಬೇರೆಯವರ ಹಗ್ಗಳಿಕೆಯ ಸ್ತುತಿಗಳಿಲಿ ಟೀಕೆಗಳನ್ನಾಗಲೀ ಅವನ ಸ್ಸಿಗೆ ತಂದುಕೊಳ್ಳದ ತನ್ನ ಕರ್ತವ್ಯವನ್ನು ಮನಸ್ಸಾಕ್ಷಿಗೆ ಸರಿಯಾಗಿ ನಡೆಸಿಕೊಂಡು ಹೋಗುವದೇ ಅವರ ಮುಖ್ಯ ಸ್ವಭಾವವಾಗಿತ್ತು. ಗಣಿಲಜ್ಜೆ ಹಾಗೂ ಳಜಿರಲ್ಲಿ ಕಣ್ಣಾಟದ ವಿಜಾಪುರ ಜಿಲ್ಲೆಯಲ್ಲಿ ಒಟ್ಟಿದ ಬರಗಾಲದಲ್ಲಿ ನಿರ್ಗತಿಕರಿಂದ ಜನಕ್ಕೆ ಬಾಪಾ ಸಹಕಾರದ ಕೈನೀಡದರು. ಅವರ ಸೇವೆಯ ಲಾಭವನ್ನು ಕರ್ನಾಟಕವೂ ಪಡೆದಿತ್ತು. ಇಂತಹ ನಿಷ್ಕಾಮ ಮನೋವೃತ್ತಿಯ ನಿಸ್ಸೀಮ ಸೇವಕನನ್ನು ನಾವಿಂದು ಕಳೆದುಕೊಂಡಿದ್ದೇವೆ. ಹಿರಿಯ ರಾಜಕೀಯ ಧುರೀಣರನ್ನು ಕಳೆದುಕೊಂಡು ನಾವು ತತ್ತರಿಸುವ ವೇಳೆ ಇಂತಹ ಸನ್ಯಾಸಿ ಸೇವಕನನ್ನು, ಬಡವರ ಬಂಧುವನ್ನು ಕಳೆದುಕೊಂಡು ಅಘಾತಿಗಳಾಗಿದ್ದೇವೆ ತಾತ್ಕಾಲಿಕ ಮಹಾನ್ ವ್ಯಕ್ತಿಗಳನ್ನೂ, ರಾಜಕೀಯ ಧುರೀಣರನ್ನೂ ಕಳೆದುಕೊಂಡೆವು ಈಗ ನಿಷ್ಕಾಮಂತ ಕಲಸಗಾರನೊಬ್ಬನನ್ನು ಕಳೆದುಕೊಂಡೆವು. ಇದು ದುರ್ದೈವ ಇಂತಹ ಸನ್ನಿವೇಶದಲ್ಲಿ ನಾವು ಅದರಿಸಿಕೊಂಡಿರುವದಾದರೂ ಏನನ್ನ? —ಆಗಿ ಹೋದ ವ್ಯಕ್ತಿಗಳ ಜೀವನಾದರ್ಶವನ್ನ! ಹಾಕಿಕೊಟ್ಟ ಮೇಲ್ಪಂಕ್ತಿಯನ್ನು, ತೋರಿಸಿಕೊಟ್ಟ ಸನ್ಮಾರ್ಗವನ್ನು!

ಬಾಪಾ ನಮ್ಮನ್ನಗಲಿದರೂ ಅವರ ಉಚ್ಚಾದರ್ಶಗಳು ನಮ್ಮ ಮುಂದಿನ ರಾಜಕೀಯರಂಗಕ್ಕೆ ಧ್ರುವತಾರೆಯಪ್ಪರಿಂದಲೇ ದೇಶ ಸೇವೆಯಾಗುವಂತಿಲ್ಲ. ನಿಮಾನ್ಯ ಜನರೊಡನೆ ಬೆರೆತು ಅವರ ಸೇವೆಯನ್ನು ಮಾಡಿ ಜಾಗೃತಿಯನ್ನುಂಟುಮಾಡುವ ಕಾರ್ಯಕರ್ತರು ಬೇಕಾಗಿದ್ದಾರೆ. ಅಂದರೇನೇ ಹಿಂದುಳಿದವನೂ ನಮ್ಮ ಭುಜಕ್ಕೆ ಭುಜ ಕೊಟ್ಟಾನು. ಬಾಪಾರವರ ಆದರ್ಶನೀತಿಯು ಇಂದಿನ ನಾವು ಆನ ನೆರಿಸುವದರಿಂದಲೇ ದೇಶದ ಏಳ್ಗೆಯಾಗುತ್ತದೆ. ಆಗಿಹೋದ ಪರಿಗೆ ಶಾಂತಿಯೂ ಉಂಟಾದೀತಲ್ಲವೇ?

ಹಾರುವ ಕಿಡಿಗಳು

ಕನ್ನ ಎಲೆಯಲ್ಲಿ ಬಿದ್ದ ಹೆಗ್ಗಣದ ಗೊಡವೆಯಲ್ಲ; ತನ್ನದೇ ಎಲೆಯಲ್ಲಿ ಬಿದ್ದ ನೊಣದ ಚಿಂತೆ ಬಹಳ.

೦೦

ಅಪಸ್ವರ ಎಷ್ಟು ಕೇಳಿಸುತ್ತದೆ: ದೋಷಗ್ರಾಹಿಗಳು ಅದಕ್ಕೇ ಹೆಚ್ಚು ಲಕ್ಷಕೊಡುತ್ತಾರೆ.

೦೦

ಕೂತು ಮಾಡುವ 'ಮೆದುಳ'ನ್ನು ಹೊತ್ತು ಮಾಡುವ ಪ್ರಸಂಗವೂ ಬರುವುದುಂಟು.

೦೦

ನಿರ್ಮಿಸಿದ ಶಿಲ್ಪಿ ಜಾಣನಾಗಿದ್ದರೆ ತೋಂಗಿಕೆಯ ಆಧಾರಸ್ತಂಭ ಕಳಚಿದರೂ ನಿರ್ಮಾಣ ನಿಂತೀತು.

೦೦

ಸಲಿಗೆಯ ನಾಯಿ ನೆಸಲು ನೆಕ್ಕಿದರೆ ಅಂಕೆ ಇಲ್ಲದ ದಾಸ ಕಚ್ಚೆಕಳುಕ್ಕುತ್ತಾನೆ.

೦೦

ಕಲೆಗಾರನೆಂದಾಕ್ಷಣ ಕೂಲಿಮಾಡಿದರೆ ನಾಳಿಯಾದೀತೆ?

೦೦

ನೀತಿ, ಪಾತು ಕೆಟ್ಟ ಮೇಲೆ ಅಪಸ್ವಾರ ಪ್ರತೀಕಾರ.

೦೦

ಕಲೆಗಾರನೆಂದು ಕನಸಿನ ರಾಜ್ಯದಲ್ಲಿ ವಿಹರಿಸಿದರೆ ನೈಜಹಾರ ಸಾಗೀತೆ?

೦೦

ಕಾಡ್ಗಿಚ್ಚು ಕಾಡು ಸುಡುತ್ತಿದೆ; ಹೊಟ್ಟೆ ಕಿಚ್ಚು ನಾಡು ಸುಡುತ್ತಿದೆ.

೦೦

ಪರಪಡೆಯಬೇಕು ತಪಸ್ಸುಮಾಡಿ; ಜಯ ಪಡೆಯಬೇಕು ಕರ್ತವ್ಯಮಾಡಿ.

೦೦

ಹತ್ತು ನಿಮಿಷ ಹಾಡಿ ಮಾಡಿದರೇನಾಯಿತು?—ಹತ್ತು ವರ್ಷ ಗರತಿ ಯಾಗಿದ್ದೆನೆಂದರೆ ಆದೀತೆ?

೦೦

ಕಲ್ಪಶಿಲೆ ಗೊಡನೆಯಲ್ಲಿ. ಕಲ್ಪನೆಗೆ ಮಿತಿ ಇಲ್ಲ ಆನೆಗಳು ಹೋಗುವುದು ತೋರುತ್ತದೆ; ಅ-ನೆಗಳು ಹೋಗುವುದು ತೋರುತ್ತದೆಯೆ?

೦೦

ಹೊಗಳಿಕೆಗೆ ಮರುಳಾಗದವರಿಲ್ಲ; ತೆಗಳಿಕೆಗೆ ರೇಗದವರಿಲ್ಲ.

೦೦

ಕಡಿದಂತೆ ನೋಡಬೇಕು; ಕಡಿದಿದ ಮೇಲೆ ಚೆನ್ನಾಗಿ ಕಡಿದಿರೇನೇ ತಿಳಿಯಾದೀತು;

೦೦

ಆರಂಭದಲ್ಲಿ ಆತುರ; ಕೊನೆಯಲ್ಲಿ ಕಾತರ

೦೦

ಯಾರೂ ನಿರ್ದೋಷಿಯೆಂದಿಲ್ಲ; ಯಾವುದಕ್ಕೂ ಸರ್ವ ಸಮ್ಮತಿಯೆಂದಿಲ್ಲ.

೦೦

ಮಾನಾಗೂ ಮಾನವಿರಬಹುದು; ಬಾಯಿ ಬಡುಕನನ್ನೂ ಮಾನಿಸುವವರಿರಬಹುದು.

೦೦

ಹುಚ್ಚು ಹಿಡಿದ ಮೇಲೆ ನಾಯಿಗೆ ಯಜಮಾನನಾದರೇನು? ದಾರಿಹೋಕನಾದರೇನು?

೦೦

ಅಕಾಭಂಗವಾದಗ ದೋಷರಾಶಿಯೇ ಎದ್ದು ತೋರುತ್ತದೆ.

೦೦

ನಮ್ಮಿಂದಲೇ ಬೆಳಕಾಗುವುದೆಂಬ ಭ್ರಮೆ ಯಾರಿಗೂ ಸಲ್ಲ.

೦೦

ಸಹನೆಗೂ ಮಿತಿ ಉಂಟು; ಬವಣೆಗೂ ಮಿತಿ ಇದೆ;

೦೦

ದುರ್ಬಲಚಿತ್ತನಿಗೆ ಸೋಮಾರಿತನ ಜಾಸ್ತಿ ಹೆಚ್ಚಿನವಿಗೆ ರಜಾದಿನದ ಲೆಕ್ಕ ಜಾಸ್ತಿ

೦೦

ದೂರವಾದಾಗ ದೂರು ದೂಷಣೆ; ದಾರಿ ತೋರದಾಗ ಕುಟಿಲ ವರ್ತನೆ

ಕಾತರರಗೋಡು — ಇದೇ ತಿಂಗಳ ತಾ. 27, 28, 29ರಲ್ಲಿ ಕಾತರಗೋಡಿನ ಬಿ. ಇ ಎಮ್. ಹೈಸ್ಕೂಲಿನ ವರಾಂಡದಲ್ಲಿ ಗುಡಿಕೈಗಾರಿಕೆ, ಕೃಷಿ ಮತ್ತು ವಿಜ್ಞಾನಗಾರಿಕೆಯ ಉತ್ಪತ್ತಿಗಳ ಹಾಗೂ ಕುಶಲ ಕಲೆಗಳ ವಸ್ತು ಪ್ರದರ್ಶನವೂ. ತಾಲೂಕು ಕಚೇರಿ ಮುಂಭಾಗದಲ್ಲಿ ಜಾನುವಾರು ಪ್ರದರ್ಶನವೂ ಜರಗುವುದು. ಯೋಗ್ಯವಾದವುಗಳಿಗೆ ಬಹುಮಾನ ಕೊಡಲಾಗುವುದು.

ಧರ್ಮಸ್ಥಳ "ನಡಾವಳಿ" ಮಹೋತ್ಸವ ಕಾಲದಲ್ಲಿ ಮಹಾ ಪ್ರದರ್ಶನ—

(ಫೆಬ್ರವರಿ 17ರಿಂದ 22ರತನಕ.) ಈ ಉತ್ಸವ ಧರ್ಮಸ್ಥಳದಲ್ಲಿ ನಾಲ್ಕನ್ನು ವರ್ಷಗಳ ಬಳಿಕ ನಡೆಯುತ್ತದೆ. ಲಕ್ಷಾವಧಿ ಜನರು ನೆರೆಯುವ ಅವಕಾಶ ಇದಾದುದರಿಂದ— ಸಾರ್ವಜನಿಕರ ಮನರಂಜನೆ, ಶಿಕ್ಷಣಗಳಿಗಾಗಿ ಈ ಕೆಳಗಿನ ವಿಭಾಗುಗಳನ್ನು ಮಾಡಲಾಗುವುದು.

ಪ್ರದರ್ಶನ— ಕೃಷಿ, ಉದ್ಯೋಗ, ಕೈಗಾರಿಕೆ, ಕಲೆಗಳಿಗೆ ಸಂಬಂಧಿಸಿದ ವಿವಿಧ ವಸ್ತುಗಳ ಪ್ರದರ್ಶನ. ಸರಕಾರಿ ಸಂಸ್ಥೆಗಳೂ ಖಾಸಗಿ ಸಂಸ್ಥೆಗಳೂ ಇದರಲ್ಲಿ ಭಾಗವಹಿಸಬಹುದು. ಸ್ವಾಲಂಬನ ಮತ್ತು ಊಟದ ನೈವನಿಯ ಉಚಿತ- ಪ್ರದರ್ಶಕರು ಗ್ರಾಮಸಿವಾಸಿಗಳಾಗಿರಬಹುದಾದ ವಿವಿಧ ಕೈಗಾರಿಕೆ, ಕೃಷಿ ವಸ್ತುಗಳನ್ನೂ ಅವರ ತಿಳುವಳಿಕೆ ಹೆಚ್ಚಿಸಬಲ್ಲ ಯಂತ್ರ ಸಾಮಾಗ್ರಿಗಳನ್ನೂ, ಕಲಾಕೃತಿಗಳನ್ನೂ ತಂದು ಪ್ರದರ್ಶಿಸಬಹುದು. ಉತ್ತಮ ಕೃತಿಗಳಿಗೆ ಬಹುಮಾನವಿದೆ. ಜಾನುವಾರುಗಳ ಪ್ರದರ್ಶನವನ್ನೂ ನಡೆಸಲಾಗುವುದು. ಜನತೆಯ ಶಿಕ್ಷಣ- ಮನರಂಜನೆಗಳಿಗಾಗಿ (೧) ಪ್ರತಿದಿನ ಒಂದು ತಾತ್ಕಾಲಿಕ ಶೈಕ್ಷಣಿಕ ಚಲಚ್ಚಿತ್ರ ಪ್ರದರ್ಶನ- ಉಚಿತವಾಗಿ (೨) ನುರಿತ ಉಪನ್ಯಾಸಕರಿಂದ ಪ್ರತಿದಿನ ಒಂದೊಂದು ವಿಷಯವನ್ನು ಕುರಿತು ಒಂದೊಂದು ಉಪನ್ಯಾಸ.

ಇದಕ್ಕಾಗಿಯೇ ಚಿತ್ರಗಳನ್ನು, ಉಪನ್ಯಾಸಕರನ್ನು ಕರೆಯಿಸಿಕೊಳ್ಳಲಾಗುವುದು.

ಈ ಪ್ರದರ್ಶನ ಯಶಸ್ವಿಯಾಗುವಂತೆ ನಮ್ಮ ನಾಡಿನ ಕೈಗಾರಿಕೆ, ಉದ್ದಿಮೆದಾರರು, ಗಂಧದ ಕೆಲಸ, ಮಣ್ಣಿನ ಕಲಸ, ಹಂಚಿನ ಕೆಲಸ, ರೇಶ್ಮೆ ನೆಯ್ಗೆ, ಬೆಂಕಿಪಟ್ಟಿಗೆ ತಯಾರಿ, ಸಾಬೂನು ತಯಾರಿ, ಮೊದಲಾದುವುಗಳ ನಿರ್ಮಾಣಕ್ಕೆ ಸಂಬಂಧಿಸಿದಂತಹ ವಸ್ತುಗಳನ್ನು ತಂದುತೋರಿಸಿ-ತಮ್ಮ ಉದ್ಯೋಗ ಶ್ರೇಯಸ್ಸನ್ನೂ ನಮ್ಮ ಜನತೆಯ ಶಿಕ್ಷಣವನ್ನೂ ಸಾಧಿಸಬೇಕಾಗಿ ಕೋರುತ್ತೇವೆ.

ಪತ್ರವ್ಯವಹಾರ—

ವೈನಸ್ಥಾಪಕ
ನಡಾವಳಿ ಪ್ರದರ್ಶನ ಸಮಿ
ಪೋ. ಧರ್ಮಸ್ಥಳ

Notice

ಕುಂಗಾಪುರ ಡಿ. ಮು. ಕೋರ್ಟಿನ S. C. 726/48 R. E. P. 32/ ತಾರೆಕಟ್ಟೆ ಭದ್ರ ಸೆಟ್ಟಿ --ಅರ್ಜಿದಾ ವೆಂಕಟ್ರಮಣ ನಾಯ್ಕನು —ಎದ್ರಿ

ಸದ್ರಿ ಅವ್ವಲ್ ಜ್ಯಾರಿಯಂ 5ನೇ ಎದ್ರಿಗೆ ಯಪಡ್ಡಿದ್ದು. 5ನೇ ಎದ್ರಿ ರಾಮಯ್ಯ, ಮೇಸ್ತ್ರಿಯಯ್ಯನ ಮಗ. ಪೋಲಿಸ್ ಜಾದಾಂ, ಶಿವಮೊಗ್ಗ ಡಿಸ್ಟ್ರಿಕ್ಟ್, ಹೊನ್ನಾಳ್ಳಿ ತಾಲ್ಲೂಕು ಹೊನ್ನಳ್ಳಿಯಲ್ಲಿರುವವ.

ಸದ್ರಿ ಅವ್ವಲ್ ಜ್ಯಾರಿಯಲ್ಲಿ ಯಿಸ್ತ್ರಾರಿ ತೀರ್ಪು ನಿರ್ಣಯವನ್ನುವ ಬಗ್ಗೆ ಸದ್ರಿ ಅವ್ವಲ್ ಯನ್ನು ತಾ. 31-1-51ಕ್ಕೆ ಯಿಟ್ಟಿದೆ. ಆ ರಿತು ನಿಮ್ಮ ಅಕ್ಷೇಪಯಿದ್ದರೆ ಸದ್ರಿ ದಿನಕ್ಕೆ 11 ಘಂಟೆಗೆ ಸದ್ರಿ ಕೋರ್ಟಿಗೆ ಮಹಾಜ್ಞಾಪಿಸಿಕೊಳ್ಳತಕ್ಕದ್ದು.

Y. Manjaya She
Advocate for Pet
ತಾ. 22-1-51 ಮೊಕ್ಕಾಂ, ಕುಂದಾಪು

[ಹಿಂದೆ ಪ್ರಟದಿಂದ ಮುಂದುವರಿದ್ದು]

ಮತ್ತೂ ದಕ್ಷಿಣ ದೇಶದಲ್ಲಿ ಕಟ್ಟಲ್ಪಟ್ಟ ದೇವಸ್ಥಾನಗಳ ಗೋಪುರಗಳಿಗೆ ಮಾದರಿಯಾಯಿತು. ಈ ಸಪ್ತ ಗೋಪುರಗಳನ್ನು ಗುರಿತು ವೆಂಕಟಾಚಲಂರವರು ಹೀಗೆಂದು ಬರೆಯುತ್ತಾರೆ ಇಲ್ಲಿ "the Sculptors implements have changed rough rocks into Sermons in stones....So vivid So realistic and so compelling in this Virile art of Mahabalipuram-" ಚಾಲುಕ್ಯರ ಕಲಾಕ್ಷೇತ್ರ ಬಾದಾಮಿ ಮತ್ತು ಐಹೊಳೆ ಎಂಬ ಪ್ರದೇಶಗಳು. ಅಲ್ಲಿನ ಗುಹಾಂತ ದೇವಾಲಯಗಳೂ ಮತ್ತು ಶಾಸನಗಳೂ ತೇಜಸ್ಸಿನಿಂದ ಕೂಡಿದ ಕಲಾವಸ್ತುಗಳಾಗಿವೆ. ರಾಷ್ಟ್ರಕೂಟರ ಕಲಾಕ್ಷೇತ್ರ ಎಲ್ಲೋರಾ ಮತ್ತು ಎಲಿಫಾಂಟಾ ಪ್ರದೇಶಗಳು. ಎಲ್ಲೋರಾದಲ್ಲಿನ ಕಲಾಕೃತಿಗಳು ಜೈನ,ಬೌದ್ಧ ಮತ್ತು ಹಿಂದೂ ಮತಗಳಿಗೆ ಸಂಬಂಧಪಟ್ಟವು. ಎಲ್ಲೋರದ ಮಕುಟಮಣಿ ಕೈಲಾಸನಾಥನ ದೇವಾಲಯ. ಈ ದೇವಸ್ಥಾನ 'a transcription in Stone of a vision of the abode of Muhadev' ಎಂದು ಬರೆಯುತ್ತಾರೆ. ವೆಂಕಟಾಚಲಂರವರು ಎಲಿಫಾಂಟದಲ್ಲಿನ ಏಲಿ ಅನಾಥಾರಣವಾದುದಾಗಿ ಕಲಾವಿದನ ಕೌಶಲ್ಯದ ಹಮಾವಧಿ ಎಂದು ಕರೆಯಲ್ಪಟ್ಟಿದೆ. ದ್ವಾರಸಮುದ್ರದ ಹೊಯ್ಸಳರ ಕಲಾಕ್ಷೇತ್ರ ಈಗಿನ ಮೈಸೂರ ಸಂಸ್ಥಾನವನ್ನೂಳಕ್ಕೊಮಿಸಿತ್ತು. ಇವರು ನಿರ್ಮಿಸಿದ ಬೇಲೂರು, ಹಳೇಬೀಡು ಮತ್ತು ಸೋಮನಾಥಪುರದ ದೇವಾಲಯಗಳು ಕಲಾಭವನಾಗಿಗಳ ಯಾತ್ರಾಸ್ಥಳಗಳಾಗಿವೆ. ದಂತದಲ್ಲಿ ಕೆತ್ತನೆಯನ್ನು ಮಾಡುವ ರೀತಿಯಲ್ಲಿ ಕಲ್ಲಿನಲ್ಲಿ ಕೆತ್ತಿ ಪ್ರೇಕ್ಷಕರನ್ನು ಮುಗ್ಧಗೊಳಿಸುತ್ತಿದ್ದಾರೆ. ಇಂದಿಗೂ ಹೊಯ್ಸಳ ಕಲಾವಿದರು ಮತ್ತಷ್ಟು ದಕ್ಷಿಣಕ್ಕೆ ಹೋದರೆ ದೇವಾಲಯದ ಗೋಪುರಗಳನ್ನು ರಾಮೇಶ್ವರದವರೆಗೂ ಕಾಣಬಹುದು.

ಹಿಂದೂ ದೇಶದ ಸಾಂಪ್ರದಾಯಿಕ ಶೈಲಿಯು ಮಹಮ್ಮದೀಯರ ಸಂಪರ್ಕದಿಂದ ಬೇರೆ ದಾರಿಯನ್ನು ಹಿಡಿಯಿತು.ಮೊಗಲರು ರಾಜ್ಯಕ್ಕೆ ಬರುವ ಮುನ್ನ ಒಂದು ರೀತಿಯಲ್ಲಿ ಸುಪ್ತವಾಗಿದ್ದು ಮತ್ತೆ ಮೊಗಲ ಸಾಮ್ರಾಟರಿಂದ ಅಕಬರ್ ಜಹಂಗೀರ್ ಮತ್ತು ಷಹಜಹಾನರ ಕಾಲದಲ್ಲಿ ಎಚ್ಚರಗೊಂಡು ಮುಸ್ಲಿಂ ಶೈಲಿಯೊಡನೆ ಬೆರೆತು ಸಾಗಿತು- ಮೊಗಲರ ಕಾಲವ ಕಟ್ಟಡಗಳಾದ ಜಮ್ಮಾ ಮಸೀದಿ ಮೋತಿ ಮಸೀದಿ ತಾಜ್ ಮಹಲ್ ಮುಂತಾದುವುಗಳು ಹಿಂದೂ ಮತ್ತು ಮುಸ್ಲಿಂ ವಿಶ್ರ ಶೈಲಿಯನ್ನು ಒಳಗೊಂಡಿವೆ. ತಾಜ್ ಮಹಲು ಕಲಾದೃಷ್ಟಿಯಿಂದ ಪ್ರಪಂಚದಲ್ಲೆಲ್ಲಾ ಪ್ರಖ್ಯಾತವಾಗಿದೆ.

ಈಗಿನ ಕಾಲದ ಕಟ್ಟಡಗಳು ಯಾವುದೋ ನವೀನ ರೀತಿಯ ಸುಲಭ ಶೋಭೆ (Simple Beaut) ಯಿಂದ ಕೂಡಿರುವುದಾಗಿ ನವೀನ ಕಾಲದ ಮನೋವೈಶಿಷ್ಯವನ್ನು ವ್ಯಕ್ತಮಾಡುತ್ತವೆ.

೦೦

ಚಿತ್ರಕಲೆಯಲ್ಲಿಯೂ, ಶಿಲ್ಪಕಲೆಯಲ್ಲಿ ದ್ದಂತೆಯೇ ಭಾರತೀಯರು ಸಿದ್ಧಹಸ್ತರಾಗಿದ್ದರು ನಮ್ಮ ಚಿತ್ರಕಲೆಯ ಅದಿ ಹಳೆಯ ಶಿಲಾಯುಗದ್ದಲ್ಲಿಯೇ ಸಿಕ್ಕುತ್ತದೆ. ಅಜಂತ, ಭಾಗ್ ಮತ್ತು ಸಿಟ್ಟನ್ನವಸಲ್ ಎಂಬಲ್ಲಿನ ಚಿತ್ರ ಸಂಪತ್ತು ಈ ಕಾಲಕ್ಕೆ ಸೇರಿದ್ದುವು. ಸುಪ್ರಸಿದ್ಧ ಚಿತ್ರವಿಮರ್ಶಕರಾದ ಸಕೋನಿಯವರ ಅಭಿಪ್ರಾಯದಲ್ಲಿ ಈ ಚಿತ್ರಗಳು "Will bear Comparison with the best that Europe could produce down to the time of michaelangelo." ಅಜಂತದಲ್ಲಿನ ಚಿತ್ರಗಳು ಬೌದ್ಧ ಮತಕ್ಕೆ ಸಂಬಂಧಪಟ್ಟವು. ಅಲ್ಲಿನ ಚಿತ್ರ ರೇಖೆಗಳು, ಕಲಾಕೌಶಲ್ಯ ಎಲ್ಲರನ್ನೂ ಮುಗ್ಧಗೊಳಿಸುತ್ತವೆ. ಅಜಂತದಲ್ಲಿದ್ದಂತೆ ಗೋಡೆಗಳ ಮೇಲೆ ಬೃಹದಾಕಾರದಲ್ಲಿ ಬರೆಯುವ ಸಂಪ್ರದಾಯ ಕ್ರಮೇಣ ನಿಂತು ಹೋಗಿ ಸಣ್ಣ ಪ್ರಮಾಣಗಳಲ್ಲಿ ಬರೆಯುವ ಸಂಪ್ರದಾಯ ಉತ್ಪನ್ನವಾಯಿತು. ಈ ಬದಲಾವಣೆಯೇ ಈಗಿನ ಕಾಲದ ಚಿತ್ರಕಲೆಗೆ ಮೂಲವಾಗಿದೆ. ಈ ಹೊಸ ಸಂಪ್ರದಾಯವನ್ನು ಬಳಕೆಗೆ ತಂದವರು ಬಂಗಾಲ ಮತ್ತು ಗುಜರಾತ್ ಪಂಗಡದ ಕಲೆಗಾರರೇ.

ನಮ್ಮಲ್ಲಿ ಓಲೆಗರಿಗಳ್ಲೂ ಚಿತ್ರಗಳನ್ನು ಬರೆಯುವ ಸಂಪ್ರದಾಯವಿತ್ತು. 14ನೇ ಶತಮಾನದ ಹಿಂದೆ ಓಲೆಗಳಲ್ಲಿ ಬರೆದ ಚಿತ್ರ ಪ್ರತಿಗಳು ಹಲವು ನಮಗೆ ದೊರಕಿವೆ. ಮುಖ್ಯವಾಗಿ ಇಲ್ಲಿನ ಚಿತ್ರಗಳು ಕೃಷ್ಣನ ಜೀವನ ದೃಶ್ಯಗಳು, ಮತ್ತು ಪೌರಾಣಿಕ ವ್ಯಕ್ತಿಗಳ ಚಿತ್ರಗಳು. 14ನೇ ಶತಮಾನದಿಂದೀಚೆಗೆ ಕಾಗದ ಬಳಕೆಗೆ ಬಂದು ಚಿತ್ರಕಲೆಗೆ ಹೊಸ ಹುರುಪು ಬಂದಿತು. ಮೊದಲು ಮೊದಲು ಕಾಗದಗಳನ್ನು ಉಪಯೋಗಿಸಿಕೊಂಡ ಚಿತ್ರ ಬರೆದವರು ರಜಪೂತರು ಮತ್ತು ಮೊಗಲರು. ರಜಪೂತರ ಚಿತ್ರಗಳು ಮಹಾಭಾರತ ಮತ್ತು ರಾಮಾಯಣ, ಶ್ರೀಮದ್ಭಾಗವತ ವೈಷ್ಣವ ಪುರಾಣ. ರಾಗ ಮತ್ತು ರಾಗಿಣಿಗಳ ಮಾಲಿಕೆಗಳನ್ನು ಕುರಿತು ರಜಪೂತ ಚಿತ್ರಕಲೆಯು 'ಇಂಗಾರ ವಂಗಡದ' ಕಲಾವಿದರ ಕೆಲಸವಾಗಿತ್ತು. "ಹಂಸನಮಾ" ಎಂಬ ಪುಸ್ತಕವು ಮೊಗಲರ ಚಿತ್ರ ಕಲೆಯನ್ನು ನಿರೂಪಿಸುವ ಗ್ರಂಥವಾಗಿದೆ. ಇದು ಐನೂರು ಮಂದಿ ಕಲಾವಿದರಿಂದ ಬರೆಯಲ್ಪಟ್ಟ 1400 ಚಿತ್ರಗಳನ್ನು ಒಳಗೊಂಡ ಪುಸ್ತಕವಾಗಿದೆ.

ನವೀನ ಕಾಲದ ಚಿತ್ರ ಕಲಾವಿದರು ಪ್ರಾಚೀನ ಶೈಲಿಯಲ್ಲಿ ಒಂದೆಲ್ಲೇ ಅಲ್ಲದೆ ಪಾಶ್ಚಾತ್ಯ ಶೈಲಿಯಲ್ಲಿಯೂ ಸಾಧನೆಯನ್ನೂ ಮಾಡುತ್ತಿದ್ದಾರೆ. ಈಗಿನ ಯುಗದಲ್ಲಿ ಹೆಸರಂತ "ಬಂಗಾಳಾ ಪಂಗಡವು" ಅಬನೀಂದ್ರನಾಥ ಠಾಕೂರರ ನೇತೃತ್ವದಲ್ಲಿ ಪಾಶ್ಚಾತ್ಯ ರೀತಿಯನ್ನು ಅನುಕರಿಸಿ "Impressionism" ಮತ್ತು "Cubism" ಎಂಬ ಶೈಲಿಗಳಲ್ಲಿ ಶ್ರಮಿಸುತ್ತಿದೆ. ಇದರಿಂದಿಗೆ ಅಜಂತಾ ಶೈಲಿಯನ್ನು ಉದಯೋಗಿಸಿಕೊಳ್ಳುತ್ತಿದೆ ಈ ಮಿಶ್ರ ಶೈಲಿಗಳಲ್ಲಿ ಸಾಧನೆ ಮಾಡಿ ಚಿತ್ರ ನಿರ್ಮಾಣ ಮಾಡುತ್ತಿರುವವರಲ್ಲಿ ಗಗನೇಂದ್ರ ಠಾಕೂರರು ಅಗ್ರಗಣ್ಯರು.

ಈ ರೀತಿಯಾದ ಶೋಭೆಯಿಂದ ಕೂಡಿದ ಭಾರತವು ಮ್ಯಾಕ್ಸ್‌ಮಲ್ಲರ್‌ರವರ ಕಣ್ಣಿಗೆ ಬೀಳದಾಯಿತು. ಕಲೆಯಲ್ಲಿ ತಲ್ಲೀನರಾಗಿ ಕಲಾನುಭವದಲ್ಲಿ ಆನಂದವನ್ನು ಆನುಭವಿಸಲು ಹೊರಟ ಜನ ನಮ್ಮವರು. ಕಲೆ ಆಥವಾ ಸೌಂದರ್ಯದನುಭವದಲ್ಲಿ ಹೊಂದುವ ಆನಂದ ಬ್ರಹ್ಮಾನುಭವದಿಂದ ಒರವ ಆನಂದಕ್ಕೆ ಸಮೀಪ್ಯವೆಂದು ಹೇಳಿದವರು ನಮ್ಮವರು.

"ರಸೋವೈಸಃ ರಸಂ ಹ್ಯೇ ನಾಯಂ ಲಬ್ಧ್ವಾನಂದೀ ಭವತಿ" ಎಂದು ಹೇಳಿದ ಋಷಿಕರು ನಮ್ಮ ಭಾರತೀಯರು.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು

ವಿಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡಕೊಂಡ ಈ ಕೆಳಗಿನ ನಮೂದಿಸಿದ ಸಾಲಗಳ ಆಸ್ಲು ವ ಬಡ್ಡಿ ಇತ್ಯಾಗಳನ್ನು ಬೇಂಕಿನ ಕ್ರಮ ಪ್ರಕಾರ ನೋಟೀಸು ವ ರಿಜಿಸ್ಟ್ರಿ ನೋಟೀಸು ಕೊಟ್ಟಾಗಿಯೂ ಬಾಕಿ ಮಾಡಿಕೊಂಡಿರುವುದರಿಂದಲೂ ಕೆಲವರಿಗೆ ಕೊಟ್ಟ ನೋಟೀಸು ವ ರಿಜಿ ನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ, ಸದ್ರಿ ಸಾಲಗ ಸಂಬಂಧ ಬೇಂಕಿಗೆ ಸಲಕ್ಕ ಸಮರ್ಪಣ ಏನೇಜುಗಳನ್ನು ಇದೇ ತಾರೀಕು 25-1-19 ನೇ ಗುರುವಾರದ ಒಳಗೆ ಸಲ್ಯಾಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಆಡವಿಟ್ಟ ಆಭರಣಗಳನ್ನು ಇದೇ ತಾರೀಕು 31-1-1951 ನೇ ಬುಧವಾರ ಪೂರ್ವಾಹ್ನ ಗಂಟೆ 11ಕ್ಕೆ ಯಾ ಬೇಂಕಿಯುಕ್ತ ತೋರುವ ಇನ್ನಿತರ ದಿನಗಳಲ್ಲಿ ಪೂರ್ತಾ ನೋಟೀಸು ಕೊಡದೇನೇ ಈ ಬೇಂಕಿ ಆಫೀಸಿನಲ್ಲಿ ಬಹಿರಂಗವಾಗಿ ವಿಲಂ ಮಾಡಲ್ಪಡುವುದು. ತಿಳಿದಿರಲಿ.

ತಾರೀಕು	ಲೋನ್ ನಂಬ್ರ	ಈಡಿಟ್ಟವರ ಹೆಸರು ಮತ್ತು ನಿವಾಸ.	ಸಾಲದ ಮೊಬಲಗ
11-2-48	316/47-8	ಅಬ್ದುಲ್ ಅಜೀಜ್, ಉಮ್ಮರ್ ಸಾಹೇಬರ ಮಗ, ಕೊಪ್ಪಲಂಗಡಿ ಪಡುಗ್ರಾಮ, ಕಾಪು, ದ. ಕ.	ರೂ. 50—
2-3-48	377/47-8	ವೈ. ನಾರಾಯಣಶೆಟ್ಟಿ, ಶ್ಯಾಮಶೆಟ್ಟಿ ಕಮ್ಮಟೇಮನೆ, ಬಡಗ್ರಾಮ, ಎರ್ಮಾಳು, ದ ಕ.	625—
28-6-48	808/47-8	ಕಿಟ್ಟಣ್ಣಶೆಟ್ಟಿ,ಜಂಜುಶೆಟ್ಟಿ ಆಳಿಯ, ಪಣಿಯೂರು ಬಡತರಗುತ್ತು ಎಲ್ಲೂರು, ದ. ಕ.	120—
30-6-48	820/47-8	ಸೈಯದ್ ಮುದುತೋಜ, ಇಬ್ರಾಹಿಂಸಾಹೇಬರ ಮಗ, ಮಲ್ಲಾರು ಗ್ರಾಮ, ಕಾಪು.	65—
12-8-48	1054/47-8	ಶ್ಯಾಮಶೆಟ್ಟಿ, ಬೆರ್ಮಯ್ಯಶೆಟ್ಟಿ ಆಳಿಯ, ಮೂಲೂರು ಗ್ರಾಮ, ಉಚ್ಚಿಲ, ದ. ಕ.	100—
20-8-48	1105/47-8	ಎನ್. ಎ ಕಾದರ್, ಅಬ್ದುಲ್ಲಾರಹಿಮಾನ್ ಸಾಹೇಬರ ಮಗ, ಮಲ್ಲಾರುಗ್ರಾಮ, ಕಾಪು.	100—
26-2-49	484/48-9	ಅಬ್ದುಲ್ ಗಫೂರ್, ಗೌಸ್ ಸಾಹೇಬರ ಮಗ, ಬೆಳ್ಳಗ್ರಾಮ, ಉಚ್ಚಿಲ, ದ. ಕ.	13—
17 9-48	1179/47-8	ಸೈಯದ್ ಮುದುತೊಜ, ಇಬ್ರಾಹಿಂ ಸಾಹೇಬರ ಮಗ, ಮಲ್ಲಾರುಗ್ರಾಮ, ಕಾಪು.	50—
1-9-48	1172/47-8	ಬೋಕು ಶೆಟ್ಟಿ, ಅಂತಪ್ಪು ಶೆಟ್ಟಿ ಆಳಿಯ, ಕೊಳಿದಮನೆ,ಮೂಲೂರುಗ್ರಾಮ,ಉಚ್ಚಿಲ	100—
18-9-48	1284/47-8	ಸೈಯದ್ ಮುದುತೊಜ, ಇಬ್ರಾಹಿಂ ಸಾಹೇಬರ ಮಗ, ಮಲ್ಲಾರುಗ್ರಾಮ, ಕಾಪು.	20—
11-3-49	527/48-9	ಅಬ್ದುಲ್ ಗಫೂರ್ ಗೌಸ್ ಸಾಹೇಬರ ಮಗ ಬೆಳ್ಳಗ್ರಾಮ, ಉ. ಕ.	70—
28-3-49	562/48-9	ಅಬ್ದುಲ್ ಗಫೂರ್ ಗೌಸ್ ಸಾಹೇಬರ ಮಗ ಬೆಳ್ಳಗ್ರಾಮ, ಉ. ಕ.	20—
7-4-49	628/48-9	ಮಹಮ್ಮದ್ ಆದಮ್ ಮಹಮ್ಮದ್ ಸಾಹೇಬರ ಮಗ ಕಳ್ಳಿಗ್ರಾಮ, ಪಾದೂರು, ಉ. ಕ.	5—
14-5 49	783/48-9	ಕಾಜಿಲ ಪೂಜಾರಿ ಮೊಗಲ ಪೂಜಾರಿ ಮಗ ಮಲ್ಲಾರು ಗಂಡಿ, ಕಾಪು ದ. ಕ.	30—
2-6-49	859/48-9	ಎಸ್. ಎ. ಖಾದರ್, ಅಬ್ದುಲ್ ರಹಿಮಾನ್ ಸಾಹೇಬರ ಮಗ ವಲ್ಲಾವಿ ಗ್ರಾಮ,	45—
6-7-49	1043/48-9	ಎನ್. ಎ. ಖಾದರ್, ಅಬ್ದುಲ್ ರಹಿಮಾನ್ ಸಾಹೇಬರ ಮಗ ಮಲ್ಲಾರು ಗ್ರಾಮ,	10—
27-2-50	261/50-	ಚಂದು ಮರಕಾಲ, ಮುದರ ಮರಕಾಲನ ಆಳಿಯ, ಕೈಪುಂಜಾಲ್,ಆಲಿಯೂರಗೋಳಿ ಗ್ರಾಮ, ಕಾಪು, ದ. ಕ.	30—
6-12-48	218/48-9	ಮಹಮ್ಮದ್ ಆದಂ,ಮಹಮ್ಮದ್ ಸಾಹೇಬರ ಮಗ, ಕಳ್ಳೂರು ಗ್ರಾಮ, ಪಾದೂರು,	10—
21-2-49	460/48-9	ಪೀಲಿಪೂಜಾರ್ತಿ, ಕಟ್ಟಿತ್ರಿ ಪೂಜಾರಿ ಮಗಳು, ಮಲ್ಲಾರು ಗ್ರಾಮ, ಉಚ್ಚಿಲ.	100—
12-4-49	646/48-9	ಅಬ್ದುಲ್‌ಕಾದರ್, ಉಸ್ಮಾನ್ ಸಾಹೇಬರ ಮಗ, ಮಲ್ಲಾರು ಗ್ರಾಮ, ಕಾಪು, ದ. ಕ.	25—
23-6-49	993/48-9	ಅಬ್ದುಲ್‌ಕಾದರ್, ಎಸ್ಮಾನ್ ಸಾಹೇಬರ ಮಗ, ಮಲ್ಲಾರು ಗ್ರಾಮ, ಕಾಪು, ದ. ಕ.	30—
9-3-49	521/48-9	ಗೋವಿಂದಪೂಜಾರಿ, ಸಂಜೀವಪೂಜಾರಿ ಅಳಿಯ, ಮೂಲೂರು ಗ್ರಾಮವು, ಉಚ್ಚಿಲ	30—
18-11-49	215/49-50	ಕೆ. ರಘುನಾಥಶೆಟ್ಟಿ, ಮುಚ್ಚಿಶೆಟ್ಟಿ ಆಳಿಯ ಮೂಲೂರು ಗ್ರಾಮದ ಮನೆ, ಉಚ್ಚಿಲ.	85—
7-7-49	1016/48-9	ಜಾಯಪ್ಪ ಶೆಟ್ಟಿ, ಸೂರಪ್ಪಶೆಟ್ಟಿ ಆಳಿಯ ಮುದ್ಯಾನಿ, ಇನ್ನಂಜೆ, ದ. ಕ.	20—
11-1-50	56,50	ನಂತ್ತಿಪೂಜಾರಿ, ತಾಕ್ಕ ಪೂಜಾರಿ ಆಳಿಯ ಮಲ್ಪಾಂಡಿಯಂಗಳ್ಕಿ, ಪಡುಗ್ರಾಮ, ಕಾಪು	15—

OFFICE OF THE BANK
KAUP S. Kanara

K. Sitharama Shetty,
Agent.

ಉಡುಪಿ

ಸ್ಕೂಲ್ ಡೇ ಸಮಾರಂಭ—ಉಡುಪಿ ಕ್ರಿಶ್ಚಿನ್ ಹ್ಯಾಸ್ಕೂಲಿನ 'ಸ್ಕೂಲ್‌ಡೇ' ಸಮಾರಂಭವು ಇದೇ ತಾ 19ರಲ್ಲು ಸ್ಥಳೀಯ ಡಿ। ಮುನ್ಸಿಫ್ ಶ್ರೀ ಟಿ ವಿ ಬಿ ಸಿ ಕುಲಾಕೊ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ನಂತರ ಶಾಲಾ ಹೆಡ್ಮಾಸ್ಟರ್ ಶ್ರೀ ಎಸ್. ಎಸ್. ಮುತಾಯಸ್ ಅವರು ಶಾಲಾವರದಿಯನ್ನೋದಿದರು ವಕೀಲ್ ಶ್ರೀ ಎಚ್. ರಮಾನಾಥ ಪೈಗಳು ಶಾಲೆಯ ನಾಂದೀವಾಚನಮಾಡಿದರು. ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿದ ನಂತರ ಅಧ್ಯಕ್ಷರು ಶಾಲಾಭಿವೃದ್ಧಿಯನ್ನು ಕುರಿತು ಮಾತನಾಡಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಲ್ಲಿರಬೇಕಾದ ಶಿಸ್ತು ಮೊದಲಾದ ವಿಷಯಗಳನ್ನೆತ್ತಿ ಬೋಧಪ್ರದ ಭಾಷಣವಿತ್ತರು. ವಿವಿಧ ವಿನೋದಾವಳಿಗಾಗಿ ಸಭಾಂತ್ಯವಾಯಿತು

ಹಳೆವಿದ್ಯಾರ್ಥಿ ದಿನಾಚರಣೆ—ಇದೇ ಶಾಲೆಯ ಹಳೆವಿದ್ಯಾರ್ಥಿ ಕೂಟದ ದಿನಾಚರಣೆಯು ಇದೇ ತಾ 20ರಲ್ಲು ಸಂಜೆ ಡಾ। ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕೂಟದ ಅಧ್ಯಕ್ಷ ಆರ್ ಆರ್. ಕಾಂಜಾರು, ಅವರು ನಡೆದಿವಾಚನ ಮಾಡಿದ ನಂತರ ಸಭಿಕರ ಭಾಷಣಗಳಾದುವು. ಶಾಲೆಯ ಸಳಿಗೆಯ ಪರವಾಗಿ ಸ್ಥಾಪಿತವಾದ ಈ ಕೂಟಕ್ಕೆ ಶಾಲಾಡಳಿತದಲ್ಲಿ ಕೊಡಾ ಸ್ಥಾನವಿರಬೇಕೆಂಬುದೇ ಭಾಷಣಗಾರರೆಲ್ಲರಿಗೂ ಅಭಿಪ್ರಾಯವಾಗಿತ್ತು. ಆದಿಗೆ ಶಾಲಾಮುಖ್ಯೋಪಾಧ್ಯಾಯರು ಈ ಕುರಿತು ಆಸಕ್ತಿಯನ್ನು ತೀಕ್ಷ್ಣಮಾತುಗಳಮೂಲಕ ಪ್ರದರ್ಶಿಸಿದರು. ಇದರಿಂದಾಗಿ ಹಿಚ್ಚಿನ ಸಭಿಕರಿಗೆ ಬೇಸರ ಉಂಟಾಯಿತು. ಅಧ್ಯಕ್ಷರು ಸಭಿಕರ ಬಹುಮತ ಅಭಿಪ್ರಾಯವನ್ನು ಪುಷ್ಟೀಕರಿಸಿ ಮಾತನಾಡಿದರು. ರಾತ್ರಿ ಹಳೆ ವಿದ್ಯಾರ್ಥಿ ಕೂಟದ ಕಡೆಯಿಂದ ಭಟ್ಟಿನ ಟ್ಟಾಕ್ ಮಾ ಕೇಟ್' ಎಂಬ ಕನ್ನಡ ನಾಟಕವು ಜಾಲಾ ಭಂಡಿನ ಸಹಾಯಾರ್ಥವಾಗಿ ಪ್ರದರ್ಶಿಸಲಾಯಿತು.

ಬೆಳ್ಳಿಹಬ್ಬ — ಸ್ಥಳೀಯ ಕೆನರಾ ಬೇಂಕಿಂಗ್ ಕೊರ್ಪರೇಶನಿನ ಮಾಯಂ ಒಡಿ ಟರಾಗಿ ಕಳೆದ 25 ವರುಷಗಳಿಂದಲೂ ಸೇವೆ ಮಾಡುತ್ತಿದ್ದ ಶ್ರೀ ಕಲ್ಯಾಡಿ ಗೋಪಾಲಕೃಷ್ಣ ರಾಯರನ್ನು ಗೌರವಿಸುವರೆ ಬೇಂಕಿನ ಕಡೆಯಿಂದ ಇದೇ ತಾ. 21ರಲ್ಲು ಬೆಳ್ಳಿಹಬ್ಬ ಕೂಡಿಬರುವ ಜಂಗಿಸು. ಶ್ರೀ ಪಿ. ಗೋಪಾಲ ನಾಯ್ಕರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಡಾ। ಯು. ಪಿ ಮಲ್ಯ, ಎಮ್. ಎಲ್. ಎ. ಅವರು ಶ್ರೀ ರಾಯರ ಪರಿಚಯ ಮಾಡಿಕೊಟ್ಟರು. ಬೇಂಕಿನ ಜೆಯರ್‌ಮೆನ್ ಡಾ। ಎಸ್. ಆರ್. ಪೈಗಳು ಸ್ವಾಗತ ಭಾಷಣಮಾಡಿದರು. ಮಂಗಳೂರಿನ ಎಡ್ವೊಕೇಟ್ ಶ್ರೀ ಬಿ. ವೈಕುಂಠ ಬಾಳಿಗರು ಮತ್ತು ಕೆ. ಎಲ್. ಐತಾಳರು ಭಾಷಣ ಮಾಡಿದರು. ಬೇಂಕಿನ ಜನರಲ್ ಮೆನೇಜರ್ ಶ್ರೀ ವಿ. ಆರ್ ಕಾಮತರು ಶ್ರೀ ರಾಯರಿಗೆ 25 ವರುಷಗಳ ಪ್ರಾಯಂ ಒಡಿಬರತನದ ಸವಿನೆನಪಿಗಾಗಿ ಬೆಳ್ಳಿಹಬ್ಬದ ಮಾನಪತ್ರವನ್ನೋದಿ ಒಪ್ಪಿಸಿದ ನಂತರ ಬೇಂಕಿನ ಕಡೆಯಿಂದ ಬೆಳ್ಳಿ ಪೆಟ್ಟಿಗೆಯ ಪಾರಿತೋಷಕ ಕೊಡಲಾಯಿತು. ಸಭಾರಂಭದ ಪೂರ್ವದಲ್ಲಿ ಜಯಾ ಸತ್ಕಾರವಿತ್ತು.

ಜಾನುವಾರು ಪ್ರದರ್ಶನ ಉಡುಪಿ ರಥಬೀದಿಯಲ್ಲಿ ಇದೇ ತಾ. 21-ಲ್ಲು ಸಂಜೆ ಜಾನುವಾಲು ಪ್ರದರ್ಶನ ನಡೆಯಿತು. ಸರ್ವ ಸಾಮಾನ್ಯ ಜಾನುವಾರುಗಳು ಪ್ರದರ್ಶನಕ್ಕೆ ತರಲ್ಪಟ್ಟಿದ್ದುವು. ಪ್ರದರ್ಶನಾಂತ್ಯದಲ್ಲಿ ಮಹಾಜನ ಸಭೆಯೊಂ.ಎ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇತತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಎಸ್. ಆರ್. ಪೈಗಳು ಸ್ವಾಗತಭಾಷಣ ಮಾಡಿದರು. ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳು ಪಾರಿತೋಷಕವಿತರಣಾಕಾರ್ಯವನ್ನು ನೆರವೇರಿಸಿದರು ಸಭೆಗೆ ಚಿತ್ತೈಸಿದ ಶ್ರೀ ಪುತ್ತಿಗೆ ಮಠದ ಶ್ರೀ ಸುಜ್ಞಾನೀಂದ್ರತೀರ್ಥ ವಿದ್ಯಾವಲ್ಲಭ ಸ್ವಾಮಿಗಳವರು ಗೋಸಂಪತ್ತು, ಗೋಪಿನ ಯಾಲಿನ ಮಹತ್ವ ಇತ್ಯಾದಿ ವಿಷಯಗಳನ್ನೆತ್ತಿ ಉಪನ್ಯಾಸನಿತ್ತರು. ಪಶು ಇಲಾಖೆಯ ಜಿಲ್ಲಾಧಿಕಾರಿ ಡಾ। ಎಸ್ ಎ. ಶಾಸ್ತ್ರಿಗಳವರು ಜಾನುವಾರುಗಳ ಮಹತ್ವ, ಜಾನುವಾರುಗಳ ಸಂತತಿ ಅಭಿವೃದ್ಧಿ,ಅಬಗ್ಗೆ ಸದಭಿಪ್ರಾಯಂದ ಸಹಾಯ ಸಹಕಾರಗಳೇನಿಂಬುದನ್ನು ವಿವರಿಸಿ, ಪನಕರು ಮೊದಲಾದ ಜಾನುವಾರುಗಳನ್ನು ಸರಿಯಾದ ರೀತಿಯಲ್ಲಿ ಸಾಕಿದರೆ ಆವುಗಳ ಉತ್ಪತ್ತಿ ಪ್ರಯೋಜನವು ಅಹಾರ ಕೊರತೆಯ ಕೆಲವರ್ಷಗಳನ್ನಾದರು ಹೋಗಲಾಡಿಸಲು ನೆರವಾಗುವುದೆಂದರು. ಸಭಾಧ್ಯಕ್ಷರು ಸ್ವದೇಶ, ವಿದೇಶಗಳಲ್ಲಿ ಆಕಳಿಗೆ ಎಂತಹ ಪರಮಪೂಜ್ಯ ಸ್ಥಾನವಿದೆ ಎಂಬುದನ್ನು ಸರಿಯಾಗಿ ವಿವರಿಸಿ ಗೋಬಳಗವು ಅಭಿವೃದ್ಧಿಯಾದ ಹಾಗೆಲ್ಲ ಜನಾಂಗದ ಬೆಳವಣಿಗೆಯೂ ಅಧಿಕವಾಗುವುದೆಂದರು. ಸ್ಥಳೀಯ ಪಟ ಸೇರಿ ಶ್ರೀ ಸರ್ವೋತ್ತಮ ಪೈ, ರವಿವರ್ಮ ಪೆಡ್ಡಿರವ ಧನ್ಯವಾದಗಳನ್ನರ್ಪಿಸಿದರು.

ಮುನಿಸಿಪಲ್ ಕೌನ್ಸಿಲಿನ—ಆಡಳಿತ ಸಭೆಯು ಇದೇ ತಾ. 22ರಲ್ಲು ಸಂಜೆ ಚೇರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಇಂಡಿಯನ್ ಎಕ್ಸ್‌ಪ್ಲೊಸಿವ್ ದಿನಾಚರಣೆಯ ಪೆಚ್ಚಕ್ಕಾಗಿ ಒಂದುನೂರು ರೂಪಾಯಿ ಸೆಂಕ್ಷನ್ ಮಾಡಲಾಯಿತು. ಬಳಿಕ ಸಾಮಾನ್ಯ ಸಭೆಯು ಜರಗಿ, ಸಂಬ್ಸಲ್‌ವಾರ್ಡಿನ ಟೌನ್‌ಪ್ಲಾನಿಂಗ್ ಸಂಬಂಧವಾದ ಆಫಲುಗಳು ತೀರ್ಮಾನಿಸಲ್ಪಟ್ಟವು.

ಉಡುಪಿಯಲ್ಲಿ ರಿಪಬ್ಲಿಕ್ ದಿನಾಚರಣೆ ಕಾರ್ಯಕ್ರಮ—ಇದೇ ತಾ. 26ನೆ ಬೆಳಿಗ್ಗೆ ಗಾಂಧಿ ಮೈದಾನದಲ್ಲಿ ರೆ। ಫಾ। ಎ. ಬಿ. ಪಿಂಟೊ, ಆವರಿಂದ ಧ್ವಜಾರೋಹಣ ಸಂಜೆ ಗಂಟೆ 4-15ಕ್ಕೆ ಬೋರ್ಡು ಹೈಸ್ಕೂಲಿನಿಂದ ಸಾರ್ವಜನಿಕ ಮೆರವಣಿಗೆ ಹೊರಟು ನಗರದ ಪ್ರಮುಖ ರಸ್ತೆಗಳಲ್ಲಿ ಹಾದು ಗಾಂಧಿ ಮೈದಾನಿಗೆ ತಲ್ಪುವುದು. ಗಂಟೆ 5ರಿಂದ 7-15ರ ವರೆಗೆ ಸಭೆ ಮತ್ತು ವಿನೋದಾವಳಿಗಳು

ಗಾಂಧಿಜೀಯವರ ನಿರ್ವಾಣ ದಿನವು—ಇದೇ ತಾ. 30ನೇ ಮಂಗಳವಾರ ಅಪರಾಹ್ನ ಗಂಟೆ 4ರಿಂದ 5ರ ತನಕ ಸಾಮೂಹಿಕ ಸೂತ್ರಯಜ್ಞ ನಂತರ ಸಾಮೂಹಿಕ ಪ್ರಾರ್ಥನಾ ಕಾರ್ಯಗಳಿಂದ ಬೋರ್ಡು ಹೈಸ್ಕೂಲಿನ ಜನತಾ ಚಾವಡಿಯಲ್ಲಿ ಆಚರಿಸಲ್ಪಡುವುದು ನೋಲೆ ಸೂಚಿಸಿದ ಎರಡು ದಿವಸಗಳ ಕಾರ್ಯಕ್ರಮಗಳು ಯಶಸ್ವಿಯಾಗಿ ಕೊನೆಗೊಳ್ಳುವಂತೆ ಪುರಜನರೆಲ್ಲರೂ ಸಹಕರಿಸಬೇಕಾಗಿ ಉಡುಪಿ ಸರ್ವಲ್ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಕೆ. ನಂಜಪ್ಪ ಕಾಮತರು ಆಕ್ಷರಿಯ ವಿನಂತಿಯಿದೆ.

ದ ಕ. ಜಿಲ್ಲಾ ವಿದ್ಯಾರ್ಥಿ ಸಮ್ಮೇಳನವನ್ನು ಫೆಬ್ರವರಿ ತಿಂಗಳ ಮೊದಲನೆಯ ವಾರದಲ್ಲಿ ನಡೆಸುವರೆ ಸ್ವಾಗತ ಸಮಿತಿಯು ಕಾರ್ಯರೈಗೊಂಡಿರುತ್ತದೆ. ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳ ಸ್ಥಾನಮಾನಗಳನ್ನು ಎನ್ನುವ ವಿಷಯದ ಕುರಿತು ಚರ್ಚೆ ನಡೆಯಲಿದೆ. ಜಿಲ್ಲೆಯ ಕಾಲೇಜು, ಹೈಸ್ಕೂಲ್ ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ. ಹೊರಗೆ ಪ್ರತಿನಿಧಿಗಳಾಗಿ ಬರುವ ವಿದ್ಯಾರ್ಥಿಗಳಿಗೆ ಊಟ, ವಸತಿಗಳ ವಿಸರ್ಜನೆಯನ್ನು ಮಾಡಲಾಗುವುದೆಂದೂ, ಬಂಲಪೇಕ್ಷಿಸುವ ವಿದ್ಯಾರ್ಥಿಗಳು ಕಾರ್ಯದರ್ಶಿ ಸ್ವಾಗತ ಸಮಿತಿ ದ. ಕನ್ನಡ ಜಿಲ್ಲಾ ವಿದ್ಯಾರ್ಥಿ ಸಮ್ಮೇಳನ, ಉಡುಪಿ' ಈ ವಿಳಾಸಕ್ಕೆ ಸೂಚಿಸಬೇಕೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕರ್ನಾಟಕ ಸಂಘ, ಉಡುಪಿ

ದಕ್ಷಿಣ ಕನ್ನಡ ಜಿಲ್ಲೆಯನ್ನು ಕರ್ನಾಟಕ ವಿಶ್ವವಿದ್ಯಾಲಯ ಕ್ಷೇತ್ರದೊಡಗೆ ಸೇರಿಸಬೇಕೆಂಬ ಉಡುಪಿಯ ಕರ್ನಾಟಕ ಸಂಘವು ಮಾಡಿಕೊಂಡ ಮನವಿಗೆ ಮದರಾಸು ಸರಕಾರವು ನೆಕಾರಾತ್ಮಕವಾದ ಉತ್ತರವನ್ನು ದಯಪಾಲಿಸಿರುವುದು ಶೋಚನೀಯವೆಂದು ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ನುಪಾತ್ಮಾಗಾಂಧೀ ಮೆಮೋರಿಯಲ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ "ಸ್ವತಂತ್ರ ಭಾರತದಲ್ಲಿ ಪತ್ರಿಕೆಗಳದೇಕೆ?" ಎಂಬ ವಿಚಾರವಾಗಿ ದಿನಾಂಕ ೧೩-೧-೫೧ ರಂದು ಚರ್ಚೆ ನಡೆಯಿತು. ಶ್ರೀ ಕಂ. ಶಿ. ಹರಿದಾಸಭಟ್ಟರು ಅಧ್ಯಕ್ಷತೆ ವಹಿಸಿದ್ದರು.

ತ್ಯಾಗರಾಜ ನುಪಾತ್ಮಾ ಗಾಂಧೀ ಪುಣ್ಯದಿನೋತ್ಸವವು ಕೊಡವೂರು ಸಂಗೀತ ಶಾಲೆಯಲ್ಲಿ ತಾ 27-1-1951ರಿಂದ ತಾ. 31-1-1951ರ ವರೆಗೆ ಸಂಗೀತ, ಹರಿಕಥೆ, ಯಕ್ಷಗಾನ, ಭಜನೆ ಮೊದಲಾದ ಕಾರ್ಯಕ್ರಮಗಳಿಂದ ನಡೆಯಲಿದೆ. ಸರ್ವರಿಗೂ ಸುಸ್ವಾಗತವಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ತಿದ್ದುಪಡಿ—ನಮ್ಮ ತಾ. 18-1-51ರ ಸಂಚಿಕೆಯ ಒಂಭತ್ತನೆ ಪುಟದಲ್ಲಿ ಪ್ರಕಟವಾದ ಕಾನಸರ್‌ಗೂಡು ಮುನ್ಸಿಫ್ ಕೋರ್ಟಿನ ಎಡ್ವೋಕೇಟ್ ಶ್ರೀ ಕೆ. ಪಿ. ಮಾಧವರಾಯರ ನೋಟೀಸಿನಂಬ R-I-A-2570/50-O. P. 27/50 ಬಿಟ್ಟು ಹೋದುದನ್ನು ನೋಂಸಿ ವಾಚಕರು ಓದಬೇಕಾಗಿ ವಿನಂತಿ.

ಸಂ। ನಿ।

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಡ್ ಆಫೀಸು: ಉಡುಪಿ.

ಶ್ರೀ ಮಜೂರುಮನೆ ಹಿರಿಯಣ್ಣ ಶೆಟ್ಟರನ್ನು ನಮ್ಮ ಕಂಪೆನಿಯು ಮೆನೇಜರರನ್ನಾಗಿ ನಿಯಮಿಸಿದ್ದೇವೆ. ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕೆಲಸಮಾಡತಕ್ಕ Chief Agents, ಏಜಂಟರೂ ಸ್ಪೆಶಲ್ ಏಜಂಟರೂ ಬೇಕಾಗಿದ್ದಾರೆ. ವಿವರಗಳಿಗೆ ಬರೆಯಿರಿ.

B V Acharya,
B A, B.L.
Managing Director.



Approved from by the Govt of Mysore
Certificated by the Agent of the Govt of Cylone & Indian

ಅಮೃತಾಂಜನ

ತಲೆನೋವು, ಶಿರೋನೋವು, ಉಳುಕು ಕುತ್ತಿಗೆ, ಭುಜ ಹಲ್ಲು ನೋವುಗಳಿಗೂ, ಎದೆನೋವು,ಕಾಯಿಗಳು, ಬಾತುಕೆಳ್ಳುಗಡ್ಡು, ಚೇಳಕಿಷಮುಂತಾದವು, ಸರ್ಪಸಾತ,ಮೊಡವೆ, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತವೆ

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಟೈಪು ರೀ ಕ್ಯಾಪ್ಟಿಂಗ್ ಛಾರ್ಜನ್ನು ಅರ್ಧಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳಿ.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ ಮೈಸೂರು ಟೈಪು ಫೌಂಡರಿಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕ್ಯಾಸ್ಟ್ ಮಾಡಿಸುವುದರಿಂದ ವಿಪರೀತ ಉಳಿತಾಯವಾಗುತ್ತದೆ.

ಸಾವಿರ ಪೌಂಡು ಮತ್ತು ಹೆಚ್ಚಿಗೆ	ಐನೂರು ಪೌಂಡು ಮತ್ತು ಹೆಚ್ಚಿಗೆ
ಪೌಂಡಿಗೆ 0—10—0	ಪೌಂಡಿಗೆ 0—12—0

ಸೇಲ್ಸ್ ಟ್ಯಾಕ್ಸ್, ವ್ಯಾಕಿಂಗ್ ಮತ್ತು ಫಾರ್ಪಡಿಂಗ್ ಛಾರ್ಜ ಮುಫತ್ತು.

ಇಂದೇ ವಿವರಗಳಿಗೆ ಬರೆಯಿರಿ: ಮ್ಯಾನೇಜರ್,

ಮೈಸೂರು ಟೈಪು ಫೌಂಡರಿ,
ಬೆಂಗಳೂರು-2



ದ ಮ್ಮು ಹೋದರೆ ತಿರುಗಿ ಬಾರದು

ಕಳೆದ ೨೮ ವರ್ಷದಮ್ಮಿಗೆ ವ್ಯಸಿದ್ಧ ಡಾಕ್ಟರರ ಔಷಧದ ಉಪಾಯ

ಪುರೋಹಿತ-ಶ್ವಾಸಹಾರಿ

೧, ೬. ೧೨, ಡಿಂ.ಪ್ಯಾಕಿಂಗದಲ್ಲಿ೩, ೬, ೧೦, ರೂ ತಿಮ್ಮತ್ತು. ಭಾರತದಲ್ಲಿ ಎಲ್ಲಾಕಡೆ ಮಾರಾಟಕ್ಕೆ ಸಿಗುತ್ತದೆ ಇಲ್ಲದೇ ಮಾಡಿದಲ್ಲಿಂದ



ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಲ್ಲಿ ತಾಮ್ರ ಪಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಮಂ ಆಗಿಯೂ ಚಿಲ್ಲರೆಯಾಗಿಯೂ ಮೊರೆಯುತ್ತವೆ.

ಕಲ್ಕಿಂಕ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

[*ನೇ ಪುಟದಿಂದ ಮುಂದರಿಸಿದ್ದು]

ಭಾರತದ ವಿದೇಶಾಂಗ ನೀತಿ

ಯುರೋಪಿನಲ್ಲಿ ಪಶ್ಚಿಮದ ಪ್ರಜಾತಂತ್ರದ ರಾಷ್ಟ್ರಗಳು ಉಳಿಯಬೇಕಾದರೆ ಅಮೇರಿಕದ ಶಸ್ತ್ರಾಸ್ತ್ರ ಬರಲೇಬೇಕು, ಹಾಗೆಯೇ ಯುದ್ಧಾರಂಭದಲ್ಲೇ ಫಿಲಿಪೀನ್ ಜಪಾನುಗಳು ಯುದ್ಧರಂಗವಾಗಿ ಪರಿಣಮಿಸಿ ಇಂಡೋಚೀನವನ್ನೂ ಸಾಮ್ಯವಾದಿಗಳು ತಿವಿಯಲು ಯತ್ನಿಸಿದಲ್ಲಿ ಯೆಂದ್ದು ನಮ್ಮ ಬಾಗಿಲಿಗೆಯೆ ಬಂತೆಂದು ತಿಳಿಯಬಹುದು. ಆಗ ಅದರ ಬೇಗೆಯನ್ನು ಫಿಲಾಂಸಲು ಬರ್ಮಾ, ಭಾರತ ಪಾಕಿಸ್ತಾನಗಳಿಗೆ ಅಮೇರಿಕದ ಸಹಾಯ ಇಲ್ಲದೆ ಸಾಧ್ಯವೆ? ಎಂಬುದಕ್ಕೆ 'ಇಲ್ಲ' ಎಂಬ ಉತ್ತರವಹುದಾದರೆ ನಮಗೆ ಸ್ವತಂತ್ರ ವಿದೇಶಾಂಗ ನೀತಿಯನ್ನು ಆರಿಸುವ ಹಕ್ಕಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಇಂಥ ಹಕ್ಕು ಸಂಯುಕ್ತ ರಾಜ್ಯ ಮತ್ತು ಸೋವಿಯಟ್ ಹೊರತು ಬೇರೆ ಯಾವ ರಾಷ್ಟ್ರಕ್ಕೂ ಇಲ್ಲ. ಭಾರತವು ನಿಷ್ಪಕ್ಷಪಾತ ದೃಷ್ಟಿಯಿಂದ ಜಾಗರೂಕ ಧೋರಣೆಯನ್ನು ವಹಿಸಲು ಶತಯತ್ನ ಮಾಡುತ್ತಿದ್ದರೂ ನಮ್ಮ ಒಲ ಪ್ರಜಾಸ್ವಭಾವದ ಕಡೆಗೆ ಒಲೆಯಲು ನಮ್ಮ ರಕ್ಷಣೆಯ ಯಥಾರ್ಥ ಪರಿಸ್ಥಿತಿಯು ಕಾರಣವಾಗಿರುತ್ತದೆ. ಕೊರಿಯದಲ್ಲಿ ನಾವು ನಮ್ಮ ತಾಟಸ್ಥ್ಯವನ್ನೇ ಕಟ್ಟು ನಿಟ್ಟಾಗಿರಿಸಿದುದಕ್ಕೂ ಇದೇ ಕಾರಣ. ಟ್ರೂಮನ್ ಅವರ ಪೊಯಿಂಟ್-೪ ಯೋಜನೆಯು ಈಗಾಗಲೇ ಕಾರ್ಯರೂಪಕ್ಕೆ ಬರಲಿದೆ. ಇದರ ಜತೆಗೆ ಅಮೇರಿಕದ ಅಭಿನ್ಯಾಯವು ಭಾರತಕ್ಕೆ ೨೦ ಲಕ್ಷ ಟನ್ ಧಾನ್ಯ ಕಳಿಸಬೇಕೆಂದು ಒತ್ತಾಯ ಪಡಿಸುತ್ತಿದೆ. ನಮ್ಮ ಯೋಜನೆಗಳಿಗೆ ಬೇಕಾದ ಯಂತ್ರ ಸಾಮಾಗ್ರಿ ಕೊಡಬಲ್ಲವರೂ ಅಮೇರಿಕದವರೇ. ಇಂಥ ಅನೇಕ ಕಾರಣಗಳ ದೆಸೆಯಿಂದ ನಾವು ಅಮೇರಿಕಕ್ಕೆ ವಿರುದ್ಧವಾಗಿ ವರ್ತಿಸುವ ಪ್ರಸಂಗ ಬಲು ದೂರ ಸಂದಿದೆ.

ಭಾರತ—ಪಾಕಿಸ್ತಾನ

ಭಾರತ ಪಾಕಿಸ್ತಾನ ಸಂಬಂಧದ ದೃಷ್ಟಿಯಲ್ಲಿ ಕಳೆದ ವರ್ಷದ ವರದಿ ನಿರಾಶಾಜನಕವಾಗಿದೆ. ನಮ್ಮ ವಿನಿಮಯದರದ ಜರ್ಜೆ ಇನ್ನೂ ಇದ್ದಲ್ಲೇ ಇದೆ. ನೀರಿನ ಜಗಳ ಇನ್ನೂ ತೀರಿಲ್ಲ. ಡಿಕ್ಸನ್ ಯತ್ನ ಭಗ್ನವಾಯಿತು. ಇಬ್ಬರು ಪ್ರಧಾನಿಗಳ ವಿವೇಕದಿಂದ ಕಳೆದ ಮಾರ್ಚಿನಲ್ಲಿ ನಮ್ಮೊಳಗಿನ ತಾಕಲಾಟವೊಂದು ನಿಂತಂತಾಯಿತು. ಕಾಶ್ಮೀರ ಬಗೆಹರಿಯದೆ ನಮ್ಮ ಒಡನಾಟ ಅಷ್ಟು ಜೆನ್ನಾಗುವ ಲಕ್ಷಣವಿಲ್ಲ. ಆದರೆ ಸಾಮ್ಯವಾದಿ ತಂಡದ ಭಯವು ನಮಗೀರ್ವರಿಗೂ ಸಮಾನವಾಗಿರುವುದರಿಂದ ನಮ್ಮ ಸ್ವಾರ್ಥಕ್ಕಾಗಿ ನಾವು ಏಕರೂಪವಾದ ಧೋರಣೆ ಅನಿವಾರ್ಯವಾಗಿದೆ. ಬರುವ ಯುದ್ಧ ನಮ್ಮನ್ನೊಂದುಗೂಡಿಸದಿದ್ದರೂ ನಮ್ಮ ವಿದೇಶ ನೀತಿಯನ್ನೊಂದಾಗಿಸುವುದು. ಅಂತೂ ಬೇಕಾಗಿಯೋ ಬೇಡವಾಗಿಯೋ ನಮ್ಮ ಪ್ರಯತ್ನವಿಲ್ಲದೆ ನೀ ನಾವು ಪ್ರಜಾತಂತ್ರವಾದಿಗಳ ತಂಡಕ್ಕೆ ಸೇರಿಹೋಗಿರುವೆವು. ನಮ್ಮ ವಿದೇಶಾಂಗ ನೀತಿಯು ಸ್ವಪ್ರಯತ್ನವಿಲ್ಲದೆನೆ ಬೇರೆಯೇ ಕಡೆ ನಿರ್ಣಯಿಸಲ್ಪಡುತ್ತಿದೆ. ನಮ್ಮಲ್ಲಿ ಮಹಾಮಹಾ ನಾಯಕರಿದ್ದಾರೆ ನಿಜ. ಇತಿಹಾಸದ ಒಂದು ಪರಿಕಾಲದಲ್ಲಿ ನಾವು ಕಾರ್ಯಶಕ್ತರಾಗಿರುವುದೂ ನಿಜ. ನೆಹರೂ ಅಂಥ ಪ್ರಧಾನಿ ನಮ್ಮವರೆಂಬುದು ನಿಜ. ಆದರೆ ಜಾಗತಿಕ ಕಾಲಪುರುಷನು ಇಂದು ಕನ್ನಡ ಭವಿಷ್ಯದ ಅಯ್ಯೆಯ ಅಧಿಕಾರವನ್ನು ಇತರ ರಾಷ್ಟ್ರಗಳಿಗೆ ಕೊಟ್ಟು, ನಮ್ಮ ಅದೃಷ್ಟವನ್ನು ಅವರ ಭಾಗ್ಯದ ಕಾಲಿಗೆ ಕಟ್ಟಿ ಕೂಡಿಸುತ್ತಿದ್ದಾನೆ.

ದಿಲ್ಲಿಯ ಈಸ್ಟರ್ನ್ ಇಕಾನಮಿಸ್ಟ್

Notice.

ಕುಂದಾಪುರ ಡಿ. ಮುನ್ಸಿ. ಕೋರ್ಟಿನಲ್ಲಿ

O. S. 123/1947

R. E. P. 219/1950.

ವಾದಿ—ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಪ್ರತಿವಾದಿರು 1 ಫೆರ್ನಾಂಡಿಸ್, ಕಾಮಿಲ ಸೆಬಸ್ಟಿನ್ ಫೆರ್ನಾಂಡಿಸರ ಮಗ, ಕೊಡವೂರು ಗ್ರಾಮದ ಮಲ್ಪೆ, ಉಡುಪಿ ತಾಲ್ಲೂ. Post: Malpe.

2 ಡಿ'ಆರ್. ಜೋಸೆಫ್ ಆಂದ್ರಾದೆ, ಲೋಸ್ ಆಂದ್ರಾದರ ಮಗ, ಕೋಡಿ ಗ್ರಾಮದ ಸೆಂಗ್ರೆ. ಉಡುಪಿ ತಾಲ್ಲೂ.

ಸದ್ರಿ 1-2ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ—

ಮೇಲ್ಕಂಡ ದಿಕ್ರಿಯ ಹಣ ವಸೂಲಿ ಬಗ್ಗೆ ನಮ್ಮ ಬಾಬ್ತು ಬೋಗ್ಯಾದಿ ಹಕ್ಕಿನ ಆಸ್ತಿಗಳನ್ನು ಏಲಂಮಿಗೆ ಆಕ್ಷೇಪಿಸಿ ಆಸ್ತಿಹಾರು ಮಾಲ್ಲು ಮಾಡಿರುವುದರಿಂದ ಸದ್ರಿ ಆಸ್ತಿಹಾರಾನ್ಶೇತರ್ಣಯಿಸುವರೆ ತಾರೀಕು 7-2-51 ಕ್ಕೆ ಇರುತ್ತದೆ. ಆ ಅಂತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಹಗಲು 11ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ತ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾದೀತು ಎಂಬ ಇಂಗ್ರಿ ಕೋರ್ಟಿಗೆ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenai,
Pleader for Plaintiff.
Coondapoor, 20—I—1951.

ಮಂಗಳೂರು

ಕವಿ ಮುದ್ದಣ್ಣ ಜಯಂತಿಯು—ಇದೇ ತಾ. 14ರಲ್ಲು ಜನಪದ ಕಲಾಮಂದಿರದ ನೇತೃತ್ವದಲ್ಲಿ ಶ್ರೀ ಎಮ್.ಕೆ.ಗಳ ಶಂಭು ಭಟ್ಟ ವಿದ್ವಾನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಅಮ್ಮೆಂಬಳ ಶಂಕರನಾರಾಯಣ ವಿದ್ವಾನ್, ಅವರು ನೂತನವಾಗಿ ಕವಿ ಮುದ್ದಣ್ಣನ ಜೀವನ ಇಂದಿನ ಬರಹಗಾರರಿಗೆ ಆದರ್ಶವಾಗಿದೆ ಎಂದರು. ಶ್ರೀ ಸಿ. ಪಿ. ಕಾಮತರು ಕವಿಯ ಸಾಹಿತ್ಯ ಮಾರ್ಗವನ್ನು ಪ್ರಶಂಸಿಸಿ ಮಾತನಾಡಿದರು. ಅಧ್ಯಕ್ಷರು ಕವ್ಯ ಭಾವಣದಲ್ಲಿ ಮುದ್ದಣ್ಣನು ಕನ್ನಡ ಸಾಹಿತ್ಯದಲ್ಲಿ ಸ್ವತಂತ್ರ ಮಾರ್ಗವನ್ನು ಪ್ರಯೋಗಿಸಿ ಸಾಹಿತ್ಯದಲ್ಲಿ ಮಾಡಿದ ಕ್ರಾಂತಿಯನ್ನು ಎತ್ತಿ ತೋರಿಸಿದರು. ಕವಿಯ ಆದರ್ಶವನ್ನು ಮುಂದಿಟ್ಟುಕೊಂಡು ಸ್ವತಂತ್ರ ಮಾರ್ಗದಿಂದ ಸಾಹಿತ್ಯ ರಚನೆಯಾಗುವಂತಾಗಲೆಂದು ಆಶೈಕ್ಷಿಸಿದರು.

ಅಗತ್ಯವಿದ್ದಲ್ಲಿ ರಿಲೀಫ್ ಅಂಗಡಿಗಳು—ಸೀಮಾ ಪದ್ಧತಿಯನ್ನು ರದ್ದುಗೊಳಿಸಿದ ಜಿಲ್ಲೆಯ ಗ್ರಾಮಾಂತರಗಳ ಆಹ್ಯಯ ಪರಿಸ್ಥಿತಿಯನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ರಿಲೀಫ್ ಅಂಗಡಿಗಳನ್ನು ತೆರೆಯುವ ಬಗ್ಗೆ ಯೋಜನೆ ಮಾಡಲಾಗುವುದೆಂದು ಈಚೆಗೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದ ಪತ್ರಿಕೋದ್ಯೋಗಿಗಳ ಸಭೆಯಲ್ಲಿ ಜಿಲ್ಲಾ ಕಲೆಕ್ಟರರು ತಿಳಿಸಿದರು.

ತಾಜ್‌ಮಹಲ್ ಹೋಟೆಲಿನ ರಜತೋತ್ಸವವು—ಇದೇ ತಾ 14ರಲ್ಲು ರಾತ್ರಿ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಹೊಟೆಲ್ ಮ್ಯಾಲಿಕರು ಕ್ಷಯರೋಗಿಗಳ ಆಸ್ಪತ್ರೆಗೆ ರೂಪಾಯಿ 3500/ನ್ನು ಜಿಲ್ಲಾ ಕ್ಷೇಮ ನಿಧಿಗು ಕಾರ್ಯದರ್ಶಿ ಶ್ರೀ ಡಿ ಮೋಹನ ರಾಯರಿಗೆ ಹಸ್ತಾಂತರಿಸಿದರು.

ಹೊಸ ಪೋಲೀಸ್ ಸೂಪರಿಂಟೆಂಡೆಂಟರು—ಜನಾಬ್ ಮಹಮ್ಮದ್ ಸುಲ್ತಾನ್ ಭರೂಕ್ ಅವರು ದ. ಕ. ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟರಾಗಿ ನೇಮಕಹೊಂದಿದ್ದು ಈಗಾಗಲೇ ಚಾರ್ಜ್ ವಹಿಸಿಕೊಂಡಿರುತ್ತಾರೆ.

ಸ್ಮಾರಕ ಗ್ರಂಥ ಪ್ರಕಟಿಸುವ ಯೋಜನೆ—ಪಾವಂಜೆ ಗೋಪಾಲಕೃಷ್ಣ ಸ್ಮಾರಕ ಸಮಿತಿಯ ಸಭೆಯು ಇದೇ ತಾ. 14ರಲ್ಲು ಶ್ರೀ ದೇವದಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ, ಕಾರ್ಯಸಮಿತಿಯೊಂದು ರಚನೆಯಾಯಿತು. ಈ ವರ್ಷಾಂತ್ಯದಲ್ಲಿ ಕೆನರಾ ಹೈಸ್ಕೂಲಿನ ವಜ್ರೋತ್ಸವವೂ ಹಳೆ ವಿದ್ಯಾರ್ಥಿ ಸಂಘದ ರಜತೋತ್ಸವವೂ ಜರಗುವಾಗ ದಿವಂಗತ ಪಾವಂಜೆಯವರ ವಿಚಾರವಾಗಿ ಒಂದು ಸ್ಮಾರಕ ಗ್ರಂಥ ಪ್ರಕಟಿಸಬೇಕಾಬ ನಿರ್ಣಯವಾಯಿತು. ಆ ಬಗ್ಗೆ ಉಪ ಸಮಿತಿಯ ನೇಮಕವೂ ಆಯಿತು.

ರೈತರ ಸಭೆ ಮತ್ತು ಪ್ರದರ್ಶನ—ದಕ್ಷಿಣ ಕನ್ನಡ ಜಿಲ್ಲೆಯ ರೈತರ ಮಹಾಸಭೆಯೊಂದು ಇದೇ ತಾ. 13ರಲ್ಲು ಮಂಗಳೂರಿನ ಕಂಕನಾಡಿಯಲ್ಲಿರುವ ಕೃಷಿ ಸಂಶೋಧನಾ ಕೇಂದ್ರದಲ್ಲಿ ಶ್ರೀ ಕೆ. ಬಿ. ಜೆನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಶಾಂಭವಿ ಆರ್. ಪೂಂಜರು ಪ್ರಾರ್ಥನೆ ಮಾಡಿದರು.

ಕೇಂದ್ರದ ಸಹಸಂಚಿಂಡೆಂಟ್ ಶ್ರೀ ಹನುಮಂತ ರಾಯರು ಸ್ವಾಗತವಿತ್ತರು. ಕೇಂದ್ರದ ಮೆನೇಜರ್ ಶ್ರೀ ರಾಮಕೃಷ್ಣ ರಾಯರು ಕೇಂದ್ರದ ಚಟುವಟಿಕೆಯ ಕುರಿತಾದ ವರದಿಯನ್ನೋದಿದರು. ಬಳಿಕ ಕೃಷಿ ಇಲಾಖೆಯ ಜಿಲ್ಲಾಧಿಕಾರಿಗಳಾದ ಶ್ರೀ ಎ. ರಾಮಣ್ಣ ರೈಗಳು ಆಧಿಕಾಹಾರ ಬೆಳೆಯುವ, ಚಳವಳಿಯಿಂದಾದ ಪ್ರಯೋಜನಗಳನ್ನೂ ವಿವರಿಸುತ್ತ ಸರಕಾರದಿಂದ ಸಿಕ್ಕುವ ಎಲ್ಲಾ ಸಹಕಾರವನ್ನೂ ರೈತರು ಪಡೆದುಕೊಳ್ಳಬೇಕೆಂದರು. ಬಳಿಕ ಬೇರೆ ಬೇರೆ ಸ್ಥಳಗಳಿಂದ ಬಂದ ಪ್ರತಿನಿಧಿಗಳ ಭಾಷಣಗಳಾದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂದಿನ ರೈತರ ಪರಿಸ್ಥಿತಿಯನ್ನೂ ರೀತಿನೀತಿ ಶ್ರಮವಿಂದಾದ ತೊಂದರೆಯನ್ನೂ ತಿಳಿಸಿ, ಜಿಲ್ಲೆಯಲ್ಲಿ ಆಹಾರವನ್ನು ಅಧಿಕವಾಗಿ ಬೆಳೆಸುವ ವಿಚಾರದಲ್ಲಿ ಎಲ್ಲರೂ ಒಮ್ಮತದಿಂದ ಯೋಜನೆ ಮಾಡಬೇಕೆಂದರು. ಶ್ರೀಮತಿ ಪೂಂಜರು ಪ್ರದರ್ಶನದ ಉದ್ಘಾಟನೆ ಮಾಡುತ್ತಾ, ನಮ್ಮ ರೈತರು ಹಳೆಪದ್ಧತಿಯಲ್ಲೇ ಕೃಷಿಮಾಡುವುದನ್ನು ಬಿಟ್ಟು ನವೀನಪದ್ಧತಿಯಲ್ಲಿ ಯಂತ್ರೋಪಕರಣಗಳ ಉಪಯೋಗದಿಂದ ಅಧಿಕಾಹಾರ ಬೆಳೆಸಬೇಕೆಂದು ಹೇಳಿ ರೈತರಿಗೆ ಅನುಭವ ಕೊಡಲು ಇಂತಹ ಪದರ್ಶನಗಳು ಆಗತ್ಯವೆಂದು ಸೂಚಿಸಿದರು.

ಪ್ರಜಾಸ್ವಭುತ್ವ ದಿನಾಚರಣೆ—ಯನ್ನು ಇದೇ ತಾ 26ರಲ್ಲು ಯೋಗ್ಯರೀತಿಯಲ್ಲಿ ಆಚರಿಸುವ ಬಗ್ಗೆ ಕಾರ್ಯಕ್ರಮ ನಿರ್ಧರಿಸಲು ದ ಕ. ಜಿಲ್ಲಾ ಜೋರ್ಡು ಸಭಾಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ರಾ ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಇದೇ ತಾ 17ರಲ್ಲೊಂದು ಸಭೆಸೇರುತ್ತು.

The Bombay Life Assurance company Limited.

Notice having been given of the Loss of Policy No. 149581 on the Life of Sri Perdoor Madhava Nayak a duplicate policy will be issued unless objection is lodged with us within one month from this date

K. BALASUBRAHMANYAM
Manager & Actuary
Bombay, 20—I—1951.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಏಸ್ನಾನ, ಊಟ, ಉಪಹಾರ, ವೈಕರ್, ಕಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಯನು ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI S. Kanara.

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ಮಾತೋಗದ ಬಾಧೆಗಳಾದ ಉದರಶೂಲೆ, ಕಟಿಶೂಲೆ, ಮೈಕೈಗಳಲ್ಲಿ ನೋವು, ಜಡತೆ, ಅನೀರ್ಣ, ಕೊಟ್ಟೆ ಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಬಾಧೆಗಳಿಗೂ ನಾಮಜಾದು ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವವುಳ್ಳ ಸರಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

ಪೋ ಕುಂಜಾಲು, ದ ಕ.

ಇವರ **'ಧನ್ವಂತರೀ ಮಾತ್ರೆ'ಗಳು** ಮಾತ್ರ.

ಕೇವಲ ನಾಲ್ಕಾಣೆಯ ಅಂಚೆಚೀಟಿಯನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅದರ ವಿಸ್ಮಯ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ

ಟ್ರೂಮನ್

ಅಮೇರಿಕಾದ ಅಧ್ಯಕ್ಷ ಟ್ರೂಮನ್ ಜಗತ್ತಿನಲ್ಲೆ ದೊಡ್ಡ ಅಧಿಕಾರವಂತ. ಆದರೆ ಟ್ರೂಮನನ ಸಂಕುಚಿತ ಬುದ್ಧಿಮತ್ತೆಗೂ, ಅಧ್ಯಕ್ಷನಿಗಿರಬೇಕಾದ ವಿಶಾಲ ದೃಷ್ಟಿಕೋನಕ್ಕೂ ಮೊಲಿಕೆಯೇ ಇಲ್ಲ! "ಒಬ್ಬ ಟ್ರೂಮನನ ಅವಸರದ ಸಂಕಲ್ಪದಿಂದ ಅಣುಬಾಂಬು ಒಡೆದು ಜಗತ್ಪಳಯ ನಡೆದೇ ಹೋಗಬಹುದು" ಎಂದು ಪ್ರತಿಯೊಬ್ಬರೂ ಶಂಕಿಸುವಷ್ಟು ಅಲ್ಪ ಬುದ್ಧಿಯ ಅಧ್ಯಕ್ಷ ಹ್ಯಾರಿ ಎಸ್. ಟ್ರೂಮನ್.

ಮೊನ್ನೆಮೊನ್ನೆ ಟ್ರೂಮನ್ ತನ್ನ ವೈಯುಕ್ತಿಕ ಬುದ್ಧಿಮತ್ತೆಯ ದಿವಾಳಿ ತೆಗೆದ. ಮಾಗಳು ಮಾರ್ಗರೆಟಳ ಸಂಗೀತ ಸಿದ್ಧಿಯ ಕುರಿತು "ವಾಶಿಂಗ್ಟನ್ ಪೋಸ್ಟ್"ನ ವಿಮರ್ಶಕ "ಅವಳು ಹಾಡಲೇನೋ ಹಾಡುತ್ತಾಳೆ; ಮಾಧ್ಯಮ ಮಾತ್ರ ಕೇಳಬೇಡಿ" ಎಂದು ಬರೆದಾಗ, ಟ್ರೂಮನನಲ್ಲನ ತಂದೆತನದ ಸಿಟ್ಟು ಬೆಂಕಿಯಾಯಿತು. ಕೂಡಲೇ ಆ ವಿಮರ್ಶಕನಿಗೆ ಬಾಯಿಗೆ ಬಂದಂತೆ ಬೊಗಳುವ ಒಂದು ಚೀಟು ಹೋಯಿತು. "ನೀನೊಬ್ಬ ಜಯದ ಮುಖೀನಾದೆ ಅಂತಂಗದಲ್ಲ ಪಠತಿಸುವ ಪ್ರಾಣಿ" ಎಂದು ಅಧ್ಯಕ್ಷ ಟ್ರೂಮನ ಅದಂಲ್ಲಿ ಜಂಘ ಬರೆದಿದ್ದ.

ನಿಜವಾಗಿ ನೋಡಿದರೆ ಅಧ್ಯಕ್ಷ ಟ್ರೂಮನ ಒಬ್ಬ ಯಾಕಶ್ಚಿತ್ ಮನುಷ್ಯ. ಅವನು ಮಿಸ್ಸೂರಿಯ ಸಣ್ಣ ಪಟ್ಟಣದಲ್ಲಿ. ಬೆಳೆದದ್ದು. ಕವಿಮನುಷ್ಯನು ತಾಯಿಯ ಬಲವಂತಿಕೆಯಲ್ಲಿ; ಕೇವಲ ಸೆಕೆಂಡರಿ ಸ್ಕೂಲಿನ ಅಭ್ಯಾಸ ಮಾಡಿ, ತಲೆ ಬೇಸರ ತರಿಸುವ ಹಲವಾರು ಕೆಲಸಗಳಲ್ಲಿ ಕೈಸುಟ್ಟುಕೊಂಡು,ಕೊನೆಗೆ ಮೊದಲನೇ ಮಹಾಯುದ್ಧದ ಸಮಯ ತಾಯಿಯ ನೆರವಿಂದ ತಪ್ಪಿಸಿಕೊಂಡು ಸೈನ್ಯ ಸೇರಿದ ವೀರ. ಕಣ್ಣಿಗೆ ಕನ್ನಡಕ,ಸಾಧಾರಣ ನೆಲುವು ಇರುವ ಟ್ರೂಮನನ ಬಾಸ್ಟಿಸ್ಟ ಪಂಥದ ಒಳಕಾ ಕೆಡುಕುಗಳ ಮೂಲಭೂತ ಕಲ್ಪನೆಯಿಂದ ಜಗತ್ತನ್ನೇ ತೂಗಿ ನೋಡುತ್ತಾನೆ.

ರಾಜಕೀಯ ವಾತಾವರಣದಲ್ಲಿ ಟ್ರೂಮನನ ಮೇಲೆ ಬಂದದ್ದು ಮಹಾ ಆಕ್ಸ್ಮಿಕ. ಯುದ್ಧ ಮುಗಿದ ಬಳಿಕ ಮಿಸ್ಸೂರಿಯಲ್ಲಿ ಒಂದು ಸಣ್ಣ ಕೆಲಸ ಒದನಾಗಿ ಊರಿನ ರಾಜಕೀಯ ಮಾನುಷಿಂದ ಟೋಮ್ ಪೆಂಡರಗಾಸ್ಟನ ಆಳಿಯನ ಸಹಾಯದಿಂದಷ್ಟೆ ಹೊರಬೆಯಿತು. ಹಾಗೆಯೇ ಎಲ್ಲರಂತೆ ಕೇತಿ ಕೇಳುವ ಅಭಿಲಾಷೆ ಮೊಳೆಯುತೋ ಏನೋ, 1934ರಲ್ಲಿ ಕಾಂಗ್ರೆಸಿಗೆ ನಾಮಕರಣಗಾಗಲು ಬಯಸಿದ. ಆದರೆ ಪೆಂಡರಗಾಸ್ಟನಿಗೆ ಇವನನ್ನು ಸೆನೇಟಿಗೆ ಕಳಿಸಿದರಾಗಬಹುದೆಂದು ಅತ. ಅಂತೂ ಬೇಕೆಂಬಷ್ಟು ಲಂಚ ಕೊಟ್ಟು, ಎದುರಾಳಿಯ ವಿರುದ್ಧ 17,485 ಮತಗಳನ್ನು ತನ್ನ ಜಗಲಿಗೆ ಅವನು ಹಾಕಿಸಿಕೊಂಡ.

ಆದರೆ ಇದು ಫೆಡರಲ್ ಅಟೋರ್ನಿಯ ಸಂಶಯಕ್ಕೆ ಕಾರಣವಾಯಿತು. ವಿಚಾರಣೆಯಿಂದ ಲಂಚ ವ್ಯವಹಾರದ ಕಪಟ ಹೊರಬಿತ್ತು. ಟ್ರೂಮನ ಅಧ್ಯಕ್ಷ ಗದ್ದುಗೆಗೆ ಏರಿದವನೇ ಮಾಡಿದ ಮೊದಲ ಕೆಲಸ ಅಂದಿನ ಆ ಫೆಡರಲ್ ಎಟೋರ್ನಿಗೆ ಗುಂಡಿಕ್ಕಿ ಕೊಲ್ಲಿಸಿದ್ದು!

ಸೆನೇಟರ ಟ್ರೂಮನನ ಬುದ್ಧಿವಂತಿಕೆ ಬಣ್ಣಿಸುವುದೇ ಬೇಡ. ಅಧ್ಯಕ್ಷ ರೂಸವೆಲ್ಟನ ಡೆಮೋಕ್ರಾಟಿಕ್ ಪಾರ್ಟಿಯಂದರೆ ಇವನಿಗೆ ಸೇರುತ್ತಿದ್ದಿಲ್ಲ. ಸಾಮಾನ್ಯ ಹಳ್ಳಿಯ ಮಧ್ಯಮ ವರ್ಗದವನ ವಿಚಾರ ಶೂನ್ಯತೆಯೇ ಟ್ರೂಮನನ ಸೊತ್ತು: ಕೇಂದ್ರೀಕೃತ ಆಡಳಿತಾಧಿಕಾರದ ಸರಕಾರವನ್ನು ಅವನು ವಿರೋಧಿಸುತ್ತಿದ್ದ. ಹಾಗೆಯೇ ಕಾರ್ಮಿಕ ಪಕ್ಷವೆಂದರೂ ಅವನಿಗೆ ಅಂಜಿಕೆ. ಸೀಗ್ರೋಗಳಿಗೆ ನ್ಯಾಯಬದ್ಧ ಹಕ್ಕುಗಳಿವೆ ಎಂಬವನು ಹೇಳುತ್ತಾನೆ. ಆದರೆ ಸಮಾಜದಲ್ಲಿ ಅವರಿಗೆ ಸಮಾನಾಧಿಕಾರ ಕೊಡುವುದು ಅವನಿಗೆ ಬೇಕಿಲ್ಲ. ಒಂದು ಮಜಾರಿ ಸೆನೇಟರ ಶೀವಲೆರಿಬೇಳ "ತುಂಬ ಉಬ್ಬಾಹದ ಡರ್ಟಿ ನಡೆಯಿತಲ್ಲವೆ?" ಎಂದು ಟ್ರೂಮನನೊಡನೆ ಯಾವುದೋ ಸ್ವಾರಸ್ಯಮಯ ಚರ್ಚೆಯ ಕುರಿತು ಉತ್ಸುಕತೆಯಿಂದ ಕೇಳಿದಾಗ ಈ ಪ್ರಾಣಿ ಸೊಟ್ಟ ಮುಖ ಮಾಡಿ "ಹಾಂ, ಹೌದು, ಆದರೆ ನನಗೆ ಎಳ್ಳಷ್ಟಾದರೂ ಅದು ಅರ್ಥವಾಗಬೇಕೆ!" ಎಂದಿದ್ದ!

ಟ್ರೂಮನನಿಗೆ ಪ್ರಾಶಸ್ತ್ಯ ಬಂದದ್ದು 1941ರಲ್ಲಿ ಅವನು ಯುದ್ಧ ವಿಚಾರಣಾ ಸಮಿತಿಯ ರಚಕನಾದಾಗ. ಟ್ರೂಮನನಿಗೆ ಉಪಾಧ್ಯಕ್ಷ ಪದವಿಸಿಕ್ಕಿದ್ದೂ ಏನೋ ಒಂದು "ಛಾನ್ಸಿ"ನ ಮೂಲಕ. ರೂಸವೆಲ್ಟನ ಪುರಣಾನಂತರ ಅಧ್ಯಕ್ಷ ಗದ್ದುಗೆಗೆ ಏರಿದಾಗಲೂ ಅದನ್ನು ಚಾತುರ್ಯದಿಂದ ಸಂಭಾಳಿಸಿಕೊಳ್ಳಲಾಂದೆ ತುಂಬ ಒದ್ದಾಡಿದ. ಅಮೇರಿಕದ ಆರ್ಥಿಕ ಮತ್ತು ರಾಜಕೀಯ ನೀತಿಯನ್ನು ಸರಿದಾರಿಗೆ ತರುವುದು ಹೇಗೆಂಬುದೇ ಅವನಿಗೆ ತಿಳಿಯಲಿಲ್ಲ. ಒಮ್ಮೆ ಚರ್ಚಿಲ್"ಬಕ್ಕಾದೊಡನೆ ನಾವು ಬಿಗಿಯಾಗಿಯೇ ವರ್ತಿಸೋಣ" ಎಂದಾಗ ಟ್ರೂಮನ "ಅದೇ ಸರಿ" ಎಂದ; ಅದೇ ಹೊತ್ತಾಲೇಗೆ "ರಷಿಯನರೊಡನೆ ನಯವಾಗಿ ಮಾತಾಡೋಣ" ಎಂದಾಗಲೂ "ನಾವು ಹಾಗೆಯೇ ಮಾಡಬೇಕು" ಎಂದು ಅದಕ್ಕೂ ಮುದ್ರೆ ಒತ್ತಿದ. ಇಂಥ ಅಸ್ಥಿರ ಮನೋವೃತ್ತಿ ಈಗ ಚೈನದ ಬಗ್ಗೆ ಪ್ರಕಟವಾಗುತ್ತಿದೆ-"ಆಚೆಸನ ಚ್ಯಾಂಗ ಕೈಶೇಕನನ್ನು ಕಾಣುವುದಿಲ್ಲ- ಮೇಕಾರ್ಥರನ ದೃಷ್ಟಿಯೇ ಮಾಯವಾದ್ದು. ಆದರೆ ಅದು ಚೀನಾದ ಕಮ್ಯೂನಿಸ್ಟರನ್ನು ಅಧಿಕಾರಕ್ಕೆ ತರಲಿಲ್ಲ; ಹಾಗೆಂದು ಅಧಿಕಾರಕ್ಕೆ ಬರುವುದರಿಂದ ತಡೆಯಲಿಲ್ಲವೆ ಇಲ್ಲ. ಚೀನೀ ಕಮ್ಯೂನಿಸ್ಟರು, ರಾಷ್ಟ್ರೀಯರು, ಮೇಕಾರ್ಥರು, ಆಚಸನ್, ಬ್ರಿಟಿಷ್, ರಶಿಯನ್, ಭಾರತೀಯರು-ಎಲ್ಲರನ್ನೂ ಹುಚ್ಚೆಬ್ಬಿಸಿದ್ದೇ ಚೀನ" ಎಂದು "ಟೈಮ್ಸ್"ದ ವಂದಿಗಾರ ಟೀಕಿಸುತ್ತಾನೆ.

ಸೇನಾನಿ ಮೇಕಾರ್ಥರ್

ಕೊರಿಯದ ಕದನ ನಡೆಸುವ ಜನರಲ ಜೊಗ್ಹಾಸ ಮೇಕಾರ್ಥರ ಹೆಸರಿಗೇನೋ ಅಮೇರಿಕೆಯ ಸಂಯುಕ್ತರಾಜ್ಯದ ನಿಯಂತ್ರಣಕ್ಕೊಳಗಾಗಿದ್ದಾನೆ. ಹಾಗೆಂದು ಅವನ ನಿಜವಾದ ವ್ಯಕ್ತಿತ್ವ ಈ ಹಿಡಿತವನ್ನು ಮೀರಿ ನಿಂತಿದೆ. ವಾಶಿಂಗ್ಟನ್ನಿನ ಅಧಿಕಾರದ ಬಲ ಪ್ರಯೋಗವನ್ನು ಮೇಕಾರ್ಥರ ಲೆಕ್ಕಿಸುವುದೇ ಇಲ್ಲ. ಅಮೇರಿಕಾದ ಮನೆ ರಾಜಕೀಯ ಈ ವಿಷಯದಲ್ಲಿ ಅವನಿಗೆ ಅನುಕೂಲವಾಗಿದೆ. ಮೇಕಾರ್ಥರನ ಒಲವಿರುವುದು ರಿಪಬ್ಲಿಕನ ಪಾರ್ಟಿಗೆ; ಆದರಲ್ಲೂ ಕನ್ಸರ್ವೇಟಿವ್ ವಿಭಾಗದ ಕಡೆಗೆ. ಅಲ್ಲದೆ ಸ್ವತಃ ಪ್ರತಿಭಾವಂತ ಮೆದುಳೂ ಇರುವುದರಿಂದ ಅಮೇರಿಕೆಯ ಉಳಿದೆಲ್ಲ ಜನರಲುಗಳಿಗಿಂತ ಹೆಚ್ಚು ಜೆನ್ನಾಗಿ ಜನರ ಒಲವನ್ನು ತನ್ನೆಡೆಗೆ ಸೆಳೆಯುವುದರಲ್ಲಿ ಅವನು ಯಶಸ್ವಿಯಾಗಿದ್ದಾನೆ.

"ಕ್ರಿಸ್ಮಸದೊಳಗೆ ಕಾಳಗ ಮುಗಿಸಿ, ಮನೆಗೆ ಮರಳಿ ಸುಕ್ಕಳೇ" ಎನ್ನುತ್ತಾ ಕೊರಿಯದ ರಣರಂಗದಲ್ಲಿ ಸೈನಿಕರನ್ನು ಹುರುಪಿಸಿಯೂ ಸೋತುದು ಮೇಕಾರ್ಥರನ ಪಾಲಿನ ಅವಲಕ್ಷಣ. ಈ ಬಗ್ಗೆ ಸ್ವಸಮರ್ಥನೆಯ ಉತ್ಸವ ಉಪಾಯವೆಂದು ಅಮೇರಿಕೆಯ ಜನರ ಸಹಾನುಭೂತಿ ಪಡೆಯಲು ಪತ್ರಿಕೆಗಳಿಗೆ, ಪತ್ರಿಕಾ ಸಂಪಾದಕರಿಗೆ ಎಷ್ಟೆಲ್ಲ ಬೇಕೋ, ಅಷ್ಟೂ ಹೇಳಿಕೆ ಕೊಟ್ಟು, ತೃಪ್ತನಾದ.

ಇತ್ತೀಚಿನ ವರೆಗೆ ಅವನ ಬೆನ್ನು ಕಟ್ಟುವ ಜನ ಹಲವಾರು ಇದ್ದರು. ಅವರಿಗೆ ಈ ಜನರಲ ತಪ್ಪುಗಳೆಂದೇ ಇಲ್ಲ ಎಂದು ದೃಢ ನಂಬಿಕೆ. ಪತ್ರಿಕೆಗಳಲ್ಲಿ ಮೇಕಾರ್ಥರನ ಕೃತ್ಯಗಳ ವಿಮರ್ಶೆಯ ನಡುವೆ ಒಂದೆರಡು ಸ್ತೋತ್ರವನ್ನು ಸೂಚನೆಗೆ ಎಡೆಕೊಟ್ಟರೂ ಸಾಕು-ಕೋಪೋದ್ರೇಕದಿಂದ ಜನ ಟಪಾಲು ಪೆಟ್ಟಿಗೆ ತುಂಬಿಸಿ ಹಾಕುವರು. ಸಂಪಾದಕೀಯದಲ್ಲಿ ಮೇಕಾರ್ಥರನ ಸಂಬಂಧಿಗಾಟ ಸ್ವಲ್ಪ ಬದಲಾದರೂ ಸಾಕು-ಸಂಪಾದಕರಿಗೆ ಪತ್ರದ ರಾಶಿ ಬರುವುದು. ಹಾಗೆಂದು ಕೆಲ ಜನ ತೀರ ವಿಮರ್ಶಾತ್ಮಕ ದೃಷ್ಟಿಯಿಂದಲೂ ನೋಡದಿಲ್ಲ. ಗಳಿಗೆಗೊಮ್ಮೆ ಪತ್ರಿಕಾ ಹೇಳಿಕೆ ಕೊಡುವುದೇ ಮುಂತಾದ "ಮೇಕಾರ್ಥರ ಧೋರಣ" ಅಡಳಿತದ ಧೋರಣಕ್ಕೆ ವಿರುದ್ಧವಿರುವುದಷ್ಟೇ ಅಲ್ಲ; ಅದರ ಮೇಲೆ ಆಕಾರಣ ಒತ್ತಡವನ್ನೂ ಹಾಕಿ,ಮೇಕಾರ್ಥರ ಧೋರಣಕ್ಕೆ ಅಡೂ ಹೊಂದಿಕೊಂಡುಹೋಗುವಂತೆ ವ್ಯರ್ಥ ಬಲವಂತ ಹಾಕುತ್ತದೆ; ಇದು ಸಾಮಾಲ್ಲಿ ಎಂದು ಅವರನ್ನು ತಾಕ್ಕಾರೆ.

ಹೀಗಿದ್ದರೂ ಸಂಯುಕ್ತ ರಾಜ್ಯದಲ್ಲಿ ಮೇಕಾರ್ಥರನ ಪ್ರಶಂಸಕರೇ ಅಧಿಕ. ಇದೇ ಕಾರಣವೋ ಏನೋ, ಸಂಯುಕ್ತ ರಾಷ್ಟ್ರಗಳ ಸರ್ವೋಚ್ಚ ಸೇನಾಪತಿಯ ಅಧಿಕಾರ ಬಲವೊಂದಿರಲಿಲ್ಲದೆ, ಮೇಕಾರ್ಥರನ ಉಳಿದ ಪ್ರತಿಯೊಂದು ಕೃತಿಗೂ ಟ್ರೂಮನನರಕಾರವೇ ಪೂರ್ಣ ಬದ್ಧವಾಗಿ ಹೊಣೆಗಾರವಿದ್ದಾಗಲೂ,ಈ ಜನರಲನ ನಿರ್ಣಯದ ವಿರುದ್ಧ ಅದು ನಡೆದುದೆಂದಿಲ್ಲ. ಒಂದು ವೇಳೆ ಟ್ರೂಮನ ಸರಕಾರ ಮೇಕಾರ್ಥರನ ಕೃತ್ಯಕ್ಕೆ ಸಮ್ಮತಿ ಮುದ್ರೆ ಒತ್ತದಿದ್ದರೆ, ಅವನು ನೇರವಾಗಿ ಅಮೇರಿಕೆಯ ಜನತೆಗೇ ತನ್ನ ಗಂಭೀರ ಪದಾವಳಿಗಳ ಹೇಳಿಕೆ ಕೊಟ್ಟು, ಸರಕಾರಕ್ಕೆ ಜನಮತವಿಲ್ಲ ಎನ್ನಿಸುವ ಸಾಹಸಿ. ಇದೇ ಕಾರಣವಾಗಿ, ಜನರಲ್ ಮೇಕಾರ್ಥರ 38ನೇ ಅಕ್ಷಾಂಶ ದಾಟಿ, ಯುದ್ಧ ಮುಗಿಸಬೇಕು ಎಂದಾಗ ವಾಶಿಂಗ್ಟನ್ನು ತನಗೆ ಅಭಿರುಚಿ ಏನೇನೂ ಇಲ್ಲದಿದ್ದರೂ ಹೂಂಗುಟ್ಟಿದೇಕಾಯಿತು.

ಆದರೆ ಸ್ವಲ್ಪ ಸಮಯದಲ್ಲಿ ಕಲೆಬುಡಮೇಲಾಯಿತು. ಕೊರಿಯದಿಂದ ಅಮೇರಿಕದ ಸೈನ್ಯ ಓಡಿಬರುವ ಗದ್ದಲದಲ್ಲಿ ಎಲ್ಲರ ಬಾಯಲ್ಲೂ ಒಂದೇ ಮಾತು—ಜನರಲ ಮೇಕಾರ್ಥರ ಹೇಗೆ ತಪ್ಪಿಬಿದ್ದ? ಅವನ ಅಂದಾಜು ಹೆಚ್ಚುಕಡಿಮೆ ಏಕಾಯಿತು.

ಹೀಗಿದ್ದರೂ ಜನರ ಒಲವು ಇನ್ನೂ ಪೂರ್ಣವಾಗಿ ಮೇಕಾರ್ಥರನ ಕಡೆಯಿಂದ ಹೊರಟು ಹೋಗಿಲ್ಲ. ಮೇಕಾರ್ಥರನ ನಿರ್ಣಯದ ದುಸ್ಪರಿಣಾಮವನ್ನು ಬಣ್ಣಿಸುವ ಆಸ್ಪಲೇಖ ಬರೆದ ಪತ್ರಿಕೆಗಳ "ಸಂಪಾದಕರಿಗೆ ಪತ್ರ" ಸ್ತಂಭದಲ್ಲಿ ಜನರು ಅಂಥ ಸಂಪಾದಕೀಯವನ್ನೇ ತೆಗಳಿ ಬರೆದ ಪತ್ರಗಳು ಅಚ್ಚಾಗಿವೆ. ಹೀಗಾಗಿ ಬೇಕಾಕಾರರೂ ತಮ್ಮ ಶಕ್ತಿ ಸಮಯಲು ಈಗ ತಕ್ಕ ಸಮಯವಲ್ಲ ಎಂದು ಸುಮ್ಮಗುಳಿದಿದ್ದಾರೆ. ರಿಪಬ್ಲಿಕನ ಸದಸ್ಯರು ಸಮೀಕ್ಷ ಈಗ ತಮ್ಮ ಅಭಿಪ್ರಾಯ ಮೇಕಾರ್ಥರನ ಪ್ರಭಾವ ಕುಗ್ಗುವುದನ್ನು ಕಂಡು ಸೆಕ್ರಟರಿ ಆಫ್ ಸ್ಟೇಟಿನ ಆಚಿಸನ್ನರ ಮೇಲೆಯೇ ಉಂಕಾರುತಿದ್ದಾರೆ; ಹೊರಳು ಮೇಕಾರ್ಥರನ ಭಕ್ತ, ಪೂಜೆ ಬಿಡಲೊಲ್ಲರು, ಇದು ಜನರಲ ಮೇಕಾರ್ಥರನ ರಾಜಕಾರಣ ಅಸಲುರೂಪ.

—'ಕಾರ್ತಿಕೇಯ'

ಎರಡು ಜಂಭದ ಕೋಳಿಗಳು

ಟ್ರೂಮನ್, ಮೇಕಾರ್ಥರ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

NOTICE

Is hereby given that the right of collecting fees in the Municipal Markets, cart stands Jutka stand, mutton stalls and slaughter house etc., for the year 1951-52 will be sold by public auction by the Commissioner, Udipi Municipality on Friday the 23rd February 1951 at 3 0 P. M. in the Municipal Office, Udipi The sale is subject to the rules in force.

Further particulars or information may be obtained from the Municipal Office, Udipi on all working days during Office hours

Municipal Office, Udipi. } **A. S. D. Souza**
Dated 19—1—1951 } Commissioner

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ:—

1951-52ನೇ ಆಫೀಸಿಯಲ್ ವರ್ಷದಲ್ಲಿ ಉಡುಪಿ ಮುನಿಸಿಪಾಲಿಟಿಯ ಆಡಳಿತಕ್ಕೆ ಒಳಪಟ್ಟ ಮಾರ್ಕೇಟುಗಳು, ಗಾಡಿಚೌಕ, ಜಟ್ಕಾಚೌಕ, ಮಟನ್ ಸ್ಟೌಲ್ಸ್ ಮತ್ತು ಸಧ್ಯಾಗ್ಗಹದಲ್ಲಿ ವರ ವಸೂಲು ಮಾಡುವ ಹಕ್ಕನ್ನು ಮುನಿಸಿಪಲ್ ಕಮಿಶನರವರು ತಾ- 23-2-51ನೇ ಶುಕ್ರವಾರ ಅಪರಾಹ್ನ ಗಂಟೆ 3ಕ್ಕೆ ಮುನಿಸಿಪಲ್ ಆಫೀಸಿನಲ್ಲಿ, ಆ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಮುನಿಸಿಪಲ್ ಆಫೀಸಿಗೆ ಬಂದು ತಿಳಿಕೊಳ್ಳಬಹುದು

ಮುನಿಸಿಪಲ್ ಆಫೀಸು, ಉಡುಪಿ. } (Sd) **A. S. D. Souza**
ತಾರೀಕು 19—1—1951 } ಕಮಿಶನರ್

ವಾರದ ಹರಟೆ

ಯು. ಪಿ.

ೃಯವಾಚಕಕ್ಕ,

ದಾರ್ಲಿಗೆಂಟು ಮುಂದೆ ಬರಲಿರುವ ಹಂ ೂಕೋಡು ಮನೂಡೆಯು ಕಾನೂನಾದರೆ ಂಡೂ ಜನಜೀವನದಲ್ಲಿ ಏನೆಲ್ಲಾ ಬದಲಾ ಣೆಗಳು ಆಗಲಿವೆ ಎಂಬ ಭವಿಷ್ಯದ ವಿಷಯ ಹವಾರ ಹರಟೆಹೊಡೆಯುವಾ ಎಂದಿದ್ದೆ. ನ್ನತ್ಥ ಈ ವಾರದ ಹರಟೆ ಬರೆಯುವ ರ ಯು. ಪಿ. ಎಂದರೆ ಯಾರ್ರಾ ಆ ಬರಹ ನ್ನು ಹರಟೆಯೆಂದು ನಾವು ಏಕೆ ಕರೆಯು ತ್ತೇವೆ. ಎಂಬತೊಂದು ಪ್ರಶ್ನೆ ಒಬ್ಬ ವಾಚ ಕರಿಂದ ಬಂದಿದೆ. ಈ ಪ್ರಶ್ನೆಯು ನವಯು ಗದ ಎಲ್ಲಾ ವಾಚಕರಿಗೆ ಆಂದರೆ ನಮ್ಮ ಹರ ಟೆಯಲ್ಲಿ ನೇರವಾ ವಾಚಕರಿಗೆ ತಿಳಿಯಲು ಚ್ಚೆಯಿರಬಹುದಾದ ಪ್ರಶ್ನೆಯಾದುದರಿಂದ ದನ್ನು ಪ್ರಥಮತಃ ಉತ್ತರಿಸಿ ನಂತರ ಇತ ರ ವಿಷಯ ಬರೆಯಬಹುದೆಂದು ಯೋಚಿಸಿ ಕದನ್ನೇ ಪ್ರಾರಂಭಿಸಿದ್ದೇನೆ-

ಈ ಹರಟೆ ಬರೆಯುತ್ತಿರುವವರು ಒಬ್ಬ ೀ ಅಲ್ಲ. ನಾವು ಮೂವರು ಸೇರಿ ಒಂದು ಹರಟೆ ಸಂಘ ಎಂತ ಮಾಡಿಕೊಂಡಿದ್ದೇವೆ. ರ್ವೃತ ಅದಕ್ಕೆ ನಾವು ಮೂವರೇ ಸದಸ್ಯರಿ ದ್ದೇವೆ. ಯಾವುದೇ ಸಂಘಗಳಲ್ಲಿ ನಾಲ್ವತ್ತರ ಮೇಲಿನ ಪ್ರಾಯದವರಿಗೆ ಹೇಗೆ ಪ್ರವೇಶ ಇ ಲ್ಲವೋ ಹಾಗೆಯೇ ನಮ್ಮ ಹರಟೆಸಂಘದಲ್ಲಿ ನವತ್ತರ ಕೆಳಗಿನವರಿಗೆ ಎಡೆಯಿಲ್ಲ. ಈಗಿರು ವ ಮೂವರು ಸದಸ್ಯರೂ ೧೯ನೇ ಶತಮಾನ ದಲ್ಲಿ ಜನ್ಮವೆತ್ತಿ ೨೦ನೇ ಶತಮಾನದ ಪೂರ್ವಾ ರ್ಧವನ್ನು ಸುಖವಾಗಿ ಕಳೆದವರು ಮತ್ತು ೨೦ನೇ ಶತಮಾನದ ಉತ್ತರಾರ್ಧದ ಕೊನೆ ಯನ್ನು ದಾಟಬೇಕೆಂದು ಆಶೆಯುಳ್ಳವರು. ತನ್ನ ಪೂರ್ವಾರ್ಧ ಶತಮಾನದ ಅನುಭವ ನನ್ನು ಇತರರಿಗೆ ಕೊಡಬೇಕೆಂಬ ಕುತೂಹಲ ಉಳ್ಳವರು. ಸಂದರ್ಭೋಚಿತ ಅರ್ಧಶತಮಾನ ದಲ್ಲಿ ಅರ್ಥಾರ್ಜನೆಯನ್ನು ವಿದ್ಯಾಭ್ಯಾಸದಲ್ಲಿ ಕಳೆ ದು ಮಿಕ್ಕ ಅರ್ಧಾರ್ಜನೆಯನ್ನು ದ್ರವ್ಯಾರ್ಜನೆ ಯಲ್ಲಿ ಉಪಯೋಗಿಸಿ ಗಳಿಸಿರುವ ಅಲ್ಪಸ್ವ ಲ್ಪ ಹಣದಿಂದ ಉತ್ತರಾರ್ಧ ಶತಮಾನ ಅಥ ವಾ ದೊರೆಯುವಷ್ಟು ಆಯುಸ್ಸನ್ನು ನಿರಾ ಯಾಸವಾಗಿ ಕಳೆಯಬೇಕೆಂಬ ಸದುದ್ದೇಶ ನಮ್ಮದು. ಸಾಧ್ಯವಿದ್ದರೆ ನಮ್ಮಿಂದ ಅಪಹ್ಪು ಇತರರಿಗೆ ಉಪಕಾರ ಮಾಡುವುದು, ಅದಲ್ಲ ದಿದ್ದರೆ ಇತರರಿಗೇನೂ ಕೇಡುಮಾಡದೆ ದಿನ ದೂಡುವುದು, ಇದು ನಮ್ಮ ಗುರಿ. ನವಯು ಗದ ವಾಚಕರಿಗೆ ನಾವೇನು ಉಪಕಾರ ಮಾಡು ವೆವೋ? ನಮ್ಮ ಜನಸಾಮಾನ್ಯರ ಮುಂದೆ ಯಾವ್ಯಾವ ಸಮಸ್ಯೆಗಳು ಬಂದು ನಿಂತಿವೆ ಎಂದು ನಮಗೆ ಗೊತ್ತಿದೆ. ಅವುಗಳನ್ನು ಒಂ ದೊಂದಾಗಿ ನಮ್ಮಿಂದಾದಷ್ಟು ಬಿಡಿಸಲೆತ್ನಿಸು ವುದು ನಮ್ಮ ಕರ್ತವ್ಯ. ನಿಮ್ಮ ಮುಂದೆ ಬಂ ದು ಕುಣಿಯುತ್ತಿರುವ ಎಲ್ಲಾ ಸಮಸ್ಯೆಗಳೂ ನಮಗೆ ಗೊತ್ತಿವೆ ಎಂದು ನಾವೆಣಿಸುವುದಿಲ್ಲ. ನಮಗೆ ಅವು ಗೊತ್ತಾದರೂ ಅವುಗಳನ್ನು ನಾವು ಬಿಡಿಸಿಬಿಡುತ್ತೇವೆಂದು ನಾವು ಭುಜತ ಟ್ಟುವುದೂ ಇಲ್ಲ. ಆದರೆ ನಮ್ಮ ಹರಟೆ ಸಂ ಘದಲ್ಲಿ ಪ್ರಕೃತ ಮೂವರು ಸದಸ್ಯರಿದ್ದೇವೆಂ ದೆನಲ್ಲವೇ ನೀವು ಸಮಸ್ಯೆಗಳನ್ನು ನಮ್ಮ ಮುಂದಿಟ್ಟರೆ ನಮ್ಮಲ್ಲಿ ನಾವು ಆಂದರೆ ಒಬ್ಬ ರಲ್ಲದಿದ್ದರೆ ಇನ್ನೊಬ್ಬರು ಅವುಗಳನ್ನು ಬಿಡಿಸ ಲೆತ್ನಿಸುವೆವು. ಈ ಸದುದ್ದೇಶದಿಂದಲೇ ನಾ ವು ಮೂವರು ಸೇರಿ ಈ ಸಂಘವನ್ನು ಸ್ಥಾಪಿ ಸಿದ್ದೇವೆ. ನೀವು ಮತ್ತು ನಾವು ಒಟ್ಟಾಗಿ ಸೇ ರಿ ಸಹಕರಿಸಿದರೇನೇ ನಮ್ಮ ಹರಟೆಯೂ ಸಾ ಗುವುದು. ಈ ಭಾವನೆಯಿಂದ ನೀವು ಮತ್ತು ನಾವು You & We ಸಂಕ್ಷೇಪವಾಗಿ U.V. ಎಂಬ ಗುಪ್ತ (ಈಗ ಅದು ಬಹಿರಂಗವಾಯಿ ತಪ್ಪೆ) ನಾವುದಿಂದ ಈ ಹರಟೆಯನ್ನು ಹೊ ಡೆಯುತ್ತಿದ್ದೇವೆ. ಹೀಗಿರುವುದರಿಂದ U. V. ಎಂದರೆ ಉಡುಪಿಯ ವಾದಿರಾಜ, ಉಡ್ಯಾವ ರವೆಂಕಟ್ರಉಳ್ಳಾಲ ಪಾವನ, ಉಜ್ರೆವಿಶ್ವನಾ ಥ ಹೀಗೆ ಹೆಸರಿರುವವರ್ಯಾರದರೂ ಇದನ್ನು ಬರೆಯುತ್ತಿರಬಹುದು ಎಂದು ನಮ್ಮ ವಾಚ ಕರು ತಪ್ಪಾಗಿ ಊಹಿಸಿಕೊಂಡಿರಬಹುದೆಂದು ಇಲ್ಲಿ ನಿಜಸ್ಥಿತಿಯನ್ನು ಹೇಳಿದ್ದೇನೆ. ನೀವು ಆಂದರೆ ನವಯುಗ ಪತ್ರಿಕೆಯನ್ನು ಚಂದಾ ಹಣಕೊಟ್ಟು ಕ್ರಮವಾಗಿ ಪಡೆಕೊಂಡು ಪಾ ಚಿಸುವವರು ಆಥವಾ ಚಂದಾಪಡಣ ಉಳಿಸಿ ಕೊಂಡು ಸಿಕ್ಕಿದವರಿಂದ ಸಿಕ್ಕಿದಾಗ ಸಿಕ್ಕಿದ ಪ್ಪು ಓದುವವರು. ನಾವು ಆಂದರೆ ಈ ಹರಟೆ ಸಂಘದ ಆಜೀವ ಸದಸ್ಯರು. ನಾವು ಮೂವರು ತಮ್ಮ ಸಮಸ್ಯೆಯನ್ನು ತಕ್ಕ ಮಟ್ಟಿಗೆ ಪೂರ ಪಡೆದ ಮಿಕ್ಕ ಅರ್ಥಾರ್ಜನೆಯನ್ನು ದ್ರವ್ಯಾರ್ಜನೆ ಯಲ್ಲಿ ಉಪಯೋಗಿಸಿ ಗಳಿಸಿರುವ ಅಲ್ಪಸ್ವಲ್ಪ ಹಣದಿಂದ ಉತ್ತರಾರ್ಧ ಶತಮಾನ ಅಥವಾ ದೊರೆಯುವಷ್ಟು ಆಯುಸ್ಸನ್ನು ನಿರಾಯಾಸವಾಗಿ ಕಳೆಯಬೇಕೆಂಬ ಸದುದ್ದೇಶ ನಮ್ಮದು. ಸಾಧ್ಯವಿದ್ದರೆ ನಮ್ಮಿಂದ ಅಪಹ್ಪು ಇತರರಿಗೆ ಉಪಕಾರ ಮಾಡುವುದು, ಅದಲ್ಲ ದಿದ್ದರೆ ಇತರರಿಗೇನೂ ಕೇಡುಮಾಡದೆ ದಿನ ದೂಡುವುದು, ಇದು ನಮ್ಮ ಗುರಿ. ನವಯು ಗದ ವಾಚಕರಿಗೆ ನಾವೇನು ಉಪಕಾರ ಮಾಡು ವೆವೋ? ನಮ್ಮ ಜನಸಾಮಾನ್ಯರ ಮುಂದೆ ಯಾವ್ಯಾವ ಸಮಸ್ಯೆಗಳು ಬಂದು ನಿಂತಿವೆ ಎಂದು ನಮಗೆ ಗೊತ್ತಿದೆ. ಅವುಗಳನ್ನು ಒಂ ದೊಂದಾಗಿ ನಮ್ಮಿಂದಾದಷ್ಟು ಬಿಡಿಸಲೆತ್ನಿಸು ವುದು ನಮ್ಮ ಕರ್ತವ್ಯ. ನಿಮ್ಮ ಮುಂದೆ ಬಂ ದು ಕುಣಿಯುತ್ತಿರುವ ಎಲ್ಲಾ ಸಮಸ್ಯೆಗಳೂ ನಮಗೆ ಗೊತ್ತಿವೆ ಎಂದು ನಾವೆಣಿಸುವುದಿಲ್ಲ. ನಮಗೆ ಅವು ಗೊತ್ತಾದರೂ ಅವುಗಳನ್ನು ನಾವು ಬಿಡಿಸಿಬಿಡುತ್ತೇವೆಂದು ನಾವು ಭುಜತ ಟ್ಟುವುದೂ ಇಲ್ಲ. ಆದರೆ ನಮ್ಮ ಹರಟೆ ಸಂ ಘದಲ್ಲಿ ಪ್ರಕೃತ ಮೂವರು ಸದಸ್ಯರಿದ್ದೇವೆಂ ದೆನಲ್ಲವೇ ನೀವು ಸಮಸ್ಯೆಗಳನ್ನು ನಮ್ಮ ಮುಂದಿಟ್ಟರೆ ನಮ್ಮಲ್ಲಿ ನಾವು ಆಂದರೆ ಒಬ್ಬ ರಲ್ಲದಿದ್ದರೆ ಇನ್ನೊಬ್ಬರು ಅವುಗಳನ್ನು ಬಿಡಿಸ ಲೆತ್ನಿಸುವೆವು. ಈ ಸದುದ್ದೇಶದಿಂದಲೇ ನಾ ವು ಮೂವರು ಸೇರಿ ಈ ಸಂಘವನ್ನು ಸ್ಥಾಪಿ ಸಿದ್ದೇವೆ. ನೀವು ಮತ್ತು ನಾವು ಒಟ್ಟಾಗಿ ಸೇ ರಿ ಸಹಕರಿಸಿದರೇನೇ ನಮ್ಮ ಹರಟೆಯೂ ಸಾ ಗುವುದು. ಈ ಭಾವನೆಯಿಂದ ನೀವು ಮತ್ತು ನಾವು You & We ಸಂಕ್ಷೇಪವಾಗಿ U.V. ಎಂಬ ಗುಪ್ತ (ಈಗ ಅದು ಬಹಿರಂಗವಾಯಿ ತಪ್ಪೆ) ನಾವುದಿಂದ ಈ ಹರಟೆಯನ್ನು ಹೊ ಡೆಯುತ್ತಿದ್ದೇವೆ. ಹೀಗಿರುವುದರಿಂದ U. V. ಎಂದರೆ ಉಡುಪಿಯ ವಾದಿರಾಜ, ಉಡ್ಯಾವ ರವೆಂಕಟ್ರಉಳ್ಳಾಲ ಪಾವನ, ಉಜ್ರೆವಿಶ್ವನಾ ಥ ಹೀಗೆ ಹೆಸರಿರುವವರ್ಯಾರದರೂ ಇದನ್ನು ಬರೆಯುತ್ತಿರಬಹುದು ಎಂದು ನಮ್ಮ ವಾಚ ಕರು ತಪ್ಪಾಗಿ ಊಹಿಸಿಕೊಂಡಿರಬಹುದೆಂದು ಇಲ್ಲಿ ನಿಜಸ್ಥಿತಿಯನ್ನು ಹೇಳಿದ್ದೇನೆ. ನೀವು ಆಂದರೆ ನವಯುಗ ಪತ್ರಿಕೆಯನ್ನು ಚಂದಾ ಹಣಕೊಟ್ಟು ಕ್ರಮವಾಗಿ ಪಡೆಕೊಂಡು ಪಾ ಚಿಸುವವರು ಆಥವಾ ಚಂದಾಪಡಣ ಉಳಿಸಿ ಕೊಂಡು ಸಿಕ್ಕಿದವರಿಂದ ಸಿಕ್ಕಿದಾಗ ಸಿಕ್ಕಿದ ಪ್ಪು ಓದುವವರು. ನಾವು ಆಂದರೆ ಈ ಹರಟೆ ಸಂಘದ ಆಜೀವ ಸದಸ್ಯರು. ನಾವು ಮೂವರು ತಮ್ಮ ಸಮಸ್ಯೆಯನ್ನು ತಕ್ಕ ಮಟ್ಟಿಗೆ ಪೂರ ಪಡೆದ ಮಿಕ್ಕ ಅರ್ಥಾರ್ಜನೆಯನ್ನು ವಿದ್ಯಾಭ್ಯಾಸದಲ್ಲಿ ಕಳೆ ದು ಮಿಕ್ಕ ಅರ್ಧಾರ್ಜನೆಯನ್ನು ದ್ರವ್ಯಾರ್ಜನೆ ಯಲ್ಲಿ ಉಪಯೋಗಿಸಿ ಗಳಿಸಿರುವ ಅಲ್ಪಸ್ವ ಲ್ಪ ಹಣದಿಂದ ಉತ್ತರಾರ್ಧ ಶತಮಾನ ಅಥ ವಾ ದೊರೆಯುವಷ್ಟು ಆಯುಸ್ಸನ್ನು ನಿರಾ ಯಾಸವಾಗಿ ಕಳೆಯಬೇಕೆಂಬ ಸದುದ್ದೇಶ ನಮ್ಮದು. ಸಾಧ್ಯವಿದ್ದರೆ ನಮ್ಮಿಂದ ಅಪಹ್ಪು ಇತರರಿಗೆ ಉಪಕಾರ ಮಾಡುವುದು, ಅದಲ್ಲ ದಿದ್ದರೆ ಇತರರಿಗೇನೂ ಕೇಡುಮಾಡದೆ ದಿನ ದೂಡುವುದು, ಇದು ನಮ್ಮ ಗುರಿ. ನವಯು ಗದ ವಾಚಕರಿಗೆ ನಾವೇನು ಉಪಕಾರ ಮಾಡು ವೆವೋ? ನಮ್ಮ ಜನಸಾಮಾನ್ಯರ ಮುಂದೆ ಯಾವ್ಯಾವ ಸಮಸ್ಯೆಗಳು ಬಂದು ನಿಂತಿವೆ ಎಂದು ನಮಗೆ ಗೊತ್ತಿದೆ. ಅವುಗಳನ್ನು ಒಂ ದೊಂದಾಗಿ ನಮ್ಮಿಂದಾದಷ್ಟು ಬಿಡಿಸಲೆತ್ನಿಸು ವುದು ನಮ್ಮ ಕರ್ತವ್ಯ. ನಿಮ್ಮ ಮುಂದೆ ಬಂ

ನ್ನೆ ಆಧ್ಯಕ್ಷರು ಬರೆಯುತ್ತಾರೆ. ಆಂದರೆ ಈ ಹಂಟೆಯನ್ನು ಈಗ ಬರೆಯುತ್ತಿರುವ ನಾ ನೇ ಬರೆಯುತ್ತೇನೆ ನನ್ನ ಬೆಸರೇನು ಎಂದು ಕೇಳುತ್ತಿದ್ದೀರಾ? ಆ ನನ್ನು ನಾನು ಹೇಳಲಾ ರೆ. ನಮ್ಮೊಳಗೆ ಯಾರು ಯಾರೆಂದು ಯಾರಿ ಗೂ ಯಾವಾಗಲೂ ತಿಳಿಯಕೂಡದೆಂದು ನಾ ವು ಮೊದಲೇ ನಿರ್ಧರಿಸಿದ್ದೇನೆ. ನಾನು ಯಾ ವಾಗಲೂ ತಮ್ಮ ಹರಟೆ ಸಂಘದ ವಿಚಾರವ ನ್ನೇ ಬರೆಯುವೆನೆಂದು ಎಡೆಸಬೇಡಿ. ಇನ್ನು ಳೆದ ಇಬ್ಬರು ಉತ್ತರ ಕೊಡಲಾರದ ಮಹಾ ಸಮಸ್ಯೆಗಳು ನನ್ನ ಬಳಿಗೆ ಬರುತ್ತವೆ. ನಾನು ಅವುಗಳನ್ನೆಲ್ಲಾ ಸರ್ವಜ್ಞನಂತೆ ಬಿಡಿಸಲೇ ಬೇಕು- ರಾಜಕೀಯ, ಕಾಯ್ದೆ ಕಾನೂನು, ಶಾಸನಗಳು ವಿದೇಶ ಪರದೇಶದ ಲೌಕಿಕ ವಿಚಾರಗಳು ಈ ವಿಷಯ ನನ್ನ ಸಂಘದ ಮಾನ್ಯ ಉಪಾಧ್ಯಕ್ಷರು (ಅವರು ಯಾರೆಂ ದು ಕೇಳಬೇಡಿ ಎಂದು ಮೊದಲೇ ಹೇಳಿದ್ದೇನ ಲ್ಲವೇ!) ಆವರು ಬರೆಯುತ್ತಾರೆ. ಸಂಸಾರದ ಸುಖಕಷ್ಟಗಳು, ಸಾರ್ವಜನಿಕ ಆರೋಗ್ಯ, ದೇಶದಲ್ಲಿ ಆಗಬೇಕಾದ ಸುಧಾರಣೆಗಳು ಈ ವಿಚಾರ ನಮ್ಮ ಮೂನ್ನ (ಆಥವಾ ಗೌವ)ಕಾ ರ್ಯದರ್ಶಿಗಳು ಬರೆಯುತ್ತಾರೆ. ಉದಾಹರಣೆ ಗಾಗಿ ಳೆಯದ ವಾರ ಬರೆದ ಇನ್ನು ಬರುವಮಾ ರ ಬರೆಯಲಿರುವ ಹಿಂದೂ ಕೋಡಿನ ಮ ಸೂದೆಯ ಪೂರ್ವಾಪರ ವಿಚಾರ ನಮ್ಮ ಮಾ ನ್ಯ (ನಾವೆಲ್ಲರೂ ಮಾನ್ಯರೇ, ಅನ್ನಿ ಪ್ರತಿಫಲ ಇಲ್ಲಿದೆ. ಕೆಲಸ ಮಾಡುವವರಿಗೆಲ್ಲಾ ಮಾನ್ಯ ರೆಂದು ಹೇಳಲೇ ಬೇಕಲ್ಲವೇ?) ಉಪಾಧ್ಯ ಕ್ಷರು ಬರೆಯುತ್ತಾರೆ- ನಮ್ಮ ಈ ಹರಟೆ ಸ ಣ್ಣ ಸರಕಾರದ್ದಲ್ಲ. ಒಂದೊಂದು ಇಲಾಖೆಯ ಪಟಾರಾ ಒಬ್ಬೊಬ್ಬ ಸಚಿವರ ಹತ್ತಿರ ಕೊ ಟ್ಟಿರುವುದಾದರೂ ನಮ್ಮೆಲ್ಲರನು ಜವಾಬ್ದಾರಿ ಯ್ಕೊಂಬೆ. ಆಂದರೆ ಒಬ್ಬನು ಇನ್ನೊಬ್ಬನ ಆಭಿಪ್ರಾಯ ಕೇಳಿಕೊಳ್ಳದೆ ಒಬ್ಬನು ತನ್ನ ಸ್ವಂತ ಜವಾಬ್ದಾರಿಯಿಂದ ಹರಟೆ ಕೊಡಿಸ ಬಾರದೆಂಬ ಕಠಿಣ ನಿಯಮವನ್ನು ದೇವರ ದಯೆಯಿಂದ ಈವರೆಗೆ ನಾವು ಪಾಲಿಸಿಕೊಂ ಡು ಬಂದಿದ್ದೇವೆ. ಆದುದರಿಂದ ಈ ಬರಹದ ಲ್ಲಿ ನಾನು ಎಂದು ಬರೆಯುತ್ತೇನೆನ್ನುವಾಗ ನಾವು ಮೂವರು ಬರೆಯುತ್ತೇವೆಂದು ತಿಳಿ ದುಕೊಳ್ಳಬೇಕಾಗಿದೆ.

ಇನ್ನು 'ಹಂಟೆ' ಎಂದರೇನೆಂದು ವಿವರಿ ಟೇಕು, ಒಂದು ಆವಶ್ಯದ ವಿಚಾರ ಮಾತಾ ಡುತ್ತಿರುವಾಗ ಬೇಡವಾದ ಯಃಪುಶ್ಚಾದರೊಂ ದು ವಿಚಾರ ಬಂದರೆ ಅದನ್ನು ನಾವು ಹರಟೆ ಎನ್ನುತ್ತೇವೆ. ನಮ್ಮ ತಲೆಯಲ್ಲಿ ಯಾವ ವಿಚಾ ರವೂ ಸುಳಿದಾಡದೆ ನಾವು ಶಾಂತಚಿತ್ತರಾಗಿರು ವಾಗ ಮುಖ್ಯ ವಿಚಾರವಲ್ಲದಾದರೂ ಏನಾದ ರೂ ಮಾತಾಡುವಾ ಎಂದು ಕಾಣುತ್ತದೆಲ್ಲ ನೇ ಈ ಮನುಷ್ಯ ಪ್ರಾಣಿಗೆ? ಅಂತಹ ಮಾತ ನ್ನು ಸಂಹಿತ್ಯಪುಷ್ಟಿಯಿಂದ ಈಗ ಹರಟೆ ಎ ನ್ನುತ್ತಿದ್ದೇವೆ. ಈ ಹರಟೆಯಲ್ಲಿ ಸೇರಿ ತಿಳಿ ಯುವ ವಿಷಯಗಳು ಬೇಕಾದಷ್ಟಿವೆ. ವಿಷ ಯಗಳನ್ನು ಅರಿತವರ ಕೂಡೆ ಹರಟೆ ಕೊಚ್ಚಿ ದರೆ ನಮಗೆ ಅನೇಕ ವಿಷಯ ತಿಳಿಯುತ್ತದೆ. ಹರಟೆಯ ವಿಷಯಗಳು ಗಂಭೀರವಾಗಿರುವು ದೂ ಉಂಟು. ಸಣ್ಣಪುಟ್ಟ ವಿಷಯಗಳಲ್ಲಿ ಯೂ ಹರಟೆ ಸಾಗುತ್ತದೆ. ಅವೆಲ್ಲಾ ಹರಟೆ ಹೊಡೆಯುವವನ ಯೋಗ್ಯತೆಯ ಮೇಲೆ ಹೊಂದಿಕೊಂಡಿರುತ್ತದೆ ಅಷ್ಟೆ. ಆಚಾರ್ಯ ಕೃ ಪಾಲನಿಯಂತಹ ಧುರೀಣರ ಭಾಷಣವನ್ನು ನಾನು ಕೇಳಿದ್ದೇನೆ. ಆದು ಆತಿ ಗಂಭೀರವಾ ಗಿತ್ತು. ಒಮ್ಮೆ ಅವರು ಕೆಲವು ಜನ ಕೋಂಗ್ರೆ ಸು ಕೆಲಸಗಾರರನ್ನು ಒಟ್ಟುಸೇರಿಸಿ ಒಂದು ಪರಿಷತ್ತಿನ್ನು ನಿರ್ಮಿಸಿದರು. ಅದಕ್ಕೆ ಇಂ ಗ್ಲಿಷಿನಲ್ಲಿ Talk (ಅಂದರೆ ಮಾತುಕತೆ) ಎ ನ್ನುತ್ತೇವೆ. ಅದರಲ್ಲಿ ನಾನೂ ಸೇರಿದ್ದೆ ಅದು ಬಹಳ ಸ್ವಾರಸ್ಯವಿದ್ದಿತ್ತು. ಅದರಲ್ಲಿ ವಿಚಾರಗ ಳು ಮತ್ತು ವಿನೋದಗಳು ಸೇರಿಕೊಂಡಿದ ವು. ನಾವು ಬೇಕಾದ ಮತ್ತು ಬೇಡವಾದ ಸಾ ವಿರ ಪ್ರಶ್ನೆಗಳನ್ನು ಅವರಿಗೆ ಕೇಳಿದ್ದೆವು. ಅವ ರ್ಲಿಕ್ಕೂ ಅವರು ವಿನೋದ ರೀತಿಯಲ್ಲಿ ಸಮ ಪರ್ಕವಾಗಿ ಉತ್ತರಕೊಟ್ಟರು. ಒಬ್ಬ ಬಡಹ ಗಾರ ಒಂದು ಗಂಭೀರವಾದ ವಿಷಯವನ್ನು ತೆಗೆದುಕೊಂಡು ಅದ್ದಾಸಾದ ಒಂದು ಶ್ರಬಂ ಧ ಬರೆಯುತ್ತಾನೆ. (ಅವನೂ ಬರದಗಾರನೇ) ಇನ್ನೊಬ್ಬ ದೊಡ್ಡ ಮತ್ತು ಟಿಕ್ಕ ವಿಷಯಗ ಳನ್ನು ಅಲ್ಲಲ್ಲಿ ಸ್ಪರ್ಶಿಸಿ ಒಂದು ವಿನೋದ ಶೈಲಿಯಲ್ಲಿ ಬರೆಯುತ್ತಾನೆ- ಆದಕ್ಕೆ ನಮ್ಮಂ ತಹ ಸಾಹಿತಿಗಳು 'ಹರಟೆ' ಎಂದು ಕರೆಯುತ್ತೇವೆ. ಹರಟೆ ಹೀಗೆಯೇ ಇರಬೇಕು ಎಂ ದು ಯಾವ ನಿರ್ಬಂಧವೂ ಇಲ್ಲ. ಆಂದರೆ ಈ ವರೆಗೆ ಯಾರೂ ಮಾಡಲಿಲ್ಲ. ಹೀಗಿದೆ ನವು ಹರಟೆ ಕೂಡಾ, ಇನೇ ರೀತಿ ಬರೆಯುತ್ತಾ ಇರುತ್ತೇವೆ. ದೇವರು ಹೀಗೆಯೇ ನಮ್ಮನು ನಡೆಯಿಸಲಿ, ನಮಸ್ಕಾರ,

ಪ್ರೀತಿ ತುಂಬಾ ಇರಲಿ.

ಸೋ ಮಿಲ್

ಉತ್ಪಲಪ್ಪ ತರದ ಇಂಗ್ಲಿಷ
"ಸೋ ಬೆಂಚ್" 24 ಇಂಚು
ಹಾಗೂ 30 ಇಂಚು ಗೋಲ ಗರಗಸ
ಉಳ್ಳವು. ಅತಿ ಯೋಗ್ಯ ಬೆಲೆ.
ಮಾಹಿತಿ ಬಗ್ಗೆ ಇಂದೇ ಬರೆಯಿರಿ.

The Vijay Engineering Co. Ltd.
Mazagaon, **Bombay 10.**

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಬಾಣಂತಿಯರ ನಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯ ನ್ನು ನಿರ್ಣೈಸಿ ತಯಾ ರಿಸಲ್ಪಟ್ಟ ಆಮೋಘ ವಾದ ಮಧುರಪ್ರವ ರಸಾಯನ. ಅಲ್ಪ ಮೌ ಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸು ಲಭವಾಗಿರುವುದು.

ಇವರ
ನವಜೀವಾಮೃತ
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ವಾತಂತ್ರ್ಯರು:—ಡಾ। ವಿ. ಕೆ. ಶಿವರಾಮರಾವ್, ಕುಂಜಬೆಟ್ಟು, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಳಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಚ್ಚುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ಕಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮಂಜಾನೆ ಸಂಜೆ ಎರಡು ಹಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೬ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ಕಕ್ಕೊಳ್ಳಬೇಕು. ಪಥ್ಯ:- ಹಸೀಖಾರ, ಕಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೦ಕ್ಕೆ ೫೦. ಪೋಸ್ಟ ಚಾರ್ಜ ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕವರು ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ-

ಮೇಷ—ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಏಣಿಯ ಮೆಟ್ಟಿಲಿನಂತೆ ಚಂದ್ರನಂತೆ ಏರಿಬರುತ್ತಿದೆ. ಯಾವ ಭಾಗದಲ್ಲೂ ನಿಮಗೆ ಕುಂದುಕೊರತೆಗಳು ಕಾಣಿಸಲಾರವು. ಇಂತಹ ಸುಸಂದರ್ಭವನ್ನು ಸದುದ್ಯಮದಿಂದ ಸಫಲಗೊಳಿಸಿರಿ. ಉದ್ಯೋಗದಲ್ಲಿ ಪ್ರಗತಿ ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಯಶಸ್ಸು, ಜನತೆಯಲ್ಲಿ ಗೌರವಾದರಗಳು ಪ್ರಾಪ್ತನಾಗುವು. ನಿಮ್ಮ ಸಂಪದ್ಯಾಗವು ಅತ್ಯುತ್ತಮ ಸ್ಥಿತಿಗೆ ಬರಲಿದೆ. ವಾರಾಂತ್ಯದ 5 ದಿನಗಳಲ್ಲಿ ಶತ್ರುನಾಶ ದ್ರವ್ಯಲಾಭ ಸುಖಮೊನಾದಿಗಳು ಲಭಿಸುವವು.

ವೃಷಭ— ಬುಧನೊಬ್ಬನನ್ನುಳಿದು ಮಿಕ್ಕೆಲ್ಲಾ ಗ್ರಹಗಳೂ ಪ್ರತಿಕೂಲರಾಗಿರುವುದರಿಂದ ಈ ವಾರದಲ್ಲಿ ನಿಮಗೆ ಮಾತನಾಡಿದನ ಕೊಡನೆ ಜಗಳವಾಗುವದು. ಆದಾಯವು ಅತ್ಯಲ್ಪವಾಗಿದ್ದು ಖರ್ಚು ಬಹುಮುಖದಿಂದ ಪ್ರಾಪ್ತವಾಗುವುದು ಶತ್ರುಗಳ ಪೀಡೆಯು ಆಹಹನೀಯವಿರುವದು. ಗೃಹಕೃತ್ಯದಲ್ಲಿ ಅವ್ಯವಸ್ಥೆಯಿಂದಾಗಿ ನಿಮಗೆ ಸ್ವಪ್ನದಲ್ಲೂ ಸುಖ ಲಭಿಸದೆಂದರೆ ತಪ್ಪಾಗದು. ವಾರಾಂತ್ಯದ 4 ದಿನಗಳು ಬಹುಮಟ್ಟಿಗೆ ಪ್ರತಿಕೂಲಗಳಾಗಿರುವುದರಿಂದ ಬಹಳ ಜಾಗರೂಕತೆಯಿಂದ ಕಳೆಯಬೇಕಾಗುವದು.

ಮಿಥುನ—ಕಳೆದ ದಿನಗಳಿಗಿಂತ ಈ ವಾರವು ಸ್ವಲ್ಪ ಉತ್ತಮವೆನಿಸುವದು. ಖರ್ಚಿಗೆ ತಕ್ಕಷ್ಟು ಫಲಾಪ್ತಿಯು ನಿಮ್ಮ ಉದ್ಯಮದಿಂದ ಲಭಿಸಲಿದೆ. ವ್ಯವಹಾರ ಚತುರರಾದ ನಿಮಗೆ ಜನತೆಯ ಬೆಂಬಲವು ಲಭಿಸುವುದರಿಂದ ಹಿಡಿದ ಕಾರ್ಯದಲ್ಲಿ ಯಶಸ್ಸು ಗಳಿಸುವಿರಿ. ಆದರೆ ಮನೆಯಾಕೆಯು ನಿಮ್ಮ ಕಲಜಪ್ರಯಳಾದಾಳು. ದೇಹಾರೋಗ್ಯವು ಉತ್ತಮವಿರದು. ವಿಷಯಗಳಿಗೆ ಸಿಲುಕಿದ ನಿಮ್ಮ ಮನಸ್ಸು ವಾರಾಂತ್ಯದ 5 ದಿನಗಳಲ್ಲಿ ಅಧಿಕ ವ್ಯಯ, ಕುಮಾರ್ಗಗಳಿಗೆ ನಿಮ್ಮನ್ನು ಪ್ರೇರೇಪಿಸಲಿದೆ.

ಕರ್ಕಟ—ದೈವಬಲ ಆತ್ಮವಿಶ್ವಾಸ ಇವೆರಡರಿಂದಲೂ ನೀವು ಹೊರತಾಗಿರುವುದರಿಂದ ಶನೀಶ್ವರನು ನಿಮಗೆ ಸಾಕಷ್ಟು ಸಲಹೆಯನ್ನಿತ್ತರೂ ನೀವೇನೂ ಕಾರ್ಯವನ್ನು ಸಾಧಿಸಲು ಶಕ್ತರಾಗುವಂತಿಲ್ಲವು. ಮಾಡಿದ ಧನವು ವ್ಯರ್ಥ ವ್ಯಯವಾಗುವದು. ಆರೋಗ್ಯವು ಹೆಚ್ಚಿನಂಶ ಕೆಡುವದು. ಶತ್ರುಗಳ ಪೀಡೆಯಿಂದಾಗಿ ಧನಮಾನಗಳಿಗೆ ಕೆಡುಕುಂಟಾಗುವದು. ಹೆಚ್ಚಿನ ಸಮಯವನ್ನು ಮಾರ್ಗದಲ್ಲಿ ಕಳೆವಿರಿ. ಆದರೂ ತಾ. 27, 28 ಈ ದಿನಗಳಲ್ಲಿ ಕಾರ್ಯದಲ್ಲಿ ಜಯ ಗೌಪಸುಖ ಧನಲಾಭಗಳಿವೆ.

ಸಿಂಹ—ನಿಮ್ಮ ಪರಿಸ್ಥಿತಿಯಲ್ಲಿ ಸಿನೂ ಬದಲಾವಣೆಗಳು ಕಾಣಿಸುವುದಿಲ್ಲವು. ಆದರೆ ಈ ವಾರದಲ್ಲಿ ಅಕಸ್ಮಿಕವಾಗಿ ಸ್ತ್ರೀಯರಿಂದ ಅನಿಷ್ಟ ಅಪವಾದಗಳು ಪ್ರಾಪ್ತವಾಗುವ ಯೋಗವಿದೆ. ಆದ ಕಾರಣ ಬಹಳ ಎಚ್ಚರಿಕೆಯಿಂದಿರಿ. ಖರ್ಚಿಗೆ ತಕ್ಕ ಉತ್ಪತ್ತಿಯಿರುವುದರಿಂದ ಅಧಿಕ ಚಿಕ್ಕಟ್ಟು ಕಾಣಿಸದು. ಗೃಹಚ್ಛಿದ್ರಗಳು ದಿನೇ ದಿನೇ ಹೆಚ್ಚುಲಿವೆ ಆದರೂ ಗುರ್ವನುಗ್ರಹವನ್ನು ಹೊಂದಿದ ನಿಮಗೆ ತಾ. 25, 26, 29, 30, 31 ಈ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ಕನ್ಯಾ—ದಿನಗಳೆದಂತೆ ನಿಮ್ಮ ಆದೃಷ್ಟವೂ ಪ್ರಾಸವಾಗುತ್ತಾ ಬರುತ್ತಿದೆ. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟ ಒದಗಲಿದೆ. ವಿಷಾಗ್ನಿಗಳ ಪೀಡೆಗೆ ಸಿಲುಕುವ ಸಂಭವವಿರುವದು. ಅಸ್ತ್ರೇಷ್ಟರ ವಿಯೋಗದಿಂದ ಮಾನಿಪರಾದ ನಿಮಗೆ ದೇಹಾಲಸ್ಯವೂ ಕೊಂಚ ಪೀಡಿಸಲಿದೆ. ಪ್ರಬಲ ಶತ್ರುಗಳನ್ನೂ ಕೇವಲ ಸ್ವಶಕ್ತಿಯಿಂದ ನಿಗ್ರಹಿಸುವ ಶಕ್ತಿ ನಿಮ್ಮನ್ನು ಪೀಡಿಸಲಿದೆ. ತಾ. 27, 28ರಲ್ಲಿ ದೇಹಾಲಸ್ಯ ಅಧಿಕ ವ್ಯಯಗಳು ಕಾಣಿಸಬಹುದು.

ವೃಶ್ಚಿಕ—ಹೆಚ್ಚಿನಂಶ ಗ್ರಹರ ಅನುಗ್ರಹಕ್ಕೆ ಪಾತ್ರರಾಗಿರುವಿರಿ. ಅದ್ದರಿಂದ ನಿಮ್ಮ ಪ್ರಯತ್ನವು ಶ್ರಮಕ್ಕಿಂತ ಅಧಿಕವಾದ ಫಲವನ್ನೀಯುವುದು. ಬಂಧುವರ್ಗದವರು ದೂರಸರಿದರೂ ನಿಷ್ಠಜನರ ಬೆಂಬಲಯುಕ್ತರಾದ ನಿಮಗೆ ಯಾವ ಕಾರ್ಯದಲ್ಲೂ ಅಪಜಯವುಂಟಾಗದು. ಶ್ರಮಜೀವಿ, ನೌಕರಿ, ವ್ಯಾಪಾರಿಗಳಿಗೆ ನೀರೀಕ್ಷಿಗಿಂತ ಅಧಿಕ ಫಲ ಲಭಿಸಲಿದೆ. ತಾ. 25, 26, 27, 28 ಅತ್ಯನುಕೂಲ.

ಧನು—ನಿಮ್ಮ ಮನೋ ದಾರ್ಬಲ್ಯದಿಂದಾಗಿ ನಿಮಗೆ ಅಸ್ಥಮಿಕ್ರಲ್ಲೂ ಅವಿಶ್ವಾಸವು ಮೊಳೆದೀತು. ಇದರಿಂದಾಗಿ ನಿಮ್ಮ ಕೀರ್ತಿಗೆ ಕಲಂಕಗಳಲಿವೆ. ಎಷ್ಟೊಂದು ಜಾಗರೂಕತೆಯಿಂದಿದ್ದರೂ ಜನರೊಡನೆ ಕಲಹವಾದೀತು. ಹೆಚ್ಚಿನ ಕಾರ್ಯಗಳು ವಿಘ್ನಗಳಿಂದಾಗಿ ಕೊನೆಗೊಂದಲಾರವು. ಸ್ಥಾನಚಲನೆಯೂ ಕೂಡ ಆಗುವ ಯೋಗವಿದೆ. ವಾರಾಂತ್ಯದ 2ದಿನಗಳಲ್ಲಿ ದೇಹಾಲಸ್ಯ ರಾಜಭಯಾದಿಗಳಿಗವಕಾಶವಿದೆ.

ಮಕರ—ಆಪ್ತವು ಪಕ್ಷದಿಂದ ಜನ್ಮಗ್ರತನಾದ್ದರಿಂದ ಸಿತ್ತದೋಷದಿಂದಾಗಿ ನಿಮ್ಮ ಆರೋಗ್ಯಕ್ಕೆ ಧಕ್ಕೆಯುಂಟಾದೀತು. ಮತ್ತು ಶತ್ರುಗಳಿಂದ ಪರಾಜಿತರಾಗುವಿರಿ. ಸದಾ ನಿಮ್ಮ ಮನಸ್ಸು ಕ್ಷುಭಾಷಿಗಳಾಗುವಿರಿ. ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ತುಂಬಾ ವಿಘ್ನಗಳುಪಸ್ಥಿತವಾಗುವವು. ಇದ್ದುದರಲ್ಲಿ ಕೃಪ್ತಿಯೇನಂದರೆ ಖರ್ಚಿಗೆ ತಕ್ಕಷ್ಟು ಆದಾಯವಾಗಿ ಚಿಂತಿಸಬೇಕಾಗಿಲ್ಲ. ಗೃಹ ಸುಖಕ್ಕೆ ಕೊರತೆಯಿಲ್ಲ. ತಾ. 29, 30, 31ರಲ್ಲಿ ಇಷ್ಟವ್ಯಾಪ್ತಿ, ಸುಖಾಪ್ತಿಗಳಿವೆ.

ಕುಂಭ—ಇಂದಿನ ಗ್ರಹಸ್ಥಿತಿಯಿಂದಾಗಿ ನೀವು ಒಂದು ಹೆಜ್ಜೆ ಮುಂದಿಡುವುದಾದರೆ ಅದು ನಿಮ್ಮನ್ನು ಎರಡು ಹೆಜ್ಜೆ ಹಿಂದಕ್ಕೆ ನೂಕುವುದು. ಪ್ರತಿಯೊಂದು ಉದ್ಯಮವಲ್ಲೂ ನಿರಾಶೆಯ ಬಿಸ್ಕೆಗಳೇ ಹೆಚ್ಚಾಗಿ ಕಾಣುವವು. ಹಣದ ಅಡಚಣೆ ಅಧಿಕವಾಗುವುದು. ಇದರಿಂದಾಗಿ ನಿಮ್ಮೈರ್ಯ, ಸ್ಥೈರ್ಯ, ವಿವೇಕಾದಿಗಳು ಪಾಯವಾಗಲಿವೆ. ಇದ್ದುದರಲ್ಲಿ ವಾರಾದಿಯ 2ದಿನಗಳು ಕ್ಷೇಮಕರ.

ಮೀನ—ದಿನಗಳುರುಳಿದಂತೆ ನಿಮ್ಮ ಅದೃಷ್ಟವು ಕೆಡುತ್ತಾ ಬರುತ್ತಿದೆ. ಶ್ರಮಪಟ್ಟರೂ ತೃಪ್ತಿಕರವಾದ ಫಲಲಭಿಸದು. ಆದರೂ ದಿನಯಾಪನೆಗಾಗಿ ಹೆರವರನ್ನು ಶ್ರಯಿಸಬೇಕಾಗಿಲ್ಲವು. ಗೃಹಕೃತ್ಯದಿಂದೊಯೋಗೀ ವಸ್ತುಗಳಿಗೆ ಕೊರತೆ ಕಾಣಿಸದು ಹುಡುಕಿಸಿಯಲ್ಲಿ ಬಹ್ವಂಶ ಸದ್ವಿನಿಯೋಗವಾಗುವದು. ಸಿತ್ತದೋಷದಿಂದ ಆರೋಗ್ಯದೋಷ ಸಂಭವಿಸೀತು. ತಾ. 29, 30, 31ರಲ್ಲಿ ಆನಿಷ್ಟಕ್ಲಿಷ್ಟ ಆನಿಷ್ಟಗಳೊದಗಬಹುದು.

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ಪ್ರಮತಸ್ರಾವ ನಿಂತಿತು

ಇಮೂರು ದಿವ್ಸಗಳನು ಉಪಯೋಗಿಸಿದರೆ ಹದತಪ್ಪಿ ಪ್ರಮತಸ್ರಾವವಾಗುವುದು. ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ; ರೂ. 3-1 ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.

ಕಾರ್ತೀಕ 25-1-51 ರಿಂದ | ವಾರದ ಭವಿಷ್ಯ | ಕಾರ್ತೀಕ 31-1-51ರವರೆಗೆ

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!
ಮನೆಯೆಂದಾದಲ್ಲಿ ಇರಲೇಬೇಕಾದ ಪುಸ್ತಕ
"ಮನೆ-ಮದ್ದು"
ಬರೆದವರು:- ಡಾಕ್ಟರ್ ಕೊರಡ್ಕಲ್ ಪೆಂಕಟರಾಯರು, ಎಲ್. ಪಿ. ಎಮ್., ಉಡುಪಿ.
ಸುಮಾರು 200 ಪಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!
ಮಕ್ಕಳ ಮತ್ತು ಹೆಂಗಸರ ಪಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣೆ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಪಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹಿರಿಗೆಯ ಶ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮಾದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ.
ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.
ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಬರೆಯಿರಿ.

— ಮಕ್ಕಳನ್ನು ಹಡೆಯುವುದು ಸಾಕು —
ಆಕಸ್ಮಿಕ ಸ್ತ್ರೀಯರಿಗೆ ಬರ್ಥ್ ಕಂಟ್ರೋಲ್ ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಗುವಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೀಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗಿಗುಳಿಗೆ ಮಧ್ಯಾಹ್ನಕ್ಕೆ ಗಿಗುಳಿಗೆ, ಸಂಜೆಗೆ ಗಿಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ವಿಸಿನೀರಿನಲ್ಲಿ ಸೇವಿಸಬೇಕು.
ಬೆಲೆ:—ಹರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ಗಿ ಆಣೆ.
ಮೂಲಕರು:—ಹಾಲಪ್ಪಾ ಶಕ್ತಿರಪ್ಪಾ ಹಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.
ಏಜಂಟರು:—ಮಲ್ಲಿಕಾರ್ಜುನ,—ಮಲ್ಲಿಕಾರ್ಜುನ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಹಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ಹಾವಣಗೇರಿ
ಹಾವಣಗೇರಿ:—ಹಾವಣಗೇರಿ ಪ್ರೆಸ್ಸ್ ಲಿ ಎಲ್ ಕಮಲಾಪುರ ಕೆಮಿಸ್ಟ್, ಹಾನೇರಿ ದ್ಯಾಮಿನಿ

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ



ಕೊರಡ್ಕಲ್ ಶ್ರೀನಿವಾಸ ರಾ ವಿರಚಿತ

ಸುಲಭದಲ್ಲಿ ಇಂಗ್ಲಿಷ
English Made Easy
ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ ದ್ವಾರ ರೂ. 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ
ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618
LICENCE No. 31
Licensed to Post without Prepayment

Estd 1921 ಸ್ಥಾಪನೆ
31ನೇ ವರ್ಷ

1-2-1951

Founder: Sri A. B. Shetty,
Minister for Agriculture & Veterinary.

ನವಯುಗ

ವರ್ಷ ೩೧
ವಾರ ೨೧

NAVAYUGA
WEEKLY

POST BOX NO. 22
UDIPI, S. K.

Vol. 31
No. 21

ಅಪಶ್ರುತಿಯ ಹಾಡು!

ಬ್ರಿಟಿಷರ ಆಡಳಿತೆಯ ಕಾಲದಲ್ಲಿ ಭಾರತೀಯರುಮಟಿಳ ಪ್ರತೀಕಾರ ಅವರನ್ನೋಡಿಸುವದರ ಸಲುವಾಗಿ ನಡೆಯಿತು. ಪರರ ಆಡಳಿತೆಯಿಂದ ನೋತುಶೋದ ಜನ ರೆಬ್ಬೆಗೆದ್ದು ಸ್ವತಂತ್ರವಾಗಬಯಸಿದರು. ಆ ಮಂಗ ಮುಷ್ಟಿಯಿಂದ ಪಾರಾಗಿ ಸ್ವತಂತ್ರರಾದರೆ ನಾವು ರಾಮರಾಜ್ಯವನ್ನು ಕಟ್ಟುತ್ತೇವೆ ಎಂದು ಭಾರತೀಯರು ಹೆಣಗಿದರು. ತನುಮನಧನಗಳಾದಿ ಸರ್ವಸ್ವವನ್ನೂ ಕಳೆದುಕೊಂಡರು. ಸ್ವಾತಂತ್ರ್ಯಕಾಂಕ್ಷೆಯಿಂದ ಪ ಕೀಯ ಸರಕಾರವನ್ನು ಹಣ್ಣಾಗಿಸಿದರು. 'ನೀವೊಮ್ಮೆ ಹೊರಟುಹೋಗಿ ಮತ್ತೆ ನಾವು ನಾವು ಒಂದಾಗುತ್ತೇವೆ'ಎಂದರು. ಬಹುಕಾಲದ ಮೇಲೆ ಬ್ರಿಟಿಷರು ಗಂಟುಮೂಟೆ ಕೊಂಡು ಹೋದರು ಆದರೆ ನಾವಿಂದು ಹಿಂದಿನ ಸೊಲ್ಲನ್ನೇ ಹಾಡುತ್ತಲಿದ್ದೇವೆ. ರಾಮರಾಜ್ಯವನ್ನು ಕಟ್ಟುವ ಸಹನಶೀಲ ಗುಣವಾಗಲೀ ದೇಶವನ್ನು ರಕ್ಷಿಸುವ ಕಾತುರತೆಯಾಗಲೀ ಇಂದು ಫಮ್ಮಲ್ಲಿ ಶೂನ್ಯವಾಗಿದೆ ಬ್ರಿಟಿಷರಿಗೆ ಯಾವ ಮಾತುಗಳಿಂದ ಜರೆಯುತ್ತಿದ್ದೆವೋ—ಹೀನೈಸುತ್ತಿದ್ದೆವೋ—ಅದೇ ಧಾಟಿಯಿಂದ ಏಕೆ?-ಅದಕ್ಕಿಂತಲೂ ಕಡಿಮೆಯ ರೀತಿಯಿಂದ ನಮಗೆ ಬಂದಿರುವ ಸ್ವಾತಂತ್ರ್ಯ ಸಂಕೇತವಾಗಿ ಹೀನೈಸುತ್ತೇವೆ. ಅಂದರೆ ಬಯ್ಯುವುದೂ,ಟೀಕಿಸುವುದೂ, ನಮಗೆ ಕಂಠಪಾಠವಾಗಿದೆ. ಬಹಳಕಾಲ ಅವರು ಆಳುತ್ತಿರುವ ಕಾಲದಲ್ಲಿ ನಮಗಿದ್ದ ವಿವೇಕ-ಜ್ಞಾನ-ಇಂದಿಲ್ಲ. ಸ್ವಾತಂತ್ರ್ಯಬಂದ ನಾಲ್ಕೇ ವರ್ಷಗಳಲ್ಲಿ ನಮ್ಮ ಕಲ್ಪನಾರಾಜ್ಯವನ್ನು ಕಟ್ಟುವ ಹಂಬಲಿಗರು ನಾವಾಗಿದ್ದೇವೆ.

ಬ್ರಿಟಿಷರು ಗಡಿವಿಸಾ ಟೀಕಿಸುವವರಿಗೆ ಸಲುಗೆ ಕೊಡುತ್ತಿರಲಿಲ್ಲ. ಅದನ್ನು ನಾವು ವ್ಯಕ್ತಿ ಸ್ವಾತಂತ್ರ್ಯದ ಅಪಹರಣವೆಂದು ಕರೆಯುತಿದ್ದೆವು. ಹಾಗೆ ಒಳಗಿಂದೊಳಗೆ ಕುದಿಯುತ್ತಿದ್ದರಾದರೂ ಮಾತಿನ ಮೇರೆಯನ್ನು ಮೀರಿಹೋಗುತ್ತಿರಲಿಲ್ಲ. ಕಾರಣ ಕಾರಾಗೃಹದ ಭೀತಿ! ಬ್ರಿಟಿಷರು ಸತ್ಯಸಂಗತಿಯನ್ನು ಬಯಲುಮಾಡುವುದರಿಂದ ತನಗೆ ಧೈರ್ಯವಿದೆಯೆಂದು ತಿಳಿದು ನನ್ನ ಹೆಸರನ್ನು ಮುರಿದರಾದರೂ ಒಂದು ಬಗೆಯ ಶಿಸ್ತನ್ನೂ, ಮರ್ಯಾದಿತವಾದ ಮಾತುಗಳ ಬಳಕೆಯನ್ನೂ ಕಲಿಸಿದರು. ಅನಿವಾರ್ಯವಾಗಿರಲೀ, ಅಪೇಕ್ಷಿತವಾಗಿರಲಿ ಅತಿಯಾದ ಮಾತಿಗೆ ಬಿಗಿಯಾದ ಕಡಿವಾಣವಿತ್ತು. ಆದರಿಂದು ಆ ಬಗೆಯ ಶಿಸ್ತಿಲ್ಲ! ಇಂದು ನಾವು ಸ್ವತಂತ್ರರು. ದೇಶ ಸ್ವತಂತ್ರವಾಗಿದೆ. ನಮ್ಮದೇ ಸರಕಾರ ಅಳುತ್ತಲಿದೆ. ಅಂದಮೇಲೆ ಧಾರಾಳವಾಗಿ ಸರಕಾರದ ಮೇಲೆ ನಾವು ವಾಗ್ಬಾನವನ್ನೆಸೆಯಬಹುದು. ಅಂತಲೇ ಈಗ ಆದರ ಪ್ರಯೋಗ ನಡೆಯುತ್ತಲಿದೆ. ಆದರೆ ಹಿಂದೆ ಪಾಡಿದ ಹಾಡನ್ನೇ ಇನ್ನೂ ಸ್ವಲ್ಪ ಗಟ್ಟಿಯಾಗಿ ಹಾಡುತ್ತೇವೆ. ತಾವು ಹಾಡುತ್ತಿರುವ ಈ ಪಾಡಿ ಸುಶಿಕ್ಷಿತವ್ಯವೋ ಬಂ ಕರಿಚಾಟವೋ ಎಂದು ವಿವೇಕಿಸುವ ಜ್ಞಾನವಾತ್ರ ನಮಗಿಲ್ಲ.

ಹೀಗೆ ಸರಕಾರವನ್ನು ಟೀಕಿಸುವ ಮೇಳೆನಮ್ಮ ಹೊಣೆ ಎಂತಹದನ್ನು ನಾವು ಯೋಚಿಸುತ್ತಿಲ್ಲ. ದೇಶದ ಸತ್ಪ್ರಜೆಯಾಗಿ ಬಾಳಬೇಕಾದ ಗುಣ, ಟೀಕೆಪಾಡುವವರಲ್ಲದೆಯೆ? ಎಂದು ಯೋಚಿಸುವದಿಲ್ಲ. ತನ್ನೊಳಗೇ ಇರುವ ಅವಿಚಾರಗಳನ್ನು ಬಗೆಹರಿಸುವ ಮನಸ್ವಾಸ್ಥ್ಯವಿಲ್ಲದ ವ್ಯಕ್ತಿತ್ವ ರಾಷ್ಟ್ರವನ್ನು ಆಳುವ ಸರಕಾರವನ್ನು ಟೀಕಿಸುವದಾದರೂ ಹೇಗೆ? ಬಾಯಿಬಡಕತನವೊಂದನ್ನು ಬಿಟ್ಟರೆ ಬೇರೇನೂ ಯಥಾರ್ಥವಾದುದು ಅಲ್ಲಿ ಕಾಣುವಂತಿಲ್ಲ.

ಹೊಣೆಯರಿಯದ ಮುಂದಾಳುಗಳು, ಸ್ವಲಕ್ಷ್ಯಗಳ ಪ್ರಚಾರಕ್ಕಾಗಿಯೂ ಇಂತಹ ಹಾಡನ್ನೇ ಹಾಡುತ್ತಿತ್ತಾರೆ. ರಾಜಕೀಯ ರಂಗದಿಂದ ಹಿಡಿದು ಸಾಮಾನ್ಯ ಜನರ ವರೆಗೂ ಸತ್ಯದ ವಿಪರ್ಯಾಸ ನಡೆಯುತ್ತಲಿದೆ. ತನ್ನ ಸ್ವಾರ್ಥವನ್ನು ಸಿದ್ಧಿಸಿಕೊಳ್ಳುವಲ್ಲಿ ಬೇರೆಯವರ ಮೇಲೆ ಉರುಕಾರುವ ಮನೋವೃತ್ತಿ ವಿಪುಲ ಬೆಳೆಯುತ್ತಲಿದೆ. ತಮ್ಮ ಪಕ್ಷ ಪಂಗಡಗಳನ್ನು ಮೇಲ ಕೈತ್ತುವುದು ಸ್ವಸಾಮರ್ಥ್ಯದಿಂದಲ್ಲ; ಪರರ ಅವಜ್ಞೇ-ನಿಂದಿಗಳಿಂದ! ಈ ಬುದ್ಧಿ ಸಾಮಾನ್ಯ ಜನರ ಜೀವನದಲ್ಲೂ ಹಾಸುಹೊಕ್ಕಾಗಿದೆ. ಕಾಲಗುಣದಿಂದಲೋ—ವಿದ್ಯೆಯ ಆಭಾವದಿಂದಲೋ—ನೈತಿಕಪತನದಿಂದಲೋ ಜನರಲ್ಲಿ ವಿಮರ್ಶೆ ಮಾಡಿ ಮಾತಾಡುವಷ್ಟು ವಿವೇಕವಿರುವುದಿಲ್ಲ. ಮಹಾತ್ಮಾ ಗಾಂಧಿಯವರು ಹೇಳಿದ ಸತ್ಯ, ಅಹಿಂಸೆ, ಸಹನೆ—ಇವೆಲ್ಲಾ ಉಪಚಾರದ ಮಟ್ಟಿಗೆ ಅಯಿತು; ಕೃತಿಯ ಮಟ್ಟಿಗಲ್ಲ. ಅಂತಃ ಸತ್ವವಿಲ್ಲದ ಮಾತುಗಾರಿಕೆ ಬೇಜವಾಬ್ದಾರಿಯ ದೆಂಬುದನ್ನು ಇದರಿಂದ ನಾವು ಚೆನ್ನಾಗಿ ಅರಿಯಬಹುದಾಗಿದೆ.

ಈ ಚಂಚಲ ಮನೋವೃತ್ತಿಯವರೆ ಪ್ರಚಾರವಾಗಲೀ, ಟೀಕೆಯಾಗಲೀ, ಜನತೆಯಲ್ಲಿ ಜಾಗೃತಿಯನ್ನುಂಟುಮಾಡೀತೆಂದು ಭಾವಿಸುವದಾದರೂ ಹೇಗೆ? ಕಿಸ್ಸಾಯಿದಾನನ ಹಾಗೆ ಹಾಡುತ್ತಿರುವವ್ಯರ ಮಟ್ಟಿಗೆ ಅದೀತಷ್ಟೇ. ಈ ಹಾಡಿನಿಂದ ಪಂಥ-ಪಂಗಡಗಳಾಗಿ ಬೇರೆ ಬೇರೆಯಾಗಿ ಬದುಕುಮಾಡುವದಕ್ಕೆ ಜನತೆಯನ್ನು ಪ್ರಚೋದಿಸಿದಂತಾಗುವುದಿಲ್ಲವೇ? ಅಂದರೆ ಸರಕಾರವನ್ನು ಕೆಡವುವ ಹೆಸರಿನಲ್ಲಿ ಪ್ರಜೆಗಳನ್ನು ದುರ್ಮಾರ್ಗಕ್ಕೆ ಹೆಚ್ಚಿದಂತಾಗುವುದಿಲ್ಲವೇ? ಇದು ಸ್ವಾತಂತ್ರ್ಯದ ದುರುಪಯೋಗವಲ್ಲವೇ? ಸ್ವಾರ್ಥದ ಕುರುಹಲ್ಲವೇ?

ಕಲುಷಿತವಾದ ವಾತಾವರಣವನ್ನು ನಿರ್ಮಿಸುವ ಈ ಬಗೆಯ ಹಾಡು ನಿಜವಾಗಿಯೂ ನಮ್ಮ ದೇಶದ ಅಂತರಿಕ ಐಕ್ಯವನ್ನು ಕೆಡಿಸುತ್ತದೆ. ಈ ಅಜ್ಞಾನದಿಂದಾಗುವ ದುಷ್ಪರಿಣಾಮವೆಂದರೆ ಬೇರೆಯವರಿಗೆ ಪರಿಹಾಸ್ಯ ಮಾಡುವದಕ್ಕೂ, ದುರ್ಬಲ ಮನೋವೃತ್ತಿಯವರ ಲಾಭವನ್ನು ಪಡೆಯುವದಕ್ಕೂ ನೆರವು ಮಾಡಿಕೊಡುವುದು.

ವಿವೇಕಪೂರ್ಣಂಥವರು ಈ ಬಗೆಯ ಮನೋವೃತ್ತಿಗೆ ಒಲಿಯುವುದಿಲ್ಲ. ಆದರೆ ಸದಾ ಒಂದೇ ಬಗೆಯ 'ಗುಂ-ಗುಂ ಗಾನ' ನಮ್ಮ ಕಿವಿಯ ಮುಂದೆ ಹಾಡುತಿದ್ದರೆ ಅದೇ ಹಾಡು ಸದಾ ಪ್ರತಿಧ್ವನಿಸುತ್ತಲೇ ಇರುತ್ತವೆ ಇಷ್ಟನಿಲ್ಲವಾದರೂ ಒಂದು ಒಗೆಯ ಮಂಕು ಮನಸ್ಸನ್ನು ಕವಿಯುತ್ತವೆ. ಅಂದರೆ ಹಾಡನ್ನ ಕೇಳಿ, ಮಂಕರೂ, ಬೆಪ್ಪರೂ, ವಿಚಾರಶೂನ್ಯರೂ ಆಗಿ ದೇಶವೆಲ್ಲ ಇಂತಹುದೆಂದೇ ತುಂಬಿದರೂ ತುಂಬಬಹುದು.

'ನನ್ನ ದೇಶ, ಈ ದೌರ್ಭಾಗ್ಯಕ್ಕೆ ತುತ್ತಾಗಬಾರದು'ಎಂದ ನಾವು ಉಪದೇಶ ಮಾಡಿದರೂ ಉಪಯೋಗವಿಲ್ಲ. ಅಂತಹ ಅಪಶ್ರುತಿಯ ಹಾಡನ್ನು ನಿಲ್ಲಿಸಿದರೇನೇ ಎಲ್ಲವೂ ಸಮಾಧಾನವಾದೀತು. ಇಲ್ಲವಾದರೆ ಬಾಯಿಬಡಕತನಕ್ಕೆ ಬೆಲೆಯಿಲ್ಲದೆ ಅಕ್ಷಯಕ್ಕೆ ಮಾಡಿಕೊಂಡಂತೆಯೆ ಸರಿ.

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು
ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

ಅನುವಾದಕರು—ವಿ। ಸೊಸಕೆರೆ ಚಿದಂಬರಯ್ಯನವರು

ಈ ಗ್ರಂಥದಲ್ಲಿ ಗೀತೆಯ ಮೂಲಪೆಟ್ಟಿಗೆ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಲ್ಲದ ಭಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು
ಬುಕ್‌ವೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಎರಡು ಜಂಭದ ಕೋಳಿಗಳು

ಅಮೀರ ಅಬ್ದುಲ್ಲಾ-ಚಾರ್ಲ್ಸ ಡಿಗಾಲೆ

ಅಮೀರ ಅಬ್ದುಲ್ಲಾ

ಒಂದು ಕಾಲದಲ್ಲಿ ಕರ್ಕೀಯ ಒಟ್ಟೋಮಾನ ಸಾಮ್ರಾಜ್ಯ ಸರ್ವರಿಗೂ ವೆರಳು ನೀಡುವ ಅಲಿದ ಮರದಂತೆ ವಿಶಾಲವಾಗಿತ್ತು. ಆದರ ದಕ್ಷಣೆಯ ಅಡಿಯಲ್ಲಿ ಕ್ರೈಸ್ತಿಯನ್ನರು, ಕುರ್ದರು, ಅರ್ಮೀನಿಯಾನರು, ಅರಬರು, ಯಹೂದಿಗಳು ಎಲ್ಲರೂ ಸುಖದಿಂದ ಇದ್ದರು. ತಂತಮ್ಮ ಪರಂಪರೆಯ ವೈಶಿಷ್ಟ್ಯಗಳಿಗನುಸಾರ ಅವರ ಬದುಕು ಸಾಗಮವಾಗಿ ಸಾಗುತಿತ್ತು. ಆದರೆ 1914ರಲ್ಲಿ ತುರ್ಕಿಯ ಸುಲ್ತಾನರು– ಧರ್ಮದರ್ಶಿ ಖಲೀಫರ – ಧರ್ಮಯುದ್ಧವನ್ನು ಘೋಷಿಸಿದರೋ, ಇಲ್ಲವೋ, ಅರಬರು ದಂಗೆ ಎದ್ದರು. ಸಾಮ್ರಾಜ್ಯ ನುಜ್ಜುನುಗ್ಗಾಯಿತು. ಹಿಂದಿನ ಮಹಾ ಸಾಮ್ರಾಜ್ಯದ ಸ್ಥಳದಲ್ಲಿ ಹಲವಾರು ಸಣ್ಣ ಪುಟ್ಟರಾಜ್ಯಗಳು ತಲೆ ಎತ್ತಿದವು.

ಪೂರ್ವಸ್ಥಾನದ ನಿಕಟಪೂರ್ವ ಭಾಗದ ಜೋರ್ಡಾನ ಅಂಥದೊಂದು ಪುಟ್ಟ ರಾಜ್ಯ. ಅದರ ಅಡಳತಾಧಿಕಾರಿ ಈಗ್ಗೆ ಮೂವತ್ತು ವರ್ಷಗಳಿಂದ ಅಮಿರಾ ಅಬ್ದುಲ್ಲಾ ಅರಸನ ಕೈಯಲ್ಲಿದೆ. ಅವನು ಇಷ್ಟು ದೀರ್ಘಕಾಲದಲ್ಲಿ ತನ್ನ ಪ್ರಜೆಗಳು ಪರಂಪರೆಯ ವೈಶಿಷ್ಟ್ಯಗಳನ್ನು ಕಾಯ್ದುಕೊಂಡು ನೆಮ್ಮದಿಯಿಂದ ಬಾಳುವಂತೆ ಪರಿಶ್ರಮಿಸಿದ್ದಾನೆ. ಅದೇ ಸಮಯಕ್ಕೆ, ತುರ್ಕಿ ಸಾಮ್ರಾಜ್ಯದ ನಾಶಕ್ಕೆ ಕಾರಣವಾದ ನ್ಯೂನತೆಗಳನ್ನು ತೊಡೆದುಹಾಕಿ, ಪಾಶ್ಚಾತ್ಯೀಕರಣದಲ್ಲಿ ಅಗತ್ಯವೆನಿಸಿದ ಹೆಜ್ಜೆಯನ್ನೂ ಅವನಿಟ್ಟಿದ್ದಾನೆ.

ತುರ್ಕಿ ಸಾಮ್ರಾಜ್ಯದ ನಾಶಕಾಲ ಒಂದು ಸಂದಿಗ್ಧಾವಸ್ಥೆಯ ಪ್ರತೀಕ. ಇತಿಹಾಸದಲ್ಲೇ ಮೊದಲಬಾರಿ ಎಂಬಂತೆ ಪಾಶ್ಚಿಮಾತ್ಯ ಪೂರ್ವ ಹಾಗೂ ವೌರ್ವಾತ್ಯ ಜನತೆಯ ಎದುರಿಗೆ ತಮ್ಮ ಭಾನೀಗತಿಯನ್ನು ನಿರ್ಣಯಿಸುವ ಪ್ರಶ್ನೆ ಏಕಕಾಲದಲ್ಲೇ ಅದಾಗಿತ್ತು. ತಾವೂ, ತಮ್ಮ ಮುಂದಿನ ಪೀಳಿಗೆಯೂ ಯಾವ ಬಗೆಯ ಸಾಮಾಜಿಕ ಸೌಲಭ್ಯಗಳನ್ನು ಆಪ್ತಿಕೊಳ್ಳಬೇಕು ಎಂಬುದನ್ನು ಆಗ ನಿರ್ಣಯಿಸಬೇಕಿತ್ತು. ಜನ ತಮ್ಮ ಹೀನಸ್ಥಿತಿಗೆ ಬೇಸರಿಸಿ, ರಾಷ್ಟ್ರೀಯ ಶ್ರೇಷ್ಠತೆಯ ಕಲ್ಪನೆಯಲ್ಲಿ ತೊಡಗಿದ್ದರು. ತುರ್ಕಿಯ ಅವಸ್ಥೆಯಾದರೂ ಇದೇಯಾಗಿತ್ತು. ಕಮಾಲಪಾಶಾ ಆ ತಾತುರ್ಕನ ನೇತೃತ್ವದಲ್ಲಿ ತರುಣ ತುರ್ಕರು ದಂಗೆ 1908ರಲ್ಲಿ ನಡಯಿತು. ಮುನ್ನೂರು ವರ್ಷಗಳಿಂದ ನಡೆದುಕೊಂಡು ಬಂದ ಸಾಮ್ರಾಜ್ಯ ವೈಭವದ ಅಡಿವಾಯವನ್ನೆ ಅದು ನಡುಗಿಸಿತು. ಐಕ್ಯ ಮತ್ತು ಸ್ವಗತಿಸಾಧನೆ ಯುವಕ ತುರ್ಕರ ಮಹತ್ವಾಕಾಂಕ್ಷೆಯಾಗಿತ್ತು. ಇಂಥವರಲ್ಲಿ ಅಮಿರಾ ಅಬ್ದುಲ್ಲಾಗೆ ಪಾರ್ಲಿಮೆಂಟಿನಲ್ಲಿ ಮಕ್ಕಾದ ಪ್ರತಿನಿಧಿಯ ಜಾಗವಿದೊರೆಯಿತು. ಆದರೆ ಇದು ಬಹುಕಾಲ ಬಾಳಲಿಲ್ಲ. ಜನಾಭಿಪ್ರಾಯದಲ್ಲಿ ವೈವಿಧ್ಯದ ದೆಸೆಯಿಂದ, ಪರಿಸ್ಥಿತಿಯ ಒತ್ತಡದಿಂದ, ತರುಣ ತುರ್ಕರ ಉದ್ದೇಶ ಒಂದೇ ಗೇ ಕೈಗೂಡಲಿಲ್ಲ.

ಅಮೀರ ಅಬ್ದುಲ್ಲ ರಾಷ್ಟ್ರೀಯವಾದಿ. ಅವನಿಗೆ ಕುರಾನಿನ ಧರ್ಮದಲ್ಲಿ ಅತೀವ ಶ್ರದ್ಧೆ. ಎಚ್ಚತ್ತ ರಾಷ್ಟ್ರೀಯತ್ವದ ಕಲ್ಪನೆ ಯಲ್ಲಿ ಪಾಶ್ಚಾತ್ಯರ ಸುಧಾರಣೆಗಳನ್ನು ಅಂಧವಾಗಿ ಅನುಸರಿಸುವುದಲ್ಲವಾದರೂ, ತಮ್ಮ ಪರಂಪರೆಗೆ ಕೊಂತೆ ಬಾರದಂತೆ ಅವನ್ನು ಬಳಸುವ ಹವಣಿಕೆ ಅವನದಾಗಿತ್ತು. ಅವನನ್ನು ಕೆಲವರು ಸಂದರ್ಭ ಸಾಧಕನೆನ್ನುವುದೂ ಉಂಟು. ಒಟ್ಟೋಮಾನ ಸಾಮ್ರಾಜ್ಯ ನಾಶಕ್ಕೆ ಅವನ ಜೆಟುವ ಟಿಕೆಯೂ ಒಂದು ಭಾಗವಾಗಿ ಕಾರಣವಾಗಿತ್ತಲ್ಲವೆ? ಅಬ್ದುಲ್ಲನಿಗೂ ಅಧಿಕಾರವೆಂದರೆ ಪ್ರೀತಿ ಉಂಟು. ಆದರೆ ಸಾಮಾಜಿಕ ನೈಶಿಷ್ಟ್ಯಗಳನ್ನು ಕಾಪಾಡಲೆಂದೇ ರಾಜಕೀಯದ ಬಲವಿದೆ ಎಂಬುದಾಗಿ ಅವನ ಭಾವನೆ. ಹಾಗಾಗಿ, ಪುಟ್ಟ ಹುಲ್ಲುಗಾವಲಿನ, ಕೃಷಿಕರ ರಾಜ್ಯ ಜೋರ್ಡಾನದಲ್ಲಿ ಸುಧಾರಣೆಯ ತಂಪುಪ್ರವಾ ಕ್ರಮೇಣ ಹೆಚ್ಚತ್ತಾ ಹೋದೀತು ನಿಜ; ಆದರೆ, ತಮ್ಮ ದೆನಿಸಿದುದನ್ನು ಉಳಿಸಿಕೊಳ್ಳವ ಯತ್ನವೂ ನಿಲ್ಲಲಾರದು. ಪಶ್ಚಾತ್ಯರ ರೀತಿನೀತಿ, ಶಂತ್ರ ವಿಧಾನಗಳಲ್ಲಿ ನಮಗೆ ಬೇಕಾದುದನ್ನಷ್ಟೆ ಆರಿಸಿ, ಬಳಸುವುದು ಇಚ್ಛಿಯ ಆ ಪೂರ್ವ ಕಲೆ ಎಂಬುದನ್ನು ಮರೆಯಂವೆಯೂ ಇಲ್ಲ.

ಚಾರ್ಲ್ಸ ಡಿಗಾಲೆ

ಸುಮಾರು ಹತ್ತು ವರ್ಷಗಳ ಹಿಂದೆ ಫ್ರಾನ್ಸಿನಲ್ಲಾಗಲೀ, ಬ್ರಿಟನಿನಲ್ಲಾಗಲೀ ಜನರಲ ಚಾರ್ಲ್ಸ ಡಿಗಾಲೆಯ ಹೆಸರಿ ತವರು ತೀರ ವಿರಳ. ಕೇವಲ ಮಿಲಿಟರಿ ಕಾರ್ಯಕುಶಲರಿಗೆ ನಾವೀನ್ಯ ಅವಿಷ್ಕಾರದ ಹುರುಪ್ಸರ್ತ್ಯ, ಯಂತ್ರ ಬಲದ ಯುದ್ಧಾಭಿಮಾನಿ ಎಂಬಷ್ಟು ಮಾತ್ರ ಜನರಿಗೆ ಗಾತಿಯ ಪರಿಚಯವಿತ್ತು. ಫ್ರಾನ್ಸಿನ ಸುರಕ್ಷಾ ಬಿಂದು ಮೆಗಿನೋ ಸಾಲಿನುದ್ದ ಕೃಲ್ಲು, ಟಾಂಕು ಮತ್ತು ವಿಮಾನ ಬಲದ ಧಾಳಯಲ್ಲಿದೆ ಎಂಬುದು ಗಾತಿ ಕಂಡುಕೊಂಡ ಸತ್ಯ. ಅವನ ಈ ಚಾತುರ್ಯ ಜರ್ಮನ್ ಯುದ್ಧ ವಿಶಾರದರ ಕೊಂಡಾಟದ ವಸ್ತುವೂ ಆಗತ್ತು.

ಅವನ ಜಡ್ಡಕ್ಕೆ ಪಸ್ಪರ ವಿರೋಧಾಭಾಸದ ಕಂತೆ. ಅವನು ಹಿಂದೂ ಇಂದೂ ಫ್ರಾನ್ಸಿನ ರಾಜಕಾರಣದಲ್ಲಿ ರಣನೀಯ ವ್ಯಕ್ತಿ. ನಾಝಿ ಜರ್ಮನಿಯೊಡನೆ ಶಾಂತಿ ಮೈತ್ರಿಗಳ ಪ್ರಸ್ತಾಪಕ್ಕೆ ಗಟ್ಟಿಯಾಗಿ "ಬೇಡ" ಎಂದ ಈ ವೀರ, ಸೋಲನ್ನೊಜರೆದು, ಬ್ರಿಟನರೊಡಗೂಡಿ, ಕದನ ಮುಂದರಿಸಿದ. 1944ರಲ್ಲಿ ಫ್ರಾನ್ಸಿನ ಮುಕ್ತಿಯಾದೊಡನೆ–ಫ್ರಾನ್ಸಿನ ಚರಿತ್ರೆಗೇ ಹೊಸತಾದ ಮಹಿಳೆಯರಿಗೂ ಮತದಾನದ ಹಕ್ಕು, ಕಮ್ಯೂನಿಸ್ಟರಿಗೂ ಮಂತ್ರಿಪದ—ಈ ಬಗೆಯ ಸೌಲಭ್ಯ ಕಲ್ಪಿಸಿದ ದ್ರಷ್ಟಾರ ಆತ. ಜನರಲ್ ಗಾಲೆ ಪ್ರಜಾಪ್ರಭುತ್ವದ ಸಾಮಾನ್ಯತೀತವಾಗಿದ್ದ ಫ್ರಾನ್ಸಿನಲ್ಲಿ ಅದರ ಕಲ್ಪನೆಯನ್ನು ಪುನಃ ಹುಟ್ಟಿಸಿದವನು; ಅದರಲ್ಲಿ ನಂಬಿಕೆ, ವಿಶ್ವಾಸ ಹೆಚ್ಚಿಸಿದವನು ಎಂದರೂ ತಪ್ಪಲ್ಲ.

ಆದರೆ ಇಂದಿನ ಅವನ ನಡವಳಿಕೆ ತೀರಾ ಬದಲಾಗಿದೆ– ಈಗ ತಕ್ಕಡಿ ಪಾರ್ಟಿಯ ಮುಖಂಡನಾಗಿ, ಬಲಪಕ್ಷವನ್ನು ಕಟ್ಟಿಕೊಂಡು, ಈತ ಫ್ರಾನ್ಸಿನ ಘಟನೆಯಲ್ಲಿ ಬದಲಾವಣೆಯನ್ನು ಅಪೇಕ್ಷಿಸುತಿದ್ದಾನೆ. ಪಾರ್ಲಿಮೆಂಟಿನ ಅಂಕೆಗೊಳಪಡದ ಅಧ್ಯಕ್ಷಪದವೇಕೆಂಗೂ, ತಾನೇ ಅದನ್ನು ವಹಿಸುವೆನೆಂದೂ ಘೋಷಿಸಲಿಕ್ಕೆ ಈ ಮಹಾನುಭಾವ ಈಗ ಹಿಂಜರಿಯುವುದಿಲ್ಲ ಅಂತೂ ಈ ವರ್ಷಾಂತ್ಯದೊಳಗೆ ಚುನಾವಣೆ ನಡೆದಾಗ, ಗಾಲೆಯ ಆದೃಷ್ಟ ಪರೀಕ್ಷೆ ನಡೆಯುವುದೂ ಸಂಭವವಿದೆ.

ಅವನ ಬಗ್ಗೆ ಅಸ್ಪಷ್ಟ—ಸಾಧಾರಣ ಸೈನಿಕನಾಗಿದ್ದವನು ಒಮ್ಮೆಗೇ ಹೇಗೆ ರಾಜಕಾರಣಿಯಾದ ಎಂಬುದೇ. ಇದರ ನಿವಾರಣೆ ಈ ಮಾತಿನಲ್ಲಿದೆ–1940ಕ್ಕೂ ಹಿಂದಿನ ಅವನ ಬರಹಗಳಲ್ಲಿ ಆಧುನಿಕ ರಾಜಕೀಯ ಪಾತ್ರಾವರಣಕ್ಕೆ ಹೊಂದಿಕೆಯಾಂಡ ಯುದ್ಧ ಜ್ಞಾತರ್ಯಗಳ ಮಾದರಿ, ನವೀನ ಮಿಲಿಟರಿ ಕ್ರಮಗಳ ಕುರಿತಾದ ಸಾಮಾನ್ಯಜ್ಞ ಅಧ್ಯಯನ,ಮುಂತಾದುವುಇವೆ. ಈ ಸಮಯದಲ್ಲಿ ನೇರಾಗಿ ರಾಜಕೀಯ ರಂಗದಲ್ಲಿ ಕಾಲಿಟ್ಟದ್ದಿಲ್ಲ, ನಿಜ. ಆದರೆ ಪಾವುಲರೇನಾಡ, ಗಾಸ್ಟನ್ ಪಾಲೆಸ್ಟೈಯಂತರ ಮೂಲಕ ತನ್ನ ರಾಜಕೀಯ ದೃಷ್ಟಿಕೋನಕ್ಕೆ ಸರಕಾರೀ ಗಮನಹರಿಸಂತಾಗಲು ಆಗಲೂ ಅವನು ಧಾರಾಳ ಯತ್ನಿಸುತಿದ್ದ. ರಾಜಕಾರಣಿಯ ಮನಸ್ಸು; ಅದಕ್ಕೆ ಪೋಷಕವಾದ ಭಾಷಣ ಕಲೆಯ ಸಿದ್ಧಿಯೂ ಅವನಿಗೆ ಕರಗತವಾಗಿವೆಯಾಗಿ ಅವನು ಕೇವಲ ಚಾಪಲ್ಯ ಬಲದಿಂದಲ್ಲ, ಸಹಜ ಸಾಮರ್ಥ್ಯದಿಂದಲೇ ರಾಜಕಾರಣಿ ಎನಿಸಲು ಅರ್ಹನಾಗಿದ.

ಡಿಗಾಲೆ ಜೂನ 18, 1940ರಲ್ಲಿ ಕೊಟ್ಟ ಒಂದು ಆಕಾಶವಾಣಿ ಭಾಷಣಕ್ಕೆ ವಿಶೇಷ ಕೋರ್ಟು ಮಾರ್ಷಂಡ ವಿಧಿಸಿತು. ಅದರಿ ಗಾಲೆ ಆ ಸರಕಾರದ ವಿರುದ್ಧ ಪಂಗಡ ಕಟ್ಟಿಕೊಂಡು ಹೋರಾಡಿದ. ಸಂಶಯ, ದ್ವೇಷ, ಅಸೂಯೆ, ಕಿಡಿಗೇಡಿತನಗಳೇ ಮುತ್ತುಮುತ್ತ ಕಂಡು ಬರುತ್ತಿದ್ದ ಈ ಹೋರಾಟದ ಸಮಯ ಅವನಿಗೆ ಚಲೋದಾಗಿ ಉತ್ತಮ ಮಟ್ಟದ ರಾಜಕೀಯ ಶಿಕ್ಷಣ ದೊರೆಯಿತು.

ಫ್ರಾನ್ಸು ಮುಕ್ತಿಪಡೆದಾಗ ಅವನೇ ಅಧ್ಯಕ್ಷಪೀಠ ಅಲಂಕರಿಸಿದ. ಆದರೆ ಜನಪ್ರತಿನಿಧಿಅಂಕುಶ, ಹಾಗೂ ಬಲಾಢ್ಯವಾದವರ ತಂತ್ರ ಅಧಿಕಾರಕ್ಕೆ ಒಪ್ಪಿದೆ, ಘಟನಾಬದ್ಧ ಅಡಳಿತ ಕ್ರಮದತ್ತ ಹರಿಯುತಿತ್ತು. ಇದನ್ನು ಕಂಡು ಡಿಗಾಲೆ ತನ್ನ ಬೇಳೆಬೇಯುವುದಿಲ್ಲವಲ್ಲ ಎಂದು ಪರಿತಪಿಸಿದ. 1946ರ ಜನವರಿಯಲ್ಲಿ "ಫ್ರಾನ್ಸಿನ ಗಂಡಾಂತರದ ದಿನಗಳು ಕಳೆದವು" ಎಂದು ಸಮಾಧಾನದ ನೆವಹೇಳಿ, ತನ್ನ ಪದವಿಗೆ ಅವನು ರಾಜೀನಾಮೆಕೊಟ್ಟ. ಮುಂದೆ ರಾಜಕೀಯ ವಾನಪ್ರಸ್ಥಾಶ್ರಮ ಕೈಗೊಳ್ಳುವ ಯೋಜನೆ ಆಗ ಅವನಿಗಿತ್ತು.

ಆದರೆ ಅವನ ಮನೋವೃತ್ತಿಯ ವೈತಿಷ್ಟ್ಯ ಬೇರೆಯೇ. ಸ್ವಪ್ರತಿಷ್ಠೆ ಮತ್ತು ಅತ್ಮವಿಶ್ವಾಸಗಳು ಡಿಗಾಲೆಯ ರಕ್ತಗುಣ. ತನ್ನ ಉದ್ದೇಶ ಸರಿ ಎಂದು ಮನಗಂಡ ಬಳಿಕ ಬಬಹುದಾದ ದುರಂತಗಳಿಗೆ ಅವನು ಹೆದರುವುದೇ ಇಲ್ಲ; ಯಾವ ಪ್ರಯತ್ನವನ್ನೂ ಅವನು ಸಾಧಿಸದೆ ಬಿಟ್ಟವನೂ ಅಲ್ಲ. ಹಾಗೆಯೇ ಅವನು ಭಾವಜೀವಿಯೂ ನಿಜ. ಹೀಗಾಗಿ, ಅವನ ಅನುಯಾಯಿಗಳಿಗೇ ಅವನ ವ್ಯಸ್ತಿನ ಹೂಲಬು ಸಿಗುವುದು ಕಷ್ಟವಾಗಿ, ಅವನು ಆಶ್ಚರ್ಯದಲ್ಲಿ ಬೀಳುವ ಪ್ರಸಂಗ ಬರುವುದೂ ಉಂಟು. ತನ್ನ ನಡುವಯಸ್ಸಿನಲ್ಲೆಲ್ಲಾ ಜರ್ಜುಮತ್ತು ಅಧಿಕಾರ ಅನುಭವಿಸಿದ ಅತನಿಗೆ ಈಗ ಅಹಂಕಾರವೇ ಎಲ್ಲವನ್ನೂ ಮುಕ್ಕುವಂತಾಗಿದೆ.

ಇದೇ ಕಾರಣವೋ ಏನೋ, ರಾಜೀನಾಮೆ ಕೊಟ್ಟ ಆರೇ ತಿಂಗಳೊಳಗೆ ಪುನಃ ರಾಜಕೀಯದಲ್ಲಿ ಅವನು ಪ್ರವೇಶಿಸಿದ. ಈ ಬಾರಿ ಅವನ ದೃಷ್ಟಿ ಪೂರಾ ತಿರುಗಾಮುರುಗಾ ಆಗಿತ್ತು. 1944ರಲ್ಲಿ ಭಾರಿ ಉದ್ದಿಮೆಗಳ ರಾಷ್ಟ್ರೀಕರಣ, ಸಾಮಾಜಿಕ

ಪ್ರಧಾನ ಕಾರ್ಯಾಲಯಃ ಉಡುಪಿ. ಸ್ಥಾಪನೆಃ ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್
ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಆಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್)
ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI. (SOUTH INDIA) ESTD: 1935.

ಸೋ ಮಿಲ್

ಉತ್ಕೃಷ್ಟ ತರದ ಇಂಗ್ಲಿಷ "ಸೋ ಬೆಂಚ್" 24 ಇಂಚು ಹಾಗೂ 30 ಇಂಚು ಗೋಲ ಗರಗಸ ಉಳ್ಳವು. ಅತಿ ಯೋಗ್ಯ ಬೆಲೆ. ಮಾಹಿತಿ ಬಗ್ಗೆ ಇಂದೇ ಬರೆಯಿರಿ.

The Vijay Engineering Co. Ltd.
Mazagaon, Bombay 10.

ಪ್ರಜಾರಾಜ್ಯದ ದಿನಾಚರಣೆಯು ದೇಶದಲ್ಲೆಲ್ಲ ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಪ್ರಜಾರಾಜ್ಯದ ದಿನಾಚರಣೆಯು ಕೆಲವೆಡೆ ಸಾಂಪ್ರದಾಯಿಕವಾಗಿಯೂ, ಇನ್ನು ಕೆಲವೆಡೆ ವಿಧಾಯಕವಾಗಿಯೂ, ಮನರಂಜಕವಾಗಿಯೂ ನಡೆಯಿತು. ಇಂತಹ ಆಚರಣೆಗಳಿಂದ ಜನ ಜಾಗ್ರತಿಯಾಗಲೀ, ದೇಶವಾತ್ಸಲ್ಯ ಹೆಚ್ಚುವುದೆಂದಾಗಲೀ ನಾವಿಂದು ಭಾವಿಸುವುದಿಲ್ಲ. ಏಕೆಂದರೆ ನಿಜವಾದ ಪ್ರಜಾರಾಜ್ಯದ ಯಥಾರ್ಥ ಅನುಭವವನ್ನು ಯಾರೂ ಮಾಡಿಕೊಡಬೇಕಿಲ್ಲ.ಊರು ದೇವಳ್ಳಾನದ ಉತ್ಸವದಂತೆ ಮಾಮೂಲಿನಂತೆ ಬಂದು ಮರೆಯುವ ಸಪ್ತಾಹಗಳನ್ನು ಹೆಜ್ಜಾಜಿಗಾ ನಾವಿಂದು ಕಾಣುತ್ತಲಿದ್ದೇವೆ. ಹಿಂದಿನ ಸಿಹ್ಯೆಯಾಗಲೀ,ಕುತೂಹಲವಾಗಲೀ, ಜನರಲ್ಲಿ ಕಾಣುತ್ತಿಲ್ಲ. ಜನರ ತಾತ್ಸಾರಕ್ಕೆ ಉತ್ಸವದಲ್ಲಿ ವಿಧಾಯಕ ಕಾರ್ಯಕ್ರಮಗಳ ಬದಲಾಗಿ ಕೆಲವು ಮಕ್ಕಳ ಸಾಮಾನ್ಯ ಮನರಂಜನೆಯು ಆಕ್ರಮಣ ಹೊಂದಿರುವುದು ಕಾರಣವಾಗಿರಬಹುದೆ? ಆದರೂ ನಾವು ದೂರದೃಷ್ಟಿಯುಳ್ಳವರು. ನಾವು ನೋಡಬೇಕಾದುದು ದೇಶದ ಹೊರೆಯನ್ನು ಹೊತ್ತ ನಮ್ಮ ನೆಚ್ಚಿನ ನಾಯಕರ ವಾಣಿಯನ್ನು!

ಪ್ರಜಾರಾಜ್ಯದ ಏಮಿತ್ತ ರಾಷ್ಟ್ರಧ್ಯಕ್ಷ ರಾಜೇಂದ್ರ ಪ್ರಸಾದರು ಕೊಟ್ಟ ಸಂದೇಶದಲ್ಲಿ: "ಪ್ರಜಾ ರಾಜ್ಯದ ಪ್ರಥಮ ವರ್ಧಂತಿ ದಿನವಾದ ಇಂದಿನ ಶುಭ ಪ್ರಸಂಗದಲ್ಲಿ ನಾನು ಭಾರತದ ಕೆಲಸಗಾರರನ್ನು ಮತ್ತು ಕಿಸಾನರನ್ನು, ನಾಗರಿಕರನ್ನು ಮತ್ತು ಸೈನಿಕರನ್ನು, ಬುದ್ಧಿಜೀವಿಗಳನ್ನು ಹಾಗೂ ಉದ್ದಿಮೆದಾರ ಮೊದಲಾದವರನ್ನು ಅಭಿನಂದಿಸಬಯಸುತ್ತೇನೆ. ಮತ್ತು ನಮ್ಮ ಪ್ರಜಾ ರಾಜ್ಯವು ನ್ಯಾಯ, ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತನದ ನಾಡಾಗುವಂತೆ ಪ್ರಯತ್ನಿಸುವುದಾಗಿ ಕಳೆದ ವರುಷ ಸ್ವೀಕರಿಸಿದ ಪ್ರತಿಜ್ಞೆಯನ್ನು ಈಗ ಮತ್ತೆ ನೃಢೀಕರಿಸಿ ಪುನಃ ಕಂಕಣಬದ್ಧರಾಗಬೇಕೆಂದು ನಾನು ಅವರೆಲ್ಲರಿಗೂ ಬಿನ್ನವಿಸುತ್ತೇನೆ ನಮ್ಮ ರಾಷ್ಟ್ರೀಯ ಜೀವನದ ವಿವಿಧ ಕ್ಷೇತ್ರಗಳಲ್ಲಿ, ವಿಶೇಷತಃ

ಸುಧಾರಣೆ, 'ಫ್ಯಾಸಿಸ್ಟ್'ದ ಶಿಕ್ಷೆಯಲ್ಲಿ ಬರುವ ಪ್ರತಿಯೊಂದರ ವಿರೋಧಿ ಮಂಕಾದ ಎಡಪಕ್ಷದ ಪ್ರತಿವಾದಿ, ಈಗ ಮಾತ್ರ ಕಮ್ಯೂನಿಸಂ ವಿರೋಧಿ, ಪಾರ್ಲಿಮೆಂಟರಿ ಸರಕಾರದ ಕಟು ವಿಮರ್ಶಕ, ನಿರಂಕುಶಾಧಿಕಾರಿತೆಯ ಪುರಸ್ಕರ್ತ— ಹೀಗೆ ಒಟ್ಟಾರೆ ಬಲಪಕ್ಷದ ಸಮರ್ಥನಾದ. ಯುದ್ಧದ ಸಮಯ ವೀರಾವೀರನೆಂದೂ, ಕರ್ತೃತ್ವಶಾಲಿ ಎಂದೂ, ದೇಶಭಕ್ತಿಯ ಪ್ರತೀಕನೆಂದೂ ಕರೆದ ಫೈಜ್ ಜನರೇ ಈಗ ಇವನು ಇನ್ನೊಬ್ಬ ಸರ್ವಾಧಿಕಾರಿ ಎನ್ನುವ ಹಾಗಾಗಿದೆ. ಭಾವೀ ಚರಿತ್ರೆಯೆಲ್ಲಾತೂ ಈ ಮಹಾನುಭಾವನ ಭಾಸ್ಯ ಪರೀಕ್ಷೆಯಾಗುವುದು ನಿಶ್ಚಯ. ಆಗ ಜನರಲ್ ಚಾರ್ಲ್ಸ್ ಡಿಗಾಲೆ ಬಾರಿಬಾರಿಗೂ ಹೇಳುವ ಫೆನಸ್ತ್ರೆ ಮತ್ತು ಸುವ್ಯವಸ್ಥೆಯ ಫ್ರಾನ್ಸ್ ರಾಜ್ಯದ ಸ್ಥಾಪನಾನಾಟಕರವೇರುವುದೋ ನೋಡಬೇಕು.

—ಕಾರ್ತಿಕೇಯ

ಪ್ರಜಾರಾಜ್ಯದಿನ
ರಾಷ್ಟ್ರಾಧ್ಯಕ್ಷರ ಸಂದೇಶ.

ಆರ್ಥಿಕ ರಂಗದಲ್ಲಿ ನಾವು ಒಟ್ಟಾಗಿ ವಿಧಾಯಕ ರೀತಿಯಿಂದ ಅವಿಶ್ರಾಂತ ಪರಿಶ್ರಮ ಮಾಡಿದರೆ ನಮ್ಮ ಧ್ಯೇಯ ಸಾಧಿಸಬಲ್ಲೆವು. ಅಂತರರಾಷ್ಟ್ರೀಯ ಶಾಂತಿಗಾಗಿ ನಾವ್ ಒದ್ದಕಂಕಣರಾದ್ದೇವೆಂದೂ ಅದಕ್ಕಾಗಿ ಶ್ರಮಿಸುವೆವೆಂದೂ ಹೇಳಬಯಸುತ್ತೇನೆ. ಅಂತರರಾಷ್ಟ್ರೀಯ ಶಾಂತಿ ಇದ್ದರೆ ಇತರ ನಾಗರಿಕರಂತೆ ನನ್ನ ನಾಡಿಗರೂ ಮಾನವನ ವಿಕಾಸಕ್ಕೆ ಶತ್ರುಗಳಾದ ಬಡತನ ಮತ್ತು ಅಜ್ಞಾನಗಳ ನಿವಾರಣೆಯ ಹೋರಾಟದಲ್ಲಿ ತೊಡಗುವರು. ಈ ಮಾರ್ಗದಲ್ಲಿ ಹೆಚ್ಚಿ ಇಟ್ಟು ನಮ್ಮ ಧ್ಯೇಯ ಸಾಧಿಸುವಂತೆ ಪರಮಾತ್ಮನು ನಮಗೆ ಬುದ್ಧಿ ಮತ್ತು ಸಾಮರ್ಥ್ಯವನ್ನನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

"ಸ್ವತಂತ್ರ ರಾಷ್ಟ್ರವೆಂದು ನಮ್ಮ ಕಾರ್ಯವು ಈಗ ಪ್ರಾರಂಭವಾಗಿದೆ. ನಾವು ಒಳ ಮತ್ತು ಹೊರಗಿನ ಅನೇಕ ತೊಂದರೆಗಳನ್ನೂ—ಸಮಸ್ಯೆಗಳನ್ನೆದುರಿಸಬೇಕಾಗಿದೆ ನಾವು ಟೊಂಕ ಕಟ್ಟಿ ಅವನ್ನೆದುರಿಸಲು ಸನ್ನದ್ಧರಾಗಬೇಕು. ತಮಗೆ ತಾವೇ ಸಹಾಯ ಮಾಡಿಕೊಳ್ಳುವವರಿಗೆ ದೇವರು ಸಹಾಯ ಮಾಡುವನು. ನಾವು ದೇವರ ಸಹಾಯ ಪಡೆಯಲು ತಕ್ಕವರಾಗೋಣ.

ಲಂಡನ್ನಿನಲ್ಲಿ ಕಾಶ್ಮೀರ ಬಗ್ಗೆ ನಡೆದ ಮಾತುಕತೆಗಳು ಯಶಸ್ವಿಯಾಗಲಿಲ್ಲ. ಕಾಶ್ಮೀರಿಗರು ಇಷ್ಟಬಂದಂತೆ ನಿರ್ಣಯಿಸಿಕೊಳ್ಳಬೇಕೆಂಬುದಕ್ಕೆ ನಾವು ಯಾವಾಗಲೂ ಸಿದ್ಧರಿದ್ದೇವೆ. ಆದರೆ ಈ ನಿರ್ಣಯವಾಗುವ ವರೆಗೆ ಅವರ ಬಗ್ಗೆ ಹೊತ್ತ ಶಾಸನಿಕ ನೈತಿಕ ಹೊಣೆಯನ್ನು ನಾವೆಂದಿಗೂ ಬಿಟ್ಟುಕೊಡಲಾರೆವು

ನಮ್ಮ ಪ್ರಧಾನ ಮಂತ್ರಿ ಶ್ರೀ ನೆಹರೂರವರು ಜಗತ್ತಿನಲ್ಲಿಯ ಬಿಕ್ಕಟ್ಟಿನ ಸ್ವರೂಪವನ್ನು ಮರ್ಯಾದಿತಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಕಳೆದ ಮಹಾಯುದ್ಧದಲ್ಲಿ ಗೆದ್ದ ರಾಷ್ಟ್ರಗಳಲ್ಲಿಯೇ ಯುದ್ಧದಿಂದುಂಟಾದ ದುಷ್ಪರಿಣಾಮಗಳನ್ನೂ ಮಾಯವಾಗಿರುವದಿಲ್ಲ. ಅಂದಮೇಲೆ ಆ ಯುದ್ಧದಲ್ಲಿ ಸೋತ ರಾಷ್ಟ್ರಗಳ ಪಾಡೇನಾಗಬೇಕು ಮಾನವತೆಯು ಮತ್ತೊಂದು ಈಬಗೆಯ ವಿನಾಶಕ ಕೃತಿಯಾಗದಂತೆ ಶಪಿಯ ವದೆಂದು ನಾವು ಆಶಿಸೋಣ, ದೇಶವು ಪೊಡ್ಡಿದ್ದಪ್ಪವತ್ತು ಬಲಿಷ್ಟವಿದ್ದಷ್ಟು ಅದರ ಮೇಲೆ ಈ ಗಂಡಾಂತರ ಶಡೆಯುವ ಹೊಣೆ ದೆಚ್ಚಿಚ್ಚಾಗಿ ಬೀಳುವದು.

ದೇಶದಲ್ಲಿ ಆಹಾರ ಕೊರತೆಯಿದೆ. ಜನರ ದೃಷ್ಟಿನಿರ್ಧಾರ ಉಲ್ಲಾಸವೃತ್ತಿ ಇವುಗಳಿಂದಲೇ ನಾವು ಈ ಸಮಸ್ಯೆಯನ್ನು ಬಗೆಹರಿಸುವ ವಿಶ್ವಾಸವಿದೆ.

ಸರದಾರ ಪಟೇಲರು ಈ ಬಿಕ್ಕಟ್ಟಿನ ಸಮಯದಲ್ಲಿ ಕಣ್ಮರೆಯಾದುದರಿಂದ ವಿಶೇಷ ಆಘಾತವುಂಟಾಗಿದೆ. ತುಂಬಿಬಾರದ ಹಾನಿ ನಮಗೆ ಸಂಭವಿಸಿದೆ.

NOTICE

ಕಾಸರಗೋಡು ಡಿ. ವ. ಕೋರ್ಟಿನಲ್ಲಿ ಸ್ಮಾಲ್ ನಂಬ್ರ 231/50 ಚೇರಂಗ್ವ ಕುಂಞಾಂಮ್ಮು ಕಾಜಿ. —ವಾದಿ. ತ್ಯಾಂಪಣ್ಣ ಶೆಟ್ಟಿ, ಮಾನಸ್ಕಿ ಪೆಂಗ್ಯಿಸ ಮಗ, ವ ಪಂಜದ ಕಂಞಾಂಣ ಆಳ್ವರ ಆಳಿಯ, ಕಾಸರಗೋಡು ತಾಲೂಕು ಶಿರ್ವಸಾಗಿಕ್ಷಿತ ಗ್ರಾಮದ ಪೂರೆ ಹಿಕ್ಕಲ್ಲಿ ಇರುವವನಾ. —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಯು ನಾದಿಗೆ ತಾರೀಕು 27-10-1947ರಲ್ಲು ಬರೆಕೊಟ್ಟ ಡಿಮಾಂಡು ನೋಟಿನ ಆಸ್ಲು ಬಡ್ಡಿ ಹಣಗಳನ್ನು ಒಟ್ಟಾವಾಡಿಕೊಳ್ಳುವ ಉದ್ದಿಶ್ಯ ಅತನು ದಾಕ್ಲು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ 9-2-1951ರಲ್ಲು ಕನ್ನಿ ಬಗ್ಗೆ ನಿಶ್ಚಯಿಸಿರುವದರಿ ದ ಸದ್ರಿ ವ್ಯಾಜ್ಯಿಗೆ ಪ್ರತಿವಾದಿಯು ಹಾಜ್ರು ಆಗುವರೆ ತಪ್ಪಿದ್ದಲ್ಲಿ ಆತನ ಗೈರು ಹಾಜ್ರಿಯಲ್ಲಿ-ಸದ್ರಿ ವ್ಯಾಜ್ಯವು ವಾದಿ ಗುಣಕ್ಕೆ ತೀರ್ಮಾನಿಸೋಣಾದೀತು

Abdulkhader,
Advocate for Plff.

ಕಾಸರಗೋಡು, ತಾ 27-1-51

For Life Assurance

CONSULT

THE NEW GUARDIAN OF INDIA
LIFE ASSURANCE CO LTD,
(Established 1934)

Chairman Sri M C T M Chidambaram Chettiyar

A Policy in this progressive Life Office is a investment, its Agency is a valuable business connection.

MANGALORE BRANCH
K. S. R. Road,
Hampankatta, MANGALORE.

HEAD OFFICE
United India Life Building,
MADRAS 142

ಹೊಸದೊಂದು ತಯಾರಿಕೆಯ ಪ್ರಕಟನೆ

ಎಸ್ಟ್ರೇಲ

ರಿಜಿಸ್ಟರ್ಡ್ ಟ್ರೇಡ್ ಮಾರ್ಕ

ESTRELA

ಹಿ-ಪವರ್

ಮೆಂಟಲ್

ಚಲೋ ಲೈಟ್‌ಶಿಲ್ಪಿನಿಂದ ದಬ್ಬಲ್ ನೂಲು ಗಳಿಂದ ಒಂತ್ರಮೂಲಕ ಹೆಣೆಯಲ್ಪಟ್ಟಿದ್ದು

ಎಸ್ಟ್ರೇಲಾ ಬೆಟರೀಸ್ ಲಿಮಿಟೆಡ್,
ಪ್ಲಾಟ್ ನಂಬ್ರ ೧, ಧಾರಾವಿ ರೋಡ್, ಬೊಂಬಾಯಿ ೧೯.

ಶಾಖೆಗಳು:—ಕಲ್ಕತ್ತ, ಕಾನಪುರ, ದೆಲ್ಲಿ, ನಾಗಪುರ, ಮದ್ರಾಸ್

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ
ಇಂಗ್ಲಿಷ್
English Made Easy
ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯವಶ್ಯವುಳ್ಳವಾದುದು.
ಬೆಲೆ ರೂ. 1-8-0.
ವಿ ಪಿ ಪ್ಲಾನ್ ರೂ. 1-14-0

ಪ್ರತಿಗಳು ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ,
ಉಡುಪಿ

ಜಗತ್ತಿನ ರಾಜಕೀಯ

ಪ್ರಜಾರಾಜ್ಯಸ ಒಂದು ವರ್ಷದಲ್ಲಿ ಆಗಿ ಹೋದ ದಿನಗಳನ್ನೂ ಘಟನೆಗಳನ್ನೂ ಸುಖದುಃಖಗಳನ್ನೂ ತಕ್ಕಡಿಯಲ್ಲಿ ತೂಗಿ ನೋಡಿದರೆ ಏನೂ ಸುಖವಿಲ್ಲವೆಂಬಂತೆ ಕಾಣುತ್ತದೆ. ಮುಂದಿನ ದಿನಗಳನ್ನು ನೀರೀಕ್ಷಿಸಿದರೂ ಭರವಸೆಯ ಆಶಾಕಿರಣವೇನೂ ತೋರುವುದಿಲ್ಲ. ದಿನದಿಂದ ದಿನ ಬದಲಾಗುವ ರಾಜಕೀಯ ಘರ್ಷಣೆ ಯುದ್ಧಕಾರ್ಮೋಡಗಳು ಜಗತ್ತನ್ನೆಲ್ಲ ಅಚ್ಛಾದಿಸಿರುವ ಲಕ್ಷಣ ಕಂಡುಬರುತ್ತಲಿದೆ. ಕಳೆದ ದ್ವಿತೀಯ ಮಹಾಯುದ್ಧದಿಂದ ಲೋಕದ ಬುದ್ಧಿಶಾಲೀ ರಾಜಕೀಯ ಧುರೀಣರು ಶಾಂತಿ ಸಾಧನೆಗಾಗಿ ಹುಡುಕಾಡಿದ ಹಲವಾರು ಶೋಧಗಳು ನಿಷ್ಫಲವಾದವು. ಅವ್ಯಕ್ತ ಮಂಥನ ಕಾಲದಲ್ಲಿ ಹಾಲಾಹಲ ಬಂತಂತೆ! ಹಾಗೆಯೆ ಶಾಂತಿಯನ್ನು ಬೋಧಿಸುವ ಹೊಗೂ ಶೋಧಿಸುವ ರಾಷ್ಟ್ರಗಳಿಂದು ಅಶಾಂತಿಯನ್ನೇ ನಿರ್ಮಿಸುತ್ತಲಿವೆ. ಜೊತೆಗೆ ಜಗತ್ತನ್ನೇ ನುಂಗಬಲ್ಲ ಆಟಂ ಬಾಂಬನ್ನೇ ಯಥೇಚ್ಛವಾಗಿ ಒಂದು ಕಡೆ ತಯಾರಿಸುತ್ತಲಿವೆ. ಶಾಂತಿ ಸಾಧ್ಯ ಸಿದ್ಧಕ್ಕಿಂತ ಸಿದ್ಧಿಸಿಕೊಂಡದ್ದು ಇದುವೇ ಹೆಚ್ಚಾಗಿದೆ. ಅಂತಲೇ ಎರಡನೆಯ ಯುದ್ಧ ತೀರಿದ ಈ ನಾಲ್ಕೈದು ವರ್ಷಗಳಲ್ಲಿ ಯುದ್ಧದ ಕಿಡಿ ಆರಲೇ ಇಲ್ಲ. ಯು.ಎನ್.ಓ. ದಂತಹ ಸಂಘವನ್ನು ಸ್ಥಾಪಿಸಿಕೊಂಡು ಶಾಂತಿ, ಸೌಹಾರ್ದ, ಮಿತ್ರತ್ವ, ಸಮಾನತೆ ಎಂದು ಜಪಿಸಿದವರು ತೃತೀಯ ಮಹಾಯುದ್ಧಕ್ಕೆ ಧುರವೀಳ್ಯ ತೊಟ್ಟಿದ್ದಾರೆ. ಮೂರನೆಯ ಮಹಾಯುದ್ಧ ಆದರೆ "ಮಾನವ ಕೋಟಿಯ ನಿರ್ಮೂಲ ನಾಶ ಆಟಂ ಬಾಂಬಿನಿಂದಾಗಬಹುದು" ಎಂದು ಜಗತ್ತು ಅರಿತಿದೆ. ಆದರೆ ವಿಚಾರವಂತರೂ ಪ್ರಗತಿಶೀಲರೂ ಮಹಾ ಪ್ರಳಯಕಾರೀ ಯುದ್ಧದ ಭೀಕರ ಸ್ಥಿತಿಯನ್ನು ಎದುರಿಸಲು ಅಸಮರ್ಥರಾದರು. ಯಾವ ನಿಷೇಧವೂ, ಯಾವ ಮುತ್ಸದ್ದಿತನವೂ ದೇಶದ ಕಲ್ಯಾಣಕ್ಕಾಗಿ ಪ್ರಯೋಗವಾಗಲಿಲ್ಲ. ಬದಲಾಗಿ ವಿನಾಶಕ್ಕಾಗಿಯೇ ಆಯ್ತು. ನಾಗರಿಕವಾದ ಇಪ್ಪತ್ತನೆಯ ಶತಮಾನದಲ್ಲೂ ಮಾನವ್ಯತೆಯಲ್ಲಿ ಅಗಬೇಕಾದ ಪ್ರಗತಿಯನ್ನಾಗಲೀ ನಾಗರಿಕತೆಯನ್ನಾಗಲೀ, ನಾವು ಪಡೆದಂತಿಲ್ಲ. ಪ್ರಜಾಸ್ವಭುತ್ವವನ್ನು ಬಯಸಿದವರು ಇತರ ರಾಷ್ಟ್ರಗಳನ್ನು ಆಕ್ರಮಣ ಮಾಡಿ ನಿರಂಕುಶ ಪ್ರಭುತ್ವವನ್ನು ಬಯಸುತ್ತಾರೆ. "ಮಾನವರು ದೇವರ ಮಕ್ಕಳು" ಎಂದು ಶಪಥವಾಡಿದವರು ಬಣ್ಣದ ಭ್ರಾಂತಿಯಿಂದ ಜಾತಿಭೇದದಿಂದ ವೈಲುಕಿಳಿಂಬ ಭಾವನೆಯಿಂದ ಒಟ್ಟುಕೂಡಿ "ಸೌಹಾರ್ದ ಪ್ರೀತಿ" ಎನ್ನುತ್ತಾರೆ. ಅಂತೂ ಸ್ವಾರ್ಥ, ಸ್ವಪ್ರತಿಷ್ಠೆ, ಸಂಕುಚಿತ ಮನೋವೃತ್ತಿ ಅಂದು ಹೇಗಿದ್ದವೋ ಇಂದೂ ಹಾಗೆಯೇ ಇನೆ. ಮನುಷ್ಯನಾಗಿ ಇಂದು ಜಗತ್ತಿನ ಪ್ರಬಲ ರಾಷ್ಟ್ರ ಬಯಸಿತ್ತಿರುವುದು ಒಬ್ಬನನ್ನು ತಳಿದು ಆಳುತ್ತಿರುವುದನ್ನು; ಹೊರತು ತಿಳಿದು ಆಳುತ್ತಿರುವುದನ್ನಲ್ಲ" ಈ ಬಗೆಯ ಮನೋವೃತ್ತಿ ಬದಲಾಗದೆ ಕಲುಷಿತ ವಾತಾವರಣ ತಿಳಿಯಾಗುವುದಾದರೂ ಹೇಗೆ? ನೆಹ್ರೂ ಹೇಳಿದಂತೆ ಶಾಂತಿಯನ್ನು ಬಯಸುವೆವೋ ಅದಕ್ಕೆ ಬೇಕಾದುದನ್ನೇ ಆಡಬೇಕು. ಕಂಕುಳಲ್ಲಿ ದೊಣ್ಣೆ ಬಾಯಲ್ಲಿ ಶರಣಾರ್ಥಿಗಳೇಳುವುದು ಶಾಂತಿ ಮಂತ್ರ. ಮಾಡುವುದು ಕ್ರಾಂತಿಯ ತಂತ್ರ. ಈ ಬಗೆಯ ರಾಜಕೀಯ ನೀತಿಯಿಂದ ಲೋಕದಲ್ಲಿ ಯುದ್ಧದ ದಾಹವಡಗದು. ಲೋಕ ಕಲ್ಯಾಣವಾಗದು; ಮಾನವ್ಯತೆ ಉಳಿಯದು!

ಜಾಗತಿಕ ರಾಜಕೀಯ ಧೋರಣೆಯೇ ಬುಡ ಮೇಲಾಗುವ ಪರಿಸ್ಥಿತಿ ಬಂದಿರುವಾಗ, ನೈತಿಕ ವಟ್ಟ ಲಧಃಪತನಕ್ಕೆಳೆಯುತ್ತಿರುವಾಗ, ಕಾಯಿದೆ ಕಾನೂನುಗಳು ಮಣ್ಣುಮುಕ್ಕುತ್ತಿರುವಾಗ, ಭಾರತ ದೇಶದ ಅಂತರಂಗ ರಾಜಕೀಯ ಧೋರಣೆಯ ಉರಿತು ಮಹತ್ವಾಗಿ ಹೇಳುವದೇನಿದೆ? ದೀರ್ಘ ಕಾಲದ ಆಡಳಿತಾನುಭವದಿಂದ ಪರಿಪೂರ್ಣವಾದ ಪ್ರಬಲ ರಾಷ್ಟ್ರಗಳು ಸಾಧಿಸಿದ ಪ್ರಗತಿಯಷ್ಟೂ, ಭಾರತ ಕೇವಲ ಒಂದು ವರ್ಷದಲ್ಲಿ ತಾನು ಸಾಧಿಸಿದ ಕಾರ್ಯವನ್ನೂ ಒಂದೇ ಮಾನದಿಂದ ಅಳೆಯುಬಹುದಾದರೂ ನಾವಿಂದು ನಮ್ಮ ಸರಕಾರದ ಧೃಷ್ಟತೆಯ ಬಗ್ಗೆ ಹೆಮ್ಮೆಪಡಬೇಕು. ಬೇಳು ಸ್ವಾತಂತ್ರ್ಯ ಗಳಿಸಿದ ಯಾವುದೇ ರಾಷ್ಟ್ರದ ಜಾಂತ್ರಿಕ ಹಿನ್ನೆಲೆಯ ನ್ನು ನೋಡಿದರೂ ಪ್ರಧಾನವಾಗಿ ನೆಗ್ಗುಡಿಯಿದ್ದುದು ಕಂಗುಬರ ಬುದಿಲ್ಲ. ಹೊಸ ರಾಜ್ಯಶೈಲಿಯನ್ನೆ ನೂತನ ಕಾಯಿದೆಗಳಿಂದ ಹಲವಾರು ಸಮಸ್ಯೆಗಳನ್ನು ಸರಕಾರ ಎದುರಿಸಬೇಕಾಗುವುದು.

ನಮ್ಮ ಆಪತ್ತುಗಳು

ಕಾಶ್ಮೀರದ ತಂಟೆ, ನಿರಾಶ್ರಿತರ ಪರಿಹಾರ, ಅಸ್ಸಾಮ ಭೂಕಂಪ, ಅಪರಿಮಿತ ಬಿಕ್ಕಟ್ಟು, ಇವು ಪ್ರಮುಖ ಭಾರತೀಯ ಸಮಸ್ಯೆಗಳು. ಜೀವನದ ಬಹುಭಾಗವನ್ನು ಜೈಲಿನಲ್ಲಿಗೆ ಸ್ವಾತಂತ್ರ್ಯಕ್ಕಾಗಿ ಕಳೆದ ನಮ್ಮ ಧುರೀಣರಿಂದು ನಿಜವಾಗಿಯೂ ಮುಳ್ಳಿನ ಮಂಚದ ಮೇಲಿದ್ದಾರೆ. ಆದರ್ಶ ನೀತಿ ಹೇಳುವುದು ಸುಲಭ; ಕಾರ್ಯತಃ ಮಾಡಿ ತೋರಿಸುವದು ಕಷ್ಟವಿದೆ; ಇಲ್ಲವೆ ನಮ್ಮ ಭಾವನೆಯನ್ನು ತಂದರೂ ಕಾಶ್ಮೀರೀ ತಂಟೆ ಬಗೆಹರಿಯದೆ ಅದರ ಸ್ಥಿರತೆಯು ಕುರಿತು ನಾವೇನೂ ಊಹಿಸುವಂತಿಲ್ಲ. ಮೊದಲಿನಿಂದಲೂ ಉಭಯತರಿಂದಲೂ ತೀರ್ಮಾನಿಸಿಕೊಳ್ಳಲಿಕ್ಕೆ ಬರದ ಈ ಸಮಸ್ಯೆ ಇನ್ನೂ ಹಾಗೆಯೆ ಇದೆ.

ಅನಿರೀಕ್ಷಿತ ಘಟನೆಗಳು

ಇಂತಹ ಕಠಿಣ ಸಮಯದಲ್ಲೂ ಭಾರತವು ಅನಿರೀಕ್ಷಿತವಾದ ಹಲವು ಸಮಸ್ಯೆಯನ್ನೆದುರಿಸುವ ದುರ್ಧರ ಪ್ರಸಂಗಗಳು ಬಂದವು. ಪೂರ್ವ ಬಂಗಾಳದಲ್ಲಾದ ಹಿಂದೂ ಮುಸ್ಲಿಂ ದಂಗೆಯು ಪರಿಣಾಮವಾಗಿ ಲಕ್ಷಗಟ್ಟಲೆ ಹಿಂದುಗಳು ನಿರಾಶ್ರಿತರಾಗಿ ಭಾರತಕ್ಕೆ ಬಂದರು. ಅವರಿಗೆ ಜೀವನ ಆಶ್ರಯ-ವಸತಿ ಕಲ್ಪಿಸಿಯುವುದೂ ಸಂರಕ್ಷಣೆಕೊಡುವುದೂ ಸುಲಭದ ಕೆಲಸವೇನೂ ಅಲ್ಲ ಈ ಸಂದರ್ಭ ಸಾಧಿಸಿಯೇ ಇಲ್ಲವೆಂದೂ ಅವನ್ನು ಪ್ರಶ್ನೋದಿಸಿ ಸರಕಾರದ ವಿರುದ್ಧ ಭಿನ್ನಾಭಿಪ್ರಾಯವನ್ನು ತಾಳುವಂತೆ ಮಾಡಿದರು. ಆಗಲೂ ಸರಕಾರ ಸ್ಥೈರ್ಯದಿಂದ ಪರಿಸ್ಥಿತಿಯನ್ನು ನಿವಾರಿಸಿತು. ಈ ನಡುವೆ ಕಮ್ಯೂನಿಸ್ಟರು ಅಂತರ್ಗತವಾಗಿ ಕೆಲಸಗಳ ಮೂಲಕ ಸರಕಾರಕ್ಕೆ ಧಕ್ಕೆ ತರುವ ಯತ್ನ ಮಾಡಿದರು. ರೈಲನ್ನು ಉರುಳಿಸಿ ನಿರಪರಾಧಿ ಜನರ ಜೀವಾಪಹರಣ ಮಾಡುವುದರ ಮೂಲಕ ಅವರ ಉಪಟಳ ಜರಗಿತು. ಬಳಿಕದ ಉತ್ತರ ಅಸ್ಸಾಮಿನ ಭೂಕಂಪ ಕೋಟಿಗಟ್ಟಲೆಯ ಹಾನಿಯನ್ನು ತಂದಿತು. ಅಲ್ಲಿಯ ನಿರ್ಗತಿಕರನ್ನು ಸಂರಕ್ಷಿಸುವ ನೂತನ ಜವಾಬ್ದಾರಿಯೆಂದು ಬಂತು. ಭೂಮಿಯು ಪ್ರಕೋಪದಿಂದುಂಟಾದ ಮಹಾ ಹಾನಿಯನ್ನು ತುಂಬಿಕೊಳ್ಳುವವರ ಮೂಲಕ ಅಹಾರದ ಅಭಾವದ ಬಿಕ್ಕಟ್ಟನ್ನೂ ಅದಿನಿಸುವಷ್ಟು ಕಾರ್ಯರೂಪದಲ್ಲಿ ಶೀಘ್ರವಾಗಿ ತರಲು ಸಾಧ್ಯವಿಲ್ಲ.

ಪಾಕಿಸ್ತಾನ ಹಿಂದೂಸ್ತಾನವೆಂದು ದೇಶ ವಿಭಜನೆಯಾದಾಗಲೇ ಸೋದರ ಹತ್ಯಾಕಾಂಡವಾಯಿತು. ಬಳಿಕ ಈ ನರಿಗೂ ಪಾಕಿಸ್ತಾನ ಹಿಂದೂಸ್ತಾನ ಮೈತ್ರಿಗೆ ಕಂಟಕವಾಗಿಯೂ, ರಾಜಕೀಯ ಬಿಕ್ಕಟ್ಟಾಗಿಯೂ ಉಳಿದಿರುವ ಅಂಶವೆಂದರೆ ಕಾಶ್ಮೀರದ ಪ್ರಶ್ನೆ. ಕಾಶ್ಮೀರ ತಂಟೆಯನ್ನು ಬಗೆಹರಿಸುವಲ್ಲಿ ಯು. ಎನ್. ಪೊ ಆಗಲೀ, ಸಂ. ಡಿಸ್ಟ್ಯೂರಾಗಲೀ, ಕಾಮನ್‌ವೆಲ್ತ್ ಮಂತ್ರಿಗಳ ಪರಿಷತ್ತಾಗಲೀ ಫಲಕಾರಿಯಾಗದಿದ್ದುದು ನಿಜವಾಗಿಯೂ ದೈವವೆಂದೇ ಹೇಳಬೇಕು.

ಕಾಶ್ಮೀರದ ವಿಚಾರದಲ್ಲಿ ಭಾರತ ಸರಕಾರ ತಳೆದ ಧೋರಣೆಗೆ ವಿಶ್ವ ಅಭಿಪ್ರಾಯಗಳು ಬಂದರೂ ಭಾರತ ಸರಕಾರ ಕಾಶ್ಮೀರೀ ಜನತೆಯ ಸಾಲಿಗೆಯೆ ಅದನ್ನು ಬಿಟ್ಟು ಉಳಿದವರ ನಿರಾಧಾರವಾದ ಕ್ಕೆ ಒಪ್ಪದಿದ್ದದ್ದು ಗಮನಾರ್ಹವಾದ ಅಂಶ. ಪಾಕಿಸ್ತಾನದೊಳಗೂ ಜನ ಜೀವನ ಸಮುದಾಯ ಶಾಂತಿಗೆ ಅಸಂತೃಪ್ತಿ ಅಶಾಂತಿಗಳು ನಾನಾರೂಪ ಅಭಿಪ್ರಾಯ ದ್ವೇಷಕವನ-ವಿಷ್ಕರ ಮಟ್ಟಿನ ಭಾವನೆ ಅಲ್ಲಿಯ ಜನತೆಯಲ್ಲಿ ಮೂಡಿದುದೇ ಲಿಯಾಖತ್ ಅಲಿಖಾನರ ಕಾಶ್ಮೀರೀ ಸಮಸ್ಯೆಯ ತರಾತುರಿಯ ಕಾರ್ಯಭ್ರಾಂತಿಗೆ ಕಾರಣವಾಗಿದೆ. ಅಂತಲೇ ಕಾಮನ್‌ವೆಲ್ತ್ ಮಂತ್ರಿಗಳ ಭೇಟಿಯಲ್ಲಿ ಅದರ ಹಟ ಪ್ರಯೋಗ ಮಾಡಿದರು. ಅದು

ನಾವು ಕಳೆದ—

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ ಬಂಗಾರ ಹಿತ್ತಾಳೆ, ತಂಬು ಮೊದಲಾದವುಗಳ ವಿವಿಧ ಪಾತ್ರೆಗಳನ್ನು ಸಾಮಾನ್ಯವಾಗಿ ರಿಪೇರಿಯಾಗಿಯೂ ದೊರೆಯುತ್ತವೆ.

ಕಲ್ಮಾಡಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಆತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳ...

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿವರ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಆಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K.

ಬಂದ ಪಡೆಯಬೇಕಾಯಿತು. ಇಂದು ಭಾರತ ಸರಕಾರವನ್ನು ಬಿಗಿಲುಗೊಳಿಸಿರುವ ಅನ್ನ ದ್ರಶ್ನೆಗೆ ಇದವೂ ಮುಖ್ಯವೆಂಬುದನ್ನು ನಾವು ಮರೆಯದಿರೋಣ.

ಕಳೆದ ವರ್ಷದಲ್ಲಿ ನಡೆದ ಅತ್ಯಂತ ದುಃಖದಾಯಿ ಘಟನೆಯೆಂದರೆ ಜಂಬಂದ ಘೋಷ್, ಸರ್ದಾರ ಪಟೇಲ್, ಠಕ್ಕರ ಬಾಪಾರಂತಹ ವ್ಯಕ್ತಿಗಳನ್ನು ಕಳೆದು ಬಾಳುವದಕ್ಕೆ ಹಾತೊರೆದು ವುದು ವಿಷಾದದ ಸಂಗತಿ.

ಈಗಿನ ರಾಜಕೀಯ ವಾತಾವರಣವನ್ನ ನೋಡಿಕೊಂಡು ಮೂರನೆಯ ಮಹಾ ಯುದ್ಧವಾಗಬಹುದೆಂದು ರಾಷ್ಟ್ರ ಚಿಂತಿಸುತ್ತಿದೆ ಈ ಭೀತಿಯಿಂದಲೇ ಮುಂದಿನ ಸನ್ನಾಹಗಳು ಸರೋಕ್ಷವಾಗಿಯೂ ಅಪರೋಕ್ಷವಾಗಿಯೂ ನ

ಹಿಂದಿನದಾಯಿತು; ಮುಂದೇನು?

ಹಿಂದಿನದನ್ನು ನೆನಸಿಕೊಂಡು ಮುಂದೇನೆಂದು ಚಿಂತಿಸೋಣ. ಆಗಿ ಹೋದ ದಿನಗಳನ್ನು ನೆನದುಕೊಂಡು ಕಾರ್ಯಪರಾನ್ಮುಖರಾಗುವುದು ಧೀರರ ಲಕ್ಷಣವಲ್ಲ. ಸಾಂಸ್ಕೃತಿಕವಾಗಿಯೂ, ವ್ಯಾಪಾರಿಕವಾಗಿಯೂ, ರಾಜಕೀಯವಾಗಿಯೂ ನಾವು ಸಾಧಿಸಿದ್ದು ಸಾಲದೆನ್ನುವದರ ಜೊತೆಗೆ ಅಶ್ಯಲ್ಪಕಾಲದಲ್ಲಿ ಸಾಧಿಸಿದ್ದನ್ನು ಮರೆಯದಿರೋಣ. "ಸ್ವಾತಂತ್ರ್ಯ ಬಂದರೂ ಜನಜೀವನದಲ್ಲಿ ಸುಧಾರಣೆ ಆಗಲಿಲ್ಲ, ಬಡತನ, ದಾರಿದ್ರ್ಯ ಹಿಂದಿನ ಹಾಗೆಯೆ ಉಳಿದಿದೆ. ಊಣಲು ಅನ್ನವಿಲ್ಲ; ಉಡಲು ಬಟ್ಟೆಯಿಲ್ಲ. ಬ್ರಿಟಿಷರ ಕಾಲದಲ್ಲಿ ಸರಕಾರ ನೋಡಿದ್ದ ಕ್ಕಿಂತ ಪೆಚ್ಚಿನ ಪೊಲೀಸ್ ಆಡಳಿತವನ್ನು ನವ್ಮವರು ರಾಷ್ಟ್ರೀಯ ಭಾವನೆಯನ್ನು ತೋರಿಸದ ದಾಬಲಿಗಳೇ ಜಾಸ್ತಿಯಾಗಿವೆ" ಎನುವ ಆಪವಾದ ಜನತೆಯಿಂದ ಕೇಳುತ್ತಲಿದೆ. ಈ ಮಾತನ್ನು ನಾವು ಸೂರ್ಯ ಚಿಲ್ಲಾರೆಯುವಂತಿಲ್ಲ ಬ್ಲಾಕ್ ಮಾರ್ಕೆಟು, ಲಂಚಗುಳಿತನ, ದೇಶದ್ರೋಹಿಗಳಿಂತ ಇನ್ನೂ ನಡೆಯುತ್ತಲಿದೆ. ಸರಕಾರದ ಯಾವ ಕಾಯಿದೆ ಕಾನೂನುಗಳೂ ಅದನ್ನ ಈ ಒಂದ ವರ್ಷದಲ್ಲಿ ಫಾರ್ಮೂಲ ನಾಶಮಾಡುವಲ್ಲಿ ಉಪಯೋಗಕ್ಕೆ ಬೀಳದೆ ಇದ್ದಾದು ನಿಜವಾಗಿಯೂ ಕೋಚನೀಯ ವಿಚಾರ. ಕಾಂಗ್ರೆಸಿಗರಲ್ಲೇ ಈ ಬಗೆಯ ಸಲಿನೆಯ ಮನೋವೃತ್ತಿ ಮಿತಿಮೀರಿ ಬೆಳೆದು ಕಾಂಗ್ರೆಸ್ಸಿನ ಉಚ್ಚಾದರ್ಶಗಳಿಗೂ ಕಪ್ಪು ಬಣ್ಣ ಬಳಿಯುವಂತಾಗಿದೆ. ಇನ್ನು ವ್ಯಾಪಾರಿಕ ಸರಕಾರಗಳಲ್ಲಿ ಮಂತ್ರಿಗಳ ಮೇಲಿನ ದೂರುಗಳೂ ಆರೋಪಗಳನ್ನು ಆರೋಪಿಸಿದವರ ಮೇಲೆ ಕಾಂಗ್ರೆಸ್ಸಿನ ಹಿರಿಯರು ಹೇರಿದ ತಿಸ್ತ ಭಂಗದ ಕ್ರಮವೂ ಜನತೆಯ ಆವಿಶ್ವಾಸಕ್ಕೆ ಪಾತ್ರವಾಗಿದೆ ಸರಕಾರ ಜನಹಿತಕ್ಕಾಗಿ ಮಾಡಿದ ಕಾಯಿದೆಗಳನ್ನು ಭಂಗಿಸುವದರಲ್ಲಿ ಕಾಂಗ್ರೆಸ್ಸಿಗರೇ ಮುಖ್ಯರಾಗಿದ್ದಾರೆ. ಇದು ಅಲ್ಪಸ್ವಲ್ಪವಂತಹದಲ್ಲ. ಬ್ರಿಟಿಷರ ಆಡಳಿತ ಕಾಲದಲ್ಲಿ ಭಾರತ ದೇಶದಲ್ಲಿನ ಬ್ಲಾಕ್ ಮಾರ್ಕೆಟು, ಲಂಚಗುಳಿತನ, ಸುಲಿಗೆಗಳನ್ನು ಕಂಡು ನೆಹ್ರೂರವರು "ನನಗೆ ಅಧಿಕಾರವಿರುತ್ತಿದ್ದರೆ ಬ್ಲಾಕ್ ಮಾರ್ಕೆಟ್ ಮಾಡಿ ಜನರ ಜೀವನವನ್ನು ಹಾಳುಗೆಡಹುವ ಈ ದೇಶದ್ರೋಹಿಗಳನ್ನು ಗಲ್ಲುಗಂಬಿಸುತ್ತಿದ್ದೆ" ಎಂದಿದ್ದರು. ಅದೇ ಮಾತನ್ನು ಎಂದು ಅಧಿಕಾರಕ್ಕೆ ಬಂದಾಗಲೆಲ್ಲ ಉರುಳಿಗೆ ಬಿಡುವೇ ಸಿಗಲಾರದೋ ಏನೋ! ಈ ಬಗೆಯ ಅಶಿಸ್ತು.. ವಿಘಾತುಕ ಕಾರ್ಯಗಳನ್ನು ಜನತೆಯೇ ಎದ ರಿಸಬೇಕಾಗಿದೆ. ಸರಕಾರ ವಹಿಸುವ ಕಾಯಿದೆಗಳನ್ನು ಟೀಕಿಸುವವರೇ ನಿಯಮವನ್ನು ಪರಿಯಾಗಿ ಪಾಲಿಸುವುದಿಲ್ಲ. ಯಾವುದಕ್ಕೆ ಕೊರತೆಯುಂಟಾಗುವುದೋ ಆಗ ಅದರ ಬೇಡಿಕೆ ಹೆಚ್ಚಾಗುವುದುಉಲೋಕರೂಢಿಯಾಗಿದೆ. ಆ ಸಮಯದಲ್ಲಿ ಎಷ್ಟನ್ನಾದರೂ ಕೊಟ್ಟು ಕೂಡಿ ಹಾಕುವ ಆಸರ ಮನೋವೃತ್ತಿಯವರೇ ಕಳ್ಳ ಸಂತೆಯ ಪ್ರೋತ್ಸಾಹಕರಾಗಿರುತ್ತಾರೆ.ಅಂದರೆ ಸರಕಾರ ಮಾಡಿದ್ದನ್ನು ಜನ ಹೀಗೆ ದುರುಪಯೋಗಗೊಳಿಸುತ್ತಿದೆ. ಅಂಧುವರೇ ಸರಕಾರವನ್ನು ಬಂಡವಾಳಗಾರರ ಕೈಗೊಂಬೆಯೆಂದು ಟೀಕಿಸುವಲ್ಲಿ ಪ್ರಮುಖರಾಗಿದ್ದಾರೆ. ಪ್ರಜೆಗಳು ತಮ್ಮ ಹೊಣೆಗಾರನ್ನು ಎಲ್ಲಿಯು ತನಕ ಅರಿಯುವುದಿಲ್ಲವೋ-ಎಲ್ಲಿಯ ವರೆಗೆ ರಾಷ್ಟ್ರೀಯ ಭಾವನೆಯನ್ನು ತಾಳುವುದಿಲ್ಲವೋ--ಎಲ್ಲಿಯ ವರೆಗೆ ಸ್ವಾತಂತ್ರ್ಯದ ಯಥಾರ್ಥವನ್ನರಿತುಕೊಂಡು ತ್ಯಾಗ, ಸಹನೆಗಳಿಂದ ದೇಶಸೇವೆಯಲ್ಲಿ ನಿರತರಾಗುವುದಿಲ್ಲವೋ—ಎಲ್ಲದಕ್ಕೂ ಸರಕಾರವನ್ನೇ ನಂಬಿ ಕರ್ತವ್ಯಶೂನ್ಯರಾಗುತ್ತಾರೆ—ಅಲ್ಲಿಯ ವರೆಗೆ ದೇಶದಲ್ಲಿ ವ್ಯಾಪಿಸಿಕೊಂಡಿರುವ ಈ ಬಗೆಯ ಸುಲಿಗೆ— ಕಳ್ಳ ಸಂತೆ— ಲಂಚಗುಳಿತನ— ನಿರ್ಮೂಲನಾಶವಾಗದು.

ಜಗತ್ತನ್ನೇ ಆವರಿಸಬಲ್ಲ ಪ್ರಳಯಾಗ್ನಿಯನ್ನು ಸಂಘಿಸಿದ ಮಾಂತ್ರಿಕ ಬಗೆಹರಿಸುವಲ್ಲಿ ಭಾರತದ ವಿದೇಶಾಂಗ ನೀತಿ ಉಳಿದಲ್ಲಾ ರಾಷ್ಟ್ರಕ್ಕೆಂತ ವಿಶೇಷ ವರ್ಚಸ್ಸನ್ನು ಬೀರಿದೆ. ನವ್ಯ ಪ್ರಧಾನಿ ನೆಹ್ರೂರವರು ಜಗತ್ತಿನ ಮಹಾ ವೇದಾವಿಗಳ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅವು ಮುತ್ಸದ್ದಿತನದ ಕಾರ್ಯ ಪ್ರಮುಖ ಭಾರತ ದೇಶದ ಕೀರ್ತಿಯನ್ನೂ ಸಂದೇಶವನ್ನೂ ಜಗತ್ತಿಗೆ ಸಾರಿದೆ. ಇಂಥಿನ ಪ್ರಕ್ಷುಬ್ಧ ವಾತಾವರಣ ತಿಳಿಯಾಗಿ ಲೋಕ ಕಲ್ಯಾಣವಾಗಬೇಕಾದರೆ ನೆಹ್ರೂ ಮಾಡಿದ ಮಾರ್ಗದರ್ಶನದಲ್ಲದೆ ಅನ್ಯ ಗತಿಯಿಲ್ಲ. ಇಂದು ಅದರ ಫಲಶ್ರುತಿಯಾಗುತ್ತಿರುವುದನ್ನು ನೋಡಿ ನಾವು ನೆಹ್ರೂನಾಯಕತ್ವದ ಕುಂತು ಹೆಮ್ಮೆಪಡಬೇಕಾಗಿದೆ.

ಇಡಿಯುರಾಷ್ಟ್ರವೇ ಅವರಮಾರ್ಗವನ್ನು ಅನುಸರಿಸುತ್ತಿರುವ ಮೇಳೆ ನಾವು ಹೇಗಿದ್ದೇವೆ ಎಂಬುದನ್ನು ಕಳೆದ ಒಂದು ವರ್ಷದ ದಿನಗಳನ್ನು ನೆನೆದು. ಅತ್ಮಾವಲೋಕನೆಗೆ ಸಂಯಾಗಿ ನೋಡಿಕೊಳ್ಳೋಣ. ಈ ದೇಶದೇಶೀ ಸಮಸ್ಯೆಲ್ಲಿಯ ರಾಷ್ಟ್ರೀಯ ಪ್ರೇಮಬೆಸ್ಟಿಡಿಯೆಂಬುದು ಮನವಮಿಕೆಯಾವೀತು. ದೇಶ ಪ್ರಗತಿಪಥವನ್ನು ಮುನ್ನೆಡೆಯಬೇಕಾದರೆ ಪ್ರಜೆಗಳ ಒಬ್ಬಿನವತ್ತೆ—ದೇಶನಿಷ್ಠೆಯೂ ಮುಖ್ಯವೆಂಬುದನ್ನು ಜ್ಞಾಪಿಸಿಕೊಳ್ಳಬೇಕು.

ಮುಂದೆಯಾದರೂ ದೇಶಸೇವೆಗೆ ಬದ್ಧ ಕಂಕಣರಾಗಿ ದೇಶದ ಮುಂದಿನ ಇಬಿಲ ಸಮಸ್ಯೆಗಳನ್ನು ಕೆತ್ತೊಗೆದು ವ್ಯೈಷ್ಯತ್ಯದಿಂದ ಶತ್ಯಜೆ ಳನಿಟ್ಟು ಸ್ವತಂತ್ರ ಲೋಕಕಲ್ಯಾಣವನ್ನು ಏರ್ಪಡಿಸುವ ಮಾನವೀಯತೆಯ ಜನರಲ್ಲಿ ಮೂಡಿಬರಲೆಂದು ಭವಿಷ್ಯದಲ್ಲಿ ಆತಕಪ್ಪೆಕೊಳ್ಳಬಹುದೇ?

THE VIJAYA BANK, LTD.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

HEAD OFFICE: **Kadri Road, Mangalore.**

Branches:- Udipi, Kaup, Coondapoor, Karkala, Brahmavar, Kasaragod, Byndoor, City-Mangalore, Puttur, Bombay, Kanhangad & Mercara.

B. Manjaya Hegde,
Advocate & President, District Board S. Kanara.
CHAIRMAN.

—ಒಂದು ವರ್ಷ

ಕೊಂಡದ್ದು. ಈ ಮೂರು ವ್ಯಕ್ತಿಗಳು ಮೂರು ಬಗೆಯಲ್ಲಿ ದೇಶಕ್ಕೆ ಅಗತ್ಯವಾಗಿದ್ದರು. ಅಧ್ಯಾತ್ಮವಾದಿಯಾಗಿ ಅರವಿಂದರೂ, ಫಲಾಪೇಕ್ಷೆಯಿಲ್ಲದೆ, ಸದ್ದಿಲ್ಲದೆ ದೀನದಲಿತರ ಹಾಗೂ ದೇಶದ ಸೇವಕರಾಗಿ ಠಕ್ಕರ ಬಾಪಾರವರೂ, ತನ್ನ ಆಸಾಮಾನ್ಯ ಬುದ್ಧಿಶಕ್ತಿಯಿಂದ ಅಚಲವಾದ ರಾಜಕೀಯ ನೋಟದಿಂದ ಎಂತಹ ಭೀಕರ ಪ್ರಸಂಗಗಳನ್ನೂ ಧೀರವಾಗಿ ಎದುರಿಸಿ ರಾಜಕೀಯ ನೀತಿಯಲ್ಲಿ ಸುವ್ಯವಸ್ಥೆಯನ್ನುಂಟುಮಾಡುವ ಬಿಗಿಯಾದ ಕಡಿವಾಣವನ್ನು ಹಿಡಿದ ಸಾರಥಿಯಾಗಿಯೂ ನವ್ಮನ್ನು ತಂತ್ರ ಶಕ್ತಿವನ್ನು ನಡೆಸುತ್ತಿದ್ದರು. ಅಂತಹ ಸುಪುತ್ರರನ್ನು ಪ್ರಜಾರಾಜ್ಯದ ಒಂದೇ ವರ್ಷದಲ್ಲಿ ಕಳೆದುಕೊಂಡು ನಾವು ಅನಾಥರಾಗಿದ್ದೇವೆ. ಇದು ತುಂಬಿ ಬಾರದ ನಷ್ಟವೆಂದೇ ಹೇಳಬೇಕು.

ಆಹಾರದ ಬಿಕ್ಕಟ್ಟು

ದಿಲ್ಲಿಯಿಂದ ಹಳ್ಳಿಯತನಕವೂ ಸರ್ವ ಸಾಮಾನ್ಯ ಎಲ್ಲರಿಗೂ ತಿಳಿದಿರುವ ಸರಕಾರದ ದೌರ್ಬಲ್ಯವೆಂದರೆ ಆಹಾರದ ಬಿಬಿಕ್ಕಟ್ಟು. ಸಾಮಾನ್ಯವಾಗಿ ಸರಕಾರದ ಘೋರಣೆಯನ್ನು ಟೀಕಿಸುವಲ್ಲಿ ಇದನ್ನೇ ಮುಖ್ಯವಾಗಿ ತೋರಿಸುವ ವಾಡಿಕೆಯಾಗಿದೆ. ನವ್ಮಲ್ಲಿಯ ಇತರ ಪಂಗಡಗಳು ಇದನ್ನೇ ಎತ್ತಿ ತೋರಿಸಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಲಿದ್ದಾರೆ. ದೇಶಕ್ಕೆ ಬಂದೊದಗಿರುವ ಗಂತಾಂತರಗಳು ಮೂಲೆ ಮೂಲೆಗೆ ತಿಳಿಯುತ್ತಿಲ್ಲ. ಸರಕಾರದ ಪರಿಸ್ಥಿತಿಯ ಕುಂತು ಲಕ್ಷ್ಯವನ್ನು ಎಳೆಯುವುದರಲ್ಲಿ ಯಾವ ಪಂಥಗಳೂ ಯತ್ನಿಸಿಲ್ಲ. ಯಾವುದರ ಕೊರತೆಯಿದೆಯೋ-ಯಾವುದರಿಂದ ತಾತ್ಕಾಲಿಕವಾಗಿ ಬಿಕ್ಕಟ್ಟುಂಟಾಗುತ್ತದೋ—ಅದನ್ನೇ ಮಹಾಮಾಡಿ ಸರಕಾರವನ್ನು ಟೀಕಿಸುವುದೇ ಅವರ ಬತ್ಯಳಿಕೆಯ ಮುಖ್ಯ ಅಸ್ತ್ರವಾಗಿದೆ. ವಿದ್ಯೆ— ರಾಜಕೀಯ ಜ್ಞಾನವಿಲ್ಲದ ಜನ, ಇಂತಹ ಅಪಪ್ರಚಾರಗಳಿಗೆ ಸುಲಭವಾಗಿ ಒಲಿದು ಬಿಡುವುದು ಸ್ವಾಭಾವಿಕ. ಈ ರೀತಿಯ ಅಜ್ಞಾನವೇ ನವ್ಮ ನಾಯಕರ ಸಮಸ್ಯಕಾರ್ಯಕ್ಕೂ ಸರಕಾರದ ಆಡಳಿತಕ್ಕೂ ವಿಶೇಷ ಧಕ್ಕೆ ತಂದಿದೆಯೆಂದರೆ ತಪ್ಪಾಗದು. ರಾಷ್ಟ್ರೀಯ ಭಾವನೆಯಿಂದ ದುಡಿಯುವ ನವ್ಮ ಧುರೀಣರಿಗೆ ದೇಶದ ಜನ ಭುಜಕ್ಕೆ ಭುಜ ಕೊಟ್ಟು ನೆರವಾಗುವ ಬದಲು ಬೇರೆ ಬೇರೆ ಪಂಗ



ಗುರುವಾರ, ಉಡುಪಿ, ೧-೨-೫೧

ಕಾಶ್ಮೀರ ಮತ್ತು ಆಹಾರ

ಕೊರಿಯಾದ ಯುದ್ಧದ ಪುಣ್ಯಾ ಪ್ರಶ್ನೆಯಲ್ಲೇ ಕಾಶ್ಮೀರದ ಪ್ರಶ್ನೆಯನ್ನು ಮುಂಪೆ ಮಾಡಲು ಪಾಕಿಸ್ತಾನದ ಪ್ರಧಾನಿಗಳು ಕಾವನ್‌ವೆಲ್ತ್ ಮಂತ್ರಿಗಳ ಸರಿಷತ್ತಿಗೆ ಹಾರಿದರು. ಹಿಂದಿನ ಬಂಡ್ವಾಳಿಲ್ಲದ ಬಡಾಯಿಯ ವ್ಯರ್ಥಪ್ರಯತ್ನವೇ ಇಲ್ಲಿ ಆಯಿತು. ಕಾಶ್ಮೀರ ಸಮಸ್ಯೆಯನ್ನು ಪರಿಷತ್ತು ಅನೌಪಚಾರಿಕವಾಗಿ ತೆಗೆದುಕೊಂಡು ನಾಜೂಕಾಗಿ ಹಟವನ್ನು ತೀರಿಸುವ ನಾಟಕವಾಡಿತು ಪಂಡಿತ್ ಅಂದದ್ದೆಲ್ಲಾ ಲಿಯಾಖತರು ಒಪ್ಪಿದರೂ ನೆಹ್ರೂ ಒಪ್ಪಲಿಲ್ಲ "ಕಾವನ್ ನವೆಲ್ತ್ ಪಂಡಿತ್ ನ ಸೂಚನೆಯನ್ನು ನಾನು ಪೂರ್ತಿ ಒಪ್ಪಿಕೊಂಡೆ, ಆದರೆ ನೆಹ್ರೂ ಮನ್ನಿಸಲಿಲ್ಲ. ಅಂದರೆ ನೆಹ್ರೂರವರ ನಕಾರಾತ್ಮಕ ಉತ್ತರದಿಂದಲೇ ಆದು ವಿಫಲ ಹೋಯಿತ." ಎಂದು ಉದ್ಗಾರವೆಳೆದರು. ಜಾತೀಯ ಹಾಗೂ ಧಾರ್ಮಿಕ ಮನೋವೈಕ್ಲಿಷ್ಯ ಪಾಕಿಸ್ತಾನಿಗಳ ಮನೋವೈಕ್ಲಿಷ್ಯ ಎಂತಹ ದೆಂಬುದನ್ನು ಈ ಮೊದಲೇ ನಾವು ಅರಿತಿದ್ದೇವೆ. ಈಗಲಂದರೂ ನೈತಿಕವಾಗಿ ಯಾವುದೂ ಇಲ್ಲಿ ಮಂದಿಲ್ಲ ಪಾಕಿಸ್ತಾನಿಗಳ ಹುಟ್ಟುಗುಣವಾದ ಅಸಹ್ಯಜಾಡ್ಯ—ಸ್ವೋಳ್ಳ ಬೆದರಿಕೆ - ದುರಹಂಕಾರದ ಪ್ರದರ್ಶನದ ಹೊರತಾದ ಮುಕ್ತದ್ವಿತೀಯ—ವಿವೇಕ ಇಲ್ಲೇನೂ ತೋರುವುದಿಲ್ಲ. 'ನಮಗೆ ಯುದ್ಧ ಬೇಡ. ನಾವು ಬೇರೆಯವರ ಮೇಲೆ ಕೈ ಮಾಡಿವೆ. ಆದರೆ ಎರಡನೆಯವರು ನಮ್ಮ ಮೇಲೆ ಕೈ ಮಾಡಿದರೆ ನಾವು ಸಹಿಸಲಾರೆವು." ಎಂದು ಸದಾ ಹೇಳುವ ಪಾಕಿಸ್ತಾನದ ಪ್ರಧಾನಿಗಳು ಶಾಂತಿಯ ವಿಷಯದಲ್ಲಿ—ಔಚಿತ್ಯದ ವಿಷಯದಲ್ಲಿ— ಯಥಾರ್ಥವಾದಿಗಳೆಂದು ಹೇಳಲು ಬರುವುದಿಲ್ಲ. ಏಕೆಂದರೆ ಇಂದು ಪಾಕಿಸ್ತಾನಿಗರು ಕಾಶ್ಮೀರ ತಂಟೆಯಲ್ಲಿ ಮುಂದ ತರುವುದು ಯುದ್ಧದ ಸೂಚನೆಯನ್ನೇ. ಶಾಂತಿಪ್ರಿಯರಿಂದಿದ್ದರೆ ಪಂಡಿತ ನೆಹ್ರೂರವರು "ಯುದ್ಧ ನಿರಾಕರಣ" ಯ ಕಡೆಗೆ ಈ ಹಿಂದೆ ಸಹಯಾಕಲು ಹೇಳಿದ್ದಕ್ಕೆ ಲಿಯಾಖತರೇಕೆ ನಿರಾಕರಿಸಿದರು? ದಿಲ್ಲಿಯ 'ನೆಹ್ರೂ ಲಿಯಾಖತ್ ಒಪ್ಪಂದ'ಕ್ಕೆ ಪಹಾಕೆದವರು ಇಂದಿನ್ನೇಕೆ ಒಪ್ಪಬಂದಿಸ್ತು? ಅಂದೇ ಪಾಕಿಸ್ತಾನಿಗಳ ದ್ವಿಮುಖ ಮೋಡಣೆಯ ರಾಜಕೀಯ ಮನೋವೈಕ್ಲಿಷ್ಯ ಜಗತ್ತಿಗೆ ಅರಿವಾಗಿದೆ ಅಂದವರೆಲ್ಲ ಇವರಿಗೆ ಬೇಕಾದುದು ಸಮರವೋ—ಶಾಂತಿಯೋ ಎಂಬುದನ್ನು ಇದೊಂದೇ ಉದಾಹರಣೆ ನಾಕು. ಇಂಗ್ಲಂಡಿನಲ್ಲೂ ಕೆಂಚಿಯಲ್ಲೂ ಪತ್ರಿಕಾ ಕರ್ತರ ಕಛೆಯಲ್ಲಿ ಲಿಯಾಖತರು ತನ್ನ ಕಂದರೋಪಣೆಮಾಡಿಕೊಂಡಿದ್ದಾರೆ. ನೆಹ್ರೂರವರ ಹಟಮಾರಿತನದಿಂದಲೇ ಕಾಮನ್‌ವೆಲ್ತಿನ ಮಾತುಕತೆಯು ನಿಷ್ಫಲವಾಯಿತೆಂದು ತನ್ನ ಪರಾಜಯದ ಕುರಿತು ಪಾಕಿಕೆಯ ಮಾತನ್ನು ಆಡಿದ್ದಾರೆ. ಯು.ಎನ್. ಪೋಚಲ್ಲಿ ಅದರ ತೀರ್ಮಾನವಾಗಿ ಬೇಕೆಂದು ಕಟಿತೆಗೆಟ್ಟಿದ್ದಾರೆ, ಕಾಶ್ಮೀರದ ಬಗ್ಗೆ ಲಿಯಾಖತರು ಎಷ್ಟು ಕಾತುರರಾಗಿದ್ದಾರೆಂಬುದನ್ನು ಯು.ಎನ್. ಪೋಕ್ಕೆ ಪಯಂದಾಗಿ ಕೊಟ್ಟ ಸ್ವಪೋಕ್ತಿಯಿಂದ ತಿಳಿಯ ಬಹುದು. 'ಜಗತ್ತಿನಲ್ಲಿ ಶಾಂತಿಯನ್ನೂ ನೆಮ್ಮದಿಯನ್ನೂ ಯು ಎನ್. ಪೋ ಬಯಸುತ್ತದಾದರೆ ಅದು ಕಾಶ್ಮೀರದ ಪ್ರಶ್ನೆಯ ನ್ನೂ ಅಷ್ಟೇ ಮಹತ್ವಾಗಿ ಕೆಗೆದುಕೊಂಡು ಒಂದು ನಿರ್ಣಯಕ್ಕೆ ಬರಬೇಳು. ಕಾಶ್ಮೀರ ಪ್ರಶ್ನೆಯು ಅತ್ಯಂತ ಅವಶ್ಯಕತೆಯದ್ದೂ ಪ್ರಾಮುಖ್ಯದ್ದೂ ಆಗಿರುತ್ತದೆ, ಸನ್ನಡೆಂದು ಅಲಕ್ಷಿಸತಕ್ಕ ದ್ದಲ್ಲ. ಯು. ಎನ್. ಪೋ ಇದರಲ್ಲಿ ಆ ಸ್ಥಿತಿ ವಹಿಸುವದರಿಂದಲೇ ಜಗತ್ತಿನ ಶಾಂತಿಯುಂಟುಮಾಡೀತೆಂದು ನಾನೆಣಿಸುತ್ತೇನೆ" ಹೀಗೆಯೆ ಮಸ್ಲಿಂ ಲೀಗಿನ ಮುಖಪತ್ರವಾದ 'ಮಿಲಿಟರಿ ಗಝೆಟ್' "ಪಾಕಿಸ್ತಾನಿಗಳ ಜೀವಾಳವಾದ ಈ ಪ್ರಶ್ನೆಯನ್ನು ಒತ್ತತ್ತಿಯು ಪೂರ್ವಕವಾಗಲೀ— ಶಸ್ತ್ರಪೂರ್ವಕವಾಗಲೀ ತೀರ್ಮಾನಿಸಿಕೊಳ್ಳದೆ ಗತ್ಯಂತರವಿಲ್ಲ" ಎಂದು ಪ್ರತಿಭಟಿಸಿಯಾದೆ. ಆದರೂ ಈಗ ಜಗತ್ತು ಮಹಾ ಆಪತ್ತಿನಲ್ಲಿರುವಾಗಲೇ ಪಾಕಿಸ್ತಾನಿಗಳು ಕಾಶ್ಮೀರೀ ಪ್ರಶ್ನೆಯನ್ನು ಮುಂದೆ ತಂದಿರುತ್ತಾರೆ.

ದಿಲ್ಲಿಯಲ್ಲಾದ 'ನೆಹ್ರೂ ಲಿಯಾಖತ್' ಒಪ್ಪಂದವನ್ನೂ ಇಂದಿನ ಪಾಕಿಸ್ತಾನೀ ಧುರೀಣ ಆಪಹಸ್ಯಾಸ್ಪದವನ್ನೂ ಅವಲೋಕಿಸುವಾಗ ಆ ಒಪ್ಪಂದದ ಯಥಾರ್ಥ ನಷ್ಟವನ್ನು ಸ್ಪಷ್ಟಪ್ಪೂ ಪಾಕಿಸ್ತಾನಿಗಳಿಗಾಗಲ್ಲವೆಂಬುದು ಅರ್ಥವಾಗುತ್ತದೆ ಆ ಒಪ್ಪಂದವನ್ನು ಭಾರತ ಸರಕಾರವೂ, ಪಶ್ಚಿಮ ಬಂಗಾಳ ಮತ್ತು ಯು.ಪಿ. ಸರಕಾರಗಳೂ ಗೊಳಿಸಿದ್ದುವಾದರೂ ಪಾಕಿಸ್ತಾನಿಗಳು ಪ್ರತ್ಯೇಕವಾಗಿ ಅದರ ಕೊಲೆಮಾಡುತ್ತಿಲೆದ್ದಾರೆ. ನೆಪೆನಂಡಿನೊಗೆ ಸ್ನೇಹವನ್ನು ಕಟ್ಟಿಕೊಂಡು ಬಾಳುವದಕ್ಕಿಂತ ಹೊರಹಾಡಿನವರೊಡನೆ ಸೇರಿಕೊಂಡು ಸೇಡನ್ನು ತೀರಿಸಿಕೊಳ್ಳುವ ಈ ಹಂಬಲ ನಿಜವಾಗಿಯೂ ಭೀತುಕವಾಪದ್ದೆ. ಇದರಲ್ಲಿ ಉಭಯರಾಷ್ಟ್ರಗಳಿಗೂ ಕ್ಷೇಮವಿಲ್ಲ ಧಾರ್ಮಿಕ ಆಸ್ಥಿವಾರದಲ್ಲಿ ಸಂತಾ ಸ್ವಾರ್ಥವನ್ನು ಸಾಧಿಸುವದರಿಂದ ದೇಶದ ಬಿಕ್ಕಟ್ಟು ಪರಿಹಾರವಾಗಲಾರದು. ಪಾಕಿಸ್ತಾನ ಆಕ್ರಮಣ ರಾಷ್ಟ್ರವೆಂಬುದನ್ನು ಕಾಶ್ಮೀರ ತಂಟೆಯ ನಿರ್ಣಯಿಸಿಕರಾದ ಸರ್ ಓಕ್ಸನ್ನರು ಸ್ಪಷ್ಟವಾಗಿ ಹೇಳಿದ್ದಾರೆ. "ಕಾಶ್ಮೀರದ ನಿರ್ಣಯವನ್ನು ಇವರೇ ನಿಶ್ಚಯಿಸಿಕೊಳ್ಳುವರು" ಎನುವ ಭಾರತದ ಔಚಿತ್ಯವನ್ನು ಉಳಿದ ರಾಷ್ಟ್ರಗಳ ಅನುಮೋದಿಸುತ್ತಿರುವಾಗ ಪಾಕಿಸ್ತಾನಿಗರೇಕೆ ತಿರುಬೊಬ್ಬೆ ಹಾಕಬೇಕು? ಶಾಂತಿಯ ಹೆಸರಿನಲ್ಲಿ ಶಸ್ತ್ರವನ್ನೇ ಹಿರಿಯುವ ಯತ್ನವನ್ನೇಕೆ ಮಾಡಬೇಕು? ಉಳಿದೆಡೆ ಭಾರತದವಿರುದ್ಧವಾದ ಕೆರುಕುಳವನ್ನೆಬ್ಬಿಸುವದು ಹುಟ್ಟುಗುಣವಾದರೂ ಪರಸ್ಪರರೊಳಗೆ ತಪ್ಪು ಗ್ರಹಿಕೆಗಳಿಗೆಡೆಮಾಡಿಕೊಡುವದಲ್ಲವೆ?

ಪಾಕಿಸ್ತಾನ ತಾಳಿದ ಧೋರಣೆಯನ್ನೇ ಭಾರತವೂ ವಹಿಸಿದ್ದಿ ಇವ್ವರಲ್ಲಿ ಸಮಸ್ಯೆಯು ಶಸ್ತ್ರದಿಂದಲೇ ಬಗೆಹರಿಸಿಕೊಳ್ಳಬಹುದಿತ್ತು. ಆದರೆ ನೈತಿಕ ಮಾರ್ಗದಿಂದ ತೀರ್ಮಾನಿಸಿಕೊಳ್ಳಬೆಹೆಂದೆನ್ನುವದರಲ್ಲಿ ಭಾರತ ಇನ್ನೂ ಆಕಾಯಿಯಾಗಿದೆ. ಮೊದಲಿನಿಂದ ಉಭಯರಾಷ್ಟ್ರಗಳಿಗೆ ಗಿನ ಆಂತರಿಕ ವೈಪರೀತ್ಯ - ವ್ಯವಸ್ಥೆಯಂತೆ ಕ್ಕೂ, ಕೊಡಂಗಿರುವ ಪ್ರಶ್ನೆಯೆಂದರೆ ಕಾಶ್ಮೀರದ್ದು ಇದರ ಪರಿಹಾರವಾಗುವದರಿಂದ ಎಷ್ಟು ರಾಷ್ಟ್ರಕ್ಕೂ ಕ್ಷೇಮವಿದೆ ತೀರ್ಮಾನಕ್ಕೆ ಬರುವ ವೇಳೆ ಯಾವುದಾದರಿಂದು ರಾಷ್ಟ್ರ ವಿವೇಕದಿಂದ ವರ್ತಿಸುವುದು ಮುಖ್ಯವಾಗಿದೆ ಭಾರತ ಈತನಕ ತಿಳಿದ ವಿಶಾಲ ಧೋರಣೆಯೂ, ಔದಾರ್ಯವೂ, ಸಹನೆಯೂ ಅದರ ನೈತಿಕತೆಯ ಧೈರ್ಯಕರವಾಗಿದೆ. ವಿವೇಕಕ್ಕೂ ಒಂದು ಮಿತಿಯಿದೆ. ಕಾಶ್ಮೀರ ಸಮಸ್ಯೆ ಪಾಕಿಸ್ತಾನಿಗಳಿಗೆ ಜಗತ್ತಿನ ಶಾಂತಿಗೆ ಮುಖ್ಯವಾದ ಪ್ರಶ್ನೆ ಎಂದಾದರೆ ಭಾರತಕ್ಕೆ ಅದಕ್ಕಿಂತಲೂ ಪ್ರಾಮುಖ್ಯವೆಂದ ಹಾಗೆಯೆ ಆಯಿತು. ಜಗತ್ತಿನ ಪ್ರಬಲ ರಾಷ್ಟ್ರಗಳ ದುರಹಂಕಾರದ ಪ್ರದರ್ಶನದಿಂದ ಕೊರಿಯದ ಜನತೆಯ ಪಾಡನ್ನು ಜಗತ್ತು ಹೇಗೆ ನಿರೀಕ್ಷಿಸುತ್ತದೋ ಹಾಗೆಯೇ ಪಾಕಿಸ್ತಾನದ ಸ್ವಾರ್ಥ ದುರಹಂಕಾರಗಳಿಂದಲೂ, ಭಾರತದ ಶಾಂತಿ ಸಂಧಾನದಿಂದಲೂ ಕಾಶ್ಮೀರಿ ಜನತೆಯ ಭವಿಷ್ಯವೇನೆಂಬುದನ್ನೂ ನಿರೀಕ್ಷಿಸುತ್ತಿದೆ.

ಉಳಿದ ರಾಷ್ಟ್ರಗಳ ಆರ್ಥಿಕ ಹಾಗೂ ಉದ್ಯಮಗಳ ಉತ್ಕರ್ಷಕ್ಕೆ ಸಹಕಾರದ ಕೈ ನೀಡುವುದೇ ನಮ್ಮ ಧೋರಣೆ" ಎಂದು ಅಧ್ಯಕ್ಷ ಟ್ರೂಮನ್ ಕೆಲವು ಸಮಯದ ಹಿಂದೆ ಹೇಳಿದ್ದರು ಇಂದು ಭಾರತ ಆಹಾರವಿಲ್ಲದೆ ಬರಗಾಲವನ್ನೆದುರಿಸುವ ಪರಿಸ್ಥಿತಿಯನ್ನು ಲಕ್ಷಿಸಿ, ಎರಡು ವಿಲಿಯನ್ ಆಹಾರ ಧಾನ್ಯವನ್ನು ಅಮೆರಿಕೆಯಿಂದ ಯಾಚಿಸಿಯಿದೆ ಅತ್ಯಂತ ಅವಶ್ಯಕತವಾದ ಈ ಬೇಡಿಕೆ ಅಮೆರಿಕೆಯಲ್ಲಿ ಸುಮಾರು ಒಂದೂವರೆ ತಿಂಗಳಿಂದ ಕೊಳೆಯುತ್ತಿಲಿದೆ ಅಮೆರಿಕದ ಸಂಸ್ಥಾನಗಳ ಕಾರ್ಯದರ್ಶಿ ಎಸ್ಕಿಸಿಕ್ಟಿಸ್ ಇಲಾಖೆಯನರು ಕೊಡಸಲ್ಲಿ ತರಧಾರು ಮಾಡಿದಿದ್ದರೂ ನಿನೇಟಿದವರು ಆಡ್ಡಗಾಲಿಟ್ಟಿದ್ದಾರೆ. ನಿನೇಟಿದ ಸದಸ್ಯರುಗಳಲ್ಲಿ ಕೆಲವರು ಧಾರತದ ಜನರ ಹಸಿವಿನ ಈ ಪ್ರಶ್ನೆಗೆ ರಾಜಕೀಯ ಸ್ವರ್ಶ ಯನ್ನು ಮುಂದೆ ಮಾಡ ವುದು ಸರಿಯಲ್ಲ ನೆಂದು ಹೇಳಿದರೂ ಉಳಿದ ಹಲವು ಸದಸ್ಯರು ನೆಹ್ರೂರವರ ಕೊರಿಯವ ವಿದೇಶಾಂಗ ನೀತಿಯು ಅಮೆರಿಕೆಯ ಕವ್ಯೂನಿಸ್ಟ ವಿರೋಧಿ ಆಕ್ರಮಣ ರಾಷ್ಟ್ರವೆಂದು ಸಾರುವಲ್ಲಿ ವಿಯುದ್ಧವಾದುದೂ, ಅವರ ಹಟ್ಟಿನ ಒಲವು ಪಕಿಂಗಿನ ಕಡೆಗೆ ಇರುತ್ತದೆಂದೂ ದೂರುತ್ತಾರೆ. 'ನೀನಲ್ಲದಿದ್ದರೆ ನನ್ನಪ್ಪ' ಎನುವ ತೋಳನ ಗಾದೆಯೆ ಆಯಿತು. ಜಗತ್ತಿನ ಮಹಾದುರಂತವನ್ನು ತಪ್ಪಿಸುವುದು ಹೆಚ್ಚೋ—ಶ್ರೀಮಂತರಾಷ್ಟ್ರದ ಒಲವಿಗೆ ಪಾತ್ರನಾಗಿ ಆತ್ಮಘಾತುಕ ಮಾಡಿಕೊಳ್ಳುವದು ಹೆಚ್ಚೋ—ಎಂಬುದನ್ನು ನಾವು ನೋಡಬೇಕು. ಮಾನವತೆಯನ್ನು ಉಳಿಸಿಕೊಳ್ಳುವದಕ್ಕಾಗಿ ನೆಹ್ರೂ ಮಾಡಿದ ಸೂಚನೆಯನ್ನು ಜಗತ್ತು ಮಾನ್ಯಮಾಡುತ್ತಿದ್ದರೂ ಅಮೇರಿಕ ತನ್ನ ಸ್ವಾರ್ಥವನ್ನೆವ್ವೇ ನೋಡುತ್ತಿದೆ.

ಅಮೆರಿಕೆಯಿಂದ ಸಹಾಯವನ್ನಪೇಕ್ಷಿಸುವ ಇತರ ರಾಷ್ಟ್ರಗಳು ಅದರ ತತ್ವ ನೀತಿಯನ್ನೊಪ್ಪುವ ರೀತಿಯಲ್ಲಿಯೇ ಕೊಡುತ್ತಿವೆ. ಕೆನ್ನೆ ಶ್ರೀಮಂತಿಕೆಯು ಗಿಂಬಿಗೊಡುವನ್ನು ಪ್ರದರ್ಶಿಸುವದರಿಂದ ಲೇ ಕಮ್ಯೂನಿಸಮ್ ಉತ್ಕರ್ಷೆ ಹೊಂದುತ್ತಲಿದೆಯೆಂಬುದನ್ನು ಉನ್ಮತ್ತ ಅಮೆರಿಕ ಅರಿಯಿಲ್ಲ!

ಅಮೆರಿಕೆಯ ಈ ಅಸಂಘಿಗ್ಧ ಧೋರಣೆಯು ಕುರಿತು ನ್ಯೂಯಾರ್ಕ್ ಟೈಮ್ಸ್ "ಭಾರತದ ಈಗಿನ ಬೇಡಿಕೆಯನ್ನು ರಾಜಕೀಯ ದೃಷ್ಟಿಕೋನದಿಂದ ತೂಕಮಾಡಬಾರದು. ಇದು ಕೋಟಿಕೋಟಿ ಜನರಾಂಗದ ಹಸಿವೆಯ ಪ್ರಶ್ನೆ. ಇಂತಹ ಕೊಡುಗೆಯಲ್ಲಿ ನಾನೆಂಡೆಯೆಸಬಾರದು; ತಡವರಿಸಬಾರದು. ವಾಷಿಂಗಟನ್ನಿನ ಶೀಘ್ರವೇ ಇದನ್ನು ಕೊಡುವದರಿಂದಲೇ ನಮ್ಮನಿಜವಾದ ಮೈತ್ರಿಯನ್ನು ತೋರಿಸಿದಂತಾಗುವುದು" ಎಂದು ಬುದ್ಧಿ ಹೇಳಿದೆ.

ಹಸಿದ ನಾನೆಲ್ಲ ನವ್ಯ ದೇಶದ ಆಹಾರದಲ್ಲಿ ವಿಶೇಷ ಜಾಗ್ರತೆಯನ್ನು ವಹಿಸಬೇಕಾಗುತ್ತದೆ. ಸರಕಾರವನ್ನಾಗಲೀ ಧುರೀಣರನ್ನಾಗಲೀ ಟೀಕಿಸುವದರಿಂದ ಏನೂ ಸಾಧಿಸುವಂತಿಲ್ಲ. ಬೇರೆಯವರ ಸಹಾಯವನ್ನು ನಂಬಿ ನಾವು ಅಲಸಿಗರಾಗಬಾರದು. ಸರಕಾರದೊಡನೆ ಆಹಾರದ ಕುರಿತು ಸಹಕರಿಸದೆ ಗತ್ಯಂತರವಿಲ್ಲ. ಅಮೇರಿಕೆಯು ನೆಹ್ರೂರವರ ವಿದೇಶಾಂಗ ನೀತಿಯನ್ನು ಅನುಸರಿಸಿಲಿ ಕೊಡವಮಾಡಿದ್ದನ್ನು ನಿರಾಕರಿಸಿದರೆ ಭಾರತ ಹಲವು ರೀತಿಯ ಕಷ್ಟಗಳನ್ನೆದುರಿಸಬೇಕಾಗುತ್ತದೆ. ಅಮೆರಿಕಾದ ನೀತಿಮತ್ತೆಯ ಇದಿರು ಭಾರತದ ಆಹಾರದ ಅಭಾವವನ್ನು ಹೋಗಲಾಡಿಸುವಲ್ಲಿ ಜನತೆಯು ದೇಶಸೇವಾಕಾಂಕ್ಷೆಯ ಸತ್ವ ನಿರೀಕ್ಷೆಯೂ ಆಗಬಹುದು.

ಕರ್ನಾಟಕದ ಸುಪ್ರಸಿದ್ಧ
ಬರಹಗಾರ್ತಿಯರಲ್ಲೊಬ್ಬರಾದ
ಸರಸ್ವತಿಬಾಯಿ ರಾಜವಾಡೆ
(ಗಿರಿಬಾಲೆ)ಯವರ ಅಮೂಲ್ಯ ಕೃತಿಗಳು

ಕದಂಬ
(12 ಕತೆಗಳ ಸಂಗ್ರಹ)
ಬೆಲೆ ರೂ. 1—4—0

ಪ್ರಕಾಶ
(ಸೇಟ್ ಗೋವಿಂದದಾಸರ ನಾಟಕದ ಅನುವಾದ)
ಬೆಲೆ ರೂ 2—0—0

ಆಹುತಿ ಇತ್ಯಾದಿ ಕಥೆಗಳು
(ಕಥಾಸಂಗ್ರಹ)
ಬೆಲೆ ರೂ. 0—12—0

ಪುಣ್ಯಫಲ
(ನೀಳ್ಗತೆ)
ಬೆಲೆ ರೂ. 0—3—0

ಉಡುಪಿಯ
ಬರಹಗಾರ್ತಿಯರಲ್ಲೊಬ್ಬರಾದ
ಮಟ್ಟಾಡಿ ಕಮಲಾಕ್ಷಿಯವರ

ಪತ್ಸಲಾ
(ಸುರಸ ಕಾದಂಬರಿ)
ಬೆಲೆ ರೂ. 0—8—0

ಪ್ರತಿಗಳಿಗೆ:
ನವಭಾರತ ಬುಕ್ ಡಿಪೊ, ಉಡುಪಿ.

ಹಾರುವ ಕಿಡಿಗಳು

ಸಮೂಹದ ದೊರಗು ಅದರೂ ಆಗ ಬಹುದು; ದೂರದ ಮಿರುಗಿಗೆ ಮರುಳಾಗ ಬಾರದು.

oo

ಉತ್ತಮಗೆ ಕೆಚ್ಚು ಜಾಸ್ತಿ; ಅಧಮಗೆ ಕಚ್ಚು ಜಾಸ್ತಿ.

oo

'ಸಟ್ಟಾ' ಬಟ್ಟರೂ 'ಚಟ್ಟಾ' ತಪ್ಪದು.

oo

ಹೊಸಲು ದಾಟುವ ಮೊದಲು ಹೊಸದು; ದಾಟಿದ ಮೇಲೆ ಹೊಲಸು.

oo

ಹೊಟ್ಟೆ ತಣಿದಾಗಲೂ ಕೇಕೆ; ಹೊಟ್ಟೆ ಹಸಿದಾಗಲೂ ಕೇಕೆ.

ಸುಂಕದವನೊಡನೆ ಸುಖದುಃಖವಲ್ಲ; ಬಿಂಕದವನೊಡನೆ ಸರಸವಲ್ಲಾಪವಿಲ್ಲ.

oo

'ಶಂಕರ' ಮಾಲಿಗೂ ಗಂಜಿಕೆ ಇದೆ; 'ಭಿಕ್ಷಾ' ಮಾತಿಗೂ ಖಾಯಸಿ ಇದೆ. ಇದೀಗ ವಿಚಿತ್ರ ಲೋಕ ರೂಢಿ!

oo

ಕಾಳನಾದರೂ ಚಿಂತಿಲ್ಲ; ಖೂಳನಾಗ ಬೇಡ.

oo

ತನ್ನ ಉನ್ನತಿ ಸಾಧನೆಗಿಂತ ಅನ್ಯರನ್ನು ಅವನತಿಗೀಡುಮಾಡುವುದರಲ್ಲಿ ಅಧಮರ ಅಸಕ್ತಿ ಹೆಚ್ಚು.

oo

ನಕ್ಕರೆ ಜೀವನವೇ ಸಕ್ಕರೆಯಾದೀತು.

oo

ಬಂಡೆಯನ್ನು ಕುಟ್ಟಿಸಬಹುದು; ಬಾಯನ್ನು ಕಟ್ಟಿಸಲಾದೀತೇ?

oo

ಕೋಡಗನಿಗೆ ಕೊಂಬಿಲ್ಲವಾದರೇನಾಯ್ತು? ಕುಚೇಷ್ಟೆಗೆ ಕೊರತೆಯುಂಟೇ?

oo

ಬಂದ ದೇಹದ ದಾಢ್ಯ ನಿಲ್ಲಬಹುದು; ನಿಂದ ಮನೋಜಾಢ್ಯ ಹೋಗಲೊಲ್ಲದು.

oo

'ಜೇಡ' ನೇಯುವುದೂ 'ಬೇಡ'ರಾಯುವುದೂ ಅನ್ಯರ ಉಪಕಾರಕ್ಕಲ್ಲ.

oo

ಮೈಗಳ್ಳರ ಸಹವಾಸ ಹುಲುಸಾದ ಮರಕ್ಕೆ ಬಂದಣಿಕೆ ಬಿದ್ದಂತೆ.

oo

'ಬೇಡಿ' ಕಳಚಿದರೂ ಬೇಡಿ ಜೀವನ!

oo

ಮನುಷ್ಯ ಪ್ರಜನಕೂಟಕ್ಕಿಂತ ಒಲಿವ ಪರಜನರ ಸಂಸರ್ಗ ಲೇಸು.

oo

ತಪ್ಪೇರಾಯನೇ ಚಲಿಸುವುದಲ್ಲ; ಒಳಗೆ ಅವನನ್ನು ಹೊತ್ತವನೊಬ್ಬನಿದ್ದಾನೆ.

oo

ಮೈಮರೆದು ಕೆಲಸ; ಕೈಕೊಲುಕಿ ಸರಸ.

oo

ಕೈಸ್ತನನ್ನೂ ಸಿಲುಬೆಗೇರಿಸುವವಂದ್ದಿರು; ಗಾಂಧಿಗೂ ಗುಂಡು ಹೊಡೆವವರಿದ್ದಿರು. ಅಂದಮೇಲೆ ಸಾಮಾನ್ಯರ ಮಾತೇನು?

oo

ಅನ್ಯರ ನೆರಳಿನಲ್ಲಿ ಹಾಯಾಗಿ ನಿದ್ರಿಸುತ್ತಿದ್ದವನಿಗೆ ಅವರು ಅನುಗ್ರಹಿಸುವ ಬಿಸಿಲು ಬೇಗೆ ಎಂತು ತಿಳಿದೀತು?

oo

ತನು--ನುನ--ಧನದಂತೆ ಸ್ಥಾನಮಾನವೂ ಅಸ್ಥಿರ.

oo

ಗೋಡ್ಸೆ ಅಂದು ಮಹಾತ್ಮರನ್ನು ಕೊಲೆಮಾಡಿದ; ನಾಎಂದು ಅವರ ತತ್ವಗಳನ್ನೇ ಕೊಲೆಮಾಡುತ್ತಿದ್ದೇವೆ.

oo

ಊಟ ಉತ್ತಮರಲ್ಲಿ; ಕೂಟ ಅಧಮರಲ್ಲಿ.

oo

ಗಾಳಿಬೀಸಲಿಕ್ಕೆ ಬೀಸಣಿಗೆ; ಕಲೆಬಾಚಲಿಕ್ಕೆ ಬಾಚಣಿಗೆ; ಕಸಗುಡಿಸಲಿಕ್ಕೆ ಕಸಬರಿಗೆಯೇ ಬೇಕು.

oo

ಗೆಲ್ಲಿನ ಅಧಃರವಾದ ಕಾಂಡ ತೋರುತ್ತದೆ; ಕಾಂಡದ ಅಧಃವಾದ ಬೇರು ಕಾಣುವದಿಲ್ಲ.

oo

ವಿನಃಗಿತ್ತಿಗೆ ಪಾಂಜಾತ ವೈಕ್ಲವ ಅಡಿಯಾದರೇನು? ತನ್ನ ಒಬ್ಬೆ ಹತ್ತಿರವೇ ಬೇಕು; ಉಲ್ಪ ಎಲ್ಲಿದ್ದರೇನು ತನ್ನ ಹೀನ ಬುದ್ಧಿ ಬಿಡಲಾರ.

oo

'ಚಡಿ'ಯ ನೋವಿಗಿಂತ ಚಾಡಿಯ ಕಾವು ಜಾಸ್ತಿ.

ಉಡುಪಿ

ಕೃಷ್ಣಯನ್ ಹ್ಯಾಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎಸ್. ಎನ್. ಮತಾಯಸರು ಹಳೆ ವಿದ್ಯಾರ್ಥಿ ದಿನಾಚರಣೆ ಮತ್ತು ಸತ್ಕೃತಿ ನಿರೂಪಣೆ ಎಂಬ ಬಾತ್ಮಿಯೊಂದನ್ನು ಕಳುಹಿಸಿದ್ದಾರೆ. ಅದರಲ್ಲಿ ಕೃಷ್ಣಯನ್ ಹ್ಯಾಸ್ಕೂಲ್ ಬ್ರಸ್ಸ್ ಬೆನಿಫಿಟ್ ಫಂಡು ಮತ್ತು ಹಳೆವಿದ್ಯಾರ್ಥಿ ಸಂಘಗಳು ಶಾಲೆಗೆ ಸೇವೆ ಸಲ್ಲಿಸಬೇಕೆಂಬ ಸ್ವಯಂ ಸ್ಫೂರ್ತಿಯಿಂದ ಅಸ್ತಿತ್ವಕ್ಕೆ ಬಂದು ಅವರು ಸಂಗ್ರಹಿಸಿದ ನಿಧಿಯು ಅವರವರ ಸ್ವಾಧೀನವೇ ಇರುತ್ತದೆಂದೂ ವಸ್ತುಸ್ಥಿತಿಯನ್ನು ಸಭೆಯ ಮುಂದೆ ಧ್ವನಿವರ್ಧಕ ಯಂತ್ರದಲ್ಲಿ ಒತ್ತಿ ಹೇಳಿದ್ದಲ್ಲದೆ ಅವರಲ್ಲಿ ತೀಕ್ಷ್ಣತೆಯಾಗಲೀ ಸ್ವಾರ್ಥವಾಗಲೀ ಇರಲಿಲ್ಲವೆಂದೂ ಪ್ರೀತಿ ಮತ್ತು ಸೇವೆಯೇ ತಮ್ಮ ಧ್ಯೇಯವೆಂದೂ ಯಾರೂ ಅಪಾರ್ಥಮಾಡಿಕೊಳ್ಳದೆ ಸಹೃದಯಿ ಹಳೆ ವಿದ್ಯಾರ್ಥಿಗಳು ಎಂದಿನಂತೆ ಸಹಕಾರವನ್ನು ನೀಡುತ್ತಿರಬೇಕೆಂದೂ ಕೋರಿದ್ದಾರೆ.

ಮಣಿಪಾಲ—ಮೆನೆವಿಲ ಹ್ಯಾಸ್ಕೂಲಿನ ಪ್ರಥಮ ವರ್ಷಾಂತ್ಯೋತ್ಸವವು ತಾ. 26ನೇ ಶುಕ್ರವಾರ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಚ್. ಸುಂದರ ರಾವ್, ಎಂ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರುಗಿತು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸಿ. ಬಾಲಕೃಷ್ಣ ನಾಯ್ಕರು ಶಾಲೆಯ ಸಂಕ್ಷಿಪ್ತ ವರದಿಯನ್ನೋದಿದ ತರುವಾಯ ಮಕ್ಕಳಿಗೆ ಪಾರಿತೋಷಕಗಳು ಹಂಚಲ್ಪಟ್ಟವು ನಂತರ ಅಧ್ಯಕ್ಷರು ಉಪಾಧ್ಯಾಯರ ಕರ್ತವ್ಯ ದಕ್ಷತೆ ಮತ್ತು ಅವರು ವಿದ್ಯಾರ್ಥಿಗಳನ್ನು ಯೋಗ್ಯ ರೀತಿಯಲ್ಲಿ ರೂಪಿಸಿ ಉತ್ತಮ ಜನಾಂಗದವರನ್ನಾಗಿ ಮಾಡಬಹುದೆಂಬುದರ ಕುರಿತು ಇಂಗ್ಲೀಷಿನಲ್ಲಿ ಉತ್ತಮವಾದ ಭಾಷಣವನ್ನಿತ್ತರು. ತರುವಾಯ ಪ್ರದರ್ಶಿಸಲ್ಪಟ್ಟ ವಿವಿಧ ವಿನೋದಾವಳಿಗಳಲ್ಲಿ "ಕಿಸಾಗೌತಮಿ" ಎಂಬ ಗೀತಾ ನಾಟಿಕವು ಬಹು ಅಚ್ಚಾಗಿಮವಾಗಿತ್ತು. ಅದರಲ್ಲಿ ಕಿಸಾಗೌತಮಿ ಪಾತ್ರವನ್ನು ವಹಿಸಿದ ಶ್ರೀಮತಿ ತಾರಾ ಬಾಯಿಯು ನಟನೆಯು ಅತ್ಯುತ್ತಮವಾಗಿತ್ತು.

ಹಂಗಾರಕಟ್ಟೆ—ಬಂಗ್ಕ್ರ ಜನಾರ್ T. S. ಅಬ್ದುಲ್ ರಜಾಕ್ ಸಾಹೇಬರ ಕಂಪೌಂಡಿನ ಹೊರಗೆ ಸರ್ಕಿಯವರ ದ್ವೇಷಕಾರಿಂದ ಗೋವಾ ಪರಾರಿ ಹುಗಿದಿದ್ದಲ್ಲಿನ ಅದ ಪ್ರೊಪಿಟರ್ C. C. 246 50ನೇ ನಂಬ್ರವು ಎಂಪಿರರ್ ಫಸ್ಟ್‌ಕ್ಲಾಸ್ ಮೀನು ಸ್ಟೇಟ್‌ಬೆಸವರು ತನ್ನ ನಡೆಯನು ಸರ್ಕಿ ಸಾಹೇಬರ ಪರವಾನಿಗೆಯೆಂದು ತಾ. 25 1 51ರಲ್ಲಿ ನಂಬ್ರವನ್ನು ಪಟ್ಟೊಗೆದಿರುತ್ತಾರಾಗಿ ತಿರಿದು ಬರುತ್ತದೆ.

ಪೆರ್ಡೂರು:—ತಾ. 26ರಂದು ಸ್ವಾತಂತ್ರ್ಯ ದಿನಾಚರಣೆ ಆಚರಿಸಲ್ಪಟ್ಟಿತು. b. E. B ಶಾಲೆಯಲ್ಲಿ ಶ್ರೀ B. ಸಂಜೀವಯ್ಯೆ ಯವರೂ, ಪೇವಸ್ಥಾನದ ಮುಂಭಾಗದಲ್ಲಿ ಶ್ರೀ ಪಂಚಾನಾಥ ಅಜಾಯರ್‌ರವರು, A. P. T. ಶಾಲೆಯಲ್ಲಿ ಶ್ರೀ ಕೀನ ಶೆಟ್ಟಿರವರು ಧ್ವಜವನ್ನು ಆರೋಹಿಸಿದರು. ಶಾಲಾ ಬಾಲಕ ಬಾಲಕಿಯರು ಮೆರವಣಿಗೆಯಾದ ನಂತರ ಶ್ರೀ. A. P. ಕಲ್ಯಾಣಿಯವರು ಶಾಲಾ ಮಕ್ಕಳಿಗೆ ಸಿಹಿ ತಿಂಡಿಗಳನ್ನು ಹಂಚಿದರು.

ನಂತರ ಶ್ರೀ A. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀ ಸಂಜೀವ್ಯನ್ನು ಚಾಸ್ತ್ರಿಗಳವರು ಆದಿನ ಸಂಜೆಯ ಕುರಿತು ಭಾಷಣವಿತ್ತು ಬಳಿಕ ಅಧ್ಯಕ್ಷರು ಸರಸ ಭಾಷಣವಿತ್ತರು. ಭಾನ್ಯಾವಾದಣದ ಬಳಿಕ ಸಭೆ ಮುಗಿಯಿತು. ತಾ. 27ರಂದು ಗಾಂಧಿಜಯಂತಿ ಮುಖ್ಯತಿಥಿಯ ಬಗ್ಗೆ ಸೂತ್ರಯಜ್ಞಿ, ಸಾಮಾಜಿಕ ಪಾರ್ಥನೆಗಳು ಮುಂತಾದ ಪ್ರೇಮ ಮಯಚಿಯಲ್ಲಿ ಜರುಗಿತು.

ಅವರು ಹೇಳಿದ್ದೇನು?

ಪೆರ್ಲ್ಲಿ ಆಹ್ವಾಹಾಬಾದಲ್ಲಿ ನಡೆದ ಅ. ಭಾ. ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸಿನ ಸದಸ್ಯರಾಗಿರಬೇಕಾದವರ ಯೋಗ್ಯತೆಯ ಕುರಿತು ಉತ್ತರ ಪ್ರದೇಶ ದ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಗಳಾದ ಶ್ರೀ ಅಲಗೂರಾಯ ಶಾಸ್ತ್ರಿಗಳು ಮಂಡಿಸಿದ್ದಾರೆಂದು ಕೆಲವರು ಒಂದು ತಿದ್ದುಪಡಿಯನ್ನು ಮಂಡಿಸಿದರು. ತಿದ್ದುಪಡಿಯಲ್ಲಿ: "ಪ್ರಾಥಮಿಕ ಸದಸ್ಯನ ಕನಿಷ್ಠ ವಯೋಮಾನವು ೧೮ ಮತ್ತು ಕ್ರಿಯಾಶೀಲ ಸದಸ್ಯನ ಕನಿಷ್ಠ ವಯೋಮಾನವು ೨೧ ಇರಬೇಕು. ಕ್ರಿಯಾಶೀಲ ಸದಸ್ಯನು ಕೈಯಿಂದ ನೂತ ಮತ್ತು ಕೈಯಿಂದ ನೇಯ್ದು ಖಾದಿಯನ್ನೇ ಧರಿಸಬೇಕು. ಅವನು ಮಾದಕ ಪದಾರ್ಥಗಳನ್ನು ಸೇವಿಸಕೂಡದು. ಯಾವ ಸ್ವರೂಪದ ಅಸ್ಪೃಶ್ಯತೆಯನ್ನೂ ಅವನು ಮನ್ನಿಸಕೂಡದು. ಸಮಾನನಂದರ್ಭ ಮತ್ತು ಸ್ಥಾನಮಾನಗಳು ಎಲ್ಲರಿಗೆ ದೊರೆಯಬೇಕೆಂದು ಅವನು ನಂಬಬೇಕು. ಜಾತಿಮತ ಪಂಥಗಳ ಭೇದವನ್ನೆಣಿಸದೆ ಅಂತರ್ ಜಾತಿಯ ಐಕ್ಯದಲ್ಲಿ ವಿಶ್ವಾಸವುಳ್ಳವನಿರಬೇಕು. ಎರಡನೆಯವರ ಧರ್ಮದಲ್ಲಿ ಸಹಿಷ್ಣುತೆ ಇರಬೇಕು. ಯಾವುದೇ ಸ್ವಾರ್ಥ ಹಿತಸಾಧನೆಯ ಉದ್ದೇಶವಿಲ್ಲದೆ ಇವನು ತನ್ನ ವೇಳೆಯ ಕೆಲಭಾಗವನ್ನು ರಚ್ಟ್ರೀಯ ಅಥವಾ ಸಾಮಾಜಿಕ ಇಲ್ಲವೆ ಕಾಂಗ್ರೆಸ್ಸು ಆ ಗಾಗ ನಿರ್ದೇಶಿಸುವ ಇತರ ಯಾವುದೇ ವಿಧಾಯಕ ಕಾರ್ಯಗಳಲ್ಲಿ ವ್ಯಯಿಸಬೇಕು. ಪ್ರತ್ಯೇಕ ಸದಸ್ಯತ್ವ ಫೀಸಿನ ಮತ್ತು ಕಾರ್ಯಕ್ರಮಗಳಲ್ಲಿ ಇತರ ಯಾವುದೇ ರಾಜಕೀಯ ಜಾತೀಯ ಅಥವಾ ಇನ್ನಿತರ ಪಕ್ಷದ ಸದಸ್ಯನಾಗಕೂಡದು" ಎಂದಿರುತ್ತಾರೆ.

ಈ ಉಚ್ಚ ಆದರ್ಶ ಈಗಿರೊ ಕಾಂಗ್ರೆಸ್ಸಿನಲ್ಲೇನೂ ಇಲ್ಲದೆ ಯಿಲ್ಲವ ಹಾತ್ಮಾ ಗಾಂಧಿಗಳೂ ಅದಕ್ಕಾಗಿಯೇ ತನ್ನ ಜೀವ ಮಾನವನ್ನು ತಳೆದಿದ್ದರು. ಕೊನೆಗೊಂದು ದಿನ ಅದೇತತ್ವಕ್ಕಾಗಿ-ಎಂದರೆ ಜಾತೀಯ ಭೂತಕ್ಕಾಗಿ ಗುಂಡಿಗೆದೆಗೊಟ್ಟಿದ್ದನ್ನು ಶಾಸ್ತ್ರಿಗಳು ಮರೆದ್ದರೋ ಏನೋ! ಈಗ ಲೋಕದಲ್ಲಿ ಆಗುವ ತತ್ವದ ವಿಪರ್ಯಾಸವನ್ನು ಶಾಸ್ತ್ರಿಗಳು ಕಂಡು ಜನ ವಿರೋಧಿ ಬಾಹುಬಂದುತಿರುಗೊಮ್ಮೆ ಸೂಚಿಸಿರಬೇಕು. ಖಾದಿಯುಡಬೇಕೆನ್ನುವ ಉದ್ದೇಶವೂ ಹೊಸತಲ್ಲ. ಆದರೆ ಖಾದಿಯುಡುವವರ ಮೇಲೂ ಟೊಪ್ಪಿ (ಹಾಳುವರ) ಧರಿಸುವವರ ಮೇಲೂ ಜನ ತಾತ್ಸಾರ ತಾಳುವದನ್ನೂ-ಕಳ್ಳಸಂತೆಯ ಖದೀಮರೆಂದು ದೂರುವದನ್ನೂ ಅದರ ಜೊತೆಗೆ ಖಂಡಿಸಿ ಒಂದು ರೂಪು ಮಂಡಿಸಬೇಕಿತ್ತು. ಅಂತೆಯೆ ಮಾದಕಪೇಯವನ್ನು ಮುಟ್ಟಬಾರದೆನ್ನುವ ಸೂಚನೆ. ಇಂದು ಕಾಂಗ್ರೆಸ ಸರಕಾರ ಜ್ಯಾರಿಯಲ್ಲಿ ಮದ್ಯ ಪಾನ ನಿಷೇಧವನ್ನು ತಂದಿಟ್ಟಿದೆ. ಶಾಸ್ತ್ರಿಗಳ ಮನಸ್ಸಿನಲ್ಲಿ ಜನತೆಯು ಮಟ್ಟಿಗೆ ಮಾತ್ರವಲ್ಲ ಕಾಂಗ್ರೆಸ್ಸಿಗರ ಮಟ್ಟಿಗೂ ಕೊಂಚ ಸಂಶಯ ಉಂಟೆಂದಾಯಿತು. ಆದರೆ "ಕಾಂಗ್ರೆಸ್ಸಿನ ಸದಸ್ಯರು ಮಾದಕಪೇಯವನ್ನು ಸೇವಿಸಬಾರದೆಂದರೆ ಉಳಿದವರು ಅಪ್ಪಾಸ್ವಾಪೇನಿಸಹಿಪೆಂದೆಂದಾಗಬಹುದೇ?

ಉಳಿದ ಸೋಶಲಿಸ್ಟರು ಕವ್ಯೂನಿಸ್ಟರೂ, ಹಿಂದೂ ಮಹಾಸಭೆಯವರು (ಇವರು ಸನಾತನಿಗಳು. ಶಾಸ್ತ್ರೀಯಾಗಿ ಬಹಿಷ್ಕರಿಸಿಯಾರೆನ್ನೋಣ.) ಸೇವಿಸಿದರೂ ಚಿಂತಿಲ್ಲ ಎಂಬ ಹಾಗೆ ಆಯಿತಲ್ಲವೇ? ಮದ್ಯಪಾನ ನಿಷೇಧ ಜ್ಯಾರಿಯಲ್ಲಿರುವಾಗ 'ಹೇಳು ಮಾತ್ರ ಕಡಿಯಬೇಡ' ಎಂದರೆ ಉಳಿದವರು ಕಡಿಯುತ್ತಿರೆಂದಾಯಿತಲ್ಲ ಪೇ! ಪಾಗಾದರೆ ಸರಕಾರದ ಕಾಯಿದೆ ಪಾನಿಷೇಗಳ ಗತಿ?

ಅಂತೂ ಇಂದು ಕಾಂಗ್ರೆಸ್ಸಿಗರು ಮಾತನಾಡುವದರಲ್ಲೂ, ರಂಗು ಸುವದರಲ್ಲೂ, ಕಾಲಹರಣಮಾಡುತ್ತಲಿದ್ದಾರೆ. ಆಡುವ ಮಾತಿಗೂ ಕಾಂಗ್ರೆಸ್ಸಿನ ಮೂಲತತ್ವಕ್ಕೂ, ಸರಕಾರದ ಕಾಯಿದೆಗಳಿಗೂ ತಾಳಮೇಳವಿಲ್ಲ. ಎಲ್ಲವೂ ಕಂಬಿಯಿಲ್ಲದ ರೈಲುಗಳು 'ಏನಕೇನ ಪ್ರಕಾರೇಣ ಪ್ರಸಿದ್ಧರಾಗೋ ಭವ'ವೆನ್ನುವಮಾತಿನ ನೆನಪಾಗುತ್ತದೆ ಶಾಸ್ತ್ರಿಗಳಾಗಾಗ ಅವರನ್ನು ಯಾಯಿಗಳ ಈ ಸತ್ವಹೀನ ಮಂಡನೆಯನ್ನೆನ್ನಾದಿಮಾಗ! ಇದಕ್ಕಿಂತ ಮಿಗಿಲಾದ ವಿಷಯಗಳಿರುವಾಗ ಅಧಿವೇಶನ ಹಿಂದಿನ ಹಳೆಯದೆಸರಿಲ್ಲನ್ನೇ ಆತುಪುದರಲ್ಲಿ ಆಮೂಲ್ಯ ಸಮಯವನ್ನು ಕಳೆಯುವುದಲ್ಲಾ ಎಂದು ಕನಿಕರ ಉಂಟಾಗುತ್ತದೆ.

ಕರ್ನಾಟಕ ನಾದಾನ ಸಂಗೀತ ಸಭಾ, ಮುಂಬಯಿ— ಈ ಸಂಸ್ಥೆಯು ಕೆಲವು ಸುರತ ಕಲಾಕಾರರು ಇದೇ ಬರುವ ಮಾರ್ಚ್ ತಿಂಗಳಲ್ಲಿ ಗಾಯಕ ಪ್ರದರ್ಶನಕ್ಕಾಗಿ ದಕ್ಷಿಣ ಕನ್ನಡಕ್ಕೆ ಬರಲಿರುವರು "ಶ್ರೀತಿಕಾ ಗೋಪ್ರೊಡಿ ಯಾರ್..?" ಮತ್ತು "ಕನ್ನ ಸ್ವಾಭಾವ" ಎಂಬ ಮೂರು ಅತ್ಯುತ್ತಮ ಗಾಯಕ ಗಳನ್ನು ಪ್ರದರ್ಶಿಸಲಿರುವರು. ಮುಖ್ಯ ಕೇಂದ್ರಗಳಲ್ಲಿ ಆಭಿನಯಿಸಲಿರುವರು.

ಉಡುಪಿ

ಪ್ರಜಾರಾಜ್ಯ ದಿನಾಚರಣೆಯು ಉಡುಪಿಯಲ್ಲಿ ಕಳೆದ ತಾ. 26ರಲ್ಲು ಸಾಂಗವಾಗಿ ಆಚರಿಸಲ್ಪಟ್ಟಿತು. ಆ ದಿನ ಬೆಳಿಗ್ಗೆ ಗಾಂಧಿ ಮೈದಾನದಲ್ಲಿ ರೆ| ಫಾ| ಎ ಬಿ ಸಿಟೊ ಅವರಿಂದ ರಾಷ್ಟ್ರಧ್ವಜಾರೋಹಣವಾದ ನಂತರ ಪ್ರಾಥಮಿಕ ಶಾಲಾ ಬಾಲಬಾಲಕಿಯರಿಗೆ ಪಂದ್ಯಾಟ ಜರುಗಿತು

ಸಂಜೆ ಮುನಿಸಿಪಲ್ ಕ್ಷೇತ್ರದೊಳಗಿನ ಶಾಲಾ ಮಕ್ಕಳಿಗೆ ಆಯಾಯ ಶಾಲೆಗಳಲ್ಲಿಯೇ ಪೆಪ್ಪರ್‌ಮಿಂಟಾಯಿ ಹಂಚಲಾಯಿತು. ನಂತರ ಸ್ಥಳೀಯ ಬೋಡ್ಡೂ ಹೈಸ್ಕೂಲ್ ಪೀಪಲ್ಸ್ ಹಾಲಿನಿಂದ ಮೆರವಣಿಗೆಯು ಹೊರಟು ಅಸ್ಪತ್ರೆ ರಸ್ತೆ, ಕೋರ್ಟು ರಸ್ತೆಗಾಗಿ ಜಯಕಾರಗಳೊಂದಿಗೆ ಗಾಂಧಿ ಮೈದಾನಕ್ಕೆ ಬಂದು ಮುಟ್ಟಿತು. ಆ ಮೇಲೆ ಸಾರ್ವಜನಿಕ ಸಭೆಯು ವಕೀಲ್ ಶ್ರೀ ಬಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಶ್ರೀಗಳಾಖಳು. ಶಿ. ಹರಿದಾಸ ಭಟ್, ಪ್ರಿನ್ಸಿಪಾಲ್ ಕೌಲಗಿ ಶೇಷಾಚಾರ್ ಮತ್ತು ಮಿಸ್. ಉನಮಾ ಸುಂದರಿ ಅವರುಗಳ ಭಾಷಣಗಳಾದುವು. ಮುನಿಸಿಪಲ್ ಚೆಯರ್‌ಮೆನ್ ಶ್ರೀ ಯು ಎಸ್. ನಾಯ್ಕರು ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನ ಸಂಚಿದರು. ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರ ವಿವಿಧ ವಿನೋದ ಕಾಲಕ್ಷೇಪಗಳಾಗಿ ಸಮಾರಂಭ ಕೊನೆಗೊಂಡಿತು.

ಉಡುಪಿ ಇಲೆಕ್ಟ್ರಿಕ್ ಸಪ್ಲೈ ಕೊರ್ಪರೇಶನ್ ಸಂಸ್ಥೆಯನ್ನು ಮದ್ರಾಸು ಸರಕಾರವು ನುಂದಿನ ಜೂನ್ ತಿಂಗಳ ಆರಂಭದಿಂದ ಸ್ವಾಧೀನತೆಪಡಿಸಿಕೊಳ್ಳುವುದು. ಆ ಬಗ್ಗೆ ಸನ್ನಾಹಗಳು ಈಗಾಗಲೇ ಆಗುತ್ತಲಿರುವುವು.

ಉಡುಪಿ ಮುನಿಸಿಪಾಲಿಟಿಯಲ್ಲಿ ಹಸುಗೆ ಪದ್ಧತಿಯನ್ನು ಇನ್ನೂ ಜಾರಿಯಲ್ಲಿಡುವುದು ಆಗತ್ಯವೇ?

ಉಡುಪಿಯು ಸರಯದ್ದಿನ ನಾಲ್ಕು ಕಡೆಗಳಲ್ಲಿ ಆನೌಪಚಾರಿಕ ಹಸುಗೆಪದ್ಧತಿಯು ತೆಗೆಯಲ್ಪಟ್ಟಿದೆ. ಆದರೆ ಉಡುಪಿಯು ಮುನಿಸಿಪಾಲಿಟಿ ಎಂಬ ಒಂದೇ ಸಬಬಿನಿಂದ, ಸೀದಾ ಪದ್ಧತಿಯು ಇಲ್ಲಿ ಇನ್ನೂ ಜಾರಿಯಲ್ಲಿದೆ ಉಡುಪಿಯ ಜನಸಂಖ್ಯೆ 20,000ಕ್ಕೆ ಮಿಕ್ಕಿರುವುದಿಲ್ಲ. ಅಲ್ಲದೆ ಮನೆಗಳ ಸಂಖ್ಯೆ 4000 ಚಿಲ್ಲರೆಯಿರುವುದು. ಉಡುಪಿಯಲ್ಲಿ ದೊಡ್ಡ ಕಾರ್ಖಾನೆ ವ ಕೈಗಾರಿಕೆಗಳಿರುವುದಿಲ್ಲ. ಉಡುಪಿಯ ಸಮೀಪವಿರುವ ನಾಲ್ಕೆ ಹಂಟ ನ ಕಾರ್ಖಾನೆ ಮತ್ತು ಮಿನು ಹಿಡಿಯುವ ವೃತ್ತಿ ಇರುವ ಸ್ಥಳ; ಅದರೆ ಅಲ್ಲಿ ಹಸುಗೆ ಪದ್ಧತಿ ರದ್ದಾಗಿರುತ್ತದ. ಹಂಚಿನ ಕಾರ್ಖಾನೆಗಳು ವ,ಇನ್ನಿತರ ಕೈಗಾರಿಕೆಗಳಿರುವ ಕಲ್ಯಾಣಪುರ ಮತ್ತು ಮಣಿಪಾಲದಲ್ಲಿ ಸಹ ಹಸುಗೆ ಪದ್ಧತಿ ಜ್ಯಾರಿಯಲ್ಲಿರುವುದಿಲ್ಲ. ಕುಂದಾಪುರ, ಕಾರ್ಕಳ, ಬಂಟ್ವಾಳ, ಮತ್ತು ಪುತ್ತೂರು ನಂತಾದ ಸರಾಸರಿ ಉಡುಪಿಗೆ ಸರಿಯಾದ ಪಟ್ಟಣಗಳಲ್ಲಿ ಹಸುಗೆ ಪದ್ಧತಿ ರದ್ದಾಗಿರುವುದು. ಪರಿಸ್ಥಿತಿ ಹೀಗಿರುವಾಗ ಉಡುಪಿಯಲ್ಲಿ ಹಸುಗೆ ಪದ್ಧತಿಯನ್ನು ಇನ್ನೂ ಜ್ಯಾರಿಯಲ್ಲಿಡುವ ಆಗತ್ಯವೇನು? ಸೀದಾಪದ್ಧತಿ ರದ್ದತಿಯಾದಲ್ಲಿ ಕೆಲವು ದಿವಸಗಳ ಮಟ್ಟಿಗೆ ಅಲ್ಪಸ್ವಲ್ಪ ಕಷ್ಟಗಳೊದಗಬಲಹುದು, ಇದು ಆಡಳಿತಾರ್ಯ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಪರ್ಯಾಲೋಚಿಸುವರಾಗಿ ನಂಬಲಾಗಿದೆ ಎಂದು ಪುರಜನರಾಗಿಗೊಬ್ಬರು ಬರೆಯುತ್ತಾರೆ.

ಉಡುಪಿ– ಶ್ರೀ ಎದನಂತೇಶ್ವರ ದೇವಸ್ಥಾನದೊಳಗಣ ಹಳೆಮರದ ದಳಿಯು ಅ ಪರಣದಿಂದಿದ್ದ ಶ್ರೀ ಮಧ್ವ ಗುಡಿಯನ್ನು ಈಚೆಗೆ ಶಿಲಾಮಯದ ಗುಡಿಯನ್ನಾಗಿ ಸ್ಥಳೀಯ ಸಂಸ್ಥ ಕಾಲೇಜಿನ ವೇದಾಂತ ಪ್ರಧಾನ ಪಂಡಿತರಾದ ಶ್ರೀ ಬನ್ನಂಜೆ ನಾರಾಯಣಾಚಾರ್ಯರು ತನ್ನ ಸ್ವಂತ ಖರ್ಚಿನಿಂದ ಮಾಡಿಸಿಯುವರಾಗಿ ಒರ್ವ ಅಸ್ತಿಕ ಮಹಾಶಯರು ತಿಳಿಸುತ್ತಾರೆ.

ಶ್ರೀ ಮದನಂತೇಶ್ವರದೇವಸ್ಥಾನದಲ್ಲಿಯ ಅರ್ಚಕ ಶ್ರೀ ರಾಮದಾಸಭಟ್ಟರಾಲರು ತಾನು ಮಾಡಿದ ತಪ್ಪುಗಳನ್ನು ಮನ್ನಿಸಿ ತನ್ನ ಮೇಲಿನ ಪ್ರಸೀದಿಂನ್ಯುಗಳನ್ನು ರದ್ದುಮಾಡಬೇಕಾಗಿ ಶಿಷ್ಟಾ ಕ್ತಾಪ ಸೂಚಿಸಿ ಬರಹ ಮೂಲಕ ಪ್ರಾರ್ಥಿಸಿದುದರಿಂದ ಸದ್ರಿ ದೇವಸ್ಥಾನದ ಆಡಳ್ಳೆ ಮೊಕ್ತೇಸರ ವಕೀಲ್ ಶ್ರೀ ಪಿ. ವಿ, ಆಚಾರ್ಯರು ಪುನಹ ಅವರನ್ನು ಅರ್ಚಕರನ್ನಾಗಿ ಕಳೆದ ತಾ. 29ರಿಂದ ನೇಮಿಸಿರುವರು.

ಉಡುಪಿಯಲ್ಲಿ ಗಾಂಧಿ ದಿನಾಚರಣೆಯು ತಾ. 30ರಲ್ಲು ಸೂರ್ತ್ಯಯಜ್ಞ, ಪ್ರಾರ್ಥನೆ, ಭಜನೆ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು.

ಉಡುಪಿ ನಗರ ಸಭೆಯು ತಾ. 31ರಲ್ಲಿ ಜರಗಿದಾಗ ಸೆಂಟ್ರಲ್ ವಾರ್ಡಿನ ಟೌನ್‌ಪ್ಲಾನಿಂಗ್ ಕ್ಷೇತ್ರದ ತೆರಿಗೆದಾರರ ಆಸೀಲು ಅರ್ಜಿಗಳು ತೀರ್ಮಾನಿಸಲ್ಪಟ್ಟವೆ.

ಪತ್ತಿಣ ಕನ್ನಡ

ಸುರತ್ಕಲ್– ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ ವಾರ್ಷಿಕೋತ್ಸವ ದಿನಾಚರಣೆಯು ತಾ. 18-1-51ರಂದು ರೆ| ಫಾ| ಕೆಸ್ಟೊಲೀನೋ ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ತಾ. 20-1-51ರಂದು ಈ ಹೈಸ್ಕೂಲಿನ ವರ್ಧಂತಿ ಮಹೋತ್ಸವವು ಡಾಕ್ಟರ್ ಯು. ಪಿ. ಮಲ್ಯ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಸ್ವಸ್ತಿವಾಚನ, ವರದಿವಾಚನ ಬಹುಮಾನ ವಿತರಣೆಯ ಬಳಿಕ ಅಧ್ಯಕ್ಷರು ತಮ್ಮ ಸುಂದರವಾದ ಭಾಷಣದಲ್ಲಿ ಈ ಶಾಲೆಯು ಕಾರ್ಯಕಲಾಪವನ್ನು ಪ್ರಶಂಸಿಸಿ, ಇದು ಮುಂದಕ್ಕೆ ಕಾಲೇಜಾಗುವ ಅರ್ಹತೆಯನ್ನು ಪಡೆಯಲೆಂದು ಹಾರೈಸಿದರು ಶಾಲಾ ಬಾಲಕ ಬಾಲಕಿಯರಿಂದ ಕನ್ನಡ, ಹಿಂದಿ ನಾಟಕಗಳೂ, ನೃತ್ಯ; ದೈಹಿಕ ಶಿಕ್ಷಣ ಚಟುವಟಿಕೆಗಳೂ ಇದ್ದುವು. ತಾ 21-1-51ರಲ್ಲಿ ಹಳೆವಿದ್ಯಾರ್ಥಿಗಳ ಎರಡನೆ ವಾರ್ಷಿಕೋತ್ಸವವು ಬ್ರಹ್ಮ ಶ್ರೀ ಪೇಜಾವರ ಸೀತಾರಾಮಾಚಾರ್ಯರ ನೇತೃತ್ವದಲ್ಲಿ ನಡೆಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಗೂ ವಿದ್ಯಾರ್ಥಿಗಳಿಗೂ ಇರುವ ನಿಕಟ ಸಂಬಂಧವನ್ನು ಬಾರತೀಯರ ಆತ್ಮಬಲವನ್ನೂ ಸಾಗವಂವಾಗಿ ವರ್ಣಿಸಿದರು ಆಂಧ್ರ ಕನ್ನಡ, ತುಳು ನಾಟಕಾದಿನಯಾದಿಗಳು ಪ್ರಶಂಸನೀಯವಾಗಿ ಜರಗಿದವು.

ಕುಂಬಳೆ–ಗ್ರಾಮಾಂತರಗಳಲ್ಲಿ ರೇಶನ್ ಪದ್ಧತಿ ನಾಡಿದುದರಿಂದ ರೀಲೀಫ್ ಆಂಗಡಿ ತೆರೆಯುವಿಕೆಯ ಆವಶ್ಯಕತೆ ಕಂಡುಬರುತ್ತಿದೆ.

ಮಾಯಿಪಾಡಿ– ಇಲ್ಲಿಯ ಬುನಾದಿ ಶಿಕ್ಷಣ ತರಬೇತಿ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ 26ರಲ್ಲು ಜಿಲ್ಲಾಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ರಾಮಕೃಷ್ಣ ಭಟ್ಟರು ತಾಲಾ ವರದಿಯನ್ನೋದಿದರು. ಶ್ರೀ ಬಿ. ಎಸ್. ಕಕ್ಕಿಲ್ಲಾಯರು ವಸ್ತು ಪ್ರದರ್ಶನ ವನ್ನು ತೆರೆದರು.

ಬೈಲೂರು– ಗಣರಾಜ್ಯ ದಿನಾಚರಣೆಯು ತಾ. 21ರಲ್ಲು ಗಾಂಧಿ ಸ್ಮಾರಕ ಸಂಘದ ವತಿಯಿಂದ ರಾಷ್ಟ್ರ ಧ್ವಜಾರೋಹಣ, ಪ್ರಭಾತಭೇರಿ, ಸಾರ್ವಜನಿಕ ಸಭೆ ಹರಿಕಥಾ ಕಾಲಕ್ಷೇಪ ಮೊದಲಾದ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

ಕೆದಿಂಜೆ ತಾ 26-1-51ನೇ ಸಂಜೆ ಪ್ರಜಾಪ್ರಭುತ್ವ ದಿನಾಚರಣೆಯು ಶ್ರೀ ಕೆ. ಎಲ್. ಶರ್ಮರ ಅಧ್ಯಕ್ಷತೆಯಲ್ಲಿ ಮಂಜರ್ ಪಳ್ಕೆಯಲ್ಲಿ ಪ್ರಜಾಪ್ರಭುತ್ವ ಸಭೆ ನೇರ ಜರಗಿಸಲ್ಪಟ್ಟಿತು.

ಉಚ್ಚಿಲ– ತಾ. 26-1-51ರಲ್ಲು ಸರಸ್ವತೀಮಂದಿರ ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿ ಮತ್ತು ಅಧ್ಯಾಪಕವೃಂದದವರು ಪ್ರಾತಃ ಗಂಟೆ 9ಕ್ಕೆ ಪ್ರಜಾಪ್ರಭುತ್ವ ದಿನವನ್ನು ಆಚರಿಸಿದರು. ಶ್ರೀ ಮಹಲಿಂಗೇಶ್ವರ ಶಿಶುಚರದಳ ಮತ್ತು ಶಾಲಾ ಬಾಲ ಬಾಲಕಿಯರೊಂದಿಗೆ ರಾಷ್ಟ್ರಧ್ವಜವಂದನೆ, ಸಭಿಮರವಣಿಗೆ, ನೂಲುವ ಸ್ಪರ್ಧೆಯನ್ನು ಜರಗಿಸಿ ಬಹುಮಾನಗಳನ್ನು ಹಂಚಲಾಯಿತು.

NOTICE

ಕುಂದಾಪುರ ಡಿ. ಮು ಕೋರ್ಟಿನಲ್ಲಿ

S. C. 743/50

ಮೂಳಕಮ್ಮ ಸೆಟ್ತಿ —ವಾದಿಳು
ಕೃಷ್ಣಮೊಗೇರ —ಪ್ರತಿವಾದಿರು

ಸದ್ರಿ ದಾವೆಯ 1ನೇ ಪ್ರತಿವಾದಿ ಮೊಗೇರ ಕೃಷ್ಣ ಲಿಂಗಿ ಹೆಂಗ್ಸಿನ ಮಗ, 2ನೇ ಮಂಜ, 3ನೇ ಗೋವಿಂದ- 1ನೇ ಪ್ರತಿವಾದಿಯು ಆಳಿಯಂದಿರು 4ನೇ ರಾಮ, 1ನೇ ಪ್ರತಿವಾದಿಯ ಅಕ್ಕಯ 7ನೇ ಮುತ್ತ. ಕಾವೇರಿ ಹೆಂಗ್ಸಿನ ಮಗ. ಕುಂದಾಪುರ ತಾಲ್ಲ್ಯ ಪಾಡ ಗ್ರಾಮದ ಕೋಳ್ಕೆಮೇಲ್‌ಹಳ್ಳಿಯಲ್ಲಿರುವವರು

ಸದ್ರಿ ಪ್ರತಿವಾದಿಗೆ ಈ ಮೂಲ್ಕ ತಿಳಿಯಪಡಿಸುವದೇನೆಂದರೆ–

ವಾದಿಳು ಪ್ರತಿವಾದಿರಾದ ಬರತಕ್ಕ ಕಳದ ವಿರೋಧಿ ಸಂಬಂದ ಬಾಬ್ತು ಚಾಲಗೆಣಿ, ಗೇಣಿಬಾಕಿ ಬಾಬ್ತು ಬರತಕ್ಕ ಅಪೇಜುಗಳ ಬಗ್ಗೆ ದಾಕ್ಲು ಮಾಡಿದ ಮೇಲಿನ ದಾವೆಯು ತಾರೀಕು 9-2-1951ಕ್ಕೆ ತನ್ನಿಗೆ ಯಿಟ್ಟಿರುತ್ತಾರೆ. ಆ ಕುರಿತು ಸದ್ರಿ ಪ್ರತಿವಾದಿಯದೇನಾದ್ದು ಆಕ್ಷೇಪಣೆಗಳಿದ್ದರೆ ಸದ್ರಿ ಕೋರ್ಟುಮುಂದೆ ಆ ತಾರೀಕಿಗೆ ಹಗಲು 11ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಮ್ಮ ಯಕ್ಷಪಾರ್ಟಿಯಿಂದ ದಾವೆಯನ್ನು ತೀರ್ಮಾನಿಸಲಾಗುತ್ತದೆಂದು ಸಂಗತಿ ಈ ಮೂಲ್ಕ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗುತ್ತದೆ.

S. S. Koikebail,
Advocate for Plff-
Coondapoor, 18-1-1951.

ಸಂಚಾಯತ ಬೋರ್ಡು,
ಗ್ರಾಮ ಕಮಿಟಿ, ಶಾಲಾ ಕೊಲೇಜು
ಮೊದಲಾದುವುಗಳ
ಲೈಬ್ರೆರಿಗಳಿಗೆ
ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.
ವಿಚಾರಿಸಿರಿ.—
ನವಭಾರತ ಪುಸ್ತಕ ಭಂಡಾರ
ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ನಡಿಯುವ ಚಿತ್ರ
ಫಿಲ್ಮ್‌ಸ್ಥಾನ್‌ರವರ
ಶಬನಮ್
ಕಾಮಿನಿಕೌಶಲ್, ದಿಲೀಪ್ ಕುಮಾರ್.
ಬರುವ ಚಿತ್ರ
ಕೊಲಂಬಿಯಾದವರ ಇಂಗ್ಲಿಷ್ ಚಿತ್ರ
ಲಾಸ್ಟ್ ಡೇಸ್ ಆಫ್ ರೆಡ್‌ಮೆನ್

ಟೈಪು ರೀ ಕ್ಯಾಸ್ಟಿಂಗ್ ಥಾರ್ಜನ್ನು ಅರ್ಧಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳಿ.
ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ ಮೈಸೂರು ಟೈಪು ಫೌಂಡರಿಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕ್ಯಾಸ್ಟ್ ಮಾಡಿಸುವುದರಿಂದ ವಿವರೀತ ಉಳಿತಾಯವಾಗುತ್ತದೆ.
ಸಾವಿರ ಪೌಂಡು ಮತ್ತು ಹೆಚ್ಚಿಗೆ ಪೌಂಡಿಗೆ 0—10—0 | ಐನೂರು ಪೌಂಡು ಮತ್ತು ಹೆಚ್ಚಿಗೆ ಪೌಂಡಿಗೆ 0—12—0
ಸೇಲ್ಸ್ ಟ್ಯಾಕ್ಸ್, ಪ್ಯಾಕಿಂಗ್ ಮತ್ತು ಫಾರ್ವರ್ಡಿಂಗ್ ಥಾರ್ಜ ಮುಫತ್ತು.
ಇಂದೇ ಇವರಗಳಿಗೆ ಬರೆಯಿರಿ: ಮ್ಯಾನೇಜರ್,
ಮೈಸೂರು ಟೈಪು ಫೌಂಡರಿ,
ಬೆಂಗಳೂರು-2


ದ ಮ್ಯೂಸ್ ಹೋದರೆ ತಿರುಗಿ ಬಾರದು
ಕಳೆದ ೨೮ ವರ್ಷದಿಮ್ಮಿಗೆ ಪ್ರಸಿದ್ಧ ಡಾಕ್ಟರರ ಔಷಧದ ಉಪಾಯ
ಪುರೋಹಿತ-ಶ್ವಾಸಹಾರಿ
೧, ೬, ೧೨, ೫೦ ಪ್ಯಾಕಿಂಗದಲ್ಲಿ ೧೫, ೬, ೧೦, ಮೂ ತಕ್ಕುತ್ತು. ಭಾರತದಲ್ಲಿ ಎಲ್ಲಾಕಡೆ ಮಾರಾಟಕ್ಕೆ ಸಿಗುತ್ತದೆ ಇಲ್ಲದೇ ನಾಮ-ನವಿಂದ
ಡಿ. ಪುರೋಹಿತ ಫರ್ಮಸಿ
ಕುಂದಾಪುರ (ಎಸ್. ಎಮ್ ಸಿ.)

ಮಂಗಳೂರು

ಮಂಗಳೂರು ಮುನಿಸಿಪಲ್ ಪ್ರೌಢ ಶಾಲೆಯು ಈಚೆಗೆ ಶ್ರೀ. ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಆಸ್ಪತ್ರೆಗಳಲ್ಲಿ ದೇಶೀಯ ಔಷಧ ಉಪಯೋಗಿಸಲು ರೂಪಾಯಿ 5369, ಪಾಂಡೇಶ್ವರ ಮುನಿಸಿಪಲ್ ಶಾಲೆಯ ಕಸಾಬಿನ ಪಾಠದ ಉಪಕರಣಗಳಿಗಾಗಿ ರೂ. 560, ಮಂಜೂರಾಯಿತು. ಸ್ವಾಮಿ ಶುದ್ಧಾನಂದ ಸೇವಾಶ್ರಮಕ್ಕೆ ರೂ. 250, ಈಶ್ವರಾನಂದ ಮಹಿಳಾ ಸೇವಾಶ್ರಮಕ್ಕೆ ರೂ. 500, ಕಂಕನಾಡಿಯ ಸೈಂಟ್ ಜೋಸೆಫ್ ಕುಷ್ಠ ರೋಗಿ ಆಸ್ಪತ್ರೆಗೆ ರೂ. 1500 ಸಹಾಯಧನವೀಯಲಾಯಿತು. ಕೊಳಕು ಗುಡಿಸಲುಗಳ ಸಮಸ್ಯೆಯ ಪರವಾಗಿ ಒಂದು ಸಮಿತಿಯ ರಚನೆಯಾಗಬೇಕೆಂಬ ಅಧ್ಯಕ್ಷರ ಸೂಚನೆಯು ಚರ್ಚಿಸಲ್ಪಟ್ಟು, ಅದನ್ನು ಪಬ್ಲಿಕ್ ಹೆಲ್ತ್ ಕಮಿಟಿಗೊಪ್ಪಿಸಲಾಯಿತು. ಹಂಪನಕಟ್ಟೆಯಲ್ಲಿಯ ಜಟ್ಟಿ ನಿಲ್ದಾಣವನ್ನು ರೈಲು ನಿಲ್ದಾಣದ ಪಿಯಾಕ್ಕೆ ವರ್ಗಾಯಿಸಬೇಕೆನ್ನುವ ನಿರ್ಣಯವಾಯಿತು.

ಭೂದಾನ- ರಾಜಕೀಯ ಸಂತ್ರಸ್ತರಿಗೆ ಭೂಮಿ ಮಂಜೂರು ಮಾಡುವ ಸಲಹಾ ಸಮಿತಿಯು ಕಲೆಕ್ಟರರ ಅಧ್ಯಕ್ಷತೆಯಲ್ಲಿ ನೇ ೩ 16 ಮಂದಿಗೆ ಭೂಮಿ ಮಂಜೂರು ಮಾಡಲಾಯಿತು. ಈ ತನಕ ಬಂದ 907 ಅರ್ಜಿಗಳಲ್ಲಿ 541 ಮಂದಿಗೆ ಭೂಮಿ ಮಂಜೂರಾಗಿದೆ. 346 ಅರ್ಜಿಗಳು ತಿರಸ್ಕರಿಸಲ್ಪಟ್ಟಿವೆ.

ಸಿಡುಬು ಕಾಯಿಲೆಯು ಅತ್ತಾವರ ಕಾಂಡೇಶ್ವರ, ಹೊಯಿಗೆ ಬಜಾರು ವಾರ್ಡುಗಳಲ್ಲಿ ಕಾಣಿಸಿಕೊಂಡು ಕೆಲವು ಮರಣಗಳು ಸಂಭವಿಸಿದೆ.

ವರ್ಧಂತಿ ಉತ್ಸವ- ಮಂಗಳೂರಿನ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಭವನದ ವಾರ್ಷಿಕ ವರ್ಧಂತಿ ಉತ್ಸವವು ಕಳೆದ ತಾ. 21ರಲ್ಲು ಸರ್ ಜಡ್ಜರಾಂಡ ಶ್ರೀ ಟಿ. ಎಲ್. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಕರುಣಾಕರನವರು ಸ್ವಾಗತಿಸಿದ ಮೇಲೆ ಕಾರ್ಯದರ್ಶಿ ಶ್ರೀ ಪದ್ಮನ ಭಾಚಾರ್ಯರು ವರದಿ ಓದಿದರು. ಶ್ರೀ ಕು. ಶಿ. ಹರಿದಾಸಭಟ್ಟರು ಸ್ವಸ್ತಿವಾಚನ ಮಾಡಿದರು. ಶ್ರೀ ಎನ್. ಮಾಧವರಾಯರು ಉತ್ತರವಿತ್ತರು. ಅಧ್ಯಕ್ಷರು ಬಹುಮೊನ ವಿತರಣೆ ಮಾಡಿ ತಮ್ಮ ಭಾಷಣದಲ್ಲಿ,ವಿದ್ಯಾರ್ಥಿಗಳು ತಾವಲ್ಲದೇ ಮುಂದಿನ ಜೀವನಕ್ಕೆ ಸಿದ್ಧರಾಗಬೇಕೆಂದೂ, ಎಂದೆಂದೂ ವ್ಯಾಸಂಗ ಮಾಡುವವರಾಗಬೇಕೆಂದೂ ಕೇಳಿಕೊಂಡರು. ವಿನೋದ ಕಾಲಕ್ಷೇಪದೊಂದಿಗೆ ಸಭಾರಂಭ ಕೊನೆಗೊಂಡಿತು.

ಬಾಲವಾತ— ಚಿಕ್ಕ ವಯಸ್ಕಳಲ್ಲಿ ವಾತರೋಗವನ್ನು ಪ್ರತಿಭಟಿಸಲು ಮಂಗಳೂರಿನಲ್ಲೊಂದು ಸಮಿತಿಯು ರಚಿಸಲ್ಪಟ್ಟಿದೆ. ಈ ಸಮಿತಿಗೆ ವಕೀಲ ಶ್ರೀ ಕಾರ್ಕಳ ಸದಾಶಿವ ರಾಯರು ಅಧ್ಯಕ್ಷರಾಗಿಯೂ, ಡಾ। ಗಿರಿಧರ ರಾವ್ ಮತ್ತು ಶ್ರೀ ಎಮ್. ಎನ್. ಶೆಣೈ ಇವರು ಕಾರ್ಯದರ್ಶಿಗಳಾಗಿಯೂ ಇರುವರು. ಸಮಿತಿಯ ಉದ್ದೇಶವಾದರೂ ಬಾಲವಾತ ರೋಗವನ್ನು ನಿವಾರಿಸಬಲ್ಲ ವಿದ್ಯುತ್ ಉಪಕರಣಗಳನ್ನು ಕೊಂಡುಕೊಳ್ಳಲು ಬೇಕಾದ ಹಣವನ್ನು ಸಂಗ್ರಹಿಸುವುದು. ಈ ತನಕ ರೂ. 325-11-0ನ್ನು ಸಮಿತಿಯು ನಗರದ ಬೇರೆಬೇರೆ ಶಾಲೆಗಳಮೂಲಕ ಸಂಗ್ರಹಿಸಿದೆ.

ಪ್ರಜಾ ಪ್ರಭುತ್ವ ದಿನಾಚರಣೆಯು ಮಂಗಳೂರಲ್ಲಿ ಕಳೆದ ತಾ. 26ರಲ್ಲು ಸಂಗವಾಗಿ ಜರಗಿತು. ಅದಿನ ಬೆಳಿಗ್ಗೆ ಎಂಟು ಗಂಟೆಗೆ ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಲೆಕ್ಟರರು ಧ್ವಜವನ್ನು ವಂದಿಸಿ, ಪೋಲೀಸ್ ಪಡೆಯ ಗೌರವ ಚಟುವಟಿಕೆಗಳನ್ನು ನಿರೀಕ್ಷಿಸಿದರು. ನಗರದ ಸ್ಕೌಟುಗಳೂ ಕವಾಯಿತಿದ್ದಲ್ಲಿ ಭಾಗವಹಿಸಿದ್ದರು. ನಗರದ ವಿವಿಧ ಕೇಂದ್ರಗಳಲ್ಲಿ ಪ್ರಭಾತ ಫೇರಿಗಳು ಧ್ವಜವಂದನೆಗಳೂ ಆದುವು. ಸೆಂಟ್ರಲ್ ಬಾಲಿಕಾ ಪಾಠಶಾಲೆಯಲ್ಲಿ ಮಾಜಿ ಮಂತ್ರಿಗಳಾದ ಶ್ರೀ ಕೆ. ಆರ್. ಕಾಂತರು ಧ್ವಜವಂದನೆಸಿದರು. ಅಲ್ಲಿನ ವಿದ್ಯಾರ್ಥಿ ಮುಖ್ಯಮಂತ್ರಿ ಕೆ. ಅನುಸೂಯಾ, ಅವರು ನಮ್ಮ ಘಟನೆಯ ಪೀಠಿಕೆಯಲ್ಲಿನ ಪ್ರತಿಜ್ಞೆಯನ್ನು ಘೋಷಿಸಿದರು. ಬಳಿಕ ಭಾರತ ಗಣರಾಜ್ಯಕ್ಕೆ ಯಶಸ್ಸು ಕೋರುವ ಹಾಡುಗಳಾದ ಮೇಲೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ರಾಷ್ಟ್ರಪ್ರತಿಜ್ಞೆ-ಯಲ್ಲಿ ಬೇಕಿರುವ ತತ್ವಗಳನ್ನು ವಿದ್ಯಾರ್ಥಿಗಳು ಬೇಗ ಪಾಲಿಸಬಹುದೆಂಬುದನ್ನು ತಿಳಿಸಿದರು.

ಸಂಜೆ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆಯು ಶ್ರೀ ಜಿ. ಸೋಮನು ಶೆಣೈರವರ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರ ನೀತಿ ಹಾಗು ನಿಷ್ಠೆಯಾದನಂತರ ಅಧ್ಯಕ್ಷರು ದಿವಂಗತ ಥಕ್ಕರ್ ಬಾಪಾರವರ ನಿಧನಕ್ಕಾಗಿ ದುಃಖ ಸೂಚಿಸಿದರು. ಶ್ರೀಗಳಾದ ಎಲ್. ಸಿ. ಪಾಯಿಸ್, ಎಮ್. ಸಿ. ಅಹಮ್ಮದ್, ಎನ್. ಎಸ್. ಕಿಲ್ಲೆ, ಪಿ. ಆರ್. ಕಕ್ಕೇರ ಮೊದಲಾದವರ ಭಾಷಣಗಳಾದುವು.

THE CANARA BANKING CORPORATION LTD.

(Incorporated in India with limited liability)

EsTD: 1906.

HEAD OFFICE : *UDIPI (S. I.)*

NOTICE.

The Ordinary Annual General Meeting of the Shareholders of the CORPORATION will be held at its Registered Office at Udipi, on Sunday, the 11th March,1951 at 11 A.M. to transact the following business:

[1] To receive, consider and adopt the Directors' Report and the Balance Sheet as at 31-12-1950 and the Profit & Loss Statement for the year 1950, with the Auditors' Report.

[2] To declare a Dividend.

[3] To elect 3 Directors in place of those who retire by rotation but who are eligible for re-election.

[4] To appoint an Auditor or Auditors for the year 1951 and fix the amount of his or their remuneration.

N B:—The Register of Members and Transfer Books of the Corporation will remain closed from 26-2-1951 to 11-3-1951;both days inclusive.

(By Order of the Board)

V. R. KAMATH

GENERAL MANAGER

Office of the Corporation, Udipi, January 22, 1951.

ಐವತ್ತಾರು ವರುಷ ಉಪವಾಸ ಮಾಡಿದರೂ ಸಾಯದ ಗಟ್ಟಿ ಜೀವ.

ಉಣ್ಣದೆ ಬದುಕುವುದು ಹೇಗೆ?

ರೇಶನ್-ಯುಗಕ್ಕೆ ಬೇಕಾದ ಕ್ರಿಯಾಯೋಗವನ್ನು ಅನುಸರಿಸಿದ ಗಿರಿಬಾಲೆಯ ಕತೆ

ಶ್ರೀ ಪರಮಹಂಸ ಯೋಗಾನಂದರೆಂಬ ಸಾಧುಗಳು ಬರೆದ ಜೀವನ ಚರಿತ್ರೆಯಲ್ಲಿ ಐವತ್ತಾರು ವರ್ಷ ಉಣದೆಯೂ ಆರೋಗ್ಯಕರವಾಗಿ ಬದುಕಿರುವ ಗಿರಿಬಾಲೆ ಎಂಬೊಬ್ಬ ಮಹಿಳೆಯ ಪ್ರಸ್ತಾಪ ಪಟಂದಿರುವುದು ಆಗಿರಿಬಾಲೆಯ ಕತೆ ಇದು: ಸಾಧುಗಳು ಬಂಗಾಳದ ಪುರುಲಿಯಾ ಹಳ್ಳಿಯಲ್ಲಿರುವ ಆಕೆಯ ಅಣ್ಣ ಲಂಬೋದರ ದೇಯವರ ಮನೆಗೆ ಹೋಗಿ ಆಕೆಯನ್ನು ಕಂಡರಂತೆ. ಅಣ್ಣನ ನ್ನು ವಿಚಾರಿಸಿದಾಗ ಒಮ್ಮೊಮ್ಮೆ ತನ್ನ ಮನೆಯಲ್ಲಿಯೂ, ಮತ್ತೆ ಕೆಲವು ಸಲ ಬಿಯೂರಿನ ತನ್ನ ಸಂಬಂಧಿಕರಲ್ಲಿಯೂ ಗಿರಿಬಾಲೆ ವಾಸಿಸುವಳೆಂಬುದು ಕಂಡು ಬಂತು. ಈಗ್ಗೆ ಐವತ್ತು ವರ್ಷಗಳಿಂದ ತಂಗಿ ಒಂದೇ ಒಂದು ದಿನ ಅನ್ನದ ಅಗಳು ಬಾಯಿಗಿಟ್ಟುದನ್ನು ಲಂಬೋದರ ದೇಯವರು ನೋಡಲಿಲ್ಲವಂತೆ. ಗಿರಿಬಾಲೆಯ ಯೋಗಕ್ಕೆ, ವಿಕಾಂತ ಸ್ಥಳದ ಅವಶ್ಯಕತೆ ಇಲ್ಲ. ಆಸುಪಾಸಿನವರೆಲ್ಲ ಆಕೆ ಒಂದು ವಿಚಿತ್ರ ವ್ಯಕ್ತಿ ಎಂಬುದು ಗೊತ್ತಿದೆ.

ಸಾಧುಗಳು ಬಿಯೂರಿಗೆ ತೆರಳಿದರು. ಗಿರಿ ಮುಟ್ಟಿದರು. ಬಿಯೂರು ಕಾನನಾಂತರದ ಒಂದು ಗ್ರಾಮ. ಬಾಂಕುರಾ ಜಿಲ್ಲೆಯಲ್ಲಿದೆ. ಅವರು ಹೋದಾಗ ಗಿರಿಬಾಲೆ ಸಾಯಂಮಜಿ ಉಟ್ಟಿದ್ದಳು. ಮುಖದಲ್ಲಿ ಗಂಭೀರ್ಯ,ಶಾಂತಿಯೂ ಅದ ವರ್ಚಸ್ವಿದ್ದಿತು. ವಿಹಿಕ ಸುಖವನ್ನು ತ್ಯಜಿಸಿ, ಪಾರಾರ್ಥಿಕ ಕ್ಷೇಮವನ್ನೂ ಆತ್ಮವನ್ನೂ ಗಳಿಸಿಕೊಂಡ ಕಳೆ ಮುಖದಲ್ಲಿ ಖಂಡತವಾಗಿಯೂ ನಲಿದಾಡುತ್ತಿತ್ತು. "ನಿಮಗ್ಕೂ ಉಣ್ಣುವುದಿಲ್ಲನೆ?" ಎಂದು ಸ್ವಾಮಿಜಿ ಕೇಳಿದಾಗ ಆಕೆ "ಹನ್ನೆರಡು ವರ್ಷ ನಾಲ್ಕು ತಿಂಗಳಿದ್ದಾಗಿನಿಂದ ಈಗಿನ ವರೆಗೆ (68 ವರ್ಷ ಈಗ) — ಒಟ್ಟು 56 ವರ್ಷ— ಊಟಮಾಡಲೂ ಇಲ್ಲ, ದ್ರವಗಳನ್ನು ಸ್ವೀಕರಿಸಲೂ ಇಲ್ಲ.....ಈ ಕಾಡುಗಳ ವಾಯುವೇ ನಾನು ಹುಟ್ಟಿ ಬೆಳೆದೆ. ಬಾಲ್ಯದಲ್ಲಿ ವಿಶೇಷ ಘಟನೆ ವಿನೂ ನಡೆಯಲಿಲ್ಲ. ಹೂಂ, ಒಂದು ವಿಷಯ—ನನಗಾಗ ಅತಿರೇಕ ಹಸಿವು ಬಾಧಿಸುತ್ತಿತ್ತು ನನ್ನ ತಾಯಿ ಆಗಾಗ ಮೂಗೂ, ಹೊಟ್ಟೆ ಕಟ್ಟಿಕೊಳ್ಳುವುದನ್ನು ಕಲಿ. ಗಂಡನ ಮನೆಯಲ್ಲಿಯೂ ಹೀಗೆ ಮಾಡಿದರೆ ಹೇಗಾದೀತು? ಎನ್ನುತ್ತಿದ್ದಳು. ಗಿರಿಬಾಲೆ ಗಂಡನ ಮನೆಗೆ ಹೋದಾಗ ಅವಳ ಅತ್ತೆ ಹಗಲು ರಾತ್ರಿ ಅನಲ ಹೊಟ್ಟಿಬಾಕತನವನ್ನು ಜಪಿಯಿಸುತ್ತಿದ್ದಳು. ಅವಳ ಬೈಗಳಿಗು ಗಿರಿಬಾಲೆಯು ಮಟ್ಟಿಗೆ ಆಶೀರ್ವಾದ ರೂಪಾಗಿ ಪರಿಣಮಿಸಿದುವು. ಸುಮ್ಮವಾದ ಆತ್ಮತೇಜವನ್ನು ಅವು ಕೆಣಕಿ ಎಬ್ಬಿಸಿದುವು ಒಂದು ದಿನ ಬೆಳಗ ಬೇಸರ ಬಂದು "ಇನ್ನೆನ್ನ ನಾನು ಅನ್ನ ಮುಟ್ಟುವುದಿಲ್ಲ"ಎಂದಾಕೆ ಆತ್ಮಕ್ಕೆ ತಿಳಿಸಿದಳು. ಅನುಸಮಯಾದ ಸ್ಥೈರ್ಯದಿಂದ ಹನ್ನೆರಡನೆವರ್ಷ ವಯಸ್ಸಿನ ಬಾಲೆ ಭಗವಂತನನ್ನು ಪ್ರಾರ್ಥಿಸಿಕೊಂಡಳು. "ಜೀವರೇ,ಅನ್ನ ವಿಲ್ಲದೆ ಬರೇ ನಿನ್ನ ನೆರವಿನಿಂದ,ತೇಜಸ್ಸಿನಿಂದ ಬದುಕುವ ಮೊಗವನ್ನು ತೋರಿಸಲು ನನಗೊಂಬ ಗುರುವನ್ನು ದಯಪಾಲಿಸು" ಎಂಬುದು ಆಕೆಯ ಆನುದಿನದ ಪಲ್ಲವಿಯಾಗಿತ್ತು. ಮೈಮೇಲೆ ಆವೇಶ ಬಂದವರಂತೆ ಒಂದು ದಿನ ಗಂಗಾನದಿಯ ನಡುಪಾಗಂಜ ಘಾಟಿಗೆ ಗಿರಿಬಾಲೆ ತೆರಳಿದಳು. ಘಾಯಮ್ಮಲ್ಲಿ ನಿಕ್ಕ ತನ್ನ ಮಾನವನುನೆಯ ಪುರೋಹಿತನ ಸತ್ತಿರುವುದರ ಬದ-ಆಲೆಯಿತು! ಎಂದು ವಿಚಾರಿಸಿದಳು. ಪುರೋಹಿತನು ಆಕೆಯನ್ನು ದೇವಾಲಯಕ್ಕೆ ಬರಹೇಳಿದನು. ಗಂಗೆಯಲ್ಲಿ ಮಿಂಬು ಬಿಚಿಭೂತಿಯಾಗಿ ದೇವಾಲಯಕ್ಕೆ ಬಂದಾಗ ಅವಳ ಪ್ರಾರ್ಥನೆಯ ಗುರು ಆಕೆಯ ಮುಂದೆ ಅವಿರ್ಭವಿಸಿ "ಈ ಹೊತ್ತಿನಿಂದ ನಿನ್ನ ದೇಹಕ್ಕೆ ಸ್ವರ್ಗೀಯ ಬೆಳಕು ಅಶಪೋಷಿಯುವುದು. ನಿನ್ನ ಶರೀರದ ಅಣುಗಳಿಗೆ ಅನಂತ ಪ್ರಾಣಶಕ್ತಿಯಿಂದ ಶಕ್ತಿಯೊದಗುವುದು" ಎಂದು ಆಶ್ವಾಸನೆಕೊಟ್ಟನು. ಆ ಮೇಲೆ ಇದನ್ನು ಸಿದ್ಧಿಸಿದ ಕ್ರಿಯಾಯೋಗವನ್ನೂ ಕಲಿಸಿದನು ಮಂತ್ರ ಒಂದು, ಆಚೆಲೆ ಸಾಮಾನ್ಯರಿಗೆ ಸಾಧ್ಯವಾಗದ ಒಂದುಬಗೆಯ ಪ್ರಾಣಾಯಾಮ—ಅನ್ನೇ ನರಳ ಕಾರ್ಯಕ್ರಮದಲ್ಲಿ ಊಟದ ಪಾತ್ರ ಬಿಟ್ಟುಬೋಯಿತು. ದೇವಸ್ಥಾನಕ್ಕೆ ಬಂದಳು ಕಾಣಿಕೆ—ಒಂದಲ್ಲ ಎಂಡಿಸಿ, —ಏನನ್ನಿತ್ತರು ವರುಷ!

ಗಿರಿಬಾಲೆ ಆತ್ಮಸ್ಥಿತಿಯಲ್ಲಿ ಜೀವಿಸಿದ್ದಿ. ಮನುಷ್ಯನಿಗೆ ಸಹಜವಾದ ಲೌಕಿಕ ಬೇಕುಗಳು ಆಕೆಗಿಲ್ಲ. ಏನಾದೂ ಗಾಯವಾದರೆ ಕೊಂಚ ಮಾತ್ರ ನೋವು. ಜ್ವರವಾದಾಗ ಶ್ವಾಸೋಚ್ವಾಸವನ್ನೂ, ಹೃತ್ಕಮಲವನ್ನೂ ಗಿರಿಬಾಲೆ ನಿಯಂತ್ರಿಸಬಲ್ಲಳು. ಕನಸಿನಲ್ಲಿ ಆಕೆಯು ಗುರುವು ಇವರು ಮಹಾತ್ಮ ಆತ್ಮಗಳು ಆಕೆಗೆ ಗೋಚರವಾಗುವುವು. ಆದರೆ ಈ ನಿರಪೇಕ್ಷತೆಯನ್ನು ಇತರರಿಗೆ ಅರ್ಥವಾಗುವಂತೆ ಮಾಡಿ ವ್ಯಕ್ತಪಡಿಸುವುದರಿಂದ ಲೋಕದ ಜನರಿಗೆ ಉಪಯೋಗವಿಲ್ಲವಾಗಿದೆ.

ಇದು ತಕ್ಕಮಟ್ಟಿಗೆ ಸಾಮಾನ್ಯರಿಗೆ ಸಾಧ್ಯವಾಗುವ ಮಹಾಯಾಜ್ಞ ವಿಶೇಷವಾಗಿ ಆಕೆಯು ತನ್ನ ಆಯುಷ್ಯವನ್ನು ಕೊಕ್ಕನಿಯಲ್ಲಿ ಎಷ್ಟು ತಿಂಗಳ ಕಾಲ ಬಯಸಿದ್ದಳೆಂದೂ ತಿಳಿದಿಲ್ಲ. ಆಕೆಗೆ ಇನ್ನೂರಕ್ಕೆ ನಿಮಿಷ ಸಾಧ್ಯವಾಗಿದ್ದಿತ್ತೆಂದೂ ತಿಳಿದಿದೆ.

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ—ಉದರಶೂಲೆ, ಕಟಿಶೂಲೆ, ಸೈಜಿಗೆಗಳಲ್ಲಿ ನೋವು, ಜಡತೆ, ಅಜೀರ್ಣ, ಸೊಪ್ಪೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ವೈಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಜಿ.)

ಪೋ॥ ಕುಂಜಾಲು, ದ. ಕ.

ಇವರ 'ಧನ್ವಂತರೀ ಮಾತ್ರೆ'ಗಳು ಮಾತ್ರ.

ಕೇವಲ ನಾಲ್ಕಾಣೆಯ ಅಂಚೆಚೀಟಿನ್ನು ಕಳುಹಿಸಿ ಉರು ಮಾತ್ರೆಗಳ ಒಂದು ಪ್ಯಾಕೇಟಿನ್ನು ಪಡೆದು ಅದರ ಔಷಧೀಯ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.



Approved from by the Govt. of Mysore
Certified by the Agent of the Govt. of Cylon & India.

ಸರಕಾರಿ ಬುನಾದಿಶಿಕ್ಷಣ ತರಬೇತಿ ಶಾಲೆ ಮಂಗಳೂರು—ಇದರ ವಾರ್ಷಿಕೋತ್ಸವವು ಇದೇ ತಾ 3ನೆ ಶನಿವಾರ ಸಂಜೆ ದಾ। ಯು. ಪಿ. ಮಲ್ಯ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು

ವಾರದ ಹರಟೆ

— ಶ್ರೀ. ಯುವ ಶಿ.

ಪ್ರಿಯ ನಾಚಕರೇ,

ಹಿಂದೂ ಕೋಡು ಮಸೂದೆಯ ಮುಖ್ಯ ಉದ್ದೇಶಗಳು: [1] ಒಬ್ಬ ಹಿಂದುವಿಗೆ ಪಿತ್ರಾರ್ಜಿತವಾಗಿ ಜೊರೆತ ಆಸ್ತಿ, ಆತ ಸ್ವಂತ ಸಂಪಾದಿಸಿದ ಆಸ್ತಿ ಇವೆರಡರಲ್ಲಿಯೂ ಸಂಪೂರ್ಣ ಅಧಿಕಾರ ಅಂದರೆ ಅಡವು, ಕ್ರಯ, ಪೀಲುಮೂಲಕ ಪರಾಧೀನ ಮಾಡುವ ನಿರಾಕಂಕವಾದ ಸಂಪೂರ್ಣ ಅಧಿಕಾರವಿರಬೇಕ್ಕು. [2] ಒಬ್ಬ ಹಿಂದುವಿನ ಆಸ್ತಿಯಲ್ಲಿ ಅವನ ಎಲ್ಲಾ ಮಕ್ಕಳಿಗೆ ಅಂದರೆ ಗಂಡು ಹೆಣ್ಣು ಎಂಬ ಭೇದವಿಲ್ಲದೆ ಎಲ್ಲರಿಗೂ ಸರಿಸಮಾನವಾದ ಪಾಲು ದೊರೆಯಬೇಕು ಇವೇ ಎರಡು ಎಂಬುದನ್ನು ಹಿಂದಿನ ಹರಟೆಯಲ್ಲಿ ವಿವರಿಸಿದ್ದೆ. ಈ ಮಸೂದೆ ಕಾನೂನಾದರೆ ಹಿಂದುಗಳ ನಿತ್ಯಜೀವನದಲ್ಲಿ ಯಾವ್ಯಾವ ಬದಲಾವಣೆಗಳಾಗಬಹುದು ಎಂಬ ವಿಷಯ ಈ ವಾರದ ಹರಟೆ ಹೊಡೆಯುವಾ.

ಈವರೆಗಿನ ಕ್ರಮದಂತೆ ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳಿಗೆ ಜನನ ಕಾಲದಿಂದಲೂ ಅಂದರೆ ತಾಯಿಯ ಗರ್ಭದಲ್ಲಿ ಜನಿಸಿದ ಕಾಲದಿಂದಲೂ ಹಕ್ಕು ಇದೆ. ನ್ಯಾಯವಾದ ಗಡಿಯಿಲ್ಲದೆ ಯಾವನಾದರೂ ತಂದೆಯ ಪಿತ್ರಾರ್ಜಿತ ಆಸ್ತಿಯನ್ನು ಅಡವು, ಕ್ರಯ ಇತ್ಯಾದಿ ರೂಪದಿಂದ ಪರಾಧೀನಮಾಡಲು ಅಶಾಸ್ತ್ರ ಇರಲಿಲ್ಲ. ಹಾಗೆ ಮಾಡಿದನೆಂತಾದರೆ ಅದನ್ನು ಪ್ರಾಯಭ್ರಷ್ಟನಾದ ಕೂಡಲೇ ದಾವೆಹೂಡಿ ರದ್ದುಪಡಿಸಲಿಕ್ಕೆ ಮಗನಿಗೆ ಹಕ್ಕು ಇದೆ. ಧನಿಕನ ಮಗನು ಪಿತ್ರಾರ್ಜಿತ ಆಸ್ತಿಯ ಮಟ್ಟಿಗೆ ಆಜನ್ಮ ಧನಿಕನಾಗಿದ್ದಾನೆ. ಮಗನಿಗೆ ೧೮ ವರುಷ ಪ್ರಾಯ ಬಂದೊಡನೆಯೇ ತನ್ನ ಪಾಲನ್ನು ತಂದೆಯಿಂದ ಕೇಳಲೂ, ಕೊಡದಿದ್ದರೆ ಅದಕ್ಕಾಗಿ ವ್ಯಾಜ್ಯ ಹೂಡಲೂ ಸಾಧ್ಯವಿದೆ. ಪ್ರಾಯಪ್ರಬುದ್ಧನಾದ ಕೂಡಲೇ ಈ ಬಂಧಕ್ಕೆ ಅಹಿತವಾಗಿತಂದೆ ಮಾಡಿದ್ದ ಪರಾಧೀನತ್ವವನ್ನು ರದ್ದುಪಡಿಸಲು ಮಗನಿಗೆ ಸಾಧ್ಯವಿದೆ. ಈ ಮಸೂದೆ ಕಾನೂನಾದರೆ ಪಿತ್ರಾರ್ಜಿತವಾಗಿ ದೊರೆತ ಆಸ್ತಿಯನ್ನು ತಂದೆಯು ತನ್ನ ಸ್ವಚ್ಛಿತದಂತೆಯೇ ಅತನ ಇಚ್ಛಾನುಸಾರ ಪರಾಧೀನ ಮಾಡಿದರೆ ಮಗನಿಗೆ ಯಾವ ವಿಧದಿಂದಲೂ ಅಕ್ಷೇಪ ಹೇಳುವ ಹಕ್ಕು ಇಲ್ಲವೆಂದು ಹೇಳಿದೆನಲ್ಲವೇ? ಕಾನೂನಿನಲ್ಲಿ ಈ ರೀತಿ ಬದಲಾವಣೆಯಾದರೆ ಧನಿಕನ ಮಗನನ್ನು ಧನಿಕನೆಂದು ಹೇಳಲು ಸಾಧ್ಯವಿಲ್ಲ. ಧನಿಕನ ಮಗನೆಂದೆನಿಸಿ ಇತರರು ಅವನಿಗೆ ಸಾಲಕೊಟ್ಟರೆ ಅದನ್ನು ಅವನಿಂದ ವಸೂಲು ಮಾಡಲು ಕಷ್ಟವಿದೆ. ಧನಿಕನ ಮಗನೆಂದೆನಿಸಿ ಅವನಿಗೆ ಹೆಣ್ಣು ಕೊಡುವುದೂ ಧೈರ್ಯವಲ್ಲ. ಅವನು ತಂದೆಯ ಅವಸಾನದ ವರೆಗೆ ತಂದೆಗೆ ಅನಾಪೃತನಾಗಿ ನಡೆದುಕೊಂಡು ಬಂದು ತಂದೆಯ ಪ್ರೀತಿಗೆ ಪಾತ್ರನಾಗಿದ್ದರೆ ತಂದೆಯು ತನ್ನ ಆಸ್ತಿಯಲ್ಲಿ ಅವನಿಗೂ ಅಂಶ ಕೊಟ್ಟಾನೇ ವಿನಾ ತಂದೆಯ ವಾತಾಪಿಗೆ ವಿರೋಧವಾಗಿ ತನ್ನ ಸ್ವಇಚ್ಛೆಯಂತೆ ನಡೆದರೆ ಮಗನಿಗೆ ಯಾವ ಪ್ರಯೋಜನವೂ ಸಿಕ್ಕಲಾರದು. ಇದರಿಂದಾಗಿ ತಂದೆಯ ಮೇಲೆ ಮಕ್ಕಳಿಗೆ ಹೆಚ್ಚಿನ ಭಯಭಕ್ತಿ, ವಿಶ್ವಾಸ ಉಂಟಾಗುವುದು. ತಂದೆಯು ತನ್ನ ಅವಸಾನದ ವರೆಗೂ ತನ್ನ ಮಕ್ಕಳನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವುದು ಸಾಧ್ಯವಾಗುವುದು. ಧನಿಕನ ಮಗನಾದರೂ ಅವನ ತಂದೆಯು ಕ್ರೋಧಕ್ಕೆ ಬಳಗಾಗಿ ಸರ್ವಸ್ವವನ್ನು ಎಂದು ಕಳೆದುಕೊಳ್ಳುವನೋ ಎಂಬ ಭಯವಿರುವುದು. ಇದರಿಂದಾಗಿ ದೊಡ್ಡಮಕ್ಕಳೊಳಗಿನವಾತ್ಸಲ್ಯವು ಇನ್ನಷ್ಟು ಹೆಚ್ಚುವುದು. ತಂದೆತಾಯಿಗಳನ್ನು ವೃದ್ಧಾಪ್ಯದಲ್ಲಿ ಮಕ್ಕಳು ನಿರ್ಲಕ್ಷಿಸುವುದನ್ನು ನಾವು ಈಗ ಅಲ್ಲಲ್ಲಿ ನೋಡುತ್ತಿದ್ದೇವೆ. ಅದು ಇನ್ನು ಮುಂದೆ ಇರಲಾರದು. ತಂದೆಯು ಆಸ್ತಿಯನ್ನು ಅಪೇಕ್ಷಿಸುವ ಮಕ್ಕಳಾರೂ ತಂದೆತಾಯಿಗಳ ಕೂಡೆ ನಿಷ್ಕಾರಣವಾಡಲಾರರು. ಇನ್ನು ಧನಿಕನ ಮಗನೆಂದು ನಂಬಿ ಅವನಿಗೆ ಯಾರೂ ಹೆಣ್ಣು ಕೊಡಲಾರರು ಎಂದೆನಲ್ಲ. ಸ್ವಂತ ಸಂಪಾದನೆ ಮಾಡಿ ಸಂಸಾರ ನಡೆಯಿಸ್ಯಾನು ಎಂದು ನಂಬಿಕೆಯಿರುವುದಾದರೆ ಮಾತ್ರ ಹೆಣ್ಣು ಸಿಕ್ಕಿತೇ ವಿನಾ ಹಿರಿಯರು ಧನಿಕರು ಎಂದು ಎಣಿಸಿ ಹುಡುಗಿ ಕೊಟ್ಟಿರೆ ಗಂಡಾಂತರವಲ್ಲವೇನು? ಹುಡುಗನಾದರೂ ತಾನು ಧನಿಕನ ಮಗನೆಂಬ ಧೈರ್ಯದಿಂದ ಸ್ವಂತ ಸಂಪಾದನೆಯ ದಾರಿಯಾವುದೂ ಇಲ್ಲದೆ ಸಣ್ಣ ವ್ಯಾಯದಲ್ಲೇ ಮದುವೆ ಮಾಡಿಕೊಳ್ಳಲು ಜೆದರಬೇಕಾಗುವುದು ಇದರಿಂದ ಮದುವೆಗೆ ಹುಡುಗರೂ ಅಥವಾ ಹುಡುಗಿಯರು ಸಿಗುವುದು ಸ್ವಲ್ಪ ಕಷ್ಟವಾದೀತು ಎನ್ನುತ್ತೀರಾ? ಹೌದು. ಸ್ವಲ್ಪ ಕಷ್ಟವಾದೀತು. ಆದರೆ ಎರಡೂ ಕಡೆಯವರು ಸ್ವಲ್ಪ ಯೋಚಿಸಿ ವಿವಾಹ ಮಾಡಿಕೊಂಡರೆ ಆಂತಹ ದಾಂಪತ್ಯ ಜೀವನವು ಇನ್ನಷ್ಟು ಒಳ್ಳೆಯದಾದೀತು ಎಂದು ನಾನನ್ನುತ್ತೇನೆ. ದೇವರ ದಯೆಯಿಂದ ತನಗೆ ಪಿತ್ರಾರ್ಜಿತ ದ್ರವ್ಯ ಸಾಕಷ್ಟಿದೆ ತಾನೇಕೆ ಕಷ್ಟಪಟ್ಟು ಕಲಿಯಬೇಕು? ಸಂಪಾದನೆ ಮಾಡಬೇಕು? ಎಂಬ ದುರಾಭಿಮಾನ ಹೋದೀತು. ಪ್ರತಿಯೊಬ್ಬನೂ ಇನ್ನೊಬ್ಬರ ಹಂಗಿಲ್ಲದೆ ಜೀವನ ನಡೆಯಿಸುವುದಕ್ಕೆ ಅವಶ್ಯವಿರುವಷ್ಟು ವಿದ್ಯೆಯನ್ನು ಕಣ್ಣು ಪ್ರಾಯದಲ್ಲಿಯೇ ಸಂಪಾದಿಸುವನು. ಧನಿಕರ ಮಕ್ಕಳು, ಬಡವರ ಮಕ್ಕಳು ಎಂಬ ಭೇದಭಾವ ತನ್ನ ಸೃಷ್ಟಿಕ್ಕೆ ಮಾಯವಾಗುವುದು. ನನ್ನು ಜನರು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುವರು. ಇನ್ನಲ್ಲಿ ಸ್ವಾವಲಂಬನ, ಸ್ವಾಭಿಮಾನ ಹೆಚ್ಚುವುದು. ಸಮಾಜದ ಉದ್ಧಾರವಾಗುವುದು ಎಂದು ನಂಬಿಗೆಯಿದೆ.

ಹೆತ್ತವರ ಆಸ್ತಿಯು ಅವರ ಮರಣಾನಂತರ ೬ ಜನ ಎಲ್ಲಾ ಗಂಡು ಹೆಣ್ಣು ಮಕ್ಕಳಿಗೆ ಸರಿಸಮಾನವಾಗಿ ದೊರೆಯುತ್ತದೆ. ಎಂಬುದು ಕಾನೂನಾದರೆ ಏನಾಗುವುದು? ಎಲ್ಲಿ ನಾರಿಯರಿಗೆ ಪೂಜ್ಯತೆಯುಜೆಯೋ ಅಲ್ಲಿ ದೇವತೆಗಳು ರಮಿಸುವರು ಎಂದು ಹೇಳುತ್ತಾರೆ. ಒಂದು ದೇಶದ ನಾಗರಿಕತೆಯು ಎಷ್ಟಿದೆ ಎ ಬಂಡನ್ನು ಅಲ್ಲಿಯ ಸ್ತ್ರೀಯರಿಗಿರುವ ಸ್ವಾತಂತ್ರ್ಯವನ್ನು ನೋಡಿ ಯೇಳಬಹುದು. ಎಂಬ ನಡನೂ ಇವೇ ಈ ರೀತಿಯಿಂದ ಪರಿಶೋಧಿಸಿದರೆ ನಮ್ಮ ಹಿಂದುಗಳು ನಾಗರಿಕತೆಯಲ್ಲಿ ಕೊಟ್ಟಕೊನೆಯಲ್ಲಿ ಸಾಧ್ಯವಿಲ್ಲ ಏಕೆಂದರೆ ಸ್ತ್ರೀಯರು ದೈನ್ಯವನ್ನು ಹೊಂದಲು ಮತ್ತು ಅನುಭವಿಸಲು ಆನರ್ಹರು ಮತ್ತು ಅಸಮರ್ಥರು ಎಂಬುದೇ ನಮ್ಮ ಪೂರ್ವಿಕರ ಮತ. ಇದರ ಪರಿಣಾಮವಾಗಿ ಸ್ತ್ರೀಯರಿಗೆ ಪೂಜ್ಯತೆಯ ಬದಲಿಗೆ ಎಲ್ಲಾಕಡೆಗಳಲ್ಲಿಯೂ ಹಳ್ಳು ಸ್ವಾತಂತ್ರ್ಯ ಪೂಜ್ಯವಾಗಿದೆ ಹೆತ್ತವರ ಮನೆಯಲ್ಲಿ ಗಂಡ ಜೀವಂತನಾಗಿರುವಷ್ಟು ಕಾಲ ಅವನ ಆಶ್ರಯದಲ್ಲಿ ಇರಬಹುದು ದಿನ್ನ. ಗಂಡ ಮೃತನಾದನೆಂದರೆ ಅವನ ಸಹೋದರರು ಅಲ್ಲಿಂದಲೂ ಅವಳನ್ನು ಹೊರಡಿಸುತ್ತಾರೆ ಗಂಡು ಮಕ್ಕಳಿದ್ದರೆ ಅವರನ್ನು ಅಶ್ರಯಿಸಿ ಇರಬಹುದು ನಿಜ. ಅವರಿಗೂ ಮದುವೆಯಾಯಿತೆಂದರೆ ಅನಂತರ ಸೊಯಂದಿರ ಒಟ್ಟಿಗೆ ಜೀವಿಸುವುದೂ ಪ್ರಯಾಸವಿದೆ. ಹೀಗಾಗಿ ಸ್ತ್ರೀಯಂ ಪಾಡು ಗುಡ್ಡು ಜನ್ಮವೆ ಸಾಕು ಎನಕಂಡು ಮರೆಯಿರೋಣ ಎಂದು ಸೀತಾದೇವಿ ಮಂದಗಿದಂತೆ ಒಂಥ ಕಷ್ಟದ್ದೊಂಬುದರಲ್ಲಿ ಸಂದೇಹವಿಲ್ಲ. ಸ್ತ್ರೀಯರ ಆಸ್ತಿ ಇಷ್ಟು ಕಷ್ಟಸ್ಥಿತಿಗೆ ಹೇಗೆಬಂತು? ಪುರುಷಪಂತ ಸ್ತ್ರೀಯರಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಸರಿಸಮಾನವಾದ ಹಕ್ಕು ಎಂತಿದ್ದರೆ ಈ ಸ್ಥಿತಿ ಬರುತ್ತಿತಲಿಲ್ಲ. ಇದನ್ನು ತಿಳಿದುಕೊಳ್ಳಲಿಕ್ಕೆ ನಮ್ಮಲ್ಲಿ ಕಷ್ಟವಿಲ್ಲ. ನಮ್ಮ ಅಳಿಯಕಟ್ಟಿನ ಸ್ತ್ರೀಯರ ಸ್ಥಿತಿ ನಿಜವಾಗಿಯೂ ಎಷ್ಟೋ ಸುಧಾರಿಸಿದೆ ಅನುಕೂಲತೆಯಿರುವವರಿಗೆ ಎಲ್ಲೆಡೆಯಲ್ಲಿಯೂ ಗೌರವದೊರೆಯುತ್ತದೆ. ಏನೂಂದೂ ಅನುಕೂಲವಿಲ್ಲದ ಒಬ್ಬನನ್ನಷ್ಟಿದ್ದರೆ ಇನ್ನೊಬ್ಬನನ್ನು ಅಶ್ರಯಿಸಿಕೊಂಡೇ ಜೀವಿಸಬೇಕೆಂದಾದರೆ ಅಂತ ವರನ್ನು ಯಾರು ಗೌರವಿಸುವರು? ಅಳಿಯ ಸಂತಾನದ ಸ್ತ್ರೀಗೆಸಾಕಷ್ಟುಅಧಿಕಾರ ಗೌರವವಿದೆ. ಗೌರವಿಸಿಗಬೇಕಾದರೆ ಹೆತ್ತವರು ಮಾಡಿಟ್ಟರುವ ಆಸ್ತಿಯಲ್ಲಿ ಹುಡುಗಿಯರಿಗೆ ಹುಡುಗರಷ್ಟು ಸರಿಸಮಾನವಾದ ಹಕ್ಕು ದೊರೆಯಬೇಕೆಂದು ತಿಳಿದು ನಮ್ಮ ಧುರೀಣರು ಕಾನೂನು ದುರಸ್ತಿಮಾಡಬೇಕೆಂದು ಹೇಳಿದರೆ ನಮ್ಮ ಸನಾತನಿಗಳು ಮೂಗು ಮುರಿದು ಕೊಳ್ಳುವುದೇಕೆ? ಈ ಮಸೂದೆಯು ಕಾನೂನಾದರೆ ನಮ್ಮ ಧರ್ಮವೇ ನಾಶವಾಗುವುದೆಂದು ಜಾರುವುದೇಕೆ? ಮೊದಲು ಇವರೇ ಗಂಡಸತ್ತ ಸ್ತ್ರೀಯನ್ನು ಗಂಡನ ಚಿತೆಯೊಂದಿಗೆ ಕಳ್ಪದಲ್ಲಿ ಒತ್ತಿಟ್ಟು ಸುಡಿಬೇಕೆಂದು ಹೇಳಿಲಿಲ್ಲವೇ? ಗಂಡಸತ್ತಕೂಡಲೇ ಸ್ತ್ರೀಯ ತಲೆ ಬೋಳಿಸಿ ಕೆಂಪುವಸ್ತ್ರ ಉಡಿಸಬೇಕೆಂದು ಹೇಳಿದವರೂ ಇವರೇ. ಅವಳಿಗೆ ಸಾಕಷ್ಟು ಅನ್ನ ಬಟ್ಟೆಯ ವ್ಯವಸ್ಥೆಯೂ ಬೇಡವೆಂದವರೂ ಇವರೇ! ಯಾವಾಗಲೂ ಅವಳು ಇತರರನ್ನು ಆಶ್ರಯಿಸಿರಬೇಕೆಂದು ವಿಧಿಸಿದ ಪುಣ್ಯಾತ್ಮರು ಇವರೇ. ಇಂತಹವರಿ ಕೂಸಿಗೆ ನಮ್ಮ ಎವರ್, ಪಿ. ಗಳು ತಮಿಸೊತವೆ ಹೆತ್ತವರಿಗೆ ಎಲ್ಲಿ ಮುಕ್ಕಳ ಮೇಲೂ ಒಂದೇ ರೀತಿಯ ಪ್ರೇಮವಿರಬೇಕೆಂದು ರೀತಿ ಕಾನೂನು ಮಾಡುವಾಗ ನಾವು ಸಮರ್ಥಿಸಬೇಡವೇ?

ಇನ್ನು ನಮ್ಮ ಅಳಿಯ ಕಟ್ಟಿನ ಗಂಡಸರ ವಿಚಾರ. ಅಳಿಯಕಟ್ಟಿನ ಗಂಡಸಿಗೆ ಕುಟುಂಬದ ಆಸ್ತಿಯಲ್ಲಿ ಜೀವಪೂರ್ತನದವರೆಗಿನ ಮೂಕ್ರಹಕ್ಕು ಇರಬೇಕೆಂದು ಅಳಿಯ ಸಂತಾನದ ಸನಾತನಿಗಳ ಸಾಧನೆ. ಕುಟುಂಬದ ಆಸ್ತಿಯಲ್ಲಿ ಪಾಲುಕೇಳುವ ಹಕ್ಕು ಪಾಲು ಪಡೆದು ಅದನ್ನು ನಿರಾತಂಕವಾಗಿ ಅನುಭವಿಸುವ ಹಕ್ಕು ಅವಶ್ಯವಿದ್ದರೆ ಅದನ್ನು ಅಡವು ಕ್ರಯ ಇತ್ಯಾದಿ ಕ್ರಮದಿಂದ ಪರಾಧೀನ ಮಾಡುವ ಹಕ್ಕು ಇಲ್ಲದಿದ್ದರೆ ಅಂತವನನ್ನು ಯಾರು ನಂಬುವರು? ಅವನಿಗೆ ಅವಶ್ಯವಿರುವಾಗ ಯಾರು ಸಾಲಕೊಡುವರು? ಅವನು ಸಮಾಜದಲ್ಲಿ ಎಷ್ಟು ಗೌರವ ಪಡೆದಾನು? ಅವನು ಯಾವ ಸ್ವತಂತ್ರ ವ್ಯಾಪಾರ ನಡೆಯಿಸಿಕೊಂಡು ಧನಾರ್ಜನೆ ಮಾಡ್ಯಾನು ಅವನನ್ನು ಯಾರು ಅಶ್ರಯಿಸಿಕೊಂಡು ಇದ್ದಾರು? ಅಳಿಯ ಸಂತಾನದ ಗಂಡಸರಿಗೆ ಹಿಂಗಸರಂತೆಯೇ ಸರಿಸಮಾನವಾದ ಹಕ್ಕು ಸಿಗಬೇಕೆಂದು ಕೇಳುವಾಗ ಅದಕ್ಕೆ ಅಡ್ಡಿ ಮಾಡುವನವರು ಯಾವ ನ್ಯಾಯವಾದಿಗಳು? ಸರಿಸಮಾನತೆಯೇ ನ್ಯಾಯ. ನ್ಯಾಯವೇ ಸರಿಸಮಾನತೆ. ಇದು ಸ್ವಸ್ಥ ವಲ್ಲವೇನು?

ಬರುವ ವಾರ ಬೇರೆ ವಿಚಾರ, ನಮಸ್ಕಾರ.

ಪ್ರೇಕ್ಷಿಯರಲಿ.

ಮುತ್ತುಸ್ರಾವ ನಿಂತಿತು

'ಕಮಲಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಿವಸ್ಸು ಮುತ್ತುಸ್ರಾವವಾಗುವುದು. ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಕೀಲ್ವ ಗುಣವಿರುವುದಿಲ್ಲ ಹುದು, ಯಾವ ಬಾಧೆಯೂಯಿಲ್ಲ. ಸಾವಿರಾರು ಮಂದಿಗೆ ಪಾತ್ರ ಗುಣವಾಗಿದೆ— ಬೆಲೆ: ರೂ. 3-; ಸ್ಪೆಶ್ಯಲ್ ರೂ. 5. ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

MRS P. DEVEE, F. DS (N. J.)
Tollygunge CALCUTTA.
ಸ್ವಾತಿಸ್ವರು ಶಹರಕಂಪನಿ, ಮಂಗಳೂರು

ಅಮೃತಾಂಜನ

ತಲೆವೇದನೆ, ಶಿರೋನೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಸ್ನಾಯುಗಳು, ಬಾತುಕೊಳ್ಳುವುದು, ಚೇಳುವಿಷನುಂಡಾಗವು, ಪಕ್ಷವಾತ, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮುದ್ದು ನಮ್ಮಲ್ಲಿ ನಿಶ್ಯುಲ್ಕದೆ

ಅಮೃತಾಂಜನ ಲಿಮಿಟೆಡ್
ಮದರಾಸು.

ಬೊಂಬಾಯಿ ಮುಖ್ಯ ಕಛೇರಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೫ ದಿವಸಗಳಲ್ಲಿ ಈ ರೋಗ ಗುಜ ಜೊಂದುನದು ಗ್ಯಾರಂಟೀ

ಕರೀರದಿಂದ ಸೀಸ್ತೆ ಬರುತ್ತಿದ್ದರೆ, ಭೋಗರಕ್ಕೆ ಹರದೀ ಡಾಗು ಹತ್ತುತ್ತಿದ್ದರೆ, ಕರೀರವೆಂದ ಬಾವ್ತ ಕರೀರದ ಮೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಶೆಳೆಯವಾಗಿದ್ದರೆ, ..ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಬು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರು, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯ್ತವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕ ಟ್ಯೂ ಗರ್ವಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಾಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ನೊದೆ ವಿವಸ ಮಾತ್ರವ ಮುಂಜಾನೆ ೪ ಗುಂಜಿ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಿಗ್ಗೆ ಒಂದೇ ಸಾರೆ ೬ ದಿವಸ ಸೇವಿಸಬೇಕು. ಈ ಔಷಧವನ್ನು ಚೀಸಿಗೆಯಲ್ಲಿ ಹುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿಗೆ ೧೮ ಕ್ಕೆ ೬ರೂ. ಪೋಸ್ಟೆ ಚಾರ್ಜ ೧ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಿಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ.

ಸ್ವೀಕಾರ-ವಿಮರ್ಶೆ

೨ ಯೋಗಕ್ಷೇಮ (ಕನ್ನಡ ಮಾಸಪತ್ರಿಕೆ) ಸಂಪುಟ ೧ ಸಂಖ್ಯೆ ೧. ಸಂಪಾದಕರು ಡಾ. ಟಿ.ವಿಶ್ವನಾಥ ರಾಯರು. ಯೋಗಕ್ಷೇಮ ಕಾರ್ಯಾಲಯ ಬಳ್ಳಾರಿ. ವಾರ್ಷಿಕ ಚಂದಾ ರೂ. ೩-೦-೦ ಬಿಡಿ ಸಂಚಿಕೆ ೦-೪-೦

ಆರೋಗ್ಯ ವೈದ್ಯಸಾಯ ಮನರಂಜನೆಗಳಿಗೆ ಮೀಸಲಾದ ಪತ್ರಿಕೆ ಇದು. ಕನ್ನಡನಾಡಿನ ಜನತೆಯು ಯೋಗಕ್ಷೇಮವನ್ನು ವಿಚಾರಿಸುವ ಕಾರ್ಯವನ್ನು ಸದಾ ಮಾಡುತ್ತಲಿರಲೆಂದು ಹಾರೈಸುತ್ತೇನೆ.

೨ ಹೆಣ್ಣುಕಾಯಿ (ಕವಿತಾ ಸಂಗ್ರಹ) ಪ್ರೇಕ್ಷಕರು: 'ಪ್ರಭುಕ' ಅನಾಥ ಸೇವಾಶ್ರಮ ಮಲ್ಲಾಡಿಹಳ್ಳಿ ಪೋಸ್ಟ್, ಹೊಳಲ್ಕೆರೆ ತಾಲೂಕು, ಬೆಲೆ ರೂ. ೧—೦—೦

ಹಣ್ಣುಕಾಯಿ ಮೂರುಬಗೆಯಲ್ಲಿ ಹೆಸರಿಯಲಾದ ಕವಿತಾಸಂಗ್ರಹ. ಮೊದಲನೆಯ ಭಾಗದಲ್ಲಿ ಆಧುನಿಕ ಕವಿತೆಗಳಿವೆ. ಅವುಗಳಲ್ಲಿ ಗೋರಿ, ವಿಧವೆ, ಬುತ್ತಿ, ದಾನದ ಸಂತೆ ಮುಂತಾದವು ಉತ್ತಮ ಕವಿತೆಗಳು. ಎರಡನೆಯ ಭಾಗದಲ್ಲಿ ಕ್ರೀಡಾರಂಗದ ಕವಿತೆಗಳಿವೆ. ಇವು ಹೆಚ್ಚಾಗಿ ಕಾಲ್ಚಳಿ ಗೀತೆ (Marching Songs) ಗಳಾಗಿರುತ್ತವೆ. ಅವುಗಳಲ್ಲಿ 'ಹಳ್ಳಿಯ ಕೋಲು ಮೇಳಕ್ಕಾಗಿ' 'ಹೆಣ್ಣು ಮಕ್ಕಳ ಕೋಲು ಮೇಳಕ್ಕಾಗಿ' ಈ ಎರಡು ಕವಿತೆಗಳನ್ನು ಬಿಟ್ಟರೆ ಉಳಿದವು ಅಷ್ಟೊಂದು ಹೊಂದಿಕೆಯಾಗಿ ಬಂದಿರುವಂತಿಲ್ಲ. ಮೂರನೆಯ ಭಾಗದಲ್ಲಿ ದೇವರ ನಾಮ ಮತ್ತು ಭಾವಗೀತೆಗಳಿರುತ್ತವೆ. ಭಾವಗೀತೆಗಳು ಅತ್ಯಂತ ಹೃದಯ ಸ್ಪರ್ಶಿಗಳಾಗಿರುತ್ತವೆ.

೩ ಹಿಂದೂಕೋಡ್ ಮಸೂದೆ—(ಅದರ ಹಿನ್ನೆಲೆ ಹಾಗೂ ವಿವರಗಳು) ಲೇಖಕರು: ಶ್ರೀ ಐಡಿ ಶ್ರೀನಿವಾಸ, ಬಿ.ಎ (ಆನರ್ಸ್) ಪೂರ್ಣಿಮಾ ಪ್ರಕಾಶನ ಸರ್ದಾರ್ ಭವನ್ ನೈಗಾಂ ಕ್ರಾಸ್‌ರೋಡ್, ವಡಾಲಾ, ಬಾಂಬೆ ೩೧, ಬೆಲೆ ರೂ. ೦-೮-೦

ನೂತನ ರಾಜ್ಯಾಂಗ ಘಟನೆಯಲ್ಲಿ ಹಿಂದೂಕೋಡು ಮಸೂದೆಯು ವಿಶೇಷ ಕ್ರಾಂತಿಯನ್ನುಂಟು ಮಾಡಿಯಿತ್ತದೆ. ಕಾಂಗ್ರೆಸ್ಸಿನವರಿಷ್ಠರಾದ ಪಟ್ಟಾಭಿ ಸೀತಾರಾಮಯ್ಯ, ರಾಜೇಂದ್ರ ಪ್ರಸಾದ್, ಆಲ್ಲಾಡಿ ಮುಂತಾದವರೂ ಕೂಡಾ ವಿರುದ್ಧಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ದೇಶದಾದ್ಯಂತ ಇವರ ವಿರೋಧ ಚಳುವಳಿ ನಡೆದಿರುತ್ತದೆ. ಅದರಲ್ಲೂ ಶಿಷ್ಟರಾದವರಲ್ಲಿ ಆತ್ಯಂತ ಕಳವಳವನ್ನು ಹುಟ್ಟಿಸಲು ಇದು ಕಾರಣವಾಗಿದೆ. ಹಿಂದೂ ದೇಶ ಭಿನ್ನಭಿನ್ನ ಮತಜಾತಿಯ ಸಂಪ್ರದಾಯಗಳುಳ್ಳ ದೇಶ. ಇಂತಹ ಭಿನ್ನಭಿನ್ನ ಕಾಯಿದೆಗಳು ದೇಶದ ಏಕಮುಖತೆಗೆ ಘಾತುಕವಾಗುತ್ತವೆನ್ನುವದರಿಂದಲೋ ಏನೋ—ಹಿಂದಿನದನ್ನು ಕೊಂಚ ಪರಿಷ್ಕರಿಸಿ ನೂತನ ಮಸೂದೆಯೊಂದನ್ನು ರಚಿಸಿಯಿದೆ. ಇಂತಹ ನೂತನ ಕೋಡಿನಿಂದ ಈ ತನಕ ತಲತಾಂತರದಿಂದ ಬಂದ ಕಟ್ಟುಗಳು ಸಡಿಲಾಗುವುದು ಸ್ವಾಭಾವಿಕ! ಹೆಣ್ಣಾಗುಕ್ಕಳಿಗೆ ಸಿಗುವ ಪಿತ್ರಾರ್ಜಿತ ಆಸ್ತಿಯ ಪಾಲಿನಂಶದ ಮೇಲಿನ ಪ್ರಶ್ನೆಯೇ ಸನಾತನಿಗಳ ವಿಕೋಪಕ್ಕೆ ಕಾರಣವಾಯಿತೆನ್ನಬೇಕು. ಇಡಿಯ ದೇಶಕ್ಕೆ ಒಂದು ನ್ಯಾಯವನ್ನು ನಿರ್ದೇಶಿಸುವ ಈ ಮಸೂದೆಯಲ್ಲಿ ಅಳಿಯಸಂತಾನಿಗರಿಗೆ ಯಾವರೀತಿಯ ಪರಿಹಾರವೂ ಇಲ್ಲ. ಬಂಗಾಳ, ಮಲೆಯಾಳ ದಲ್ಲಿಯ ಕೆಲವು ಜನಾಂಗದ ಪಾಡೂ ಅಷ್ಟೇ ಆಗಿದೆ. ಉಳಿದಂಶದಲ್ಲಿ ಶಾಸನ ಸಭೆ ಕೂಲಂಕುಷ ವಿಮರ್ಶೆಯಿಂದ ಸರಿಯಾದ ಮಾರ್ಗದರ್ಶನ ನೀಡಿದೆಯಾದರೂ ಈ ವಿಚಾರದಲ್ಲಿ ಅಸಮಾಗ್ರಹೋದ್ಗಳನ್ನು ತಾಳಿದೆ. ಈ ಎಲ್ಲ ವಿಚಾರಗಳನ್ನು ಏರಣಿ ಶ್ರೀನಿವಾಸರು ಸರಳವಾಗಿ, ವಿಮರ್ಶೆಮಾಡಿದ್ದಾರೆ. ಇಪ್ಪತ್ತಾಗಲೀ, ಕಪ್ಪವಾಗಲೀ, ಈ ಮಸೂದೆ ನಮ್ಮ ಜನಾಂಗದ ಮೇಲೆ ಸಂಕಾರ ಹೇರುವದರಲ್ಲಿ ಸಂದೇಹವಿಲ್ಲ. ಅದೂ ಜನತಾಭಿಪ್ರಾಯಕ್ಕೆ ಪೂರಕವಾಗಿ ಮಾಡಿಕೊಟ್ಟಿದೆ ಸರಿಯಾಗಿ. ಆ ದೊಡಲು ಜನ ಇದರ ಪರಿಪೂರ್ಣ ಜ್ಞಾನವನ್ನು ಪಡೆದುಕೊಳ್ಳುತ್ತದುತ್ತಮವಲ್ಲವೇ! ಏರಣಿ ಶ್ರೀನಿವಾಸರ ಈ ಚಿಕ್ಕ ಹೊತ್ತಗೆ ಅಮೂಲ್ಯವೂ ಸಕಾಲಿಕವೂ ಆಗಿರುತ್ತದೆ.

೪ ೩೪ನೆಯ ಸಾಹಿತ್ಯ ಸಮ್ಮೇಲನ ಮುಂಬಯಿ—ಪ್ರಾಪ್ತಿಕರು: ಶ್ರೀ ವರದರಾಜ ಅಧ್ಯರು, ಕಾರ್ಯದರ್ಶಿ ಸಂಯುಕ್ತ ಕರ್ನಾಟಕ ಸಂಘ, ಮುಂಬಯಿ. ಬೆಲೆ ರೂ. ೧—೦—೦

ಮುಂಬಯಿಯಲ್ಲಿ ನಡೆದ ೩೪ನೆಯ ಸಾಹಿತ್ಯಸಮ್ಮೇಳನ ಕಾಲದಲ್ಲಿ ಪ್ರಕಟಿಸಿದ ಹೊತ್ತಗೆಯಿದು. ಸಮ್ಮೇಳನಾಧ್ಯಕ್ಷರಾದ ಶ್ರೀ ಗೋವಿಂದ ಪೈಗಳವರ ವ್ಯಕ್ತಿಚಿತ್ರ ಹಾಗೂ ಸಾಹಿತ್ಯ ವಿಮರ್ಶೆಯನ್ನು ಶ್ರೀ ಜಿ.ಪಿ. ರಾಜರತ್ನಂ ಅವರೂ, ಪ್ರಿನ್ಸಿಪಾಲ್ ಗೋಕಾಕರ ಪರಿಚಯವನ್ನು ಶ್ರೀ ರಂ. ಶ್ರೀ ಮುಗಳಿಯವರೂ ಉಳಿದವರ ಪರಿಚಯಗಳನ್ನು ಶ್ರೀ ವ್ಯಾಸರಾಯಬಲ್ಲಾಳರೂ ಮಾಡಿಕೊಟ್ಟಿರುತ್ತಾರೆ.

ಸುಮಾರು ಮೂರು ಲಕ್ಷ ಕನ್ನಡಿಗರುಳ್ಳ ಮುಂಬಯಿಯಂತಹ ಮಹಾ ಪಟ್ಟಣದಲ್ಲಿ ಕನ್ನಡಿಗರ ನಾನಾ ಮುಖದ ಚಟುವಟಿಕೆಗಳನ್ನೂ ಸಾಂಘಿಕಜೀವನವನ್ನೂ ಇಲ್ಲಿ ಕಾಣಬಹುದಾಗಿದೆ. ಹೊರನಾಡಿನಲ್ಲಿ ಕನ್ನಡದ ಕೀರ್ತಿಯನ್ನು ಪ್ರಕಾಶಗೊಳಿಸುವಲ್ಲಿ ಮುಂಬಯಿಯ ಕನ್ನಡಿಗರು ಮೊದಲಿಗರೆಂಬುದು ಅಲ್ಲಿರುವ ಸಂಘಸಂಸ್ಥೆಗಳು ಬಹಳಕಾಲದಿಂದ ನಡೆಸಿಕೊಂಡು ಒಂದಿರುವ ಚಟುವಟಿಕೆಯನ್ನ ವಲೋಕಿಸುವುದರಿಂದಮನವಂಕೆಯಾಗುತ್ತದೆ.ಹೀಗೆ ಹಲವು ಸಂಘಗಳೂ ಐಕ್ಯಮತ್ಯದಿಂದಕನ್ನಡದ ಸೇವೆಯನ್ನು ಮಾಡುತ್ತಿರುವುದು ಶ್ಲಾಘನೀಯವಾದ ಅಂಶ ಈಬಾರಿಯ ಸಾಹಿತ್ಯ ಸಮ್ಮೇಳನವನ್ನು ಮುಂಬಯಿಯಂತಹ ಮಹಾನಗರದಲ್ಲಿ ಕನ್ನಡದ ಹಿರಿಯಸಾಹಿತಿಗಳಾದ ಮುಂಜೇಶ್ವರ ಶ್ರೀ ಗೋವಿಂದ ಪೈಗಳ ಸನ್ಯಾಸ್ಯ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿಸಿದ ಮುಂಬಯಿಯಕನ್ನಡಿಗರು ಚಿರವಾಗಿಉಳಿಸಿಕೊಡಿದಾರ್ಹರು. ಕನ್ನಡ ದೇಶದ ಜನವ್ಯಾಪಾರಿಕಾರ್ಯವಾಗಿಯೂ, ಸಾಂಸ್ಕೃತಿಕವಾಗಿಯೂ ಮುಂಬಯಿಯಲ್ಲಿ ನೆಲೆನಿಂತು ಕನ್ನಡದ ಕುರಿತಾಗಿ ಕೆಲಸ ಮಾಡುತ್ತಿರುವವನ್ನು "ಮುಂಬಯಿ" ಸಂಚಿಕೆಯಲ್ಲಿ ಶ್ರೀ ವ್ಯಾಸರಾಯ ಬಲ್ಲಾಳರು ಚೆನ್ನಾಗಿ ರೂಪಿಸಿದ್ದಾರೆ. ನಮ್ಮ ಕನ್ನಡಿಗರು ಹೊರಗೆ ಹೋಗಿ ಕನ್ನಡಕ್ಕಾಗಿ ಘಣತೊಟ್ಟಿದ್ದಕ್ಕೆ ನಾವು ಹೆಮ್ಮೆಪಡಬೇಕು. ಕನ್ನಡ ಬಗ್ಗೆ ಅತ್ಯಂತ ಉತ್ಸುಕರಾದ ಮುಂಬಯಿ ಕನ್ನಡಿಗರ ಪರಿಪೂರ್ಣ ಚಿತ್ರವೊಂದನ್ನು ಕನ್ನಡಿಗರ ಮುಂದಿಟ್ಟ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಗಳೂ, ಸಂಯುಕ್ತ ಕರ್ನಾಟಕ ಸಂಘದ ಕಾರ್ಯದರ್ಶಿಗಳೂ ಆದ ಶ್ರೀ ವರದರಾಜಅಧ್ಯರೇ ಮೊದಲಾದವರ ಕಾರ್ಯಪ್ರಜ್ಞಂಸನೀಯ. ಹೀಗೆಯೇ ಮುಂಬಯಿ ಕನ್ನಡಿಗರು ಏಕರೂಪ ಕರ್ನಾಟಕ ನಿರ್ಮಾಣ ಕಾರ್ಯದಲ್ಲಿ ತಮ್ಮ ಬಲವನ್ನು ಉಪಯೋಗಿಸಿ ಕೀರ್ತಿಶಾಲಿಗಳಾಗಲೆಂದು ಹಾರೈಸುತ್ತೇವೆ

—ಎಸ್ಸೆಲ್

ಜನಮತ

ಉಡುಪಿ ಸಿಟಿ ಮೋಟಾರ ಸರ್ವಿಸು-ಪ್ರಯಾಣಿಕರ ಸಂಕಷ್ಟ

ಸಿಟಿ ಮೋಟಾರು ಸರ್ವಿಸಿನಲ್ಲಿ ಕಲ್ಯಾಣಪುರಕ್ಕೆ ಹೋಗಬೇಕೆಂದ ನಾನು 24 1-5ನೇ ಮಧ್ಯಾಹ್ನ ಗಂಟೆ 1-15ಕ್ಕೆ ಒಸ್ಸ್ಟೇಂಡಿಗೆ ಹೋಗಿ ಕಾದಿದ್ದೆ. ಸುಮಾರು 75 ಮಂದಿ ಗಂಡಸರು ಮತ್ತು 25 ಮಂದಿ ಹೆಂಗಸರು ಮಕ್ಕಳು ಕಲ್ಯಾಣಪುರಕ್ಕೆ ಹೋಗುವ ಸಿಟಿಬಸ್ಸಿಗಾಗಿ ಕಾದು ನಿಂತಿದ್ದರು. ಗಂಟೆ 1-30ಕ್ಕೆ, 1ಗಂಟೆಗೆ ಹೊರಡಬೇಕಿದ್ದ ಹನ್ನೊಂದು ಬಸ್ಸು ಬಂದು ನಿಂತಿತು. ಕಾದು ನಿಂತಿದ್ದ ಪ್ರಯಾಣಿಕರು ಒಂದೇ ಸವನೆ ಗಲಿಬಿಲಿಯಿಂದ ಒಬ್ಬರನ್ನೊಬ್ಬರು ದೂಡಿಕೊಂಡು ಬಸ್ಸಿನ ಒಳಸುಗ್ಗಲು ಸುರುಮಾಡಿದರು. ಈ ನುಗ್ಗಾಟದಲ್ಲಿ ಕೆಲವರ ಶರ್ಟು ಹರಿದು ಹೋಯಿತು; ಮತ್ತೆ ಕೆಲವರ ಅಂಗವಸ್ತ್ರ ಕೆಳಗೆಬಿದ್ದು ಪ್ರಯಾಣಿಕರ ಪಾದದಡಿಯ ದೂಳಿನಿಂದ ಮುಳುಗಿ ಹೋಯಿತು. ಹೆಂಗಸರು ಮತ್ತು ಮಕ್ಕಳ ಕಷ್ಟವನ್ನಂತೂ ಹೇಳತೀರದು. ಪ್ರಯಾಣಿಕರೊಬ್ಬರ ವೀಳ್ಯದೆಲೆಗಂಟು ಕೆಳಗೆಬಿದ್ದು ಚಲ್ಲಾಪಿಲ್ಲಿಯಾಯಿತು. ಆ ಸ್ಥಳದಲ್ಲಿ 1-35ಕ್ಕೆ, 1-30ಗಂಟೆಗೆ ಹೊಡಕಳ. ಸಿ ಪಿ. ಸಿ. ಬಸ್ಸು ಬಂದು ಮೇಲೆಹೇಳಿದ ಬಸ್ಸಿನಮುಂದೆ ನಿಂತಿತು. ಈ ಬಸ್ಸಿಗೆ ಕೂಡಾ ಮುಂಚೆ ಪ್ರಸ್ತಾಪಿಸಿದಂತೆಯೇ ಪ್ರಯಾಣಿಕರು ಸಂಗ್ಗಲಿಲ್ಲಿ ಸುರುಮಾಡಿದರು. ನನಗೆ ಆ 30-40 ದೇಹವಂದಿಗೆ ಎಡೆಸಿಕ್ಕಲಿಲ್ಲ. ಎರಡನೇ ಬಸ್ಸಿನ ಎದುರು ಸೀಟಿನಲ್ಲಿ ಇಬ್ಬರು ಪ್ರಯಾಣಿಕರು ಕುಳಿತಿದ್ದರು. ನಾನು ಆ ಪರನ್ನು ಎಬ್ಬಿಸಿ ಹೋಗುವವರು ಯಾರೂ ವಿಚಾರಿಸಲಾಗಿ, ಪಕ್ಕಳಕ್ಕೆ ಎಂಕ ನುಡಿದೆವು. ಇದು ಕಲ್ಯಾಣಪುರಕ್ಕೆ ಹೋಗುವ ಬಸ್ಸು ಎಂದೊಡನೆ ಅವರು ಕೆಳಕ್ಕೆ ಇಳಿದರು. ಆಗ ನಾನೂ ಮತ್ತೊಬ್ಬ ಪ್ರಯಾಣಿಕರೂ ಅಲ್ಲಿ ಕುಳಿತುಕೊಂಡೆವು.

ನಮ್ಮದೇಶದ ಅನೇಕ ಕಡೆಗಳಲ್ಲಿ ಬಸ್ಸು ಹತ್ತಲಿಳಿಕ್ಕೆ ಕ್ಯೂ ಸಿಸ್ಟಮ್ ಜಾರಿಯಲ್ಲಿ ಉಂಟು. ಉಡುಪಿ ಸಿಟಿಬಸ್ಸುಗಳ ಮಟ್ಟಿಗೆ ಈ ಕ್ರಮ ಜಾರಿಗೆ ಬಂದಿಲ್ಲ. ಸಮಯ ಕ್ಷಮತೆಗಾಗಿ ಹೆಸರು ಪಡೆದಿರುವ ದಕ್ಷಿಣಕನ್ನಡದ ಬಸ್ಸುಕಂಪೆನಿಗಳು ತಮ್ಮ ಬಸ್ಸುಗಳನ್ನು ಗಂಟೆಸ್ಪರ್ಶಕಾಲ ಬಿಡದಿರುವುದು ಯೋಗ್ಯವೇ ಪ್ರಯಾಣಿಕರ ಸಂಖ್ಯೆ ಹೆಚ್ಚಾದಂತೆ ಸಿಟಿಬಸ್ಸು ಸರ್ವಿಸುಗಳನ್ನೂ ಹೆಚ್ಚಿಸಬೇಡವೆ? ಅಲ್ಲದೆ ಸಿಟಿಯೊಳಗೆ ಕೆಲವು ಸರ್ವಿಸುಗಳನ್ನು ಓಡಾಡಿಸುವುದು ಪ್ರಯೋಜನಕರವಲ್ಲವೆ?

ಹೀಗಾಗಿ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಬಸ್ಸುಡತ್ತನ ಜಿದ್ದಾಜಿದ್ದಿನಲ್ಲಿ ಅನೇಕರು ಜಖಮ ಪಾಕೇಟು ಕಳಕೊಂಡದ್ದೂ ಉಂಟು. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ತಕ್ಕ ನಿಗಾ ಕೊಟ್ಟು ಇನ್ನಾದರೂ ಕ್ಯೂ ಸಿಸ್ಟಮ್ ಜಾರಿಗೆ ತಂದು ಪ್ರಯಾಣಕರ ಸಂಕಷ್ಟವನ್ನು ಕಡಿಮೆ ಮಾಡಿಯಾರೆಂದು ನಂಬುತ್ತೇನೆ

ರಾವ್ ಸಾಹೇಬ್ ಕೆ. ಕೃಷ್ಣಯ್ಯ,
ಎಕ್ಸೈಜ್ ಡಿಪ್ಯುಟಿ ಕಲೆಕ್ಟರ್, ಉಡುಪಿ.

ಕರ್ನಾಟಕದ ವಿಶ್ವಾಸಾರ್ಹ ಪಾತ್ರ
ಕಾರ್ಕಳ ಕಾಪರ್ ಕಂಪನಿ
ಸ್ಥಾಪಿತ 1906
ಭಾರತದೊಳಗೆ 40 ಶೇಕಡಾಕಲಾ ಹೆಚ್ಚು ಶಾಖೆಗಳು
ಜನತ್ತು ಸಮಸ್ತರಿಗೆ ಉಪಯೋಗವಿರುವ ಬ್ಯಾಂಕರುಗಳು ಎಂಬ ಕೋಟಿಗೂ ಮಿಗಿಲಾದ ವಿಶ್ವಾಸ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸನಿಹ! ಕೃಷ್ಣಮಂದಿರಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ವೈಕರ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಸಂಡಿಗೆ, ಹಪ್ಪಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYAL MAHAL,
UDIPI. S. Kanara.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರೀ,
ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಇವರ ನಂಬಿಕೆಯೇ ಪೂರ್ತಿ ಔಷಧಿಯ ಸೂತಿಕಾ ರಸಾಯನ

ಪೆಟ್ಟಿನ ಮಾಹಿತಿಗೆ—ಡಾ। ಎಂ. ಸಿ. ಶಾಸ್ತ್ರೀ, ಎಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸಾರ್ವಕಸರು:—ಡಾ। ಎ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಮೇಷ—ಸದ್ಯದಲ್ಲಿ ಸುಖಿಗಳೆಂದರೆ ನೀವೇ ಸರಿ. ಸಕಲಗ್ರಹರ ಕೃಪಾಕಟಾಕ್ಷಕ್ಕೆ ಪಾತ್ರರಾದ ನಿಮಗೆ ಯಾರೂ ಸರಿಸಾಟಿಯಿಲ್ಲ ಎಂದರೂ ಅತಿಶಯೋಕ್ತಿಯಾಗಲಾರದು. ಸುದೈವದ ಪರಾಕಾಷ್ಠೆಯನ್ನು ದರಿಂದ ನೀವು ಇಂತಹ ಸಾಸಂದರ್ಭದಲ್ಲಿ ಮಹತ್ಕಾರ್ಯಕ್ಕೆ ಕೈಹಚ್ಚಿ ವಿಜಯವನ್ನು ಪಡೆದು ಸತ್ಕೀರ್ತಿಯನ್ನು ಗಳಿಸುವಿರಿ. ಗಾಳಿ ಬಂದಾಗ ತೂರಿಕೊಂಡಿದ್ದೇ ಬಂತೆಂಬ ಅರ್ಯೋಕ್ತಿಯಂತೆ ಕಾಲವನ್ನು ಸದುಪಯೋಗಿಸಿಕೊಳ್ಳಿರಿ. ವಾರಾಂತ್ಯದ 3ದಿನಗಳು ಅತ್ಯಂತ ಶ್ರೇಷ್ಠಗಳಾಗಿವೆ.

ವೃಷಭ—ಕಂಡದ್ದು ಕಂಡಂತೆ ಹೇಳಿದರೆ ಕೆಂಡಂತಹ ಕೋಪವೆಂದು ಬಲ್ಲವರಂದಿರುವರು ಆದರೆ ವಿವೇಕಿಗಳಾದ ನೀವು ಹಾಗೆಂದೂ ಮಾಡಲಾರಿರಿ. ನಿಷ್ಠ ನಿಮಗೆ ಗ್ರಹಮಂಡಲದೇ ಪ್ರತಿಕೂಲವಿರುವುದರಿಂದ ನಿನ್ನು ದುರ್ವಿಧಿಯು ನಿಮ್ಮನ್ನು ಅದೆಂತು ಕಾಡುವುದೋ ಹೇಳಲಳವಲ್ಲವು. ಅದಕಾರಣ ಈ ವಾರವನ್ನು ಬಹಳ ಜಾಗರೂಕತೆಯಿಂದ ತತ್ತಾಪಿ ತಾ. 3, 4, 5, 6 ಈ ದಿನಗಳನ್ನು ಕಳೆಯಿರಿ.

ಮಿಥುನ—ನಿಸರ್ಗತಃ ಶುಭರಾದ ಬುಧ, ಗುರು, ಶುಕ್ರರು ನಿಮ್ಮ ಮೇಲೆ ಅನುಗ್ರಹ ದೃಷ್ಟಿಯನ್ನು ಬೀರಿರುವರು. ಸದುದ್ಯಮ ಪ್ರವೃತ್ತರಾದ ನಿಮಗೆ ಉದ್ಯೋಗದಲ್ಲಿ ಸ್ಥಿರತೆ, ಯಶಸ್ಸು ಅನಾಯಾಸದಿಂದ ಲಭಿಸುವುದು. ಜಂಜಲವಾದ ಮನಸ್ಸನ್ನು ವಿವೇಕದಿಂದ ಬಗಿಹಿಡಿಯಿರಿ. ಗೃಹಕೃತ್ಯದ ವಿಚಾರದಲ್ಲಿ ತಂತ್ರೈಯಿಂದ ವರ್ತಿಸಿರಿ. ವಾರಾದಿಯ 4ದಿನಗಳು ಸುವಿಲಾಭಗಳನ್ನೀಯುವವು.

ಕರ್ಕಟ—ಉತ್ತೇಜದು ಬಿತ್ತೆದ್ದಾದು ಸಮ್ಮಿಜ್ಜಿ, ಅಗೋದು ಹೋಗೋದು ದೈವೇಚ್ಛೆ, ಎಂದಂತೆ ನಿಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿರಿ. ಫಲವು ತಾನಾಗಿ ಪ್ರಾಪ್ತವಾಗುವುದು. ಆರೋಗ್ಯದ ಪಟ್ಟಿಗೆ ಸ್ವಲ್ಪ ಜಾಗರೂಕರಾಗಿರಿ. ಕಜ್ಜಿ, ಹುಣ್ಣು ಮೊದಲಾದ ಚರ್ಮರೋಗಗಳು ಕಾಣಿಸಬಹುದು. ಪ್ರವಾಸಕ್ಕೆ ಕಾಲವು ಹಿತಕರವಲ್ಲವು. ತಾ. 3, 4, 5, 6ರಲ್ಲಿ ಶತ್ರುಜಯ, ಧನಲಾಭ, ಸುಖ ಮಾನಗಳು ಲಭಿಸುವವು.

ಸಿಂಹ—ನಿಮ್ಮ ಸಾಂಸಾರಿಕ ತಾಪತ್ರಯಗಳು ತಾನಾಗಿ ದೂರ ಸರಿವವು. ಉದ್ಯೋಗದಲ್ಲಿ ಉನ್ನತಿ ಪಡೆವಿರಿ. ವಾಚಾಲರಾದ ನಿಮಗೆ ಜನಬೆಂಬಲವು ಚೆನ್ನಾಗಿರುವುದರಿಂದ ಶತ್ರುಗಳಿಂದ ಪ್ರಾಶ್ಚರ್ಯವಾದ ವಿಘ್ನಗಳನ್ನು ಗಣಿಸದೆ ಕಾರ್ಯವನ್ನು ಸಾಧಿಸುವಿರಿ. ಅರ್ಧಾಂಗಿಯೊಡನೆ ಮತಭೇದದಿಂದಾಗಿ ಕಲಹವಾದೀತು. ನೀವೆಷ್ಟೇ ದುಂದುವೆಚ್ಚ ಮಾಡಿದ್ದರೂ ಅಪಾರವಾಗಿ ಉಳಿಯಲಾರದು. ತಾ. 5, 6, 7 ರಲ್ಲಿ ಬಯಕೆಯು ಸಿದ್ಧಿಸಲಿದೆ.

ಕನ್ಯಾ—ದುರ್ವಿಧಿಯು ನಿಮ್ಮನ್ನು ಬಲವಾಗಿ ಪೀಡಿಸುತ್ತಿರುವುದು. ಆದರೂ ದೈವದಿಂದೇನು ಪೌರುಷವೇ ಪ್ರಧಾನವೆಂದು ತಿಳಿದಿರತಕ್ಕ ನಿಮಗೆ ಶುಭಾಕ್ಷುಬ್ಧಿತವಲ್ಲದಿದ್ದರೂ ಫಲವು ಸಿಗದಿರದು. ಬರ್ಚು ಮಿತಿಮೀರಿ ಹೆಚ್ಚುವುದರಿಂದ ದಿನಯಾಪನೆಯು ಕಷ್ಟವಾಗುವದು. ಆಧಿವ್ಯಾಧಿಗಳಿಂದ ಪೀಡಿತರಾದ ನಿಮಗೆ ಬಂಧುವರ್ಗದವರೂ ನಿರೋಧಿಗಳಾಗಿ ವರ್ತಿಸುವರು. ಗೃಹತಾಪತ್ರಯಗಳು ನಿನದಿಂದ ದಿನಕ್ಕೆ ಹೆಚ್ಚುವವು. ತಾ 1, 2 7 ಇತರ ದಿನಗಳಿಗಿಂತ ಲೇಸು.

ತುಲಾ—ಸ್ವಕೃತಾಪರಾಧ ಸಂಜನ್ಯರಾದ ಸಜ್ಜನರಿಗೆ ಈ ವಾರವು ಪ್ರಕಶ್ಚಿತ್ಕರವಾದುದು. ಕಷ್ಟದ ದಿನಗಳು ಸಂಭವಿಸೀವು. ನಿಮ್ಮ ಧೈರ್ಯ ಸಾಹಸಗಳು ಶಕ್ತ ಫಲವನ್ನೀಯುವವು. ಆರ್ಥಿಕ ಬಾರವಸ್ಥೆಯು ದೂರವಾಗುವುದು. ಆದರೂ ವಿಪತ್ಪರಂಪರೆಗಳು ಮೇಲಿಂದ ಮೇಲೆ ಬಂಲಿಸೆ. ಇದರಿಂದ ಧನ, ಮನೋ ನೆಮ್ಮದಿಗಳಿಗೆ ಹಾನಿಯಾದೀತು. ಬಂಧುಮಿತ್ರರ ಮತ್ತು ಆಪ್ತೇಷ್ಟರ ಸಹಕಾರವು ಚೆನ್ನಾಗಿರುವುದರಿಂದ ತಾ. 3, 4ರಲ್ಲಿ ನಿಮ್ಮ ಬಯಕೆಯು ಈಡೇರುವುದು.

ವೃಶ್ಚಿಕ—ಕಳೆದ ದಿನಗಳನ್ನು ಸುಖಕಾರಿಯಾಗಲಾರದೀ ವಾರವು. ನಿಮ್ಮ ಕೃತಿಯಲ್ಲಿ ನಿಮಗೆ ವಿಶ್ವಾಸವಿಲ್ಲದಂತಾಗುವುದು. ಆತಪಿನ ಅಧಿಕಾರಿಗಳಿಗೆ ಅಂಜಿ ನಡೆಯುವೇ ಕಾಗುವುದು. ಬಂಧುವರ್ಗದವರ ಕೂಡೆ ಮನಸ್ತಾಪ ಹೆಚ್ಚುತ್ತಿತು. ಶತ್ರು ಜನರ ಕಪಟವನ್ನರಿಯದೆ ಹಚ್ಚಿನ ಅಪಾಯಕ್ಕೊಳಗಾಗಲಿರುವಿರಿ. ಕಾರ್ಮಿಕರಿಗೆ ಹೆಚ್ಚಿನ ಸೌಖ್ಯವು ಲಭಿಸುವದು. ತಾ. 1, 2, 5, 6. ಈ ದಿನಗಳಲ್ಲಿ ಸುಖಭೋಜನ ಭೋಗ ಲಾಭ ವಿಜಯಗಳಿವೆ.

ಧನು—ಕಷ್ಟಪರಂಪರೆಗಳಲ್ಲಿ ಸಿಲುಕಿ ನೊಂದು ಬೆಂದ ನಿಮಗೆ ಇಂದೀಗ ಅರ್ಧ ಜೀವ ಬಂದಂತಾಗುವದು ನಿಮ್ಮ ಶ್ರಮಕ್ಕೆ ಮಿಶ್ರಿದ ಫಲವು ಲಭಿಸುವದು. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗುವಿರಿ. ರಾಜಕೀಯ ರಂಗದಲ್ಲಿ ಇಚ್ಛೆಯಂತೆ ಫಲವು ಲಭಿಸುವದು. ಕಳ್ಳಕಾಕರು ಮತ್ತು ಮಕ್ಕಳ ಮುಖದಿಂದ ಧನ ಲಭಿಸುವ ಯೋಗವಿದೆ. ಮನವನ್ನು ಸನ್ಮಾರ್ಗ ಪ್ರವೃತ್ತವಾಗುವಂತೆ ಬಗಿಹಿಡಿಯಿರಿ. ತಾ. 3, 4, 7 ಈ ದಿನಗಳು ಶ್ರೇಯಸ್ಕರ.

ಮಕರ—ಮಿತ್ರೇಷ್ಟರ ಪೀಡೆಯು ಪ್ರಬಲವಾಗಿದ್ದರೂ ಕಾರ್ಯವನ್ನು ನುಣ್ಣಗೆ ಕೈಗೊಡೆದೆ ಮುಂದುವರಿಯಿರಿ. ನಿಮ್ಮ ಅಭಿಮತಕ್ಕೆ ವಿರುದ್ಧವಾಗಿ ಕೆಲವು ವಿಘ್ನಗಳು ಬಂದೊದಗಿದರೆ ಧೃತಿಗೆಡಬೇಡಿ. ಸಾಮ್ಯ ಭೇದ ದಂಡೋಪಾಯಗಳಲ್ಲಿ ಯಾವುದಾದರೊಂದು ಉಪಾಯವನ್ನು ಅವಲಂಬಿಸಿದರೆ ಅಪಾಯವು ದೂರವಾಗುವುದು. ಆರ್ಥಿಕ ಸ್ಥಿತಿಯು ಸುಧಾರಿಸುವುದು. ಸಂಸಾರದಲ್ಲಿ ಸುಖ ಶಾಂತಿಗಳು ನೆಲೆಸಿರುವುವು. ಸಂಗಾತಿಯೊಡನೆ ಸಂಚಾರ ಸಂಭವಿಸುವುದು. ತಾ. 1, 2, 5, 6 ಈ ದಿನಗಳಲ್ಲಿ ನಾನಾ ವಿಧದಿಂದ ಧನಾಪ್ತಿ ಸಂಭೋಗಭೋಗಪ್ರಾಪ್ತಿಯಿದೆ.

ಕುಂಭ—ದಿನೇ ದಿನೇ ಪರಿಸ್ಥಿತ್ಯವಕಾಶವಾಗುತ್ತಾ ಬರುತ್ತಿದೆ. ಉತ್ಪತ್ತಿಯ ಮಾರ್ಗಗಳು ಹ್ರಾಸವಾಗುತ್ತಾ ಖರ್ಚಿನ ದಾರಿಗಳು ದೀರ್ಘವಾಗುತ್ತಾ ಬರುವುದರಿಂದ ದೈನಂದಿನದ ವ್ಯವಹಾರಕ್ಕೆ ಬಹಳ ತೊಂದರೆಯಾಗುವದು. ವಾಹನಾದಿಗಳಲ್ಲಿನ ಪ್ರಯಾಣವನ್ನು ಬಹಿಷ್ಕರಿಸಿರಿ. ವ್ಯರ್ಥ ಕಲಹಗಳು ಆಗಾಗ ಸಂಭವಿಸುತ್ತವೆ. ದೇಹಾಲಸ್ಯ ಪತ್ನೀ ಪುತ್ರರ ವಿರಹ ಇತ್ಯಾದಿಗಳಿಂದ ನೊಂದ ನಿಮಗೆ ತಾ. 5, 6, ಮಾತ್ರ ಸ್ವಲ್ಪ ಹೆಚ್ಚಿನ ಅನುಕೂಲಕಾರಿಗಳಾದಾವು.

ಮೀನ—ಇಲ್ಲಸಲ್ಲದ ಖರ್ಚುಗಳು ಬಂದು ಸೇರುವವು. ಸ್ತ್ರೀಕೋಪ, ಪಿತ್ತವಿಕಾರ, ನೇತ್ರಪೀಡೆ, ಚಂಡೆ ಇತ್ಯಾದಿಗಳು ಅನವರತವೂ ನಿಮ್ಮನ್ನು ಪೀಡಿಸುವವು. ಪ್ರಯಾಣದಲ್ಲಿ ಕಷ್ಟನಷ್ಟಗಳು ಸಂಭವಿಸಬಹುದು. ತಂದೆ ಮಕ್ಕಳಲ್ಲೂ ಸತಿಪತಿಗಳಲ್ಲೂ ಜಗಳವಾದೀತು. ಆಪ್ತಮಿತ್ರರ ಸಂಪೂರ್ಣ ಬೆಂಬಲವನ್ನು ಪಡೆದ ನಿಮಗೆ ತಾ. 1, 2, 7 ಈ ದಿನಗಳನ್ನುಳಿದ ದಿನಗಳು ಕೊಂಚ ಉತ್ತಮವೆನಿಸುವವು.

ವಾರದ ಭವಿಷ್ಯ

ತಾರೀಕು 1-2-51 ರಿಂದ — ತಾರೀಕು 7-2-51 ರವರೆಗೆ

Notice

ಕುಂದಾಪುರ ಡಿ. ವಂ. ಕೋರ್ಟಿನಲ್ಲಿ

S. C 833/1950

ಕಾದಯಾನೆ ಸೋದಿಂದ ಅಳತಾಳ —ವಾದಿ ಅಣ್ಣಪ್ಪ —ಪ್ರತಿವಾದಿ ಕುಂದಾಪುರ ತಾಲ್ಲೂ ಬಸ್ರೂರು ಗ್ರಾಮದಲ್ಲಿರುವ ಕಾಮೇರಿ ಹೆಂಗ್ಸಿನ ಮಗ ಅಣ್ಣಪ್ಪನಿಗೆ ಈ ನ್ಯಾಯಲಕ ತಿಳಿಸುವುದೇನೆಂದರೆ

ಪ್ರತಿವಾದಿಯು ನಾದಿಗೆ ತಾ. 6-11-47ರಲ್ಲು ರೂ. 100ಕ್ಕೆ ಬರಕೊಟ್ಟ ಡಿನೂಂಡು ನೋಟಿನ ಹಣಬಡ್ಡಿ ಕೂಡಾ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾವ್ದುನೂಡಿದ ಮೇಲಿನ ದಾವೆಯು ತಾ 7 2 51ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನನ್ನೆ ಇಬ್ಬರಿಂತ್ತೆ. ಆ ಕುರಿತು ಏನಾದೂ ಅಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಮುಂದೆ ಹಾಜ್ರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಲಾಗಿದೆ.

N. S. Parameshwariah,
Advocate for Plaintiff

Coondapoor, Date 21-1-51.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೆಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾಯರು, ಎಲ್.ಐ.ಎಮ್., ಉಡುಪಿ.

ಪುಟಗಳು 288 ಪಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದು ಗಳು!

ಮಕ್ಕಳ ಮತ್ತು ಹೆಂಗಸರ ಪಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣೆ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಪಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸಂಪ್ರಾಪ್ತಿ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಪೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ.

ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2-0-0.
ವಿ. ಪಿ. ದ್ವಾರ 2-6-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

— ಮಕ್ಕಳನ್ನು ಹಡೆಯುವುದು ಸಾಕು —

ಆಕಸ್ಮಿಕ ಸ್ತ್ರೀಯರಿಗೆ ಬರ್ಥ ಕಂಟ್ರೋಲ್ ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಲ, ರಕ್ತ, ಸೌಂದರ್ಯ, ಹೊಳಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ರಿಗುಳಿಗೆ ಮಧ್ಯಾಹ್ನಕ್ಕೆ ರಿಗುಳಿಗೆ, ಸಂಜೆಗೆ ರಿಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಕ್ಕೆ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೫ ಆಣೆ.

ಮೂಲಕರು:—ಶಾಲಕಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಪ್ರಕಾಶಕರು:—ಶುಭ್ಲಕ್ಷ್ಮಿ ಪ್ರಾಮಸಿ,—ಶುಭ್ಲಕ್ಷ್ಮಿ, ಗದಗ್ ಬಾಗಲಕೋಟೆ ಧಾರವಾಡ ವಿಜಾಪುರ—ಬಾಗಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮುದ್ರಕ ಹಾವಣಗೇರಿ ಹಾವಣಗೇರಿ:—ಹಾವಣಗೇರಿ ಪ್ರೆಸ್ಸು ಇ೯ ಎಲ್ ಕೆ ಮಲಬಾಜ ,ಕಿಮಿಸ್ಸ್ ಹಾವೇರಿ ಡ್ಯಾಪಿಗಿ

EDITED, PRINTED & PUBLISHED BY K. H SHETTY AT THE NAVAYUGA PRESS, UDIPI, S.INDIA.

ರಿಜಿಸ್ಟರ್ಡ್ No. M. 3818
LICENCE No. 31
Licensed to Post without Prepayment

Estd 1921 ಸ್ಥಾಪನೆ
31ನೇ ವರ್ಷ

8—2—1951

Founder: Sri A. B. Shetty,
Minister for Agriculture & Veterinary.

ನವಯುಗ ವಾರ ಪತ್ರಿಕೆ

NAVAYUGA
WEEKLY

ನವಯುಗ

POST BOX NO. 22
UDIPI, S. K.

Vol. 31
No. 22

ಜಗತ್ತಿನಲ್ಲಿಂದು ಕಮ್ಯೂನಿಸ್ಟರ ವರ್ಚಸ್ಸು ಎಲ್ಲೆಡೆಗೂ ಬಿದ್ದಿದೆ. ಪ್ರಬಲ ರಾಷ್ಟ್ರಗಳ ತಲೆನೋವನ್ನು ಪ್ರಸಂಗವೆಂದರೆ ಕಮ್ಯೂನಿಸ್ಟರು ಉಪಟಳ. ಕಮ್ಯೂನಿಸ್ಟರ ಮೂಲ ನಾಶವಾಗಬೇಕೆಂದು ಪಾಶ್ಚಾತ್ಯ ರಾಷ್ಟ್ರಗಳು ಬಯಸಿದಂತಿದೆ ಒಂದೇ ರಾಜಕೀಯ ಹಾಗೂ ಸಾಂಸ್ಕೃತಿಕ ಮನೋಧರ್ಮವುಳ್ಳ ಅಮೆರಿಕಾ, ಬ್ರಿಟನ್, ಕಾನಡಾ, ಫ್ರಾನ್ಸ್, ಮುಂತಾದ ಮುಖ್ಯ ಮುಖ್ಯ ರಾಷ್ಟ್ರಗಳು ಕಮ್ಯೂನಿಸ್ಟರನ್ನು ವಸ್ತುಪ್ರದರ್ಶಿಸಿದರು ಚೀನಾ ಸಂಧಾನಕ್ಕೆ ಯೋಗ್ಯವಾದ ಸಲಹೆಯನ್ನು ಮುಂದೆ ತಂದಾಗ, ನೈತಿಕ ರೀತಿಯಲ್ಲಿ ನಡೆದಾಗ, ಶಾಂತಿಪ್ರಿಯರ ಸೋಗು ಹಾಕಿದ ರಾಷ್ಟ್ರಗಳು 'ಚೀನಾ ಆಕ್ರಮಕ ರಾಷ್ಟ್ರ'ವೆಂದು ಸೆಸರಿಸಿ ಎಸರಣಿ ಹೋಗುವುದಕ್ಕೆ ಕುಮ್ಮಕ್ಕು ನೆರೆದವು. ಈ ತನಕ ಅವರು ಕಾಲಹರಣ ಮಾಡಿದ್ದು ಶಾಂತಿಸ-ಧನೆಗಲ್ಲ; ಕಾಲ ಹರಣಕ್ಕೆ ಮಾತ್ರ! ಯು. ಎನ್. ಮೋ. ಶಾಂತಿಯ ಹೆಸರಿನಲ್ಲಿ ಅಶಾಂತಿ—ಅರಾಜಕತೆಯ ಬಲದಿಂದ ಸಹಕಾರದ ಕೈನೀಡಿ ತನ್ನ ಒಲವಿನಲ್ಲಿ ಬೀಳುವಂತೆ ಮಾಡಿ ನೈತಿಕತೆಯ ದಿವಾಳಿ ತೆಗೆದಿದೆ ಜಾತೀಯ ವಾತ್ಸಲ್ಯದಲ್ಲಿಯೂ, ಬಂಡವಳಶಾಹೀ ಬುದ್ಧಿಮತ್ತೆಯಲ್ಲಿಯೂ, ಐಕಮತ್ಯ ಉಳ್ಳಂಥಹ ಬ್ರಿಟನ್, ಕಾನಡಾ, ಫ್ರಾನ್ಸ್ ಗಳು ಇತರ ರಾಷ್ಟ್ರಗಳನ್ನು ಸಮಾನ ದೃಷ್ಟಿಯಿಂದ ಕಾಣದೆ ಗುಲಾಮರಂತೆ ಬಳಸಿಕೊಳ್ಳುವ ಹಂಚಿಕೆಯನ್ನು ಹೂಡುತ್ತಲಿವೆ ದೊಡ್ಡವರು ಬಡವರೆಂಬ ಭೇದಭಾವವಿಲ್ಲದೆ 'ನಾವೆಲ್ಲವೊಂದು' ಎನ್ನುವ ತತ್ವದಿಂದ ಸಂಘಟಿತ ಕಮ್ಯೂನಿಸ್ಟ ಪಕ್ಷಕ್ಕೆ ಇದು ವಿರುದ್ಧವಾದ ಗುಣ ಯಾವ ರಾಷ್ಟ್ರದಲ್ಲಾದರೂ ಶ್ರೀಮಂತರಿಗಿಂತಲೂ ಸಮಾನ್ಯರ ಸಂಖ್ಯೆಯೇ ಹೆಚ್ಚು. ಬಂಡವಳಗಾರರಿಗಿಂತ ಬಡ ಕೂಲಿಕಾರರ ಸಂಖ್ಯೆಯೇ ಅಧಿಕ 'ಕಮ್ಯೂನಿಸ್ಟ ಪಕ್ಷ'ಅಹೆಚ್ಚು ಮಂದಿಯ ಒಲವಿನ ರಾಜಕೀಯ ಪಕ್ಷವಾಗುತ್ತ ಬಂದಿದೆ ಕಮ್ಯೂನಿಸಮಿನಿಂದ ತಮಗೆ ಸುಖವೋ-ದುಃಖವೋ ಎನ್ನುವ ಪರಿಪೂರ್ಣಜ್ಞಾನವಿಲ್ಲದಿದ್ದರೂ ಈಸುಲಿಗೆಗಾರರ ಕಪಿಮುಷ್ಟಿಯಿಂದ ಜಾರಾಗುವದು ಲೇಸೆಂದು ಅವರು ಬಯಸುತ್ತಾರೆ.

ಇಂದು ಯು. ಎನ್. ಮೋ ಸಾರಿದ 'ಚೀನಾ ಆಕ್ರಮಕ ರಾಷ್ಟ್ರ' ಎನ್ನುವ ಗಂಭೀರ ಪ್ರತಿಭಟನೆ ಕೊರಿಯ ರಣರಂಗದಲ್ಲಿ ಕಾದಾಡುವ ಕಮ್ಯೂನಿಸ್ಟರಿಗೆ ಮಾತ್ರ ವಲ್ಲ; ಜಗತ್ತಿನಲ್ಲಿಯ ಎಲ್ಲ ಕಮ್ಯೂನಿಸ್ಟರಿಗೂ ಅಗಿರುತ್ತದೆ. ಅಂದರೆ ಬಂಡವಳಶಾಹೀ ರಾಷ್ಟ್ರಗಳ ರಾಜಕೀಯ ಮನೋವೈತ್ತಿಯನ್ನು ಜಗತ್ತಿಗೆ ಪ್ರದರ್ಶಿಸಿದಂತಾಗಿದೆ. ಈ ಅಸಾಧು ಮಾರ್ಗದಿಂದ ಕಮ್ಯೂನಿಸ್ಟರ ಮೇಲೆ ಹೆಚ್ಚಿನ ಒಲವು ಬೀಳುವ ಸಂಭವವಿದೆ. ಬಹುಸಂಖ್ಯಾಕ ಬಡ ಕೂ

ಕಮ್ಯೂನಿಸ್ಟರ ನಿರ್ಮೂಲನೆಯಾದೀತೆ?

ಇತಿಶ್ರೀಯಾಡುವುದರಲ್ಲಿ ಮೊದಲಿಗರಾಗಿದ್ದಾರೆ. ಈಗ ಜಗತ್ತಿನ ಮುಂದೆ ನಿಂತಿರುವ ತೃತೀಯ ಮಹಾಯುದ್ಧದ ಮೂಲ ಪೀಠಿಕೆಯೆಂದರೆ ಇದುವೆ ಆಗಿದೆ

ನಾಗರೀಕತೆ ಹೆಚ್ಚಿದಂತೆ ಜನಾನುರಾಗವನ್ನು ಬೆಳೆಸುವ ಮಾನವೀಯ ಗುಣ ಕೆಚ್ಚಲಿಲ್ಲ. ಏಕಚಕ್ರಾಧಿಪತ್ಯ ಹೋಗಿ ಪ್ರಜಾಪ್ರಭುತ್ವಬಂದರೂ, ಪ್ರಜೆಗಳ ಇಚ್ಛೆಗೆ ಸರಿಯಾದ ನ್ಯಾತಿನಿಧ್ಯ ಸರಕಾರದಲ್ಲಿರುವುದಾದರೂ, ಸಂಕುಶ ಪ್ರಭುತ್ವದಲ್ಲಿದ್ದ ಅಡಳಿತ ಧರ್ಮ ಇನ್ನೂ ಜೀವಂತವಾಗಿದೆಯೆಂಬುದಕ್ಕೆ ಪ್ರಮುಖ ರಾಷ್ಟ್ರಗಳಿಂದು ತಳೆದ ಧೋರಣೆ ಸಾಕಷ್ಟು ಪುಷ್ಟಿಕೊಡುತ್ತದೆ. ಜನ ಪ್ರಾತಿನಿಧ್ಯದ ಇಲ್ಲವೆ ಜನಕಾರಾಷ್ಟ್ರದ ಉಳಿದೆಲ್ಲ ರಾಜ್ಯ ಘಟನೆಗಳು ಕೋರಿಯ ಮಟ್ಟಿಗೆ ಮಾತ್ರ ಇದ್ದಂತಿವೆ.

ಕಮ್ಯೂನಿಸ್ಟ ಚೀನಾ ಆಕ್ರಮಕ ರಾಷ್ಟ್ರವೆಂದು ಯು. ಎನ್. ಮೋ ಸಾರಿತು-ಇದು ತಾತ್ವಿಕವೋ—ಅತಾತ್ವಿಕವೋ ಎಂಬುದನ್ನು ಮುಂದೆ ನೋಡಬೇಕಾಗಿದೆ. ಟ್ರೂಮನ್, ಚರ್ಚಿಲ್, ಮೆಕಾರ್ಥರಂತಹ ಯುದ್ಧಪ್ರಿಯ ಧುರೀಣರ ಕುಟಿಲ ನೀತಿಯೇ ಲೋಕನೀತಿಯ ಮಾನದಂಡವೆನುವಂತೆ ತೋರುತ್ತದೆ ಮೊದಲಿಗೆ ಯು. ಎನ್. ಮೋ ಯುದ್ಧ ನಿಲ್ಲಿಸುವ ಶಾಂತಿ ಮಾರ್ಗವನ್ನು ಹುಡುಕಿತು. ಕಾಮನವೆಲ್ತ್ ಮುಖ್ಯ ಮಂತ್ರಿಗಳ ಪರಿಷತ್ತೂ ತನ್ನ ಚಾಣಕ್ಯತನವನ್ನು ಪ್ರದರ್ಶಿಸಿತು ಇನೆರಡರಲ್ಲಿಯೂ ತಾವು ನ್ಯಾಯಪಕ್ಷಪಾತಿಗಳೆಂದು ತೋರಿಸುವ ಬುದ್ಧಿಕೌಶಲ್ಯ



THE UNITED KARNATKA
INSURANCE COMPANY LIMITED,
United Karnatak Buildings, DHARWAR.
Established 1929.
ಕಳೆದ 20 ವರ್ಷಗಳಿಂದಲೂ ಸದಾ ಜನಸೇವೆ-ಮಾಡುತ್ತಿದೆ.

ಲಿಗಾರರಲ್ಲಿಯೂ, ರೈತರಲ್ಲಿಯೂ, ಕಾರ್ಮಿಕರಲ್ಲಿಯೂ ಇದರಿಂದ ತಾವು ಸಂಘಟಿಸಿ 'ಬಂಡವಳಶಾಹಿತ್ವ'ವನ್ನು ಕಿತ್ತೊಗೆಯುವೇಕೆನುವ ಕೆಚ್ಚು ಮೂಡಲವಕಾಶವಿದೆ.

ಕಮ್ಯೂನಿಸಮನ್ನು ವಿರೋಧಿಸುವ ಜನ; ಕಮ್ಯೂನಿಸ್ಟರು ಕ್ರಾಂತಿಮಾರ್ಗದಿಂದ ಲೋಕದ ಶಾಂತಿಗೆ ಭಂಗ ತರುತಿದ್ದಾರೆಎನ್ನುವ ಜನ, ಆ ವಾದದ ಹುಟ್ಟನ್ನಡಗಿಸುವದರಿಂದಲೇ ಜಗತ್ತಿನ ಶಾಂತಿಯಾಗಬಲ್ಲುದು ಎನ್ನುವ ಜನ-ಅಂತಹ ಲೋಕಕಂಟಕರ ನಿರ್ಮಾಣಕರ್ತರಾಗಿದ್ದಾರೆ. ಕಮ್ಯೂನಿಸ್ಟನಿಂದ ಲೋಕಕಲ್ಯಾಣವಾಗಬಹುದೇ? —ಕಮ್ಯೂನಿಸಮಿನಿಂದ ಅಂತರಿಕ ಶಾಂತಿಯನ್ನು ಕಾಯ್ದುಕೊಳ್ಳಬಹುದೇ? ಕಮ್ಯೂನಿಸ್ಟರ ವಾದ ಕಾಲ್ಪನಿಕವಾದುದೇ?—ಎನ್ನುವ ಮಾತು ಬೇರೆ. ಇಂದು ಜಗತ್ತಿನ ಮುಂದೆ ಅದೂ ಒಂದು. ಪ್ರಬಲ ರಾಜಕೀಯ ಪಕ್ಷವಾಗಿ ನಿಂತಿದೆ. ಎಲ್ಲ ರಾಷ್ಟ್ರಗಳಲ್ಲೂ ಅವರ ಕೈವಾಡಯಿದ್ದೇ ಇದೆ. ಉನ್ನತ್ಪವಂದ ರಾಷ್ಟ್ರಗಳ ಈ ರೀತಿಯ ಪ್ರತಿಭಟನೆಯಿಂದ ಕಮ್ಯೂನಿಸಮ್ಮಿನ ಅವಶ್ಯಕತೆ ಜಾಗೂ ಅಕರ್ಷಣೆ ಇನ್ನೂ ಇನ್ನೂ ಹೆಚ್ಚಾಗುವುದು ಖಂಡಿತ ಅಂದರೆ ಈ ಕಮ್ಯೂನಿಸ್ಟರ ನಿರ್ಮೂಲಕರ್ತರು ಬಂಡವಳಶಾಹಿಗಳಲ್ಲದೆ ಬೇರಾರು ಇಲ್ಲ. ಇದರಿಂದ ಪ್ರಬಲ ರಾಷ್ಟ್ರಗಳ ನೈತಿಕತೆಯು ಅಧಃಪತನವಾಗುವದರ ಜೊತೆಗೆ ರಾಷ್ಟ್ರವೂ ಅಧೋಗತಿಗಳಿಯುವ ಭೀಕರ ಪರಿಸ್ಥಿತಿಯೊದಗಿದರೂ ಆಶ್ಚರ್ಯಪಡುವಂತಹದೇನೂ ಇಲ್ಲ. ಇದು ಬಂಡವಳಶಾಹೀ ರಾಷ್ಟ್ರಗಳ ಸೋಲು; ಕಮ್ಯೂನಿಸ್ಟರ ವಿಜಯ!

ಸ್ಟಾಲಿನ್ ಸತ್ತರೇ.....?

[ಸ್ಟಾಲಿನ್ ಳಕ್ಕನೆ ಸತ್ತುಬಿಟ್ಟರೆ ರಶಿಯದಲ್ಲಿ ಏನೆಲ್ಲ ಬದಲಾವಣೆಗಳಾಗುವುವು ಎಂಬುದನ್ನು ಪ್ರಶ್ನೆವು ಮಾಹಾಯುದ್ಧದ ಕಾಲದಲ್ಲಿ ಮೊಸ್ಕೋದಲ್ಲಿ ಬಹುಕಾಲ ಇದ್ದು ಅನುಭವ ಪಡೆದ ಬ್ರೂಸ್ ಲಾಕ್ ಹಾರ್ಟ್ ಆವರು ಚೆನ್ನಾಗಿ ವಿವರಿಸಿದ್ದಾರೆ.]

ಡಿಸಂಬರ 21ಕ್ಕೆ ಜನರಲಿಸ್ಸಿಮೊ ಸ್ಟಾಲಿನ್‌ಗೆ 71 ವರ್ಷ ತುಂಬಿತು.

೧೯೧೭ರ ಮಹಾಕ್ರಾಂತಿಯನ್ನು ತೀಲಿಬಿಟ್ಟವರಿಂದ ಸದಸ್ಯರ ಪೈಕಿ ಉಳಿದಿರುವವನು ಸ್ಟಾಲಿನ್ ಒಬ್ಬನೇ. ಅವನ ಅಧಿಕಾರಕ್ಕೆ ರಶಿಯದಲ್ಲಿ ಅಪಸ್ವರ ಇದ್ದಂತಿಲ್ಲ. 'ಜನತಾ ಸರ್ವಾಧಿಕಾರ'ವು ಏಕಾಕಿ ವ್ಯಕ್ತಿಯೊಬ್ಬನ ಸರ್ವಾಧಿಕಾರವಾಗಿ ಪರಿಣಮಿಸಿರುವುದರಿಂದ ಸ್ಟಾಲಿನ್ ರಶಿಯದ ಸಾಮ್ಯವಾದಿಗಳಿಗೆ ಮಾತ್ರವಲ್ಲ, ಜಾಗತಿಕ ಸಾಮ್ಯವಾದಿಗಳಿಗೇನೆ ಗುರುತೀಕರಿದ್ದಾನೆ. ರಶಿಯದ ಘಟನೆ ಬಲವಾಗಿ ಬಿಂಬಿತವಾಗಿದೆ- ಸ್ಟಾಲಿನನ ದೇಹದ ಘಟನೆಯೂ ಅದೇ ರೀತಿ ಪ್ರವರ್ಧಮಾನವಾಗುತ್ತಿದೆ. ಸ್ಟಾಲಿನ್ ಪ್ರಭುತ್ವದ ಅನಾರೋಗ್ಯದ ಕುರಿತು ಹಲವಾರು ಗಾಳಸುದ್ದಿಗಳು ಹುಟ್ಟಿಕೊಂಡಿರುವುದಂತೂ ಖಂಡಿತ. ಕೈವಿಲ್ಲಿನಲ್ಲಿನ ಮನ್ನೆಯೆಯ ಮುದ್ರೆಯನ್ನು ಹೊತ್ತಿರುವುದಿಲ್ಲ. ಅವನ ಶಾರೀರಿಕ ತೀಕ್ಷ್ಣತೆಯಾಗಲಿ, ಮಾನಸಿಕ ಪ್ರಕರತೆಯಾಗಲಿ ಇನ್ನೂ ಕಮ್ಮಿಯಾದುದು ಈ ಎರಡ ವರ್ಷಗಳಲ್ಲಿ ಅವನನ್ನು ಕಂಡ ವಿದೇಶೀಯ ರಾಜಕಾರಣಿಗಳ ಮತದಲ್ಲಿ ಕಂಡುಬರುವುದಿಲ್ಲ.

ಆದರೇನು? ಸ್ಟಾಲಿನ್ ಮುದುಕನಾಗಿಬಿಟ್ಟದ್ದಾನೆ. ಬೇಡವೆಂದರೂ ಅವನ ಅನಂತರಕ್ಕೆ ಏನು? ಎಂಬ ಪ್ರಶ್ನೆ ಪ್ರಪಂಚದ ರಾಜಧಾನಿಗಳಲ್ಲಿಂತೋ ಅಂತೆಯೇ ಮೊಸ್ಕೋ ನಗರದಲ್ಲಿಯೂ ಕೇಳಿಬರುತ್ತಿದೆ.

ಜಗತ್ತಿನಲ್ಲಿ ಸ್ಟಾಲಿನ್ ಒಳಿಕ ರಶಿಯನ್ ಸಾಮ್ಯವಾದವೂ, ಥೋರಣೆಯೂ ಇದ್ದಂತೆಯೇ ಇರುತ್ತದೆಂಬುದು ಸುರಕ್ಷಿತ ವಿಮರ್ಶೆ ಏನಿಸಬಹುದಾದರೂ ವಸ್ತುಸ್ಥಿತಿ ಹೇಗಿದೆ? ಎಂಬುದನ್ನು ಪರಿಶೀಲಿಸಬೇಕು.

ಆ ಮೇಲೆ ಯಾರು?

ಸ್ಟಾಲಿನ್ ಆದ ಮೇಲೆ ಬರುವವನು ಯಾರು? ಎಂಬುದರ ಗಟ್ಟಿ ಅಂದಾಜು ಮಾಡಲು ಬರುತ್ತಿದೆ. ಈಗಿರುವ ಘಟನಸ್ಥಿತಿಯನ್ನೂ ಅಧಿಕಾರವನ್ನೂ ಸಂಪಾದಿಸಲು ಸ್ಟಾಲಿನ್ ಹದಿನೇಳು ವರುಷ ದುಡಿದಿದ್ದಾನೆ. ರಶಿಯದ ಜನತೆಯನ್ನು ಮಹಾಸಮರವೊಂದರಲ್ಲಿ ವಿಜಯಶೀಲರನ್ನಾಗಿ ರಾಷ್ಟ್ರೀಯತ್ವವನ್ನು ಬೆಳೆಸಿದ್ದಾನೆ.

ಲೆನಿನ್ ಸತ್ತೊಡನೆ ನಾಯಕತ್ವಕ್ಕೆ ಹೋರಾಟ ಜರುಗಿತ್ತು. ಸಾಮ್ಯವಾದಿ ಪಕ್ಷದ ಕಾರ್ಯದರ್ಶಿಯ ಸ್ಥಾನದಲ್ಲಿದ್ದ ಸ್ಟಾಲಿನ್ ಕೂಟ ನೀತಿಯನ್ನನುಸರಿಸಿದ್ದರಿಂದಲೂ, ಟ್ರಾಟ್ಸ್ಕಿ ಲೆನಿನ್ ಮಹಾಪುರುಷನ ಶವಯಾತ್ರೆಗೆ ಆಗಮಿಸದಿದ್ದುದರಿಂದಲೂ ಅಧಿಕಾರಲಕ್ಷ್ಮಿ ಸ್ಟಾಲಿನ್‌ಗೆಯೆ ಒಲಿದಳು.

ಇಂದು ಅಂಥ ಹೋರಾಟ ಜರಗುವ ಲಕ್ಷಣವಿಲ್ಲ. ಸ್ಟಾಲಿನ್‌ಗೆ ಅತಿ ಹತ್ತಿರ ರಾಗಿರುವವರೋ ರಾಜಕೀಯ ಹುದಿಯಲ್ಲಿ ಮೇಲಿನ ಸಾಲಿನಲ್ಲಿರುವವರೋ, ಖಂಡಿತವಾಗಿಯೂ ಅಧಿಕಾರ ಸ್ವೀಕರಿಸುವರು ಕಡಮೆಯಾದರು ಸಾಮಿಪ್ಯ ನಡೆದಿರುವವರ ಪೈಕಿ ಮೊಲೊಟೋವ ಮೊದಲಿಗನು. ಪ್ರಥಮ ಜಾಗತಿಕ ಸಮರದ ಕಾಲದಲ್ಲಿ ಈಚೆ ಸ್ಟಾಲಿನ್ ಜತೆಗೆ 'ಪ್ರಾವ್ದಾ' ಪತ್ರಿಕೆಯ ಸಂಪಾದಕೀಯ ಕೆಲಸದಲ್ಲಿ ಶ್ರಮಿಸುತ್ತಿದ್ದ. ಅಂದಿನಿಂದ ಬಿಳೆದ ಸಂಬಂಧ ನಿಜ. ಆದರೆ ಮೊಲೊಟೋವ ಜನಪ್ರಿಯನಾಗಿಲ್ಲ. ಈಗಾಗಲೇ ಅವನಿಗೆ ೭೦ ಆಯಿತು. ನಾಯಕತ್ವದ ಗುಣಗಳಲ್ಲಿ ಅವನು ಕೊಂಚ ಹಿಂದೆ.

ದೊಡ್ಡ ಜನ

ಮೊಲೊಟೋವನಿಗಿಂತಲೂ 'ದೊಡ್ಡ ಜನ' ಒಬ್ಬುಂಟು. ಅವನ ಹೆಸರೂ ಮಾಲೆಂಕೊವ; ಅತ ಸಾಮ್ಯವಾಗಿ ಪಕ್ಷದ ಕಾರ್ಯದರ್ಶಿ; ಸ್ಟಾಲಿನ್‌ಗ್ರಾಡ್ ಯುದ್ಧ ವಿಷಮಿಸಿದಾಗ ಸ್ಟಾಲಿನ್ ಅಲ್ಲಿಗೆ ಮಾಲೆಂಕೊವನನ್ನೇ ಅಟ್ಟಿದ್ದನು. ಇನ್ನೊಬ್ಬ ಗೂಢಚಾರರ ಮುಂದಾಳು ಬೆರ್ಯಾಮತ್ತೊಬ್ಬ ಮಿಕೊಯಾ.

ಇವರಲ್ಲಿ ಯಾರು ಮುಂದ ನಾಯಕತ್ವಕ್ಕೇರುವವರೆಂದು ದೃಢವಾಗಿ ಹೇಳಲಿಬರುವುದಿಲ್ಲ. ಸೈನ್ಯದ ಸಡಕಾದಿಂದ ಇನ್ನೊಂದು ಸರ್ವಾಧಿಕಾರವೇ ನಡೆಯುವುದೆಂದೂ ನಾವು ಹೇಳಲಾರೆವು ಯುದ್ಧಕಾಲದಲ್ಲಿ ಸೇನಾನಿಗಳನ್ನು ಪ್ರಶಂಸಿಸಿದರೂ ಯುದ್ಧ ಮುಗಿದ ಬಳಿಕ ಇವರಿಂದ ಅವರ ಸುದ್ದಿ ಇಲ್ಲ. ಅವರಿಗೆ ರಾಷ್ಟ್ರದಲ್ಲಿ ವಿಶೇಷ ಸಬಲತ್ವವಿದ್ದರೂ, ಅವರು ಸ್ಟಾಲಿನ್‌ಗೆ ಕಷ್ಟಕೊಡುವುದು ಹೌದಾದರೂ; ಸ್ಟಾಲಿನನ ಸಹೋದ್ಯೋಗಿಗಳ ವಿಷಯ ಅವರಿಗೆ ಸದಭಿಪ್ರಾಯ ಇದ್ದಂತಿಲ್ಲ. ಆದುದರಿಂದ ಸ್ಟಾಲಿನ್ ಸತ್ತರೆ ಗೊಂದಲವೇಳುವುದು ಸತಃಸಿದ್ಧ. ಅಮೇರಿಕೆಯ ರಾಯಭಾರಿ ಬೆಡೆಲ್ ಸ್ಮಿಥ್ ಅವರು ರಶಿಯದ ಜನರಿಗೆ ಸ್ವಾತಂತ್ರ್ಯದ ಅರಿವೇ ಇಲ್ಲವೆಂದು ಹೇಳುತ್ತಾರೆ. ಆದರೆ ಇಂಗ್ಲಿಷ್ ರಾಯಭಾರಿ ಎ.ರಶಿಯನ್ ಜನತೆ ಬಲಾಢ್ಯರಿಗೂ, ವೈಸಿಥ್ಯಕ್ಕೂ ಸ್ವಾತಂತ್ರ್ಯಕ್ಕೂ ಕಿತರಿಸುತ್ತದೆ' ಎನ್ನುತ್ತಾರೆ.

ಹೊಸ ಕೋಮುವಾರು ಭಾವನೆ

ಮಾಜಿ-ಕಮ್ಯೂನಿಸ್ಟರಿಂದ ಸಿಲೋನಿನ ಅಂಧವರು ಸ್ಟಾಲಿನ್ ಸತ್ತೆಯನ್ನು ಖಂಡಿಸಿ, ಜನತಾ ಕ್ರಾಂತಿಗೆ ದ್ರೋಹವೆಂಬಂತೆ ಪರಿಭಾವಿಸಿ ಟೀಕಿಸಿದ ಪರಿಯನ್ನು ಈ ಬಗೆಯಾಗಿ ವಿಶ್ಲೇಷಿಸಿ ತ್ಯಜಿಸಿದ್ದಾರೆ.

ರಶಿಯಾ ಸಮಾಜದಲ್ಲಿ ವರ್ಗಗಳೂ ಜಾತಿಗಳೂ ಇಲ್ಲದಿದ್ದರೂ, ನವವರ್ಗಗಳು ಉದಿಸುತ್ತಲಿವೆ. ಆಳುವ ವರ್ಗವನ್ನು ನೋಡಿದರೆ ಸ್ಟಾಲಿನ್‌ನಿಂದ ಹಿಡಿದು ಗ್ರಾಮಾಂತರ ಅತಿ ಚಿಕ್ಕ ಹುದ್ದೆಯುಳ್ಳವನವರೆಗೂ ವಿಶಿಷ್ಟ ಹಕ್ಕುಗಳಿಂದಿರುವುದನ್ನು ನೋಡುತ್ತೇವೆ. ಬೇರೆ ಬೇರೆ ಹಂತಕ್ಕೆ ಬೇರೆ ಹಕ್ಕು, ಪ್ರತಿಷ್ಠೆ ಲಭಿಸಿರುವುದರಿಂದ ಹೊಸ ಬಗೆಯ ವರ್ಗಗಳುಂಟಾಗಿವೆ ಎಂದಾಯಿತು. ಅತಿ ಕೆಳಗಿನ ಮೆಟ್ಟಲಲ್ಲಿ ನೂರಕ್ಕೆಂಭತ್ತರಷ್ಟು ಬಲವಾಗಿರುವ ರೈತರೂ, ಕಾರ್ಮಿಕರೂ ಇದ್ದಾರೆ. ಘರ್ಷಣೆ, ಒಳಸಂಚು, ವ್ಯಕ್ತಿತ್ವಗಳ ತಿಕ್ಕಾಟ ಪ್ರಜಾತಂತ್ರದ ರಾಷ್ಟ್ರಗಳಿಗಿಂತಲೂ ಜಾಸ್ತಿ ಪ್ರಮಾಣದಲ್ಲಿ ನಡೆಯುವುದು. ಅತೃಪ್ತಿ ಸಾರ್ವದೇಶೀಯವಾಗಿ ಹರಡಿದರೂ ಬಾಯಿ ಬರದೆ ಸುಮ್ಮನಾಗಿದೆ.

ಈ ಚಿತ್ರದಲ್ಲಿ ಕೊಂಚ ಅತಿರೇಕ ಇರುವುದೆಂಬುದನ್ನು ನಂಬಿದರೂ, ಕೈವಿಲ್ಲಿನ ನಾಯಕರು 33 ವರ್ಷಗಳಾದರೂ ಇನ್ನೂ 'ಘೋಷಾ'ದಲ್ಲೇ ತೆಲುಗಾಡುವುದನ್ನು ಕಂಡರೆ ಸಂದೇಹವಾಗುವುದು

ಪ್ರಚಾರದ ಉದ್ದೇಶ

ಕ್ರಾಂತಿಗೆ ಪೂರ್ವದ ಯುಗದಲ್ಲಿ ರಶಿಯನ್ ಚಕ್ರವರ್ತಿಯ ಸರಕಾರವು ಯುದ್ಧದಿಂದಲ್ಲದೆ ಆನ್ಯಥಾ ಉರುಳಿದು ಎಂಬ ಭಾವನೆ ಸರ್ವವ್ಯಾಪಿಯಾಗಿತ್ತು. ಸ್ಟಾಲಿನ್ ಆ ಯುಗಕ್ಕೆ ಸೇರಿದವನು. ಈಗ ಈ ತತ್ವವು ಬದಲಾಗಿದೆ. ರಶಿಯದ ಜನತೆಯಲ್ಲಿ ಪಶ್ಚಿಮದಿಂದ ಧಾಳಿ ಬರುವುದೆಂಬ ಬೆದರಿಕೆಯನ್ನು ಪ್ರಾಕೃತ ಜನರನ್ನು ಕ್ರಾಂತಿ ವಿಮುಖರಾಗಿ ಮಾಡಲು ಪ್ರಚಾರವು ಭರದಿಂದಸಾಗುತ್ತಿದೆ. ಹೆಚ್ಚು ಹೆಚ್ಚಾಗಿ ಬೆಳೆಯುತ್ತಿರುವ ಅತೃಪ್ತಿಯು ಯಾವ ರೀತಿ ಸರಿಹರಿವಿಗೆ ಬರುವುದು ಕಷ್ಟ. ಒಂದು ದೃಷ್ಟಿಯಲ್ಲಿ ಸ್ಟಾಲಿನ್ ಸತ್ತೆಯ ಈ ಮಾನವತ್ತು ವರ್ಷಗಳ ಸಹಿಷ್ಣು ಪೊಸರ್ಜನಾಶಕ್ತಿಯೂ ಕುಂಠಿತವಾಗಿ ಜಡವಾಗಿದೆ. ಸೈದ್ಧಾಂತಿಕ ದೃಷ್ಟಿಯಿಂದಂತೂ ಪ್ರಜಾತಂತ್ರದ ರಾಷ್ಟ್ರಗಳು ಕನಸಲ್ಲೂ ಎಣಿಸದ ಉನ್ನತಿಯು ಹಸ್ತಗತವಾಗಿದೆ. ರಾಜಕೀಯದಲ್ಲಿ ಬೇಕಾದರೆ ಮಹಾಕ್ರಾಂತಿ ಸಂಭವಿಸಿದರೂ, ಆರ್ಥವ್ಯವಸ್ಥೆಯೂ ಸಾಮಾಜಿಕ ಸಂವಿಧಾನವೂ ಬದಲಾಗಲು ದೀರ್ಘಾವಕಾಶ ಬೇಕಾದೀತು ಎಲ್ಲವೂ ನಿರ್ಣಯವಾಗುವುದು ಜನರಿಂದಲೇ ಸೈ. ಸ್ವಾನವಾಗಿ ಎಲ್ಲವನ್ನೂ ಕೆಲಗೂಲ ಸಹಿಸಿಕೊಂಡಿದ್ದ ಜ್ವಾಲಾಮುಖಿಗಳಂತೆ ಒಮ್ಮೆಲೇ ಸ್ಫೋಟವಾಗುವುದು ಎಂಬಿಯದ ಜನತೆಯು ಸಾಮಾಜಿಕ ಶೀಲ. ಒಬ್ಬೊಬ್ಬರನ್ನೇ ಭೇಟಿಯಾದರೆ ರಶಿಯನರು ಸಾಧುಸ್ವಭಾವಿಗಳೂ, ಶಾಂತಿ ಪ್ರಿಯರೂ ಹೌದು. ಅವರ ಇತಿಹಾಸವನ್ನು ನೋಡಿದರೆ ಮಾತ್ರ ಕಾಲಕಾಲಕ್ಕೆ ಅವರು ಒಮ್ಮಿಂದೊಮ್ಮೆ ಕ್ರಾಂತಿ ಭಕ್ತರಾಗಿ ಭಯಂಕರ ಬರ್ಬರತೆಯಿಂದ ಕೇಂದ್ರ ಅಧಿಕಾರವನ್ನು ನಿರ್ಮೂಲನಮಾಡಿರುವುದನ್ನು ನಾವು ಕಾಣುತ್ತೇವೆ.

ಧರ್ಮವೆಲ್ಲಿದೆ?

ಸಾಮ್ಯವಾದಿ ತತ್ವವು ಎನಿತೇ ಸಾರಿದರೂ ರಶಿಯದಲ್ಲಿ ಧರ್ಮವು ಆಳಯಲಿಲ್ಲ. ಪ್ರಜಾರವಿಂದಲೂ ಉಪಯೋಗ ಬರಲಿಲ್ಲ ಯುದ್ಧ ಕಾಲದಲ್ಲಿ ಸ್ಟಾಲಿನ್ ಧರ್ಮ ವಿರೋಧಕ ಶಾಸನಗಳನ್ನು ರದ್ದು ಮಾಡಿ ಚರ್ಚುಗಳ ಜೀರ್ಣೋದ್ಧಾರ ಮಾಡುವ ಕಾಲವೂ ಬಂದಿತ್ತು. ಗುರು ಮಠಗಳಿಗೆ ರಾಜಕೀಯ ಶಕ್ತಿ ಇಲ್ಲದೆ ಹೋದಾಗಲೂ, ಅವು ಸ್ಟಾಲಿನ್ ಸರಕಾರಕ್ಕೆ ಮಣಿದೆ. ಪಡೆಯಂಗಲ್ಲೂ, ಯುದ್ಧ ಕಾಲದಲ್ಲಿ ಪುನಃ ಪ್ರಚುರವಾದ ಧಾರ್ಮಿಕ ಭಾವನೆ ರಶಿಯದ ಜನರಲ್ಲಿ ಬಲವಾಗಿ ಬೇರೂರಿದಂತಿದೆ. ಈಗ ಅಲ್ಲಿನ ಇಗರ್ಜಿಗಳು ಭಕ್ತಾದಿಗಳಿಂದ ತುಂಬಿತುಳುಕುತ್ತಿವೆ ಇತ್ತ ಕಡೆ ಶ್ರದ್ಧಾವಂತ ಸಾಮ್ಯವಾದಿಗಳು ಇಂತೀ ಧಾರ್ಮಿಕ ಮಹಾಪೂರಕ್ಕೆ ಒಡ್ಡು ಹಾಕುವುದು ಹೇಗೆಂದು ಆಂಜಿಯಿಂದ ಕೃಮ ಶೋಧನೆ ಮಾಡುತಿದ್ದಾರೆ ಹಿಂಸೆಯು ಉಪಯೋಗಿಸಿ ಇಲ್ಲವಾದ್ದರಿಂದ ಪ್ರಚಾರದ ಉಪಕರಣವನ್ನೆ ಬಳಸಬೇಕಾಗಿದೆ. ಜನತೆಯ ಶಿಕ್ಷಣವೂ, ಧರ್ಮ ಪುನರುತ್ಥಾನವೂ ಜತೆಯಾಗಿ ಒಂದೇ ಒಂದು ದಿನ ಸಮಾಜವಾದದ ಮೇಲಾದರೂ, ಸಮಾಜವಾದವನ್ನೆ ಕಾಯತಃ ಅನ್ವಯಿಸುವ ಸೋವಿಯಟ್ ಅಸಾಪದ್ಧತಿಯ ಮೇಲೆ ಮುನಿದೇಳುವ ನಿಶ್ಚಯ.

ಒತ್ತಿ ಹಿಡಿದ ರಾಷ್ಟ್ರೀಯತೆ

ರಶಿಯದಲ್ಲಿರುವ ಹದಿನಾರು ಪ್ರಜಾರಾಜ್ಯಗಳನ್ನು ಕೇಂದ್ರ ಸರಕಾರ ಬಲವಾಗಿ ಬಿಗಿದು ಹಿಡಿದುಕೊಂಡಿದೆ. ಈ ಪ್ರಜಾರಾಜ್ಯಗಳಲ್ಲಿಯೂ, ಪೂರ್ವ ಯುರೋಪಿನಲ್ಲಿ ಈಗ ದನುನಕ್ಕೆ ಪಕ್ಕಾಗಿ ಮಣಿದಿರುವ ದೇಶಗಳಲ್ಲಿಯೂ, ರಾಷ್ಟ್ರೀಯತ್ವವು ಪುಟಿದೆದ್ದರೆ ಹಳಬರಾದ ನಾಯಕರಿಂದ ಅದನ್ನು ನಾಶಮಾಡಲು ಸಾಧ್ಯವೆ? ಆದೂ ಸ್ಟಾಲಿನ್ ಹೋದ ಮೇಲೆ ಬರುವ ಗೊಂದಲದಲ್ಲಿ ಏನೆಲ್ಲ ವಿದ್ಯಮಾನಗಳು ನಡೆದಾವು?—ಎಂಬುದನ್ನು ಈಗಲೇ ಕೇಳುವುದು ಕಷ್ಟ.

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಸಪ್ರವಗಳಾದ- ಉದರಶೂಲೆ, ಕಟಿಶೂಲೆ, ಪೈತ್ಯೆಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆ ಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಸದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಜಿಸ್ಟರ್ಡ್)
ಪೋ॥ ಕುಂಜಾಲು, ದ. ಕ.
ಇವರ 'ಧನ್ವಂತರೀ ಮಾತ್ರೆ'ಗಳು ಮಾತ್ರ.

ಕೇವಲ ನಾಲ್ಕಾಣೆಯ ಅಂಚೆಚೀಟಿಯನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೆಟ್‌ನ್ನು ಪಡೆದು ಅದರ ಶೀಘ್ರೆ ಪರಿಣಾಮಕಾರೀ ಗುಣಗಳನ್ನೆಕೆ ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.

ನವ್ಯ ನೆರೆಯು ನಾಡು ಚೀನದ ಸಮ
ಗಳು ನಮ್ಮಲ್ಲಿವದಕ್ಕಿಂತ ತೀರ ಭಿನ್ನವ

ಇಂದು ನವಚೀನಾದ ಸರಕಾರ ದ
ತಿಯಿಂದ, ಉತ್ತರ ಕಾರ್ಯಕುಶಲತೆ
ಂದ ರಾಷ್ಟ್ರ ಪುನರ್ನಿರ್ಮಾಣದ ಹೊ
ನ್ನು ಯಶಸ್ವಿಯಾಗಿ ನಿರ್ವಹಿಸುತ್ತಿ

ಶಿಕ್ಷಣದ ವ್ಯವಸ್ಥಾರಂಭಕ್ಕಾಗಿ ಅದು "ಪ್ರ
ಹೊಂದು ಹಳ್ಳಿಗೂ ಒಂದೊಂದು ಶಾ
" ಎಂಬ ಪಣತೊಟ್ಟು ಕೆಲಸಮಾಡು
ದೆ. ಸದ್ಯ ಚೀನಾ ಸರಕಾರದಿಂದ (1)
ಲ್ಲು ಲಕ್ಷ ಪ್ರಾಥಮಿಕ ಶಾಲೆಗಳೂ,
) ೩೬೯೦ ಸೆಕೆಂಡರೀ ಶಾಲೆಗಳೂ, (೩)
೭೬ ಉಚ್ಚಶಿಕ್ಷಣಾಲಯಗಳೂ ನಡೆಸಲ್ಪ
ತಿದ್ದು ಅವುಗಳಲ್ಲಿ ಕ್ರಮವಾಗಿ (೧)
ಾರು ಕೋಟಿಗೂ ಹೆಚ್ಚು; (೨)
೯,೯೦,೦೦೦ ಮತ್ತು ೩)೧೫೩,೦೦೦
ವಿದ್ಯಾರ್ಥಿಗಳು ಓದುತಿದ್ದಾರೆ. ಇವ್ಯಲ್ಲದೆ
ಾರೂ ಹಾಗೂ ರೈತರಲ್ಲಿ ಶಿಕ್ಷಣ ಪ್ರೇ
ವನ್ನು ಹುಟ್ಟಿಸಲು ಸಾವಿರ ಸಂಖ್ಯೆಯ
"ಸ್ವಡೀಗ್ರಾಪ್", "ಎಂಟರ್ ಸ್ವಡೀ
ಸ್ಕೂಲ್" ರಾತ್ರಿಶಾಲೆ, ಬಿಡುಸಮಯದ
ಲಿ ಮುಂತಾದವು ಸಂವ್ಯವಸ್ಥಿತ ರೀತಿ
ಲ್ಲಿ ನಡೆಯುತ್ತಿವೆ

ಚೀನಾದ ನವಸರಕಾರದ ಭಾವೀ ಗತಿ
ರೂಪರೇಷೆ ಹಾಕಲು ಏಗನೇ ಸಪ್ತಂ
ರ, ೧೯೫೦ರೆಂದು ಚೀನಾದ ಸಮಸ್ತ
ಜನೈತಿಕ ಪಕ್ಷಗಳ ಸಾಮೂಹಿಕ ಸ
ಸ್ಯಲನವೊಂದು ಸೇರಿತ್ತು. ಆದರಲ್ಲಿ
ೂತನ ಸರಕಾರದ ಅಧಾರಭೂತ ನೀತಿ
ು ನಿರ್ದೇಶಿಸಲ್ಪಟ್ಟಿದೆ. ಅರುವತ್ತು ಸೂ
ಗಳಿಂದೊಡಗೂಡಿದ ಸಂಯುಕ್ತ ಕಾ
ರ್ಯಕ್ರಮಗಳ ಪಟ್ಟಿಯಲ್ಲಿ ಶಿಕ್ಷಣ ವಿಕಾ
ಕ್ಕೆ ಸಂಬಂಧಿಸಿದ ಭಾಗದಿಂದ ಅಲರ ವರೆ
ನ ಸೂತ್ರಗಳು ತುಂಬ ಮಹತ್ವದ್ದಾಗಿ
. ಜನತೆಯ ಶೈಕ್ಷಣಿಕ ಮತ್ತು ಸಾಂ
ಸ್ಕೃತಿಕ ಮಟ್ಟವನ್ನು ಎತ್ತರಿಸಲು, ರಾ
್ಟ್ರ ನಿರ್ಮಾಣಕ ಬುದ್ಧಿಯನ್ನು ವರ್ಧಿಸ
ು, ಜನತೆಯಲ್ಲಿ ವ್ಯಾಪಕ ಶಿಕ್ಷಣ ಪ್ರ
ುರಗೊಳ್ಳಲು, ಔದ್ಯೋಗಿಕ, ಕೃಷಿಗೆ
ಂಬಂಧಿಸಿದ, ರಕ್ಷಣೆಗೆ ಅನುಕೂಲವಾದ
ೈಜ್ಞಾನಿಕ, ಆರ್ಥಿಕ, ಅಂತರ್ರಾಷ್ಟ್ರೀ
ು, ಐತಿಹಾಸಿಕ ಎಲ್ಲ ವಿಭಾಗಗಳನ್ನೂ
ನ್ಯ ದೃಷ್ಟಿಯಿಂದ ಸುಧಾರಣೆ ಮಾಡಲು
ುತ್ತು ಜನರ ಸ್ವಾಸ್ಥ್ಯವನ್ನು ಕಾಪಾಡಿ
ೊಂಡು ಹೋಗಲು ಅನುಸರಿಸಬೇಕಾದ
ಧ್ಧಾಂತಗಳನ್ನು ಇವುಗಳಲ್ಲಿ ಉಲ್ಲೇಖಿಸ
ಾಗಿದೆ. ಭಾಷಾ-ಲಿಪಿಗೆ ಸೂತ್ರ ಹೀಗೆ
ೇಳುತ್ತದೆ—"ಜನತೆಯ ಸೇವಾದೃಷ್ಟಿ
ುಂದ, ರಾಜನೀತಿಗೆ ಸಂಬಂಧಿಸಿದ ತೀರ
ಳಿಕೆಯ ಅಭಿವೃದ್ಧಿಗಾಗಿ ಮತ್ತು ಪರಿ
ೃಮದ ಜೀವನದಲ್ಲಿ ಅಪೇಕ್ಷೆ ಹೆಚ್ಚಿಸಲಿಂ
ು ಸಾಹಿತ್ಯ ಮತ್ತು ಕಲೆಗಳಿಗೆ ಪ್ರೋ
ಾಹನ ನೀಡಲಾಗುವುದು; ಸಾಹಿತ್ಯ ಮ
ತ್ತು ಕಲೆಯ ಉತ್ತಮ ಕೃತಿಗಳಿಗೆ ಪುರ
ಸ್ಕಾರವೀಯಲಾಗುವುದು; ಜನಸದ
ಾಟ್ಯ ಮತ್ತು ಸಿನೇಮಾಗಳನ್ನು ಅಭಿ
ವೃದ್ಧಿಸಲಾಗುವುದು; ಶಿಕ್ಷಣ ಪ್ರಣಾ
ಲಿಯು ಆದರ್ಶಪೂರ್ಣ, ಹಾಗೂ
ವ್ಯವಹಾರಿಕ ಎರಡೂ ರೀತಿಯ
ಸವನ್ನಯವಾಗಿರುವುದು" ಕಾರ್ಮಿಕ್ರಮದ
ಇತ್ತೀತರ ಸೂತ್ರಗಳಲ್ಲಿ ಬಾಲಕರನ್ನೂ,
ಾತೆಯರನ್ನೂ ಶಿಕ್ಷಿತರನ್ನಾಗಿಸಲು, ಅ
ವರ ಸ್ವಾಸ್ಥ್ಯವನ್ನು ಕಾಪಾಡಲು, ಮತ್ತಿ

ನವಚೀನದ ಮುನ್ನಡೆ

ಮಕ್ಕಳ ಪಾಲನೆಯ ವ್ಯವಸ್ಥೆ

ತರ ಜನಉಪಯೋಗಿ ಕಲೆಗಳನ್ನು ಒದಗಿಸಿಕೊಡಲು ಸರಕಾರವು ಒದ್ದವಾಗಿದೆ ಎಂದು ಹೇಳಿದೆ.

ಈಗಿನ ಬಾಲಕರ ಪಟ್ಟು ಮಾತೆಯರ ನ್ನೂ, ಹಿಂದಿನವರನ್ನೂ ಗಮನಿಸಿದರೆ ಅವ ರ ಸ್ಥಿತಿಗತಿಯಲ್ಲಿ ಆಕಾಶ ಪಾತಾಳಗಳ ಅಂತರವು ತೋರುವುದು. ಚೀನದಲ್ಲಿ ಬಾ ಲಹತ್ಯೆ ಮತ್ತು ಬಾಲವಿಕ್ರಯಗಳು ಈ ಹಿಂದೆ ಧಾರಾಳವಾಗಿ ಬಳಕೆಯಲ್ಲಿದ್ದುವು. ಹೆಣ್ಣುಮಗು ಹುಟ್ಟಿದರೆ ಆಪತ್ತಿಕರುನೆಂದೇ ಭಾವಿಸಲಾಗುತ್ತಿತ್ತು; ಮತ್ತು ಅದನ್ನು ಕೂಡಲೇ ಕೊಂದು ಹಾಕತಿದ್ದರು. ಬಡ ತನದಿಂದ ಜರ್ಜರಿತರಾದ ಹೆತ್ತವರು ತ ಮ್ಮ ಗಂಡು ಹೆಣ್ಣು ಮಕ್ಕಳನ್ನು ಧನಿಕ ರಿಗೆ ಮಾರಿ ಬಿಡುತ್ತಿದ್ದರು. ಪೈರು ಪೆನ್ಹಾ ಗಿಬರದ ವರ್ಷ ಗೇಣಿಸಂದಾಯದ ಬೇರಂ ವು ಉಪಾಯವೂ ತೋಚದೆ, ತಮ್ಮ ಸು ಪುತ್ರಿಯರನ್ನು ಧನಿಗೆ ಒಕ್ಕುಲಿಗರು ಕೊ ಟ್ಟು ಬಿಡುತ್ತಿದ್ದರು. ಅದರಿಂದ ಹದಿನಾರ ಪ್ರಾಯದ ಹುಡುಗಿಯರು ಈ ರೀತಿ ನ ರಕದ ಜೀವನ ನಡೆಸುತಿದ್ದರು. ಅವರಿಗೇ ನೂ ಅಧಿಕಾರವಿಲ್ಲಿ; ಆಸ್ಪೇ ಜಲ್ಲ ಜ ಮಿನ್ದಾರರ ಪೀಡೆ, ಹಿಂಸೆ, ಅತ್ಯಾಚಾ ರಗಳಿಗೆ ಅವರು ದಿನ ಬಲಿಯಾಗಬೇಕಿ ತ್ತು. ಈ ದೆಸೆಯಲ್ಲಿ ಅವರು ಸತ್ತೂ ಹೋ ಗುತಿದ್ದರು ಅದರೂ ಜವರ ಸ್ಥಿತಿಗಂಡು, ಮಾರಕಗೆಂಡು, ಎಡ-ಬೊಟ್ಟ ಕಣ್ಣೀ ರುಕರೆವವರೂ ಇರಲಿಲ್ಲ. ಮುಂತೆ ಇವ ನ್ನು ತುಂಬ ದುಡ್ಡು ತೆಗೆದುಕೊಂಡು ಜ ಮಿನ್ದಾರರು ವೇಶ್ಯಾಲಯಗಳಿಗೆ ಸೇರಿ ಸಿಬಿಡುತ್ತಿದ್ದರು! ಅಲ್ಲಿ-ಇಲ್ಲಿ ಎಲ್ಲಾದರೂ ಒಂದೆರಡು ಶಿಶ ಪಾಲನ ಗೃಹಗಳು ಇರು ಲೇನೋ ಇದ್ದುವು. ಆದರೆ ಅಲ್ಲಿನ ಕೆಲಸ ಗಾರರ ವರ್ತನೆ, ಊಟತಿಂಡಿಗಳ ಕೇಳು ವಷ್ಟು, ದೋಷಯುಕ್ತ ಆಹಾರಗಳ ದೆಸೆ ಯಿಂದ ಬಾರಿಗೂ ಅಲ್ಲಿಗೆ ಮಕ್ಕಳನ್ನು ಕಳಿಸುವ ಸಾಹಸವಾಗತ್ತಿರಲಿಲ್ಲ. ಬಾಲ ಮೃತ್ಯುವಿನ ಸಂಖ್ಯೆ ಹೆಚ್ಚಿದ್ದಂತೆ ಸಾಂಕ್ರಾ ಮಿಕ ರೋಗಗಳ ಹಾವಳಿಯೂ ವಿಪರೀತ ವಿತ್ತು.

ನವಚೀನದ ಸರಕಾರ ಸ್ಥಾಪಿತವಾದಂ ದಿನಿಂದ ಈ ಸ್ಥಿತಿಯಲ್ಲಿ ಬಹಳ ಪರಿವರ್ತ ನ ಕಿದ್ದಿಸಿದೆ. ಹುಡುಗಹುಬ್ಬುಗಿಯರಲ್ಲಿ ಭೇದಭಾವ ಅಳಿದಿದೆ. "ಎಲ್ಲವೂ ಬಾಲಕ ರಿಗಾಗಿ" ಎಂಬುದೇ ಈಗಿನ ಸರಕಾರದ ಧ್ಯೇಯವಾಕ್ಯ. ಇದರ ಅಧಾರದ ಮೇಲೆ ಯೇ ದೇಶದಲ್ಲಿ ಸರ್ವತ್ರ ಶಿಶುಪಾಲನ ಗೃ ಹಗಳು ತಲೆಯೆತ್ತಿದ್ದುವು. ಆಫ್ಟಿ ಮಕ್ಕಳ ಬೆಳವಣಿಗೆ, ಆರೋಗ್ಯ, ಊಟೋಪ ಚಾರ, ಶಿಕ್ಷಣ ಮತ್ತು ಮನರಂಜನೆಯ ನ್ಯವಸ್ಥೆ ನಡೆದಿದೆ.

ದೊಡ್ಡದೊಡ್ಡ ನಗರಗಳಲ್ಲಿ ನೊದಲೇ ಇದ್ದ ಈ ತೆರನ ಗೃಹಗಳನ್ನು ಇನ್ನೂ ವಿ ಸ್ತಾರಗೊಳಿಸಿದ್ದಾರೆ. ಅಲ್ಲಲ್ಲಿಯ ಜನತಾ ಸರಕಾರಗಳು, ಟ್ರೇಡ್‌ಯೂನಿಯನುಗಳಿಗೆ ಸ್ಟೇ ಕಾರ್ಯಕರ್ತರ ವಿಭಾಗ, ಮಹಿಳಾ ಸಂಘದ ಬಾಲಸಹಾಯ ವಿಭಾಗ, ಅಲ್ಲದೆ ಸಂಬಂಧಿಸಿದ ಕಾರ್ಖಾನೆ ಇತ್ಯಾದಿಗಳೂ ಈ ಕೆಲಸದಲ್ಲಿ ಒಟ್ಟಿಗೆ ಸಹಾಯ ಕೊಡುತ್ತವೆ. ಶಾಂ ಘೈಯಲ್ಲಿ ಹಿಂದೆ ೪೨ ಪಾಲನ ಗೃಹಗಳಿ ದ್ದುದು ಈಗ ೧೧೩ಕ್ಕೆ ಏರಿದೆ. ಹಾಗೆಯೇ ಪೇಕಿಂಗದಲ್ಲೂ ಈ ಸಂಖ್ಯೆ ೯೭ ಬದಲು ೨೩ ಆಗಿದೆ. ಟೇಸ್ಸುಟೇನದಲ್ಲಿ ೯೭ ಬದ ಲು ೨೬ಕ್ಕೆ ಏರಿದೆ. ಈ ಸಂಖ್ಯೆಗಳು ದಿನ ದಿಂದ ದಿನಕ್ಕೆ ಏರುತ್ತಲೇ ಇವೆ.

ಪಾಲನ ಗೃಹಗಳಲ್ಲಿ ಮಕ್ಕಳ ವಸತಿ ಮತ್ತು ವೈದ್ಯಕೀಯ ಸಹಾಯ, ವಸ್ತ್ರ ವೈರ್ಮಲ್ಯದ ಉಚ್ಚ ವಿಚಾರವಿದೆ. ಭೋ ಜನದ ಕುರಿತು ವಿಶೇಷ ಲಕ್ಷ್ಯವನ್ನು ಕೊ ಡುತ್ತಾರೆ. ಈಗೀಗ ಹಾಲು, ಹೆಣ್ಣು ಮ ತ್ತು ಮೊಟ್ಟೆಗಳೂ ಇಲ್ಲಿಯ ಬಾಲಕರಿಗೆ ಸಿಗುತ್ತವೆ. ಎಷ್ಟೋ ಪಾಲನ ಗೃಹಗಳಿ ಗೆ ತಮ್ಮದೇ ಆದ ಆಸ್ಪತ್ರೆ, ಸಾನಿಟೋರಿ ಯಂ, ಮತ್ತು ಕ್ಲಿನಿಕ್‌ಗಳು ಇವೆ. ಬಾಲ ಮನೋ ವೈಜ್ಞಾನಿಕರ ಸೇವೆಯನ್ನೂ ಅ ಗತ್ಯದ ಸಂದರ್ಭದಲ್ಲಿ ಒದಗಿಸಲಾಗುತ್ತ ದೆ. ಸಿಡುಬಿನ ದಾಕ್ಷ ವಾತ್ಸವಲ್ಲ, ಇತರ ರೋಗಗಳನ್ನು ನಿರೋಧಿಸಲು ಚುಚ್ಚು ಮದ್ದು ಕೂಡಾ ಕೊಡುತ್ತಾರೆ. ತಿಂಗಳ ಗೊನ್ಮೆ ಅವರ, ಎತ್ತರ-ಭಾರಗಳ ಅಳ ತೆ-ತೂಕಗಳನ್ನು ತೆಗೆದುಕೊಳ್ಳುತ್ತಾರೆ. ಭೋಜನ ವಿಶೇಷಜ್ಞರು ಆಹಾರದ ವಿಷ ಯದಲ್ಲಿ ಅನಕ್ಕಿಯಿಂದ ದೂಡಿಯುತ್ತಾರೆ.

ಈ ಬಾಲಕರಿಗೆ "ದೊಡ್ಡಿನೆಯೇ ದೊಪ ರು" ಎಂದು ತಿಳಿಸಿ ಹೇಳುತ್ತಾರೆ. ಪರಿಶ್ರ ಮದ ಮಹತ್ವವನ್ನು ಮಂದಟ್ಟು ಮಾಡು ವುದೇ ಇಲ್ಲಿಯ ಶಿಕ್ಷಣದ ಕೆಲಸ. ಹೂ ದೋಟಕ್ಕೆ ಹುಡುಗರನ್ನು ವಿಹಾರಕ್ಕೆ ಒ ಯ್ಯುವ ಮೊದಲು ಮನರಂಜನೆಗಾಗಿ ನಾನಾ ಹೂಗಳ ಕುರಿತು ಕತೆಕಟ್ಟಿ ಹೇ ಳುತ್ತಾರೆ. ಹಾಗೆಯೇ ಹೊಲಗದ್ದೆಗಳ ಸಂದರ್ಶನ ಶಾಲದಲ್ಲಿ ಹುಡುಗರಿಗೆ ತಾ ಪು ಉಣ್ಣುವ ಅನ್ನ ಉತ್ಪಾದಿಸಲು ಕೆಲ ರು ತುಂಬಿದ ಗದ್ದೆಯಲ್ಲಿ ದಿನವಿಡೀ ಚಳಿ ಗಾಳಿ ಬಿಸಿಲು ಮಳೆ ಎನ್ನದೆ ಬೆವರಿಳಿಸಿ ದುದಿಯಬೇಕಾಗುತ್ತದೆ ಎಂದು ತಿಳಿಸಿ ದೇಳುತ್ತಾರೆ. ಇದರ ಪ್ರಭಾವ ಬಾಲ ಮನಸ್ಸಿನ ಮೇಲೆ ತುಂಬ ಪರಿಣಾಮಕಾರಿ ಯಾಗುತ್ತದೆ. ದೊಡ್ಡ ಮಹಲುಗಳ ನ ಡುವೆ ನಡೆದಾಡಿಸುವಾಗಲೂ ಈ ಭವ್ಯ ಮಂದಿರಗಳನ್ನು ಸಾಮಾನ್ಯವಾದ ಕೆಲಸ ದಾಳುಗಳು ಬುದ್ಧಿವಂತಿಕೆಯಿಂದ ಕಟ್ಟಿದರು ಎಂಬುದನ್ನು ಅರ್ಥಾಪತ್ತುವಂತೆ ಹೇ ಳುತ್ತಾರೆ. ಮಕ್ಕಳಿಗಾಗಿಯೇ ವಿಶಾಲ ವ ಗದ್ದೆಗಳಿವೆ. ಅಲ್ಲಿ ಅವರೇ ಬಿತ್ತಿಬೇಕು, ಕೊಯ್ಯಬೇಕು. ಈ ರೀತಿ ಅದರ್ಶವನ್ನು ವ್ಯವಹಾರದೊಡನೆ ಸಮರಸ ಉಂಟುಮಾ ಕೊಡುವ ಶಿಕ್ಷಣ ಅಭೂತಪೂರ್ವವೆನ್ನಲಡ್ಡಿಯಿಲ್ಲ.

ನಗರಗಳಲ್ಲಿ ಮಾತ್ರವೇ ಅಲ್ಲ, ಗ್ರಾ ಮಾಂತರಗಳಲ್ಲೂ ಈ ಮಾದರಿಯ ಪಾ ಲನ ಗೃಹಗಳನ್ನು ತೆರೆದಿದ್ದಾರೆ. ಕೈಗಾ ರಿಗಳ ದೆಸೆಯಿಂದ ಕೆಲಸಕ್ಕೆ ಹೋಗಲು, ಬಾರದ ಮಾತೆಯರು ಇದೆ. ಶಿಬಿರಗಳಲ್ಲಿ ಹಳ್ಳಿಗ ಆನಂದದಿಂದ ಮಕ್ಕಳನ್ನು ಬಿಟ್ಟು ತೆವ, ಕೆಲಸ ನೋಡಲು ಹೋಗುತ್ತಾರೆ. ಗದ್ದೆಗಳಲ್ಲಿ ಕೆಲಸಮಾಡುವ ಈ ಹೆಂಗಳೆ ಯರ ಆರೋಗ್ಯ ತುಂಬ ಮಹತ್ವಪೂರ್ಣ ವೆಂದು ತಿಳಿಯಲ್ಪಡುತ್ತಿದೆ. ಮೋಟರು ಗಾಡಿಯಲ್ಲಿ ಅವರಿಗೆ ಸದಾ ವೈದ್ಯಕೀಯ ಸಹಾಯ ಒದಗಿಸುತ್ತಿರುತ್ತಾರೆ. ಮಗು ಪಡೆಯುವ ಪೂರ್ವ ಒಂದೂವರೆ ತಿಂಗಳ ಕಾಲ ರಜೆಕೊಟ್ಟು, ಹೆಚ್ಚನಂತರ ತಾಯಿ ಮಗುವಿನ ಆರೈಕೆಯನ್ನು ಅನಕ್ಕೆಯಿಂದ ನೋಡುಕೊಳ್ಳುತ್ತಾರೆ. ಈ ಕೆಲಸದಲ್ಲಿ ಶಿಕ್ಷಿತದಾ ಯಿಗಳ ಕೆಲಸವು ಗಣನೀಯವಾಗಿದೆ; ಈಗಂತೂ ನರ್ಸುಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ.

ಪೇಕಿಂಗದಲ್ಲಿ "ದಿ ಇನ್ಸ್ಟಿಟ್ಯೂಟ್ ಆ ಫ್ ಚೈಲ್ಡ್ ಕೇಲ್ ಎಂಡ್ ವೆಲ್‌ಫೇರ್" ಎಂಬ ಶಿಶುಪಾಲನ ಗೃಹವು ಅತಿ ತುಂಬ ಮನೋಜ್ಞವಾಗಿದೆ. ಅದರ ಸ್ಥಾಪನೆ ಯೋನ್ನತದಲ್ಲಿ ೧೯೪೦ರಲ್ಲಿ ಆಯಿತು. ಅಂದಿನಿಂದ ಇಂದಿನವರೆಗೂ ಅದು ಆದರ್ಶ ರೀತಿಯಲ್ಲಿ ತನ್ನ ಕೆಲಸವನ್ನು ತುಂಬ ಸಂ ಕಟಗಳ ನಡುವೆಯೂ ನಿರ್ವಹಿಸಿಕೊಂಡು ಬಂದಿದೆ. ಜಪಾನಿಗಳೂ ಕೋಮಿಟಾಂಗ ದವರೂ ಇದನ್ನು ವಶಣ್ಣಗೂಡಿಸಲು ನಡೆಸಿದ ಬಾಂಬುದಾಳಿಗಳನ್ನು ಎದುರಿಸಿ, ಇ ದು ಬಾಳಿದೆ. ಇಲ್ಲಿಯ ಕೆಲಸಗಾರರು ಆ ಯಕಟ್ಟಿನ ಪ್ರಸಂಗದಲ್ಲಿ ಅತ್ಯಕ ಕ್ಯಾಗಿದ ಜೀವಂತ ಉದಾಹರಣೆಕೊಟ್ಟು, ಸಂಸ್ಥೆ ಯನ್ನು ಉಳಿಸಿದ್ದಾರೆ! ಶತ್ರುಗಳ ಹಾವಳಿ ಯಿಂದ ಉಳಿಯಲು ಅದು ತನ್ನ ಸ್ಥಾನ ವನ್ನು ಊರಿಂದೂರಿಗೆ ಬದಲಾಯಿಸುತ್ತ ಲೇ ಇದ್ದು, ಕೊನೆಗೆ ಮಾರ್ಚ ೧೯೪೯ರ ಲ್ಲಿ ತನ್ನ ಮಕ್ಕಳ ವೃಂದದೊಡನೆ ಪೇಕಿಂ ಗಿನಲ್ಲಿ ತಳವೂರಿತು. ಸದ್ಯ ಇನ್ನೂರಂದು ಬೌದ್ಧ ಮಂದಿರವಿಲ್ಲಿ ನೆಲಸಿದ್ದು, ಮೂರು ತಿಂಗಳಂದ ಅಪರ್ಯಾಪ್ತವಾಗಿ ಎರಡು ಸಾವಿರ ಮಕ್ಕಳ ಪೋಷಣೆಯ ಜೊತೆ ಹೊತ್ತಿದೆ. ಎಂಬತ್ತು ವರ್ಷದವರೆಗಿನ ಮ ಕ್ಕಳು ಕೇಂದ್ರದಲ್ಲೂ, ೩-೫ ನರ್ಸರಿಯ ಲ್ಲೂ, ಐದಕ್ಕೂ ಮಿಕ್ಕಿದವರು ಕಿಂಡರ್‌ಗಾ ರ್ಟ್‌ನ್‌ದಲ್ಲೂ, ನೆಲಸಿದ್ದು ಶಿಕ್ಷಣಪಡೆಯು ತಿದ್ದಾರೆ. ವ್ಯಾಯ ಒಂಬೇ ಅಲ್ಲ, ಮಾನಸಿ ಕ ಬದ್ಧವಾಸ್ಥೆಯನ್ನೂ ಜೊಂದಿಕೊಂಡು ಈ ಸಂಸ್ಥೆಯಿಂದೆಯನ್ನು ಶಂಕುಸ್ಥಾಪನೆ ಸಿದ್ದಾರೆ. ಇದರಲ್ಲಿ ೧೭೦ ಶಿಕ್ಷಕರೂ ಕೆಲಸ ಗಾರರೂ ಇದ್ದು, ಅವರಲ್ಲಿ ೧೧೦ರಾಯಿ ಗಳೇ ಆಗಿದ್ದಾರೆ. ಇದರ ಜೊತೆಗೆ ಇಂಥ ಸತ್ ಕೆಲಸಗಳನ್ನು ಕೈಗೊಳ್ಳಬಯಸುವವ ರಿಗೆ ತಕ್ಕುದಾದ ಶಿಕ್ಷಣ ದಾನೂ ತರಬೇ ತಿಯನ್ನು ಇಲ್ಲಿ ಕೊಡುತ್ತಾರೆ. ಇದರಿಂದ ದೇಶದ ಇತರ ಭಾಗಗಳಲ್ಲಿ ಈ ಮಾದರಿಯ ಪಾಲನ ಗೃಹಗಳನ್ನು ತೆರೆಯುವಾಗ ಕೆಲ ಸಗಾರರು ಕದನೆ. ಬೀಳದಂತೆ ಆಗುತ್ತದೆ.

ತನ್ನ ನೆಲೆ ಭವ್ಯಗೆ ಳಿಸಿದ ಒಂದು ಒಂದೂವರೆ ವರ್ಷದ ಅಲ್ಪಕಾಲದಲ್ಲಿ ಚೀ ನಾ ಇಷ್ಟು ಮಹತ್ವದ ಕೆಲಸವನ್ನು ಕೈ ಗೆಡಿಸಿದೆ. ರಾಷ್ಟ್ರ ಪುನರ್ನಿರ್ಮಾಣದ ಕಾಗದದ ಯೋಜನೆಗಳನ್ನು ಜಪಗೊತ್ತಿ ಕಮಿಷನು ನೇಮಿಸುವುದನ್ನು ಬಿಟ್ಟುಕೊಟ್ಟು, ತಜ್ಞರು ಕೊಡಬಹುದಾದ ಯಾವ ವಿಧಿಯ ಬರವನ್ನೂ ಕಾಯದೆ, ನೇರಾನೇರ ಕಾರ್ಯಾರಂಭಕ್ಕೇ ಧುಮುಕ್ಕಿ ಕೆಲಸದಿಂದ ಲೇ ಆದರ್ಶ ಸಿದ್ಧಿಸಿದ ಕೀರ್ತಿ ಚೀನಾ ದ್ದು ಭೂತಕಾಲದ ಸ್ವತಃ ಸರಕಾರವೇ ಇಲ್ಲಿ ವಾದರೂ, ಜನತೆಯೇ ಈ ಕಡೆ ಮುಂದು ಬಾರದೆ?

(ಅಯ್ಕೆ) —ಕಾರ್ತಿಕೇಯ.

ಮುಂದೇನು ಯುದ್ಧವೇ?

ಕಳೆದ ವಾರದ ವರೆಗೆ ಶಮಾಧಾನ ಶಾಂತಿಗಳ ಸಮಾಲೋಚನೆ ನಡೆಯುತ್ತಿತ್ತು. ಯುದ್ಧವಿಲ್ಲದೆಯೇ ಶಾಂತಿಯುತವಾದ ರೀತಿಯಲ್ಲಿ ಬಗೆಹರಿಯಬಹುದೆಂಬ ನಿರೀಕ್ಷೆಯೂ ಜಗತ್ತಿನಲ್ಲಿ ಇತ್ತು. ಆದರೆ ಯುಕ್ತ ರಾಷ್ಟ್ರಸಂಘ 'ಚೀನಾ ಆಕ್ರಮಕ ರಾಷ್ಟ್ರ'ವೆಂದು ಸಾರಿದ ಮೇಲೆ ನಿರೀಕ್ಷೆ ನಿರಾಶೆಯನ್ನೇ ಕಾಣುವಂತಾಯಿತು.

'ಚೀನಾ ಆಕ್ರಮಕ ರಾಷ್ಟ್ರವೆಂದು ಸಾರುವಲ್ಲಿ ಗೊತ್ತುವಳಿಯ ಪರವಾಗಿ ಳಳ ಮತಗಳೂ ವಿರುದ್ಧವಾಗಿ ೭ ಮತಗಳೂ ಬಿದ್ದಿದ್ದವು. ಉಳಿದ ೯ ರಾಷ್ಟ್ರಗಳು ತಟಸ್ಥ ಧೋರಣೆಯನ್ನು ವಹಿಸಿದ್ದವು.ಚೀನಾ ಆಕ್ರಮಕ ರಾಷ್ಟ್ರವೆಂದು ಸಾರುವಲ್ಲಿ ಅಮೆರಿಕೆಯು ಮತಗಳನ್ನು ಸ್ಪರ್ಧೆಯ ರೂಪದಲ್ಲಿ ಒತ್ತಾಯಪಡಿಸಿಕೊಂಡಿದ್ದಿತು ಅಮೆರಿಕೆಯ ಹಂಗಿನಲ್ಲಿರುವ ರಾಷ್ಟ್ರಗಳು ಅತ್ಯನ್ಯಾಕ್ಷಿಗೆ ವಿರುದ್ಧವಾಗಿ ಈ ಗೊತ್ತುವಳಿಗೆ ತಮ್ಮ ಮತದಾನ ಮಾಡಿದ್ದುವೇ ಹೊರತು, ವಿಶ್ವಾಸಪೂರ್ವಕವಾಗಿಯಲ್ಲ, ಯಾವ ರಾಷ್ಟ್ರಕ್ಕೂ ಇಂದು ಯುದ್ಧವೇಕಿಲ್ಲ. ಅಮೆರಿಕೆಗೆ ಮಾತ್ರ ಇಂದು ಯುದ್ಧದಲ್ಲಿ ರಶಿಯ ಹಾಗೂ ಅದರ ತತ್ವ ಪ್ರಣಾಲಿಯುಳ್ಳಂತಹ ಕಮ್ಯೂನಿಸ್ಟ್ ರಾಷ್ಟ್ರಗಳನ್ನು ಸೋಲಿಸಿ ತಾನೇ ವಿಜಯಮಾಲೆಯನ್ನು ಹಾಕಿಕೊಂಡು ಮೆರೆಯಬೇಕೆಂಬ ದೂರಾಲೋಚನೆಯಿದೆ. ಯುಕ್ತ ರಾಷ್ಟ್ರ ಸಂಘವಿಂದು ಕಲಹಗಳನ್ನು ವಿಷಮ ಪರಿಸ್ಥಿತಿಗೆ ತಂದೊಡ್ಡುವದರಲ್ಲೇ ಕಾಲಹರಣಮಾಡುತ್ತಲಿದೆ. ಅದು ಮಾಡುತ್ತಲಿರುವ ಮಾರ್ಗದರ್ಶನದಿಂದ ಅಶಾಂತಿಗಳುಂಟಾಗಿ ತೃತೀಯ ಮಹಾಯುದ್ಧದಂತಹ ಭೀಕರ ಪರಿಸ್ಥಿತಿಯು ಉದ್ಭವಿತವಾಗುವುದು.

ಏಶಿಯಾ ರಾಷ್ಟ್ರಗಳ ಸಕಾಲಿಕವೂ, ಸಮಂಜಸವೂ ಆದ ಹಕೋಪದೇಶವನ್ನು ಕಡೆಗಣಿಸಿ ಅಮೆರಿಕೆಯ ಸ್ವಾರ್ಥ ಸಾಧಿಸುವಷ್ಟರಲ್ಲೇ ಯುಕ್ತ ರಾಷ್ಟ್ರ ಸಂಘ ತನ್ನ ಕಾರ್ಯವನ್ನು ಪೂರೈಸಿದಂತಾಗಿಲ್ಲ.

'ಚೀನವು ಆಕ್ರಮಕ ರಾಷ್ಟ್ರ' ಎಂದು ಸಾದುವದಕ್ಕಷ್ಟೇ ಇಷ್ಟು ಸಮಯವನ್ನು ವ್ಯರ್ಥವಾಗಿ ಶಾಂತಿಯ ಹಸರಲ್ಲಿ ಕಳೆಯುವ ಬೇಕಾಯಿತೇ? ಯು. ರಾ. ಸಂಘದಲ್ಲಿ ಅದಕ್ಕೆ ಸಮನಾದ ಪ್ರಾತಿನಿಧ್ಯವಿಲ್ಲದೆ, ಅದರ ಪ್ರತಿನಿಧ್ಯದ ಅವಶ್ಯಕತೆಯನ್ನು ಸಕಾರಣವಾಗಿ ತೋರಿಸಿಕೊಟ್ಟು ಬಳಕವೂ ಕಡೆಗಣಿಕಲಾಗಿವೆ. ಈಗ 'ಆಕ್ರಮಕ ರಾಷ್ಟ್ರ'ವೆಂದು ಹೆಸರಿಸುವದಾದರೂ ಹೇಗೆ? ಮೊದಲಿಗೆ ಆಕ್ರಮಕ ರಾಷ್ಟ್ರವೆಂದು ಸಾರಿ ಬಳಕ ಇನ್ನೂ 'ಸಂಧಾನಕ್ಕೆ ಒಲಿಸಬಹುದು' ಎಂದು ಗೊತ್ತುವಳಿಯಲ್ಲಿ ಹೇಳಲಾಗಿದೆ ಇದು ಶುದ್ಧ ಮೂರ್ಖ ಮನೋವೃತ್ತಿಯ ಪ್ರದರ್ಶನವಲ್ಲದೆ ಬೇರೇನು? ಅಮೆರಿಕಾದ ಜನ ಶ್ರೀಮಂತಿಕೆಯ ಮದದಿಂದ ತನ್ನ ಸೈನಿಕ ಮಟ್ಟವನ್ನು ಪೂರ್ವ ಕಳೆದುಕೊಂಡಿದ್ದಾರೆಂಬುದಕ್ಕೆ ಇದ ಕ್ಕಿಂತ ಮಿಗಿಲಾದ ಉದಾಹರಣೆ ಬೇರೆ ಬೇಕಾಗಿಲ್ಲ.

ಅಮೆರಿಕೆಗಿಂದು ಬೇಕಾಗಿರುವುದು ಶಾಂತಿಯಲ್ಲವೆನ್ನುವದಕ್ಕೆ ಯು. ರಾ. ಸಂಘದ ಗೊತ್ತುವಳಿ ಮಾತ್ರವಲ್ಲದೆ ಇನ್ನೂ ಹಲವಾರು ವಿಚಾರಗಳನ್ನು ಮನಗಾಣಬಹುದು. ಪತ್ಯಿನ ಜರ್ಮನಿಯನ್ನೂ ಜಪಾನ್‌ನನ್ನೂ ಶಸ್ತ್ರೀಕರಿಸಿ ಇಡಿಯ ರಾಷ್ಟ್ರವನ್ನೇ ನುಂಗುವ ದುಷ್ಟಬುದ್ಧಿಯನ್ನದು ಇಟ್ಟುಕೊಂಡಿದೆ. ಜರ್ಮನಿಯನ್ನೂ,ಜಪಾನನ್ನೂ ಶಸ್ತ್ರೀಕರಿಸುವುದರಿಂದ ರಶ್ಯದೊಡನೆ ಬ್ರಿಟನ್, ಅಮೆರಿಕಾ ಮಾಡಿಕೊಂಡ ಹಂದಿನ ಒಪ್ಪಂದವನ್ನು ಮುರಿದಂತಾಗಿದೆ ಶಿಸ್ತನ್ನುಲ್ಲಂಘಿಸುವುದೂ ಇತರ ರಾಷ್ಟ್ರಗಳ ಹಕ್ಕನ್ನು ಪಹರಿಸುವುದೂ, ಸಹಕಾರ ನೀಡಿ ಗುಲಾಮರನ್ನಾಗಿ ಮಾಡಿಕೊಳ್ಳುವುದೂ ಸಾಮ್ರಾಜ್ಯಶಾಹೀ ಅಮೆರಿಕೆಯ ರಾಜಕೀಯ ನೀತಿಮತ್ತೆಯಾಗಿರುತ್ತದೆ. ಕಮ್ಯೂನಿಸ್ಟ್ ಚೀನವನ್ನು ಕೆಣಕಿಸಿ ಯುದ್ಧಕ್ಕೆ ಅಣಿಮಾಡಿಕೊಟ್ಟದ್ದು ಅಮೆರಿಕವೇ. ಶಾಂತಿಪ್ರಿಯರ ಮನನೀಯ ಸೂಚನೆಗಳನ್ನು ಮಣ್ಣು ಮುಕ್ಕಿಸಿದ ಯುಕ್ತ ರಾಷ್ಟ್ರ ಸಂಘದಿಂದ ಯಾವ ಪುರುಷಾರ್ಥವೂ ಆಗಲಾರದು. ಶಾಂತಿಯುತ ಮಾರ್ಗದಲ್ಲಿ ಕೊನೆಗೊಳ್ಳಬಹುದಾದ ಸಮಸ್ಯೆಯನ್ನು ಅಮೆರಿಕೆಯ ಹಟವಾರಿತನಕ್ಕೆ ಬಗ್ಗಿ ಈ ರೀತಿಯ ಅನುಚಿತ ಧೋರಣೆಯನ್ನು ತಾಳಿದ್ದು ನಿಜವಾಗಿಯೂ ವಿಷಾದಕರ. ಸಮಸ್ಯೆಯನ್ನು ಪರಿಹರಿಸಿ ಲೋಕಶಾಂತಿಯನ್ನುಂಟುಮಾಡಬೇಕಾದ ಸಂಸ್ಥೆಯಿಂದು ಲೋಕದ ಅಶಾಂತಿಗೆ ಕಾರಣವಾಗುತ್ತಿದ್ದಾದರೆ ಅದು ಬರಿಕಾಸ್ತ್ರಾವದೇ ಆಗಿತು.

ಸಾಮ್ರಾಜ್ಯಶಾಹೀ ಕೈಗೊಂಬೆಯಾದ ಯು. ರಾ. ಸಂಘವು ಕಾಂಸ್ಟಿಯಾಸ್ ಅಮೊಲ್ಯ ಸಲಹೆಯ ಸೂಚನೆಯ ತೊಲೆ ಸುಡಿಯದೆ. ಏಸ್ಯಾದ ರಾಷ್ಟ್ರಗಳು ಸದ್ಯಾವಧೆಯಿಂದ ನತೀಸಿ ಶಾಂತಿಯ ಕುರಿತಾಗಿ ವಿಶೇಷ ಬುದ್ಧಿಯನ್ನು ಪಯೋಗಿಸಿದರೂ ಇಲ್ಲಿಂದು ಅನವಶ್ಯಕವಾಗಿ ಉಳಿದ ರಾಷ್ಟ್ರಗಳ ನಿಷ್ಠುರಕ್ಕೆ ಕಾರಣವಾಗುವಂತಾಗಿದೆ. ಅಂದರೆ ಮೈತ್ರಿಗೆ ಭಂಗತರುವುದಕ್ಕಷ್ಟೇ ಯಕ್ತ ರಾಷ್ಟ್ರ ಸಂಘ ಹೇತುವೆಂದಾಯಿತು. ಅದು ದರಿಂದ ಅದು ಬರಕಾಸ್ತುಹೊಂದುವುದಾದರೆ ಯಾವ ರಾಷ್ಟ್ರವೂ ಆತ್ಮಹತ್ಯೆಮಾಡಿಕೊಂಡೀತೆನುವ ಭೀತಿಯಿಲ್ಲ! ಅದು ನಿರ್ಮಿಸುತ್ತಿರುವ ಮಾತಿನ ವಿದ್ಯಮಾನವನ್ನು ನೆನಪಿಸಿದರೆ ಹಾಗಾಗುವದೇ ಕ್ಷೇಮವೆನಿಸುತ್ತದೆ.

ಯು. ರಾ. ಸಂಘದ ಈ ಗೊತ್ತುವಳಿಯನ್ನು ಇಂಗ್ಲಿಂಡಿನ ಹಾಗೂ ಅಮೇರಿಕೆಯ ಮುಖ್ಯ ಪತ್ರಿಕೆಗಳು 'ದುಡುಕಿನ ನಿರ್ಣಯ'ವೆಂದು ಟೀಕಿಸಿವೆ. ಇಂಗ್ಲೆಂಡಿನ "ಪಾರ್ಲಿಮೆಂಟರಿ ಸದಸ್ಯರು "ಈ ಗೊತ್ತುವಳಿ ಅಮೆರಿಕೆಯ ಸ್ವಾರ್ಥದಿದ್ದು ಮುಂದೆ ಗಂಭೀರ ವಾತಾವರಣವನ್ನು ನಿರ್ಮಿಸಂತಹೆದಿದಾಗಿದೆ. ಇದರಿಂದ ಲೋಕಶಾಂತಿ ದೊರಕುವಂತಿಲ್ಲ. ಈ ಗೊತ್ತುವಳಿಯಿಂದ ಚೀನದೊಡನೆ ಚಿರಶತ್ರುತ್ವವನ್ನು ಕಟ್ಟಿಕೊಂಡಂತಾಗಿದೆ. ಇದನ್ನು ಪ್ರತಿಯೊಬ್ಬರೂ ಬಲವಾಗಿ ವಿರೋಧಿಸಬೇಕು.' ಎಂಬುದಾಗಿ ಹೇಳಕೆಕೊಟ್ಟರಿಶ್ಲಾರೆ.

ಈ ಗೊತ್ತುವಳಿಯಿಂದ ಚೀನವು ಜೆರಬಹುದೆಂಬ ಕಲ್ಪನೆ ಧ್ಯಾಮಕವಾದುದು ಚೀನವಿಂದು ನಿರ್ವೀರ್ಯ ರಾಷ್ಟ್ರವಲ್ಲ. ಅಮೆರಿಕೆಯು ಹಾಗೆ ಹೊಣಗಟ್ಟುಕಾರ್ಯವನ್ನದು ಮಾಡುತ್ತಿಲ್ಲ.ಆದರೆ ಬೇರೆಯವರ ಜಸ್ತಕ್ಷೇಪ ಮಾಡಹೊರಟರೆ ಸ್ವಲ್ಪವೂ ಸಡಿಸದೇ ಇರುವುದು ಕಮ್ಯೂನಿಸ್ಟ ವಿಶಿಷ್ಟ ಗುಣ ಜ್ವಾಲಾಮುಖಿಯಂತೆ ಒಮ್ಮೆಯೇ ಸಾಂಘಿಕ ಶಕ್ತಿ ಚಾಲನೆ ಮಾಡುವುದಕ್ಕೆ ಹಿಂದು ಮುಂದೆ ನೋಡುವುದೂ ಇಲ್ಲ.

ಚೀನದೊಡನೆ ಸಂಧಾನ ಸಾಧ್ಯವೆಂದು ನಂಬಿಕೊಂಡು ಬಂದ ಶಾಂತಿರಕ್ಷಕರಿಗೆ ತುಂಬ ನಿರಾಶೆಯಾಗಿದೆ. ಮುಂದೆ ಕಠಿಣ ಧೋರಣೆ ಕಟ್ಟಿಕೊಳ್ಳುವಂತೆ ಏಕಂದರೆ ಅಮೆರಿಕ ಸಂಧಾನದ ಬಾಲನ್ನು ಮುಚ್ಚಿಬಿಟ್ಟಿದೆ. ಇದರಿಂದ ಯುದ್ಧದ ಹೊರತು ಬೇರೆ ಮಾರ್ಗ ತೋರುವುದಿಲ್ಲ. ಪ್ರತ್ಯಕ್ಷವಾಗಿ ಯುದ್ಧವನ್ನು ವಿರೋಧಿಸುವವರೆಂದರೆ ಏಸ್ಯಾದವರು. ಅವರ ಸಲಹೆ ಎಷ್ಟೇ ಸಕಾಲಿಕವಾಗಿದ್ದರೂ, ಅಮೂಲ್ಯವಾಗಿದ್ದರೂ, ಸಾಮ್ರಾಜ್ಯಶಾಹೀ ಅಮೇರಿಕೆಯ ಹಟವಾರಿತನದಿಂದ ಜೀವಂತವಾಗದು. ಕೊರಿಯ ಸಮಸ್ಯೆ ಬಗೆಹರಿಯಬೇಕಾದರೆ ಚೀನಾಕ್ಕೆ ಯು. ರಾ. ಸಂಘದಲ್ಲಿ ಪ್ರಾತಿನಿಧ್ಯಕೊಡುವುದೇ ಸಮಂಜಸವಾಗಿರುತ್ತದೆಂದು ಭಾರತ ನೊದಲೇ ಸೂಚಿಸಿತ್ತು. ಭಾರತದ ಸೂಚನೆಯು ಕಾರ್ಯಗತವಾಗುತ್ತಿದ್ದರೆ ಇಂತಹ ದುರ್ಧರ ಪ್ರಸಂಗಗಳು ಬಾರುತ್ತಲೇ ಇರಲಿಲ್ಲ. ಈಗಲೂ ಭಾರತದ ನಿಲುವು ಸ್ಥಿರವಾಗಿದೆ ಶಾಂತಿಯ ಮಾರ್ಗದರ್ಶನ ಮಾಡುವಲ್ಲಿ ಬಿ. ನರಸಿಂಗರಾಯರ ವಿಚಾರಪ್ರಣಾಲಿ ಅತ್ಯಂತ ಪ್ರಶಂಸನೀಯವಾದುದು. ಶಾಂತಿಯಾಗಲೀ—ಸಮರವಾಗಲೀ ಭಾರತವೂ, ಏಸ್ಯಾ ರಾಷ್ಟ್ರಗಳೂ ಸಮರ್ಥನಿದ ಶಾಂತಿಪ್ರಯ ಸಲಹೆಗಳು ಎಂದೆಂದಿಗೂ ಗ್ರಾಹ್ಯಗಳಾಗಿರುವುದೆಂಬುದನ್ನು ನಾವು ಮರೆಯುವುದಿಲ್ಲ.

THE VIJAYA BANK, LTD.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

HEAD OFFICE: **Kadri Road, Mangalore.**

Branches:- Udipi, Karp, Coondapoor, Karkala, Brahmavar, Kasaragod, Byndoor, City-Mangalore, Puttur, Bombay, Kanhangad & Mercara.

B. Manjaya Hegde,
Advocate & President, District Board S. Kanara.
CHAIRMAN.

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಆಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್)

ಹಂಚಿದ ಕಂಪೆನಿ.

The Canara Mutual Assurance Co, Ltd.

H. O. **UDIPI.** (SOUTH INDIA) ESTD: **1935.**

ಡೀಸೆಲ್ ಇಂಜಿನುಗಳು

ಉತ್ತಮ ತರಗತಿಯ 12/15 ಹಾರ್ಸ್‌ಪವರ್
ಜರ್ಮನ್ ಹೊರಿಝಾಂಟಲ್
ಇಂಜಿನ ಬರೇ ₹800 R. P. M.
ಬೋರ್ ಪೀರಂಗ್, ಎರಡು ಫ್ಲಾಯ್ ವೀಲ್, "ಟೋರ್"ಪಂಪ ಹಾಗೂ ಎಟಮಾಯ್ಜರ ಮತ್ತಿನೇಕ ಗುಣಗಳುಳ್ಳವು
ಬೆಲೆ ರೂ. **3400/-**
ಬೊಂಬಾಯಿ ಡಿಲಿವರಿ
The Vijay Engineering Co. Ltd.
Mazagaon, **Bombay 10.**

ವಿದ್ಯಾರ್ಥಿಗಳಿಗೆ ಕೊಡೆ

ಅಲಿಘರ್ ಯೂನಿವರ್ಸಿಟಿಯ ವಿದ್ಯಾರ್ಥಿಗಳ ಸಭೆಯಲ್ಲಿ ಬಂದಿನ ವೈಸ್‌ರಾಯಿನ ದಿವಾನರೂ ಹೈದರಾಬಾದಿನ ಮುಖ್ಯ ಮಂತ್ರಿಗಳು ಆಗಿದ್ದ ಸರ್ ವಿಜಿಯರ್ ಇಸ್ಮಾಯೀಲರು ಹೀಗೆ ಹೇಳಿದರು: "ಆಳವಾದ ಅನುಭವವನ್ನು ಪಡೆಯುವದರಿಂದಾಗಲೀ, ಕಲಿಯುವದರಲ್ಲಿ ಅತ್ಯಂತ ಬುದ್ಧಿಶಾಲಿಯಾಗುವದರಿಂದಾಗಲೀ ವಿದ್ಯಾರ್ಥಿಗಳ ಕರ್ತವ್ಯ ಪರಿಪೂರ್ಣವಾಯಿತೆಂದು ಭಾವಿಸುವದು ತಪ್ಪು. ಅದಕ್ಕಿಂತಲೂ ಮಿಗಿಲಾದ ಉತ್ತಮ ನಡತೆ-ಉತ್ತಮ ಆದರ್ಶ—ವಿಶಾಲ ದೃಷ್ಟಿ—ವ್ಯಾಮಾಣಿಕತನಗಳು ಅವರು ಕಲಿಯತಕ್ಕದ್ದಿದೆ. ಇಂತಹ ಉತ್ತಮ ಗುಣಗಳನ್ನು ಶ್ರೀಸ್ವ ಜನಾಂಗದ ಸಂಕೇತವೆಂಬುದನ್ನು ನೀವು ಮರೆಯಬಾರದು. ದೇಶ ಏಳಿಗೆಗಾಗಿ ನೀವು ದುಡಿಯಬೇಕಾಗಿದೆ. ತರುಣ ವಯಸ್ಸಿನವರಾದ ನಿಮ್ಮಲ್ಲಿ ಕೆಚ್ಚಿದೆ. ಸೂಕ್ಷ್ಮಗ್ರಾಹಿ ಬುದ್ಧಿಶಕ್ತಿಯಿದೆ. ಇಂತಹ ವಿಶ್ವವಿದ್ಯಾಲಯಗಳಿಂದ ನೀವು ಪದವಿ ಪದವ್ಯುತ್ತರ ಪದವಿಗಳನ್ನು ಪಡೆಯುವದಕ್ಕಿಂತ ಮಿಗಿಲಾದ ರಾಜಕೀಯ ಕ್ರಾಂತಿ ವಿದ್ಯಾರ್ಥಿಗಳಿಗೆ ಸಲ್ಲದು. ಹಲವು ರಾಜಕೀಯ ಸಂಘಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ವಿದ್ಯಾಭ್ಯಾಸಕ್ಕೆ ಭಂಗತಂದುಕೊಂಡ ದಾಖಲೆಗಳಿವೆ. ಅಪ್ಪ ಜ್ಞಾನದ ರಾಜಕೀಯದಿಂದ ಯಾವ ಸಿದ್ಧಿಯೂ ಆಗದು. ದೇಶವನ್ನು ತಿದ್ದುವ ಮೊದಲು ವಿದ್ಯಾರ್ಥಿಗಳು ತಾವು ಕಲಿಯುತ್ತಿರುವ ವಿದ್ಯಾಲಯಗಳಲ್ಲಿ ಸಿಸ್ಟೆ ಹಾಗೂ ಶಿಸ್ತುಗಳನ್ನು ಕಾಪಾಡಿಕೊಳ್ಳಲೆತ್ನಿಸುವದು ಮುಖ್ಯವಾಗಿದೆ. ಈ ವಿಚಾರದಲ್ಲಿ ಸರ್ ವಿಜಿಯರವರು ಸಲಹೆ ಮುಂದಿನ ಜನಾಂಗ ಹಾಗೂ ಧುರೀಣರಾದ ವಿದ್ಯಾರ್ಥಿಗಳಿಗೆ ಅಮೂಲ್ಯವೂ ಗವನಾರ್ಹವೂ ಆಗಿರುತ್ತದೆ

ಹಣವೂ ಪ್ರಮಾಣಿಕತನವೂ.

ಜನವರಿ ತಿಂಗಳ ೨೯ರಿಂದ ಮೂರು ದಿನಗಳ ವರೆಗೆ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಅಹಮ್ಮದಾಬಾದಿನಲ್ಲಿ ನಡೆಯಿತು. ಅಧಿವೇಶನದಲ್ಲಿ ಬಹು ಸ್ವಾರಸ್ಯವಾದ ಸಂಗತಿಗಳು ಹೊರಬಂದಿರುತ್ತವೆ. ಕಾಂಗ್ರೆಸ್ ಕಾರ್ಯಕರ್ತರ ಸ್ವಾರ್ಥ ಸಂಕುಚಿತ ಮನೋವೃತ್ತಿಗೆ ಹೇಸಿದ ಜನ ಕಾಂಗ್ರೆಸ್ ಅಧಿವೇಶನದಲ್ಲಿ ಅದಕ್ಕೀನಾದರೂ ಪ್ರತೀಕಾರವ ಮಾಡೀತೆಂದು ನಿರೀಕ್ಷಿಸುತ್ತಿದ್ದರು. ಅಧಿವೇಶನದಲ್ಲಿ ಯಥಾರ್ಥ ಪರಿಸ್ಥಿತಿಯ ನಿವೇದನೆ ಸರ್ವೋದಯವಂದಾಯಿತು. ಕಾಂಗ್ರೆಸ್ಸಿಗರ ಕರ್ತವ್ಯ ಭ್ರಷ್ಟತನದ ಕುರಿತೂ—ಹಲವು ರೀತಿಯ ದುರ್ವ್ಯಾಪಾರಗಳ ಕುರಿತೂ ತೀಕ್ಷ್ಣವಾದ ಚರ್ಚೆಯಾಯಿತು. ಅದು ಪರಿಣಾಮದಿಂದ ಕಾಂಗ್ರೆಸ್ಸಿನ ಕೊಳೆ ತೊಳೆದಂತಾಯಿತೆಂದು ಹೇಳಬರುವಂತಿಲ್ಲ. ಅಂತೂ ಮಾತಿನ ಘರ್ಷಣೆ ಜೆನ್ನಾಗಿಯೆ ಆಯಿತು.

ಕಾಂಗ್ರೆಸ್ ಸದಸ್ಯತನದ ಬಗ್ಗೆ ಒಂದು ರೂಪಾಯಿ. ಕೊಡಬೇಕೆಂದು ಅಧಿವೇಶನ ನಿರ್ಣಯ ಮಿತು. ಸದಸ್ಯತನದ ಮೌಲ್ಯದ ಕುರಿತು ಮಾತನಾಡುತ್ತಾ "ನಾಲ್ಕಣೆಯ ಆಗ್ಗದ ಸದಸ್ಯತನದ ಪದ್ಧತುವಾಗಿ ಕಾಂಗ್ರೆಸ್ಸಿನಲ್ಲಿ ಕೊಳಕು ಪುಂಬಿಹೋಯಿತು. ಹಲವರು ಇದರಲ್ಲಿ ನೇರಿಕೊಂಡು ಕಾಂಗ್ರೆಸ್ಸಿನ ಹೆಸರಿಗೆ ಅಪವಾದ ತಂದರೆಂದು"ನ ಮ್ಮ ಧುರೀಣರು ಕಾರಣ ಕೊಟ್ಟಿದ್ದಾರೆ. ಅಂದರೆ ನಾಲ್ಕಾಣೆ ಕೊಟ್ಟವರೂ, ಪುಕ್ಕಟೆಯಾಗಿ ಸದಸ್ಯರಾದವರೂ ಕಾಂಗ್ರೆಸ್ಸಿನ ತತ್ವಕ್ಕೆ ವಿರುದ್ಧವಾಗಿ ವರ್ತಿಸಿದ್ದರೆಂದಾಯಿತು. ಬಿಪಾಯಿಯ ಶುಲ್ಕ ತೊಟ್ಟಿಕೂಡಲೇ ಅವರಲ್ಲಿ ಉತ್ತಮ ಜ್ಞಾನ ಮೂಡಿ ಉಚ್ಚ ಆದರ್ಶಗಳನ್ನು ಪರಿಪಾಲಿಸುವದೆಂದು ನಮ್ಮ ಧುರೀಣರ ಅಂಬೋಣವೇ? ಆದರೆ ಇಂದು ಕಾಂಗ್ರೆಸ್ಸಿನ ಹೆಸರನ್ನು ಕೆಡಿಸುವವರಾಗಲೀ, ಸ್ವಾರ್ಥವನ್ನು ಸಾಧಿಸುವವರಾಗಲೀ, ಶಿಸ್ತುಭಂಗವನ್ನು ಮಾಡುವವರಾಗಲೀ ಕಾನಲ ನಾಲ್ಕಾಣೆಯ ಇಲ್ಲವೆ ಪುಕ್ಕಟೆಯ ಸಾಮಾನ್ಯ ಸದಸ್ಯರಲ್ಲವೆಂಬುದನ್ನು ನಮ್ಮ ಧುರೀಣರಿಗೆ ಹೊಳೆಯಪಿಡ್ಡದು ಪರಿಮಾರ್ಶ್ಯ! ಒಂದು ರೂಪಾಯಿ ಕೊಟ್ಟು ಸದಸ್ಯನಾದವನು ವ್ಯಾಮಾಣಿಕನಾಗುವನೆಂದು ಹೇಗೆ ಹೇಳಬಹುದು? ಈ ವಾದ ಹುರುಳಿಲ್ಲದ್ದು. ಸಾಮಾನ್ಯ ಜನರು ವಿಶ್ವಾಸದಿಂದ ಕಾಂಗ್ರೆಸ್ಸಿನ ಸದಸ್ಯರಾಗಿ ಕಾಂಗ್ರೆಸ್ಸಿನ ಶಕ್ತಿಯನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಕಳೆದುಕೊಂಡಂತಾಗಿದೆ. ಇದರಿಂದ ಕಾಂಗ್ರೆಸಿಗರ ಸಂಖ್ಯೆ ಕಡಿಮೆಯಾಗಿ ಉಳಿದ ಪಕ್ಷಗಳಿಗಿಂತ ಬಲಿಗ ನಮ್ಮ ಜನ ಸುಲಭವಾಗಿ ಸೇರಿಕೊಳ್ಳುವಂತಾಯಿತು. ಒಂದು ರೂಪಾಯಿ ಕೊಟ್ಟಕೂಡಲೇ ಅತ ಕಾಂಗ್ರೆಸ್ಸಿನ ಶಿಸ್ತನ್ನು ಪಾಲಿಸುವಂತಿಲ್ಲ. ಹಸ್ತಕ್ಷೇಪವಾಗಲೀ ಅಧಿಕಾರದ ದುರುಪಯೋಗವಾಗಲೀ ಇವರಿಂದ ಸಿಲ್ಲುವಂತಿಲ್ಲ ಸದಸ್ಯತನಕ್ಕೆ ರೂಪಾಯಿಯ ಮಹತ್ವ ಕೊಟ್ಟರೂ, ಅದು ನ್ಯಾಯಸಮ್ಮತವಾದರೂ ಕಾಂಗ್ರೆಸ್ಸಿನ ಶುದ್ಧೀಕರಣ ಇದರಿಂದ ಸಿಲ್ಲುವುದೆಂಬುದು ಶುದ್ಧ ತಪ್ಪು ಕಲ್ಪನೆ.

ಅವರು ಹೇಳಿದ್ದೇನು?

ಜೀವನವಿಮೆಗಾಗಿ

ವಿಚಾರಿಸಿರಿ

ನೂ ಗಾರ್ಡಿಯನ್ ಒಫ್ ಇಂಡಿಯಾ

ಶ ಲ್ಯಾಫ್ ಇನ್ಶೂರೆನ್ಸ್ ಕೋ ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ ಎನ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿಧಿಯೋಗ. ಅಂತೆಯೇ ಇದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್" ಇಂಡಿಯಾ ಲ್ಯಾಫ್ ಬಿಲ್ಡಿಂಗ್ ಪ್ರೋಸ್ಟ್ ಬಾಕ್ಸ್ ನಂಬ್ರ 142
ಮದ್ರಾಸು

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ದಿಸ್ಟ್ರಿಬ್ಯೂಟಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8 ಎ, ಮೆಹರ್‌ವಾನ್ ಬಿಲ್ಡಿಂಗ್ಸ್, Opp: His Master's Voice
ಸರ್ ಫಿರೋಜ್ ಷಾ ಮೇಥಾ ರೋಡು, ಫೋರ್ಟ್.ಪಿ, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ದಿಪಂ ಆಗಿ ತರಿಸಿ ಅತಿಕರ್ಷಕ ಬೆಲೆಗೆ ವಿತರಿಸಲಾಗುತ್ತದೆ.

ಆನುನಿತ್ಯದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಪಾತ್ರೆ ಪಾಡಿಕುಗಳೂ ವಿಟಮಿನ್ ಆಹಾರ ವಸ್ತುಗಳೂ ಮುಲಾಮುಗಳೂ, ಸುಪಾಸವಾ ಪ್ರೆಸ್ಸಗಳೂ ದಿಪಂ ಅಗಿಯೂ ಬಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಸೂ.— ಪತ್ರಗಳಿಗೆ ಆರ್ಡರುಗಳನ್ನು ಸ್ವೀಕರಿಸಲಾಗುವುದು
ಹೆಚ್ಚಿನ ಮಾಹಿತಿಗಳಿಗೆ ಬರೆಯಿರಿ.

ಎಂ. ಮೆಂಡೋಸ, ಮಾಲಿಕ. — M. Mendosa, Proprietor.

THE NATIONAL GENERAL STORES

Importers, Exporters, Dispensing Chemists & Druggists,
General Merchants & Commission Agents,
8A Mherwan Buildings, Opp: His Master's Voice,
Sir Phirozsha Mehta Road, Fort, Bombay.

ಸ್ಥಾಪಿತ 1906

ಭಾರತದೊಳಗೆ ೪೦ಕ್ಕಿಂತಲೂ ಹೆಚ್ಚು ಶಾಖೆಗಳು

ಎಲ್ಲ ಸಹಕಾರಕ್ಕೆ ಕುಟುಂಬದ ಬ್ಯಾಂಕರು ಎಂಬ ಕೀರ್ತಿಗೂ ಪಾತ್ರವಾದ ಸಂಸ್ಥೆಗಳು.

ನೋಟೀಸು

ಕಾರ್ಕಳ ಡಿ. ಮುನ್ಸಿ. ಕೋರ್ಟಿನಲ್ಲಿ

ಕ್ರಮ ನಂಬ್ರ 410/1949

R. I. A- 1644/1950

ಬೀಬೆಯಾನೆ ಜುಲೆಕಾಬಿಬಿ ಕೂಡಾ
—ಅರ್ಜಿದಾರರು

ಮತ್ತು

ರುಜಾರಿ ಪಿಂಟೊ ಕೂಡಾ
—ಪ್ರತಿವಾದಿರು, ಎದ್ರಿರು

4ನೇ ಎದ್ರಿ ನಕಾಂಸ್ ಪಿಂಟೊ ಸ್ವಪಿನ ಪಿಂಟೆರ ಮಗ ಕಾರ್ಕಳ ತಾಲ್ಲೂ ಕಾರ್ಕಳ ಕಸಬಾ ಪರ್ಜಾಲೆ ಬಂಗಿರುವವ.

ಇವರಿಗೆ ತಿಳಿಸುವದೇನಂದರೆ–

1ನೇ ಎದ್ರಿ ರುಜಾರಿ ಪಿಂಟೆರು ಮೇಲ್ಕಂಡ ಕ್ರಮನಂಬ್ರ 410/49ನೇ ದಾವೆಯಲ್ಲಿ ಜಾಬ್ತ್ರೆಪ್ಪಿಸಿದ 1ನೇ ಅರ್ಜಿದಾರಳಿಗೆ ಗಂಡ ಪಮಿಕ್ಕ ಅರ್ಜಿದಾರರ ತಂದೆ ಮೃತಪಟ್ಟ ಯು ಸುವ್ ಹುಸೇನಖಾನ ಸಾಹೇಬರು ತನಗೆ 30-9-1948 ರಲ್ಲು ಬರೆಕೊಟ್ಟಿದ್ದಂಬ ಕೈಕಾಗ್ದವು ಸುಳ್ಳೇ ವ ಬರೇ ಸೃಷ್ಟನೇದ್ದು ಎಂತಲೂ ಸದ್ರಿ ರುಜಾರಿ ಪಿಂಟರು ಮತ್ತಿನ ಆ ಕೈಕಾಗ್ದಕ್ಕೆ ಸಾಕ್ಷಿಹಾಕಿದ 2-3ನೇ ಎದ್ರಿರು ಮತ್ತು ಸದ್ರಿಕೈಕಾಗ್ದ ಬರದ 4ನೇ ಎದ್ರಿ ಕೂಡಾ ಪಟ್ಟನಲ್ಲಿ ಅಪ್ರಮಾಣಿಕ ಯಿರಾಧೆಯಿಂದ ಸದ್ರಿ ಪೋರ್ಜರಿ ರಿಜಿಸ್ಟರ್ಡ್ ಶಂಯಾರ್ಸ್ ದ್ವಿಂದ ಇಂಡಿಯನ್ ಪಿನಲ್‌ಕೋಡಿನ 463ನೇ ಕಲಂ ಪ್ರಕಾರ ತಪ್ಪೀರುಮಾಡುವದ್ರಿಂದ ಅವರನ್ನು ತಕ್ಕ ಶಿಕ್ಷೆಗೆ ಗುರಿಪಡಿಸುವ ಬಗ್ಗೆ ಎದ್ರಿರ ಮೇಲೆ ಕ್ರಿಮಿನಲ್ ಪ್ರೊಸಿಕ್ಯೂಶನ್ ಮಾಡಬೇಕಾಗಿ ಅರ್ಜಿದಾರರು ಸೇಲ್ಯಂಡ ಕೋರ್ಟಿನಲ್ಲಿ ದಾಖ್ಲು ಮಾಡಿದ ಅರ್ಜಿಯು 4ನೇ ಎದ್ರಿಯಾದ ನಿಮಗೆ ಹಾಜ್ರಿ ಬಗ್ಗೆ ಯಿದೇ ಬರುವ 12-2-51ಕ್ಕೆ ಯಿಟ್ಟಿದೆ. ಅದಿನ ಹಗಲು ಘಂಟೆ 10ಕ್ಕೆ ನೀವು ಸ್ವತಃ ಅಥವಾ ವಕೀಲರ ಮುಖಾಂತರ ಹಾಜ್ರು ಆಗಿ ಉದಹರಿಸುವರೀತಿಪ್ಪಿದ್ದಲ್ಲಿ ಸದ್ರಿ ಸ್ವತಜಾರಣೆಯು ನಿಮ್ಮ ಗೈರಹಾಜ್ರಿಯಲ್ಲಿ ತೀರ್ಮಾನಿಸಲಾದೀತು. ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳ್ಸಿಯದೆ.

K V. Kamath,
Advocate for Petitioners

ಕಾರ್ಕಳ, ತಾ. 3-2-1951

ಗುರುವಾರ, ಉಡುಪಿ, ೮—೨—೫೧

ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ಸಿನಲ್ಲಿ ಬಿರುಸಾದ ಮಾತುಕತೆಗಳು ನಡೆದವು. ಎಲ್ಲದಕ್ಕಿಂತ ಮುಖ್ಯವಾಗಿ "ಅಕ್ಯ ನಿರ್ಣಯ"ದ ಗೊತ್ತುವಳಿಯವಾದಪ್ರತಿವಾದಗಳು ಸ್ವಾರಸ್ಯವಾಗಿದ್ದುವು. ನೆಹ್ರೂರವರು ಕಾಂಗ್ರೆಸ್ಸಿನ ಹಿರಿಯ ತತ್ವವನ್ನು ಹೊಂದಿಕೊಂಡು ಐಕ್ಯದಿಂದ ನಾವು ನಡೆಯಬೇಕು, ವೃಥಾ ಟೀಕೆ ಮಾಡುವದರಿಂದ ಏನನ್ನೂ ಸಾಧಿಸಿದಂತಾಗುವುದಿಲ್ಲ,ಕಾಂಗ್ರೆಸಿನಲ್ಲಿ ಬಣಗಳಾಗುವುದು ಶುಭಚಿಹ್ನೆಯಲ್ಲ ಎಂದು ಗೊತ್ತುವಳಿಯ ಕುರಿತು ಮಾತನಾಡಿದರು. ಜವಾಹರಲಾಲರ ಅಭಿಪ್ರಾಯದ ಪರಿಪೂರ್ಣ ಜ್ಞಾನವನ್ನು ಆರ್ಥಮಾಡಿಕೊಂಡು ಡೆಮಾಕ್ರಟಿಕ್ ಪಕ್ಷದ ನಿರ್ಮಾಣಕರ್ತರಾದ ಆಚಾರ್ಯ ಕೃಪಲಾನಿಯವರು ನೆಹ್ರೂರವರ ಸೊತ್ತುವಳಿಗೆ ತೀಕ್ಷ್ಣವಾದ ಉತ್ತರಕೊಟ್ಟರು. ಈ ವಾದ ಪ್ರತಿವಾದ ಅಧಿವೇಶನದ ತುಂಬ ಕಾಲವನ್ನು ತೆಗೆದು ಕೊಂಡಿತು. ಕಾಂಗ್ರೆಸ್ಸಿಗರಾಗಿದ್ದುಕೊಂಡು ಕಾಂಗ್ರೆಸ್ಸನ್ನು ಜರಿಯುವಾಂದೆಂದು ನೆಹ್ರೂ ಹೇಳಿದರೆ ಈಗಿನ ಪರಿಸ್ಥಿತಿಯಲ್ಲಿ 'ಅದು ಅನಿವಾರ್ಯ'ವೆಂದು ಸ್ಪಷ್ಟವಾಗಿ ನುಡಿದರು ಕೃಪಲಾನಿಯವರು.

ಈ ಇಬ್ಬರು ಧುರೀಣರ ವಾದವನ್ನೂ ನಾವು ಸಮರ್ಥಿಸಬೇಕಾಗುತ್ತದೆ. ಏಕೆಂದರೆ ನೆಹ್ರೂರವರು ಹೇಳುವಂತೆ ಕಾಂಗ್ರೆಸ್‌ದಲ್ಲಿ ಐಕ್ಯವಿಲ್ಲದೆ ಹೋದರೆ ಕಾಂಗ್ರೆಸ್ ಬಹುಕಾಲ ಬಾಳಲಾರದು. ಸ್ವಾರ್ಥರಹಿತ ಬುದ್ಧಿಯಿಂದಲೂ, ರಾಷ್ಟ್ರೀಯ ಮನೋವೃತ್ತಿಯಿಂದಲೂ ಕಾಂಗ್ರೆಸಿಗರು ದುಡಿದರೇನೆ ಕಾಂಗ್ರೆಸು ಜನತೆಯ ಒಲವನ್ನು ಗಳಿಸಿಕೊಂಡೀತು. ಒಟ್ಟು ನೆಹರೂ ಇಲ್ಲವೇ ಕೆಲವೇ ಉಚ್ಚ ಕಾಂಗ್ರೆಸ್ಸಿಗರ ನಿಸ್ವಾರ್ಥ ಮನೋವೃತ್ತಿಯ ದರ್ಶನವೆಯೆಂದ ಉಳಿದವರ ಕರ್ತವ್ಯ ಹರಿದ್ದುಹಂಚಿಕೆಯನ್ನೆಮ್ಮ ದಿಯುವಂತಿಲ್ಲ. ಬ್ರಿಟಿಷರನ್ನು ಓಡಿಸುವ ಕಾಲದಲ್ಲಾಗಲಿ—42ರ ಸಮಾರಿಗೆ ಸ್ವಾತಂತ್ರ್ಯದ ವಿಶೇಷ ಚಳುವಳಿ ಕಾಲದಲ್ಲಾಗಲೀ ಇದ್ದ ಸಂಘಟನಾ ಶಕ್ತಿ, ದೇಶಸೇವಾನಿಷ್ಠೆ, ಸ್ವಾತಂತ್ರ್ಯ ಬುದ್ಧಿ ಇಂಥ ಶೂನ್ಯವಾಗಿದೆ. ಇದಕ್ಕೆ ಕಾರಣ ದೇಶಕ್ಕೆ ಒಂದು ಪರಿಸ್ಥಿತಿಯೆಂದು ನವ್ಯನಾಯಕರು ಹೇಳುವುದುಂಟೂ ಸತ್ಯ ಸಂಗತಿ ಇದಾಗಿಲ್ಲ. ಕಾಂಗ್ರೆಸ್ಸಿಗರಿಗೆ ದುಡಿಯುವ ವೇಳೆ ಇದಕ್ಕೆಂದಲೂ ಕಾರಣ ಪರಿಸ್ಥಿತಿಯನ್ನು ಎದುರಿಸಿದ ಧೀರತೇಜರು ಸಂಘಸಿ ಜೀವನವನ್ನು ತ್ಯಾಗದಿಂದು ಮರೆಯ ದಿರೋಣ. ಸುಮಾರು 50 ವರ್ಷಗಳಿಂದ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಾರತೀಯರ ಚಾರಿತ್ರ್ಯದ ಹಿನ್ನೆಲೆಯನ್ನು ಸ್ವಾತಂತ್ರ್ಯ ಸಿಕ್ಕಿ ಇಷ್ಟು ವರ್ಷದಲ್ಲೇ ನುರಿಯುವಷ್ಟು ಅಜ್ಞಾನಿಗಳು ನಾವಾಗಿ ಕೂಡದು ಎಂದರೆ ನೆಹ್ರೂರವರು ಕರೆಯುವ ಹಾಗೆ ಕಾಂಗ್ರೆಸಿಗರಲ್ಲಿ ಐಕ್ಯವಿಲ್ಲ. ಪ್ರಾಮಾಣಿಕತನದ ಅಭಾವವಿದೆ. ರಾಷ್ಟ್ರೀಯ ಮನೋವೃತ್ತಿಯ ಬದಲು ಅಧಿಕಾರಲಾಲಸೆ—ಸ್ವಾರ್ಥ ಸಾಧನೆಯ ಚಿಕ್ಕೆಗಳೇ ಕಂಡುಬರುತ್ತಿವೆ. ಕಾಂಗ್ರೆಸ್ಸಿಗರು ಬ್ರಿಟಿಷರ ಮೇಲೆ ಯಾವ ಅಸಹ್ಯ ದವನ್ನು ಹಾಕುತ್ತಿದ್ದರೋ—ಯಾವುದನ್ನು ತಪ್ಪೆಂದು ಹೇಳುತ್ತಿದ್ದರೋ ಅದೇ ಬಗೆಯ ಅವ್ಯವಸ್ಥೆ ಈಗಲೂ ಉಳಿಸಿಕೊಂಡಿರುವುದು ದುರ್ದೈವ. ಕಾಂಗ್ರೆಸ್ಸಿಗರಾಗಿದ್ದುಕೊಂಡು ಕಳ್ಳಸಂತೆ, ಒಳಸಂಚು, ಅಧಿಕಾರದ ದುರುಪಯೋಗಗಳಿಂದ ಕಾಂಗ್ರೆಸ್ಸಿನ ಮೇಲೆ ಬಣ್ಣಬಳಿದ ಹಲವಾರು ಸನ್ನಿವೇಶಗಳನ್ನು ನೆನೆದುಕೊಂಡರೆ ಆಚಾರ್ಯ ಕೃಪಲಾನಿಯವರಂತೆ ಟೀಕೆ ಅನಿವಾರ್ಯವೆಂದು ತೋರುವುದು. ಮಾಡಿದ್ದಕ್ಕೆ ಮಣಿಹಾಕುವುದು ಸಾಮಾನ್ಯಜ್ಞಾನವಿಲ್ಲ. ಇಲ್ಲವೆ ನಿರಂಕುಶ ಪ್ರಭುತ್ವದ ಲಕ್ಷಣವೇ ಅದೀತು ವಿನಹ ಗಾಂಧೀಜೀ ಹಾಕಿಕೊಟ್ಟ ಉತ್ತಮ ಆದರ್ಶದ-ಪ್ರಜಾಪ್ರಭುತ್ವದ ಲಕ್ಷಣವಾಗದು. ಅಂದರೆ ಇಂತಹ ವಿಚಾರಗಳನ್ನು ಎತ್ತಿ ಟೀಕೆ ಮಾಡದೆ ಹೋದರೆ—ತೀವ್ರವಾದ ಪ್ರತಿಭಟನೆಗೆ ಇಲ್ಲದೆ ಹೋದರೆ ಯಾವ ಪಕ್ಷ ಸಂಘಗಳೂ ಸ್ಥಿರಕಾಲ ಬದುಕಲಾರವು.

ಆದರೆ ಹೀಗೆ ಆಗಬಹುದಾದ ಪ್ರಮಾದಗಳಿಗೆ ವಿರುದ್ಧ ಚಳುವಳಿಯನ್ನು ಹೂಡುವದಕ್ಕೆ ಹೊಸತಾದ ಪಕ್ಷವನ್ನು ಕಟ್ಟಿಕೊಳ್ಳುವುದು ಕಾಂಗ್ರೆಸಿನ ಅಸ್ತಿವಾರವನ್ನು ಸ್ಥಿರಗೊಳಿಸುವಷಕ್ಕೆಲ್ಲವೆಂಬುದನ್ನು ನಾವು ಚೆನ್ನಾಗಿ ಅರಿತಿರಬೇಕು. ಸಿಡದು ಬೇರೆಯಾಗಬಹುದಾದ ಬಂಗಡಗಳಿಗೆ ಕಾಲಾವಕಾಶ ತಮ್ಮ ಸ್ವಾರ್ಥ ಸಾಧಿಸುವದಷ್ಟೇ ರಂಜಕೀಯ ರಂಗವಾಗಬಹುದು. ತೀವ್ರಗಾಮಿ ಪಕ್ಷಗಳವರು ಕಾಂಗ್ರೆಸ್ಸಿನ ಶಕ್ತಿಯನ್ನು ಹೆಚ್ಚಿಸಲೆಂದು ಹೊರಗೆ ಬಂದವರು. ಆದರಿಂದು ತಮ್ಮ ಪಕ್ಷ ರಂಜಕೀಯದಲ್ಲಿ ಪ್ರಧಾನ ಭೂಮಿಕೆಯನ್ನು ಗಳಿಸುವವರೆಗೆ ಸಲವಾಗಿ ಸರಕಾರಕ್ಕೆ ವಿರುದ್ಧವಾಗಿ ಎಂತಹ ಅಪಪ್ರಚಾರವನ್ನು ಮಾಡುವದಕ್ಕೂ ಹೇಸುವದಿಲ್ಲ. ತಮ್ಮ ಬೇಳೆ ಸೇಯಿಸಿಕೊಳ್ಳುವದರ ಸಲುವಾಗಿ ಸಂಸ್ಥಾನವನ್ನು ಟೀಕೆ ಮಾಡುವುದೇ ಅವರ ಘೋಷಣೆವಾಗಿದೆ ತಮ್ಮೊಳಿಪ್ಪರ ವಿಚಾರ ಭಿನ್ನ ಕಾರಣ ಲಿಂಗಕ ಬಳಸಿ ಮಟ್ಟಿಗೆ ಇದು ನಿಜವಾಗಿಯೆಯಲ್ಲವೆ ನಮಮ್ಮ ಅನಸ್ಯಾಜಂದವಾಗಿ ತೋರಿದೆ

ಶ್ರೀ ಕೃಪಲಾನಿಯವರ ಪಕ್ಷಾಯಕ್ಕೆ ಟೀಕೆಗಳು ಕಾಂಗ್ರೆಸ್ಸಿನ ಶುದ್ಧೀಕರಣಕ್ಕೆ ಸಂಬಂಧಿಸಿದ್ದಾಗಿದ್ದರೆ ಯಾರೂ ಅವರಿಗೆ ಜೈಕಾರ ಹಾಕುತ್ತಿದ್ದರು. ಆದರೆ ಜೆಬಾಸ್ಟಿಯನ್ ಪಕ್ಷವನ್ನು ಕಟ್ಟಲಿಕೂಂಡು ಆ ಕಾರ್ಯವನ್ನು ಮಾಡುತ್ತೇನೆಂದು ಹೇಳಿದರೆ ಕಾಂಗ್ರೆಸ್ಸಿಗರಿಂದಾಗಿ ಶಕ್ತಿ ಮಸಿಯುವುದೆಂದೇ ಅರ್ಥ. ಆ ಬಗೆಯ ಸಕ್ಷಗಳಿಂದ ಕಾಂಗ್ರೆಸ್ಸಿನ ದುರ್ಬಲಗೊಳ್ಳದೇ ಹೊರತು ಭದ್ರವಾಗಲಿಕ್ಕಿಲ್ಲ.

ಅಂತೂ "ವಾದೇ ವಾದೇ ಜಾಯತೇ ತತ್ವಬೋಧಃ" ಎಂದ ಹಾಗೆ ಹೀಗೆ ವಿಮರ್ಶೆಯಾಗುವುದ ಕಾಂಗ್ರೆಸ್ಸಿನ ಶುದ್ಧೀಕರಣದ ವಿಚಾರದಲ್ಲಿ ಅತೀ ಅವಶ್ಯ. ಆದರೆ 'ವಾದೇ ವಾದೇ ಜಾಯತೇ ತತ್ಸಭಾಧಃ' ಆಗಕೂಡದು. ಕಾಂಗ್ರೆಸಿಗರು ಸಂಘಟಿತ ರಾಗಿಯವದರಿಂದಲೇ ಸ್ವಾತಂತ್ರ್ಯದ ಫಲವನ್ನು ನಾವು ಉಣ್ಣಬಹುದು. ನಮ್ಮ ಇ ಸ್ವಾರ್ಥವನ್ನು ಸೂರೈಸಿಕೊಳ್ಳಬಹುದು. ನೆಹ್ರೂರವರ "ಐಕ್ಯ ಗೊತ್ತುವಳಿ"ಯು ಕಾರ್ಯಗತವಾಗುವುದರಿಂದಲೇ ಅದು ಸಾಧ್ಯ.

ಜಾರಿದ ಕಿಡಿಗಳು

ನಗರದ ಕೆಲವು ರಸ್ತೆಗಳಿಗೆ ಆದುನಿಕ ನೀರು; ಕೆಲವು ರಸ್ತೆಗಳಲ್ಲಿ ಹಾರುವ ಧೂಳು!

೦೦

ಜನರಲ್ಲಿ ಸ್ಪೃಶ್ಯಾಸ್ಪೃಶ್ಯತೆ ಕಡಿಮೆಯಾದರೂ ಮುನ್ಸಿಪಲ್ ರಸ್ತೆಗಳಲ್ಲಿ ಕಡಿಮೆಯಾಗಲಿಲ್ಲ.

೦೦

ನಗರಸಭೆಯ ಆಡಳಿತಗಳನ್ನು ಹೇಳುವವರಿದ್ದಾರೆ; ನಾಗರೀಕರ ಆಡಚಣೆಗಳನ್ನು ಕೇಳುವವರಿದ್ದಾರೆಯೆ?

೦೦

ನಾಗರಿಕರಿಗೆ ದೊರೆಯತಕ್ಕ ಸೌಕರ್ಯ ಕಡಿಮೆಯಾದರೂ ತೆರಿಗೆ ವಸೂಲಿ ತಪ್ಪಲಾರದು.

೦೦

ಹೆಸರಿಗೆ ಸಿಟಿಬಸ್ಸು; ಹಿಡಾಡುವುದು 'ಸಿಟಿ'ಯ ಹೊರಗೇನೇ.

೦೦

'ಸೀದಾ' ರಸ್ತೆ ತಯಾರದರೂ 'ಸೀದಾ'ಹೋಗುವ ಬುದ್ಧಿ ಬಾರದು.

೦೦

'ಹೊರೆ' ಹೊತ್ತು ಹೋರುವನೆಂದರಾಗದು; ಹೊಹೆಹೊತ್ತು ಜಾರಿಸಿಕೊಳ್ಳುವನೆಂದರಾಗದು.

೦೦

ಒರೆದಂತೆ ನೀತಿ, ಬರೆದಂತೆ ಕೃತಿ ಇರಬೇಕೆಂದಿಲ್ಲ.

೦೦

ಸಿಡುಕಿನವ ನಿಡ ಕಡಿದುದು ತೋರುತ್ತದೆ; ಜಾಣ ಬೇರು ಕತ್ತರಿಸಿದ್ದು ಗೊತ್ತಾಗುವದಿಲ್ಲ.

೦೦

ಆಡುವುದು ಮಾತಿರಲಿ; ಮಾಡುವುದು ಹಾಡಲಿ.

೦೦

ಸೂಜಿ ಹೊಕ್ಕಲಾಗದಿದ್ದಲ್ಲಿ ಗುದ್ದಲಿ ಕೂರುವ ಸಾಹಸ!

೦೮

ಯಾವುದರ ನೆಲೆಯನ್ನಾದರೂ ಊಹಿಸಬಹುದು; 'ಮೆದುಳಿನ ವ್ಯಾಪಾರ'ದ 'ಮಹಿಮೆ' ತಿಳಿಯುವುದು ಕಷ್ಟ.

೦೦

ಸಾಧಿಸಿ ತಲಪಿ ನಿಂಗಬಹುದೆಂದು ಸೊನ್ನೆಗೆ ಸುತ್ತಿ ಫಲವೇನು?

೦೦

ನೋಡಲಿಕ್ಕೆ "ಆಯ್ಕೊ ಪಾಪ!" 'ಬಿಡಿಸಿ' ದರೆ ಪಾಪಕೂಪ!

೦೦

"ನೋಟಿ" ತಪ್ಪಿದ ಮೇಲೆ ಬಿಕಲಾಟಿದ ಮಾತೇಕೆ?

೦೦

"ನಾಡಿ" ನಿಂತರೂ 'ಬಾಡಿ' ನಿಲ್ಲದು.

೦೦

ಮಡಿ ಮೈಲಿಗೆಯು ಮಾತು; ಇಡಿ ನುಂಗುವ ಕವಾತು.

೦೦

ಮಾತನಾಡಿ ಒಲಿಸಿದಂತೆ ಕೆಲಸಮಾಡಿ ಮೆಚ್ಚಿಸುವುದು ಕಷ್ಟ.

೦೦

ಎದುರಿಗೆ ಬಂದು ಹೋರಲಾರದವ ಅಪ್ರಬಾರದ ಹೊಲಸಿಗೆ ಕೈಹಾಕುತ್ತಾನೆ.

೦೦

ಜಾರಿಯಾದ 'ದೇಶನ' ಹೋದರೂ ಚಾಲ್ತಿಯಾದ 'ಭೇಸನ' ಹೋಗಲಾರದು.

೦೦

ತಮ್ಮ ಸುದ್ದಿ ಮುಂದ್ಹಾಗಿ ಬರಬೇಕು; ಸುದ್ದಿಗಾರರ ಸುಳಿವು ಬೇಡ ಎಂದರೆ ಹೇಗಾದೀತು.

೦೦

ನೆಲ ನೋಡಿ ನಡೆಯಬೇಕು; ನೆಲೆ ನೋಡಿ ನುಡಿಯಬೇಕು.

೦೦

ಇಂದು ತಾವು ಅಕ್ರಮಿಸಿದ ಸ್ಥಾನದಲ್ಲಿದ್ದು ಏನು ಮಾಡುತ್ತಿದ್ದೇವೆಂಬ ಗೊಡವೆ ಇಲ್ಲ; ಮುಂದೆ ಇಲ್ಲದ ಸ್ಥಾನ ದೊರೆತರೆ ಹಾಗೆ ಮಾಡುತ್ತಿದ್ದೆವು ಎಂಬ ಕನಸು ಕಟ್ಟುವವರೇ ಎಲ್ಲ.

ಉಡುಪಿ

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿ ಸಮ್ಮೇಳನ,ಉಡುಪಿ—ಫೋನ್ ನಂ. ೨. ದ ಕ ಜಿಲ್ಲಾ ವಿದ್ಯಾರ್ಥಿಗಳ ಮಹಾಸಮ್ಮೇಳನವು ಫೆಬ್ರವರಿ ತಿಂಗಳ 11ನೇ ತಾರೀಕು ಆದಿತ್ಯವಾರ ಉಡುಪಿ ಪೇಜಾವರ ಹಾಲಿನಲ್ಲಿ ಜರಗಲಿದೆ. ಹಾಸನದ ಶ್ರೀ ಹಾರ್ನಳ್ಳಿ ರಾಮಸ್ವಾಮಿ; ಬಿ. ಎ ಎಲ್. ಎಲ್. ಬಿ ಆವರು ಅಧ್ಯಕ್ಷತೆ ವಹಿಸುತ್ತಾರೆ ಮಂಗಳೂರಿನ ಪ್ರಸಿದ್ಧ ಸುಂದರಾಳು ಮತ್ತು ಕಾಂತಿಕ್ಕ ಸಂಸ್ಥೆಯ ಪ್ರೊ. ಬಿ. ಸಿ. ಪರ್ಗೀಸ್; ಎಂ. ಎ; ಆವರು ಸಮ್ಮೇಳನವನ್ನು ಉದ್ಘಾಟಿಸುತ್ತಾರೆ. ಬೆಳಿಗ್ಗೆ 8ಘಂಟೆಯ ಧ್ವಜಾರೋಹಣ ಕಾರ್ಯವನ್ನು ಶ್ರೀ ಎಚ್. ಸುಂದರ್ ರಾವ್; ಎಂ. ಎ; ಆವರು ನೆರವೇರಿಸುತ್ತಾರೆ. ಸಂಜೆಯ 4ಘಂಟೆಯ ಬಹಿರಂಗ ಅಧಿವೇಶನದಲ್ಲಿ ಕು. ಶಿ. ಹರಿದಾಸ್ ಭಟ್ಟ, ಬಿ. ಎ. (ಆನರ್ಸ್) ಬಿ. ಜೋಗೀಶ್ವರ ಹೊಳ್ಳ, ಬಿ. ಎ. ಎಲ್, ಎಲ್. ಬಿ; ಅಮೂ ಸುಂದರಿ, ಬಿ. ಎ;ಬಿ.ಟಿ; ಮಹಾಬಲ ಭಂಡಾರಿ, ಎಂ. ಎ; ಎಲ್.ಎಲ್. ಬಿ; ಮೊದಲಾದವರು ಭಾಷಣ ಮಾಡಲಿರುವರು. ಜಿಲ್ಲೆಯ ಹಲವು ಶಾಲಾ, ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪ್ರತಿನಿಧಿಗಳಾಗಿ ಬರತಕ್ಕವರಿದ್ದಾರೆ. ಮುಂದೆ ಬರಬಯಸುವ ವಿದ್ಯಾರ್ಥಿಗಳು ಮುಂದಾಗಿ ತಿಳಿಸಬೇಕಾಗಿ ವಿನಂತಿ. ಈ ಸಮ್ಮೇಳನದ ಸಂಬಂಧವಾಗಿ ಭಾಷಣ ಸ್ಪರ್ಧೆ, ಹಗಲು ವೇಷದ ಸ್ಪರ್ಧೆ ಮತ್ತು ನಾಟಕ, ನರ್ತನ ಮೊದಲಾದ ಕಾರ್ಯಕ್ರಮಗಳಿವೆ. ಸರ್ವರೂ ಇದೇ ಆಮಂತ್ರಣವೆಂದು ತಿಳಿದು ಪ್ರೋತ್ಸಾ

THE

Canara Industrial & Banking Syndicate Ltd.,

Head Office.

NOTICE

The Register of Members and Transfer Books of the Syndicate will remain closed from the 18th February, 1951 to 18th March, 1951, both days inclusive.

Udipi,
5—2—1951

T. M. A. Pai,
Managing Director.

ಹಿಜಬೇಕಾಗಿ ವಿನಂತಿ. ವಿನರಕ್ಕೆ (ಸ್ವಾಗತ ಸಮಿತಿ, ಬಿ. ಕೆ. ಬೆಲ್ಲಾ ವಿದ್ಯಾರ್ಥಿ ಸಮ್ಮೇಳನ, ಉಡುಪಿ.)

ಲೇಡಿ ಧನ್ವಂತಿ ಧಾಪುರಾಯರು—ಇದೇ ತಾ. 5ರಲ್ಲಿ ಉಡುಪಿಗೆ ಬಂದು ಸ್ಥಳೀಯ ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು ಯೂನಿಯನ್ ಆಶ್ರಯದಲ್ಲಿ ಚಿಕ್ಕ ಭಾಷಣವೊಂದನ್ನಿತ್ತರು. ಡಾ। ಟಿ. ಮಾಧವ ಪೈಗಳು ಅಧ್ಯಕ್ಷತೆ ವಹಿಸಿದ್ದರು, ಪ್ರಿನ್ಸಿಪಾಲ್ ಎಚ್. ನಂದರ ರಾಯರು ಸ್ವಾಗತ ಮಾತುಗಳನ್ನಾಡಿದರು. ಲೇಡಿ ರಾಮರಾಯರು ಮಹಿಳಾಕೂಟ, ವಿದ್ಯಾರ್ಥಿ ಜೀವನದ ಉದಿತು ಪೂತನಾಡುತ್ತಾ ದೇಶ ಸೇವೆಯೇ ವಿದ್ಯಾರ್ಥಿಗಳ ಗುರಿಯಾಗಿರಬೆಕ್ಕಾದೆಂದು ಹೇಳಿದರು. ಕಾಲೇಜು ಯೂನಿಯನ್ ಉಪಾಧ್ಯಕ್ಷ ಶ್ರೀ ಟಿ. ಶಿ. ಜಿದಾನ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಭಾರತ ಸ್ಕೌಟು—ಸ್ಥಳೀಯ ಹಿಂದು ಸ್ಕಾಸ್ ಸ್ಕೌಟ್ ಏಸೋಸಿಯೇಶನಿನ ವಿಶೇಷ ಮಹಾ ಸಭೆಯು ಇದೇ ತಾ. 3ರಲ್ಲು ಡಾ। ಎಸ್. ಆರ್. ಶೈಗಳ ಅಧ್ಯಕ್ಷತೆಯಲ್ಲಿ ಜರಗಿತು, ಸಂಘವನ್ನು ಭಾರತ ಸ್ಕೌಟು ಸಂಘವನ್ನಾಗಿ ಮಾರ್ಪಡಿಸಬೇಕೆಂದು ನಿರ್ಣಯವಾದ ನಂತರ ಕಾರ್ಯಕಾರೀ ಮಂಡಳಿಯ ಚುನಾವಣೆ ನಡೆಯಿತು. ಶ್ರೀ ಕೆ. ವಿಠಲ ಶೆಣೈಯವರು ಧನ್ಯವಾದಗಳನ್ನರ್ಪಿಸಿದ ನಂತರ ಸಭಾಂತ್ಯವಾಯಿತು.

ವಯಸ್ಕರ ಶಿಕ್ಷಣ ಪಾಠವನ್ನು—ಉಡುಪಿ ತಾಲೂಕಿನಲ್ಲಿ ಇದೇ ತಾ. 17ರಂದ 21ರ ತನಕ ವಿವಿಧ ಕಾರ್ಯಕ್ರಮಗಳಿಂದ ಆಚರಿಸುವ ಕುರಿತು ವಿಚಾರ ವಿನಿಮಯ ಮಾಡುವ ಸಭೆಯು ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು ಹಾಲಿನಲ್ಲಿ ಶ್ರೀ ಎಚ್. ನಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿ, ಉಪಸಮಿತಿಗಳ ನೇಮಕವಾಯಿತು.

NOTICE.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 179/48

S. E. A. 239/1950

ವಾದಿ—ರಾಮ.

ಪ್ರತಿವಾದಿಗಳು—1. ಹಕೀರ ಸಾಹೇಬು,

2. ಶೇಕುಂಜ್ಞ.

ತೀರ್ಥಳ್ಳಿ ತಾಲೂಕು ತೀರ್ಥಳ್ಳಿಯಲ್ಲಿ ಹೊಸ್ಮನೆಗುಂಡಿಯಲ್ಲಿರುವ ಹಮ್ಮದ್ ಸಾಹೇಬರ ಮಕ್ಕಳು ಹಕೀರ ಸಾಹೇಬು 1, ಶೇಕುಂಜ್ಞ 1, ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ವ್ಯವಹಾರದಲ್ಲಿ ಮೇಲಿನ ದಿಕ್ರಿಯನ್ನು ಶಿವಮೊಗ್ಗ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿಗೆ ಟ್ರಾನ್ಸ್‌ಫರ್ ಮಾಡಬೇಕೆಂತ ಅರ್ಜಿದಾರನು ದಾಖ್ಲು ಮಾಡಿದ ಮೇಲಿನ ಅರ್ಜಿಯನ್ನು ತಾರೀಕು 14-2-1951ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟರಿಂತ್ತದೆ. ಆ ಕಾರಿತು ನೀವಾದರೂ ಆ ದಿವಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀದು ಮಾಡಿ ಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah,
Advocate for Petr.
Coondapoor. Date 3-2-51

ಪ್ರಕಟಣೆ

ಕಾರ್ಕಳತಾಲೂಕು ಮುದ್ರಾಡಿ ಗ್ರಾಮದ ಬಳ್ಳಾಡಿ ಎಂಬಲ್ಲಿ ವರ್ಷಂಪ್ರತಿ ನಡೆಯುತ್ತಿದ್ದ ಉತ್ಸವಗಳು 3 ವರ್ಷಗಳಿಂದ ನಿಂತುಹೋಗಿದ್ದುವು. ಈ ವರ್ಷ ಗ್ರಾಮಸ್ಥರ ಸಹಕಾರದಿಂದ ತಾರೀಕು 21-2-51ನೇ ಬುಧವಾರ ರಾತ್ರಿ ಪೂಜಾಬಲಿ ಉತ್ಸವವನ್ನೂ ತಾರೀಕು 22-2-51ನೇ ಗುರುವಾರ ರಾತ್ರಿ ವೈದರ್ಕಳ ಕೋಲವನ್ನೂ ಜರುಗಿಸುವದೆಂದು ನಿಶ್ಚಯಿಸಿರುವೆವು. ಸರ್ವರಿಗೂ ಸ್ವಾಗತವಿದೆ.

ಗ್ರಾಮಸ್ಥರ ಪರವಾಗಿ,
ಯಂ ವೆಂಕಪ್ಪಯ್ಯ.

ಮಿಜಾರು— ಸ್ಥಳೀಯ ಬೋರ್ಡ್ ಶಾಲೆಯಲ್ಲಿ ತಾ. 1-2-51ರಲ್ಲಿ ಶ್ರೀ ಎಸ್. ಸದಾರಾಮ ಅಧ್ಯಂತಾಯ, ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಸಯಸ್ಕರ ಶಾಲೆಯು ಶಾಲಾ ಮುಖ್ಯ ಉಪಾಧ್ಯಾಯ ಶ್ರೀ ಎಂ ಕೊರಗ ಸೆಟ್ರಿ ಜಾಲಕ್ಷ್ಯದಲ್ಲಿ ತೆರೆಯಲ್ಪಟ್ಟಿತು.

ಕುಂಬಳೆ— ಇದೇ ತಾ. 3ರಿಂದ ಸ್ಥಳೀಯ ಟಿಪ್ಪಾಲು ಕಟ್ಟೆಯಲ್ಲಿ ತಂತಿ ಅಫೀಸು ತೆರೆಯಲಾಗಿದೆ.

ಕಾರ್ಕಳ— ಕಳೆದ ತಾ. 28ರಲ್ಲು ಕಾರ್ಕಳ ಲಲಿತ ಕಲಾ ಮಂಡಲದ ಆಶ್ರಯದಲ್ಲಿ ಶ್ರೀ ತ್ಯಾಗ ಬ್ರಹ್ಮ ಉತ್ಸವವು ಬೆಲ್ಲಾ ಪಾನಿರೋಧ ಅಧಿಕಾರಿ ಶ್ರೀ ಕೃಷ್ಣ ಅಯ್ಯರ್ ಅವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ವಿ. ಟಿ. ಶಾಲಾ ಪಕಾಂದಲ್ಲಿ ಜರುಗಿತು. ಅಧ್ಯಕ್ಷರು ಶ್ರೀ ತ್ಯಾಗರಾಜರ ಜೀವನ ಪರಿಚಯವನ್ನು ಮಾಡಿಕೊಟ್ಟರು. ಉತ್ಸವದ ಆಂಗವಾಗಿ ಸಂಗೀತ ಹಾಡಿದ ಶ್ರೀಮತಿ ಕಾಂಚನ ರಾಜಲಕ್ಷ್ಮಿ ಅವರಿಗೆ ಬಹುಮಾನ ಕೊಡಲಾಯಿತು.

ಕುಂಬಾಪುರ—ಕಳೆದ ತಾ. 30ರಲ್ಲು ಗಾಂಧಿಜಯಂತಿಯವರ ಪುಣ್ಯ ದಿನಾಚರಣೆಯು ಶ್ರೀ ವೀರಲ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕೋಟೇಶ್ವರ ಹೈಸ್ಕೂಲಿನ ಮಕ್ಕಳು ಸೂತ್ರಯಜ್ಞವನ್ನು ನಡೆಸಿದರು. ಪಕೀಲ್ ಶ್ರೀ ಮಂಜಯ್ಯ ಶೆಟ್ಟಿ ಮತ್ತು ದಿಪ್ಪುಟಿ ತಹಶಿಲ್ದಾರ್ ಶ್ರೀ ಕೆ. ಸಂಜೀವ ಪ್ರಭುಗಳ ಲೆಬ್ಬರಿಂದ ಒಂದನೆ ಮತ್ತು ಎರಡನೆ ಇನಾಮುಗಳನ್ನು ಕೊಡಲಾಯಿತು.

ಪಡುಬಿದ್ರೆ—ಇಲ್ಲಿಯ ಬೇಂಗ್ರೆ ಬ್ರಹ್ಮಸ್ಥಾನದ ಶ್ರೀ ಖಡ್ಗೇಶ್ವರಿ ಸನ್ನಿಧಿಯಲ್ಲಿ ಎರಡು ವರುಷಗಳಿಗೊಮ್ಮೆ ಜರಗುವ 'ಧರ್ಮಬಲಿ' ಮಹೋತ್ಸವವು ಇದೇ ತಾ. 3ರಲ್ಲು ಆರಂಭವಾಗಿದ್ದು ತಾ. 9ರಲ್ಲು ಕೊನೆಗೊಳ್ಳುವುದು.

ಉಳಿತಾಯ ಪ್ರಚಾರ ಸಪ್ತಾಹವು: ಜಿಲ್ಲೆಯಲ್ಲೆಲ್ಲಾ ಇದೇ ತಾ. 4ರಲ್ಲು ಶ್ರಾರಂಭವಾಗಿ ತಾ. 10ರ ತನಕ ನಡೆಯಲಿದ್ದು ಸದ್ರಿ ಸಪ್ತಾಹವು ಯಶಸ್ವಿಯಾಗುವಂತೆ ಮಹಾ ಜನರು ಸಹಕರಿಸಬೇಕಾಗಿ ಜಿಲ್ಲಾ ಕಲೆಕ್ಟರರ ವಿನಂತಿಯಿದೆ.

ಶ್ರೀ ಧರ್ಮಸ್ಥಳ ಕ್ಷೇತ್ರದ "ಮಹಾನಡಾವಳಿ".

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಇದೇ ತಾ. ೩೫-೨-೫೧ರಿಂದ ತಾ. ೨೨-೩ ಬುಧ ವರೆಗೆ "ಮಹಾನಡಾವಳಿ" ಮಹೋತ್ಸವವನ್ನು ಜರಗಿಸುವುದಾಗಿ ಸಂಕಲ್ಪಿಸಿಯದೆ ಶ್ರೀ ಮಂಜುನಾಥ ಮಹಾಸ್ವಾಮಿಯ ಮಹದನುಗ್ರಹದಿಂದ ಈ ಮಂಗಳೋತ್ಸವವು ಅವರ ಸನ್ನಿಧಿ ಮತ್ತು ಸಮ್ಮುಖದಲ್ಲಿ ಸಾಂಗವಾಗಿ ನೆರವೇರಬೇಕಾಗಿದೆ, ನೆರವೇರಲಿದೆ.

"ನಡಾವಳಿ" ಎಂದರೇನು? ಅದು ಬಹು ಕಾಲದಿಂದ ರೂಢಿಯಾಗಿ ಸಂಪ್ರದಾಯವಾಗಿ ನಡೆದು ಬಂದ ಧರ್ಮ ಪ್ರಚಾರ ಕಾರ್ಯ. ಈ ಕಾಲದಲ್ಲಿ ನಾನಾ ರೀತಿಯಲ್ಲಿ ಭಜಿಸಿ ಪೂಜಿಸಿಕೊಂಡು ಬರುವಂಥ ದೇವರನ್ನೂ ವಿವಿಧ ರೀತಿಯ ದೇವತೆಗಳನ್ನೂ ಆರಾಧನೆ, ಅರ್ಚನೆ, ಪೂಜಾವಿಧಾನಗಳಿಂದ ಪ್ರಸನ್ನೀಕರಿಸಿಕೊಳ್ಳುವ ಒಂದು ರೀತಿಯ ಮಹಾಯಜ್ಞವೇ ಆಡನ್ನಬಹುದು. ರಾಷ್ಟ್ರದ ಅಭ್ಯುದಯಕ್ಕೂ, ಲೋಕದ ಸುಖಶಾಂತಿ ಕ್ಷೇಮಲಾಭಕ್ಕೂ ಹಿಂಬಲ ಮುಂಬಲ ಬೆಂಬಲಗಳು ದೊರಕುವ ಹಾಗೆ, ಅನಂತಮಹಿಮನಾದ ಪರಮಾತ್ಮನನ್ನು ವಿಶೇಷವಾದ ಪೂಜಾವಿಧಿಗಳಿಂದ ಅನನ್ಯ ಭಕ್ತಿಭಾವದ ಪ್ರಾರ್ಥನೆಗಳಿಂದ ಒಲಿಸಿಕೊಳ್ಳುವುದೇ ಇದರ ಮುಖ್ಯ ಮೂಲ ಉದ್ದೇಶವಾಗಿದೆ. ಇಂಥ ಸಂದರ್ಭಗಳಲ್ಲೆಲ್ಲ ಕ್ಷೇತ್ರಕ್ಕೆ ಬರತಕ್ಕ ಯಾತ್ರಿ ಜನರನ್ನೂ ಯಥೋಚಿತ ಆದರಾತಿಥ್ಯಗಳಿಂದ ಸಕ್ಕರಿಸಿ ಸಂತೋಷಪಡಿಸಿಯುವುದೂ ರೂಢಿ. ಆಲ್ಲದೆ ಧರ್ಮ, ಶಾಂತಿ, ವಿವಿಧ ರೀತಿಯ ಕೃಷಿ, ಕಲೆ, ಕೈಗಾರಿಕೆ ಮೊದಲಾದ ಜನೋನ್ನತಿಯ ವಿಷಯಗಳ ಜ್ಞಾನಪ್ರಸಾರಕ್ಕೆ ಅವಶ್ಯವಿರುವ ಸಹಾಯವನ್ನು ನೀಡಿ ಆದರಿಸಿ ಪ್ರೋತ್ಸಾಹಿಸುವುದೂ ಆ ಸಂಬಂಧ ವಿದ್ವಾಂಸರನ್ನೂ, ಪಂಡಿತರನ್ನೂ, ಕಲಾವಿದರನ್ನೂ, ತಾರತಮ್ಯಾನುಸಾರವಾಗಿ ಗೌರವಿಸುವುದೂ ಕೂಡ ಒಂದು ಪದ್ಧತಿಯೇ.

"ಹೀಗೆ ಸರ್ವಪ್ರಕಾರದ ಪಂಡಿತಮಾನ್ಯರನ್ನು ಸನ್ಮಾನಿಸುವುದು ಕೇವಲ ಉಪಚಾರರೂಪದ ಪಾತಳ್ಳ-ಅದು ದೇವರ ಆರಾಧನೆಯ ಒಂದು ಪ್ರಧಾನ ಅಂಗವೆಂದೇ ತಿಳಿಯಬೇಕು. ಜ್ಞಾನವು ಆತ್ಮನ ಪ್ರಧಾನವಾದ ಒಂದು ಧರ್ಮ ಅಥವಾ ಒಂದು ಲಕ್ಷಣವಾಗಿದೆ. ಪರಮಾತ್ಮನಲ್ಲಿ ಮಾತ್ರ ಇಂಥ ಜ್ಞಾನವು ಪರಿಪೂರ್ಣವಾಗಿದೆ; ಅನಂತ ಜ್ಞಾನವು ವ್ಯಕ್ತವಾಗುತ್ತದೆ. ಅಂಥ ಜ್ಞಾನವು ನಮ್ಮಲ್ಲಿಯೂ ಅಪೂರ್ಣವಾಗಿ ಅಥವಾ ಅಗೋಚರರೂಪದಿಂದಲಾದರೂ ಬಗೆಬಗೆಯ ರೀತಿಯಲ್ಲಿ ಕೋರುವುದೂ, ಪ್ರಕಾಶಕ್ಕೆ ಬರುವುದೂ, ಸಹಜ. ಹಾಗಿರುವಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ವಿಚಾರಗಳೆರಡರಲ್ಲಿಯೂ ಉಪಾಸಂಗವಾಗಿ ಸಾಹಿತ್ಯ, ಕಲೆ, ಕೈಗಾರಿಕೆ ಇತ್ಯಾದಿ ವಿಷಯಗಳಲ್ಲಿ, ಬೇರೆ ಬೇರೆ ರೀತಿಯಾಗಿ ಆ ಜ್ಞಾನವು ಪ್ರಕಟವಾಗಿ, ನಮ್ಮಲ್ಲಿಯೂ ದೇವತಾಂಶ ಸ್ವರೂಪವು ಅಥವಾ ಪರಮಾತ್ಮನ ಅಸ್ತಿತ್ವವು ಸೂಚಿಸಲ್ಪಡುವುದಾಗಿ ನಂಬಲಾಗಿದೆ"

ಈ "ಮಹಾನಡಾವಳಿ" ಮಹೋತ್ಸವದ ದಿವಸಗಳಲ್ಲಿ ಮೇಲೆ ಸೂಚಿಸಿದ ವಿಚಾರಗಳ ನೆಲೆಲ್ಲ ಯಥಾಮತ್ತಿ, ಯಥಾಶಕ್ತಿಯಾಗಿ ಆಚರಿಸಲಾಗುವುದು. ಇಂಥ ಉತ್ಸವ ವಿಶೇಷವನ್ನು ಇನ್ನು ಎಸರ್ಕೊಮ್ಮೆ ಆವರಿಸುವುದು ರೂಢಿಯಾಗಿದ್ದರೂ, ಕಳೆದ ೪೨ ವರ್ಷಗಳಿಂದ ಈ "ಮಹಾನಡಾವಳಿ" ಮಹೋತ್ಸವವನ್ನು ಹಲವು ಕಾರಣಗಳಿಂದ ಜರುಗಿಸುವುದಾಗಲಿಲ್ಲ. ಇದಕ್ಕಾಗಿ ನಾನು ದೇವರ ಕ್ಷಮೆ ಬೇಡುತ್ತೇನೆ. ಈ ಕಾಲದಲ್ಲಿಯಾದರೂ "ಕಂಟ್ರೋಲ್"ನ ದೆಸೆಯಿಂದ ಪದಾರ್ಥಗಳು ಇಚ್ಛಿಸಿದಷ್ಟು ದೊರೆಯದ ಕಷ್ಟವೂ ತಾಪತ್ರಯವೂ ಏನೂ ಬೆನ್ನು ಬಿಟ್ಟಿದ್ದಲ್ಲ, ಅವು ಕಷ್ಟದ್ದೇ ಆಲ್ಲ; ಮೇಲಾಗಿ ನಾಲ್ವತ್ತು ವರ್ಷಗಳ ಹಿಂದಿನ ಜನರ ಮನೋವಿಚಾರಗಳಿಗೂ ಈ ಕಾಲದವರ ವಿಚಾರಗಳಿಗೂ ಎಷ್ಟೊಂದು ಅಳವಾದ ವ್ಯತ್ಯಾಸವಿಲ್ಲ! ಇಷ್ಟಾದರೂ ಇಂಥ ದೊಡ್ಡ ಉತ್ಸವ ಕಾರ್ಯವನ್ನು, ಯಥಾವಿಧಿಯಾಗಿ ಈಗಿನ ದೇಶ ಕಾಲ ವಿದ್ಯಮಾನಗಳನ್ನೂ ಅನುಸರಿಸಿ, ಆಚರಿಸುವ ಸಾಹಸವನ್ನು ದೇವರಲ್ಲಿ ಅಚಲವಾದ ಶ್ರದ್ಧೆ ವಿಶ್ವಾಸಗಳನ್ನಿರಿಸಿ ಕೈಕೊಂಡಿದ್ದೇನೆ. ದೇವರೂ ದೇವತೆಗಳಿಗೂ ಅನುಗ್ರಹಿಸಲು ಬದುಮ್ಯಸಾಧ್ಯವಾದ ಈ ಉತ್ಸವ ಕಾರ್ಯಕ್ಕೆ ಸರಕಾರವಾದರೂ ತಕ್ಕ ನೆರವನ್ನೂ ಸಹಕಾರವನ್ನೂ ನೀಡದೆ ಹೋಗದೆಂದು ಕೋರಿಕೆ.

D. Manjayya Hegde

ಧರ್ಮಸ್ಥಳ ತಾ. 25-1-1951

Approved from by the Govt. of Mysore
Certificated by the Agent of the Govt of Cylone & India.

THE UDIPI BANK, LIMITED.

Estd: **1925**] [Head Office: **UDIPI**

Branches at~ Udipi, Kallianpur, Coondapoor & Mundkur

NOTICE.

The 26th Annual ordinary general meeting of the shareholders of the Bank will be held at the registered office of the Bank at Udipi, on Sunday 25th February 1951 at 11 *A. M.*, to transact the following business:

1. To receive, consider and adopt the balance sheet as at 31—12—50, the P & L. Account for the year ended 31-12-'50, the Auditor's Report thereon and the Directors' 26th Annual Report.
2. To elect two Directors in the place of those retiring under Article 92. The retiring Directors are eligible for re-election.
3. To determine the sitting Fee to be paid to the Directors for attending meetings of Directors and Committees.
4. To appoint an auditor for the current year 1951. Last year's Auditor is eligible for re-election

N. B: Transfer Books & Register of members of the Bank will remain closed from 10 2-1951 to 25-2 51, both days inclusive.

[By order of the Directors]

Office of the Bank UDIPI. 21st January 1951. } *(Sd) U. V. Prabhu,* MANAGER

ಪ್ರಕಟಣೆ

ಹೊಸ ಬಸ್ಸು ಸರ್ವೀಸು

ತಾ. 3-2-51ರಂದ W. C. I. C. S. Ltd ಇವರ ಹೊಸ ಬಸ್ ಸರ್ವೀಸುಗಳು ಕುಂದಾಪುರದಿಂದ ಮಂಗಳೂರಿಗೂ, ಮಂಗಳೂರಿನಿಂದ ಕುಂದಾಪುರಕ್ಕೂ ಚಲಾವಣೆಯಾಗಲಿವೆ. ಕುಂದಾಪುರದಿಂದ ಬೆಳಿಗ್ಗೆ 10 ಗಂಟೆಗೆ, ಮಂಗಳೂರಿನಿಂದ ಬೆಳಿಗ್ಗೆ 6 ಗಂಟೆಗೆ ಬಸ್ಸು ಹೊರಡುವುದು. ಪ್ರಯಾಣಿಕರಿಗೆ ಅತ್ಯನುಕೂಲ.

I. Raghurama Shetty,
Managing Director,
West Cost Industrial & Commercial Syndicate Ltd.,
UDIPI.

ಮಂಗಳೂರು

ವಸ್ತ್ರಾವಧಿ ಸಭೆ ಬೆಸೆಂಟ್ ಬಾಲಿಕಾ ಪಾಠಶಾಲೆಯು ಹಳೆ ವಿದ್ಯಾರ್ಥಿ ಸಂಘವಾದ ವಸಂತ ಪ್ರೇಮಿ ಮಂಡಳಿಯ ವಸ್ತ್ರಾವಧಿ ಸಭೆಯು ಕಳೆದ ತಾ. 27ರಲ್ಲು ಜರಗಿದಾಗ ಕಾರ್ಯದರ್ಶಿ ಶ್ರೀಮತಿ ವಾರಿಜಾಬಾಯಿಯವರು ವರದಿಯನ್ನು ಲೆಬ್ಬುಪತ್ರಗಳನ್ನೂ ಒಪ್ಪಿಸಿದರು. ನಂತರ ನಡೆದ ಚುನಾವಣೆಯಲ್ಲಿ ಶ್ರೀಮತಿ ಕೆ. ರಾಧಾ ಎಲ್. ರಾಯರು ಅಧ್ಯಕ್ಷೆಯರಾಗಿಯೂ, ಶ್ರೀಮತಿ ಎಮ್. ಇಂದುಬಾಲಾ ಅವರು ಕಾರ್ಯದರ್ಶಿಗಳಾಗಿಯೂ ಆಯ್ಕೆಲ್ಪಟ್ಟರು.

ಶಾಲಾಕಟ್ಟಡ ಶಂಕುಸ್ಥಾಪನೆ— ಪಾವೂರು ಗ್ರಾಮಾಭಿವೃದ್ಧಿ ಸಂಘದ ಮಕ್ಕು ಸೈಂಟ್ ಎಲೋಸಿಯಸ್ ಕಾಲೇಜಿನ ಸೇವಾಸಂಘದ ನೇತೃತ್ವದಲ್ಲಿ ಪಾವೂರ ಹರಿಕಳ ಗ್ರಾಮದಲ್ಲಿಯ ಅಭಿವೃದ್ಧಿ ಕಾರ್ಯಗಳ ಲ್ಲಿಂದಾದ ಹಾಲಿಮೊಂಟೆ ಶಾಲಾ ಕಟ್ಟಡದ ಶಂಕುಸ್ಥಾಪನೆಯನ್ನು ಜಿಲ್ಲಾಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಅವರು ಕಳೆದ ತಾ. 29ರಲ್ಲು ನೆರವೇರಿಸಿದರು. ಶ್ರೀ ಎ ಸಿ. ಮತಾಯಸರು ಸ್ವಾಗತಭಾಷಣ ಮಾಡಿದರು ಡಾ। ಯು. ಪಿ. ಮಲ್ಯ, ಶ್ರೀ ಎನ್. ಎಸ್. ಕಿಲ್ಲೆ ಮೊದಲಾದವರು ಮಾತನಾಡಿದರು. ಸೈಂಟ್ ಎಲೋಸಿಯಸ್ ಕಾಲೇಜಿನ ರೆಕ್ಟರರು ಸಮಾರಂಭದಲ್ಲಿ ಭಾಗವಹಿಸಿ ಹರಸಿದರು.

ಬಹುಮಾನ ವಿತರಣೆ—ವೈ ಎಮ್. ಸಿ. ಎ ಸಂಸ್ಥೆಯು ಏರ್ಪಡಿಸಿದ್ದ ಆಟದ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚುವ ಸಮಾರಂಭವು ಜಿಲ್ಲಾ ಕಲೆಕ್ಟರ್ ಶ್ರೀ ರಾಜರತ್ನಂ ಅವರ ನೇತೃತ್ವದಲ್ಲಿ ಜರಗಿತು.

ಜಿಲ್ಲಾ ಆಹಾರ ಸಮಿತಿ ಸಭೆಯು— ಕಳೆದ ತಾ 29ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್ ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಜಿಲ್ಲಾ ಸರಬರಾಯಿ ಆಫೀಸರ್ ಜನಾಬ್ ಕೆ. ಅಬ್ದುಲ್ ಗಫೂರ್ ಸಾಬೇಬರು ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಬಾಸ್ತಾನು ಇರುವ ದಾಸ್ತಾನುಗಳ ವಿವರವನ್ನೂ ಹೇಳಿ, ಸೀದಾ ಪಡ್ತಿತಿಯಲ್ಲಿ ಸೇಕಡಾ 25ರಷ್ಟು ಕಡಿಮೆಯಾಯಿದನ್ನು ಸಾದಿದರು ಈಗ ಇರುವ ದಾಸ್ತಾನು ಧಾನ್ಯಗಳು ಐದು ತಿಂಗಳುಗಳಿಗೆ ಸಾಕಾಗಬಹುದ ಆಲ್ಲದೆ ಮದ್ರಾಸಿನಿಂದ 50ಟನ್ ವಿಲೋ ಬಲಿದೆ ಹೊಸದುರ್ಗ ಉಪತಾಲೂಕಿನಲ್ಲಿ ಈಗ ಕಾಯಿದೆಪಡ್ತಿವಾದ ಸೀದಾಪಡ್ತಿತಿಯಿದೆ. ಕುಂದಾಪುರ, ಕಾರ್ಕಳ, ಮೂಡಬಿದ್ರೆ, ಮೂಲ್ಕಿ ಬಂಟ್ವಾಳ ಮತ್ತು ಪುತ್ತೂರು ಕೇಂದ್ರಗಳಲ್ಲಿ ಕಡಿಮೆವರದಲ್ಲಿ ಮಾರಾಟಂತೆ ಅಂಗಡಿಗಳನ್ನು ತೆರೆಯಲಾಗಿದೆ. ನಿಯಂತ್ರಣವನ್ನು ತೆಗೆದ ಪ್ರದೇಶಗಳಲ್ಲಿ 'ಲೆವ್ಹಿ' ಪದ್ಧತಿಯ ಮೇಲೆ ಅಕ್ಕಿಧಿತ್ತಗಳ ಸಂಗ್ರಹವಾಗುವುದು ಎಂಬ ವಿಚಾರವನ್ನೂ ತಿಳಿಸಿದರು.

ನರ್ಗದಾರರಿಗೆ ತಮ್ಮ ಉತ್ಪಾದನೋದ್ದೇಶಕ್ಕಾಗಿ ಉಪಯೋಗಿಸಲಾಗುವ ಧಾನ್ಯಗಳ ಕಾರಿತು ಅರ್ಜಿ ಮಾಡಿದರೆ ಕೂಡಲೇ ಪರ್ಮಿಟು ಕೊಡಬೇಕಾಗಿ ಶ್ರೀ ಪ್ರಾಹಿಮ ಚಪ್ಪಾಡಿಯು ಸೂಚಿಸಿದರು ಹೊಸ ಅರ್ಜಿಗಳ ತನ್ನಿಮಿತ್ತಿ ಸ್ವಲ್ಪ ಕಾಲ ಬೇಕಾಗುತ್ತದೆಂದೂ ಅವರಿಗೆ ತಿಳಿಸಲಾಯಿತು

ಯಾವ ಆಧಾರದಿಂದ ಈ ಜಿಲ್ಲೆಯನ್ನು ಸರಕಾರವು ಸ್ವಾ ಲಂಬಿಯೆಂದು ಪರಿಗಣಿಸಿರುವುದೆಂಬ ಡಾ। ಎಚ್. ಪಿ ಉಡುಪರ ಪ್ರಶ್ನೆಗೆ ಸಕಾಂವು ಈ ಐದು ವರುಷಗಳಲ್ಲಿ ಈ ಜಿಲ್ಲೆಗೆ ಆಹಾರಧಾನ್ಯ ಕಳುಹಿಸುತ್ತಿದ್ದುದೂ ತನ್ಮಧ್ಯೆರುವ ವಿಕಾಡುಗಳ ಆಧಾರದಿಂದ ಹಾಗೆ ಪರಿಗಣಿಸಿದೆ ಎಂದು ಉತ್ತರ ಕೊಡಲಾಯಿತು.

ಹೊಸದುರ್ಗ ಪ್ರದೇಶದಲ್ಲೂ 'ಲೆವ್ಹಿ' ಪದ್ಧತಿಯಂತೆ ಆಹಾರ ಧಾನ್ಯಗಳ ಸಂಗ್ರಸವಾಗ ಬೇಕೆಂದು ಶ್ರೀ ಕೆ ಪಿ ಯನ್. ದಾಸರ ಸೂಚನೆಯು ಕಾರ್ಯಬೆಗೆ ವಿರೋಧಾಭಾಸವಿದ್ದರಿಂದ ಅಸಾಧ್ಯವೆಂದು ತಿಳಿಸಲಾಯಿತು.

ಶ್ರೀ ಜತ್ತಪ್ಪರೈಗಳು ಈ ಕೆಳಗಿನ ವಿಚಾರಗಳನ್ನು ಸಭೆಯ ಉಪಸ್ಥಿತಿಯನ್ನು ತಿನ್ನ ಪಡ್ತಿತಿಯಂತೆ ಸಂಗ್ರಹಿಸುವುದರಿಂದ ಎದನೆ ಮತ್ತು ಮೂರನೆ ಬೆಳೆಯ ಉತ್ಪತ್ತಿಯಿಂದಲೂ 'ಲೆವ್ಹಿ'ಪದ್ಧತಿಯಿಂದಲೂ ಸಂಗ್ರಹಿಸುವುದು ಸರಿಯಲ್ಲ. ಈಗಾಗಲೇ ನರ್ಗದಾರರಲ್ಲಿ ಸಾಕಷ್ಟು ಧಾನ್ಯ ಸಂಗ್ರಹವಿಲ್ಲ. ಆಲ್ಲದೆ ಬೆಲೆಯು ವಿಚಾರವು ಬಲು ಗೂಢವಾದ ಪ್ರಶ್ನೆಯಿರುವು ದರಿಂದ ಸರಕಾರವು ಆ ಕಾರಿತಾದೆ ಯಾವ ಸೂಚನೆಗಳನ್ನೂ ಸ್ವೀಕರಿಸುವಂತಿಲ್ಲವೆಂದೇ ಉತ್ತರವೀಯಲಾಯಿತು.

ಕುಂದಾಪುರ ತಾಲೂಕಿನಲ್ಲಿ ಸಂಗ್ರಹಿಸಿದ ಧಾನ್ಯವನ್ನು ಬೇರೆಕಡೆಗೆ ಒಯ್ಯಬಾರದೆಂಬ ಶ್ರೀ ಎಚ್ ಎಲ್. ಕಾಮತರ ಸೂಚನೆಗೆ ಕಾಧ್ಯವಿಲ್ಲವೆಂದು ಉತ್ತರವೀಯಲಾಯಿತು. ಹಳ್ಳಿಗಳಲ್ಲೂ ಕೂಡಾ ಕಡಿಮೆವರದಲ್ಲಿ ಮಾರುವ ಅಂಗಡಿಗಳನ್ನು ಆದಷ್ಟು ಹೆಚ್ಚಾಗಿ ತೆರೆಯುಬೇಕೆಂದು ಶ್ರೀ ಎಸ್. ಜಿ. ಸಾಲೆಸ್ಸರು ಸೂಚಿಸಿದರು

ನಗರ ಸಭೆಯು—ಕಳೆದ ತಾ. 27ರಲ್ಲು ಉಪಾಧ್ಯಕ್ಷ ಶ್ರೀ ಬಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿದಾಗ, ಲೀಡ್ಸ್ ನಗರದ ಮಾಜಿ ಮೇಯರರಾದ ಲೆಫ್ಟಿನೆಂಟ್ ಕರ್ನೆಲ್ ಇ ಜೆ. ಕ್ಲಾಕ್ಸ್‌ರವರನ್ನು ನಗರ ಸಭೆಯು ಸ್ವಾಗತಿಸಿ ಸತ್ಕರಿಸಿತು. ಕೇಂದ್ರ ಮೈದಾನಿನಲ್ಲಿ ಕಟ್ಟಲಿರುವ ಕ್ರಿಕಾ ಗೋಪುರ ಕೈ ನಾಲ್ಕತ್ತು ಸಾವಿರ, ನೀರೇ ಬಾಲ್ಕಿ ಶಾಲೆಯ ಬಳಿ ರಸ್ತೆಯ ಚರಂಡಿ ದುರಸ್ತಿಗಾಗಿ ಒಂದು ಸಾವಿರದ ಆರುನೂರು, ಕೇಂದ್ರ ಮೈದಾನಿನ ಆಡುವ ಸ್ಥಳಗಳ ದುರುಸ್ತಿಗಾಗಿ ಎರಡು ಸಾವಿರದ ಎರಡುನೂರ ನಾಲ್ವತ್ತೆಂಟು, ಮೋಟಾರ್ ನಿಲ್ದಾಣದ ಪಾಯಿಖಾನೆಯನ್ನು ಪುನಃ ರಚಿಸುವುದಕ್ಕಾಗಿ ಒಂದುಸಾವಿರ ರೂಪಾಯಿಗಳ ಅಂದಾಜು ಮೆಚ್ಚಿ ಮಂಡೂರು ಮಾಡಲಾಯಿತು.

ಸಹಾಯಾರ್ಥ ನಾಟಕ — ಕಳೆದ ತಾ 2/ರಲ್ಲು ಗವರ್ನಮೆಂಟ್ ಕಾಲೇಜಿನ ಅಂತ್ಯ ಕ್ಷುಬ್ಧನವರು ಬಡವಿದ್ಯಾರ್ಥಿ ನಿಧಿಯ ಸಹಾಯಾರ್ಥವಾಗಿ ಸಂಪ್ರಸಿದ್ಧ ಇಂಗ್ಲಿಷ್ ಕವಿ ಶೇಕ್ಸ್‌ಪಿಯರ್, ಅವರ 'ಮೆಚ್‌ಬೆತ್' ಎಂಬನಾಟಕವನ್ನು ತಮ್ಮ ಕಲಾ ಶಾಲೆಯಲ್ಲಿ ಪ್ರದರ್ಶಿಸಿದರು

ಸಂಗೀತ ಕಚೇರಿ — ಬೊಂಬಾಯಿಯಿಂದ ಮಂಗಳೂರಿಗೆ ಬಂದಿರುವ ಸಾರಸ್ವತ ಸಮಾಜದ ಶ್ರೀಮತಿ ಕಾಸಲ್ಯಾ ಮಂಜೇಶ್ವರ್ ಅವರ ಸಂಗೀತ ಕಚೇರಿಯೊಂದು ಈ ಬೆಗೆ ಗಣಪತಿ ಪ್ರಾಸ್ಕೂಲಿನ ಶಾರದಾ ಸದನ ದಲ್ಲಿ ಜರಗಿತು

ಜಿಲ್ಲಾ ಗ್ರಾಮಾಭಿವೃದ್ಧಿ ಕಮಿಟಿ ಸಭೆಯು— ಈಚೆಗೆ ಜರಿದಾಗ ಕಳೆದ ಸೆಪ್ಟಂಬರ ನುತ್ತು ಡಿಸಂಬರ ತಿಂಗಳುಗಳ ಪ್ರಗತಿಯನ್ನು ಮೌಲ್ಯಮಾಪನ ಮಾಡಲಾಯಿತು ಇದಿಗಿಯಲ್ಲಿನೇ ಕಳೆದವು ಸಿಕ್ಕಾವು ಪಡೆದ ಒಂದು ಪುಸ್ತಕ ಧಿಂಡಾರ ತೆರೆಯುವ ವ್ಯವಸ್ಥೆಯನ್ನು ಜಿಲ್ಲಾ ವಿಧ್ಯಾಧಿಕಾರಿಗಳು ಮಾಡಬೇಕೆಂದು ಆವರನ್ನು ಕೇಳಿಕೊಳ್ಳಲಾಯಿತು. ಶ್ರೀ ಎಸ್ ಆರ್. ಪೂಂಜರ ನಿಧನದ ಬಗ್ಗೆ ಪಾ.ಯ ಸೂಚಿಸಲಾಯಿತು.

Mahatma Gandhi Memorial College, Udipi

WANTED a smart and hard-working typist with good speed and accuracy. Knowledge and practice of short-hand will be an additional qualification The post is permanent, and salary Rs 45-5-80 plus Dearness Allowance. Minimum educational qualification S. S. L C. Apply immediately, or interview the principal

NOTICE

ಕುಂದಾಪುರ ಡಿ ಮು. ಕೋರ್ಟಿನಲ್ಲಿ

R. E. P. 577/1950.

S. C. 50/47.

ಕರ್ಜದಾರ—ಅನಂದರಾಮ ಬಾಸ್ರಿ

ಎದ್ರಿರು—ಗೋಪಾಲಶ್ಯಾನುಭಾಗ ಸಹಾ

1ನೇ ಎದ್ರಿ ಗೋಪಾಲಶ್ಯಾನುಭಾಗ, ಬೀಳೂರು ಅನಂತಯ್ಯ ಶ್ಯಾನುಭಾಗರ ಮಗ

3ನೇ ಎದ್ರಿ ಮ್ಯಾನೇರ್ ರತ್ನ, 4ನೇ ಎದ್ರಿ ಮ್ಯಾನೇರ್ ಶಂಕರ, ಸುಗಂಧಿ ಹೆಂಗ್ಸಿನ ಮಕ್ಕಳು. ಗಾರ್ಡಿಯನ್ ಅಜ್ಜಿ ನಾಗಮ್ಮ ಯಾನೆ ರುಕ್ಮಿಣಿ ಅಮ್ಮ, ಉಡ್ಪಿ ತಾಲ್ಲೂ ಕೋಟ್ತಟ್ಟು ಗ್ರಾಮದವರುವವರು.

ಇವರಿಗೆ ಈ ಮೂಲಕ ತಿಳಿಯಪಡಿಸುವು ದೇನೆಂದರೆ—

ಅರ್ಜಿದಾರನು ಸ್ಥಿರಾಸ್ತಿ ಜಪ್ತಿ ವಗೈರೆ ನಿವೃತ್ತಿ ಕೇಳಿ ದಾಖಲು ಮಾಡಿದ ನೋಟೀಸಿನ ಆನ್ವಜ್ಞಾರ್ಥಿ ಅರ್ಜಿಯನ್ನು ತಾ 14-2-51ಕ್ಕೆ ಕನ್ಫಿಗೆ ಇಟ್ಟಿರುತ್ತದೆ. ಸದ್ರಿ ಸಂಬಂಧದಲ್ಲಿ ನಿಮ್ಮದೇನಾದರೂ ಆಕ್ಷೇಪವಿದ್ದರೆ ಆ ದಿವಸ ಕೋರ್ಟು ಮುಂದೆ ಹಾಜರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು.

[By order of Court]

A N Rao,

Advocate for Petitioner.

ತಾರೀಕು: 5-2-51)
ಸ್ಥಳ: ಕುಂದಾಪುರ)

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. 2/1951

1	ಯೆಶೋದಮ್ಮ	
2	ವಿಟ್ಟಲ	ಮ್ಯಾನರರು
3	ರಾಜಗೋಪಾಲ	ರಕ್ಷಕಳು ತಾಯಿ
4	ಶ್ರೀಪತಿ	
5	ಶ್ರೀನಿವಾಸ	1ನೇಯವಳು

ಅರ್ಜಿದಾರರು

1ನೇ ಅರ್ಜಿದಾರಳ ಗಂಡ 2ರಿಂದ 5ನೆವರೆಗಿನ ಅರ್ಜಿದಾರರ ತಂದೆ ತಾ.9-11-1950ರಲ್ಲಿ ಕೊರಂಗ್ರಪಾಡಿ ಗ್ರಾಮದ ಮೊಳಹಳ್ಳಿಯಲ್ಲಿ ಮೃತಪಟ್ಟ ಗುರುರಾಜಾಚಾರ್ಯರಿಗೆ ದಿ ಬೊಂಬೆಲ್ವೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್. ಇದರ ಪೊಲಿಸಿ ನಂಬ್ರ 83790ರ ಪ್ರಕಾರ ಬಾತಕ್ಕಡ್ಡಾಗುನ ರೂ. 3112-8-0 ಯಿಲ್ಲಾ ಅರ್ಜಿದಾರರ ಕಡೆಯಿಂದ 1ನೇ ಅರ್ಜಿದಾರಳು ವಸೂಲು ಮಾಡುವ ಹಾಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ವಗ್ಗೆರೆ ಅರ್ಜಿದಾರರ ಕಡೆಯಿಂದ ದಾಖ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 16-2 1951ಕ್ಕೆ ತನ್ನಿಗೆ ಯಿಟ್ಟಿದೆ. ಆಕ್ಷೇಪ ಇದ್ದಲ್ಲಿ ಪ್ರಸ್ತು ತದಿನ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟುಮುಂದೆ ಕರದಾಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಿಯಬೆ.

K Laxaminarayana Aithal
Vakil for Petitioners

ಉಡ್ಪಿ ತಾರೀಕು 5-2-1951

NOTICE

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S. 142/1950

R. I. A- 1434/1950

ಕುಂಞಂಬು ಬಲ್ಲಾಳ, ಮಾಣಿಕ್ಯಂ ಅಮ್ಮನ ಮಗ ಪಾಡಿಕ್ಸಬಾ ಗ್ರಾಮದ ಬಾಂಬಾಟೆ ಮೂಲೆಯಲ್ಲಿ

--ಅರ್ಜಿದಾ।

ಮತ್ತು

1 ಕುಂಞಾರಾಮ ಬಲ್ಲಾಳ ಕಂಡು ಬಲ್ಲಾಳರ ಅಳಿಯ ಪರಂಬಳೆ ಗ್ರಾಮದಲ್ಲಿ.
2 ಗೋಪಾಲ ಬಲ್ಲಾಳ } ಮಾಣಿ ಅಂಮನ
3 ರಾಘವನ್ ಬಲ್ಲಾಳ } ಮಕ್ಕಳು

ಲೈಸನ್ಸಂಡೆಂಬೆರು

ಪಾಡಿಕ್ಸಬಾ ಗ್ರಾಮದ ಕೂಡಿಂಜ ದಲ್ಲಿರುವವರು

ಮೇಲ್ಕಂಡ ಲೈಸಾಂಡೆಂಟನ್ನು ಪಗ್ಗೆ ಮೇಲ್ಕಂಡ ವ್ಯಾಜ್ಯದಲ್ಲಿ 2ರಿಂದ 5ನೇ ಸಮೆಂಟು ಪ್ರತಿವಾದಿರನ್ನಾಗಿ ಕಕ್ಷಿಯಲ್ಲಿ ಕೂಸುವರೆ ಅರ್ಜಿದಾರನು ಸರಕೊಂಡ ಮೇಲ್ಕಂಡ ಅರ್ಜಿಯು ತಪ್ಪಿಬಗ್ಗೆ ತಾ. 9-2-1951 ಯಿಟ್ಟರುವ ಸಂಗ್ತಿ ಈ ಮೂಲಕ ತಿಳಿಸಿ ಹಾಗುತ್ತದೆ.

S/d K. Kamalaksha Kamath
Advocate for Petitioner
Kasargod, 1-2-1951

ಅಮೃತಾಂಜನ

ತಲೆನೋವಿಗೆ, ತಿರಿಗೋಪಿಗೆ, ಉಳುಕು ಉತ್ತಿಗೆ, ಭುಜ ಹಲ್ಲು ನೋವಿಗೆಗೆಳಿಗೂ, ಎಲೆ ನೋವು,ಸೊಯಗಳು, ಬಾಯಿಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ,ಮೊಡಿನೆ, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧಾಷಧ

REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್
ಮದರಾಸು.

ಕೊಂಬಾಯಿ ಮತ್ತು ಕಲ್ಕತ್ತ.



ಶಾಂತಿ ಎಂತು ಸಾಧ್ಯ?

ಬರೆದವರು: ವಿರ್ಯ ಲಕ್ಷ್ಮೀನಾರಾಯಣ ಆಳ್ವ.

ಇಂದು ಪ್ರಪಂಚದಲ್ಲೆಲ್ಲೂ ಶಾಂತಿಯು ಮಾಯವೇ ಆಗಿ ಹೋಗಿದೆ. ವ್ಯಕ್ತಿಯಿಂದ ಹಿಡಿದು ರಾಷ್ಟ್ರಗಳ ವರೆಗೆ ಎಲ್ಲರೂ ಶಾಂತಿಯ ಉಪಾಸಕರೇ! ಎಲ್ಲರೂ ಅನ್ಯಾಗಿ ಹಂಬಲಿಸಿ, ಅದಕ್ಕಾಗಿ ಹುಡಿಯುತ್ತಿರುವವರೇ! ಆದರೂ ಎಲ್ಲೂ ಶಾಂತಿಯಿಲ್ಲ. ವ್ಯಕ್ತಿಯ ಹೃದಯದಿಂದ ಹಿಡಿದು ರಾಷ್ಟ್ರಗಳ ವರೆಗೆ ಎಲ್ಲೆಲ್ಲೂ ಅಶಾಂತಿಯ ತಾಂಡವ ನಡೆದಿದೆ. ಅಶ್ಚರ್ಯವೆಂದರೆ ಜಗತ್ತಿನ ಪ್ರತಿಯೊಂದು ವ್ಯಕ್ತಿಯೂ ಶಾಂತಿಗಾಗಿ ಹಂಬಲಿಸಿ ಹುಡಿಯುತ್ತಿರುವಾಗಲೂ ಅಶಾಂತಿಯೇ ತಲೆಯೆತ್ತಿ ಮೆರೆಯುತ್ತಿರುವುದು. ಇದು ಹೇಗೆ ಸಾಧ್ಯ? ಪ್ರಪಂಚದ ಪ್ರತಿಯೊಬ್ಬ ಪ್ರಜೆಯೂ ಮನಸಾ ಶಾಂತಿಯನ್ನು ಬಯಸಿ, ನಿಜವಾದ ಹಾದಿಯಿಂದ ಅದಕ್ಕಾಗಿ ಹುಡಿಯುತ್ತಿರುವುದಾದರೆ ಇಂದು ಪ್ರಪಂಚದಲ್ಲಿ ಅಶಾಂತಿಯು ಸುಳಿ ಸುಳಿಯುತಿದ್ದಿತೇ? ಇದುವೇ ನಾವು ಅಲೋಚಿಸಬೇಕಾದ ವಿಚಾರ. ನಮ್ಮ ಧೋರಣದ ಅರಿವು ಮೊದಲು ನಮಗಾಗಬೇಕು. ಅಂತಾದರೆ ಮಾತ್ರ ಅದಕ್ಕೆ ಯೋಗ್ಯ ಮದ್ದು ಕೊಡಲು ಸಾಧ್ಯ.

ಇಂದು ಜಗತ್ತಿನ ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳೂ ಸೇರಿರುವ ಸಂಯುಕ್ತರಾಷ್ಟ್ರ ಸಂಸ್ಥೆ ಜಗತ್ತಿನಲ್ಲಿ ಶಾಂತಿಯನ್ನು ನೆಲೆಗೊಳಿಸುವುದಕ್ಕೆ ಅವಿರತವಾಗಿ ದುಡಿಯುತ್ತಿದೆ. ಸಂಪತ್ತಿನ ಸಾಗ್ಸತ್ತಿಗೆಯಲ್ಲಿ ತುಲಗಿರುವ ಅಮೇರಿಕ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕಾಗಿಯೇ ಕೋಟಿಗಟ್ಟಲೆ ಡೋಲರ್‌ನ್ನು ವ್ಯಯಿಸುತ್ತಿದೆ. ಕೋಮನ್‌ವೆಲ್ತ್ ರಾಷ್ಟ್ರಗಳು ಮೊನ್ನೆ ಲಂಡನದಲ್ಲಿ ಸಭೆಸೇರಿ ಜರ್ಚಿಸಿದು ದೂ ಜಗತ್ತಿನಲ್ಲಿ ಶಾಂತಿ ಸ್ಥಾಪಿಸುವ ಬಗೆಯನ್ನೇ. ರಷ್ಯಾ ಚೀನಗಳ ಗುರಿಯೂ ಜಗತ್ತಿನ ಶಾಂತಿಯೇ. ರಾಷ್ಟ್ರಗಳಿಂಗಿರುವ ಪಕ್ಷಪಂಗಡಗಳ ಗುರಿಯೂ ದೇಶದ ಯಾ ಸಮಾಜ ಶಾಂತಿಯೇ. ಸಾಮಾನ್ಯ ವ್ಯಕ್ತಿಯ ದಿನದ ಜೋರಾಟವೂ ಶಾಂತಿಗಾಗಿಯೇ, ಕೆಲವರದು ಜಗತ್ತಿನ ಶಾಂತಿಯಾದರೆ, ಇನ್ನು ಕೆಲವರದು ರಾಷ್ಟ್ರದ ಶಾಂತಿ, ಮತ್ತೆ ಕೆಲವರದು ಪಂಗಡದ ಶಾಂತಿ, ಬೇರೆ ಕೆಲವರದು ಮನೆಯ ಶಾಂತಿ, ಕೆಲವರದು ಮನದ ಶಾಂತಿ, ಒಟ್ಟೊಬ್ಬರದು ಒಂದೊಂದು ಸೀಮೆಯ ಇಷ್ಟೇ ಭೇದ ಹೊರತು ಎಲ್ಲರಲ್ಲಿ ಗುರಿಯೂ ಶಾಂತಿಯೇ. ಹೀಗೆ ಇಂದು ಜಗತ್ತಿನ ಜನವೆಲ್ಲಾ ಶಾಂತಿಗಾಗಿ ಡಡಪಡಿಸಿ ಹೋರಾಡುತ್ತಿರುವುದು ನಮಗೆ ಕಂಡು ಬರುತ್ತಿದೆ. ಆದರೂ ಶಾಂತಿಯು ಎಲ್ಲೂ ಇಲ್ಲವಲ್ಲಾ? ಇದೇಕೆ ಹೀಗೆ? ಹಾಗಾದರೆ ಶಾಂತಿ ಎಂಬುದೊಂದು ಇಲ್ಲವೇ ಇಲ್ಲವೇನು? ಆದೊಂದು ಬರೇ ಕನಸೇನು? ಮಾನವ ಜನಾಂಗ ಸದಾ ಅಶಾಂತಿಯಲ್ಲೇ ಇರಬೇಕೇನು? ದುಃಖದೇದನೆಗಳ ಅಂತ್ಯವಿಲ್ಲದ ಬವಣೆಯಲ್ಲೇ ಮಾನವನ ಕೊನೆಯೇನು? ಇದು ಮಾನವ ಜನಾಂಗಕ್ಕೆ ಬಂದಿರುವ ಶಾಪವೇನು? ಅಥವಾ ಎಲ್ಲೂ ಶಾಂತಿಯೆಂಬು ಆಂಶಾಂತಿಗೇ ಗಾಳಿಹಾಕುತ್ತಿರುವರೇನು? ಶಾಂತಿಯು ನಿಜನೆಲೆಯನ್ನೇ ಮಾನವರು ಅರಿಯದಾಗಿರುವರೇನು? ಅದರಿಂದಾಗಿಯೇ ಅಶಾಂತಿಯ ಹಾದಿ ಸಾಗುತ್ತಾ ಶಾಸು ಶಾಂತಿಯೆಡೆಗೆ ನಡೆದಿರುವೆ ಎಂದು ಭ್ರಮಿಸುತ್ತಿರುವರೇನು?

"ಮೂರ್ಖ ನಿನಗೆ ಕೇಳಿಸುವುದಿಲ್ಲವೇ? ನಿನ್ನ ಎದೆಯಲ್ಲಿ ಇರುಳೂ ಸಚ್ಚಿದಾನಂದ, ಸೋಹಂ, ಸೋಹಂ. ಎಂಬ ಅನಂತ ಗೀತೆಯು ಹಾಡುತ್ತಿರುವುದು ಕೇಳುವುದಿಲ್ಲವೇ?" ಎಂದು ಸ್ವಾಮಿ ವಿವೇಕಾನಂದರು ಒಮ್ಮೆ ತಮ್ಮ ಅನುಯಾಯಿಗಳಿಗೆ ಉಪದೇಶಿಸುತ್ತಾ ಹೇಳಿದರು. ಅಂತರಂಗ ನಿರೀಕ್ಷಕನಲ್ಲದವನಿಗೆ ಏನನ್ನೂ ಅರಿಯಲು ಅಸಾಧ್ಯವೇ ಸರಿ. ಶಾಂತಿಯ ನಿಜವಾದ ನೆಲೆ ಮಾನವನ ಅಂತರಂಗ ಇದು ಮೊದಲು ನಮಗರಿವಾಗಬೇಕು ಅದನ್ನು ಸಾಕ್ಷಾತ್ಕರಿಸುವ ಸಾಧನ ತ್ಯಾಗ. ಆದರೆ ಇಂದು ಶಾಂತಿಯ ಗುಲ್ಲೆದ್ದಿಸುವ ಎಷ್ಟು ಜನ ಈ ಹಾದಿ ಹಿಡಿದು ಸಾಗುತ್ತಿದ್ದಾರೆ ಸತ್ಯಸಂಗತಿಯೆಂದರೆ ಎಲ್ಲರೂ ಬಹಿರಂಗದಲ್ಲೇ ಶಾಂತಿಯನ್ನು ಅನುಸುತ್ತಿದ್ದಾರೆ. ಆದೂ ಭೋಗದ ಹಾದಿಯಿಂದ ನಡೆದು. ಇದನ್ನು ಯೋಚಿಸುವಾಗ ನಮಗರಿವಾಗುತ್ತದೆ. ಪ್ರಪಂಚದಲ್ಲಿ ಇಂದು ಏಕೆ ಈ ಪರಿಯ ನಿಷ್ಫಲ ನಡೆಯುತ್ತಿದೆ ಎಂದು.

ಪ್ರಪಂಚ ಅಶಾಂತಿಯ ಕಿಚ್ಚಿನಲ್ಲಿ ದಹಿಸಿ, ಜನ ದೆಸೆಕೆಟ್ಟು, ದುಃಖಿಸುತ್ತಿರುವಾಗ ಮಹಾಪುರುಷರ ಜನ್ಮವಾಗುತ್ತದೆ. ಅವರು ದೆಸೆಕೆಟ್ಟು ಅಲೆಯುತ್ತಿರುವ ಮಂದಿಯನ್ನು ಆನಂತ ಪ್ರೇಮದಿಂದ ಕೈಹಿಡಿದು ಶಾಂತಿಯೆಡೆಗೆ ನಡೆಯಿಸುತ್ತಾರೆ. ಹೀಗೆ ಪ್ರಪಂಚವನ್ನೇ ಶಾಂತಿಯ ಮಡಿಲಲ್ಲಿ ಪವಡಿಸಲು ಅವರು ದಿನ ರಾತ್ರಿ ದುಡಿಯುತ್ತಾರೆ. ಅದೇ ಅವರ ಬಾಳಿನ ಉಸಿರು. ರಾಮ, ಕೃಷ್ಣ, ಬುದ್ಧ, ಏಸು, ಪೈಗಂಬರ ಈ ಮಹಾಪುರುಷರ ಬಾಳು ಈ ಮಹಾಕಾರ್ಯಕ್ಕೆ ಪಿಣಸಲಾಗಿತ್ತು. ಇವರಲಾಲಕ್ಕೆ ಜನ್ಮವೆತ್ತಿದ. ಇವರು ಆಯಾಯ ಕಾಲ ದೇಶ ಪರಿಸ್ಥಿತಿಗಳಿಗನುಸಾರವಾಗಿ ಜನರ ಮುಂದೆ ವಿವಿಧ ಮಾರ್ಗಗಳನ್ನಿಟ್ಟರು. ಮತ್ತು ಆ ಮಾರ್ಗವಾಗಿ ಜನರನ್ನು ಸಾಗಿಸಲು ಆಹೋರಾತ್ರಿ ದುಡಿದರು. ಕೆಲಕಾಲವೇ ನೋ ಕೆಲಜನರು ಅ ಹಾದಿಯಾಗಿ ನಡೆದರು. ನುಂದೆ ಎಲ್ಲವೂ ವ್ಯರ್ಥವಾಯಿತು. ಆ ಮಹಾಪುರುಷರ ಬಾಳಿನ ತಪಸ್ಸು ನೀರನೇರಣ ಹೋಮವಾಯಿತು. ಜನರ ಬುದ್ಧಿ ನಾಯಿಬಾಲದಂತೆ ಒಮ್ಮೆ ಆ ಮಹಾತ್ಮರ ಹಾದಿತುಳಿದರು ಜನ ಮುಂದೆ ಪುನಃ ಹಿಂದಿನಂತೆಯೇ ಅಡ್ಡಹಾದಿ ಹಿಡಿದರು. ಮಾತ್ರವಲ್ಲಿತವು ಸಾಗುತ್ತಿರುವುದೇ ನಿಜವಾದ ಪಾರಿ ಎಂದು ಭ್ರಮಿಸಹತ್ತಿದರು. ಹೀಗೆ ಜನ ಹಾದಿತಪ್ಪಿ ಕಂದತ್ತ ಸಾಗಿ ಪ್ರಪಂಚಕ್ಕೇ ಒಂದು ಮಹಾಕಂಟಕವನ್ನು ಆಹ್ವಾನಿಸುತ್ತಿರುವಾಗ ಪುನಃ ಒಬ್ಬ ಮಹಾಜೀವಿಯು ಜನನವಾಯಿತು ಅವರೇ ಮಹತ್ಮಾಗಾಂಧಿ.

ನಿಜವಾದ ಶಾಂತಿ ನಮ್ಮ ಅಂತರಂಗದಲ್ಲೇ ಅಡಗಿದೆ. ಅದನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ನೊಮ್ಮೆಮೊದಲು, ನಾವು ನಮ್ಮ ಅಂತರಂಗದಲ್ಲಿ ಜರಗುತ್ತಿರುವ ಒಳಿತು ಕೆಡುಕುಗಳ ನಿರಂತರ ಹೋರಾಟವನ್ನು ಪ್ರೇಕ್ಷಕರಂತೆ ನಿಂತು ನಿರೀಕ್ಷಿಸುವ ಕಲೆಯನ್ನು ಕರಗತಮಾಡಿಕೊಳ್ಳಬೇಕು. ನುತ್ತು ತನ್ನ ತಪ್ಪುತಡಿಗಳನ್ನು ಅರಿತು ದಿನದಿನವೂ ಪ್ರಯತ್ನಿಸಿ ಅವುಗಳನ್ನು ಸ್ವಲ್ಪಸ್ವಲ್ಪವಾಗಿ ತೊರೆಯುತ್ತಾ ಬರಬೇಕು. ಆ ಸ್ಥಾನದಲ್ಲಿ ಸುಗುಣಗಳನ್ನು ರೂಪಿಸಿಕೊಳ್ಳಬೇಕು. ಇದನ್ನೇ ಮಹಾತ್ಮಾಗಾಂಧಿಯವರು ಸಾರಿ ಹೇಳಿದರು ಮತ್ತು ಇದಕ್ಕಾಗಿಯೇ ಸತ್ಯ, ಪ್ರೇಮ, ಅಹಿಂಸೆಗಳಂತಹ ಮಹಾತತ್ವಗಳನ್ನು ನಮ್ಮ ಮುಂದಿಟ್ಟರು. ಭೋಗದ ಆ ಕ್ಷಣಿಕ ಕೀಳು ಯಚಯನ್ನು ಪಕುಪಕ್ಷಿಗಳೂ ಬಲ್ಲವು ನಾವು ಮಾನವರಾಗಿ ಹುಟ್ಟಿನ ಮೇಲೆ ತ್ಯಾಗದ ಆ ಅನಂತ ಆವರ್ಣೀಯ ದಿವ್ಯಾನಂದವೇನಿದೆಯೋ ಅದನ್ನು ಪಡೆಯಲು ಪ್ರಯತ್ನಿಸಬೇಕು ಎಂದು ಹೇಳಿದರು ಮಹಾತ್ಮರು. ಆಂತಾದರೆ ಮಾತ್ರ ಮಾನವ ಹೃದಯದಲ್ಲಿ ಅನಂತಾನಂತದ ಪವಿತ್ರ ರಸನಿಸ್ರೋತವು ಅವಿರತವಾಗಿ ಹರಿದೀತು. ತನ್ಮೂಲಕ ಪ್ರಪಂಚವೇ ಶಾಂತಿಯ ಮಡಿಲಲ್ಲಿ ಪವಡಿಸಿಎಲ್ಲಾದು ಎಂದು ಉದ್ಘೋಷಿಸಿದರು. ಆದರೆ ಇಂದು ಶಾಂತಿಯ ದೊಡ್ಡ ದೊಡ್ಡ ಮಾತುಗಳನ್ನಾಡುವವರು ಎಷ್ಟು ಮಂದಿ ಈ ಹಾದಿ ಹಿಡಿದು ಸಾಗಿದ್ದಾರೆ?

ಲೋಕದ ಶಾಂತಿಯನ್ನು ಬಯಸುವ ಜನ ಮಹಾತ್ಮರು ಎಂದಂತೆ ನತೆದು ತಸ್ಸ ಹೃದಯವನ್ನು ಶಾಂತಿಯ ನೆಲೆಯಾಗಿಸಿಕೊಳ್ಳಬೇಕು ಮೊದಲು. ಮನೆಯಲ್ಲಿ ಉಣಲು ಕಾಳಿಲ್ಲದನ ನೆರೆಮನೆಯವನ ಹಸಿವನ್ನು ಹಿಂಗಿಸ ಹೊರಡುವುದು ಹಾಸ್ಯಾಸ್ಪದ. ಎಂದಿನ ವರೆಗೆ ಜನ ಈ ಹಾದಿ ತುಳಿಯುದಿಲ್ಲವೋ ಅಂದಿನವರೆಗೆ ಲೋಕದ ಶಾಂತಿ ಕನಸಿನ ನೆನಸುಮಾತ್ರ.

NOTICE

To,

All Whom it may Concern

The mulgeni counter-part dated 7-3-1907 and registered as document No. 189 of 1907 in the 1 Book of the Udipi Sub-registrar's Office and the corresponding mulgeni-chit are still in force and operative.

2. Another mulgeni counter-part dated 26—8—1907 and registered as document No. 906 of 1907 in the 1 Book of the Udipi Sub-registrar's Office and the corresponding mulgeni-chit purporting to over-ride the documents mentioned in the previous paragraph are void and in-operative.

3. Transferees, if any, of the property covered by the documents-mentioned in paragraph I above are responsible for all the consequences of the breach of the conditions therein.

4. The parties to the documents-mentioned in qaragraphs 1 and 2 are (i) the late Bailur Rama Rao and (ii) Sri R. A. Simons.

B. Vasudeva Rao.
Advocate.

Udipi, 3-2-1951.

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಂದ ಭಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕಿ ಪುಟಗಳು ಬೆಲೆ 0—1—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ಬಹುತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಿತಪ್ಪಿ ಬಹುತುಸ್ರಾವವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಕೀಸ್ರ ಗುಣವೊಂದಬಹುದು, ಯಾವ ಬಾಧಕವೂ ಇಲ್ಲ. ಸಾದಿರಾರು ಮಂದಿಗೆ ಪ್ರಾತ್ರಿ ಗುಣವಾಗಿದೆ—ಬೆಲೆ: ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪ ಹನ್ನೆರಡಾಣೆ ಪ್ರತ್ಯೇಕ.]

MRS P. DEVEE, F DS. (N. J.)
Tonyguege CALCUTTA,
ಸ್ವಾಕಿಸ್ವರು ಶಹಾಕಂಪನಿ, ಮಂಗಳೂರು

ವಿವಿಧ ವಾರ್ತೆಗಳು

ಯಾವತ್ತೂ ವಿಧವಿಧದ ಕೆಲ್ಸ, ಕಾಮ್ಸು ಹುಷ್ಕಾಳ್ಕೆ, ಕಂಚು, ಸೊಡಲಾಡುವುಗಳ ವಿವಿಧ ವಾರ್ತೆಗಳೂ ಸಾಮಾನುಗಳೂ ರಮ್ಯ ಆಗಿ ಯೂಜೆಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಪಿತೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ವಾರದ ಹರಟೆ

ಪ್ರಿ ಯು. ವಿ.

ಪ್ರಿಯ ವಾಚಕರೇ,

ಕಳೆದ ವಾರ ಹಿಂದೂ ಕೋಡು ಮನೆಯ ಕಾನೂನಾದರೆ ಹಿಂದೂ ಜನರ ಜನಜೀವನದಲ್ಲಿ ಏನೆಲ್ಲಾ ಬದಲಾವಣೆಗಳಾಗಬಹುದೆಂದು ವಿವರಿಸಿದ್ದೆ. ಆ ವಿಷಯ ಸದ್ಯಕ್ಕೆ ಸಾಕು. ಮನೆಯ ಬೇಗನೆ ಪಾರ್ಲಿಮೆಂಟು ಮುಂದೆ ಬರಬೇಗೆ ಬರಲಿದೆ. ಆಗ ಕೆಲವೆಲ್ಲರೂ ಸ್ವಲ್ಪ ಜಾಗರೂಕತೆಯಿಂದ ಪತ್ರಿಕೆಗಳನ್ನು ಓದುತ್ತಿರಿ. ಪರಿಣಾಮ ನೋಡಿ ನಂತರ ಈ ವಿಷಯದಲ್ಲಿ ಹರಟೆ ಮುಂದುವರಿಸುತ್ತೇನೆ.

ತನ್ನಷ್ಟಕ್ಕೆ ನಮ್ಮ ಡಾ। ರಾಜನರ ಶತಪ್ರಯತ್ನದಿಂದ ಮದ್ರಾಸಿನಲ್ಲಿ ಎಂಡೋಮೆಂಟು ಕಾನೂನೊಂದು ಎರಡು ಸಭೆಗಳಲ್ಲಿಯೂ ಮಂಜೂರಾಗಿಹೋಯಿತು. ಅದು ಈಗ ನಮ್ಮ ರಾಷ್ಟ್ರಾಧ್ಯಕ್ಷರ ಸಮ್ಮತಿಯನ್ನು ಕಾಯುತ್ತಿದೆ. ರಾಜ್ಯಾಂಗ ಘಟನೆಯಲ್ಲಿರುವ ಮೂಲಭೂತ ಹಕ್ಕುಗಳ ಮೇರೆಗೆ ಈ ಕಾನೂನಿಗೆ ರಾಷ್ಟ್ರಾಧ್ಯಕ್ಷರ ಸಮ್ಮತಿ ದೊರೆಯಲಾರದು ಎಂದು ನಮ್ಮ ಸನಾತನ ಧುರೀಣರು ನಂಬಿಕೊಂಡಿರುತ್ತಾರೆ. ಒಂದು ವೇಳೆ ಸಮ್ಮತಿ ದೊರೆತರೂ ಅದನ್ನು ಹೈಕೋರ್ಟಿನಲ್ಲಿ ದಾವೆಮಾಡಿ ಉರುಳಿಸಬಹುದೆನ್ನುತ್ತಿದ್ದಾರೆ ನಮ್ಮ ಕಾನೂನು ಪಂಡಿತರು. ಏನೆಲ್ಲಾ ಆಗುತ್ತದೆ ಎಂದು ನೋಡಬೇಕು.

೦೦

ಮೂಲಭೂತ ಹಕ್ಕುಗಳ ಪ್ರತಾಪ ಇತ್ತೀಚೆಗೆ ಪ್ರಸಿದ್ಧಿಗೆ ಬಂದಿದ. ಪಾರ್ಲಿಮೆಂಟಿನಲ್ಲಿ ಮತ್ತು ಎಸೆಂಬ್ಲಿಗಳಲ್ಲಿ ಕಾನೂನುಗಳನ್ನು ಮಾಡಬಹುದಾದರೂ ಅವು ರಾಜ್ಯಾಂಗ ಘಟನೆಯಲ್ಲಿ ಜನಸಾಮಾನ್ಯರಿಗೆ ಇಟ್ಟಿರುವ ಮೂಲಭೂತ ಹಕ್ಕುಗಳಿಗೆ ವ್ಯತಿರಿಕ್ತವಾಗಿ ಕೂಡದು. ಹಾಗಿದ್ದರೆ ಅಂತಹ ಕಾನೂನುಗಳು ಸಿಂಧುವಾಗಲಾರವು ಎನ್ನುವ ಅಧಿಕಾರ ಕೋರ್ಟುಗಳಿಗಿವೆ. ಇದರಿಂದಾಗಿ ಎಷ್ಟೋ ಕಾನೂನು, ಕಾಯಿದೆ, ನಿಬಂಧನೆಗಳು ಉರುಳಿಹೋದವು. ಇನ್ನು ಹೋಗಲಿವೆ.

೦೦

ಮದ್ರಾಸಿನಲ್ಲಿ ಒಂದು ನಿಬಂಧನೆಯಿದೆ. ಸರಕಾರಿ ನೌಕರಿಗಳನ್ನು ಜಾತಿವಾರು ಕ್ರಮಬದ್ಧತೆ ಹಂಚಬೇಕೆಂದು. ಮೆಡಿಕಲ್ ಮತ್ತು ಇಂಜನಿಯರ್ ಕೋಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಕೊಡುವಾಗಲೂ ಅವರ ಯೋಗ್ಯತೆ ನೋಡಿಕೊಡುವುದಿಲ್ಲ. ಅವರ ಜಾತಿ ಮತಗಳನ್ನು ನೋಡಿಕೊಡಬೇಕೆಂದು, ಹಿಂದುಗಳಲ್ಲಿಯೂ ಬ್ರಾಹ್ಮಣರು, ಮುಂದುವರಿದ ಅಬ್ರಾಹ್ಮಣರು, ಹಿಂದುಳಿದ ಅಬ್ರಾಹ್ಮಣರು, ಹರಿಜನರು ಎಂಬ ನಾಲ್ಕು ಹೊಸ ಜಾತಿಗಳು ಉಂಟಾಗಿವೆ. ಅವರವರ ಕರ್ಮಾನುಸಾರ ನಾಲ್ಕು ವರ್ಣಗಳನ್ನಾಗಿ ವಿಂಗಡಿಸಿರುತ್ತೇನೆ ಎಂದು ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಹೇಳಿಲ್ಲವೇ? ಹಾಗೆಯೇ ಸರಕಾರಿ ನೌಕರಿಗಾಗಿ ಅವರವರ ಕರ್ಮದ ಫಲಕ್ಕನುಸಾರವಾಗಿ ನಾಲ್ಕು ಹೊಸ ಜಾತಿಗಳನ್ನು ಸರಕಾರದವರು ವಿಂಗಡಿಸಿರುತ್ತಾರೆ. ಈ ವಿಭಾಗವನ್ನೇ ಸ್ವಲ್ಪ ಮುಂದುವರಿಸಿ ಕಾಲೇಜುಗಳಲ್ಲಿ ಪ್ರವೇಶಕೊಡುವಾಗಲೂ ಈ ನಿಯಮವನ್ನು ಪರಿಶೀಲಿಸಬಾರದು ಎಂದು ಸರಕಾರದ ನಿಬಂಧ.

೦೦

ಈ ನಿಬಂಧನೆಯು ನಮ್ಮ ಮೂಲಭೂತ ಹಕ್ಕುಗಳಿಗೆ ವ್ಯತಿರಿಕ್ತವಾಗಿದೆ ಎಂದು ಮದ್ರಾಸು ಹೈಕೋರ್ಟಿನಲ್ಲಿ ಇಬ್ಬರು, ನಿದ್ಯಾರ್ಥಿಗಳು ದಾವೆ ತಂದರು. ಅವರ ವಾದ ಸರಿ ಎಂದು ಹೈಕೋರ್ಟಿನವರೆಂದರು. ಇದರ ಪರಿಣಾಮವಾಗಿ ಒಬ್ಬನಿಗೆ ಇಂಜಿನಿಯರಿಂಗ್ ಕೋಲೇಜಿನಲ್ಲಿ ಪ್ರವೇಶ ದೊರೆಯಿತು. ಆದರೆ ಈ ನಿಬಂಧನೆಯನ್ನು ಮದ್ರಾಸು ಸರಕಾರವು ಇನ್ನೂ ಬದಲಾಯಿಸಲಿಲ್ಲ. ಹೈಕೋರ್ಟು ತೀರ್ಮಾನವು ಅರ್ಜಿದಾರರ ಮಟ್ಟಿಗೆ ಮಾತ್ರ ಪ್ರಯೋಜನಕಾಂ ವಿನಾ ಇತರ ವಿದ್ಯಾರ್ಥಿಗಳಿಗೆ ಸಹಾಯಕವಾಗಲಾರದು ಎಂಬ ಕಾನೂನು ಪಂಡಿತರ ವಾದ ಅಲ್ಲದೆ ಹೈಕೋರ್ಟಿನ ತೀರ್ಮಾನ ನ್ಯಾಯವಲ್ಲವೆಂದು ಮದ್ರಾಸು ಸರಕಾರವು ದಿಲ್ಲಿಯ ಸುಪ್ರೀಮ್ ಕೋರ್ಟಿಗೆ ಅಪೀಲು ಮಾಡಿದೆಯಂತೆ.

೦೦

ಹೈದರಾಬಾದಿನಲ್ಲಿ ಬಂಧಿಸಲ್ಪಟ್ಟಿದ್ದ ಲಾಯಕಾಲಿಯವರು ಯಾರಿಗೂ ತಿಳಿಯದಂತೆ ಪಾಕಿಸ್ತಾನಕ್ಕೆ ತಪ್ಪಿಸಿ ಹೋಗಿಬಿಟ್ಟರಷ್ಟೆ. ಹೀಗೆ ತಪ್ಪಿಸಲಿಕ್ಕೆ ಕಾರಣರಾದವರು ಮೇಲೆಲ್ಲಾ ಹೈದರಾಬಾದು ಸರಕಾರವು ಶಕ್ತೀರು ನಿಜೆಯು ನಿಷ್ಠರು. ಲಾಯಕ್ ಅಲಿಯವರನ್ನು ಬಂಧನದಲ್ಲಿಟ್ಟಿದ್ದೇ ನಮ್ಮ ಮೂಲಭೂತ ಹಕ್ಕುಗಳಿಗೆ ವ್ಯತಿರಿಕ್ತವಾಗಿದೆ ಎಂದು ಅಲ್ಲಿಯ ನ್ಯಾಯಾಧೀಶರು ತೀರ್ಮಾನಿಸಿಬಿಟ್ಟರು. ಆ ಪಾದನೆಗೆ ಗುರಿಯಾಗದವರೆನ್ನೆಲ್ಲಾ ಬಿಟ್ಟುಬಿಡಬೇಕಾಯಿತು. ಅಲ್ಲಿಯ ಸರಕಾರ ಆ ತೀರ್ಮಾನದ ಮೇಲೆ ಅಪೀಲು ಮಾಡಲಿಲ್ಲ. ಸರಿಯೆಂದು ಸುಮ್ಮನೆ ಕುಳಿತುಬಿಟ್ಟಿತು.

೦೦

ಕಮ್ಯೂನಿಸ್ಟರನ್ನು ಕಾರಣ ಕೊಡದೆ ಬಂಧಿಸುವುದು ನ್ಯಾಯಸಮ್ಮತವಲ್ಲವೇಂಬ ಆರ್ಜಿಗಳು ಹೈಕೋರ್ಟುಗಳಲ್ಲಿ ಸುಪ್ರೀಮ್ ಕೋರ್ಟಿನಲ್ಲಿ ಅಗಾಗ್ಗೆ ಬರುತ್ತಿವೆ. ಕೆಲವರ ಪಿಡುಗೆಯೂ ಆಯಿತು. ಪುನಃ ಬಂಧನಕ್ಕೊಳಗಾಗುತ್ತಿದೆ. ಪುನಃ ಅರ್ಜಿಗಳೂ ಆಗುತ್ತಿವೆ.

೦೦

ಈ ಮೂಲಭೂತ ಹಕ್ಕುಗಳನ್ನು ಅಧರಿಸಿಕೊಂಡು ಹೊಸ ರೀತಿಯ ವಿಚಿತ್ರ ಆರ್ಜಿಗಳೂ ಬರಲಿಕ್ಕೆ ಪ್ರಾರಂಭವಾಗಿವೆ. ಮೊನ್ನೆ ಮುಂಬಯಿ ಸರಕಾರ ಒಂದು ನಿಬಂಧನೆ ಮಾಡಿತು. ವೇಶ್ಯಾವೃತ್ತಿಯನ್ನು ನಡಿಸುತ್ತಿರುವ ಸ್ತ್ರೀಯರು ಮುಂಬಾಯಿನಗರ ಬಿಟ್ಟು ಹೋಗಬೇಕೆಂದು ಒಬ್ಬ ವೇಶ್ಯೆಯು ಮುಂಬಯಿ ಹೈಕೋರ್ಟಿನಲ್ಲಿ ಒಂದು ದಾವೆ ತಂದಳು. ಪ್ರತಿಯೊಬ್ಬನೂ ತನ್ನ ವ್ಯಾಪಾರವನ್ನು ನಡೆಯಿಸಿಕೊಂಡಿರುವಾಗ ಅದನ್ನು ತಡೆಯುವ ಹಕ್ಕು ಸರಕಾರಕ್ಕಿರಬಾರದು ಎಂದು ನಮಗೆ ಘಟನೆಯಲ್ಲಿ ಇದೆ. ತನ್ನ ವೃತ್ತಿಯನ್ನು ಕಡೆಯಲು ಸರಕಾರಕ್ಕೆ ಅಧಿಕಾರವಿಲ್ಲದೆ ಎಂದು ಅವಳ ಪ್ರಶ್ನೆ. ಹೈಕೋರ್ಟಿನವರು ದೀರ್ಘವಾಗಿ ಯೋಚಿಸಿ ಅವಳನ್ನು ನಗರದಿಂದ ಹೊರತಳ್ಳುವುದಕ್ಕೆ ಮುಂಬಾಯಿ ಸರಕಾರಕ್ಕೆ ಅಧಿಕಾರವಿಲ್ಲವೆಂದು ತೀರ್ಮಾನಿಸಿಬಿಟ್ಟರು.

೦೦

ಒಬ್ಬ ಹೆಂಡತಿ ಜೀವಂತಳಾಗಿರುವಾಗ ಹಿಂದುವು ಇನ್ನೊಬ್ಬಳನ್ನು ನಿವಾಹಮಾಡಿಕೊಳ್ಳಕೂಡದು ಎಂದು ಮದ್ರಾಸು ಶಾಸ್ತ್ರಕ್ಕದ ಲ್ಲೊಂದು ಕಾನೂನಾಗಿದೆ. ಈ ಕಾನೂನು ಪ್ರಕಾರ ಮದ್ರಾಸಿನಲ್ಲಿ ಒಬ್ಬರ ಮೇಲೆ ತಪ್ಪೀರು ಪ್ರಾರಂಭವಾಯಿತು ಕೂಡಲೇ ಅವರು ಈ ಕಾನೂನು ನಮ್ಮ ಮೂಲಭೂತ ಹಕ್ಕುಗಳಿಗೆ ವ್ಯತಿರಿಕ್ತವಾಗಿದೆ ಎಂದು ಹೈಕೋರ್ಟಿನಲ್ಲಿ ಅರ್ಜಿ ತಂದಿರುತ್ತಾರೆ. ತಾನು ಎಸ್ಸನೆಯ ಜನ ಹೆಂಡಿರನ್ನು ವಿವಾಹಮಾಡಿದರೆ ಸರಕಾರಕ್ಕೆ ಏನು ಕಷ್ಟ ಬಂತು? ಎಂದು ಅವರ ವಾದ. ಹೈಕೋರ್ಟಿನವರು ಏನು ನೂಡುತ್ತಾರೋ ನೋಡಬೇಕು.

೦೦

ಒಬ್ಬ ಹೆಂಡತಿ ಇರುವಾಗ ಇನ್ನೊಬ್ಬಳನ್ನು ವಿವಾಹಮಾಡಿಕೊಳ್ಳುವುದು ನ್ಯಾಯಸಮ್ಮತವೆಂತಾಗಿ ಬಿಟ್ಟರೆ ಒಬ್ಬ ಗಂಡನಿರುವಾಗ ಇನ್ನೊಬ್ಬನನ್ನು ವಿವಾಹವಾಗುವುದು, ಏಕೆ ನ್ಯಾಯಸಮ್ಮತವಾಗಲಾರದು? ಎಂದು ಈ ಮೂಲಭೂತ ಹಕ್ಕುಗಳನ್ನೇ ಆಧರಿಸಿಕೊಂಡು ಸ್ತ್ರೀಯರು ದಾವೆ ತಂದಾರು ಎಂದು ಮದ್ರಾಸಿನ ಮಹಿಳೆಯರು ಯೋಚಿಸಿಲ್ಲವೆಂದು ಕಾಣುತ್ತದೆ ಆ ವಾದವನ್ನು ನುಂದುವರಿಸಿದರೆ ನಂತರ ನಮ್ಮಲ್ಲಿ ಪ್ರಚಾರದ ಬ್ರಾಹ್ಮಣಿಕಗಳನ್ನು ನಾವು ಅಲ್ಲಲ್ಲಿ ಕಾಣಬಹುದು. ಏಕೆಂದರೆ ಈ ಮೂಲಭೂತ ಹಕ್ಕುಗಳು ಪುರುಷರಿಗೂ ಸ್ತ್ರೀಯರಿಗೂ ಒಂದೇ ರೀತಿಯಿರುತ್ತವೆ.

೦೦

ಮುದ್ರಾಸಿನ ಶಾಸನಸಭೆ ಕಾನೂನು ನಮ್ಮ ಮೂಲಭೂತ ಹಕ್ಕುಗಳಿಗೆ ವ್ಯತಿರಿಕ್ತವಾಗಿದೆ ಎಂದು ಮದ್ರಾಸು ಹೈಕೋರ್ಟಿನಲ್ಲಿ ಅರ್ಜಿ ಬಂತು. ಇದರ ತೀರ್ಮಾನದಿಂದ ಆ ಯೋಜನೆಯನ್ನು ಸ್ವಲ್ಪ ಮಟ್ಟಿಗೆ ದುರಸ್ತಿಮಾಡಬೇಕಾಗಿ ಬಂತು.

೦೦

ದೂರದ ವಿಷಯಬೇಕೆ? ಮಂಗಳೂರಿನ "ಅರುಣ" ಪತ್ರಿಕೆಯ ಶ್ರೀನಿವಾಸಭಟ್ಟರ ಮೇಲೆ ಮದ್ರಾಸು ಸರಕಾರವು ಒಂದು ಆಜ್ಞೆಕೊಟ್ಟಿತು. ಅವರು ಸೇಲಂ ಜೈಲಿನಲ್ಲಿ ನಡೆದ ಒಂದು ವಿಚಾರ ಅವಮಾನದಲ್ಲಿ ಪ್ರಕಟಿಸಿದ್ದಕ್ಕಾಗಿ ಅವರು ಜಾಮೀನು ಕೊಡಬೇಕೆಂದು. ನಡೆದ ವಿಚಾರವನ್ನು ಪ್ರಕಟಿಸುವ ಹಕ್ಕು ಪತ್ರಿಕೆಗಳಿಗೆ ಇವೆ, ಅದನ್ನು ತಡೆಯಲು ಸರಕಾರಕ್ಕೆ ಅಧಿಕಾರವಿಲ್ಲವೆಂದು ಭಟ್ರು ಹೈಕೋರ್ಟಿಗೆ ಅರ್ಜಿಮಾಡಿದರು; ಮತ್ತು ಗೆದ್ದರು.

೦೦

ಹೀಗೆ ಎಲ್ಲಾ ಕಡೆಗಳಲ್ಲಿಯೂ ಈಗ ಮೂಲಭೂತ ಹಕ್ಕುಗಳಾಗಿ ಹೋಗಿರುವ, ಅರ್ಜಿಗಳು, ಅಪೀಲುಗಳು ನಡೆಯುತ್ತಿವೆ. ರಾಜ್ಯಾಂಗ ಘಟನೆಯ ಮನೆಯ ಚರ್ಚೆಯಲ್ಲಿ ದ್ದಾಗ ಇದರ ಪರಿಣಾಮವಾಗಿ ಏಕೀಕರಿಗೊಂದು ಸುಯೋಗ ಬರಲಿಕ್ಕಿದೆ ಎಂದು ಕೆಲವರು ಅಂದಿದ್ದರು. ಈಗ ಆ ಮಾತು ನಿಜವೆಂದು ನನಗೆ ಅರ್ಥವಾಗುತ್ತಿದೆ.

೦೦

ಎಸೆಂಬ್ಲಿಯಲ್ಲಿರುವ ವಾಸಾಗಿರುವ ಏಡೋಮೆಂಟು ಕಾನೂನನ್ನು ರದ್ದುಪಡಿಸಬೇಕೆಂದು ನಮ್ಮ ಸನಾತನ ಬಂಧುಗಳು ಹಟತೊಟ್ಟಿರುತ್ತಾರೆ ಪಾರ್ಲಿಮೆಂಟು ಮುಂದೆ ಬರಲಿರುವ ಹಿಂದೂ ಕೋಡು ಮನೆಯ ಮೂಳೆಯನ್ನೇ ಕತ್ತರಿಸಿಬಿಡುತ್ತೇವೆ ಎನ್ನುತ್ತಿದ್ದಾರೆ ನಮ್ಮ ಸನಾತನಿ ಎಸ್. ಪಿ. ಗಳು.

೦೦

ದಿಲ್ಲಿಯಲ್ಲಿ ಸದ್ಯ ಈ ಹಿಂದೂಕೋಡಿಗಾಗಿ ಒಂದು ಮಹಾಭಾರತ ಯುದ್ಧ ನಡೆಯುವಂತಿದೆ. ಹಿಂದಿನ ರಾಷ್ಟ್ರಪತಿ ಡಾ। ಪಟ್ಟಾಭಿಯವರು ಕೋಡು ಬೇಡವೆಂಬ ಪಂಥದ ನಾಯಕತ್ವವನ್ನು ವಹಿಸಿಕೊಳ್ಳುವವರಿದ್ದಾರೆ. ಕೋಡು ಬೇಕು ಎಂಬ ಪಂಥದ ನಾಯಕತ್ವ ಡಾ। ಅಂಬೇಡ್ಕರರಿಗೆ ಕಟ್ಟಿಟ್ಟಿದೆ. ಸನಾತನಿಗಳು ಮತ್ತು ಮಹಾಧಿಪತಿಗಳ ಬೆಂಬಲ ಡಾ। ಕೈರ್ ಪಟ್ಟಾಭಿಯವರಿಗಿದೆ. ಸರಕಾರದ ಬೆಂಬಲ ಡಾ। ಅಂಬೇಡ್ಕರರಿಗಿದೆ. ಈ ಎರಡು ಪಕ್ಷಗಳಲ್ಲಿ ಪಾಂಡವರಾರು? ಕೌರವರಾರು? ಎನ್ನುತ್ತೀರಾ? ಒಳ್ಳೆದು, ಕೊನೆಗೆ ಗೆದ್ದವರು ಪಾಂಡವರು. ಸೋತವರು ಕೌರವರು, ಸಂಶಯವಿಲ್ಲವೇ?

೦೦

ಸಾರ್ವಜನಿಕ ಆರೋಗ್ಯ ವಿಚಾರದಲ್ಲಿ ನಮ್ಮ ಕಾರ್ಯದರ್ಶಿಯವರು ಮುಂದಿನ ವಾರ ಕಾಲಕ್ಷೇಪ ಮಾಡುವರು. ನಮಸ್ಕಾರ.

ಪ್ರೀತಿಯಿಂದ.

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

ಗೊನೊರಿಯಾ ಪರಮಾರೋಗ ಉಳ್ಳ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋಷರೆಕ್ಕೆ ಜಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ಕೊಗಲು ಒಂದಕ್ಕೆ ಕರಿಯದಿದ್ದರೆ, ಶರೀರದ ಸುತ್ತು ಕೆಂಯವಾಗಿದ್ದರೆ,.... ಜಟ್ಟಿ ಬಿದ್ದಿದ್ದರೆ, ಉಷ್ಣ ದಿಂದ ಚೀರು ಇಳಿದಿದ್ದರೆ, ಉಡುಗು ಆಗಿದ್ದರೆ, ನೂಲವ್ಯಾಧಿ, ಭಗೆಂದ್ರೆ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ಸದುನೋಯುವದು ಸ್ತ್ರೀಯರ ಬಿಳಕೆಂವು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಧಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೦ಕ್ಕೆ ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆರೆ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರೆ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಬಾಲಪ್ಪ ಡಾವಣಗೆರೆ,
ಆಯುರ್ವೇದ ಔಷಧಾಲಯ, ಗದಗ-

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರಜೊಡನೆ ಯಾ ಮುಂದಾಗಿ ಬಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು,ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಷೇಂದ್ರಿಯ ಇವೆಲ್ಲಾ ಖಾತ್ರಿ ಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್ರು—

ಶಾ ಕಂಜೆನಿ, ಮಂಗಳೂರು

ಬಿ ಹೃದಯವೀಣೆ-(ಕವಿತಾ ಸಂಗ್ರಹ) ಕವಿಗಳು ಶ್ರೀ ಅಡಿಬಾಯಿ ರಾಮಣ್ಣ ಶೆಟ್ಟರು, ದೆಹಲಿ. ಪ್ರ. ಕ. ಬೆಲೆ ರೂ. ೧—೦—೦

ಹೃದಯವೀಣೆ ಹೆಸರಿಗೆ ತಕ್ಕಂತೆ ಕವಿಹೃದಯವೀಣೆಯ ಅಗಿರುತ್ತದೆ. ಕವಿತೆಗಳು ಹೃದಯಂಗಮವಾಗಿವೆ. ಕೆಲವು ಕವಿತೆಗಳನ್ನೋದಿದಾಗಂತೂ ಎದೆಪಾಪಿಸಿಹೋಗುತ್ತದೆ. ಕವಿಯು ಪ್ರಕೃತಿ ಈಕ್ಷಣೆಯನ್ನು 'ಪ್ರಕೃತ್ಯೀಕ್ಷಣ'ದಲ್ಲಿ ನಾವು ಧಾರಾಳವಾಗಿ ಕಾಣಬಹುದು.

"ಎದೆಯ ಮನೆಯ ಪೂಜೆಯಲ್ಲಿ
ಇಟ್ಟಕಿರಿಯ ವೀಣೆಯಲ್ಲಿ
ಅತ್ಮವಾಣಿಯನ್ನು ನುಡಿಸಿ
ಒಲಿಸುವವನದಾವನು?.....
ನಿರ್ಮಲಾಂತಃಕರಣದಲ್ಲಿ
ಮನವನೊಲಿಸಿ ನಲಿಸಲಿಲ್ಲಿ
ಹೊಸತು ಹೊಸತು ಚಿತ್ರಬರೆವ
ಚಿತ್ರಗಾರನಾವನು?॥

ಹಾಗೆಯೆ ಜೀವನವ ಹಿರಿಮೆಯನ್ನೂ ಗುರಿಯನ್ನೂ ಹೇಳುವ ಈ ಸಾಲನ್ನು ಅವಲೋಕಿಸೋಣ.

"ಸತ್ಕರ್ಮಗಳ ಗೈದು ಸತ್ಸಂಗದಲಿ
ನಡೆದು
ಸದ್ಭರ್ತನೆಯ ಪಥದಿ ದುಡಿದು ಮಡಿದು.
ಸಕಲ ಸೋದರರರ ಸೇವೆಯು
ಗೈದು ಶಾಂತಿಯಲಿ
ಬಾಳ ಸಾರ್ಥಕಗೊಳಿಸು ಕೀರ್ತಿನಿಲಿಸು"
"ಬಂದಾದ ಎದೆಯ ಬಿಂದಿಗೆ ದಿನದ
ದುಡಿತದಲಿ
ತುಂಬಿತುಳುಕುತಲಿ ತುಳುಕುವನಿತುಕಾಲ
ಜೀವಕೋಟಿಗಳಲ್ಲಿ ಸೋದರ ಪ್ರೇಮದಲಿ
ನುಡಿದಡೆಯ ನಿಜಲದುವೆ ಶ್ರೇಯ
ಜೀವಿಲ್ಲ"

ನೈಸರ್ಗಿಕವಾದ ಪ್ರೇಮದ ಕುರಿತು:

"ನಗೆಯು ನಸ್ನಿಯ ನನೆಯು
ಜೀವನದ ತೆನೆಯು
ಬಾಳುವೆಯ ದೀಳುವೆಗೆ ಮೇಲೆದ್ದ ಕನೆಯು
ಹಿದಿನುವ ನರಜನ್ಮಕೆತ್ತಿ ನಾವಿಂದು
ಹಿರಿತನವ ತೋರಿದರೆ ಜೀವನವ ಸಿಂಧು"
"ಪ್ರಣಯಶಕ್ತಿಗಳೆ ನರ-ನಾರಿಯರು
ಎನಿಸಿ

ಧರೆಯೊಳುದಿಸಿವೆ; ವಿವಿಧ ಭೇದಗಳ
ತೃಣಿಸಿ;
ಕನಸು ಮನಸುಗಳೆಲ್ಲ ಭಾವಭಿತ್ತಿಗಳು
ಹೆಡೆದುಕೊಂಡಿರೆ ಪ್ರೇಮು ಸಾಫಲ್ಯ
ಮುಗುಳ-"

ಹೀಗಯೆ ಹಲವು ಕವಿತೆಗಳಲ್ಲಿ ನಮ್ಮ ಮನವನ್ನು ನೆಗೆಯುವ ಸುಂದರ ಸ್ಪಷ್ಟವೇ ರಗಳನ್ನು ಶ್ರೀ ಲೆಟ್ಟರು ಕಲ್ಪಿಸಿಕೊಟ್ಟರುತ್ತಾರೆ. ಹೃದಯ ವೀಣೆಯ ಎಲ್ಲ ಕವಿತೆಗಳೂ ಉತ್ತಮವಾಗಿವೆಯೆಂದು ಹೇಳುವಂತಿಲ್ಲವಾದರೂ ಕೆಲವು ಕವಿತೆಗಳು ಉತ್ತಮೋತ್ತಮವಾಗಿವೆ. ಅಚ್ಚಿನಿಂದಾಗಿಯೂ, ಸ್ವಬುದ್ಧಿಯಿಂದಾಗಿಯೂ ಕೆಲವೆಡೆ ತಪ್ಪುಗಳು ತೊಡಕಾಗಿ ನಿಂತಿವೆ. ರಾಷ್ಟ್ರಕವಿ ಗೋವಿಂದ ಪೈಗಳು ವಿದ್ವತ್ಪೂರ್ಣವಾದ ಮುನ್ನುಡಿಯನ್ನು ಬರೆದು ಹಾರೈಸಿದ್ದಾರೆ. ಆ ಹಿರಿಯಂ ಹರಕೆಗೆ ಪಾತ್ರವಾಗುವ ಕಾವ್ಯಗುಣ ಶ್ರೀ ಲೆಟ್ಟರಲ್ಲಿದೆ.

೨ ಗಂಗಾಸಾನಿ-(ಸಾಮಾಜಿಕ ಕೇದಂಬರಿ) ಲೇಖಕರು: ಶ್ರೀ ವರಗಿರಿ, ಪ್ರಕಾಶಕರು: ಜಿ. ಬಿ. ಜೋಶಿ, ಮನೋಹರ ಗ್ರಂಥಮಾಲಾ ಧಾರವಾಡ. ಬೆಲೆ ರೂ. ೧—೧೪—೦

ಸೂಳೆಯರೆಂದರೆ ಮಾನವಲೋಕದ ಮಹಾ ಪಾತಕಿಗಳೆನುವ ಕಲ್ಪನೆ ನಮ್ಮಲ್ಲಿ ಬಲವರಿದೆ. ಪಾತರಗಿತ್ತಿಯವರನ್ನು ಕೆಟ್ಟವರೆಂದೇ ಚಿತ್ರಿಸುವ ಸಾಹಿತ್ಯ ನಮ್ಮಲ್ಲಿ ಬಹಳ ಬಂದಿದೆ. ಆದರೆ ವಸ್ತುಸ್ಥಿತಿಯನ್ನು ಚಿತ್ರಿಸುವವು ಬಹಳ ಕಡಿಮೆ. ಗಂಗಾಸಾನಿ ಸೂಳೆ, ಹಾದರಗಿತ್ತಿ. ಆದರೆ ಪರೋಪಕಾರಿ, ಇತರ ಪಾಡಿಗಾಗಿ ಕನಿಕರ ಪಡುವ ಕರುಣಾದ್ರ ಹೃದಯಿ. ಶ್ರೀ ಕಂಠಶಾಸ್ತ್ರಿ ತತ್ವವಸ್ತಾಡುತ್ತಾ ಅನೀತಿಯನ್ನು ಸಾಡುವ ಬ್ರಾಹ್ಮಣ. ಶಂಕರ ಭಟ್ಟ ಸಭ್ಯಗುಣಗಳಿಂದಲೂ, ದೈವಿಕ ಭಕ್ತಿಯಿಂದಲೂ, ಜೀವನ ಸಾಫಲ್ಯವನ್ನು ಪಡೆದಂತಹ ಇನ್ನೊಬ್ಬ ಬ್ರಾಹ್ಮಣ ಸುಭಗಾ ಬಾಳಿನ ಮೊದಲಲ್ಲೇ ಗಂಡನನ್ನು ಕಳೆದುಕೊಂಡ ಬಾಲವಿಧವೆ. ಶಂಕರ ಭಟ್ಟರ ಒಬ್ಬಳೆ ಮಗಳು. ರಾಮಚಂದ್ರ ಸುಭಗಾಳ ಎಡೆಪರಿಯ ಪ್ರೇಮಿ, ಇಲ್ಲವೆ ಬಾಳಿನ ಸರ್ವಸ್ವ. ಈ ಅಪೂರ್ವ 'ಗಂಗಾಸಾನಿ'ಯ ವ್ಯಕ್ತಿಗಳು.

ಸ್ವರಧ್ರುವಿಯಾದ ಸುಭಗಾಳ ಮೈಸಿರಿಯನ್ನು ಕಂಡ ಶ್ರೀ ಕಂಠ ಶಾಸ್ತ್ರಿಗಳು ಕೈ ಮಾಡುತ್ತಾರೆ. ತಂದಿಗೆ ಸಮಾನರಾದ ಶಾಸ್ತ್ರಿಗಳನ್ನು ಸುಭಗಾ ನಿರಾಕರಿಸುತ್ತಾಳೆ. ರಾಮೂ ಸ್ವಾಯಭರಿತ ತರುಣ. ಸಂಗೀತ ಕಲೆಯಲ್ಲಿ ನಿಷ್ಣಾತ. ನೃತ್ಯಗಾತಿ ಸುಭಗಾಳು ರಾಮಚಂದ್ರನನ್ನು ಮೆಚ್ಚಿದಳು. ಮಯಸ್ಸಿನ ಧರ್ಮದಂತೆ ಪ್ರೇಮಲೀಲೆ ಅವ್ಯಾಹತವಾಗಿ ಸಾಗಿತು. ಸಂಭೆಗೆಯು ಬಸಿರಾದಳು. ಶಾಸ್ತ್ರಿಗಳು ಊರಜವರನ್ನು ಕಟ್ಟಿಕೊಂಡು ಸುಬಗೆಯ ತಂದೆ ಶಂಕರ ಭಟ್ಟರಿಗೆ ಬಹಿಷ್ಕಾರ ಹಾಕಿ ಊರ ಗುಡಿಯ ಪೂಜೆಯನ್ನು ರದ್ದುಗೊಳಿಸಿದರು. ಸುಭಗೆಯ ಜೀವನ ಊರ ಜನರ ಬಾಯಿಂದ ಸಾವಿಗೆ ಸಮಾನವಾಯ್ತು- ಗಂಗಾಸಾನಿ ತನ್ನ ಮನೆಮಾನ್ಯನ್ನು ರಾಮಚಂದ್ರ ಸುಭಗಾರೊಳಗೆ ಹಂಚಿ ಅವರನ್ನು ಒಂದಾಗಿಸುವಳು. ಶಾಸ್ತ್ರಿಗಳಿಗೆ ಬೇಂಕಿನ ಪದವನ್ನೂ, ಅವರ ಮಡದಿಗೆ ಚಿನ್ನವನ್ನೂ ಬರೆದು ಹಾಕಿ ಶ್ಲೇಗಿನ ಕಾಯಿಲೆಯಿಂದ ಇಹವನ್ನು ಮುಗಿಸುವಳು. ಇದು ಕತೆ

ಹೆಣ್ಣು ಮಾಡುವ ಸ್ವಭಾವಾರವನ್ನು ಕಂಡು ಆಕೆ ಕೆಟ್ಟವಳೆಂದು ಸಿದ್ಧಾಂತಿಸುವದಾದರೆ ಗಂಡಸು ಮಾಡುವ ಅನಾಚಾರಗಳಿಗೇನೆಂದು ಹೇಳಬೇಕು? ಹೆಚ್ಚಿನ ಜೀವನದ ಕುರಿತಾಗಿ ಇಂಥ ಗಂಡಿನ ಭಾವನೆಗಳೆಲ್ಲ ಪಳೆಯು ಕಟ್ಟನ್ನೇ ಅನುಸರಿಸಿಕೊಂಡು ಬಂದಿರುವಂತಹದಾಗಿದೆ. ಸಾಪ್ರದಾಯ, ನೀತಿ, ಮರ್ಯಾದೆಯ ಸ್ಪಷ್ಟ ಪಣ್ಣಿನ ಮಟ್ಟಗೆ ಮಾತ್ರ ಸಮಾಜ ಹೇರುತ್ತದೆ. ಹೆಣ್ಣು ಜೀವ ಬಯಸುವ ನೈಸರ್ಗಿಕ ಪ್ರೀತಿಯನ್ನು ಹಳೆಯ ಕಟ್ಟುನಿಟ್ಟುಗಳಿಗಾಗಿ ಸರಿಯಾಗಿಯೆ ಅನುಭವಿಸಬೇಕೆಂದು ಹೇಳುತ್ತದೆ ಸುಧಾರಿತ ಜನಾಂಗ. ಇಪ್ಪತ್ತನೆಯ ಶತಮಾನದಲ್ಲೂ ಹೆಣ್ಣಿನ ಇಚ್ಛೆಗೆ ಪಕ್ಷಪಾತವಿದೆ. ಪ್ರೀತಿ ಪಾವನವಾಗಿದ್ದರೆ ಬದುಕು ನಂದನವಾಗುತ್ತದೆ. ಪ್ರೀತಿ ಕಾಮುಕವಾಗಿದ್ದರೆ ಬದುಕು ಅಪೂರ್ಣ ಮಾತ್ರವಲ್ಲ, ದುರಂತವೂ ಕೂಡಾ! ಗಂಡುಪೆಣ್ಣಿನ ಒಲವಿನ ಸಮಸ್ಯೆ ಬಹಳ ಹಿಂದಿನಿಂದಲೂ ಇದ್ದದ್ದು. ಹೃದಯಕವಾದ ಪ್ರೀತಿಭಾವವಿರುವಲ್ಲಿ ಸೌಹಾರ್ದ ಭಾವ- ಲೋಕೋಪಕಾರ ಗುಣ- ಶಾಂತಿಗಳಿರುತ್ತವೆಂಬುದಕ್ಕೆ 'ಗಂಗಾಸಾನಿ'ಸಾಕ್ಷಿಯಾಗಿರುತ್ತದೆ. ತತ್ವವನ್ನು ಎತ್ತಿ ಹಿಡಿದು ತನ್ನ ಅನೀತಿಯನ್ನು ಮರೆಸುವ ಉತ್ತಮ ಕುಲಾಂಬರ ಡಾಂಭಿಕತೆಯನ್ನೂ-ಸಮಾಜದಿಂದ ಬಹಿಷ್ಕರಿಸಲ್ಪಡಲಿರುವ ಭಾಂಧವ್ಯತೆಯನ್ನು ಬಯಸುವ ಹಿರಿಯ ಗುಣವಿರುತ್ತದೆಂಬುದನ್ನೂ ಶ್ರೀ ಕಂಠ ಶಾಸ್ತ್ರಿಗಳ ಜಾಗೊಗಂಗಾಸಾನಿಯ ಜೀವನದಲ್ಲಿ ಕಾಣಬಹುದಾಗಿದೆ. ಕತಾವಸ್ತು ತೀರ ಹೊಸತಲ್ಲವಾದರೂ ಕತೆಯ ನಿರೂಪಣೆಯಲ್ಲಿ ನಾವೀನ್ಯತೆಯಿದೆ. ಇಡಿಯ ಕಾದಂಬರಿಯು ಆಕ್ಯಂತ ಆಸಕ್ತಾಪಯಿದಲೂ ಕುತೂಹಲದಿಂದಲೂ ಮುಂದೆ ಸಾಗುತ್ತದೆ." ಲಲಿತವಾದ ವ್ಯಕ್ತಿ ಚಿತ್ರವು ಹಿತಮಿತವಾದ ಪಾತ್ರುಗಾರಿಕೆಯಿಂದ ವಾಸ್ತವಿಕವಾಗಿ ತೋರುತ್ತದೆ. ಶ್ರೀ ವರಗಿರಿಯವರು ಇಂತಹ ಉತ್ತಮ ಕಾದಂಬರಿಯನ್ನು ರಚಿಸಬಲ್ಲರೆಂಬುದಕ್ಕೆ 'ಗಂಗಾಸಾನಿ' ಉತ್ತಮ ನಿದರ್ಶನವಾಗಿರುತ್ತದೆ.

— ಎಸ್ಸೆಲ್

ಸ್ವೀಕಾರ-ವಿಮರ್ಶೆ

Notice

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O. S. 527/1950

ವಾದಿ:—ಮಂಜುನಾಥ ಮೈಯ್ಯ, ನರಸಿಂಹ ಮೈಯರ ಮಗ, ಉಡ್ಡಿ ತಾಲೂಕು ಗಿಳಿಯಾರು ಗ್ರಾಮದ ಹರ್ತಟ್ಟುನಲ್ಲಿರುವವ. ಮತ್ತು

ಪ್ರತಿವಾದಿಗಳು:-

1 ಬಿಲ್ಲ ಅಣ್ಣಯ್ಯ } ನಾಗಿ ಹೆಂಗ್ಸಿನ
2 ಬಿಲ್ಲ ಕೊರಗ } ಮಗಂದಿರು

3 ಬಿಲ್ಲ ಜಿಟ್ಟಿ, 1ನೇ ಪ್ರತಿವಾದಿ ಹೆಂಡತಿ, ಸದ್ರಿ ಗಿಳಿಯಾರು ಗ್ರಾಮದಲ್ಲಿರುವವರು.

ಮೇಲ್ಕಾಣಿಸಿದ 1, 3ನೇ ಪ್ರತಿವಾದಿಗಿರೆ ಈ ಮೂಲಕ ತಿಳಿಯಪಡಿಸುವುದೇನೆಂದರೆ-

1, 3ನೇ ಪ್ರತಿವಾದಿರು ತಾ. 27-7-1948 ರಲ್ಲಿ ಚಾಲಗೇಣಿ ಎದ್ರುನುಡಿ ಬರೆಕೊಟ್ಟು ಚಾಲಗೇಣಿಯಾಗಿ ಅನುಭವಿಸಿದ ಪಾಡಿಯ ಕಟ್ಟುಂಬದ ಹಕ್ಕಿನ ಸದ್ರಿಗಿಳಿಯಾರು ಗ್ರಾಮದ ಭೂಮಿಗಳ ಸ್ವಾಧೀನತೆ ಬಗ್ಗೂ ವಿರೋಧಿ ಸಂ:೧೮೮ ಆದಿಲಾಗ್ಯಾತಿನ ಹುಟ್ಟುವಳಿ ಬಗ್ಗೂ ವಾದಿಯು ಮಾಡಿದ ನೋಲ್ಕಂಡವಾವೆಯನ್ನು ಅಬ್ಬೆರು ತನ್ನಿಬಗ್ಗೆ ತಾರೀಕು 21-2-51ಕ್ಕೆ ಇಡೋಣಾಗಿಯಿದೆ. ಸದ್ರಿ ದಾವೆಯಲ್ಲಿ ಅದಹರಿಸಲಿಕ್ಕಿರುವುದಾದರೆ ಸದ್ರಿ ದಿವಸ ಪೂರ್ವಾಹ್ನ 11ಗಂಟೆಗೆ ಹಾಜ್ರಾಗಿ ಜ್ಞಾಹೀರು ಮಾಡಬಹುದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ:

A. V. N. Hebbar
Vakil for Plaintiff

ಕುಂದಾಪುರ, ತಾರೀಕು. 21-1-1951

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಆಮೋಘ ವಾದ ಮಘುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ಸನಜೀವಾತು
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ವಿ.
ಕೊಡಿಯಾಲಬೈಲ ಮೋಸ್ಟ್ಯು (ಮಂಗಳೂರು)

ಸ್ವಾಕಿಸ್ಟರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದ. ಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರಿಕ್, ರಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ದ್ರಾಹ್ಮಣರ ಅಡಿಗೆ, ಕಿಂಡತಿನಸು, ಇವುಗಳ ರುಚಿಯು ಬೇರೆಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI. S. Kanara.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ
ಇಂಗ್ಲಿಷ್ ಸ್ವಯ ಬೋಧಿನಿ ಪುಸ್ತಕ
ಅತ್ಯು�ಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ. ವ್ಯಾರೆ ರೂ. 1-14-0.
ಪ್ರತಿಗಳು ನಮ್ಮಿಂದ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ

ಮೇಷ—ಇಂದಿನ ಗೃಹಸ್ಥಿತಿಯು ಅತ್ಯುತ್ತಮವಿರುವದು. ಯಾವ ಉದ್ಯೋಗವನ್ನು ಕೈಕೊಂಡರೂ ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟಿನಂತಿರುವುದು. ಸಂಪದ್ವಾಗವು ಅತ್ಯುತ್ತಮ ಸ್ಥಿತಿಗೆ ಬರಲಿದೆ. ರಾಜಕೀಯ ಕ್ಷೇತ್ರದಲ್ಲಿ ಕೀರ್ತಿಯೂ ಸಮಾಜದಲ್ಲಿ ಮಾನವನ್ನಷ್ಟಿಗೆಗಳೂ ಲಭಿಸುವವು. ಮಿತ್ರವರ್ಗದವರಿಂದ ನಾನಾ ತರದ ಸಹಾಯವು ಲಭಿಸುವದು. ಶತ್ರು ಜನರು ಹೇಳಹೆಸರಿಲ್ಲದಂತಾಗುವರು. ದೇಹಾರೋಗ್ಯ ಗೃಹಸುಖ ಮನೋನೆಮ್ಮದಿಗಳಿಗೆ ಯಾವ ತೆರನಾದ ಭಂಗವೂ ಬಾರದೆಸಲ್ಲದು. ತಾ. 8, 11, 15, 13 ಈ ದಿನಗಳಲ್ಲಿ ನಾನಾ ವಿಧ ಲಾಭಭೋಗ ಸುಖಗಳು ಲಭಿಸುವವು

ವೃಷಭ—ಕಳೆದ ವಾರಕ್ಕಿಂತ ಈ ವಾರವು ಕೆಲಂಚ ಉತ್ತಮವಿರುವದು, ಕೆಲವೊಂದು ಕಾರ್ಯಗಳಲ್ಲಾದರೂ ನೀವು ವಿಜಯವನ್ನು ಹೊಂದಲಿರುವಿರಿ. ಆದರೂ ನಿಮ್ಮ ಸಣದ ಬಿಕ್ಕಟ್ಟು ಕಡಿಮೆಯಾಗಲೊಲ್ಲದು. ಆತ್ಮೀಯರ ವಿಯೋಗವುಂಟಾಗಲಿದೆ. ಮಿತಭಾಷಿಗಳಾಗಿದ್ದಷ್ಟೂ ಒಳ್ಳೆಯದು. ಕಾರಣ ನಿಷ್ಕಾರಣವಾಗಿ ಜನರೊಡನೆ ಕಲಹ ಬಾಗುವ ಯೋಗವಿದೆ, ಪ್ರವಾಸದ ನಿಮಿತ್ತ ಹೆಚ್ಚಿನ ಧನವ್ಯಯವಾಗಲಿದೆ. ಮಾತ್ರವಲ್ಲ ನಿಮ್ಮವರೇ ನಿಮಗೆ ವಿರೋಧಿಗಳಂತೆ ವರ್ತಿಸಲಿರುವುದರಿಂದ ತಾ. 11, 12, 13 ಈ ದಿನಗಳನ್ನು ಬಹಳ ಜಾಗರೂಕತೆಯಿಂದ ಕಳೆಯಬೇಕಾಗುವದು.

ಮಿಥುನ—ಗೃಹಬಲವು ಸಂತೃಪ್ತಿಕರವಿರುವದು. ನಿಶ್ಚತ್ರುಗಳಾದ ನೀವು ಕೈಗೊಂಡ ಹಲವಾರು ಕಾರ್ಯಗಳು ಕೊನೆಹೊಂದಲಿವೆ. ನಾಕರಿ ವ್ಯಾಪಾರ ಮೊದಲಾದ ಉದ್ಯೋಗಗಳಲ್ಲಿ ಒಳ್ಳೆಯ ಪ್ರತಿಫಲ ದೊರೆಯುವು. ಆದರೆ ದೇಹಾರೋಗ್ಯದ ಮಟ್ಟಿಗೆ ಈ ವಾರವು ಬಹಳ ಪ್ರತಿಕೂಲವಿದೆ. ಲೇವಾದೇವಿ ನಿಮಿತ್ತವಾಗಿ ಕೋರ್ಟಗೆಹೋಗುವ ಪ್ರಸಂಗ ಒದಗಬಹುದು. ಅರ್ಥಿಕ ಮುಗ್ಗಟ್ಟಿನಿಂದ ಮುಕ್ತರಾವ ನಿಮಗೆ ವಾರದ ಅಂತ್ಯದ ದಿನಗಳು ಕೊಂಚ ಪ್ರತಿಕೂಲವಾಗಿ ಕಾಣಬಹುದು.

ಕರ್ಕಟ—ಪರರ ಹಂಗಿಲ್ಲದೆ ಕಾರ್ಯ ಸಾಧಿಸುವ ಶಕ್ತಿ ನಿಮಗಿದ್ದರೂ ಈ ವಾರದಲ್ಲಿ ಅನೇಕ ಕಷ್ಟನಷ್ಟಗಳಿಗೆ ಸಿಲುಕಲಿರುವಿರಿ. ವಿನೇಕದ ದೌರ್ಬಲ್ಯದಿಂದಾಗಿ ಹಲವರೊಡನೆ ಜಗಳವಾದೀತು. ಅಪ್ಪಿತ ವಸ್ತುಗಳು ಕಾಲದಲ್ಲಿ ಲಭಿಸದಿರುವುದರಿಂದ ಮಾನಸಿಕ ಬಂತಿ ಹೆಚ್ಚುವದು ಶತ್ರುಜನರ ಪಾಪಕೃತ್ಯದಿಂದ ಧನಮಾನಗಳಿಗೆ ಧಕ್ಕೆ ಬರುವ ಸಂಭವವಿದೆ. ಪ್ರಯಾಣ ದೇಹಾಲಸ್ಯ ಇತ್ಯಾದಿ ಅನಿಷ್ಟಗಳು ಕಾಣಿಸಬಹುದು. ಆದರೂ ವಾರಾಂತ್ಯದ 3 ದಿನಗಳಲ್ಲಿ ಗೃಹಸುಖ ಸ್ತ್ರೀಧನಾಪ್ತಿ ಮಿತ್ರರ ಬೆಂಬಲದಿಂದಾಗಿ ನಿಜಸುಖವನ್ನೂ ಹೊಂದಲಿರುವಿರಿ.

ಸಿಂಹ—ಸದುದ್ಯಮದಲ್ಲಿ ಕಾಲ ಕಳೆವಿರಿ ಪ್ರಯತ್ನಕ್ಕೆ ಬೆಡತಿಯಾದ ಫಲಲಭಿಸಲಿದೆ. ನೌಕರಿ ಜನರು ಭಡತಿಯನ್ನು ಹೊಂದಲಿರುವರು. ಸಮಾಜದಲ್ಲಿ ಒಳ್ಳೆ ಮಾನಮನ್ನಣೆಗಳು ಲಭಿಸುವವು. ಆದರೆ ಸ್ತ್ರೀಯರಿಂದಾಗಿ ಕಲಹ ಜನಾಪವಾದವನ್ನು ಕೇಳುವ ಯೋಗವಿದೆ. ಅರ್ಥಾರ್ಜನೆಯಿಂದಲೂ ಕೂಡ ನಿತ್ಯ ಕಲಹವಾಗಬಹುದು. ನೀವೆಸ್ಸೇ ದುಡಿದರೂ ಕೂಡ ದಿನಾಂತ್ಯದಲ್ಲಿ ರಿಕ್ತ ಹಸ್ತರಾಗುವಿರಿ. ವಾರದ ಅಧ್ಯಂತ ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ಕನ್ಯಾ—ಗೃಹಚಿಂತೆವು ಪ್ರಬಲವಾಗಿ ಕಾಡುತ್ತಿದೆ. ದೇಹಾಲಸ್ಯದ ದೆಸೆಯಿಂದಾಗಿ ಹಿಡಿದ ಕಾರ್ಯವನ್ನು ಮಧ್ಯದಲ್ಲಿ ಕೈಬಿಡುವ ಪ್ರಸಂಗ ಬರಲಿದೆ. ಅಂತರಿಕ ಶತ್ರುಗಳ ಭಯ ವಧಿಕವಾಗುವದು, ಹೆಂಡತಿ ಮಕ್ಕಳು ಕೂಡ ಪ್ರತಿಕೂಲವಾಗಿ ವರ್ತಿಸಲಿರುವರು. ಗೃಹಕಲಹಗಳು ದಿನೇ ದಿನೇ ಸೆಚ್ಚಲಿವೆ. ವ್ಯಾಪಾರದಲ್ಲಿ ನಷ್ಟವಾದೀತು. ಶ್ರಮಜೀವಿಗಳಿಗೂ ನೌಕರಿ ವರ್ಗದವರಿಗೂ ಯತ್ನಕ್ಕೆ ತಕ್ಕ ಫಲ ದೊರೆಯದು. ವಾರಾದಿಯ 3ದಿನಗಳು ಕೊಂಚ ಉತ್ತಮವಿರುವವು.

ತುಲಾ—ನಿಸರ್ಗಕಿಶೋರಿಯಂಥ ಗೌರಿ ಬುಧ, ಶುಕ್ರರು ನಿಮ್ಮಮೇಲೆ ಕೃಪಾ ದೃಷ್ಟಿಯನ್ನು ಬೀರಿರುವುದರಿಂದ ಈ ವಾರವು ನಿಮಗೆ ಹೆಚ್ಚಿನ ಶುಭದಾಯಿಯಾಗಿ ಪರಿಣಮಿಸಲಿದೆ. ಏಕಾವರೆ ಶನಿಯ ಕಾಟದಿಂದಾಗಿ ಆಗಾಗ ಶೋಕತಾಪಗಳು ಪ್ರಾಪ್ತವಾಗುವ ಪಾದರೂ ದೈವಾನುಗ್ರಹದಿಂದ ನೀವು ಪಾರಾಗುವಿರಿ. ಆರ್ಥಿಕ ಪರಿಸ್ಥಿತಿಯು ಉತ್ತಮ ಮಟ್ಟಕ್ಕೆ ಬರುವದು. ಧಂಸಾರದಲ್ಲಿ ಕಾಹಿಲೆ ಕಸಾಕಿಗಳು ಕಾಣಿಸಬಹುದು ಬಂಧು ಮಿತ್ರರ ನೆರವು ಚೆನ್ನಾಗಿರತಕ್ಕ ನಿಮಗೆ ತಾ. 9ರಿಂದ 13ರವರೆಗೂ ಧನಾಪ್ತಿ ವಿಜಯ ಸುಖಗಳು ಲಭಿಸುವವು.

ವೃಶ್ಚಿಕ—ಬಲವಾಗಿ ಬೇರೂರಿರುವ ನಿಮ್ಮ ಮನೋರೋಗವು ದಿನದಿನಕ್ಕೂ ಪ್ರಬಲವಾಗುತ್ತಾ ಬರುವದು. ಬಂಧುಜನರು ನಿಷ್ಕಾರಣವಾಗಿ ಕಲಹಪ್ರಿಯರಾಗುವರು. ಕುಜನರ ಮೈತ್ರಿಯು ನಿಮ್ಮ ಕೀರ್ತಿಗೆ ಕಳಂಕ ತರಲಿದೆ. ರಾಜಕೀಯ ಕ್ಷೇತ್ರದಲ್ಲಿ ಪರಾಭವ ಹೊಂದುವ ಯೋಗವಿದೆ. ಉಪ್ಪತ್ತಿಗಿಂತ ವ್ಯಯವು ಅಧಿಕವಾಗುವುದರಿಂದ ಆರ್ಥಿಕಮುಗ್ಗಟ್ಟಿನಿಂದ ಬಳಲುವಿರಿ ವಿದ್ಯೋಪಜೀವಿಗಳಿಗೆ ಕಾಲವು ಪ್ರತಿಕೂಲವಾಗಿದೆ. ಶ್ರಮಜೀವಿಗಳಿಗೂ ವೈದ್ಯವ್ಯಾಪಾರಿಗಳಿಗೂ ಕಾಲವು ಉತ್ತಮವಾಗಿರುವದು. ವಾರಾಂತ್ಯದ 3 ದಿನಗಳು ಇಷ್ಟಾರ್ಥಗಳನ್ನು ಪೂರೈಸಲು ಸಮರ್ಥವಾಗಿವೆ.

ಧನು—ಕಷ್ಟಪಂಜರಿಗಳಲ್ಲಿ ಸಿಲುಕಿ ಕಳವಳಗೊಂಡ ನಿಮಗೆ ಒಂದಿನಿತು ಆಲರಿಸುವ ಮೊತೆಕೆಲಸವಾಗಿಗೆ. ಅಭೀಷ್ಟದಂತೆ ಕಾರ್ಯವು ನೆರವೇರುವುದು. ಬಂಧುಮಿತ್ರರ ಸಹಕಾರ ಬಲದಿಂದಾಗಿ ಶತ್ರುಗಳನ್ನು ಜಯಿಸುವಿರಿ. ಗೃಹಸುಖವು ಉತ್ತಮವಿದೆ. ಖರ್ಚುಗಳು ಹಲವಾರಿದ್ದರೂ ಆವನ್ನು ಸುಧಾರಿಸುವಷ್ಟರ ಉತ್ಪತ್ತಿಯು ನಿಮಗಿರುವದು. ಕೆಲವೊಮ್ಮೆ ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ವಿಹರಿಸೀತು. ವಾತದೋಷದಿಂದ ಆರೋಗ್ಯಕ್ಕೆ ಸ್ವಲ್ಪ ಧಕ್ಕೆಯಿದೆ. ವಾರದ ಅಧ್ಯಂತ ದಿನಗಳು ಸುಖಲಾಭವಿಜಯದಾಯಿಗಳು.

ಮಕರ—ನಿಶ್ಕೋಷ್ಣಗಳ ಅಧಿಕ್ಯದಿಂದಾಗಿ ನಿಮ್ಮ ಆರೋಗ್ಯಕ್ಕೆ ಹಾನಿಯಿದೆ. ಹೆಚ್ಚಿನ ಕಾಲವನ್ನು ಮಾರ್ಗಾಕ್ರಮಣದಲ್ಲಿ ಕಳೆಯಬೇಕಾಗುವುದು. ನಿಷ್ಕುರುಶಾಗಿಗಳಾದ ನಿಮಗೆ ಹೆಚ್ಚಿನವರೊಡನೆ ಕಲಹವಾಗುವದು. ಸಾಂಸಾರಿಕ ತಾಪತ್ರಯಗಳು ದಿನೇ ದಿನೇ ಹೆಚ್ಚುತ್ತಾ ಬರುವವು. ಆದಾಯಕ್ಕಿಂತ ದ್ವಿಗುಣವಾಗಿ ಖರ್ಚುರೋಣದರಿಂದ ಸಣದ ಬಿಕ್ಕಟ್ಟಿನ ದೆಸೆಯಿಂದಾಗಿ ಸಾಲಮಾಡಬೇಕಾಗುವದು. ಕುಟುಂಬಿಕರ ಬೆಂಬಲವು ನಿಮಗೆ ತಾ. 9, 10 ಈ ದಿನಗಳಲ್ಲಿ ನಿಮ್ಮ ಮನೋರಥಗಳು ಈಡೇರಲಿರುವುವು.

ಕುಂಭ—"ಜೀವತ್ಯರ್ಥದರಿದ್ರೋಪಿ ಧೀದರಿದ್ರೋ ನ ಜೀವತಿ" ಯಣದ ದಾರಿದ್ರ್ಯವನ್ನು ಹೊಂದಿದವನೊಂದು ವೇಳೆ ಜೀವಿಸ್ಯಾನು, ಬುದ್ಧಿ ಪರಿದ್ರನು ಜೀವಿಸಲಾರನೆಂದು ಹಿರಿಯರಂದಿರುವರು. ಸದ್ಯ ನಿಮ್ಮಲ್ಲಿ ಇವೆರಡರ ದಾರಿದ್ರ್ಯವೂ ಇರುವುದರಿಂದ ದಿನಯಾಪನೆಯು ಅತೀವ ಕಷ್ಟವಾದೀತು. ಆಪ್ತೇಷ್ಟರ ವಿರಹ, ಶತ್ರುಜನರ ಉಪಟಳ, ಹಣದ ಅಭಾವ, ಗೃಹ ತಾಪತ್ರಯ ಇತ್ಯಾದಿ ಅನಿಷ್ಟ ಪರಂಪರೆಗಳು ನಿಮ್ಮನ್ನು ಕಾಡಲಿವೆಯಾದರೂ ತಾ. 6, 12, 13 ಈ ಮೂರೊಂದು ಅನಿಷ್ಟ ಕಾರಿಗಳಾಗಲಾರವು.

ಮೀನ—ಇದಿನ ಗೃಹಸ್ಥಿತಿಯು ತೀರಾ ಕೆಳಮಟ್ಟದ್ದಾಗಿರುವದು. ಮಿತಭಾಷಿಯಾಗಿದ್ದಷ್ಟೂ ಕೂಡ ಕಲಹ ನಿಷ್ಕಾರಣವು ತಪ್ಪಲಾರವು. ದೈಹಿಕ ಮಾನಸಿಕ ಸುಖಶಾಂತಿಗಳಿಂದ ಮುಕ್ತರಾದ ನಿಮಗೆ ಸ್ವಲ್ಪದಲ್ಲೂ ಸುಖವುದುರ್ಲಭವೆಂದರೆ ತಪ್ಪಾಗದು. ಆಪ್ತೇಷ್ಟವರ್ಗದವರೇ ನಿಮ್ಮನ್ನು ವಂಚಿಸಲಿರುವರು. ಅನಿರೀಕ್ಷಿತವಾದ ಪ್ರವಾಸದಿಂದ ಕಷ್ಟನಷ್ಟಾದಿಗಳನ್ನು ಹೊಂದುವಿರಿ. ಯಾವ ಭಾಗದಲ್ಲೂ ಶ್ರೇಯಸ್ಸು ಕಾಣಿಸಿಗದು. ತಾ. 9, 10, 14, ಇವು ಹೆಚ್ಚಿನ ಆದಾಯಕಾರಗಳಲ್ಲ.

ತಾರೀಕು 8-2-51 ರಿಂದ	**ವಾರದ ಭವಿಷ್ಯ**	ತಾರೀಕು 14-2-51 ರವರೆಗೆ

ಟೈಪು ರೀ ಕ್ಯಾಸ್ಟಿಂಗ್ ಛಾರ್ಜನ್ನು ಅರ್ಧಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳಿ

ಆಧುನಿಕ ಯಂತ್ರ ಸಾಧನಗಳಿಂದ ಸಂಸಜ್ಜಿತವಾದ ಮೈಸೂರು ಟೈಪು ಫೌಂಡರಿಯಲ್ಲಿ ಪ್ರಿಂಟಿಂಗ ಟೈಪುಗಳನ್ನು (ಶೆನ್ನಿಡ) ರೀಕ್ಯಾಸ್ಟ್ ಮಾಡಿಸುವುದರಿಂದ ವಿಪರೀತ ಉಳಿತಾಯವಾಗುತ್ತದೆ

ಸಾವಿರ ಪೌಂಡು ಮತ್ತು ಹೆಚ್ಚಿಗೆ	ಐನೂರು ಪೌಂಡು ಮತ್ತು ಹೆಚ್ಚಿಗೆ
ಪೌಂಡಿಗೆ 0—10—0	ಪೌಂದಿಗೆ 0—12—0

ಸೇಲ್ಸ್ ಟ್ಯಾಕ್ಸ್, ಪ್ಯಾಕಿಂಗ್ ಮತ್ತು ಫಾರ್ವರ್ಡಿಂಗ್ ಛಾರ್ಜ ಮುಫತ್ತು

ಇಂದೇ ವಿವರಗಳಿಗೆ ಬರೆಯಿರಿ

ಮ್ಯಾನೇಜರ್,

ಮೈಸೂರು ಟೈಪು ಫೌಂಡರಿ,

ಬೆಂಗಳೂರು-2

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೆಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:. ಡಾಕ್ಟರ್ ಕೊರಡ್ಡಲ್ ಪೆಂಕಟರಾಯರು, ಎಲ್.ಐ.ಎಮ್., ಉಡುಪಿ.

ಸುಮಾರು 200 ಪುಟಗಳಿಗಳಿಗೆ ... 1000 ಸುಲಭ ಮನೆ-ಮದ್ದು ಗಳು!

ಮಕ್ಕಳ ಮತ್ತು ಹೆಂಗಸರ ಖಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣೆ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಖಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹೆಂಗೆಯ ಕೈಪುಸ್ತವನ್ನು ವಿಸ್ತಾರವಾಗಿ ವಿವರಿಸಿಗೆ. ಪದ್ಯಾನು ಸರಳವಾರದಿಂದಲೇ ಮೊದಲಾದ ಕತೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ

ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0. ವಿ. ಪಿ. ವ್ಯಾರೆ 2—6—0.

ಪ್ರತಿಗಳು ನಿಮ್ಮೂರ ಮಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,

ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

— ಮಕ್ಕಳನ್ನು ಹಡೆಯುವುದು ಸಾಕು —

ಆಪತ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಗರ್ಭಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮೈಬ್ಬಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿರೋಗ, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಸುಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ದಿನನೀರಾಗಲ್ಲಿ ಸೇವಿಸಬೇಕು.

ಪಕ್ಕೆ:—ಹರವೀಪಲ್ಲೆ ಬಿಡದೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ವೋಸ್ಟ್ ಚಾರ್ಜು ಗಿ ಆಜ್.

ಪೂರೈಕರು:—**ಹಾಲಪ್ಪಾ ಫಕೀರಪ್ಪಾ ಡಾವಣಗೇರಿ**

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಬಜಾರಿಯು:—ಪುಟ್ಟಿಕ ಫಾರ್ಮಸಿ,—ಹುಬ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಬ್ರದರ್ಸ್ ಧಾರವಾಡಕರ ವಿಜಾಪುರ ನಂಜುಡೇಸ್ವರ ಮೂರ್ತಿ ಡಾವಣಗೆರೆ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ,ಕೆಮಿಸ್ಟ್, ಹಾನೇರಿ ಬ್ಯಾಡಗಿ

EDITED, PRINTED & PUBLISHED BY K. H SHETTY AT THE NAVAYUGA PRESS, UDIPI, S.INDIA

Regd. No. M. 3618

LICENCE No. 31
Licensed to Post without Prepayment

Estd. 1921 ಸ್ಥಾಪನೆ
31ನೇ ವರ್ಷ

15—2—1951

Founder: Sri A. B. Shetty,
Minister for Agriculture & Veterinary.

ನವಯುಗ

ವರ್ಷ ೩೧
ವಾರ ೨೩

NAVAYUGA
WEEKLY

POST BOX NO. 22
UDIPI, S. K.

Vol. 31
No. 23

ನಾವು ಬಡವರು!

'ನಾವು ಬಡವರು' ಎಂದಾಗ ಬಹುಮಂದಿ ತಮ್ಮ ಸ್ಥಿತಿಗತಿಯನ್ನು ಹೊಂದಿಕೊಂಡು 'ನಿಜ'ವೆನ್ನುತ್ತಾರೆ. ಬಡತನ ದಾರಿದ್ರ್ಯಗಳಿಗೆ ತವರಾದ ಭಾರತ ದೇಶದಲ್ಲಿ ಈ ಸಾಲಿಗೆ ಸೇರುವ ಜನಸಂಖ್ಯೆ ಅವರಿಮಿತವಾಗಿದೆ. ಒಂದಲ್ಲ ಒಂದು ರೀತಿಯಿಂದ ಜನ ಅಸುಖಿಗಳಾಗಿದ್ದಾರೆ. ಜೀವನ ನಿರ್ವಹಣೆ ಕಷ್ಟಸಾಧ್ಯವೆಂದು ನಾವು ಲೆಕ್ಕಹಾಕುವುದಾದರೆ ಅದು ಬಡತನದಿಂದಲೇ. ಮನೆಯ ಶಾಂತಿಯನ್ನು ಕಾಯ್ದುಕೊಳ್ಳಲಾಗದ ಜನ ಲೋಕದ ಶಾಂತಿಯನ್ನು ಕಾಯ್ದುಕೊಳ್ಳುವುದಾದರೂ ಹೇಗೆ? ಇತರ ದೇಶಗಳನ್ನವಲೋಕಿಸಿದರೆ ನಮ್ಮ ಜೀವನ ಎಷ್ಟು ನಿಕೃಷ್ಟ ಎಂಬುದರ ಅರಿವಾಗದೆಯಿರದು. ಕೃಷಿಯೇ ಪ್ರಮುಖ ಉದ್ಯಮವಾಗಿರಬೇಕಾದ ಹಿಂದೂಸ್ಥಾನದಲ್ಲಿ ಅದಿನ್ನೂ ಕುಂಠಿತವಾಗಿರುತ್ತದೆ. ತಮ್ಮ ಕುಲಕಸುಬನ್ನು ಮರೆತು ಪೇಟೆಯ ವಿಲಾಸಜೀವನದ ಚಪಲವನ್ನಿಟ್ಟುಕೊಂಡವರೇ ಬಹಳಮಂದಿ. ಶಕ್ತಿಮೀರಿ ವಿದ್ಯೆಯನ್ನು ಮುಂದುವರಿಸುವ ದೇಶದ ತರುಣರು ಉಚ್ಚಾಧಿಕಾರದ ಹಂಬಲಿಗರಾಗಿದ್ದಾರೆ. ಎಲ್ಲರೂ ಒಂದೇ ಕಸುಬಿಗೆ ಮುಗಿಬೀಳುವ ಅತಿಯಾಸೆಯು ಫಲವಾಗಿ ನಿರುದ್ಯೋಗದ ಭೂತ ಪರ್ವತಾಕಾರದಂತೆ ಬೆಳೆದು ನಮ್ಮಮುಂದೆ ನಿಂತಿದೆ. ಔದ್ಯೋಗಿಕರಂಗದಲ್ಲಿ ಸಾಕಷ್ಟು ಪ್ರಗತಿಯಿಲ್ಲದೆ ಈ ತರುಣರ ವಿದ್ಯೆಯು ಸಫಲತೆಯಾಗುವುದಾದರೂ ಹೇಗೆ? ವಿಪುಲವಾಗಿ ಬೆಳೆಯುತ್ತಿರುವ ಜನಸಂಖ್ಯೆಯೊಡನೆ ಬಡತನವೂ ಜೊತೆಗೆ ಬೆಳೆಯುತ್ತಲಿದೆ. ಅನೇಕ ರೀತಿಯ ಉದ್ಯಮಗಳ ಉತ್ಕರ್ಷತೆಯು ವಿನಹ ಈ ಸಮಸ್ಯೆ ಬಗೆಹರಿಯುವಂತಿಲ್ಲ.

ಜೀವನನಿರ್ವಹಣೆಯ ಅನ್ನ ಒಟ್ಟಿಗೇ ಪ್ರಾಮುಖ್ಯವಾಗಿಲಾರವು. ಅನುಕೂಲ ಸಂಸ್ಥಿತಿಗಳೇ ಸಹಕಾರಿಗಳಾಗಿಲಾರವು. ಸಂಪತ್ತಿದ್ದರೆ ಭೋಜನ ಜೀವನ ನಡೆಸುವದು ಕಷ್ಟವೇನಲ್ಲ. ಇದ್ದ ಮೂಲವನ್ನು ಕರಗಿಸುವದರಲ್ಲಿ ವಿಶೇಷ ಬುದ್ಧಿ ಕೌಶಲತೆ ಅವಶ್ಯವಿಲ್ಲ. ಜೀವನವೆಂದರೇನು? ಸುಖವಿಗಿತಾನು ತನ್ನ ಸಂಸಾರವನ್ನು ಸಾಗಿಸಿಕೊಂಡು ಹೋಗುವುದೇ? ಕೈತುಂಬ ಹಣಸಿಕ್ಕುವಂತಿದ್ದರೆ ಯಾರಿಗೆ ಬದುಕು ಮಾಡಲು ಸಾಧ್ಯವಿಲ್ಲ?

ದೇಶದ ಬಹುಪಕ್ಷ ಜನ ಅನುಕೂಲ ಪರಿಸ್ಥಿತಿಯಿಲ್ಲದೆ ಬಡತನವನ್ನಪ್ಪಿಕೊಂಡರೆ ಸಾಮೂಹಿಕವಾಗಿ ಇಡಿಯರಾಷ್ಟ್ರದ ಜನಾಂಗ ಇನ್ನೊಂದು ರೀತಿಯ ಬಡವಂಗಿದ್ದಾರೆ. ಅಗರ್ಭ ಶ್ರೀಮಂತರೂ, ಮ್ಹಾಲಿಕರೂ, ರಾಜರುಗಳೂ, "ನಾವು ದೊಡ್ಡವರು-ಬಡವರಲ್ಲ" ಎನಬಹುದು. ಆದರೆ ಅವರನ್ನೂ ಸೇರಿಸಿಕೊಂಡು 'ನಾವು ಬಡವರು ಎಂದಿದೇನೆ. ಅಂದರೆ ನಾವು ಅಳಿಯುತ್ತಿರುವ ಮಾನವದಂಡ ತಳಿವಿನ ಹಾಗೂ ಆತ್ಮಿಕ ಶಕ್ತಿಯನ್ನೆಳೆಯುವಂತಹದು.

ನಮ್ಮ ತಳಿವಿನ ಮಟ್ಟಬಹಳ ಸಂಕುಚಿತವಾದುದು ಗಾಳಿಗೊಡ್ಡಿದ ಸೊಡರಿನಂತೆ ಸ್ಥಿರವಲ್ಲ. ಯಾವುದೇ ಧ್ಯೇಯಗಳು ಈ ಚಂಚಲ ಮನೋವೃತ್ತಿಯಿಂದ ಗುರುತಟ್ಟದೆ ಮಣ್ಣು ಮುಕ್ಕುತ್ತಲಿವೆ. ಇಷ್ಟವನ್ನು ಪಡೆಯುವ ಹಂಬಲಿಗರು ನಾವಾಗಿದ್ದೇವೆ. ಕಷ್ಟವನ್ನು ಎದುರಿಸುವ ಕೆಚ್ಚು ನಮ್ಮಲ್ಲಿಲ್ಲ. ಬಾಯಿಯಲ್ಲಿ ಆದರ್ಶವನ್ನು ಹೇಳಬಲ್ಲೆವು; ಕೆಲಪುನೇಳೆ ತೋರಿಸಬಲ್ಲೆವು. ಆದರೆ ಕಾರ್ಯತಃ ಮಾಡಿತೋರಿಸಲಾರೆವು. ಮೂತಿಗೂ ಕೃತಿಗೂ ಸರಿಯಾಗದ ನಡತೆಗಳೇ ಬಹಳವಾಗಿವೆ. ಮಾತು ಹೃದಯವನ್ನು ವಂಚಿಸಿ ಮಾನಸಿಕ ದಿವಾಳಿತನವನ್ನು ತೆಗೆದಿದೆ. ನಾಲಿಗೆ ಸಡಿಲಾದ ಹಾಗೆ ಆತ್ಮಿಕ ಶಕ್ತಿಯ ಬಡತನ ಹೆಚ್ಚುತ್ತದೆ.

ಗಾಂಧೀಜೀ ತೋರಿಸಿದ ಧಾರಿ ಜಗತ್ತಿಗೆ ಆದರ್ಶವಾದರೂ-ನಮ್ಮನ್ನು ಪಾರತಂತ್ರ್ಯದಿಂದ ಪಾರುಮಾಡಿತಾದರೂ-ಅವರ ತತ್ವವನ್ನನುಸರಿಸುವ ಸಹನ ಶೀಲ ಮನೋವೃತ್ತಿ ಇಂದು ನಮಗಿಲ್ಲ. ಭಾರತ ವಿಭಜನೆಪುರದರ-ಶಾಂತಿಪ್ರಿಯರೆ ತವರೂರು. ಬದುಕಿನಾದರ್ಶವನ್ನು ಸಾರುವಂತಹ ತತ್ವ ಭೋಧನೆಗಳಂ ಪುಷ್ಕಲವಿವೆ. ನಮ್ಮ ಹಿಂದಿನವರ ಬುದ್ಧಿಮತ್ತೆಯನ್ನು ಸೂಚಿಸುವ ನೈಲುಗಲ್ಲುಗಳಿವೆ. ಆದರೆ ನಾವು ಅದನ್ನೆಲ್ಲಾನ್ವೇಷಿಸಿ ಕೇವಲ ಬಾಯಿಚಪಲವನ್ನು ತೀರಿಸಿಕೊಳ್ಳುವದರಲ್ಲಿ ಕಾಲಹರಣಮಾಡುತ್ತಲಿದ್ದೇವೆ. ಪಾಶ್ಚಾತ್ಯರ ರಾಜನೀತಿಯನ್ನು ಖಂಡಿಸುವಲ್ಲಿ ಹಿಂದುಮುಂದೆ ನೋಡದ ವುದಿಲ್ಲ. ಆದರೆ ಅವರ ಶಿಸ್ತು ಸಂಘಟನೆಗಳನ್ನು ನಾವು ವಿವೇಚಿಸುವುದಿಲ್ಲ. ಇನ್ನೊಬ್ಬರ ಮೇಲೆ ತಪ್ಪು ಹೊರಿಸುವುದರಲ್ಲೂ, ಅಪಪ್ರಚಾರ ಮಾಡುವದರಲ್ಲೂ, ಟೀಕೆ ಮಾಡುವದರಲ್ಲೂ ಹಾಳುಗೆಡವುದರಲ್ಲೂ, ನಾವು ಬಹಳ ಬುದ್ಧಿವಂತರು. ಹಾಗೆಯೆ ಉತ್ತಮ ಗುಣಗಳನ್ನು ಹೇಳುವದಕ್ಕೂ, ಯಥಾರ್ಥವಾದುದನ್ನು ಹೇಳುವದಕ್ಕೂ ಬುದ್ಧಿಶೂನ್ಯರು; ಅತ್ಯಂತ ಬಡವರು. ಪರಗುಣ ಗ್ರಹಿಸುವಷ್ಟು ಹೃದಯರುದ್ಧತೆ ನಮಗಿಲ್ಲ. ಪರರಿಂದೆ ಅವಹೇಳನೆ ಮಾಡುವಷ್ಟರಲ್ಲೇ ಪಾಂಡಿತ್ಯ ವೃದರ್ಶನವಾಗುತ್ತದೆ! ಕೆಟ್ಟಗುಣವನ್ನಷ್ಟೇ ಎತ್ತಿತೋರಿಸುವ ವಕ್ರದಲ್ಲಿ ಯಾರೂ ಸರಿಪೂರ್ಣವಾಗಿ ತೋರಲಾರರು! ಉತ್ತಮವಾದ ಕೆಲವು ಗುಣಗಳನ್ನಾದರೂ ಎತ್ತಿಹಿಡಿಯುವ ವಿಶಾಲ ಮನಸ್ಸು ನಮ್ಮದಾಗಿರಬೇಕು. ಆಂದರೇನೇ ನಾವು ಸರಿಯಾದ ಮಾರ್ಗದರ್ಶನ ಮಾಡಿವಂತಾಗುತ್ತದೆ. ಆದರಿಂದು ನಾವು ಕಾಣುತ್ತಿರುವದು ಮನೋದೌರ್ಬಲ್ಯವನ್ನೇ ವಿಶಾಲ ಮನಸ್ಸಿನ ಬಡತನವನ್ನೇ.

'ಬಡತನವೆ ಧನವೆಮಗೆ ಕೊಡಲಾವೆ ನೇಂ ನಿನಗೆ ಕಂಬನಿಗಳಂದುಗೆ ಚಾಚು ವೆವು ದೈನ್ಯವನ್ನಡಿಗೆ'ನ್ನ ಎಂದು ಹಾಡಿದ್ದಾನೆ. ಶ್ರೀಮಂತಿಕೆ ಸಾಮರ್ಥ್ಯದಿಂದ ಭುಜಬಾಗಿದಬಹುದಾದ ರಾಷ್ಟ್ರಗಳು ಬುದ್ಧಿ ಸಂಪನ್ನವೂ ಆಗಿದ್ದರೆ ಜಗತ್ತು ಯುದ್ಧ ಕಾರ್ಮೋಡಗಳಿಂದ ಕವಿಯಬೇಕಾದ ಪ್ರಸಂಗ ಬರುತ್ತಿರಲಿಲ್ಲ. ಆಂದರೆ ಇಲ್ಲಿಯೂ 'ಬುದ್ಧಿಯು ಬಡತನ'ವಿದೆ.

ಬುದ್ಧಿಶಾಲಿಗಳಿಂದ ತುಂಬಿದ ದೇಶ ಜಗತ್ತಿನ ಪ್ರಬಲರಾಷ್ಟ್ರವಾಗಬಲ್ಲುದು. ತನ್ನ ದೇಶದಲ್ಲಿ ಶಾಂತಿಯನ್ನು ಕಾಯ್ದುಕೊಳ್ಳಬಲ್ಲುದು.

ಸತ್ಯ ಅಹಿಂಸೆಗಳಿಂದ ರಾಷ್ಟ್ರವನ್ನು ಅಳವಡಿಸುವ ಧ್ಯೇಯವಾದಿಗಳು ನಾವು- ನಾವು ಸ್ವಾತಂತ್ರ್ಯಗಳಿಸಿದ್ದು 'ಅಹಿಂಸೆ'ಯಿಂದಲೇ. ಆದರೆ ಇಂದು ಸರಕಾರ ಘೂರರಲ್ಲಿ ಅದು ವತ್ತುವಾಲು ಸೈನ್ಯಮಂತೆಗಾಗಿ ಬಳಸುತ್ತಲಿದೆ ಧ್ಯೇಯ ಸಾಂಕೇತಿಕವಾಗಿಉಳಿದಿದೆ ಪರಸ್ಪರ ದೋಷಗಳನ್ನೆಣಿಸುವುದರಲ್ಲಿ ಕಾಲಕಳೆಯುತ್ತಿದ್ದರೆ ಈ ಪರಿಸ್ಥಿತಿಯೊಸಗುತ್ತಿರಲಿಲ್ಲ. ತಪ್ಪುಗ್ರಹಿಕೆ, ಜಾತೀಯಭಾವನೆಗಳೆಲ್ಲ ಕಿತ್ತಿಹಿಯುವಂತೆ ಮಾಡಿವೆ. ಉತ್ತಮ ಆದರ್ಶಗಳಿಂದ ಭಾರತದೇಶದ ಕೀರ್ತಿಯನ್ನು ಜಗತ್ತಿಗೆ ಸಾರಿದ ಅಶೋಕ, ಬುದ್ಧ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾತ್ಮಾ ಗಾಂಧೀ ಮೊದಲಾದವರ ತತ್ವಗಳಿಂದು ಕೇವಲ 'ಬಾಯಿಬಲ'ಗಳಾಗಿವೆ. ಸೈದಯಿಕವಾಗಿಯಾಗಲೀ- ಕಾರ್ಯರೂಪದಲ್ಲಾಗಲೀ ಆದರ ಆಚರಣೆ ನಡೆಯು

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು
ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು-ದಿ! ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಭಟ್ಟಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕಿ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಶಾಂತಿಪ್ರಿಯರ—

ಕಾಯಕವೇ ಕೈಲಾಸ

ಅವರು ಪ್ರಾತಿನಿಧಿಗೆ ಬಂದಾಗಲು ತಮ್ಮ ಸೇವಾ ಜೀವನದ ಮಹತ್ವಿಕೆಯಿಂದ ಜನ ಬಲದಲ್ಲಿ ಅವರೊಂದು ಪುಟ್ಟ ಸಮಾಜ: ಬರೇ ಎರಡು ಲಕ್ಷಮಂದಿ ಕೊಡಿ ಉಂಟಾದುದು. ಕ್ವೇಕರರು ಎಂದು ಅವರನ್ನು ಕರೆಯುತ್ತಾರೆ. ಜಗತ್ತಿನ ಪ್ರತಿಯೊಂದೆಡೆಯಲ್ಲಿಯೂ ಜನತಾ ಸೇವೆ ಮತ್ತು ಲೋಕಶಾಂತಿಗಾಗಿ ದುಡಿಯುವ ಅವರ ತಂಡಗಳಿವೆ. "ಅಮೆರಿಕೆಯ ಗೆಳೆಯರ ಸೇವಾ ಸಮಿತಿ" ಎಂಬುದೀಗ ಈ ಕ್ವೇಕರರ ಚಟುವಟಿಕೆಯ ಮೂಲಾಧಾರವಾಗಿದೆ. ನಿರಾಶ್ರಿತರ ಪುನರ್ನಿವೇಶನ ಮತ್ತು ಸಹಾಯದ ಕೆಲಸವನ್ನು ಮನವಾರೆ ನಾಡಿದುದಕ್ಕಾಗಿ ಈ ಸಂಸ್ಥೆಗೆ ೧೯೪೭ರ "ನೋಬಲ್ ಶಾಂತಿ ಪಾರಿತೋಷಕ"ವನ್ನು ಕೊಡಲಾಯಿತು. ವಾಲಿನ್ಯಾನದ ಅಂತರ್ಯುದ್ಧದ ಕಾಲದಲ್ಲಿ ನಿರಾಶ್ರಿತರ ಯೋಗಕ್ಷೇಮಗಳನ್ನು ವಿಚಾರಿಸಿ ನೋಡಿಕೊಳ್ಳಲು ಕ್ವೇಕರರ ತಂಡಕ್ಕೆ ಯುಕ್ತ ರಾಷ್ಟ್ರ ಸಂಸ್ಥೆಯು ಕರೆಕಳುಹಿಸಿತು. ಜೈನ್ಯಾ, ಮೆಕ್ಸಿಕೋ, ಯುರೋಪು ಮತ್ತು ಭಾರತದಲ್ಲಿ ಸಹ ಕ್ವೇಕರರ ಚಟುವಟಿಕೆ ಅವ್ಯಾಹತವಾಗಿ ನಡೆಯುತ್ತಿರುವುದನ್ನು ನಾವು ಕಾಣಬಹುದು. ಸಮಾಜಸೇವೆ ಮತ್ತು ಶಾಂತಿ ಪ್ರಿಯತೆಯೇ ಕ್ವೇಕರರ ವೈಶಿಷ್ಟ್ಯವಾಗಿದೆ.

ಯಾರೊಬ್ಬರ ಅಂಕೆಗೆ ಒಳಪಟ್ಟು ಕೆಲಸ ಮಾಡುವುದು ಕ್ವೇಕರರಿಗೆ ಬೇಕಾಗಿಲ್ಲ. ಎಂತಲೇ ಅವರು ಯಾವ ಸಂಕಾರದ ಆದೇಶದಂತೆಯೂ ನಡೆಯೆ. ವುದಿಲ್ಲ. ಹೀಗಿದ್ದರೂ ದೇಶಗಳಲ್ಲಿ ಅಶಾಂತಿ ತಲೆದೋರಿದಾಗ, ಬಿಕ್ಕಟ್ಟಿನ ಕಠಿಣ ಪ್ರಸಂಗಗಳು ಉದ್ಭವಿಸಿಕೊಂಡಾಗ, ಅವುಗಳ ನಿವಾರಣೆಯಲ್ಲಿ ಕ್ವೇಕರರು 'ತುಂಬು ನೆರವ'ನ್ನು ವಿಪುಲವಾಗಿ ಬಯಸುತ್ತಾರೆ. ಇಂತಹ ಕರೆ ಎಂದರೆ, ಸ್ವತಃ ಕ್ವೇಕರರಿಗೂ ಪ್ರಾಣ; ಅವರು ಅದಕ್ಕೆ "ಜಗದು" ಎಂದುದೇ ಇಲ್ಲ. ಮನುಷ್ಯನ ನಡವಳಿಕೆಯೇ ಅವನನ್ನು ರೂಪಿಸುವುದು, ಉನ್ನತಿಯ ಪಥದಲ್ಲಿ ಮುನ್ನಡೆಸುವುದು ಎಂಬುದಿವರ ಮತ. ಆದುದರಿಂದ ಏನು ಕೆಲಸ ಮಾಡಬೇಕಿದ್ದರೂ, ಅದನ್ನು ಬಾಯಿ ಮಾತಿನಿಂ ವಿವರಿಸಿ ಹೇಳಲು ತೊಡಗದೆ, ನೇರವಾಗಿ ಕಾರ್ಯರಂಗಕ್ಕೇ ಅವರು ಧುಮುಕುವರು; ಕೆಲಸ ಮಾಡುವರು.

ಸುಲಭ-ಸರಳ ಮಾದರಿ

